# ಕೊಣವೇಗೌಡನ ಕಥೆ

ಕ್ವಾಟಾಳೂರಿನ ಕೊಣವೇಗೌಡ। ಗೋವಿಂದಾ ಗೋವಿಂದಾ .।

ಅವುನೆಡೇತಿ ಹೆಸರು ಕೊಡಗಿನ ಮಾರಿ ।

ಹೆಡೀತಿ ಹೆಸರು ಕೊಡಗಿನ ಮಾರಿ

ಅವಳೀಗೆ ಐವತ್ಮಳದ ಸೀರ್‍ಯಾಗ ಬೇಕು

ಐವತ್ಮಳದ ಸೀರ್‍ಯಾಗ ಬೇಕು

ಅವಳೀಗೆ ಹದ್ನೆಂಟ್ ಗಜಾ ರವಿಕೆ ಕಾಣಾ

ಅವಳು ಸೊಂಟುದು ಪಟ್ಟಿ ಗಾಡಿಪಟ್ಟಿ

ಸೊಂಟುದು ಪಟ್ಟಿ ಗಾಟಿಪಟ್ಟಿ

ಅವಳೀಗೆ ಕಯ್ಯಳು ಬಳೆ ತಮಟೆಬಾಳೇ

ಕಯ್ಯಳೂ ಬಳೆ ತಮಟೇಬಾಳೇ

ಅವಳಿಗೆ ಮೂರು ಕಂಡುಗ ಎಣ್ಣೆ ತಂದುರ

ಅವಳ ಮುಂದಾಲೆಗೊರ್ತು ಹಿಂದಾಲಿಗಿಲ್ಲ

ಮುಂದಾಲೆಗೊರ್ತು ಹಿಂದಾಲಿಗಿಲ್ಲ

ಕ್ವಾಟಳೂರಿನ ಕೊಣವೇಗೌಡ

ಅವುನೆಡೀತಿ ಹೆಸರು ಕೊಡಗಿನ ಮಾರಿ

ಅವುನೆಡೀತಿಗೆ ಬುದ್ಧಿ ಹೇಳುತಾನೇ

ಅವುನೆಡೀತಿಗೆ ಬುದ್ಧಿ ಹೇಳುತಾನೇ

ಹಕ್ಕಿ ಪಕ್ಷಿಗೆ ಕೊಡುವೋನಲ್ಲ

ಹಕ್ಕಿ ಪಕ್ಷಿಗೆ ಕೊಡುವೋನಲ್ಲ

ನರಾಸೂರ್ರುಗೆ ಕೊಡುವೋನೆಲ್ಲ

ನರಾಸೂರ್ರುಗೆ ಕೊಡುವೋನೆಲ್ಲ

ಹೆಡ್ತಿಗೆ ಬುದ್ಧಿ ಹೇಳುತಾನೇ

ಬಾರೆ ಬಾರೆ ನನ್ನ ಮಡದಿ

ನನ್ನ ಮಡದಿ ಕೊಡಗಿನ ಮಡದಿ

ಬಾಳೋರಿಗೆಚ್ಚಾಗಿ ಬದುಕೋನ ತಾನೆ

ಬದುಕೋರಿಗೆಚ್ಚಾಗಿ ಬದುಕೋನ ತಾನೆ

ಯಂಗೆ ನಾವು ಬದುಕೋನ ಅಂದ್ರೆ

ಯಂಗೇ ನಾವ್ ಬದುಕೋನಂದ್ರೇ ಗೋವಿಂದಾ ಗೋವಿಂದಾ .

ಯಂಗೇ ನಾವ್ ಬದುಕೋನಂದ್ರೇ,,,,,,,,,,,,,

ಮಡದೀಗೇಳುತಾನೆ ಕೋಣವೇಗೌಡ .ಬಾಳೋರಿಗೆಚ್ಚಾಗಿ ಬದುಕಬೇಕು

ಬದುಕೋರಿಗೆಚ್ಚಾಗಿ ಬಾಳಬೇಕು ..ಮಡದಿ ..ಯಂಗ್ ಬದುಕನ

ಮಡದಿ ಅಂದ್ರೇ ..ಯೋನು ಹೇಳುತ್ತಾನೆ

ನೆಂಟ್ರೀಗೆತ್ರೀಕ್ಕದು ಬ್ಯಾಡಾ

ನೆಂಟ್ರೀಗೆತ್ರೀಕ್ಕದು ಬ್ಯಾಡಾ

ದಾಸಯ್ಯೋಗ್ಗೋಳು ಬಿಕ್ಸುಕು ಬಂದ್ರೇ

ಕೊಡುವೋ ಬಿಕ್ಸ್ ಉಳುಸನ ಕಾನೇ

ನೆಂಟ್ರೀಗಿಕ್ಕದು ಉಳುಸನು ಕಾನೇ

ಯಂಗೇ ನಾವು ಉಳುಸಾನ ಗಂಡೋ ..

ದಾಸಯ್ಯೋಗ್ಗೋಳು ಬಿಕ್ಷುಕೆ ಬಂದ್ರೇ ಗೋವಿಂದಾ ..ಗೋವಿಂದಾ

ದಾಸಯ್ಯೋಗ್ಗೋಳು ಬಿಕ್ಷುಕೆ ಬಂದ್ರೇ

ಯಂಗೇ ನಾವು ಉಳುಸಾನ ಅಂದ್ರೆ

ದಾಸಯ್ಯೋಗ್ಗೋಳು ಬಿಕ್ಷುಕು ಬಂದ್ರೇ

ದಾಸಯ್ಯೋಗ್ಗೋಳು ಬಿಕ್ಷುಕೆ ಬಂದಾಗ ಗೋವಿಂದಾ ..ಗೋವಿಂದಾ

ಮಡಿದಿ ಸತ್ತಂಗ ನಾನು ಬಿದ್ಧತೀನಿ

ದಾಸಯ್ಯೋಗ್ಗೋಳು ಬಿಕ್ಸ್ ಕೊಡೋದ ಯಂಗ್ ಉಳೀಬೇಕುಅಂದ್ರೆ .ದಾಸಯ್ಯೋಗ್ಗೋಳ

ಬಿಕ್ಸುಕ್ ಒತ್ತಾರಲ್ಲ .ಆಗ ನಾನು ಸತ್ತಂಗ ಬದ್ಕತ್ತೀನಿ .

ಅಕ್ಕಿ ಗಂಗಳ ಎದೆಮ್ಯಾಲೆ ಮಡುಗು

ಕುಡ್ಲು ಗಂಗಳ ಎದೆಮ್ಯಾಲೆ ಮಡುಗ

ನನ್ನ ಗಂಡ ಸತ್ತಾವನೆಂದು ನೀನು

ಬಾಯ್ ಬಾಯ್ ನೀನು ಬಡ್ಕೋತಿಣ್ಣೆ

ಬಾಯ್ ಬಾಯ್ ನೀನು ಬಡ್ಕೋತಿಣ್ಣೆ

ಬಿಕ್ಸುಕ್ ಬಂದ ದಾಸಯ್ಯೋಳು..ಗ..

ಕಸ್ಟಂದು ಮನೆ ಅಂತ ಅವುರು

ಮುಂದ್ಲು ಮನಿಗೆ ಹೋಯ್ತಾರೆ ಕಾನೆ

ಮುಂದ್ಲು ಮನೀಗೆ ಹೋಯ್ತಾರೆ ಕಾನೆ

ನೆಂಟ್ರು ಯಕ್ರು ಮನಿಗೆ ಬಂದರೆ ಗೋವಿಂದಾ ಗೋವಿಂದಾ

ನೆಂಟ್ರು ಯಕ್ರು ಮನಿಗೆ ಬಂದರೆ

ಗಂಡಾ ಅದೇನೋ ಆಯ್ತೂ ನೆಂಟ್ರುಯತ್ರು ಮನೀಗೆಬಂದ್ರೆ

ಇಕ್ಕುದೆ ಯಂಗೆ ಕಳುಸಾನ ನಾವು

ಇಕ್ಕುದೆ ಯಂಗೆ ಕಳುಸಾನ ನಾವು

ನೆಂಟ್ರು ಯತ್ರು ಮನಿಗೆ ಬಂದರೆ ಗೋವಿಂದಾ, .ಗೋವಿಂದಾ

ನೆಂಟ್ರು ಯತ್ರು ಮನಿಗೆ ಬಂದರೆ

ನೀನು ಹೊಟ್ ನೋವಂತ ಹೊಳ್ಳಾಡೆಣ್ಣೆ

ಹೊಟ್ ನೋವಂತ ಹೊಳ್ಳಾಡೆಣ್ಣೆ

ಬಂದ್ ನೆಂಟ್ರೆಲ್ಲ ಪರ್‌ಗುಡ್ತಾರೆ

ಸುಮ್ಮನೆ ಎದ್ದು ಹೋಯ್ತರೆ ಕಾನೆ

ಸುಮ್ಮನೆ ಎದ್ದು ಹೋಯ್ತರೆ ಕಾನೆ

ಅದ್ರಲ್ಲೊಸ್ಟ್ ಉಳುಸೋನೆ ಕಾನೆ

ನಾವು ಇಕ್ಕುದು ಬ್ಯಾಡ

ಕೊಡುವ ಬಿಕ್ಸ ಕೊಡಾಡು ಬ್ಯಾಡ

ಅದ್ರಲೆಲ್ಲಾ ಉಳುಸಾನ ಕಾಣೇ

ಅಂಗೆ ನಾವು ಬದ್ಕಾನ ಕಾಣೇ

ಅಂಗೆ ನಾವು ಬದ್ಕಾನ ಕಾಣೇ

ನಾನೂರ ಯಕ್ರೆ ಜಮೀನುಆರ

ಕ್ವಾಟಾಳೂರಿನ ಕೊಣವೇಗೌಡಾ .ಗೋವಿಂದಾ ..ಗೋವಿಂದಾ

ಕ್ವಾಟಾಳೂರಿನ ಕೊಣವೇ ಗೌಡ

ನಾನೂರೆಕರೆ ಜಮೀನುದಾರ

ಹಕ್ಕಿ ಪಕ್ಷೀಗಿಕ್ಕುವನಲ್ಲ

ನರಾಸೂರ್ರೀಗೆ ಕೊಡುವನಲ್ಲ

ನೆಂಟ್ರೀಗೊತ್ತೊಗೆಕ್ಕುವವನಲ್ಲ

ನಾನೂರೆಕರೆ ಜಮೀನುದಾರ

ಜೋಳದ್ ತೆನಿಯ ಹಾಕ್ಯವನಲ್ಲಾ

ಈ ಕೊಣವೇಗೌಡ ..ಅಸ್ಟು ಜಮೀನಿಗೆಲ್ಲ ಜ್ವಾಳುದ ಬೆಳಿಯನ್ನ ಹಾಕಿ ..ಈಗಹಕ್ಕಿ

ತಿಂತಾವೆ ಜ್ವಾಳದ ತೆನಿಯನ್ನ ..

ಚೀಲ ಮಾಡಿ ಕಟ್ಟಿಸವನಲ್ಲ

ಜ್ವಾಳದ್‌ತೆನಿಗೆ ಮ್ಯಾಣುದ್ ಚೀಲ ಕಲಿಸವನಲ್ಲ

ದಿನಾ ತೆನೆ ಲೆಕ್ಕ ಅವನು ಹಾಕವಲ್ಲ

ಜ್ವಾಳುದ್ ತೆನಿಯನ್ನೆ ದಿನಾಇಂದು ರವುಂಡಾಗಿ ಲೆಕ್ಕ ಹಾಕ್ಯಂಡ್ ಬರ್ತಾನೆ ..ಒಂದ್

ತೆನೆ ಕಮ್ಮಿ ಆಗಂಗಿಲ್ಲ. ಆಗಿಲ್ಲ ಯಾವುದೋ ಒಂದು ತ್ವಾಡು ಬಂದು .

ಒಂದು ತೆನಿಯಾ ತ್ವಾಡಾ ಕಡುಕೊಂಡೋಯ್ತು

ಒಂದು ತೆನೆಯಾ ತ್ವಾಡಾ ಕಡುಕೊಂಡೋಯ್ತು

(ಕ್ವಾಟಾಳುಪುರ ಎಲ್ಲರದು ಅಂದ್ರೆ  ಬೆಟ್ಟಂದುಪುರ  ..ಬೆಟ್ಟುದ್ ಪುರೈದಲ್ಲಿ ಅಲ್ಲ .

ಕೊಣವೇಗೌಡ ಇರಾದು ಜ್ವಾಳಾ ಹಾಕಿರಾದು ಅಲ್ಲ ಒಂದ್ ತ್ವಾಡ ಬಂದು

ಜ್ವಾಳುದ್ ತೆನಿಯ ಕಡುಕೊಂಡ್ಹೋಗಿ ಬೆಟ್ಟ ಸೇರ್‍ಕಂಬುಟ್ಟೈತೆ ಮಲ್ಲೇಶ್ವರನ

ಬೆಟ್ಟ ಅದು ಹೋಗಿ ಆ ಮಲ್ಲೇಶ್ವರನ ಬೆಟ್ಟ ಸೇರ್‍ಕಂಬುಟ್ಟೈತೆ ಇದುನು ಬೆಳಕೆರೆ

ಹೊತ್ನಲ್ಲಿ ಹೋಗಿ ತೆನೆ ಲೆಕ್ಕ ಹಾಕ್ಯೆಂಡ್ ಬರಾದ್ರಲ್ಲ  ಒಂದ್ ತೆನೆ ಕಮ್ಮಿಯಾಗೈತೆ

ದಡ್ ದಡನೆದಿಯಾ ಹಿಡುದುಕೊಂಡಾ

ದಡ್ ದಡನೆದಿಯ ಹಿಡುದುಕೊಂಡಾ

ಒಂದು ತೆನೇ ಇಲ್ಲುವಲ್ಲಾ

ಒಂದು ತೆನೇ ಇಲ್ಲುವಲ್ಲಾ

ಬಾಳ ಚಿಂತೆ ಮಾಡುತಾನೆ

ಚಿಂತೆ ಮಾಡ್ತಾನೆ ಚಿಂತೆ ಮಾಡಿ ನರಮನುಸ್ರು ಒಂದು ಕುಯ್ಕು ಹೋಗ್ಯವರೋ।

ಇಲ್ಲ ದನಕರ ಬಂದ ತಿಂದ್ಕಂಡೋಗ್ಯವೊ? ಇಲ್ಲ ತ್ವಾಡೇನಾರ ಒಂದ್ ಕಡ್ಕ
ಹೊಗ್ಯರೋ?

ಅಜ್ಜಿ ಗುರುತ ನೋಡಬೇಕು. ಅಜ್ಜಿ ಗುರುತ ನೋಡಿಕಂಡು ಹಿಡೀಬೇಕು ಅನ್ನ

ದಾಗಿ ಬಗ್ಗಿನೋಡಿ ಅಜ್ಜಿ ಗುರುತ ಹಿಡೀತಾನೆ ತ್ವಾಡುನ ಅಜ್ಜೆಗುರುತು ಸಿಕ್ತು ಯಾರ್ಲೆ

ಈ ಕೊಣವೇಗೌಡ್ಗೆ ..ಯಾವ್ ದಾರೀಲೋಗ್ಯತೆ ಅನ್ನದಾಗಿ ಅಜ್ಜೆ ಗುರುತ ಹಿಡ್ಕಂಡು

ಹೋಗ್ಬೇಕು ಅನ್ನದಾಗಿ ..

ಗುಡಿಲೀ ಕಯಿಂ ಹಿಡಾಕಂಡಾ

ಗುಡಿಲಿ ಕಯ್ಲಿ ಹಿಡಾಕಂಡಾ

ಮಲ್ಲೇಶಪ್ಪ ಬೆಟ್ಟುಕ್ಕೋದಾ

ಆ ತ್ವಾಡಿಮ ಅಜ್ಜೆ ಗುರುತ್ನಲ್ಲಿ ಆ ಮಲೇಶಪ್ಪ ಬೆಟ್ಟುಕ್ಕೋದ ಬೆಟ್ಟುಕ್ಕೋಗಿ ನೋಡ್ತಾನೆ

ಆ ತ್ವಾಡ ತೆನೆಯ ಎಳ್ಕಂಡು ಬಿಲದೊಳಿಕೆ ಹೋಗೈತೆ ಅಲ್ಲಿ

ತೊಡಿಯ ತಟ್ಟೀ ಕಾಕಾ ಹೊಡುದಾ

ಜೋಳದ್ ತೇನೆ .ನನಿಗೆ ಇವುತ್ತು ಸಿಕ್ಕಾತ್ತಾದೆ

ಮಲ್ಲೇಶಪ್ಪ ಬೆಟ್ಟ ಇವ್ನ ಅಇಯಾತಾನೇ

ಒಂದು ತೆನಿಗೆ ಬೆಟ್ಟ ಅಗೀತಾನೆ

ಸ್ವಾಮಿ ಸನ್ನಿಧಿ ಅಗಿತಾನೆ ..ಒಂದು ತೆನೆ ಜೋಳಕ್ಕೆ ಆಗಿನ್ನಪ್ಪ ಮಲ್ಲೇಶಪ್ಪ ಬೆಟ್ಟ ಅಗಿತಾನೆ ..

( ಆ ನನ್ನಪ್ಪ ಬುಟ್ಟಾನೆ ..ಯಾರು ಮಲ್ಲೇಶ್ವರ ಬುಟ್ಟಾರ ಆಗ .ಇವು ಅಗಿವಾಗ ಆ ಸ್ವಾಮಿ ಇವನತ್ರ ಯಂಗಿದ್ರು ಈ ಕೊಣವೇಗೌಡ್ನತ್ರುಕೆ ಯರಗಿ .ಅಯ್ಯಾ .ಇದು ನನ್ನ ಗಿರಿ ಗಿರಿಗೆ ಅಂಗೆ ಗುಡ್ಲಿ ತೋರಾಂಗಿಲ್ಲ ಕನಪ. ನನ್ನ ಗಿರಿಗೆ ಯಾರು ಗುಡ್ಲಿ ತೋರದಿಲ್ಲ ಕಾನಪ್ಪ.. ನೀನು ಬಂದು ಈ ಬೆಟ್ಟ ಯೆಲ್ಲಾನು ಅಗಿತಿದ್ದೀಯಲ್ಲಪ್ಪ .. ಒಂದ್ ತ್ವಾಡ ಬಂದು ತೆನೆ ಕಡ್ಕಬಂದು ಈ ಬೆಟ್ಟ ಸೇರ್ರೈತಲ್ಲ ಆ ತೆನೆ ನಂಗೆ ಬ್ಯಾಡ್ವಾ ..

ಅಯ್ಯಾ . ಈ ಒಂದ್ ತೆನೀಗೆ ಹತ್ತು ತೆನೆ ನಿನಿಗೆ ಸಾಕಾರ ಮಾಡ್ತೀನಿ. ನೀನು ಈ ಬೆಟ್ಟಕ್ಕೆ ಗುಡ್ಲಿ ಹಾಕ್‌ಬ್ಯಾಡ್. ಯೋನ್ ವರಾ ಬೇಕು ಕೇಳು ಕೊಡ್ತೀನಿ ಈ ಬೆಟ್ಟ ಅಗೆ ಯಾರ ಬುಡಪ್ಪ .

ಅನ್ನದಾಗಿ ಮಲ್ಲೇಸ್ಪುರ ಸ್ವಾಮಿ ಈ ಕೊಣವೇಗೌಡ್ಗೆ ಹೇಳ್ದಾಗ ಈ ಕೊಣವೇಗೌಡ ಯೇನಂತಾರೆ .

ನಾನು. ಕೇಳಿದ್ ವರಾ ಕೊಡಾಕೆ ಸಿದ್ದಾಗಿದ್ದೀರಾ ಸ್ವಾಮಿ ..ಈ ತೆನೆ ಬುಟ್ಟು ಹೋಯ್ತಿನಿ

ಆಯ್ತಪ್ಪ ..ನೀನ್ ಕೇಳಿದ್ ವರಾ ಕೊಡ್ತೀನಿ .ಸಿರಿತಾನ ಕೇಳ್ತೀಯೋ

ಯೇನ್ ವರಾಬೇಕಾರು ಕೊಡ್ತೀನಿ ಆದ್ರೆ ..ನೀನು ನನ್ನ ಈ ಬೆಟ್ಟುಕ್ಕೆ ಗುಡ್ಲಿ ತೋರ್ಬೆಡ)

ಯೇನ್ ವರಾಬೇಕು ಕೇಳು .

ಕೇಳು ಅಂದ್ರೆ ಯೇನು ಹೇಳುತ್ತಾನೆ ಕೊಣವೇಗೌಡ ನನ ಬೆಳೆ ಮುಂದೆ ಮುಂದೆ ಬೆಳಿಬೇಕು. 'ಕೊಣವೇಗೌಡ್ನು ಬೆಳೆ' ಅಂಬುದಾಗಿ ಬೂಮಂಡ್ಲುದಲ್ಲಿ ಮರೀಬೇಕು ಅಂತಾ ಹೆಸರ ನನಿಗೆ ನೀನು ಕೊಡಾಬೇಕು

(ಕೊಣವೇಗೌಡ್ನು ಬೆಳೆ. ಕೊಣವೇಗೌಡ್ನು ಆರಂಬ ಅನ್ನದಾಗಿ ಬೂಮಂಡಲದಲ್ಲಿ ಹೆಸರಾಗಬೇಕು. ಈಗ್ಲುವೆ ನಿಮ್ಮಂತಾವ್ರು ಅಪಾರ ಬೆಳುದ್ರೆ ..ಇದೇನ್

ಕೊಣವೇಗೌಡ್ನ ಆರಂಭ ಅಂತಾರಲ್ಲ; ಅವತ್ತು ಕೊಣವೇಗೌಡ್ಗೆ ಆನನ್ನಪ್ಪ

ಮಲೇಶ್ವರ ಕೊಟ್ಟುದ್ದು ಇವುನು ಕೇಳಿದ್ದು)

ಆಯ್ತು ಕಾನಪ್ಪ ಕೊಣವೇಗೌಡ ನೀನು ಕೇಳಿದಂಗೆ ಮುಂದೆ ಬೂಮಂಡ್ಲುದಲ್ಲಿ

ಕೊಣವೇಗೌಡನ ಬೆಳೆ ಅನ್ನದಾಗಿ ಹೆಸರಾಗ್ಲಿ ಅಂತ ಆನೇ ಮಾಡಿಬುಟ್ಟು

ಮುಂದೇನು?.......

ಇಷ್ಟು ನಿನಗೆ ಕೊಟ್ಟ ಮೇಲೆ ನನಿಗೇನು ಕೊಡ್ತೀಯಾ ಕೊಣವೇಗೌಡ ..?

ಇಷ್ಟು ಐಬೋಗವಾಗಿ ಕೊಣವೇಗೌಡ್ನು ಬೆಳೆ ಅನ್ನದಾಗಿ ಬೂಮಂಡ್ಲುವೆ ಮ್ಯೆರೀಲಿ

ಅನ್ನದಾಗಿ ವರ ಕೊಟ್ಟಿಲ್ಲ ನನಿಗೆ ನೀನೇನು ಕೊಡ್ತೀಯ ಯೇನರಿಕೆ ಕೊಡ್ತಿಯ)

ಆಗ ಈ ಕೊಣವೇಗೌಡ ಚಿಂತೆ ಮಾಡುತ್ತಾನೆ ಈಗ ಅರಕೆ ಕೊಡಾರೆ ಹೋದ್ರೆ

ದುಡ್ ಕರ್ಚಾಯ್ತದೆ. ಈ ನನ್ನ ತಲೆ ಮುಡಿ ಕೊಟ್ಟ ಮತ್ತೆ ಹುಟ್ತಾದೆ ಅನ್ನದಾಗಿ

ಯೋಚ್ನೆ ಮಾಡಿ

ನನ್ನ ತಲೆಯ ಮುಡಿಯ ಕೊಡ್ತೀನಿ ಸ್ವಾಮಿ

ತಲೆಯ ಮುಡಿಯ ಕೊಡ್ತೀನಿ ಸ್ವಾಮಿ

(ಈ ಕೊಣವೇಗೌಡ ಬಾಳ ಜಿಪುಣ ಬೂಮಂಡ್ಲಾಕ್ಕೆ ಈಗ ನೀವು ಸಾಲ ಕೊಡ್ತೀರಿ

ನಾನು ಸಾಲ ಇಸ್ಕತ್ತೀನಿ. ನೀವು ಕೊಟ್ ಸಾಲ ನಾನು ಕೊಡ್ಬವಾದ್ರೆ ನೀನು

ಬಾಳ ಜಿಪುಣ ಕಲ್ಲ .ಕೊಣವೇಗೌಡ ಇದ್ದಂತೆ)

ಈಗ ಆಯ್ತು ಆಸ್ವಾಮಿಗೆ ಮುಡಿ ಕೊಡಬೇಕು .ಕೊಣವೇಗೌಡ

ಮನಿಗೆ ಶಿವನೆ ಬಂದವನಲ್ಲಾ

ಬಾರೆ ಬಾರೆ ನನ್ನ ಮಡದೀ

ನನ್ನ ಮಡದಿ ಕೊಡಗಿನ ಮಾರಿ

ಸ್ವಾಮಿಗೆ ಮುಡಿಯ ಕೊಡಲುಬೇಕು

ಸ್ವಾಮಿಗೆ ಮುಡಿಯ ಕೊಡಲುಬೇಕು

ಕೊಟ್ಟಿ ಬುತ್ತೀ ಮಾಡೇ ಹೆಣ್ಣೆ।

ರೊಟ್ಟಿ ಬುತ್ತೀ ಮಾಡೇ ಹೆಣ್ಣೇ

ನಾಲ್ಕು ಪೈಸೆ ನೀಡೇ ಮಡದಿ

ಆರಾ ಕಾಸ ಕೊಡಲೇ ಮಡದಿ

ಆಗ ಅವನೆತ್ತಿ ಕೊಡಗಿನ ಮಾರಿ ರೊಟ್ಟಿ ಬುತ್ತಿ ಮಾಡಿ ಆರ್‌ಪೈಸೆ ಆರ್‌ಕಾಸ್ ಕೈಯಿಗ್

ಕೊಡ್ತಾಳೆ ಈಗ ಮುಡಿ ಕೊಡಕ್ ಹೊಂಟ್ .

ಮಲ್ಲೇಶ್ವರುನ ಬೆಟ್ಟಕ್ಕೋದ

ಮಲ್ಲೇಶ್ವರುನ ಬೆಟ್ಟಕ್ಕೋದ

ತಲೆ ಮುಡಿಯ ಎರಸಬೇಕಾರೆ

ಯರಿಯರಿಗೆ ಕಾಸ ಕೊಡಬೇಕು

ತಲೆ ಮುಡಿಯರಿಗೆ ಕಾಸ್ ಕೊಡಬೇಕಿಲ್ಲ.,,,,,,ಈ ಕಾಸ ಉಳಸಬೇಕು ಯವಕರ

ಉಳುಸ್ಲಿ .

ಯಾವ್ ಚಂದುಕ ಉಳಿಸಲಿ ನಾನು

ಯಾವ್ ಚಂದುಕ ಉಳಿಸಲಿ ನಾನು

ಮುಡಿ ತೆಗೆಯನ್ತಾಕೆ ಹೋದ..ಸ್ವಾಮಿ ಎಸ್ಟು ಮುಡಿ ತೆಗುದ್ರೆ ಅಂದ

ಮೂರ್ ಪೈಸೆ ಕನಪ್ಪ ..

ಆಯ್ತು ಕನ್ನಪ್ಪ ಕೊಡ್ತೀನಿ. ಮೂರ್ ಪೈಸ ತೆನೆಯ ಕೊಡ್ತೀನಿ ಯರಿಯಪ್ಪ ಅಂದ

ಮೂರ ಪೈಸೆ ಕನಪ್ಪ..

ಆಯ್ತು ಕನಪ್ಪ ಕೊಡ್ತಿನಿ ಮೂರ್ ಪೈಸೆ ತೆನೆಯ ಕೊಡ್ತೀನಿ ಯರಿಯಪ್ಪ ಅಂದ

ಸ್ವಾಮಿ ಮುಡಿ ಯರಿರಿ ಅಂತ ಯರಿಯವನ್ ತಾವ ಹೋಗಿ ಕುತ್ಗಂಡ

ಮೂರು ಕಾಸು ಉಳುಸೋದಕ್ಕೆ ಯೇನ್ ಚಂದ ಯೇನ್ ತಂತ್ರ ಮಾಡುತ್ತಾನೆ

ಕೋಣವೇಗೌಡ ಯೇನ್ ಉಪಾಯ ಮಾಡತ್ತಾನೆ.

ಮೂರು ಪಟ್ಟಿ ಯರಿಯವರಿಗೂ

ಮೂರು ಪಟ್ಟಿ ಯರಿಯೇವರಿಗೂ

ಸುಮ್ಮನೆ ಇವನು ಕೂರುತಾನೇ

ಮೂರು ಪಟ್ಟಿಯರುದು ಮೇಲೆ

ಅಯ್ ಉರಿಉರಿ ಅಂತ ಯೇಳುತಾನೆ

ಉರಿಉರಿ ಅಂತ ಯೇಳುತಾನೆ

ಚೌರ ಮಾಡಿ ನಿನ್ ಮನಿಯೇ ಆಳಾಗ

ಚೌರ ಮಾಡಿ ನಿನ್ ಮನಿಯೇ ಆಳಾಗ

ಉರಿತಾಪನಾ ತಡಿಯಲಾರೆ

ನೀನು ನನ್ನ ತಲೆಯ ಯರಿಯೋದಬ್ಯಾಡಾ

ಇನ್ನೊಬ್ಬುನ್ ತಾಕೆ ಹೋಗುತ್ತಾನೆ

ಇನ್ನೊಬ್ಬುತ್ ತಾಕೆ ಹೋಗುತ್ತಾನೆ

ಇನ್ನೊಬ್ಬುನ್ ಹೋಗಿ ಯೇನ್ ಹೇಳುತ್ತಾನೆ ಕೊಣವೇಗೌಡ .ಅಯ್ಯಾ ..ತಲೆ

ಬೋಳುಸ್ತಾ ಇದ್ದ .ಬಾಳ ನಿಸ್ವಾಣೆಯೆಯ್ತೂ ಆಗಾಕುಲ್ಲ ಅಂತ ಅವನು ಅಲ್ಲಿ

ಉಳ್ಳಿ ಬಿದ್ದ   ಅಲ್ಲಿಂದ ಬಂದಿದ್ದೀನಿ, ಅದೇ ಕಾಸ್ ನಿನಿಗೆ ಕೊಡ್ತೀನಿ ಯರಿಯವ್ವಿ

ಅಂದಾ ಆಯ್ತು ಕುತ್ಗಳಿ ಸ್ವಾಮಿ  ಅಂತ ಹೇಳಿ

ಅವುದು ನಾಲ್ಕು ಪಟ್ಟಿಯ ಯರಿಯವರಿಗು

ನಾಲ್ಕು ಪಟ್ಟೆಯ ಯರಿಯೋವರಿಗು

ಸುಮ್ಮನೆ ಇವುನು ಕುಂತವನಲ್ಲಾ

ಸುಮ್ಮನೆ ಇವುನು ಕುಂತವನಲ್ಲಾ

ಹತ್ತು ಭಾಗದಲ್ಲಿ ಒಂದು ಭಾಗ ಒಂದು ಚೂರೈತೆ  ಯರಿಯೊದು ಅಸ್ಟೊತ್ತಿಗೆ

ಉರಿಉರಿ ಅಂತ ಯೇಳುತ್ತಾನೆ

ಉರಿಉರಿ ಅಂತ ಯೇಳುತ್ತಾನೆ

ಚೌರ ಮಾಡಿ ನಿನ್ ಮನಿಯೇ ಆಳಾಗ

ಚೌರ ಮಾಡಿ ನಿನ್ ಮನಿಯೇ ಆಳಾಗ

ಉರಿ ತಾಪವ ತಡಿಯಲಾರೆ

ಅವನ ಅಲ;ಲೆ ಬುಟ್ಟವನಲ್ಲ

(ಮುಡಿ ಯರಿಯಾರು ಪುಟ್ಟುಗೆ ಯಲ್ಲನು ಯರುದು ಮೇಲೆ ತಾನೆ ಕಾಸು ಕೇಳಾರು)

ನೀನು ಯರಿಯದು ಬ್ಯಾಡ ಈಗ ಮೂರ್ ಪೈಸೆ ಉಳಿಸೋದಕ್ಕೆ ಕೊಣವೇಗೌಡ

ಅಲ್ಲ ಮುಂದೆ ಓಡಿ ಬತ್ತಾನೆ.

ಅಲ್ಲಿಂದ ಇನ್ನೊಬ್ನುತಾಕೆ ಓಡುತಾನೆ

ಇನ್ನೊಬ್ನ ತಾಕೆ ಓಡಿಬಂದ

ಅಲ್ಲಿ ಬಂದ ಯೇನ್ ಯೇಳುತಾನೆ ಕೊಣವೇಗೌಡ ಅಯ್ಯಾ .ನನ್ನ ತಲೆ ಮುಡಿ ಯರಿತಾ ಇದ್ದ ಇನ್ ಒಂದೇ ಒಂದು ಚೂರಿತ್ತು ಯರಿಯದು. ಅಸ್ಪತ್ರಿಗೆ ಅವುನೆ ಮನೇಲೇನೋ ಸಾವಿನ ಸುದ್ದಿ ಬಂತು ..ಅಯ್ಯೋ ಪಾಪ ಅಂತ ಹೇಳಿ ದುಡ್ಡು ಕೊಟ್ಟು ನಾನೇ ಕಳ್ಸಿಬುಟ್ಟೆ .ಇದೊಂದ್ ಚೂರ್ ಯರ್‌ಕೊಡಪ್ಪ. ಆಯ್ತಪ್ಪ ಸಲ್ಪ ಐತೆ ಯರ್‌ಕೊಡ್ತೀನಿ ಕುತ್ಗಳಪ್ಪ. ನಿನ್ ಕಾಣೆರುಬ್ಯಾಡ ಕಾಸೂ ಬ್ಯಾಡ ಅಂತ ಹೇಳಿ ಕೂರಿಸ್ಕಂಡು ಯರಿತಾತೆ .

ಉಳಿದ ತಲೆಯ ಯರಿಸಿಕಂಡಾ

ಉಳಿದ ತಲೆಯ ಯರಿಸಿಕಂಡಾ

ಮೂರು ಪೈಸೆ ಉಳಿಸೀಕಂಡಾ

ಮೂರು ಪೈಸೆ ಉಳಿಸೀಕಂಡಾ

ಈ ನಿನ್ ಅರಿಕೆ ತೀರಿಹೋಯ್ತಲಪ್ಪ ಅಂತೇಳಿ ಮಲ್ಲೇಶಪ್ಪನಿಗೆ ಕಯ್ ಮುಗುದ ಮುಡಿಕಾಸುವಿಲ್ಲ ಅಣ್ಣುಕಾಯಿ ಈದುಬತ್ತಿ ಯಾವ್ದು ಇಲ್ಲ ನಾನು ತಲೆ ಮುಡಿ ಕೊಡ್ತೀನಿ ಅಂತ ಹೇಳಿದ್ನೆ ಹೊರ್ತು ಅಣ್ಣುಕಾಯಿ ತತ್ತೀನಿ ಅಂತ ಹೇಳಿದ್ನ ನಿನ್ನ ದಿವಿ ಮೇಲೆ ನನ್ನ ತಲೆ ಮುಡಿ ಕೊಟ್ಟಾದ್ದಾಯ್ತು. ಇನ್ನ ರೊಟ್ಟಿಬುತ್ತಿ ಉಣ್ಣಬೇಕು

ಎಡುಕೆ ಬಲುಕೆ ಜನಾವ ಇವನು ನೋಡುತಾನೇ

(ಬತ್ತರಲ್ಲ ಬಿಕ್ಷುಕ್ಕೆ ಬಟ್ಲಿಕ್ಕಂಡು .ಊಟ ಮಾಡತಕ್ಕೆ)

ಎಡಕೆ ಬಲುಕೆ .ಜನಾವ ಇವುನು ನೋಡುತಾನೇ

ಜನಾ ಇಲ್ಲದ ಜಾಗುಕೋದ

ಜನಾ ಇಲ್ಲದ ಜಾಗುಕೋದ

ರೊಟ್ಟಿ ಬುತ್ತಿ ಬಿಚ್ಚುತ್ತಾನೆ

ಜನಾ ಯಾರು ನರಮನುಸ್ರ ಸುಳಿವಿಲ್ವಲ್ಲ ಅಂತ ಜಾಗುಕ್ಕೋಗಿ .ರೊಟ್ಟಿಬುತ್ತಿ

ಬಿಚ್ತಾನೆ ಊಟ ಮಾಡುದಕೆ ಅಲ್ಲಿಗೆ ಆ ಬಗುವಂತ ಮಲೇಸ್ಪುರ

ನೆಯ ಒಂದತ್ತು ಜನವ ಬಟ್ಲು ಇದ್ಕಂಡು ಬರಾಂಗೆ ಮಾಡ್ತಾನೆ ಊಟ ಮಾಡತಕ್ಕೆ

ಜನಾ ನೋಡ್ತಾನೆ ..

ಬಿಚ್ಚಿದು ಬುತ್ತಿ ಕಟ್ಟುತ್ತಾನೆ

ಬಿಚ್ಚಿದು ಬುತ್ತಿ ಕಟ್ಟುತ್ತಾನೆ

ಅಲ್ಲ ಇವನು ಕೊಡಾಲಿಲ್ಲ

ಊಟ ಇವನು ಮಾಡಲಿಲ್ಲ

ಮನಿಗೆ ಶಿವನೆ ಬತ್ತನಲ್ಲ

ಬಾರೇ ಬಾರೆ ನನ್ನ ಮಡದಿ ಗೋವಿಂದಾ ಗೋವಿಂದಾ .

ಬಾರೇ ಬಾರೆ ನನ್ನ ಮಡದಿ

ನನ್ನಂತಾವ ಬುದ್ದಿ ನೋಡೆ

ನರುಮನುಸ್ರಿಗೆ ಕೊಟ್ಟುಲ್ವಲ್ಲೆ

ನೀನು ಕೊಟ್ಟು ಕಾಸು ಉಳಿಸ್ಕಂಡು ಬಂದೆ

ನೀನು ಕಟ್ಟಿದ್ ಬುತ್ತಿ ವಾಪಾಸ್ ತಂದೆ

ನನಿಗಿಂತ ಯಾರು ಇಲ್ಲ .

ನೀನೆಷ್ಟು ಕೊಟ್ಟಿದ್ದೆ ಕಾಸಾ .ಆರ್ ಕಾಸ್ ಕೊಟ್ಟಿದ್ದ ..?

ಬುತ್ತಿ ಎಸ್ಟು ಕಟ್ಟಿದ್ದೆ .? ಬುತ್ತಿನು ನೋಡು ಕಾಸ್ನುನೋಡು .)

ಹಿಂಗೆ ಮಡದಿ

ಹಿಂಗೆ ನಾವು ಬದ್ಕಾನೆ ಕಾನೆ

ಹಿಂಗೆ ನಾವು ಬದ್ಕಾನೆ ಕಾನೆ

ನರಾಸೂರ್ರಿಗೆ ಕೊಡಾದು ಬ್ಯಾಡ

ಹಕ್ಕಿ ಪಕ್ಷೀಗೆ ಕೊಡಾದು ಬ್ಯಾಡ

ನೆಂಟ್ರಿಗೆ ಹೆತ್ರಗೆ ಇಕ್ಕದು ಬ್ಯಾಡ

ಮುಂದೆ ನಾವು ಹಿಂಗೆ ಬಾಳನೆ ಕಾನೆ .

ಇದಾಯ್ತಲ್ಲ .ಕೊಣವೇಗೌಡನ ಬೆಳೆ ಅನ್ನದಾಗಿ ಬೂಮಂಡ್ಲುವಲ್ಲ ಮೆರಿಯ

ಅ ಅನ್ನದಾಗಿ ಆ ನನ್ನಪ್ಪ ಅಸೀರ್ವಾದಿತ್ತಲ್ಲ ಅದರಂತೆ ಕೊಣವೇಗೌಡ್ನ

ನಾನೂರೆಕರೇಲು ಬೆಳೆ ಅನ್ನದು ಬೆಳೆದು ನಿಲ್ಲುತ್ತದೆ. ಕೊಣವೇಗೌಡ ಜುಪುಣ

ಅನ್ನದು ಅಂಗೆಯ ಅಬ್ತದೆ.

(ಕೊಟ್ ಕಾಸ್ ಕೊಡದೇವಾದ್ರು ಕೊಣವೇಗೌಡಿದ್ದಂಗೆ ಅಂತರೆ ಕಟ್ಕಂಡ ಅಕ್ಕಿ

ಯಂಗ್ ತೀರಿಸ್ದ ಅಂಗೆಯ ಅಲ್ಲಿದ ಅಲ್ಲೆಯ ವರೆಸೋರ್ಗೆ ನೀನೊಂತರ

ಕೊಣವೇಗೌಡಿದ್ದಂಗೆ ಅಂತಾರೆ. ಜೀವ ಹೋಯ್ತದೆ ಅಂದ್ರು ಒಂದ್ ನಯೇಪೈಸೆ

ಬಿಡ್ಡಕುಲ್ವಲ್ಲ ಅಂತರಿಗುವೇ .ನೀನೋಂತರ ಕೊಣವೇಗೌಡಿದ್ದಂಗೆ ಕಲ್ಲ

ಮಹಾ ಜುಪುಣ ಅಂತಾರೆ)

ಜನುವೆಲ್ಲ ಜರಿಯುತಾರೆ

ಈ ನಾನೂರೆಕರೆ ಜಮೀನು .ಒಂದ್ ಬೆಳೆ ಹಾಕುಸ್ಬೇಕಾರು ಅವುನು

ಕೂಲಿ ಕೊಟ್ಟೆನಲ್ಲ. ಈಗ ಒಂದೊಲ ಅರ್ದಮೈಲೆ, ಮುಕ್ಕಾಲು ಮೈಲೆ

ಒಂದ್ ಮೈಲೆ ಒಂದೊಲ ಒಂದು ಸಾಲ ಒಬ್ರು ಒಂದಿನೆಲ್ಲ ಕೂತ್ರು ಬಂದ್

ಮುಖ ಅತ್ತಕಾಣುದಿಲ್ಲ. ಅವತ್ತಿನ ದಿನ ಒಂದಿನ ಹೊಲಕೊದ್ರೆ ಆರ್ ಕಾಸು

ಒಂದಾಣಿ ಒಳಗೆ . ಅವುನ್ ಕಾಲ್ದಲ್ಲಿ ಅಸ್ಟೆಯ .ಈ ಹೊಲ ಕೂಸಬೇಕಾರೆ .

ಊರಿಗೋರಿಗೆಲ ಡಂಗೂರ ಒಡುಸ್ತಾನೆ ಅಂದ್ರೆ .ಒಂದೇ ಒಂದು

ಮುಂಬು ಹೊಲ ಕೂದ್ರೆ 'ನಾಕಾಣೆ ದುಡ್ಡು ಹಂದಿ ಬಾಡಿನ ಸಾರು'

ಅನ್ನದಾಗಿ ಸಾರಿಸ್‌ಬುಡ್ತಾನೆ. ನಾಕಾಣೆ ದುಡ್ಡು ಬಂದಾಗ

ಹಂದಿ ಬಾಡಿನ ಸಾರು ಒಂದು ಮೂರುಕೊದ್ರೆ ಹಳ್ಳಿ ಜನುಕೇನರುವಾಗಿತ್ತೆ

ಅಂತದ ನಾಕು ಸಾಲು ಕೂದು ನಾರ್ ನಾಕಾಣೆಯಂಗೆ ಒಂದು ರೂಪಾಯಿ

ತರಚಾದಲ್ಲ। ಅದ್ರು ಮೇಲೆ ಹಂದಿಬಾಡಿನ್ ಸಾರಲ್ಲ ಹಂದಿ ಬಾಡಿನ್ ಸಾರಿನ್ ಆಸ್ಗೆ

ಜನುವೆಲ್ಲ ದಂಡು ಕಟ್ಟಿ ಬರೂತಾರೆ

ಜನುವೆಲ್ಲ ದಂಡು ಕಟ್ಟಿ ಬರೂತಾರೆ

ಒಂದು ಸಾಲ ಹೊಲ ಅಂದ್ರೇ

ಒಂದು ಮುಂಬು ಒಂದು ಮೈಲೀ

ಒಂದು ಸಾಲು ಒಂದು ಮೈಲೇ

ಒಂದ್ ಸಾಲು, ಒಂದು ಮುಂಬು ಕೂದ್ರು ತಾನೆ ನಾಕಾಣೆ ದುದ್ದು ಹಂದಿ

ಬಾಡಿನ ಸಾರು ಎಷ್ಟೋತ್ತು ಕುಯ್ಯದು ಸಂದೆಲ್ಲ ಕೂದ್ರು ಅರ್ದ

ಮುಂಬತ್ತಕ್ಕಾಗದಿಲ್ಲ.

ಈ ದಡಿನಲ್ಲಿ ಕೂತಗಂಡ್ರೆ ಆ ದಡಿಗೆ ಹತ್ತಾರಾಗಾದಿಲ್ಲ

ಕುಯ್ಯೋ ಜನುಕೆ ಸೊಂಟು ನೋವು ಬರುವಾದಲ್ಲ

ಅರ್ದ ಸಾಲ ಕುಯ್ಯೊತಾರೆ

ಇನ್ನು ದಡುವ ಹತ್ತಾನಿಲ್ಲ

ಇವ್ನ ಹಂದಿಬಾಡ್ನ ಸಾರು ಬ್ಯಾಡಾ

ನಾಕಾಣೆ ಕೂಲೀ ಬ್ಯಾಡಾ

ಸುಮ್ನೆ ಎದ್ದು ಹೋಗುತ್ತಾರೆ

ಕುಯ್ಯಾಗಾದಿಲ್ಲ ಪೂರವ ಎದ್ದೋಯ್ತರೆ ಗೌಡ್ರೇ ಸಂದೇಲ್ಲ ಕೊದುವ್

ಆಯ್ತು ನೀವ್ ಒಂದು ಸಾಲು ಕೂದ್ರು ತಾನೆ ನಾಕಾಣೆ ದುಡ್ಡು ಹಂದಿ ಬಾಡ್ನ

ಸಾರು ನೀವು ಅರ್ದಭಾಗ ಕೂದರ್ದ್ದೀಲಿ ಇನ್ನರ್ದಭಾಗ ಕುಯ್ರಿ ದುಡ್ಡು

ಇಸ್ಕಳಿ. ಹಂದಿ ಬಾಡಿನ ಸಾರು ಉಣ್ಣಿ. ಸಂದೆ ಆತಲ್ಲ ..ಸೊಂಟ ನೋವು

ಬಂತಲ್ಲ .ಏನ್ ಕೊಡ್ತಿರಿ ಕಯೆತ್ತಿ ಕೊಡಿ  ಹೋಯ್ತೀನಿ. ನಾನು

ತಮಟೆ ಹೊಡ್ಸಿ ಸಾರ್ಸಿದ್ದು ಒಂದು ಮುಂಬು ಕೊದ್ರೆ ನಾಕಾಣೆ ದುಡ್ಡು

ಹಂದಿ ಬಾಡಿನ ಸಾರು ಅಂತವ ಅರ್ದ ಮುಂಬು ಕೊಡರಿಗೆ ಯಂಗ್

ಕೊಡರಾಯ್ತದೆ ..?

ಅಯ್ಯೋ ನಿನ್ನ ಮನಿಯೇ ಹಾಳಾಗ

ನೀನು ಕೂಲಿ ನಮಿಗೆ ಕೊಡಾದು ಬ್ಯಾಡಾ

ಈ ನೋವ ನಾವು ತಿನ್ನೋದು ಬ್ಯಾಡಾ

ಈ ಮೋರಿನಾ ನಾವು ಕುಯ್ಯೋದು ಬ್ಯಾಡಾ

ಸಪ್ಪುಗೆ ಮನಿಗೆ ಹೋಯ್ತರಲ್ಲ

ಅಲ್ಲ ವೋಟಾ ಉಳಿಸಾತಾನೆ

ಅಲ್ಲಿ ವೋಟಾ ಉಳಿಸಾತಾನೆ

ಕೊಣವೇಗೌಡ ಅಂದ್ರೆ .ಬೂಮಂಡ್ಲುಕೆ ಜಿಪುಣ ಕೊಣವೇಗೌಡನ

ಬೆಳೆ ಅಂದ್ರೆ  ಬೂಮಂಡ್ಲುಕೆ ಹೆಸರು, ದೊಡ್ಡ ಬೆಳೆ ಆ ಮನುಸುನ

ಜಿಪುಣತನ, ಅವುನು ಮಾಡಿರೋ ಅನ್ನಾಯ .ಮೋಸ ..

ನನ್ನೊಂತೋರು ಹೊಗಳಾತಾವಿ

ನಾಡಿನ ತುಂಬ ಹೇಳಾತೀವಿ

ನನ್ನಂತ ಹಾಡುಗಾರನ ಬಾಯ್ಲಿ

ಅಗಿದು ಅಗಿದು ಉಗಿಯಾತೀವಿ

ಬೂಮಂಡ್ಲುಕೆ ಈ ಪುರಾಣ, ಹರಿಕತೆ ..ನಾಟಕ ..ಈ ಸಂಗೀತ .

ಈ ಅನ್ನಾಯ ಸತ್ಯ ಯಾರಿಂದ ಎಟ್ಟು

(ಈಗ ನೀವು ಸುಮ್ನೆ ಕೂತಿರ್ತೀತಿ. ನೀವು ದರ್ಮಗಾರ್ರು. ನಾನುಕೇಡಿನ

ನಿಮಿಗು ನನಿಗು ತಂದಾಕರಾರು ಮುಂದೆ ಕತೆ ನಡಿಬೇಕಲ್ಲ ಬೂಮಂಡ್ಲುಕೆ ಅದನೆಲ್ಲ

ಹೇಳಬೇಕಲ್ಲ ಈ ಬೂಮಂಡ್ಲುಕೆ ಕತೆ ನಾಟಕ ಸಂಗೀತ ಎಲ್ಲನು ತಿಂದರು ಯಾರು?

ನಾರದ ಮಾ ಮುನಿಗಳು ..ನಾರದರು ನೀವು ದರ್ಮಸಾಲಿಗಳು

ನಿಮ್ಮ ದರ್ಮ ಬೂಮಂಡ್ಲಕ್ಕೆ ಅನ್ನದಾಗಿ ಈಗ ನನ್ನಲ್ಲಿ ಅನ್ಯಾಯ್ಯತೆ

ನನಿಗೆ ದುರಾಸೆ ಐತೆ. ಈಗ ನಿನ್ನ ಅಸ್ತಿ ಬರಿಸ್ಕೋಬೇಕು. ಒಂದು ನನಿಗೆ ಹೆಳದು

ತಂಬ್ಲಿಯಂಗೈತೆ .ಯಾರು ದಿಕ್ಕಿಲ್ಲ ಹೋಗಿ ಬರಿಸ್ಕ್ಯಬಾರ್ದ ..ಹೋಗಿ ಕೀಟ್ಲೆ

ಮಾಡ್ಯಾರ ಬರಿಸ್ಕ್ಯ. ಈಗ ನಾರದುನ ಮಾತು ಮೀರಂಗಿಲ್ಲ. ನಾನು ಅಂಗೆ

ಮಾಡದು ನನ್ನ ಅನ್ಯಾಯ ಎಲ್ಲನು ಮತ್ತ ಅವರೆ ಬೂಮಂಡ್ಲಕೆ ಹೇಳಿದು

ನೀವ್ ದರ್ಮಸಾಲಿಗಳು ಬಗುವಂತನ ಬಕ್ತೀಲಿ ನಿರಾಳವಾಗಿ ಬಾಳ್ತಾ ಇದ್ದೀರಿ

ನನ್ನಲ್ಲಿ ಅನ್ಯಾಯ್ಯೆತೆ ನಾನು ಬಗುವಂತಗೆಯ ಮೋಸ ಮಾಡಕು ಸೈ .)

ಹಿಂಗೆ .ಬೂಮಂಡ್ಲಕೆ ಸತ್ಯಯಾವ್ದು? ಅನ್ನಾಯ ಯಾವ್ದು?

ಅನ್ನಾದು ನಾರದರಿಂದಾ ಬೂಮಂಡ್ಲುಕೆ ನಾಟಕ ಸಂಗೀತ ಹರಿಕತೆ ಎಲ್ಲ

ಬಂದುದ್ದು ನಾರದರಿಂದ .ಈ ಕತೆ ಎಲ್ಲವ ಬೂಮಂಡ್ಲಕ್ಕೆ ತಿಳಿಯಂಗಾತು .

ಮುಂದಕ್ಕೆ

# ಅಣ್ಣ–ತಂಗಿ

ಅಯ್ಯ ದೀವಿಳಿಗೇನ ಹಚ್ಚಾರ

ಅಣ್ಣ ತಂತಿನ ಕರುಕಂಡು

ಅಣ್ಣ ತವೂರಿಗೋಗುವಾಗಾ॥ವ॥ ವರಸುಕೊಂಡು ದೀವಳಿಗಟ್ಟಿ ನಾಡಿಗೆ ದೊಡ್ಡುದಲ್ಲ

ಶಿವನೆ ಸೀಮೆಗೆ ದೊಡ್ಡುದಲ್ಲ ॥ವ॥

ದೀವಳಿಗೆಣ ಹಚ್ಚಾಕೆ

ಅಣ್ಣ ತಂಗೀನ ಕರುಕಂಡು

ಅಣ್ಣ ತವರಿಗೋಗುವಾಗ ॥ವ॥

ಅವರು ಅಡವೀ ಬಳುಗೀನಿ

ಅಡವೀ ಬಳುಗೀಗಾ

ಅವರು ನಡೆದು ಹೋಗುವಾಗ

ಅಣ್ಣ ತಂಗಿ ವಡುಬೆ ನೋಡಿ

ಏನ ಗ್ಯಾನ ಮಾಡುತಾನೇ ॥ವ॥

ತಂಗಿ ವಡುಬೆ ನೋಡಿ

ಏನ ಗ್ಯಾನ ಮಾಡುತಾನೇ

ನನ್ನ ತಂಗೀಗಿರೊ ವಡುಬೆ

ನನ್ನ ಮಡದೀ ಗಿಲುವಲ್ಲ ॥ವ॥

ಅಡವೀ ಬಳುಗೀಗಾ

ಅವರು ನಡದು ಹೋಗುವಾಗ

ಅಣ್ಣ ತಂಗೆ ವಡುಬೆ ನೋಡಿ

ಏನ ಗ್ಯಾನ ಮಾಡುತಾನೇ ॥ವ॥

ತಂಗೆ ವಡಬೆ ನೋಡಿ

ಅಣ್ಣ ಏನ ದ್ಯಾನ ಮಾಡುತಾನೆ

ತಂಗೀಗಿರೋ ವಡುಬೆ

ನನ್ನ ಮಡದೀಗಿಲುವಲ್ಲಾ ॥ವ॥

ತಂಗೀಗಿರೋ ವಡುಬೆ

ನನ್ನ ಮಡದೀಗಿಲುವಲ್ಲಾ

ತಂಗಿ ವಡುಬೆ ಬಿಚ್ಚೀ

ನನ್ನ ಮಡದೀ ಸಿಕ್ಕಬೇಕೂ ॥ವ॥

ಊರಿಗೆ ಕರೆದುಕೊಂಡೋಗಿ

ಇವಳ ವಡಬೆ ಕೇಳಿದರೆ

ನನಿಗೆ ಕೊಡೂವುದಿಲ್ಲುವಲ್ಲ

ಇವಳಾ ಕಾಡೀನೊಳಗೀಗಾ

ನಾನು ಕರು ಕೊಂಡೋಗುವಾಗ

ಇವಳ ವಡುಬೆ ಬಿಚ್ಚಬೇಕೂ ॥ವ॥

*॥ವ॥ ಈ ಗುರುತು ಬರುವ ಕಡೆಯಲ್ಲ ಹಿಮ್ಮೇಳದವರು ಈ ಸೊಲ್ಲು ಪೂರ ಹಾಕುತ್ತಾರೆ.

ಅಣ್ಣ ತಂಗಿ ವಡುಬೆ ಬಿಚ್ಚದೊಕೆ

ಊರಾ ದಾರಿ ತಪ್ಪೂತವನೇ

ದೊಡ್ಡ ಕಾಡೀಗೋಗುತಾನೇ

ದೊಡ್ಡ ಕಾಡೀಗೋಗುತಾನೇ ॥ವ॥

ಯಾಕೋ ನಮ್ಮಣ್ಣಾ

ಊರಾ ದಾರೀ ತಪ್ಪದಲ್ಲಾ

ಅಣ್ಣಾ ಕಾಡೀಗೆ ಬಂದ್ಯಲ್ಲೋ

ಅಣ್ಣಾ ಕಾಡೀಗೆ ಬಂದ್ಯಲ್ಲೋ ॥ವ॥

ತಂಗಿ ತವರಿಗೆ ನೀ ಬಂದು

ತಂಗೆ ತವರಿಗೆ ನೀ ಬಂದೂ

ನೀನು ಅಪಾರ ದಿನುವಾತೂ

ನಿನಗೆ ದಾರೀ ಗೊತ್ತುಲ್ಲ

ಸುಮ್ಮನೆ ಬಾರೇ ನನು ತಂಗೀ ॥ವ॥

ತಂಗೆ ವಡುಬೆ ಬಿಚ್ಚುದುಕೇ

ಅಣ ಸಂದೆ ಮಾಡುತವನೇ

ಅಲ್ಲೆ ಕಾಡ ಸುತ್ತತವೆನ ॥ವ॥

ಅಣ್ಣ ಬೆಟ್ಟ ಹತ್ತೋನು ಅಣ್ಣ ಗುಡ್ಡ ಆತ್ತುತಾನೇ

ಈಗ ಇಜೋಡು ಸಂದೆಯಾತು

ದೊಡ್ಡ ಹಲ್ಲಾ ಇಳಿತಾನೆ ॥ವ॥

ಅಣ್ಣ ವಡುಬೇ ಬಿಚ್ಚುದಕೆ

ಸಂದೆ ಮಾಡುದುಕೆ

ಅಣ್ಣ ಬೆಟ್ಟ ಹತ್ತುತಾನೇ

ಅಣ್ಣ ಗುಡ್ಡ ಹತ್ತುತಾನೇ

ಇಜೋಡು ಸಂದೆಯಾತು

ದೊಡ್ಡ ಹಳ್ಳಾಕ ಇಳಿತಾನೇ ॥ವ॥

ಯಾಕೋ ನಮ್ಮಣ್ಣಾ

ಅಣ್ಣ ದೂಳು ಸಂದೆಯಾತು

ಕಾಡಾ ಸುತ್ತುತೀಯಾ

ದೊಡ್ಡ ಹಳ್ಳಾಕೆಳೀತೀಯ ॥ವ॥

ತಂಗ ಬಾಳಾ ದಾವೂನಾಗ್ಯಾದೆ

ನನಗೆ ದಾವೂನಾಗ್ಯಾದೆ

ತಂಗೆ ನೀರು ಕುಡಿಯಬೇಕು

ಹರಿಯೋ ಹಳ್ಳಿಕೆ ಹೋಗಾನ ॥ವ॥

ದೂಳುಸಂದೆ ಹೊತ್ತನಲ್ಲಿ ಮಾದೇವನೇ ॥ವ॥

ದೂಳುಸಂದೆ ಹೊತ್ತಿನಲ್ಲಿ

ತಂಗೆ ಹಳುಕೆ ಕರ್ಕೊಂಡೋದ

ತಂಗೆ ಹಳುಕೆ ಕರ್ಕೊಂಡೋದ

ಅಲ್ಲಿ ತಂಗೆ ಮುಂದಲೆ ಹಿಡುದ

ತಂಗೆ ಬಾಯ ಬಾಯ ಬಡುಕಂಡ್ಲು

ಯಾಕಪ್ಪ ನಮ್ಮಣ್ಣಾ

ನನ್ನ ಕಾಡಿಗೆ ಕರ್ಕೊಂಡು ಬಂದು

ನನ್ನ ಕಾಡಿಗೇ ಕರ್ಕೊಂಡು ಬಂದು

ಅಣ್ಣ ನೀನು ಕೊಲೆ ಮಾಡುತೀಯಾ

ತಂಗೆ ನಿಡಿಗೋಳು ಏನಾಡುತಾಳೇ

ತಂಗೆ ದೊರೆಗೋಳು ಮಾಡುತ್ತಾಳೆ

ಅಣ್ಣ ತಂಗೆಯ ಬೂಮೀಗೆ ಕೆಡುವಿ

ಅವಳುಟ್ಟಿ ಸೀರೇ ಅರೀತಾನೇ

ಅವಳುಟ್ಟು ಸೀರೇ ಅರೀತಾನೇ

ಸೀರೆಲ್ಲಿ ತಂಗೆಯ ಕೈಕಾಲು ಕಟ್ಕೊತಾನೇ

ಬೂಮೀಗೆ ಕಟಿಕ್ಕಂಡು

ಅವಳ ಎದೆ ಮ್ಯಾಲೆ ಕುತುಗಂಡು

ಅವಳ ಎದೆ ಮ್ಯಾಲೆ ಕುತುಗಂಡು

ಅವಳ ವಡುಬೆ ಬಂಗಾರ ಬಿಚ್ಚಿ

ಅವಳ ವಡುಬೆ ಬಂಗಾರ ಬಿಚ್ಚಿ

ಅಣ್ಣ ಬಟ್ಟೆಗಂಟು ಕಟ್ಟಗಂಡು

ಗಂಟು ಬಟ್ಟೆ ಕಟ್ಟಗಂಡು

ಮುಂದೆ ಏನುದ್ಯಾನ ಮಾಡುತಾನೆ

ಇವಳ ಊರಿಗೆ ಕುಂಡೋದುಕೆ

ಇವುಳು ಊರಿಗೆ ಬಂದು ಹೇಳುತಾಳೇ

ಇವುಳು ಅತ್ತೇ ಮಾವರಿಗೇಳೀ

ನನಿಗವಮಾನ ಮಾಡುತಾಳೇ

ಇವಳ ಗಂಡಂಗೇ ಹೋಗೇಳಿ

ದಂಡುಕೆ ಗುರಿ ಮಾಡುತಾಳೇ

ಅಣ್ಣ ತಂಗೆಯ ಮಹಾಂತ ಕಾಡಿಗೆ ಕರ್ಕೊಂಡೋಗಿ ಕಾಡಿನೊಳಗೆ ಕೈ ಕಾಲು ಕಟ್ಟಿ ಕೆಡವಿ ವಡುಬೆ ಬಂಗಾರ ಬಿಚ್ಚಿಗಂಡು ಗಂಟು ಕಟಿಕೊಂಡು ಮುಂದೆ ಯೇನ್ ದ್ಯಾನ ಮಾಡುತ್ತಾನೆ. ಯೇನ್ ಜಾನ ಮಾಡುತ್ತಾನೆ .. ಇವುಳ್ನ ಊರಿಗೆ ಕರಕಂಡೋದ್ರೆ ಅಲ್ಲಿ ಬಂದ್ ಹೇಳುತ್ತಾಳೆ.. ಅತ್ತೆ ಮಾವ್ದೀರ್ಗೇಳಿ ಅವಮಾನ ಮಾಡುತ್ತಾಳೆ ಮತ್ತೆ ಗಂಡಂಗೇಳಿ ದಂಡ ಆಕುಸ್ತಾಳೆ ಇವುಳ್ನಿಲ್ಲೆ ಕೊಂದು.. ಇವುಳ್ನಿಲ್ಲೆ ಮರಣ ಮಾಡಿ ಮಣ್ಣು ಮಾಡಿ.. ಕಣಿಗೆ ಮರೆಮಾಡಿ ಹೋಗುವಾ ಅನ್ನದಾಗಿ ಮನಸ್ಸು ಮಾಡುತ್ತಾನೆ

(ಇವುಳ್ನಲ್ಲೆ ಮರಣ ಮಾಡಿ ಮಣ್ಣು ಮುಚ್ಚಿ ಕಣ್ಣಿಗೆ ಮರೆಮಾಡಿ ಹೋಗಬೇಕು

ಊರಿಗೆ ಕರ್ರೊಂಡೋದ್ರೆ ಅತ್ತೆ ಮಾವ್ದಿಗೇನೇಳಿ ಅವಮಾನ ಮಾಡುತ್ತಾಳೆ. ಗಂಡುಂಗೇಳಿ ದಂಡಗ್ಗುಡಿ ಮಾಡುತ್ತಾಳೆ.)

ಅವುಳ್ನ ಕೊಲೆ ಮಾಡುದುಕೆ.

ಅಣ್ಣ ತಂಗಿ ತಾಲೇ ಮ್ಯಾಲೆ
ತಂಗಿ ತಾಲೇ ಮ್ಯಾಲೆ
ಅಣ್ಣ ಕಲ್ಲ ಎತ್ತಕಾಕೆ
ಅಣ್ಣ ಕಲ್ಲ ಹುಡುಕುತಾನೇ ॥ವ॥
ಅಣ್ಣ ಕಲ್ಲ ಹುಡುಕ್ಯಾನೂ
ತಂಗಿ ಬಾಯ್ ಬಾಯಿ ಬಡುಕಂಡು
ಮುಡಿಯಳ್ಳ ಉಳಿಕ್ಕಂಡು
ತಂಗಿ ಹಾಡಿ ಆಳುತಾಳೇ ॥ವ॥
ಅಣ್ಣ ವಡಬೆ ಕಾಂಡೋಗಿ
ನನ್ನ ವಡೂಬೆ ಕುಂಡೋಗಿ
ನಿನ್ನ ಮಡದೀಗಿಕ್ಕಣ್ಣ
ನಾನು ಯಾರ ಕುಟ್ಟೆ ನಾನು
ನಾನು ಹೇಳೋದಿಲ್ಲುವಲ್ಲಾ
ನನ್ನ ಪ್ರಾಣ ಕೊಲ್ಲುಬ್ಯಾಕ ॥ವ॥
ನಮ್ಮಣ್ಣ ಕೊಲ್ಲುತ್ತಾನೆ
ನಮ್ಮಣ್ಣ ಕೊಲ್ಲುತ್ತಾನೇ ಮಾದೇವನೆ
ಅಣ್ಣ ಕಲ್ಲಾ ಹುಡುಕಾತಾನೇ
ಅಪ್ಪ ದೂಳು ಸಂದೆ ಆಗ್ಯಾದಲ್ಲಿ
ಶಿವನತ ದೂಳುಸಂದೆ ವತ್ತಿನಲ್ಲಿ
ಶಿವನೆ ಮಾಹಾಂತ ಕಾಡಲ್ಲಿ
ಶಿವನೆ ನರಮನುಸರ ಸುಳಿವಿಲ್ಲ
ಇಲ್ಲಿ ನರಮನುಸಾರಿಲ್ಲುವಲ್ಲ
ಯಾರಪ್ಪ ಉಳಿಸೋರೂ
ನನ್ನ ಯಾರಪ್ಪ ಉಳಿಸೋರು
ಅಣ್ಣ ಕರಿಯಾಕೆ ಬಂದಾಗ
ನನ್ನ ಕರಿಯಾಕೆ ಬಂದಾಗ

ನೀನೀನಾಗಲು ಬಾನ ಇಕ್ಕಿದ್ದೆ

ನಿನಗೆ ಹಾಲಬಾನ ಇಕ್ಕಿದ್ದೆ

ನಾನು ಇಕ್ಕಿದಂತ ಹಾಲುಬಾನಾ

ನಾನು ಇಕ್ಕಿದಂತ ಹಾಲುಬಾನಾ

ಅಣ್ಣ ನೆನುಕಂಡು ಬಿಟ್ಟು ಹೋಗೂ

ನನ್ನ ಕೊಂದು ನೀನೋಗುಬ್ಯಾಡ

ತಂಗೆ ಕಣ್ಣೀರ ಬಿಡುತಾಳೇ

ಶಿವನೆ ನಮ್ಮಣ್ಣ ಕೊಲ್ಲುತ್ತಾನೆ

ಶಿವನೆ ನಮ್ಮಣ್ಣ ಕೊಲ್ಲುತ್ತಾನೆ

ನನ್ನ ಸತ್ಯ ಎಲ್ಲಿಗೋದೋ

ನನ್ನ ಸತ್ಯ ಎಲ್ಲಿಗೋದೋ

ಶಿವುನೆ ನಾ ಮಾಡಿದ ದಾನದರ್ಮ

ಶಿವುನೆ ನಾ ಮಾಡಿದ ದಾನುದರ್ಮ

ನನಿಗೆ ಮರೆಯಾಗಿ ಕೂತಾವೆ

ನನಿಗೆ ಮರೆಯಾಗಿ ಕೂತಾವೆ

ನನ್ನ ಯಾರಪ್ಪ ಉಳಿಸೋರೂ .

ದೂಳುಸಂದೆ ವತ್ತು. ತಣ್ಣಾನೆ ವತ್ತು. ಶಿವ–ಪಾರ್ವತಿ ಸಾವುರ ಕಣ್ಣೇನ ಲಿಂಗ ಪೂಜೆ ಮಾಡಿ ನೊರೊಂದು ಲಿಂಗಾ ವರಾ ಕೊಡುತ್ತಾರೆ. ದೂಳು ಸಂದೆ ವತ್ತು ತಣ್ಣಾನೆಯ ವತ್ನಲ್ಲಿ ಶಿವ–ಪಾರ್ವತಿ ಸಾವಿರ ಕಣ್ಣೀನ ಲಿಂಗ ಪೂಜೆ ಮಾಡಿ ನೂರೊಂದ್ ಲಿಂಗ ವರಾ ಕೊಡುವಾಗ . ಆಗ ಇವುಳ ಸತ್ಯ ವೋಗಿ ಪಾರ್ವತಿ ಪಾದ ಇಡುದು ಬೇಕಿದಾಗ . ಇವುಳ ಸತ್ಯ ಧರ್ಮ ನೋಡಿ ಪಾರ್ವತಿ ಹೋಗಿ ಶಿವುನ ಬೇಡುತ್ತಾಳೆ

ಸ್ವಾಮಿ, ಸ್ವಾಮಿ ..ನನ್ನಂತ ಹೆಣ್ಣು ಜನ್ಮ  ನನ್ನ ಹೆಣ್ಣು ಜನ್ಮ ಕಣ್ಣಲ್ಲಿ ನೋಡಲಾರೆ ಉಳಿಸಿಕೊಡಿ.. ಉಳಿಸಿಕೊಡಿ ಶಿವುನೆ ಅಂತ ಶಿವುಂಗೆ ಕಯತ್ತಿ ಕಣ್ಣೀರ್ ಬುಡುತ್ತಾಳೆ ಪಾರ್ವತಿ ದೇವೀ .

ಆಗ ಶಿವನೆ, ಹೆಗಲ ಮಾಗಲ ಸಪನ ತೆಗುದು

ಶೀವ ಅಲ್ಲೀಗೆ ಬುಟ್ಟಾದು

ಸರ್ಪ ಮಾಯ್ದಲ್ಲಿ ಬಂದಾದೆ

ಕಲ್ಲಿ ಆಕೀಲ ಮನಿಗ್ಯಾದೆ ॥ವ॥

(ಇವುಲಿ ಸತ್ಯ ದರ್ಮ .ಶಿವುನೊ ಪಾರ್ವತೀವೆ ಲಿಂಗ ಪೂಜೆ ಮಾಡಿ ಲಿಂಗ ಒಂದುಗೂಡುವಾಗ ಇವುಳ ಸತ್ಯ ಹೋಗಿ ಪಾರ್ವತಿ ಪಾದ ಇಡುದು ಬೇಡ್ತು ಇವುಳ ಸತ್ಯ ದರ್ಮ ನೋಡಿ ಶಿವುನ್ನ ಬೇಡಿದ್ರು ಪಾರ್ವತಿ ದೇವಿ)

ಸ್ವಾಮಿ ನನ್ನಂತ ಹೆಣ್ಣು ಜನ್ಮ ಕಣ್ಣಲ್ಲಿ ನೋಡಲಾರೆ ಅಂತ ಕಣ್ಣೀರ ಬುಡುವಾಗ ಆಗ ಶಿವ ಇವುಲ್ಣ ಉಳಿಸಾಕೆ

ಹೊಲ ಮ್ಯಾಗಳ ಸದುಪನ ತೆಗೆದು

ಶೀವಾ ಅಲ್ಲೀಗೆ ಬುಟ್ಟಾನ

ಸರ್ಪ ಮಾಯ್ದಲ್ ಬಂದಾದೆ

ಕಲ್ಲಿ ಅಡೀಲಿ ಮನಗ್ಯಾದೆ ॥ವ॥

ಶಿವನೆ ಹೆಗಲ ಮ್ಯಾಗಳ ಸರ್ಪ ತೆಗುದು

ಶೀವ ಅಲ್ಲಿಗೇ ಬಡುತಾರೆ

ಸರ್ಪ ಮಾಯ್ದಲ್ ಬಂದಾದೆ

ಕಲ್ಲಿನ ಅಡೀಲಿ ಕುಂತಾದೆ ॥ವ॥

ತಂಗೆ ತಾಲೆ ಮ್ಯಾಲೇ

ತಂಗೆ ತಾಲೆ ಮ್ಯಾಲೇ

ಅಣ್ಣ ಕಲ್ಲ ಎತ್ತಕಾದೆ

ಅಣ್ಣ ಕಲ್ಲ ಎತಕೋದ

ಸರ್ಪ ಅಲ್ಲೆ ಮಲಗ್ಯಾದೆ

ಅಣ್ಣನ ಕಯ್ಯಾ ಕಡಿತಾದೆ ॥ವ॥

ಸರ್ಪ ಕಡೆತು, ಅಣ್ಣ ಬಾಯ್ ಬಡುಕಂದ, ತಂಗೆ ವಡುಬೆ ನೋಡಿ ಅತಿ ಆಸೆ ಮಾಡ್ದೆ ನನ್ನ ಗತಿ ಇಲ್ಲಿ ನಷ್ಟವಾಗುತ್ತದೆ. ಬಾಯ್ ಬಡ್ಕಾತ್ತಾನೆ .. ಬಾಯ್ ಬಡ್ಕಾತ್ತಾನೆ ಎದೆ ಇಡ್ಕತ್ತಾನೆ, ಓಡಿ ಬಂದು ಕೆಟ್ಟ ಕೆಟ್ಟೇ ತಂಗೀ ಅಂತ ತಂಗೆ ಕಾಲಮ್ಯಾಲಾಸಿ ಬೀಳ್ತಾನಲ್ಲೋ ದೇವಾ .

ಇಷ್ಟೊತ್ತುವರ್ಗು ತಂಗೆ, ಅಣ್ಣ ಕೊಲ್ತಾನೆ, ಅಣ್ಣ ಕೊಲ್ತಾನೆ ಸಾಯ್ತೀನಿ ಸಾಯ್ತೀನಿ ಅಂತ ನೀ ಕಣ್ಣೀರ್ ಬುಟ್ಟೆ. ಈಗ ಸರುಪ ಕಡಿದು ಸಾಯ್ತೀನಿ ಅಂತ ನಾ ಕಣ್ಣೀರ್ ಬುಡ್ತೀನಿ.

ತಂಗೆ ನಿನ್ನ ನೋವ ಶೀವಾ

ನಿನ್ನ ನೋವ ಶೀವಾ

ನನಿಗೆ ಹಂಚಿಕೊಟ್ಟ ತಂಗೆ

ಈಗ ನಾನೇ ಸಾಯ್ತೀನಿ ॥ವ॥

ನಿನ್ನ ನೋವಾ ಶೀವಾ

ನನಿಗೆ ಹಂಚಿ ಕೊಟ್ಟ ಶೀವಾ

ಈಗಾ ನಾನೇ ಸಾಯ್ತೀನಿ

ನನ್ನ ಬಾಯಿಗೆ ನೀರ್ ಬೂಡು ॥ವ॥

ಅಣ್ಣ ಕೈಕಾಲ್ ಕಟ್ಟಿದೀಯ

ನನ್ನ ಉದೂಳು ಕೆಡಿವಿದಿಯ

ಯಾಗೇ ಬಿಡೂಲಣ್ಣಾ

ಬಾಯಿಗೆ ನೀರ್ನೆಂಗೆ ಬುಡುಲಣ್ಣಾ ॥ವ॥

ಅಣ್ಣ ಕೈಕಾಲ್ ಕಟ್ಟಿದಿಯಾ

ನನ್ನ ಉರೂಳು ಕೆಡಿವಿದಿಯಾ

ಯ್ಯಾಗೇ ಬರುಲಣ್ಣ

ಬಾಯ್ಗೆ ನೀರಾ ಬುಡುಲಣ್ಣ ॥ವ॥

ತಂಗೆ ಕೈಗಿಲು ಬಿಚ್ಚುತೀನಿ

ನನ್ನ ಬಾಯಿಗೆ ನೀರ್ ಬುಡೂ

ಊರಿಗೆ ಸುದ್ದಿ ಹೇಳು ತಂಗಿ

ನನ್ನ ಕಣ್ಣಿಗೆ ಮರೆಮಾಡು

ನನ್ನ ಮಣ್ಣಿಗೆ ಮರೆ ಮಾಡು ॥ವ॥

ಆಣ್ಣಯ್ಯ, ಅಣ್ಣಯ್ಯ ಅಣ್ಣ–ತಂಗಿ ನಾವ್ ಸಂತೋಸ್ದಲ್ಲಿ ನಾವ್ ತವುರಿಗೋಗಿದ್ರೆ ಈ ಬಾಳಲ್ಲಿ ನಮಿಗೆ ಈ ಗೋಳಿರ್ರುಲ್ಲ. ಈ ಬಾಳು ಈ ಗೋಳು ಯಾರಿಂದ ಅಂದ್ರೆ ನನ್ನ ವಡುಬಿಂದ, ನನ್ನ ವಡುಬೆ ನೋಡಿ ನೀನು ಈ ಗೋಳು ಮಾಡಿದ್ದೀಯ ಈಗ ನಾನು ಸಾಯುತ್ತೀನಿ ನೀನೂ ಸಾಯುತ್ತೀಯಾ. ಜಲ್ದಿ ಕೈಕಾಲು ಬಿಚ್ಚು ಬಾಯ್ಗೆ ನೀರ್ ಬುಡ್ತೀನಿ. ಊರ್ಗೋಗಿ ಸುದ್ದಿ ಹೇಳ್ತೀನಿ. ಕೈಕಾಲು ಬಿಚ್ಚು ಅಂತ ಅಣ್ಣನ ಮುಂದ್ಕೆ ಕೈಕಾಲು ನೀಡುತ್ತಾಳೆತಂಗೆ. ಕೈಕಾಲು ಬಿಚ್ಚೋದುಕ್ಕೆ ಅಂತ ಅಣ್ಣ ತಂಗೆ ಕಾಲುಮ್ಯಾಲೆ ಕೈ ಮಡಗಿದ. ಅಸ್ಟೊತ್ತಿಗೆ ಸರುಪ ಕಡಿದ ವಿಷ ನತ್ತಿಗೇರಿ ಬಂತು. ವಿಷ ನೆತ್ತಿಗೇರಿ ಅಣ್ಣುಗೆ ಮಂಕು ಬಂದೊಯ್ತು. ತಂಗೆ ಕಾಲು ಕೈ ಬಿಟ್ಟೋದಕ್ಕೆ ಸಕ್ತಿ ಸಾಲುದಿಲ್ಲ. ತಂಗೆ ಕಾಲ್ನು ಬಿಚ್ಚಿಲ್ಲ, ಕೈಸೂ ಬಿಚ್ಚಿಲ್ಲ. ಅಂಗೆ ತಂಗೆ ಕಾಲಿಡ್ಕಂದು ಪ್ರಾಣ ಬಿಟ್ನಲ್ಲೋ ದೇವಾ .

ತಂಗೆ ವಡುಬೆ ನೋಡಿ ಅಣ್ಣ ದುರಾಸೆ ಮಾಡಿ ನಿರಾಸೆಯಾಗಿ ಹೋದ್ನಲೋ ಶಿವನೇ

ಯಾಕೋ ನಮ್ಮಣ್ಣ ಇನ್ನೂ ನನ್ನ ಕೈಕಾಲು ಬಿಟ್ಟುನಿಲ್ಲುವಲ್ಲಾ ಕೈಕಾಲು ಬಿಟ್ನುಲ್ಲ ಅಂತ ಅಣ್ಣನ ಕಡಿಕೆ ತಿರುಗಿ ನೋಡಿದ್ರೆ .. ಅಣ್ಣ ಅರುನಾಲಿಗೆ ಕಚ್ಗಂಡು ಮರಣವಾಗಿ ಬಿದ್ದವನಲ್ಲೋ ದೇವಾ ..

ಅಣ್ಣ ಸತ್ತೇ ಹೋಗಿದ್ದಿಯಲ್ಲೋ

ಸತ್ತೇ ಹೋಗಿದ್ದಿಯಲ್ಲೋ ..ಕಲ್ಯಾಣದೇವಾ ॥ವ॥

ಅಣ್ಣ ಮರಣಾವಾಗಿದಿಯಲ್ಲೋ

ನನ್ನ ತಾಯಿ ಕಳ್ಕಂಡೆನಲ್ಲೊ

ನನ್ನ ಕೈಕಾಲನ್ನಾ ಕಟ್ಟಿ

*ಈ ದಾಟಿಯ ಹಾಡಿನ ಪ್ರತಿಸಾಲಿನ ಮುಂದೆ ಈ ಸೊಲ್ಲನ್ನು ಹಿಮ್ಮೇಳದವರು ಹಾಡುತ್ತಾರೆ .

ನನ್ನ ಬೂಮೀಗೆ ಉಳ್ಳುಮಡಗಿ

ಅಣ್ಣ ಸತ್ತೇ ಹೋಗಿದ್ದಿಯಲ್ಲೊ

ನನ್ನ ಕೈಕಾಲ ಬಿಚ್ಚರಾರು

ಅಣ್ಣ ಊರಿಗೇಳುವರಾರು

ಮಹಾಂತ ಕಾಡು ಶಿವನೇ

ಇಲ್ಲೆಇ ಎನಾಂತ ಕಾಡುಶಿವನೆ

ಇಲ್ಲಿ ನರಮನುಸ್ರು ಸುಳಿವೇ ಇಲ್ಲ

ಇಲ್ಲಿ ನರಮನುಸ್ರು ಸುಳಿವೇ ಇಲ್ಲ

ನನ್ನ ಕೈಗಿಲ್ ಬಿಚ್ಚುವರಾರೋ

ಊರೀಗೆ ಹೋಗೋರಾರೊ

ಅಣ್ಣಾನ ಎದಿಯ ಮ್ಯಾಲೆ

ಕಣ್ಣೀರ ಬಿಡುವತಾಳೇ

ಆಡಿಕಂಡಳುವ ತಾಳೇ

ದೂಳ್ ಸಂದೆ ಕೈಕಾಲು ಬಿಚ್ಚಾವರಿಲ್ಲ. ಊರಿಗೋಗಿ ಯೇಳಾವ್ರಿಲ್ಲ. ಕೈಕಾಲ್ ಕಟ್ಟಿ ಉಳ್‌ಕೆಡಿವಿ ನಮ್ಮಣ್ಣ ಇಲ್ಲಿ ಕಾಡಲ್ಲಿ ಸತ್ ಬಿದ್ದಿದಾನೆ.

ನಮ್ಮ ನೋಡೋರ್ಯಾರಪ್ಪ ದೇವಾ

ನಮ್ಮ ನೋಡೋರ್ಯಾರಪ್ಪ ದೇವಾ

ನರಮನಸ್ರು ಸುಳಿವೇ ಇಲ್ಲ

ಅಣ್ಣ ಸತ್ತಂಗೆ ನೋಡೋ

ನಾನೂವೆ ಸಾಯಬೇಕು

ನಾನೂವೆ ಸಾಯಬೇಕು

ಯಂಗೆ ಸಾಯರೋ ಶಿವುನೇ

ಯಂಗೆ ಸಾಯರೋ ಶಿವುನೇ

ಯಂಗೆ ಸಾಯ್ಲಿ ಅಂದ್ರೆ ನಮ್ಮಣ್ಣ ನನ್ನ ತಲೆ ಮ್ಯಾಲೆ ಕಲ್ಲೆತ್ತಾಕಾದುದೆ ಕಲ್ಲೆತ್ತಾಕೋಗಿ ಎಲ್ಲಿ ಸರುಪ ಕಡಿತೋ

ಅಲ್ಲೀಗೆ ಉಳ್ಳಿ ಹೋಗೀ

ಅಲ್ಲೀಗೆ ಉಳ್ಳಿ ಹೋಗೀ

ಅಣ್ಣನ ಕಡಿದಾ ಸರುಪ

ನನ್ನೂವೇ ಕಡಿಯಾಲೀ

ನನ್ನೂವೇ ಕಡಿಯಾಪ್ಪ ಸ್ವಾಮಿ

ಕಲ್ಲಡಿಕೆ ಕೈಯನ್ನು ಹಾಕುತಾಳೇ

ಕಲ್ಲುಮ್ಯಾಲೆ ತಲಿಯಾನ ಚಚ್ಚುತ್ತಾಳೇ

ಅಣ್ಣದ ಕೈಯ ಕಡಿದಂಗೆ ನನ್ನೂ ಕಡಿದು ಕೊಲ್ಲಪ್ಪ. ಅಣ್ಣ–ತಂಗೀವೆ

ಬಂದೇಕಡೆ ಪ್ರಾಣ ಬುಡುತ್ತೀವಿ ಒಟ್ಟಿಗೆ ಕಣ್ಣಗೆ ಮರೆಯಾಗುತ್ತೀದಿ

ಕಡೀ ಕಡೀ ಅಂತ ಕಲ್ಲಡಿಕೆ ಕೈಯಾಕುತಾಳೆ .

ಇವುಳಾ ಸತ್ಯುಕೆ ಇವುಳಾ ಸತ್ಯುಕ್ಕೆ ಬಂದಿರೋ ಸರುಪ .

ಇವುಳಾ ಬಾಯೆತ್ತಿ ಕಡಿವಲ್ಲೂ

ಬಾಯೆತ್ತಿ ಕಡೀಯಲ್ಲೂ

ಕತ್ತೆತ್ತಿ ಜಡಿಗೋಳ ಮುಟ್ಟುವಲ್ದು

ಇವುಳು ಸರುಪಾನ ಕೈಲಿತಕಂದೂ

ಕಡಿ ಕಡಿ ಅನ್ನುತ್ತಾಳೆ

ಸರುಪಾನ ಗಿಂಟಿ ಗಿಂಟಿ ಗೆಬರುತ್ತಾಳೆ

(ಅಣ್ಣುನ ಕಡಿದಂಗೆ ನನ್ನು ಕಡಿ ಅಂತ ಕೆಯಲ್ಲಿ ಸರುಪುನ್ನ ಇಡಕಂಡು ಗಿಂಟಿ ಗಿಂಟಿ ಗೈಬರುತ್ತಾಳೆ. ಆ ಸರುಪ ಯಾವುದು ? ಆ ಸರುಪ ಯಾವ್ದು? ಪರುಮಾತ್ಮ ಬಗುವಂತ ಕಳಿಸಿರಾದು. ಇವುಳ್ನ ಎಳಿಸಾಕೆ ಬಂದಿರಾದು ಕಡಿತದ ..ಕೊಲ್ತದ)

ಬಾಯೆತ್ತಿ ಕಡೀಲಿಲ್ಲಿ ಕತ್ತೆತ್ತಿ ಸೆಡೆ ಒತ್ತುಲಿಲ್ಲ. ಅಲ್ಲಿಂದ ವಿಳ್ಳಿಬಂದು ಅಣ್ಣನ ಎದೆಮ್ಯಾಲೆ ಶಿರವೊಡ್ಡಿಕಂಡು ಅಣ್ಣುನ ಎದೆಮ್ಯಾಲೆ ತಿರುಗಾ ಶಿರವೊಡ್ಡಿಕಂಡು

ಅಣ್ಣಾ ಅಣ್ಣಾ ..ಅಣ್ಣಯ್ಯ .ನೀನು ನಾನು ಒಂದ್ ತಾಯೀ ಮಕ್ಕು ಒಟ್ಟಿಗೇ ವಿಟ್ಟಿ ಬಂದಿರೋರು ನೀನು ಬದುಕಿದ್ರೆ ಪೋತಾ ಇದ್ರೆ ಬೆನ್ ನೋಡೀವೆ, ಬತ್ತಾ ಇದ್ರೆ ಮತಾ ನೋಡೀವೆ, ಈಗ .

ನೀನು ಸತ್ತೋದ ಮ್ಯಾಲೇ

ನೀನು ಸತ್ತೋದ ಮ್ಯಾಲೇ

ನಾನ್ಯಾರನಾ ನೋಡಲಪ್ಪಾ

(ನಿನಿಗು ನನಿಗೆ ಎಸ್ಟು ಅಗಿತಾನವಿದ್ರು, ನೀನು ಬದುಕಿದ್ರೆ ..ಹೋತಾ ಇದ್ದಾಗೆ ಬೆನ್ ನೋಡಿವೆ, ಬತ್ತಾ ಇದ್ದಾಗ ಮಗ ನೋಡೀವೆ. ಈಗ ನೀನು ಸತ್ತಮ್ಯಾಲೆ)

ನಾನ್ಯಾರನ ನೋಡುಲಣ್ಣ

ನಾನ್ಯಾರನ ನೋಡುಲಣ್ಣಾ

ಅಣ್ಣಾನ ಎದೆಯ ಮ್ಯಾಲೇ

ಕಣ್ಣೀರ ಬಿಡುವತಾಳೇ ಕಣ್ಣೀರ್ ಬುಟ್ಟಾಯ್ತು, ಎಸ್ಟು ರಾತ್ರಿ, ಎಸ್ಟು ಹಗಲಾದ್ರು ನಾನು ಇಲ್ಲೆ ಕ್ವಾಡಾಡಬೇಕು. ಇಲ್ಲಿ ನರಮನುಸ್ರ ಸುಳಿವಿಲ್ಲ. ಕೈಕಾಲ್ ಕಟ್ಟಿ ಉಳಿಬಿಟ್ಟು ನಮ್ಮಣ್ಣ ಸತ್ತು ಬಿಟ್ಟಿದ್ದಾನೆ. ನರಮನಸ್ರು ಬರೋ ದಾರ್‍ಯಲ್ಲ. ಮಾ ಅಂತ ಅರಣ್ಯ ಮಾಅಂತ ಕಾಡು. ಯಾಕೆ ನಾನು ಇಲ್ಲೆ ಬಿದ್ಕಂತು ಕ್ವಾಡಾಡಿ ಕ್ವಾಡಾಡಿ ಸಾಯಬೇಕು? ಉಳ್ಳಾರ ಹೋಗಿ ಅಳ್ಳ ಬಿದ್ದು ಸತ್ತುಬಿಡಬೇಕು ಅಂತ ಅಳ್ಳಾ ಉಡಿಕ್ಯಂಡೋಗಿ.

ಕಲ್ಲು ಮುಳ್ಳಿನ ಮ್ಯಾಲೇ

ಕಲ್ಲು ಮುಳ್ಳಿನ ಮ್ಯಾಲೇ

ಬಳ್ಳಿ ಬಳ್ಳಿ ವೋಗುತಾಳೇ

ಕಲ್ಲು ಮುಳೆಲ್ಲ ನೋಡೂ

ಇವುಳ ಮೈತುಂಬ ನಾಟಿಕಂದೂ

ಮೈತುಂಬ ರಕುತಾ ಇಳಿಯಾತಾದೇ

ಮೈತುಂಬ ರಕುತಾ ಇಳಿಯಾತಾದೇ

(ಅಲ್ಯಾರ ಸತ್‌ಬುಡಾನ . ಇದು ಮಾ ಅಂತ ಕಾಉ. ನರಮನುಸ್ರ ಸುಳಿವಿಲ್ಲ. ನೋಡೋದಿಲ್ಲಿ ದಿಕಿಲ್ಲ ದೇಸಿಲ್ಲ. ಅಳಾನಾರ ಬಿದ್ದು ಸತ್ತುಬುಡಾನ. ಕಲ್ಲು ಮುಳ್ಳಿನ ಮ್ಯಾಲೆ ಉಳ್ಳಾಳಿ ಹೋಗುವಾಗ ಕಲ್ಲು ಮುಳ್ಳೆಲ್ಲಿ ಇವುಳ ಮೈತುಂ ನಾಟಿಕಂದು)

ಮೈತುಂಬ ರಕುತಾ ಇಳಿಯಾತಾದೇ

ಇಷ್ಟು ಗೋಳು ಬಾಳು ಆಗೋಯಿತಲ್ಲಾ

ಗೋಳು ಬಾಳು ಆಗೋಯಿತಲ್ಲಾ

ಇವ್ರು ಗೋಳು ಶಿವನೀಗರಿವಾಯಿತಲ್ಲಾ

ಗೋಳು ಶಿವನೀಗರವಾಯಿತಲ್ಲಾ

ಇವುಳ ಬಾಳು ಇವುಳ ಗೋಳು ಶಿವನಿಗರಿವಾತಣ. ಶಿವ ಸರುಪುಗೇನು ಗ್ಯಾನ ಕೊಡುತಾನೆ ಶಿವ . ಸರುಪ ಯೇನ್ ಗ್ಯಾನ ಮಾಡುತ್ತಾದೆ .. ಇವುಳು ಆಳ್ಳ ಬೀಳಾಕೆ ಉಳ್ಳುಳ್ಳಿ ಹೋತಾ ಅವೆ. ಶಿವ ನನ್ನ ಯಾಕೆ ಬೂಮಂಡ್ಲುಕ್ ಬುಟ್ಟೆ ಇವುಳ್ನ ಉಳಿಸಿಬುಟ್ಟೆ ಬಾ ಅಂತ ಕಳಿಸ್ಯವನೆ. ಇವುಳು ಉಳ್ಳೋಗಿ ಅಳ್ಳ ಬಿದ್ದು ಸತ್ರೆ . ನಾನೆಂಗ್ ಉಳಿಸ್ದಂಗಾತು? ಅಲ್ಲಿ ಶಿವ ಕೇಳಿದುರೆ ಯೇನೇಳಾನ?

(ಇವುಳು ಉಳ್ಳೋಗಿ ಆಳ್ಳ ಬಿದ್ದು ಸತ್ರೆ ನಾನೆಂಗ್ ಉಳಿಸ್ದಂಗಾತು? ಶಿವ ನಿಗೇನು ಉತ್ರ ಹೇಳಾನ)

ಯಾವ್ ಲೆಕ್ಕ್ದಲ್ಲಿ ಉಳಿಸ್ದಂಗಾತು ಅಂತ ಹೇಳಿ ಯೇನು ಗ್ಯಾನ ಮಾಡುತ್ತದೆ. ಇವುಳ ಸತ್ಯುಕೆ, ಇವುಳ ದರ್ಮುಕ್ಕೆ ಅಣ್ಣುನ್ನ ಉಳಿಸ್ಕಟ್ರೆ. ಮುಂದೆ ಅಣ್ಣ ತಂಗಿ ಉಳಿಸ್ಯತ್ತಾನೆ. ಅಣ್ಣುಗೆ ಸತ್ಯ ದರ್ಮ ಅನ್ನಾಯ ಮೋಸೆಲ್ಲ ಅರಿವಾಗ್ಯಾದೆ. (ಇವುಳ ಸತ್ಯಕ್ಕೆ ದರ್ಮುಕ್ಕೆ ಅಣ್ಣುನ ಉಳಿಸ್ಕೊಟ್ರೆ ಅಣ್ಣ ತಂಗೆ ಉಳಿಸ್ಯಂತಾನೆ) ಅಲ್ಲಿ ನಾ ಶಿವುಗೇಳಿಬಹುದು ..

(ಸತ್ತಣ್ಣುನ್ನಾವೆ ಇವುಳ್ಳೂವೆ ಉಳಿಸಿ ಬಂದೆ ಅಂತ)

ಇವುಳ ಸತ್ಯುಕ್ಕೆ ದರ್ಮುಕ್ಕೆ ಅಣ್ಣಾನ ಉಳಿಸುವುದಕ್ಕೇ .

ಸರುಪ ಅಣ್ಣಾನ ಬಳಿಗೀನ

ಶಿವುನೆ ಅದುವೇ ಹೋಗುತಾದೇ॥ ಶರಣು ಶರಣಮ್ಮ

ಶಿವನೆ ಶರಣು ಮಾದೇವ ॥ವ॥

ಅಣ್ಣನ ಎಲ್ಲಿ ಕಚ್ಚಿತ್ತು

ಅಣ್ಣನ ಅಲ್ಲೆ ಕಚದು ॥ಶ॥

*॥ಶ॥ ಈ ಗುರುತು ಇರುವ ಕಡೆಯಲ್ಲಿ ಹಿಮ್ಮೇಳದವರು ಈ ಸೊಲ್ಲು ಹಾಡುತ್ತಾರೆ.

ಅಣ್ಣುನ ಅಲ್ಲೆ ಕಚ್ಗಂಡು

ಅಣ್ಣುನ ಇಸುವಾ ಈರುತಾದೆ ॥ಶ॥

ಅಣ್ಣುನ ಇಸುವ ಈರುತಾದೆ

ಅಣ್ಣ ಜೀವಾ ಆಗುತಾನೆ ॥ಶ॥

ಅಣ್ಣನ ಎಲ್ಲಿಗ್ ಕಚ್ಚಿತ್ತು ಅಲ್ಲಿಗೇ ಕಚ್ಗಂಡು ಇದ ಈರ್ಕ್ಯತ್ತು ಆಗ

ಆಣ್ಣ ಜೀವಾಗುತ್ತಾನೆ.

ಅಣ್ಣ ಜೀವಾ ಆಗುತಾನೆ

ಸರುಪ ಮಾಯ್ವಾಗೋಗುತ್ತಾದೆ ॥ಶ॥

ಅಣ್ಣ ಎದ್ದೆ ಕುತ್ಗಂಡು

ತಿರುಗಿ ತಿರುಗಿ ನೋಡುತಾನೆ ॥ಶ॥

ಎದ್ ಕುತ್ಗಂಡು ತಂಗೆ ತಿರುಗಿ ನೋಡ್ತಾನೆ. ತಂಗೆ ಇನ್ನೊಂದ್ ಮೂರುಳ್ಳಿದ್ರೆ ಹಳ್ಳಿ ಬಿದ್ ಸಾಯ್ಯೋದು.. ಓಡಿ ಹೋಗಿ ತಂಗ್ಯೆ ಬಾಚಿ ತಬ್ಕ್ಯಂಡನಲ್ಲೋ ದೇವಾ

ತಂಗೆ ಬಾಚಿ ತಬ್ಕಂಡ

ತಂಗೆ ಕೈಕಾಲ್ ಬಿಚ್ಚುತಾನೆ ॥ಶ॥

ತಂಗೆ ಬಾಚಿ ತಟಿಕಂದು

ತಂಗೆ ಕೈಕಾಲ್ ಬಿಚ್ಚುತ್ತಾನೆ ॥ಶ॥

ಕೈಯ ಕಾಲ ಬಿಚುತಾನೆ

ತಂಗೀಗ್ ಕೈಯ ಮುಗಿತಾನೇ ॥ಶ॥

ತಂಗೆ ದರುಮ ಕರುಮೀಗ

ನನಗೀಗ ಆರುವಾದೊ ॥ಶ॥

ಸತ್ಯ ದರ್ಮ ಕರುಮೀಗ ಅರುವಾದೋ ತಂದೆ, ನಾವ್ ಮನಸ್ರುಗೆ ಕಾಣ್ದಂಗೆ ಕಳ್ತಾನ ಮಾಡಬಹುದು. ಬಗುವಂತ್ನು ಬೂಮಿ ತಾಯ್ಗ ಕಾಣ್ದಂಗ ಮಾಡುದಕೆ ಯಾರಿಂದು ಸಾಧ್ಯವಿಲ್ಲ. ಬಗುವಂತ ಬೂಮಿ ತಾಯಿ ನೋಡ್ತಲೆ ಇರ್ತರೆ ಮನುಸ್ರುನ್ನ ಇವರಿಗೆ ಕಾಣ್ದಂಗೆ ಕಳ್ರಾನ ಮಾಡುದುಕೆ ಆಗದಿಲ್ಲ . ನನು ಜಲುಮ ಬೂಮಿಲಡುಗವರೆಗೂ ..ಮುಂದೆ

ನಾನು ಸತ್ಯುದಲ್ಲಿರುತ್ತೀನಿ

ತಂಗೆ ನಿಟುದಲ್ಲಿರುತೀನೀ ॥ಶ॥

ನಾನು ಸತ್ಯುದಲ್ಲಿರುತೀನಿ

ತಂಗಿ ನಿಟುದಲ್ಲಿರುತೀನಿ ॥ಶ॥

ನಾನು ಮಾಡಿದು ಕರುಮಾನ

ನಿನ್ನ ಮನದಲ್ಲಿಡಬ್ಯಾಡಾ ॥ಶ॥

ತಂಗೆ ವಡುಬೆ ಕೊಳ್ಳವ್ವ

ನಡಿಯೇ ತವುರೀಗೋಗಾನ ॥ಶ॥

ತಂಗೆ ದರುಮ ಜಯವಾಗುತ್ತಾದೆ. ಕರುಮ ನರಕ ಹೊಂದುತ್ತಾದೆ. ಈಗ ನಂಗೆ ಸತ್ಯ ಧರ್ಮ ಕರುಮ ಅರುದಾಗೋದೊ ನಾವು ಮೋಸ ಮಾಡಿದ್ರೆ ದೇವ್ರರು ನಮಿಗ ಮೋಸ ಮಾಡುತ್ತಾನೆ ಮುಂದೆ ನಮ್ಮ ಜಲುಮ ಬೂಮೀ ಲಡಗಮರುಗು ಸತ್ಯುದಲ್ಲಿರುತ್ತೀನಿ. ನಿಜದಲ್ಲಿರುತ್ತೀನಿ. ನಾನು ಮಾಡಿದ ಮೋಸ ಮನದಲ್ಲಿಡುಬ್ಯಾಡ ವಡುಬೆ ಕೊಳ್ಳವ್ವ ಅಂತೇಳಿ ಕೇಳಿದಾಗ .

ಎರಡು ಕೈಯತ್ತಿ

ವಡುಬೆ ಕೊಡಾಕೆ ಹೋಗುತಾನೆ ॥ಶ॥

ವಡುಬೆ ಕೊಡುವಾಗ

ತಂಗೆ ಕಯ್ಯ ಮುಗುದಾಳೋ ॥ಶ॥

ತಂಗೀಗೆ ವಡುಬೆ ಕೊಡೋಕೋದ್ನಲ್ಲ .ಆಣ್ಣ ಕೈಮುಗಿದ್ ಬಂದು ಮಾತ್ ಬೇಡ್ಕತೀನಿ .

ಏನ್ ಬೇಡ್ತಿಯವ್ವ .

ಈಗ ನಾನು ನೀನು ಯಾರು? ಒಂದು ತಾಯಿ ಮಕ್ಳು ನೀನೇ ಅಣ್ಣ ನಾನೇ ತಂಗಿ. ನಾನು ನೀನು ದಾರೀಲಿ ಬರೋವಾಗ ನಾನು ವಡುಬೆ ಇಸ್ಕೋ ಬೇಕಾದೆ ನಿನ್ನ ಬೇರೋದು. ನಾನು ನೀನು ಒಂದು ದಾರೀಲಿ ಬರೋವಾಗ ನನ್ ತಂಗಿ ಆನೋ ಆಸೆ ಇತ್ತೊ ಇಲ್ಲಾ ನನ್ನ ವಡುಬೆ ಮ್ಯಾಲಾಸಿತ್ತೋ .ಯೇಳು ನೋಡಾನ.

(ನನ್ನ ತಂಗಿ ಅನ್ನೊ ಆಸಿತ್ತ ಇಲ್ಲಿ ನನ್ನ ವಡುಬೆ ಬಂಗಾರದ್ ಮ್ಯಾಲಾಸಿತ್ತೊ ಎರಡರಲ್ಲಿ ಒಂದೇಳು ನೋಡಾನ)

ತಂಗೇ ತಂಗೇ.. ನನ್ ತಂಗೆ ಅನ್ನೊ ಆಸಿದ್ನುಲ್ಲ. ಸತ್ಯಾನೆ ನುಡಿತಿನಿ ನನ್ ತಂಗೇ ತಂಗೇ ನನ್ ತಂಗೆ ಅನ್ನೊ ಆಸೆ ನನಿಗೆ ಉಟ್ನುಲ್ಲ ನಿನ್ನ ಮೈಮ್ಯಾಲದ್ದ ವಡುಬೆ ಮ್ಯಾಲಾಸ್ಯಾತು ಕನಮ್ಮ.

ಅಣ್ಣಯ್ಯ ಅಣ್ಣಯ್ಯ ನನ್ ತಂಗೇ ಅನ್ನೊ ಆಸಿರ್ನುಲ್ಲಿ ನನ್ನ ವಡಬೆ ಮ್ಯಾಲಾಸಿತ್ತು. ಈಗ

(ನನ್ನ ತಂಗೆ ಅನ್ನೋ ಆಸಿದ್ನುಲ್ಲಿ ನನ್ನ ವಡಬೇಮೇಲಾಸಿತ್ತು ನೋಡು)

ನಿನ್ನ ಆಸೆ ನನ್ನಣ್ಣ

ನೀರಾಸೆ ಮಾಡಲಾರೆ ॥ಶ॥

ನಿನ್ನಾಸೇ ನನ್ನಣ್ಣ

ನೀರಾಸೇ ಮಾಡಲಾರೇ ॥ಶ॥

ವಡುಬೆ ಕುಂಡೋಗಿ

ನಿನ್ನ ಮಡಿದೀಗಿಕ್ಕಣ್ಣ ॥ಶ॥

ನಿನ್ನ ಮಡಿದೀಕ್ಕಂದು

ನಿನ್ನ ಕಣ್ಣಲ್ಲಿ ನೋಡೋಗು ॥ಶ॥

ನಿನ್ನ ಆಸೆ ನನ್ನಣ್ಣ

ನಿರಾಸೆ ಮಾಡಲಾರೆ ॥ಶ॥

ಹೋಗು .ನಿನ್ನಾಸೆ ಯಾಕ್ ನಿರಾಸೆ ಮಾಡ್ಲಿ. ತಂಗೇ ಅನ್ನೋ ಅಸಿದ್ರೆ ನನ್ನ ನನ್ನ ವಡುಬೇಗ್ ಕಯ್ಯಾಂತುರ್ನುಲ್ಲ. ನನ್ನ ಮೈಮಾಲಿರೋ ವಡುಬ್ಗೆ ಆಸೆ ಪಟ್ಮೇಲೆ ನಿನ್ನಾಸೆ ನಿರಾಸೆ ಮಾಡಕಾಗಾಲಿಲ್ಲ. ಹೋಗು ತಗಂದೋಗಿ ನಿನ್ನ ಮಡಿದಿಕ್ಕು .

ನಿನ್ನ ಮಡಿದೀಕ್ಕಂದು

ನಿನ್ನ ಕಣ್ಣಲ್ಲಿ ನೋಡೋದು ॥ಶ॥

ತಂಗೆ ನಾನು ಮಾಡಿದ ಕರುಮಾನ

ನಿನ್ನ ಮ್ಯಾಲೆ ಇಡುತೀಯಾ ॥ಶ॥

ನಿನಗೆ ಕಯ್ಯ ಮುಗುದೇನು

ನಿನ್ನ ಕಾಲ ಇಡುದೇನು ॥ಶ॥

ವಡುಬೆ ಕೊಳ್ಳವ್ವ

ನಡಿಯೇ ತವುರೀಗೋಗಾನ ॥ಶ॥

ಅಣ್ಣಯ್ಯ ಅಣ್ಣಯ್ಯ ಕೈಮುಗಿತೀನಿ ಕಾಲಿಡಿತೀನಿ ಅಂತೇಳಿ ಬೇಡ್ಕಂದ್ ನಡುಬೆ ಕೊಡಕ್ ಬತ್ತೀಯ. ನಾನು ವಡುಬೆ ಕೈ ನೀಡಿ ಇಸ್ಕಳದಿಲ್ಲ. ನಿನ್ನಲ್ಲಿ ದರುಮುದ್ ರುಣ ಇದ್ರೆ. ಸತ್ಯುದ್ ರುಣ ಇದ್ರೆ ನನ್ನ ತಂಗೆ ಅನ್ನೋ ಆಸೆ ಉಟ್ಟೋದು . ನಿನ್ನಲ್ಲಿ ದರುಮುದ್ ರುಣ ಸತ್ಯುದ್ ರುಣ ಇಲ್ಲ. ನಿನ್ನ ಆತ್ಮುದಲ್ಲಿ ಕರ್ಮುದ್ ರುಣ ಐತೆ. ಕರುಮುದ್ ರುಣದಲ್ಲಿ ಬಂದು ನನ್ನ ವಡುಬೆ ಬಿಚ್ಚಿದ್ದೀಯಾ ನೀನು ಮುಟ್ಟಿದ್ ಗಳಿಗ್ಯೆಲ್ಲಿ .. ನೀನೂ ಮುಟ್ಟಿದ್ ಗಳಿಗ್ಯೆಲೀ .

ನನ್ನ ವಡುಬೆ ಬಂಗಾರ

ಅಣ್ಣ ಕರುಮುಕೊಳಗಾದೋ ॥ಶ॥

ನೀನು ಮುಟ್ಟಿದ ಗಳಿಗ್ಯೆಲ್ಲಿ

ವಡುಬೆ ಕರುಮಕ್ಕೊಳಗಾಗದೊ ॥ಶ॥

ಆ ಕರುಮುದ್ ವಡಬೇಯ

ನನ್ನ ಮೈಗೆ ಇಡೋದಿಲ್ಲ ॥ಶ॥

ನಿನ್ನ ಮಡಿದೀಕ್ಕಂದು

ನಿನ್ನ ಕಣ್ಣಲ್ಲಿ ನೋಡೋದು ॥ಶ॥

ತಂಗೆ ತಂಗೆ ನಿನ್ನತ್ತೆ ಮಾವ ನಿನ ಗಂಡ ವಡುಬೆಗೋಸ್ಕರ ಬಾಳ ಬಂದಾನ ಪಡುಸ್ತಾರೆ. ಅತ್ತೆ, ಮಾವ, ನಿನ ಗಂಡ ವಡುವ್ಗೋಸ್ಕರ ಬಾಳ ಬಂದಾನ ಪಡುಸ್ತಕೆ . ಇಲ್ಲಿ ಈ ರೀತಿ ನಿನ್ನ ಗೋಳಾಯ್ತು. ವಡುಬೆ ನಿನ್ನ ಮೈಮ್ಯಾಲಿಲ್ವೇ ವೋದ್ರೆ. ಅತ್ತೆ ಮಾವ ಗಂಡ ನಿಡಿಗೋಳು ಬರಿಗೋಳು ಮಾಡುತ್ತಾರೆ.

ಅಣ್ಣಯ್ಯ ಅಣ್ಣಯ್ಯ ಅತ್ತೆ ಮಾವ ಗಂಡುಗೆಲ್ಲ ಸುಳ್ಳೇಳುತ್ತೀನಿ

(ನೀನು ನನ್ನಣ್ಣ ನಾನು ನಿನ ತಂಗಿ ನಿನ ಮಾತ್ಗೆ ಬಗುವಂತ ಮೆಚ್ಕೋಲಿರಿಗೆ ಸುಳ್ಳೇಳುತ್ತೀನಿ ಯೇನ್ ಸುಳ್ಳೇಳ್ತೀಯಾ )

ಯೇನ್ ಯೇಳ್ತೀನಿ. ಅಣ್ಣ ನಾನು ಕಾಡ್ನಲ್ಲಿ ಬತ್ತಾ ಇದ್ದೊ. ಕಳ್ರು ಗುಂಪಾಗಿದ್ರು. ಕಳ್ರು ಗುಂಪ್ನೋಡಿ ನಮ್ಗೆ ಬೆಟ, ಬೆದ್ರ ಯದ್ರಿಕೆಯಾಯ್ತು. ಕಳ್ಳು ಗುಂಪಾಗಿ ಬಂದು ಚಾರು ಚೂರಿ ತೋರಿದ್ರು. ಆಗ ನಮ್ಮ ಜಿವ ಬುಟ್ಟು ವಡುಬೆ ಕುಂಡೊಗಿ ಅಂತ ಕಳ್ಳನ್ನ ಬೇಡ್ಕ್ಯಂದೂ ಕಳ್ಳು ಮೈಮಾಲಿನ್ ಏಡುಟೇನಲ್ಲ ವಸುಲ್ಕೆ ಮಾಡ್ಕ್ಯಂದೋದ್ರು ಅಂತಾ ಅತ್ತೆ, ಮಾವ ಗಂಡ್ಗೆ ಯೇಳ್ತಿನಿ.

ಅಣ್ಣ ಮುಚ್ಚು ಮರೇಯಾ

ನಿನ್ನ ಮಡಿದಿಕ್ಕೋಗೂ ॥ಶ॥

ನಿನ್ನ ಮಡದೀಕ್ಕಂಡು

ನಿನ್ನ ಕಣ್ಣಲ್ಲಿ ನೋಡೋನು ॥ಶ॥

ನನಿಗೆ ವಡುಬೆ ಬೇಡಣ್ಣಾ

ನಿನ್ನ ಮಡದೀಕ್ಕೋಗೂ ॥ಶ॥

ನಿನ್ನಾಣೆ ನನ್ನಾಣೇ

ವಡುಬೆ ಮುಟ್ಟಾದಿಲುವಲ್ಲಾ ॥ಶ॥

ನನ್ನ ಪತಿದೇವರಾಣೆ, ನನ್ನ ಮಾಂಗಲ್ಯದಾಣೆ, ನನ್ನ ಹೆತ್ತಾಯಿ ಆಣೆ, ನಿನ್ನ ಪಾದುದಾಣೆ, ನನ್ನತ್ತೆ ಮಾವ್ದಿರಾಣೆ, ತಾಯಿ–ತಂದೆ ಆಣೆ ಮಟ್ಟದಿಲ್ಲ.

ಆಣೆಯಿಟ್ಟಂಡು ವಡುಬೆ ಮುಟ್ಟಲ್ಲ

ನನ್ ತಂಗೆ ಸಂಕ್ಟ ನೋಡು. ನಾನು ಮಾಡಿದ್ ಕರುಮಾ ನೋಡಪ್ಪ ಶಿವುನೆ. ಎಲ್ಲಿ ತೀರಿಸ್ಲಿ ಶಿವುನೆ ಅಂತ ವಡುಬೆನಲ್ಲಿ ಗಂಟ್ಕಟ್ಕಂಡು, ತಂಗೆ ಕರ್ಕಂಡು ತವುರೀಗೋಗ್ತನಲ್ಲ ದೇವಾ ..

(ಎಲ್ಲಾದ್ರು ಕಳ್ಳು ಮ್ಯಾಲೊರೆ, ಕಳ್ಳು ಚಾಕು, ಚೂರಿ ..ಆ ಆದೀಲಿ ಬತ್ತಿದ್ದಾಗ ಅರಣ್ಯದಲ್ಲಿ ಗುಂಪಾಗಿ ಬಂದ್ರು ಜೀವಾ ಉಳಿಸ್ರಪ್ಪ ಅಂತ ಬೇಡ್ದೊ .ವಡುಬೆನೆಲ್ಲ ದೋಚ್ಕೊಂಡೋದ್ರು..)

ತಾಯಿ ತಂದೆ ಯೇಳ್ತಾರೆ

ಮಗಳ ವಡುಬೆ ಬಂಗಾರ ವಾದ್ರೋಗ್ಲಿ, ಹಿವಾ ಉಳಿಸ್ಕಂದು ಬಂದ್ರಲ್ಲಾ . ವಡುಬೆ ಬಂಗಾರವಾದ್ರು ವೋಗ್ಲಿ ಜಿವಾ ಬಂದ್ ಉಳಿಸ್ಕ್ಯಂದು ಬಂದ್ರಲ್ಲಾ . ನೀವೇ ಬಂಗಾರಾ . ಸಾಂತಿಯಾಗು ಮಗಳೆ, ಸಾಂತಿಯಾಗು. ಕೆನ್ನೇ

ಮ್ಯಾಗುಳ್ ಕಣ್ಣೀರ್ ಸೀಟ್ಲೊ  ಸಾಂತಿ ಮಾಡುತ್ತಾರೆ. ಅಣ್ಣನ್ ಬೀದೀಗ್ ದೂಡೋದಿಲ್ಲ ಕಳ್ರು ಮ್ಯಾಲೆ ಆಕ್ತಾಳಲ್ಲೋ ದೇವಾ ..

(ದೀವಿಳ್ಗೆ ಹಬ್ಬ ಕಳೆದು ಮೂರ್ ದಿನ ತುಂಬ್ತು)

ದೀವಿಳ್ಗೆ ಹಬ್ಬ ಕಳುದ್ ಮೂರ್ ದಿನ ತಂಬಿದ್ ಮ್ಯಲೆ  ..ತಾಯಿ–ತಂದೆ ಪಾದಕ್ ಶರಣು ಮಾಡಿ

ತಾಯಿ ತಂದೆಗಳಿರಾ . ಅತ್ತೆ ಮಾವ್ದೀರ್ ಆಗ್ಗೆ ಮಾಡಿ ಕಳ್ಸಿದ್ದಾರೆ. ಅತ್ತೆ ಮಾವ್ದೀರ್ ಯೇನಂತ ಅಗ್ನೆ ಮಾಡಿದ್ದಾರೇ ..

ತವ್ರು ಒಳ್ಳೇದು ಅಂತ ಹೆಣ್ಣು ಮಕ್ಳು ಅಪಾರ ದಿನ ತವುರಲ್ಲೆ ಇರಬಾರ್ದು .. ದೀವಿಳ್ಗೆ ಹಬ್ಬ ಕಳುದ್ ಮೂರ್ ದಿನುಕ್ಕೆ ಹಿಂತಿರುಗಿ ಬಾಮ್ಮ ಅಂತ ಅತ್ತೆ–ಮಾವ್ದೀರ್ ಯೇಳ್ ಕಳ್ಸಿದ್ದಾರೆ.

ನನ್ನ ಕಳೀಸಿ ಕೊಡಿರವ್ವ<br>
ನಾನು ಹೋಗೀ ಬರುತೀನಿ ॥ಶ॥<br>
ನನ್ನ ಕಳೀಸಿ ಕೊಡಿರವ್ವ<br>
ನಾನು ಹೋಗೀ ಬರುತೀನಿ ॥ಶ॥

ಇನ್ನು ಮೂರ್ ದಿನೀರು ಮಗಳೇ .ಇನ್ ಮೂರ್ ದಿನಿರು. ಅತ್ತೆ ಮಾವ ದೀವಿಳ್ಗೆ ಹಬ್ಬ ಕಳೆದು ಮೂರ್ ದಿನುಕೆ ಬಾ ಅಂತ ಯೇಳಿದಾರೆ.

ಅವರ ಮಾತಾ ಮೀರೀಗ<br>
ನಾನು ಇರುವಾದಿಲವಲ್ಲೋ ॥ಶ॥<br>
ನಾನು ಹೋಗೇ ತೀರುಬೇಕು<br>
ನನ್ನ ಕಳಿಸೀ ಕೊಡಿರಮ್ಮ ॥ಶ॥

ಮಗನ್ನ ಕರೆದು  ..ಮಗನೇ  ..

ತಂಗೆ ಹೋಗುತಾಳೆ<br>
ಹೋಗಿ ಕಳಿಸೀ ಬಾವೋಗೊ ॥ಶ॥<br>
ತಂಗೆ ಹೋಗುತಾಳೆ<br>
ಹೋಗಿ ಕಳಿಸಿ ಬಾವೋಗೊ ॥ಶ॥

ಕಳ್ಸಾಕೋಗುವಾಗ ಅಣ್ಣ ಯೇನ್ ಚಿಂತೆ ಮಾಡುತ್ತಾನೆ.  ನಾನಿಸ್ಟುಗಾಳು ಇಸ್ಟುಗೋಳು ಮಾಡಿದ್ರು ಅನ್ನ ಆಸೆ ಇವುಗಳಿಗೆ ಇದ್ದೇ ಇದೆ.

(ನಾನೆಸ್ಟು ಗಾಳು–ಗೋಳು ಮಾಡಿದ್ರುವೆ, ನಾನೆಸ್ಟು ಕರುಮಾ ಮಾಡಿದ್ರುವ. ಅಣ್ಣಾ ಅನ್ನ ಆಸೆ ಇವುಳಿಗೋಗ್ನುಲ್ಲುವಲ್ಲ)

ನಾನಿವಳ್ಳ ಕಳಿಸಾಕೆ ಇವಳಚ್ಚೆ, ಬಾಗುಲಿಗ್ ವೋದ್ರೆ  ನನಿಗಾಲು ಬಾನ ಇಕ್ಕುತಾಳೆ. ನಾನು ಮಾಡಿರೋ ಕರ್ಮುಕ್ಕೆ ಯಂಗ್ ಇವುಳಿಕ್ಕಿದಾಲು ಬಾನ ಉಣ್ಣರೋ ಶಿವನೇ .

ನಡುದಾರಿಲೋಗುವಾಗಾ ..ಮಾದೇವನೆ

ನಡುದಾರಿಲೋಗುವಾಗಾ

ತಂಗಿಗ್ ಕೈಯತ್ತಿ ಮುಗಿತಾಳೇ

ತಂಗಿ ನಿನ್ನ ಬಾಗುಲೀಗೆ ಬರುತೀನಿ

ನಿನ್ನ ಮನೆಗೆ ನಾ ಬರುತೀನಿ

ನನ್ನ ಅಣ್ಣ ಅಣ್ಣ ಯೆಂದು

ನನಿಗೆ ಹಾಲು ಬಾನ ಇಕ್ಕುತೀಯ

ನಾನು ಮಾಡಿದು ಕರುಮಾಕೆ

ನಿನ್ನ ಅಟ್ಟೀಗೆ ಬರುಲಾರೇ

ನಿನ್ನ ಮಾನೀಗೆ ಬರುಲಾರೇ

ನಿನ್ನ ಮನಿಯಾ ಬಳಗೀಗಾ

ನಾನು ಹಾಲು ಬಾನ ಉಣ್ಣಲಾರೇ

ಯವ್ವ ಕೈಯೆತ್ತಿ ಮುಗಿತಾನೆ

ಯವ್ವ ನಿಡಿಗೋಳ ಮಾಡುತಾನೇ

ಅಣ್ಣ ಈ ಗಾಳು ಗೋಳ್ನಲ್ಲಿ ಈ ದುಕ್ಕ ಸಂಕುಟದಲ್ಲಿ ನನ್ ಮನಿಗೆ ಬರ್ ಬ್ಯಾಡಾ. ನಿರಾಳ ಸಂತೋಸಿತ್ತ ಐಬೋಗದಲ್ಲಿ ಬಾ. ಬಟ್ಟಿ ಕುಕ್ಕಿ, ನೀರುಯ್ದು ಹಾಲಬಾನ ಹಂಚಿಕ್ಕಿ ಕಳುತ್ತೀನಿ. ಸಂತೋಷಿದ್ರೆ ಬಾ.

ಆಗ ..

(ನಿನ್ನಟಿವರ್ಗು ಬತ್ತಿನಿ. ನಾನಿಂದ್ ಮಾಡಿದ್ದ ನಿನ್ನ ಮನಸ್ನಲ್ಲಿಟ್ಗಂಡಿಲ್ಲ. ಅಣ್ಣ ಅಣ್ಣ ಆಸಿಗೆ ಆಲುಬಾನ ಇಕ್ತಿಯಲ್ಲ ..ನಾನು ಮಾಡಿದ ಕರುಮುಕೆ ನಾನು ನಿನ್ ಮನೆಏಲಿ ಆಲು ಬಾನ ಉಣ್ಣಬಾರ್ದು ನಾನು ನಿನ ಮನಿಗೆ ಬರಾಕುಲ್ಲ. ಈಗ ನಿನ್ನತ್ತೆ ಮಾವ ಗಂಡ ವಡುಬೆಲ್ಲ ಅಂತ ಕೇಳಿದ್ರೆ ಅವುದ್ಗೇನೇಳ್ತೀಯ. ನನ್ನತ್ತೆ ಮಾವ ಗಂಡ ನಿನಿಗೆ ನಿರಗೋಳು ಕೂಡುತ್ತಾರೆ.

ಅಣ್ಣಯ್ಯ ಅಣ್ಣಯ್ಯ ..

(ಈಗ ನೀನು ಇಂದ್ಕೋಗೋಡು ಚಂದ, ನಾನಿತ್ಲಾಗೋಗೋದ್ ಚಂದ. ಯಾಕೆ ಚಂದ ಅಂದ್ರೆ ಈಗ ನಾನು ಈ ವಡುಬೇಗೋಸ್ಕರ ನಾನು ಅಲ್ಲಿ ಸುಳ್ಳೇಳ್ತೀನಿ. ಯೇನೇಳ್ತೀನಿ ಅಂದ್ರೆ ಈಗ ಅಣ್ಣ ಕಳ್ನಾಕೆ ಅಂತ ಬತ್ತಾ ಇದ್ದ. ಕಳ್ಳು ಗಂಪಾಗಿ ಬಂದ್ರು ಚಾಕು ಚೂರಿ ತೋರಿ ನುಗ್ಗಿ ಬಂದ್ರು. ನಾನು ವಡುಬೆಯಲ್ಲ ಬಿಚ್ಚಿ ಅಣ್ಣನ್ ಕೈಲಿ ಕೊಟ್ಟು ನೀನೋಡು ಅಣ್ಣ ಅತ್ಲಾಗಿ ಅಂತ ಯೇಳಿ ನಾನಿತ್ಲಾಗಿ ಬಮದೆ. ಅವುನ್ ನೂಯ್ತಾಗ್ ಅತ್ಲಾಗೋದ. ನಾನಿತ್ಲಾಗಿ ಬಂದೆ ಅಂತ ಯೇಳ್ತೀನಿ. ಅಲ್ಲಿ ನೀನಲ್ಲೋಗಿ ಏನಂತ ವಾಲೆ ಬರಿ ಅಂದ್ರೆ. ಕಳ್ರು ಕೈಲಿ ಸಿಕ್ಕಾಕ್ಯಂದೆ. ವಡುಬೆನೆಲ್ಲಿ ಕಳ್ರು ವೊಡ್ಕವೋದ್ರು ಅಂತ ವಾಲೆ ಬರಿ ಅಂದ್ರೆ .. ಕಳ್ರು ಕೈಲಿ ಸಿಕ್ಕಂಡು ವಡುಬೆನೆಲ್ಲಾ ಕಳ್ಕೂತ್ಕವೋದ್ರು ಅಂತ

ಬರಿ. ಕಳ್ರು ಮ್ಯಾಲೊರೆ ಬಿತ್ತು). ಆಗೇನು ಜಾನ ಮಾಡುತ್ತಾನೆ. ಕಳ್ರು ಕೈಲಿ ಸಿಕ್ಕಿ ವಡುಬೆನೆಲ್ಲ ಮಡಗಿದ್ದಿನಿ ಬಾವ .ಬಂದು ವಡುಬೆನೆಲ್ಲ ಕಂಡೋಗು ಅಂತ ಬರುದ್ರೆ .ಆಗ ಬಂದು ಬಾವ ಕುಂಡೋಗುತ್ತಾನೆ.

ಇವುಳ್ಮುಟ್ಟಲ್ಲ .. ಇವುಳಂತು ಮುಟ್ಟಲ್ಲ ಆಣೆ ಪರಮಾಣ ಮಾಡವ್ಳೆ. ಈಗ ಈ ವಡುಬೆನೆಲ್ಲ ಅಣ್ಣಗ್ ಬಿಚ್ಚಿ ಕೊಟ್ಟೆ ಅಂತ ಅತ್ತೆ ಮಾವ್ಗೇಗಳುತ್ತಾಳೆ, ಗಂಡ್ಗೇಳುತ್ತಾಳೆ. ಅಣ್ಣ ನೀನು ಮರೆಯಾಗಿ ಓಡೋಗು ಅಂತ ಯೇಳಿ ಇತ್ಲಾಗ್ ಬಂದೆ ಅಂತ ಯೇಳುತ್ತಾಳೆ. ಈಗ ಇದು ಒಳ್ಳೆದೆಯ ಈಗ . ಬಾಬ್ಗೆ ಕಳ್ರು ಕೈಯ್ಗೆ ಸಿಕ್ನಲ್ಲ . ವಡುಬೆನೆಲ್ಲ ಗಂಟ್ಕಟ್ಕಿ ಇಟ್ಟಿದ್ದೀನಿ . ಅಂತ ವಾಲೆ ಬರುದ್ರೆ ..ಬಾವ್ ಬಂದ್ ಕುಂಡೋಯ್ತತೆ ಅಂತ)

ಇವುನ ಮನಸ್ಗೆ ತಿಳ್ಳಿಂಡು ವೋಗಿ ಬಾರಪ್ಪ ಅಂತೇಳಣ್ಣ ಹಿಂತಿರುತ್ತಾನೆ

ಗಂಡನ ಮನಿಗೋಗಿ,,,,,ಮಾದೇವನೆ

ಗಂಡನ ಮನಿಗೋಗಿ ಮಾದೇವನೆ

ಅತ್ತೆ ಮಾವ್ದೀರ್ಗೋಗಿ

ಶಿವುನೆ ಕಣ್ಣೀರ್ ಬುಡುತ್ತಾಳೆ

ಅವ್ವ ನಿಡಿಗೋಳ ಮಾಡುತ್ತಾಳೆ.

ಯಾರವ್ವ ಆಳ್ತಾ ಬಂದ್ಯಲ್ಲ . ನಿನ್ ಕಳಿಸಾರ್ ಯಾರೂ ಬರುನಿಲುವೆ? ಕಳುಸಾರ್ ಬಂದಿದ್ರು. ಅಣ್ಣ ಬಂದ ಕಳಿಸಾಕೆ . ಕಳ್ರು ಕಾಡಲ್ಲಿ ಚಾಕು ಚೂರಿ ಇಡದು ಅಡ್ಡ ಬಂದ್ರು .. ಅಡ್ಡ ಬತ್ತಾಯಿದ್ರು. ಅಷ್ಟೊತ್ತಿಗೆ ವಡುಬೆನೆಲ್ಲ ಬಿಚ್ಚಿಟ್ಟು ಅಣ್ಣನ್ ಕಯೀಸ್ ಕೊಟ್ಟು .ಅಣ್ಣ ಮರಿಯಾಗೋಡು ಅಂದೆ. ಅಣ್ಣ ಮರೆಯಾಗತ್ಲಾಗೋಡೋದ .ನಾನಿತ್ಲಾಗ್ ಬಂದೆ.

ಅಣ್ಣ ಸತ್ತಾನೊ ಬದುಕ್ಯಾನೋ

ನನಿಗೆ ಒಂದೂವೆ ಗೊತ್ತುಲ್ಲ.

(ಯಾತ್ಕೆ? ಅಣ್ಣುನ ಮ್ಯಾಲೆ ಬರೆ ಬೀಳ್ಬಾರ್ದು, ವಡುಬೆನೆಲ್ಲ ಬಿಚ್ಚುಟ್ಟು ಅಣ್ಣನ್ ಕೈಯೀಗ್ ಕೊಟ್ಟೆ ಅಣ್ಣನ್ ಓಡಿಸ್ಕಂದ್ ಕಳ್ರು ಅತ್ಲಾಗ್ ಜಡಿವಾದ್ರು. ನಾನಿತ್ಲಾಗ್ ಬಂದೆ. ಈಗ ನಮ್ಮಣ್ಣ ಯೇನಂತ ವಾಲೆ ಬರಿತಾನಂತ ಯೇಚ್ನೆ ಮಾಡ್ತಾಳೆ ಅಂದ್ರೆ. ಕಳ್ರು ಕೈಲಿ ಸಿಕ್ಕಿ ವಡುಬೆನೆಲ್ಲ ಕಿತ್ಕಂಡ್ರು ಅಂತ ಬಂತಾನೆ. ಈಗ ಅಣ್ಣನ್ ಮ್ಯಾಲೆ ವೊರೆ ಬೀಳ್ತದ? ಅನ್ನ ದುಡ ಇವುಳಲ್ಲಿ ಇವುನ್ ದುಡ .ಕಳ್ರು ಕೈಲಿ ಸಿಕ್ಕದೆ ವಡುಬೆನೆಲ್ಲ ತಂದು ಮಲ್ಲಿಟ್ಟೀದ್ದೀನಿ ಬಂದು ಕುಂಡೋಗು ಬಾವ ಅಂತ ಬರುದ್ರೆ ಬಾವ ಬಂದು ಕುಂಡೋಯ್ತನೆ .. ಅನ್ನದಾಗಿ ಇವ್ನು ದುಡ)

ಸೊಸಿಯೆ, ಸೊಸಿಯೆ .. ವಡುಬೆ ಬಂಗಾರ ವಾದ್ರು ವೋಗ್ಲಿ .ನಿನ್ ಜಿವ ಬಂದುಳಿತಲ್ಲ . ಸಾಕು. ಚಿಂತೆ ಮಾಡ್ಬೇಡ . ಅಂತ ಸಾಂತಿ ಮಾಡಿದ್ರು. ಇಲ್ಲಿಂದ ಅಣ್ಣ ಯೇನಂತ ವಾಲೆ ಬರಿತಾನಂದ್ರೆ ..

ಬಾವಾ .ಬಾವಯ್ಯ .ಬಾವಯ್ಯ ಕಳ್ರು ಬಂದಾಗ ಕಳ್ರು ಗುಂಪ್ ನೋಡಿ ನನ್ ತಂಗೆ ವಡುಬೆನೆಲ್ಲ ಬಿಚ್ಚಿ ನನ್ ಕಯೀಸ್ ಕೊಟ್ಟು ಓಡೋಗು ಅಣ್ಣಯ್ಯ ಅಂದ್ಲು . ನಾನು ಕಳ್ರು ಕೆಯ್ಯೀಗ್ ಸಿಕ್ದೆ ಮರಿಯಾಗ್ ಓಡಿಬಂದೆ ..

ಕಳ್ರು ಕಯೀಗ್ ಸಿಕ್ನಲ್ಲ. ವಡುಬೇನೆಲ್ಲ ಮನೀಗೆ ತಂದಿಟ್ಟಿದೀನೀ .

ಬಾವ ಬಂದು ನೀವೀಗ

ಬಾವ ವಡುಬೆ ಕುಂಡೋಗೋ ॥ ಶರಣು ಶರಣವ್ವ

ಶಿವನೆ ಶರಣು ಮಾದೇವ.

ಬಂದು ನನು ಬಾವಾ

ನೀನು ವಡುಬೆ ಕುಂಡೋಗೋ ॥ಶ॥

ತಂಗಿ ಗಂಡೂಗೆ

ಶಿವನೆ ವಾಲೆ ಬರುದಾನೇ ॥ಶ॥

ಮಲ್ಲಿ ಕಟ್ಟಿಟ್ಟಿದೀನಿ ವಡುಬೇಯ ತಂದು, ಕಳ್ರು ಕೈಗೆ ಸಿಕ್ದೇಯ .ಬಂದ್ ಕುಂಡೋಗು ಅಂತ ವಾಲೆ ಬರುದ್ನಲ್ಲ .. ಆ ವಾಲೆ ಬಂದ್ ಬಾವೂಗ್ ಸೇರ್ತು. ಅವನೇನಂತ ಚಿಂತೆ ಮಾಡ್ತಾನೆ.

(ಅಲ್ಲ ಇವುಳು ಮೈಮೇಲೆ ವಡುಬಿದ್ರೆ ಕಳ್ರು ಬುಡಾರ? ಸುಲಿಗೆ ಮಾಡಿಕ್ಯಂಡೋಗೋರು. ಕಳ್ರು ಬಂದಾಗ ನನ್ನ ಮಡಿದಿ ವಡಬೇಯ ಅಣ್ಣುಗ್ ಕಯೆತ್ತಿ ಕೊಟ್ಟಿವ್ಳೆ. ಕಳ್ರಿಗೆ ಸೇರಬೇಕಾದೊಡಬೆ ಅವಳಣ್ಣುಗ್ ಸೇರವೆ)

ಕಯತ್ತಿ ಕೊಟ್ಮೇಲೆ ಮಡಿದಿ ಒಂದ್ಮಾತೇಳುತ್ತೀನಿ ಕೇಳು ಸರೆಗಾರ್ತಿಯಾಗಿ ಬಂದು ತಿಳುವಳಿಕೆ ಯೇಳುತ್ತೀನಿ ಕೇಳು.

ಯೇನ್ ಸ್ವಾಮಿ ..

ಯೇನಿಲ್ಲ ನಿನ್ ಮೈಮ್ಯಾಲೆ ವಡುಬಿದ್ರೆ ಕಳ್ರು ಸುಲಿಗೆ ಮಾಡ್ಕ್ಯಂಡೋಗರಲ್ಲ ಕಳ್ರಿಗೆ ಸೇರೋ ವಡುಬೆನ ನಿನ್ನ ಅಣ್ಣುಗೆ ನೀನ್ ಕಯೆತ್ತಿ ಕೊಟ್ಮೇಲೆ ದಯಮಾಡಿ.

ವಡುಬೆ ಆಸೇಯಾ

ನೀನು ಮಾಡುಬೇಡಾ ಮಡಿದೆ ॥ಶ॥

ವಡುಬೆ ಆಸೇಯಾ

ನೀನು ಮಾಡುಬೇಕಾ ಮಡಿದೆ ॥ಶ॥

ನೀನು ಕಯೆತ್ತಿ ಕೊಟ್ಟ ಮೇಲೆ

ನಿನ್ನ ಅಣ್ಣನ ಪಾಲಾಗಲಿ ॥ಶ॥

ಇವ್ನು ವಾಲೆ ಬರಿತಾನೆ ಬಾವ ಕಳ್ರಿಗೆ ಸೇರೋ ವಡಬೇಯ ನಿನ್ನ ತಂಗೇಯ ನಿನಗೆ ಕಯೆತ್ತಿ ಕೊಟ್ಮೇಲೆ ಅವು ನಿನಗೇ ವರ್ತು ನಮಿಗಲ್ಲ. ಯತ್ಲಾಗೋ ಹೋಗೊ ವಡುಬೆ ನಿನಿಗೆ ಸೇರ್ತು. ದಾನ ಮಾಡಿದಂಗಾತು. ಆ ವಡುಬೆ ಬ್ಯಾಡಾ ನನ್ನ ಹೆಡ್ತಿ ನನಿಗೆ ಸಾಕು. (ಇವುಳಲ್ಲೇನಿತ್ತು? ಆ ಕರುಮುದ ವಡಬೆ ನನಿಗೆ ಬ್ಯಾಡಾ ಗಂಡನಲ್ಲೇನ್ ಬತ್ತು? ಕಳ್ರಿಗೆ ಸೇರೋ ವಡುಬೆ ಅವಳಣ್ಣುಗ್ ಸೇರೋ)

ನಿನ್ ಮಡದೀಕ್ಯಂಡು ನೀನು ಕಣ್ಣಲ್ಲಿ ನೋಡು ಅಂತ ಬರ್ದ . ಇಲ್ಲಿ ಗಂಡುನು ಮನೇನು ಉಳಿಸಿದ್ಲು. ತವುರು ಮನೆ ಗಂಡುನ್ ಮನೇಗೆ ಜಗಳ ಬರದಂಗೆ ಅಣ್ಣ ಮಾಡಿದ ಕರುಮನೆಲ್ಲ ಮುಚ್ಗಂಡು ಎಲ್ಲಾ ಕಡಿಕು ಸತ್ಯವಂತೆಯಂಗೆ ಸರಣೆಯಿಂಗೆ ಬಾಳ್ಕ್ಯಂದೋಗುತ್ತಾಳಲ್ಲೋ ದೇವಾ ಇಲ್ಲಿಗೆ ಸರಿಯಾಯ್ತೊ ಶಿವನೇ ..

# ಪಿರಿಯಪಟ್ಟಣದ ಕತೆ

ಕೊಡುಗಿನ ಮಲೆಯಾಳದು ರಾಜ್ಯಕ್ಕೇ

ಕೊಡುಗಿನ ಮಲೆಯಾಳು ರಾಜ್ಯಕ್ಕೇ

ಗಡಿಯಾವುದು ಎಂತ್ರ ಬೆಡಗಿನೊಂದು ಪಿರಿಯಾಪಟ್ಟಣ॥ ತಂದೆನಾನು ತಂದನ್ನ ತಾನೇನಾ

ತನು ತಂದನ್ನೇ .

ತಂದೆನಾನು ತಂದನ್ನ ತಾನಾನಾ॥

ಕೊಡಗಿನಾ ಮಲೆಯಾಳು ರಾಜ್ಯಕ್ಕೇ

ಗಡಿಯಾವುದೆಂದ್ರೇ ಬೆಡಗಿನೊಂದು ಪಿರಿಯಾಪಟ್ಟಣ ॥ತಾ॥

ಬೆಡಗಿನ ಒಂದು ಪಿರಿಯಾ ಪಟ್ಟಣಾ .

ಆ ಪಟ್ಟುನಾದಲ್ಲಿ ಸರಿಯೇ ಸರಿಯೇ ದೊರೆಗೋಳಿರುತಾರೋ ॥ತಾ॥

ಚಿಕ್ಕಪ್ಪ ಒಡಿಯಾ ದಂಡೀಗೆ ಹೊರಟಾನೊ

ಪಟ್ಟುಣುದೊಳಗೆ ದೊಡ್ಡಪ್ಪ ಒಡೆಯ ಆಳುತವನಲ್ಲ ॥ತಾ॥

ಗೋಬೆ ಅರಸು ಗುತ್ತೀಯ ಅರಸಲ್ಲಾ

ಈ ಪಟ್ಟಣದಲ್ಲಿ ನಂಜಅಗೂಡು ನಂಜುಂಡ ಅರಸಲ್ಲಾ ॥ತಾ॥

ಕೊಡಗಿನೇ ದೊರಿಗೋಳು ದಮ್ಮಯ್ಯ

ಈ ಪಟ್ಟುಣದಲ್ಲಿ ವೀರಾಜು ದೊರಿಗಳಿರುವಾರೂ ॥ತ॥

ಕೊಡಗಿನೇ ದೊರಿಗೋಳು ದಮ್ಮಯ್ಯ

ಈ ಪಟ್ಟುಣದಲ್ಲಿ ವೀರಾಜು ದೊರಿಗಳಿರುವಾರೂ ॥ತ॥

ಕೊಡಗಿನ ದೊರೆಗೋಳು ವೀರಾಜ ದೊರೆಗೋಳು ಪಿರಿಯಾಪಟ್ಟಣದಲ್ಲಿ. ಕೊಡಗಿನ ಜಿಲ್ಲೆಗೆ ದೊರೆಗಳಾಗಿ ಕುಂತಿದ್ದಾರೆ ಈರಾಜು ದೊರೆ. ಈರಾಜರ ಆಳಿಕೆಲ್ಲ ಈರಾಜರ ಆಳಿಕೆಲ್ಲಿ ಕೊಡಗಿಗೆ ದೊರೆಗೋಳು ಈರಾಜರು.

ಮಾತಿಗೊಂದು ಮಡಿಕೇರಿ ಕಟ್ಟಿಸಿದುರು

ಈರಾಜ ದೋರೆ . ಚಂದುಕಂ ಕಟ್ಟದ್ರು ಚನ್ನಯ್ಯ ಕೋಟೇಯ ॥ತ॥

ಮಾತಿಗೊಂದು ಮಡಿಕೇರಿ ಕಟ್ಟಿಸೀದಾ

ಈರಾಜ ದೋರೆ .ಚಂದುಕ ಕಟ್ಟದ ಚನ್ನಯ್ಯ ಕೋಟೇಯಾ ॥ತ॥

ಅವುನು ಈರಾಜ ಅನ್ನೋ ಹೆಸರೀಗೆ ನೋಡಯ್ಯ

ಈರಾಜ ಅನ್ನೋ ಹೆಸರೀಗೆ ನೋಡಯ್ಯ

ಕೊಡಗೀನಲ್ಲಿ ವೀರಾಜಪೇಟೆ ಕಟ್ಟಿಸೀರ ನೋಡಯ್ಯ ॥ತ॥

ವೀರಾಜ ಅನ್ನ ಹೆಸರೀಗೆ ನೋಡಯ್ಯ

ಕೊಡಗೀನ ಬಳುವೆ ವೀರಾಜಪೇಟೆ ಕಟ್ಟೀ ನಿಲಿಸೀದ ॥ತ॥

ಕೊಡಗಿನ ಬಳುವೇ ಮಾತಿಗೆ ಮಡಿಕೇರಿ .ಚಂದುಕು ಚನ್ನಯ್ಯ ಕೋಟೆ . ಈರಾಜ ಅನ್ನ ಹೆಸರೀಗೆ ವೀರಾಜಪೇಟೆ .ಈಗ ಕುಶಲನಗರ ಐತಲ್ಲ . ಅದು ಅವುವ ಕಾಲದಲ್ಲಿ ಕುಶಾಲನಗರ ಅಲ್ಲ ಕಾನಪ್ಪ . ಪೂಜಾರುಪೇಟೆ ಅಂತ ಹೇಳಿ ಬಿಟ್ಟೂ ..ಎಲ್ಲಾ ಪೇಟೇನು ಕಟ್ಟುಬಿಟ್ಟು ವೀರಾಜ ದೊರೆ.

ಪೂಜಾರು ಪೇಟೆ ಬಳೀಗೆ ಬರುತಾನೇ

ಪೂಜಾರುಪೇಟೆಲ್ಲಿ ಬಾಳ ಆಗಿ ಜೋಕ ಮಾಡುತಾನೇ ॥ತ॥

ಪೂಜಾರು ಪೇಟೇಗೆ ಬಂದ ವೀರಾಜು ದೊರೆ .ಪೂಜಾರು ಪೇಟೇಲ್ಲಿ ಪೂಜಾರುಪೇಟೆ ಜನುವಲ್ಲಿ ಬಾಳಿ ಐಭೋಗ ಮಾಡುತ್ತಾನೆ. ಈರಾಜ ದೋರಯೇ . ಐಭೋಗುವಾಗಿ ರಾಜುರ ಬರ ಮಾಡಿಕೊಳ್ಳುಬೇಕಾರೆ . ಬರುವ ದಾರಿಗೆಲ್ಲ ಸಣ್ಣ ಮಲ್ಲಿಗೆ .ದುಂಡು ಮಲ್ಲಿಗೆ ಹಾಸಿದ್ದಾರೇ . ಈರಾಜ ದೊರಿಗೇ ಪೂಜಾರುಪೇಟೆಲ್ಲಿ .ಈರಾಜು ದೊರಿಗೆ ಬಾಳ ಸಂತೋಷವಾಯ್ತಿ ಖುಸಿಯಾಯ್ತಿ ..ಈರಾಜು ಯಾರಿಗೇ ಬಾಳ ರೀತಿಯಾಗಿ ಖುಸಿಯಾಯ್ತು ಈರಾಜ್ ದೊರಿಗೇ .

ಈ ಪೂಜಾರು ಪೇಟೆಯ ಹೆಸಾರು ತೆಗೆದಾನು

ಈ ರಾಜ್ಯಕೆ .ನಮ್ಮ ಖುಸೀನೆ ಕುಶಾಲನಗರಾ ॥ತ॥

ಆವುನ ಕೂಸಿಗೆ ನೋಡೋದಮ್ಮಯು

ಪೂಜಾರು ಪೇಟೆಗೆ ಕುಶಾಲನಗರ ಅಂತ ಹೆಸಾರ ಇಡುತಾನೇ ॥ತ॥

ರಾಜ್ಯಬಾರಿಕೆ ಮಾಡೂತಾವನಲ್ಲಾ

ವೀರಾಜ್ ದೊರೆ ಕೊಡಗೀನ ರಾಜ್ಯವ ಆಳೂತವನಲ್ಲಾ ॥ತ॥

ಮೈಸೂರು ಮಾರಾಜರ ತಂಗೆ .ಮೈಸೂರು ಅರುಸರ ತಂಗೆ ಪಿರಿಯಾಪಟ್ಟಣದ ವೀರಾಜ ದೋರಿಗೆ ಕೊಟ್ಟಿದೆ ಆಗಾ ಪಟ್ಟುಣದ ಮಲ್ಲೋಜಿ ಹೊಟ್ಟಿಲ್ಲಿ ವೀರಾಜು ದೊರೆಗೆ ಹೆಣ್ಣು ಮಗಳು ಹುಟ್ತಾಳೆ ಹೆಣ್ಣು ಮಗ ಹುಟ್ಟಿದ್ ಗಳಿಗೆ ಕೇಳುವಾಗ .

ಹಾಲಿನಂತವ ಪಿರಿಯಾಪಟ್ಟಣಾ

ಮಗು ಹುಟ್ಟಿದ ಗಳಿಗೆಲ್ಲಿ ಹಾಳಾಗಾ ಕಾಲ ಬಂದಾದೇ ॥ತ॥

ಮಗು ಹುಟ್ಟಿದ ಗಳಿಗೆ ಕೇಳುತ್ತಾರೇ .

ಹಾಲಿನಂತ ಪಿರಿಯಾಪಟ್ನಾ । ತಾನಾ ಎನ್ನಲಿದೇವಾ .

ಹಾಲಿನಂತ ಪಿರಿಯಾಪಟ್ನಾ ।

ಮೊಗಾ ಹುಟ್ಟಿದ ಗಳಿಗೆಯಲ್ಲಿ

ಹಾಳು ಬೀಳೊ ಕಾಲಬಂತು

ತುಪ್ಪದಂತ ಪಿರಿಯಾಪಟ್ನಾ

ತಿಪ್ಪೆಹಾಳ್ಯಾಗ ಕಾಲಬಂತೂ

ಮಗೂ ಹುಟ್ಟಿದ ಗಳಿಗೆಲ್ಲಿ

ಹುಟ್ಟಿದ ಗಳಿಗೆ ಚಂದಾಗಿಲ್ಲ

ಮುಂದೆ ಯೇನು ಮಾಡಬೇಕು .? ರಾಜ ಸಾನುರ ಕೇಳಬೇಕಾರೆ .

ನೀನು ಹೆತ್ತಾ ಮಗುವಾ ನೋಡೂ

ಪಿರಿಯಾಪಟ್ಟಣ ಬಿಟ್ಟೂ ಬಿಟ್ಟೂ

ಹೊರಿಕೆ ದಾನಾ ಕೆಡಾಬೇಕೂ

ಮಗು ಚಂದಾಕಿಲ್ಲ ಪಟ್ಟುಣದ ಆಚಿಗೆ ದಾನ ಕೊಡಬೇಕು. ಯಾರು ದಾನ ಇಸ್ಕಳದೆ ಹೋದ್ರೆ ..

ಕ್ವಾಟಿಂದಾಚಿಕಗೆ ನೋಡೂ ಶಿವನೇ

ಮಗಳೇ ನೀನು ಎಸಿಯಾಬೇಕೂ

ಮಗಳಾ ನೀನು ಎಸಿಯಬೇಕೂ

ರಾಜಸ್ಥಾನದೊಳಗೆ ಈ ತೀರ್ಮಾನ ಆಗೋಯ್ತು

(ಈಗ ಯಾರಾರು ದಾನ ಇಸ್ಕಳದಾದ್ರೆ ಪಟ್ಣದಿಂದಾಚ್ಗೆ ದಾನ ಕೊಡಬೋದು. ಇಲ್ಲಾಂದ್ರೆ ಕ್ವಾಡಿಂದಾಚ್ಗೆ ಮಗ ಎಸ್ತು ಬಿಡಬೇಕು. ಅಂಗಾದ್ರೆ ನಿನ್ ರಾಜ್ಯಕ್ಕೆ ಉಳುಗಾಲವುಂಟು ಇಲ್ಲಾಂದ್ರೆ ..? )

ವೀರಾಜ್ರು .ಸಿಟ್ಗಿತ್ತಾರೆ .. ಹುಟ್ಟಿದ್ದಂತ ಪಾಪಿ ಯಂತೋಲು ಯತ್ತೋಳ ಮಕಾ ..ಹುಟ್ಟರೋ ಪಾಪಿ ಮಕಾ ನೋಡೇದಿಲ್ಲಾ .. ನಮ್ಮ ಮಂತಾನ ಹಾಳಾಗುತ್ತೆ ಅಂದ್ ಮೇಲೇ .ಮಂತ್ರಿ ಸೇನಾಧಿಪತಿಗಳ್ರಾ ಯಾರಿಗಾದ್ರು ದಾನ ಕೊಡೋಗಿ  ಯಾರು ದಾನ ಇಸ್ಕದ್ಲೆ ಹೋದ್ರೆ ಕ್ವಾಟಿಂದಾಚ್ಗೆ ಎಸ್ದು ಬನ್ನಿ. ಮಗಾ ಕ್ವಾಟಿಂದಾಚ್ಗೆ ಎಸ್ತು ಬನ್ರಪ್ಪ. ಅನ್ನದಾಗಿ ಸುದ್ದಿ ಯೇಳುತ್ತಾರೆ. ಯತ್ತೋಲು ಪಟ್ಟುದಾ ಮಲ್ಲೋಜಿ .ಸೂಲಗಿತ್ತಿ ಗಾಣಿಗರು ಸಂಗಮ್ಮ .ಯತ್ತೋಳು ಪಟ್ಟುದ ಮಲ್ಲೋಜೀ ಸೂಲಗಿತ್ತಿ ಗಾಣಿಗರ ಸಂಗವತಿ ಬಾಲನಾಗಮ್ಮ ಕಡೆಯಲ್ಲಿಯೂ ಬರುತ್ತಾಳೆ. ಹುಟ್ಟಿದಂತಹ ಗಳಿಗೇನ. ಮಾರಾಜ್ರು ಕೇಳವ್ರೆ ಅನ್ನ ಸುದ್ದಿ ಅಸ್ಟೊತ್ತಿಗೆ ಬಂತು. ಪಂಚಾಂಗ ಕೇಳವ್ರೆ .ಮಗಾ ಹುಟ್ಟಿದ್ ಗಳಿಗೆ ಸರಿ ಇಲ್ವಂತೆ ಮಗಾ ಮನೇಲಿ ಇಟ್ಗಳಿಂಗಲ್ವಂತೆ. ಮಗಾ ಯಾರ್ಗಾರ ದಾನ ಕೊಡಬೇಕು. ಯಾರು ದಾನ ತಗಳದಿಲ್ಲ ಅಂದ್ರೆ ಅರುಮನೆ ಕ್ವಾಟಿಂದಾಚ್ಗೆ ಎಸಿಬೇಕಂತೆ ಅಂಗಂತ ಮರಾಜ್ರು ಆಡ್ರು ಮಾಡ್ಯವರಂತೆ.

ಕೋಟಿಂದಾಚಿಗೆ ಮಗಾವ ಎಸಿಬೇಕೂ

ಮಗಾ ಇದ್ದರೆ ನಿನ್ನು ಕಡಿತರೆ ಮಗಾನು ಕಡಿತಾರೇ।

ತಂದನಾನು ತಂದನ್ನ ತಾನೇನಾ

ತರುತಂದನ್ನಾ .ತಂದನಾನು ತಂದನ್ನ ತಾನೇನಾ॥

ಸುದ್ದಿ ಹೋಯ್ತು ಮಾರಾರೇಗೆ. ಸೂಲಗಿತ್ತಿ ಗಾಣಿಗರ ಸಂಗಮ್ಮ ಕೊಳ್ಳಿ ತೆಟ್ಟುತ್ತಾಳೆ. ಸೂಲಿಗಿತ್ತಿ ಗಾಣಿಗರ ಸಂಗಮ್ಮ ನೀನೇ ನನಿಗೆ ಗತಿ ಈಗಾ. ಈ ಮಗಾ ಉಳಿಸ್ಕಳ್ಳಿಲ್ಲ ಅಂದ್ರೆ.

ನೀನು ಹೆರಿಗೆ ಬಂದು ಫಲವೇನು

ನಾನು ಹೆತ್ತು ಫಲವೇನೂ

ನೀನು ಹೆಂಗೇಗ್ ಬಂದು ಫಲುವೇನು

ನಾನು ಹೆತ್ತೂ ಫಲುವೇನೂ

ನೀ ಮಗುವಾ ನೋಡಿದುರೆ

ಅಮ್ಮ ಅರುಗಿಣಿ ಯಂಗಾದೆ

ಯವ್ವೆ ದಾನ ಯಂಗೆ ಕೋಡಾಲ

ಯವ್ವೆ ಕಾಟಿಂದಾಟಿಗೆ ನೋಡು

ನಾನು ಮಗುಳೆಂಗೆ ಎಸಿಯಾಲಿ

ಅವ್ವ ಗೋಳು ದುಕ್ಕ ಮಾಡುತ್ತಾಳೇ

ಅವ್ವ ನಿಡಗೋಳ ಮಾಡುತ್ತಾಳೆ.

ಮಾರಾಣಿ ಅಳುವಾಗ .ಸೂಲಗಿತ್ತಿ ಸಂಗಮ್ಮ ಯೇನೇಳುತ್ತಾಳೆ ಮಾರಾಣಿಗೆ . ತಾಯಿ ತಾಯಿ ಇಸ್ಟು ಸಂಕಟ ಇಸ್ಟು ಗೋಳಿರುವಾಗ ನಾನು ನಿನ್ನ ಮಗುಳ ಸಾಕಿ ಕೊಡುತ್ತೀನಿ. ಯಂಗೆ ಸಾಕಿ ಕೊಡುತ್ತೀವಿ ಅಂದ್ರೆ .ನೆಲೂ ಮಾಳಿಗೆ ಕಟ್ಟಸಮ್ಮ ನೆಲೂ ಮಾಳಿಗೆ ವಳುಗೇ ಗುಟ್ಟು ಗುರಿಯಲ್ಲಿ ಮುಚ್ಚು ಮರೇಲಿ ನಿನ್ ಮಗಳ ಸಾಕಿ ಕೊಡ್ತೀನಿ. ನಿನ ಮಗಳ ಸಾಕಿ ನಿನ್ನ ಕೆಯಿಗ್ ಕೊಡ್ತೀನಿ.

(ಗಂಡುಗ್ ದಾನ ಕೊಟ್ಟೆ ಅಂತ ಹೇಳು. ನೆಲ ಮಾಳಿಗೆ ಮಾಡ್ಸು. ನೆಲ ಮಾಳಿಗೆ ವಳುಗೆ ಮುಚ್ಚು ಮರೇಲಿ ನಿನ್ ಮಗುಳ ಸಾಕಿ ಬೆಳಸಿ ನಿನ್ ಕೆಯ್ಯಿಗೆ ಕೊಡ್ತೀನಿ. ಈಗ ಅರುಮನೆ ಗುಟ್ಟಲ್ಲಿ ವಡ್ರ ಕರಿಸಿ .ನರಸೂರ್ರು ಮಾತಾಡ್ ಕೂಡ್ದು. ಅವರಿಗೆ ತಿಳಿಕೂಡ್ದು ಅಂಗೆ ಯಾವುದೋ ಬಂದ್ ರೂಪ್ದಲ್ಲಿ ಕಟ್ಟುಸಬೇಕು. ಅನ್ನಗಾಗಿ ಮಾತಾಯ್ತದೆ. ಆಗ ವಡ್ರು ಆಯ್ತು ತಾಯಿ ಅಂತೇಳಿ ಒಪ್ಕತ್ತಾರೆ.)

ಈವಾಗ ಮಗ ಯಾರ್ ಕೈಲಿ ಐತೆ ಅಂದ್ರೆ ಸೂಲಗಿತ್ತಿ ಅವಳಲ್ಲಿ ಅವುಳ ಕೆಯ್ಲಿ ಮಗಾ ಐತೆ. ಇವುಳು ಗಂಡ ಬಂದಾಗ ಮಗಾ ದಾನ ಕೊಟ್ಟೆ ಅಂತ ಹೇಳ್ತಾಳೆ. ಮಗ ಇಲ್ಲೈತೆ ಇಂತ ಕಡೆ ಐತೆ ಅನ್ನದು.ಮಾರಾಣಿಗೆ ಮತ್ತೆ ಗಾಣಿಗಿತ್ತಿಗೆ ಬಿಟ್ರೆ ಅರುಮಲ್ಲಿ ರಾಜಸ್ಥಾನದಲ್ಲಿ ಇನ್ನಾರಿಗೂ ತಿಳಲಿಲ್ಲ.

ಗಂಡುಗ್ ಕಾಣ್ದಂಗೆ ಮಗುವ ಸಾಕುವಳೂ

ಶಿವಶಿವಾ ಮಗಳ ಅಂದ ಚಂದಾ ನೋಡಯ್ಯ ॥ತ॥

ಮೂರು ದಿನದ ಮಗುಳ ನೋಡಿದರೆ

ಶಿವ ಶಿವ ಮೂರು ತಿಂಗಳ ಮಗುವಂಗ್ ಕಾಣುತ್ತಾಳೇ ॥ತ॥

ಮೂರು ತಿಂಗಳ ಮಗುಳ ನೋಡಿದುರೆ

ಶಿವ ಶಿವ ಆರು ತಿಂಗಳ ಮಗುವಂಗ್ ಕಾಣುತ್ತಾಳೇ ॥ತ॥

ಮೂರು ತಿಂಗಳ ಮಗುಳ ನೋಡಿದುರೆ

ಮಾಳಿಗೆ ಒಳುಗೆ ಆರು ತಿಂಗಳ ಮಗುಳಾ ಕಾಣುತ್ತಾಳೇ ॥ತ॥

(ಮಯ್ ತುಂಬಿಕ್ಯಂಡು ಬೆಳದು ಬಂದ್ಲು. ಮಾಳಿಗೆ ವಳುಗೆ ನನ್ನ ಮಗುಳು ಇಲ್ಲವ್ವೆ ಅನ್ನದು ಮಾರಾಜುಗೆ ತಿಳಿಸಿಲ್ಲ. ರಾಜಸ್ತಾನದಲ್ಲಿ ಯಾರಗೀ ತಿಳುದಿಲ್ಲ. ಈ ಮಗಾ ಬೆಳಿತಿರ ವಿಚಾರ ಯಾರ್ಯಾಗೆನ ಗೊತ್ತು ಅನ್ನದು ನಿಮಿಗೆ ಗೊತ್ತೈತೆ. ಮಾರಾಣಿ ಪಟ್ಟುದ್ ಮಲ್ಲೋಟೆ ಗಾಣಿಗರ ಸಂಗಮ್ಮ ಇಟ್ಟು ಹೊರ್ತು ಇನ್ನಾರಿಗು ಗೊತ್ತಿಲ್ಲ.) ಮಗುಳು ವಯಸಿಗೆ ಬಂದ್ಲೂ ..ಮಗಳು ವಯಸಿಗೆ ಬಂದೋದ್ಲು. ಮಗುಳಿರ ಚಂದುಕೆ ಮಗುಳಿರ ಅಂದುಕ್ಕೇ .

ಮುತ್ತೀನ ಸೀರೆ ನೇಸುತವಳಲ್ಲಾ

ಮಗಳೀಗೆ .ರತ್ನುದ ರವಿಕೆ ನೇಸೂತವಳಲ್ಲಿ ॥ತ॥

ಮುತ್ತಿನ ಸೀರೆ ರತ್ನುದ ರವಿಕೆಲ್ಲ

ಶಿವಶಿವ ಮಗಳೀಗುಡಿಸಿ ಕಣ್ಣಲ್ಲಿ ನೋಡೋದು ॥ತ॥

ವಯಸಿಗೆ ಬಂದವಳೆ ಮಗುಳು. ಅವುಳಿಗೆ ಮುತ್ತಿನ ಸೀರೆ ರತ್ನುದ ರವಿಕೆ ಹುಟ್ಟಿದ್ದಾಳೆ ನೆಲಮಾಳಿಗೆಲ್ಲಿ ಹೆಣ್ಣಾಗು ಕಾಲ ಬಂತು.

ಹೆಣ್ಣಾಗ ಕಾಲ ಬಂತು ಋತುಮತಿಯಾಗ ಕಾಲ ಮಿಜರೆಟಿಯಾಗ ಕಾಲ ಇದು ಅರಸನಿಗೆ ಗೊತ್ತುಲ್ಲ. ಈಗ ಸೀರೆ ರವಿಕೆ ಹಾಕ್ಯಂಡು ಹೆಣ್ಣಾದ್ದಲ್ಲ ನೂತಕಾಡ್ಲು. ಈಗ ಮಡಿವಾಳದ ಕರಿತಾರೆ ಮಡಿವಾಳ್ನ. ನಮ್ಮ ಅರುಮನೆ ಸೀರೆ ಬಟ್ಟೇನೆಲ್ಲ ವಗೀತನಲ್ಲ ಅವುನು ಅನ್ನ ಕರೀತಾರೆ. ಅವುನ್ನ ಕರ್ದು ಹೇಳ್ತಾರೆ. ನೋಡಪ್ಪ ಈ ಸೀರೆ ನೀನು ವಕ್ಕ ಬರ್‌ಬೇಕು. ಇದು ನಮ್ಮರಮನೆ ಅರುಸುರು ಮಂತ್ರಿ ಪರದಾನಿಗಳು ಯಾರಿಗು ಗೊತ್ತಾಗ್ ಬಾರ್ದು. ಈ ಸೀರೆಯ ನೀಉ ಅಂಗೆ ಮುಚ್ಚು ಮಾರಿಕೆಲಿ ಸ್ಯೆಣಕ ಬಂದು ಕೊಡಬೇಕು. ಯಾಕೆ ನನ್ ಮಗಳು ಅನ್ನದು ಗೊತ್ತಾಗ ಬಾರ್ದು ಅಂತವ. ಅದ್ಕೆ ನೀನು ಮಹಾಂತ ಕಾಡು, ಮಹಾಂತ ಅರಣ್ಯದಲ್ಲಿ ನೀನು ಮುಚ್ಚು ಮರೇಲಿ ಸೇರಾಕೊಡು. ಬಾಳ ಉಷಾರಿನಲ್ಲಿ ಸ್ಯೆಣಾಕೊಡು .ನೀನು ಯೇನ್ ಕೇಳ್ತಿಯಾ ಅದು ನಾನು ಕೊಡ್ತೀನಿ ಅಂತಾಳೆ. ಆಯ್ತು ತಾಯಿ . ಸೇಣಾಕೊಡ್ತೀನಿ.)

ಈಗ ಮದ್ ರಾತ್ರೀಲಿ ಸೀರೆ ತಂದು ಮಡಿ ಮಾಡಿ ಕೊಡು ಅಂತ ತಂದು ಕೊಡ್ತಾಳೆ. ಮಡಿವಾಳಪ್ಪ ಮದ್‌ರಾತ್ರಿ ವತ್ನಲ್ಲಿ ಕಾಕನ ಕೋಟೆ ಕಾಡು ಅಂದ್ರೆ ಮಾನಸೂರತ್ರ ಕಾಕುನಕೋಟೆ ಕಾಡು ಅಂತ ಐತೆ. ಕಾಕುನ ಕೋಟೆ ಕಾಡು ಅಂದ್ರೆ ದೊಡ್ಡ ಕಾಡು . ಆ ಕಾಡ್ನಲ್ಲಿ ಮದ್ ರಾತ್ರೀ ವತ್ನಲ್ಲಿ .ಮಡಿವಾಳ

ಕಾಕುನ ಕೋಟೆ ಕಾಡಿಗೆ ಬರ್ತಾನೆ

ಮಡಿವಾಳಪ್ಪ ಮದ್ದೆ ರಾತ್ರೀಲಿ ಸೀರೆ ವಗಿಯೋನೂ ॥ತ॥

(ವಗಿಯ ಕಾತದ ಮುತ್ತಿನ ಸೀರೆಯ .ಬರಿಯ ಕೈಲಿ ತಿಕ್ಕಿ ತೊಳಿಬೇಕು. ಈಗ ಈ ಸೀರೆಯ ಅಂಗೆ ಮಡಿ ಮಾಡೊ ವತ್ತಿಗೆ ಬೆಳುಕಕು ಅರುದೋತು. ಇನ್ನ ರವಿಕೆ ತೊಳಿಬೇಕು. ರವಿಕೆ ತೊಳೆಯ ವತ್ತಿಗೆ ಒಂಬತ್ತ್ ಗಂಟೆ ವತ್ತು ಆತು. ಒಂಬತ್ತು ಗಂಟೆ ಹೊತ್ನಲ್ಲಿ ತೊಳದೀರ ಸೀರೆ ಏರಿ ಮ್ಯಾಲೆ ಒಣಹಾಕಿ ರವಿಕೆಯ ತೊಳಿತಾವನೆ. ಒಂಬತ್ ಗಂಟೆ ಹೊತ್ನಲ್ಲಿ) ಈ ಕಡೆ ವೀರಾಜ ದೊರೆ ಮಂತ್ರಿಗೇಳುತ್ತಾನೆ. ಯಾಕೋ ಮನಸಿಗೆ ಬೇಜಾರಾಗುತ್ತದೆ.

ಕುದುರೆ ಸಾವರಿ ಸುಂಗಾರ ಮಾಡಿರಯ್ಯ

ಮಂತ್ರಿ ಕೇಳು ಕಾಕುನ ಕ್ವಾಟಿಗೆ ಬ್ಯಾಟೀಗೋಗಾನಾ ॥ತ॥

ಕಾಕುನ ಕ್ವಾಟೆಗೆ ಬ್ಯಾಟಿಗೋಗಾನ

ಬ್ಯಾಟೀಯ ಮಾಡಿ ಬ್ಯಾಸರಿಕೇಯ ಕಳುಗೊಂಡು ಬರಾನಾ ॥ತ॥

ಕುದುರೆ ಸಾವರಿ ಸುಂಗಾರ ಮಾಡುತಾರೇ

ಮಂತ್ರಿ ಪ್ರಬಾನಿ ವೀರಾಜುರು ಕಾಕುನ ಕೋಟಿಗೆ ಬ್ಯಾಟಿಗೆ ಬರುತಾರೇ ॥ತ॥

ಕಾಕುನ ಕೋಟೆ ಕಾಡು ಬ್ಯಾಟೆಗೆ ಹೋಗತ್ತಾರೆ ಬ್ಯಾಸಿರಿಕೆ ಕಳ್ಕೊಳ್ಳದಕ್ಕೆ ಕಾಕುನ ಕೋಟೇಗೆ ಬರುತ್ತಾರೆ. ಅದೇ ವತ್ನಲ್ಲಿ ಇಲ್ಲಿ ಏರಿ ಮ್ಯಾಲೆ ಸೀರೆ ರವಿಕೆ ಒಣ ಹಾಕ್ಯಂಡು ಕೂತುದಾನೆ ಮಡಿವಾಳಪ್ಪ. ಈ ಕುದುರೆ .ವೀರಾಜು ದೊರೆ ಯೇಳುತ್ತಾನೆ. ಮಂತ್ರಿ ಪದದಾನಿಗಳಿರಾ ಬೆಳಗಿನಿಂದ ಈ ಕುದುರೆ ದಾವಾಗಿದೆ.

ಚುಂಚುಕಟ್ಟೇಯ ಕೇರಿಗೆ ಹೊಡಿರಯ್ಯ

ಕುದುರೇಯ ನೀರ ತೋರಿ ನಾವು ಬರುವಾನಾ ॥ತ॥

ಕುದುರಿಗೆ ನೀರ ಕುಡಿಸಂವಾದಕ್ಕೆ

ಶಿವ ಶಿವ ಚುಂಚು ಕಟ್ಟೆ ಕೆರೀಗೆ ಬರುತಾರೇ ॥ತ॥

(ಮಾರಾಣಿಯವರು ಯೇನು ಹೇಳಿದರೆ ನೋಡಪ್ಪ ಮಾರಾಜರು, ಮಂತ್ರಿ ಪರದಾನಿಗಳು ಯಾರಿಗು ಕಾಣುಬಾರ್ದು ಅಂತವ. ಈ ಸೀರೆ ಮುಚ್ಚು ಮರೇಲಿ ಸೆಣ ಕೊಡಬೇಕು ಅಂತ ಹೇಳಿದ್ದಾರೆ ಮಡಿವಾಳಪ್ಪಗೆ. ಇಲ್ಲಿ ಕುದುರೆಗೆ ನೀರ ಕುಡಿಸೋಕೆ ರಾಜುರು ಮಂತ್ರಿ ಪರದಾನಿಗಳು ಈ ಕೆರೀಗೇ ಬತ್ತಾವ್ರೆ. ಮಡಿವಾಳ ನೋಡ್ತಾನೆ. ಮಲ್ಲಿ ಮಾರಾಣೆ ಅಂಗಂದವ್ರೆ. ಇಲ್ಲಿ ನನ್ನ ಹಿಡಿಯಾಕ್ ಬರ್ತಾತ್ತಿ ಅಂತ .)

ಮಡಿವಾಳ ಮಾಚಪ್ಪ .

ಸೀರೆ ರವಿಕೆ ಅಲ್ಲೆ ಬುಟ್ಟುನಲ್ಲೋ

ಮ್ಯಾಲೆ ಎದ್ದು ಕದ್ದೋ ಹೋಯ್ತಾನೆ ॥ತ॥

ಸೀರೇ ರವಿಕೆ ಅಲ್ಲೆಬುಟುನಲ್ಲ

ಶಿವ ಶಿವ ಅವನು ಮ್ಯಾಕೆ ಎದ್ದು ಕದ್ದೇ ಹೋಯ್ತಾನೇ ॥ತ॥

(ನನ್ನುನೇ ಹಿಡಿಯಾಕೆ ಬತ್ತಾವ್ರೆ ಅಂತ ಕದ್ ಜಡಿಬುಟ್ಟು)

ಹತ್ತುರುಕೆ ಬಂದಂಗೆ ಬಂದಂಗೆ ಕುದುರೆ ಬೆದ್ರುತ್ತಾತಿ . ಬೆಚ್ತಾವೆ

ಯಾತುಕ್ಕೆ ಕುದುರೆ ಬೆಚ್ಚುತ್ತಾನರೆ .ಬೆಚ್ಚುತ್ತನೆ. ಸೀರೆ ಅತ್ಗಂಡ್ ಉರೀತೈತೆ ಏರಿಮ್ಯಾಲೆ ಕುದುರೆ ಮುಂಗಾಲ್ ಎತ್ತಿ ಬೆದ್ರುತ್ತಾನೆ. ಇವುರು ನೋಡಿಬುಟ್ಟು ಕುದುರೆ ಅಲ್ಲೆ ಬುಟ್ಟು ಇಳುದು ಬಂದು ನೋಡುತ್ತಾರೆ. ಸೀರೆ ರವಿಕೆ ರವರವನೆ ಉರಿತಾಏನ ಮಂತ್ರಿ ಪರದಾನಿಗಳಿಗೇಳುತ್ತಾನೆ ವೀರಾಜು ದೊರೇ ..ಮಂತ್ರಿ ಮಂತ್ರಿ,,,,ನಾವು ರಾಜ್ಯಬಾರಿಕೆ ಆಳಿ ಪಲುವೇನು

ನಾವು ರಾಜ್ಯಬಾರಿಕೆ ಆಳಿ ಪಲುವೇನೂ

ನನ್ನ ಮಂತ್ರಿ ದೊರೇ ಆಗಿ ನನಿಗೆ ಪಲುವೇನು ॥ತ॥

ನನ್ ರಾಜ್ಯಬಾರಿಕೆವಳುಗೆ ನನ್ನ ಮನೆವಳುಗೆ ಇಂಥಾ ಸೀರಿಲ್ಲಿವಲ್ಲೊ .ಮಂತ್ರಿ ಎಷ್ಟು ಬದುಕಿದುರುವೆ ಯೇನು ಬತ್ತಾದೆ ನನ್ನಂತ ದೊರೆ ಮಲ್ಲಿ ಇಂತಾ ಸೀರಿಲ್ಲ ಯಾವ್ ದೇಶುದ್ ಇರಬೋದು ಯಾರ್ ಉಟ್ಟಿರ್ ಬಾದು

ಸೀರೆ ಇಷ್ಟು ಚಂದಾಗಿ ಇರುವೋದೂ

ನನ್ನ ಮಂತಿರ ಬಿಟ್ಟಿರೋ ಬಾಟಿ ಯಾಗೇಇರುವೊಳು ॥ತ॥

ಸೀರೆ ರವಿಎಕ ಇತ್ತಯ ಚಂದವಲ್ಲಾ

ನನ್ನ ಮಂತ್ರಿ ಉಟ್ಟೀರೊ ಹೆಣ್ಣು ಎಸ್ಟು ಚಂದವಯ್ಯ ॥ತ॥

ಮುರುಗ ನಾಣೆ ಬುಡೂವುದಿಲ್ಲುವಲ್ಲಾ

ನನ್ನ ಮಂತ್ರಿ ಯಟಟಿರೋ ಬಾಲೇ ಆಳೀ ತೀರುಬೇಕೂ ॥ತ॥

( ಆ ಸೀರೆ ಯಾರ್ದು  ರವಿಕೆ ಯಾರ್ದು? ವೀರಾಜುರೊದಿಗೆ ಮಗುಳ್ದು, ಮಗುಳು ಅನ್ನದು ಅವನಿಗೆ ಗೊತ್ತ? ಇದ ಅವುಳು ಹಟ್ಟಿವಳೆ ಅನ್ನದು ಗೋತ್ತ  ಇಲ್ಲಿ ಆಗ ಮಂತ್ರಿ ಹೇಳ್ತಾನೆ. ಸ್ವಾಮಿ ಗಂಡುಳೀ ಗರತಿ ಉಟ್ಟುದ್ರೆ. ಅವುಳ್ನ ಯಂಗೆ ನೀವಾಲಿಕೆ ಆಯ್ತದೆ ಮಂತ್ರಿ .)

ಹಣ್ಣೀನ ಮ್ಯಾಲೇ ಕಣ್ಣಾ ಇಟ್ಟಂಗೇ

ಹೆಣ್ಣಾ ಮ್ಯಾಲೇ ನಾನು ಕಣ್ಣಾ ಇಟ್ಟು ಮ್ಯಾಲೇ ॥ತ॥

ಮುರುಗು ನಾಣೇ ಬುಡುವುದಿಲ್ಲುವಲ್ಲಾ

ಉಟ್ಟಿರೋ ಬಾಲೇ ಆಳೇ ನಾನು ತೀರಬೇಕಲ್ಲ ॥ತ॥

ಕುದುರೆ ಸಾಲಿಗೆ ಗಣೀಯ ಕಡಿರಯೇ

ಗಣೀಯ ತುದಿಗೆ ಸೀರೆ ರವಿಕೆಯ ಬಾವುಟ ಕಟ್ಟರಯ್ಯ ॥ತ॥

ಆಳುಬೇಕು ಬಾಳುಸ್ತೀನಿ ಅಂತ ಡಂಗುರ ಹೊಡುದ್ರೆ ಗಂಡುಳ್ಳ ಗರತಿ ಆದ್ರೆ ಬತ್ತಳ್ಳ? ಮುಚ್ಚು ಮರೆ ಆತಳೆ. ಈಗ ಅವುಳ ಯಂಗೆ ಪತ್ತೆ ಮಾಡದು ಮತ್ತೆ. ಯಂಗ್ ಪತ್ತೆ ಮಾಡದು ಅಂದ್ರೆ  ಕೋಟಿಗಟ್ಲೆ ವರದಕ್ಷಿಣೆ ಕೊಡ್ತೀವಿ ಅಂತ ಡಂಗುರ ಹೊಡೆಯಾನ ಕುದುರೆ ಸಾಲಿಗೆ ದೊಡ್ಡ ಗಣೇ ಕಟ್ಟಿ ಗಣೇ ತುದಿಗೆ ಸೀರೆ ರವಿಕೆ ಬಾವುಟ ಕಟ್ಟಿ ಡಂಗುರ ಸಾರನ. ಯಾರು ಈ ಸೀರೆ ನೇಸೀರೊ ರಾಜ ಉಟ್ಟೀರೋ ಹೆಣ್ಣು ಬಂದ್ರ ಅವುರಿಗೆ ಕೋಟಿ ವರದಕ್ಷಿಣೆ ಕೊಟ್ಟು ಕೊಂಡುಕೋತೀವಿ ಅನ್ನದಾಗಿ ಡಂಗುರ ಹೊಡಿರಿ) ವರದಕ್ಷಿಣೆ ಆಸೆಗೆ

ಉಟ್ಟರೋ ಬಾಲೆ ಪಟ್ಟುನೆ ಬರುತಾಳೇ

ನೇಸೀರೋ ದೋರೆ ಬಂದೇ ಬರುತಾನೇ ॥ತ॥

ಆಗ ಅವುಳು ಕಂಡೆ ಬರುತಾಳೇ

ಅವುಳ ನಾನು ಗಳಿಗಾದುರೇ ಆಳೇ ತೀರಬೇಕು ॥ತ॥

ಕುದುರೆ ಸಾಲಿಗೆ ಗಣೀಯ ಕಟ್ಟುತ್ತಾರೇ

ಗಣಿಗೆ ಸೀರೆ ಸೀರೆ ರವಿಕೆ ಬಾವುಟ ಕಟ್ಟುತ್ತಾರೇ ॥ತ॥

ಊರು ಊರಿಗೆ ಡಂಗುರ ಹೊಡಿಯೋಲ

ಊರು ಊರಿಗೆ ಡಂಗುರ ಹೊಡಿಯೋರೂ

ಯಾರುವೆ  ನಂದೂ ಸೀರೇ ಅಂತಾ ಬರುನಿಲ್ಲಾ ॥ತ॥

(ಎಲ್ಲಾ ಊರಿಗು ಡಂಗುರ ಹೊಡುದ್ರು ಯಾರು ಬರ್‍ನಿಲ್ಲ. ಯಾವ್ ಊರಿಗೆ ಡಂಗುರ ಹೊಡುದ್ರುವೆ ಯಾರು ಬರುನಿಲ್ಲುವಲ್ಲಿ ಮಂತ್ರಿ .ನನ್ ಅರುಮನೆ ಬೀದೀಲಿ ಬಂದ್ ಡಂಗುರ ಹೊಡಿ  ಈಗ ಈ ವೀರಾಜುರು ಯಾವ್ ಕಡಿಕಾರ ಹೊಂಟ್ರೆ ಹೋದ್ರೆ ಈಗ ನೆಲಮಾಳಿಗೆ ಬುಟ್ಟು ಅರುಮನೆಗೆ ತಂದು ನಿಲ್ಲಿಸುತ್ತಾರೆ. ಅವುನು ಬತ್ತನೆ ಅಂದಾಗ ಬಳೀಕೆ ಕರ್‌ಕಂಡೋಗುತ್ತಾರೆ. ಈಗ ವೀರಾಜುರು ಬ್ಯಾಟಿಗೆ ಹೋಗಿದ್ರಲ್ಲಿ ಅದುಕ್ಕೆ ಮಾರಾಣಿ ತನ್ ಮಗುಳ್ನ ನೆಲಮಾಳಿಗೆಯಿಂದ ಮ್ಯಾಕ್ ಬುಟ್ಟುದ್ಲು. ಅವುಳು ಬಂದು ಮಾಳಿಗೆ ಮ್ಯಾಲೆ ಕುಂತವ್ಳೆ. ಇಲ್ಲಿ ಸೀರೆ ರವಿಕೆ ಗಣೀಗೆ ಬಾವುಟ ಕಟ್ಟಕ್ಯಂಡು ಡಂಗುರ ಹೊಡುಕಂಡು ಬತ್ತಾವ್ರೆ,)

ಸೀರೆ ನೋಡ್ತಾಳೆ . ನಂದು ಸೀರೆ,,, ನಂದೆ ರವಿಕೆ. ನಾನುಟ್ಟಿರಾದು. ಇವು ಅಂತಾಳೆ. ಹುಟ್ಟಿದಾಗಿನಿಂದ ತಂದೆ ಮಕ ಮಗಳು ನೋಡಿಲ್ಲ. ಮಗುಳ ಮಕ ತಂದೆ ನೋಡಿಲ್ಲ  ಗೌಡಿ ಸೆಡೆ ಹೊಡಿತ್ತಿದ್ದಾಳೆ. ಸೂಲಗಿತ್ತಿ ಸೆಕೆ ಹೊಡಿತಿದ್ದಾಳೆ ಇವುಳಿಗೇ  ಸೂಲಿಗಿತ್ತಿ  ಸೂಲಿಗಿತ್ತಿ .ಸಂಗಮ್ಮ. ಅದು ಸೀರೆ ರವಿಕೆ ಯಾರದಮ್ಮ .? ಅವುದು ಡಂಗುರ ಹೊಡಿತೀರಾರು ಯಾರಮ್ಮ ನಾನುಟ್ಟಿದ್ ಸೀರೆಯ ಬಾವುಟ ಕಟ್ಟಿ ಡಂಗುರ ಹೊಡಿತಿದ್ದಾರೆ ನೋಡಮ್ಮ ಅಂತಾಳೆ. ಸೂಲಗಿತ್ತಿ ನೋಡ್ತಾಳೆ. ಅಮ್ಮ ಅಮ್ಮ ನಾವು ಕೆಟ್ಟೋ  ಮಗಾ ನೆಲ ಮಾಳಿಗೇಲಿ ಬ್ಯಾಸೀ ನಾವು ಸಿಗಾಕ್ಯಂಡೋ. ನೀನುಟ್ಟೀರೋ ಸೀರೆ ನಿಮ್ಮ ತಂದೆ ಕೈಗೆ ಸಿಕಾಕ್ಯಂಡೋ  ಬೇಗ ನಡೀ  (ಬೇಗ ನಡಿ. ಈಗ ನಿನ್ನ ಸೀರೆ ನಿನ್ನ ತಂದೆ ಕೈಗೆ ಸಿಕ್ಕಿದಾವೆ ಅಂದಾಗ .ಯಾರು ನನ್ ತಂದೆ ಅಂತ ಮಗುಳು ಕೇಳ್ತಾನೆ. ಅಗಾ ಅಲ್ಲಿ ನೋಡು .ಬಲಗಡೆ ಅವುರಲ್ಲಿ ಅವರೆ ಮಂತ್ರಿ ಎಡುಗಡೆ ಇರಾರು ಪರದಾನಿಗಳು. ಮದ್ಯದಲ್ಲಿ ಅವುರಲ್ಲ ಅವರೆಯ ನಿನ ತಂದೆ. ನಾನೆಂತ ಪಾಪಿ .ನಾನು ಹುಟ್ಟದಾಗಿನಿಂದ ನನ್ ತಂದೆಯ ಈ ಕಣ್ಣಿಂದ ನೋಡಿಲ್ಲ. ನನ್ ತಂದೆ ಎಸ್ಟು ಅಂದುಕೆ ಎಸ್ಟು ಚಂದುಕೆ,.. ಎಸ್ಟು ರೂಪಾಗಿ ಕಾಣುತ್ತಾರೆ. ಯಂತ ರೂಪ ರೇಕಾಗಿ ಕಾಣುತ್ತಾರೆ. ನನ್ನ ಹೆತ್ತ ತಾಯಿ ಪಾಪಿಕನಪ್ಪ. ಇವತ್ತ ತಂದೆ ಮಕ ನೋಡಿದ್ದೀನಿ . ನಾನೇ ಹೋಗಿಬುಟ್ಟು ನನ್ ತಂದೆಯ ಕುಟ್ಟೆ ಮಾತಾಡಬೇಕು. ನಾನೇ ಈಗ ಹೋದ್ರೆ .

ನನ್ನ ಎಸ್ಟು ಚಂದಕೆ ತಂದೆ ಕಾಣಾದೂ

ಶಿವ ಶಿವ ಎಸ್ಟು ಚಂದಕೆ ಮುದ್ದು ಮಾಡಾರೂ ॥ತ॥

ನಾನು ನನ್ ತಂದೆಯ ನೋಡೇ ತೀರಬೇಕು. ನಾನು ನನ್ ತಂದೆ ಕುಟ್ಟೆ ಮಾತಡಬೇಕು ನನ್ ತಂದೆ ತೂಡೇ ಮೇಲೆ ಕೂರಬೇಕು. ನನ್ನ ಎಸ್ಟು ವಿಧವಾಗಿ ಮುದ್ಯಾಡುತ್ತಾರೆ ನನ್ನ ತಂದೆ ಅಂತ ಹೇಳಿಬಿಟ್ಟು .

ಕುದರೆ ಸಾಲನು ತಡೇದು ನಿಲಿಸಾಳು

ಶಿವಶಿವ ಕುದುರೆ ಸಾಲುನೇ ತೆಡೆದು ನಿಲಿಸಾಳೂ ॥ತ॥

ನೀನ್ಯಾರು .ನೀನ್ಯಾರಮ್ಮ .ಅಂತ ಕೇಳುತ್ತಾರೆ  ತಂದೆ ತಂದೆ.

ಸೀರೆ ರವಿಕೆ ನಂದೆ ಕಾಣಪ್ಪ

ನನ್ನ ತಂದೆ ನಿನಗೆ ನಾನು ಮಗಳು ಕಾನಪ್ಪ ॥ತ॥

ನಿನಗೆ ನಾನು ಮಗುಳು ಕಾನಪ್ಪ

ನನ್ನ ತಂದೆ ನನಿಗೆ ನೀನು ತಂದೆ ಕಾನಪ್ಪ ॥ತ॥

ಆಗ ನೋಡಪ್ಪ ವೀರಾಜುರು ಎಸ್ಟು ಹೇಳಿದ್ರು ಮಗುಳು ಅನ್ನದ ಒಪ್ಪಿಲ್ಲ  ಕುದ್ರೆ ಸಾಲಿನಿಂದ .

ಕುದ್ರೆ ಸಾಲಿಂದ ಕ್ಕಳೀಕೆ ಇಳುದಾನು

ಶಿವಶಿವನೆ ಶಬಾಷು ಅಂತಾ ಅವಳ ಹಿಡುಕಂಡಾ ॥ತ॥

ಶಭಾಷು ಅಂದ ಜಡಿಯ ಹಿಡುಕಂಡಾ

ಇವಳಂದಾ ನೋಡಿ ತೊಡಿಯ ತಟ್ಟಿ ಕಾಕಾ ಹೊಡಿತ್ತಾನೆ ॥ತ॥

ತೊಡೀಯ ತಟ್ಟಿ ಕಾಕಾ ಹೊಡಿಯಾನು

ನನ್ನ ರೂಮನಿಗೆ ಅರಮನಿಗೆ ಆಡಗಿಗೆಯಲ್ಲಾ ॥ತ॥

ಅರುಮನಿಗೆ ಆರು ಗಿಣೆಯಲ್ಲಾ

ಪರಶಿವನೆ ನನಿಗೆ ಇವುಳು ತಕ್ಕ ಜೋಡಿಯಲ್ಲಾ ॥ತ॥

ತೊಡಿಯ ತಟ್ಟ ಕಾಕಾ ಹೊಡಿಯೋನು

ಇವಳ ನೋಡಿ ಕಲಿಕಲಿನೆ ನೆಗುತಾ ನಿಲ್ಲುತಾನೇ ॥ತ॥

ತಂದೆ ನೀನೆ ತಂದೆ ನಾನೇ ಮಗುಳಲ್ಲೋ

ನೀನೇ ತಂದೆ ನಾನೇ ಮಗುಳಲ್ಲೊ

ನನ್ನಾ ತಂದೆ ಪಾವುದು ನುಡಿಯಾ ನುಡಿಯಬೇಡಪ್ಪ ॥ತ॥

ಪಾಪುವಾ ನುಡಿಯ ನುಡಿಯಾ ಬ್ಯಾಡಪ್ಪ

ನನ್ನ ತಂದೆ ನನಿಗೆ ನೀನು ತಂದೆ ಕಾನಪ್ಪ ॥ತ॥

ನಡಿ ನಡಿಯಲೇ ಲವುಡಿ ಬಾಂಚತ್ತು

ಗಳೀಗಾದರೂ ಅಳೇ ನಾನು ತೀರಾ ಬೇಕಲ್ಲಾ ॥ತ॥

ನಡಿ ನಡಿಯಲೇ ಲವುಡಿ ಬಾಂಚತ್ತು

ಗಳೇಗಾದರೂ ಆಳೇ ನಾನು ತೀರಬೇಕಲ್ಲಾ ॥ತ॥

ನನ್ನ ದೂಮಾನಿಗೆ ಆರು ಗೆಳಿಯಲೇ

ನೀನು ನನಗೆ ಸರಿಯಾದ್ ಜೋಡ್ಯಲ್ಲೇ ॥ತ॥

ಬಂದಲ್ಲೆ ಸೆರೆ ಹಿಡಿತಾರೇ ಸೆರೆ ಹಿಡಿದು ಅರುಮನಿಗೆ ತರುತ್ತಾನೆ. ಸೂಲಗಿತ್ತಿ ಸಂಗವ್ವ ನೋಡುತ್ತಾಳೆ ಬಂದು ಮಾರಾಣಿಗೆ ಹೇಳುತ್ತಾಳೆ. ಅಮ್ಮಾ ಅಮ್ಮಾ ನೀನೆತ್ತು ಮಗಳು ಅನ್ನಾದು ರಾಜುರುಗೆ ಗೊತ್ತಿಲ್ಲ ನಿನ್ ಮಗುಳ ಮೇಲೆ

ಮಗುಳ ಮೇಲೆ ಮನಸ ಇಚ್ಚಾರೇ

ಶಿವ ಶಿವ ಅವಳಮ್ಯಾಲೇ ಗ್ಯಾನಾ ಬಿಟ್ಟವರೇ ॥ತ॥

ಮಗುಳ ಮೇಲೆ ಮನಸ ಇಟ್ಟವರೇ

ನಿನ್ ಗಂಡ ಮಗಳ ಮ್ಯಾಲೆ ಗ್ಯಾನಾ ಬಿಟ್ಟವರೇ ॥ತ॥

ಆಗ ನೋಡಪ್ಪ ಮಾರಾಣಿ ಅರುಮನಿಗೆ ಬತ್ತಾಳೆ. ಮಗುಳ ಅವ್ವ ಬತ್ತಾಳೆ. ಮಗಳ ಪಾರ ಇಟ್ಟದ್ದಾನೆ . ಮಗಳಿಗ್ ಬಂದು ತಾಯಿ ಮಕ ತೋರಿದಾನ .

ತಾಯಿ ಕೊಳ್ಳ ತೈಬಿಕಂಡೂ ಕಲ್ಯಾಣ ದೇವ

ತಾಯಿ ಕೊಳ ತೆಬ್ಬಿಕಂಡೂ

ಅವ್ವ ನಿನಗೆ ಸಮಚಾನವೇನೇ

ತಂದಿಗೆ ಎದೆ ತಾನವೇನೇ

ತಂದಿಗೆ ಎದೆ ತಾನವೇನೇ

ನಿನಗೆ ಸಮಚಾನುವೇನೇ

ಯಾಕೆ ಹಡಿದವ್ವಾ ನನ್ನಾ

ತಾಯಿ ಕೊಳ್ಳತಬ್ಬಿಕೊಂಡು

ಕಣ್ಣೀರ ಬಿಡುವ ತಾಳೇ

ಹಾಡಿಕಂಡಳುವ ತಾಳೇ

ಒಳ್ಳೇ ಕಸ್ಟಕ್ಕೀಡಾದನೆಲ್ಲ. ಯೇನು ಮಾಡದೂ ಶಿವನೆ ತನ್ ಮಗುಳು ಅನ್ನಾದು ತಿಳೀದೇ ಆಳೇ ತೀರ ಬೇಕು ಅಂತಾನೆ ಬಾಳಸೇ ತೀರ್ ಬೇಕು ಅಂತಾನೆ. ಈಗ ಯೇನು ಮಾಡ್ತಾಳೆ ರಾಣಿ. ಮಗುಳ  ನನ್ ಮಗುಳ ಈತರ ಬೆಳಸ್ದೆ ಈ ರೀತಿಲಿ ಬೆಳಿಸ್ದೆ ನನ್ ಮಗುಳ ಅನ್ನದ ನನ್ ಗಂಡುಗೆ ಗೊತ್ತಿಲ್ಲ.

ಏಳುಊರಿನ ಗೌಡರ ಕರೀರಯ್ಯ

ಶಿವಶಿವ ಕೋಟೆ ಬಾಗುಲಲ್ಲಿ ಪಂಚಾತಿ ಮಾಡಿರಯ್ಯ ॥ತ॥

ಯೇನು ಮಾಡದಪ್ಪ ಶಿವನೇ ನನ್ ಗಂಡುಗೆ ತನ್ ಮಗುಳು ಆನ್ನದು ತಿಳಿವಲದ್ದು ಆಳೇ ತೀರ್ ಬೇಕು ಅಂತಾನೆ. ಅವುನಿಗೆ ಇವುಳು ನನ್ ಮಗುಳಾ ಅನ್ನದು. ಅನ್ನದು ತಿಳಿಬೇಕು. ನಾನ್ ಏಳೂರ್ ಗೌಡ್ರ ಕೂಡ್ಸಿ ಪಂಚಾತಿ ಮಾಡ ಬೇಕು ಅಂತೇಳಿ.

ಏಳು ಊರಿಗೆ ವಾಲೆ ಬರೀತಾಳೇ

ಏಳೂರು ಗೌಡುಗೋಳು ಕೋಟೆ ಬಾಗುಲಿಗೆ ಪಂಚಾತಿಗೆ ಬಂದಾರೆ ॥ತ॥

ಎಲ್ಲರ್ನು ಸೇರಿಸಿಬಿಟ್ಟು ಈ ತರಕ್ ಈತರ,,, ನನ್ ಮಗುಳ್ನ ನಾನು ಬೆಳಿಸಿದ್ದೀನಿ. ಅವುರಿಗೆ ನನ್ ಮಗಳು ಅನ್ನದು ಅರುವಿಲ್ಲ ಮಗುಳು ಮ್ಯಾಲೆ ಗ್ಯಾನ್ ಏದ್ ಕುಂತವ್ವೆ, ತಿಳಿದೋರು ನೀವು ಹೇಳಿ ಅನ್ನದಾಗಿ ಕೇಳ್ಳಳನ ಅಂತ ಸೇರ್‌ಸ್ಯವಳೆ.) ನ್ಯಾಯ ಸೇರಿಸಿದ್ದಾಳೆ. ಏಳೂರು ಗೌಡುರು ಬಂದು ನ್ಯಾಯಕ್ಕೆ ಕೂತುದ್ದಾರೆ. ವೀರಾಜು ದೊರೆ ಬತ್ತಾನೆ ಬಂದಾಗ ಅಲ್ಲಿರದು. ಈತರುಕೆ ಈತರ ನಿನ್ ಮಗುಳು ಬೆಳಿಸಿರಾದು ನಿಜ. ಮಗುಳು ಅನ್ನದ ನಿನಿಗೆ ಅರುವಿಲ್ಲ

ಮಗುಳಾ ಮ್ಯಾಲೇ ಮನುಸ ಇಡುಬೇಟಾ

ವೀರಾಜು ದೊರೆ.. ಮಗುಳುಗಿಂತ ಕಡುಚಲುವೆ ತರಬೋದು ॥ತ॥

ಮಗುಳಿಗಿಂತ ಕಡು ಚಲುವೆ ತರಬೋದು

ವೀರಾಜು ದೊರೆ ಮಗುಳಿಗಿಂತ ಅತಿ ರಂಬೆ ತರಬೋದು ॥ತ॥

ಮಗುಳಾದುರೇನು?.... ಈಗ ಏಳೂರು ಗೌಡುಗೋಳಿರಾ

ಈಗ ಮಾತಿಗೆ ಮಾತ ಉತ್ತುರ ಕೊಡಿರಯ್ಯೋ

ನನ್ ಮಾತಿಗೆ ಮಾತು ಉತ್ತುರ ಕೊಡಿರಯ್ಯೋ

ಇಲ್ಲುದು ಹೋದರೆ ಏಳು ತುಂಡಿಗೆ ನಿಮ್ಮಾ ಕಡಿತೀನಿ ॥ತ॥

ಏಳುತುಂಡಿಗೆ ನಿಮ್ಮ ಕಡುದೇನೂ

ಅರುಮನಿಗೆ .ಏಳು ಬಾಗಿಲಿಗೆ ತೋರಣ ಕಟ್ಟಿಸೋನೂ ॥ತ॥

ಏನು ಉತ್ತುರ ಕೊಡಬೇಕು ಹೇಳು ಅಂತ ಹೇಳಿ ಏಳೂರು ಗೌಡುಗೋಳು ತಲೆ ಮ್ಯಾಗುಳ ಪೇಟ ತಗುದು ಕೆಳಿಕ್ ಹಾಕಿ ಮಾತ ಕೇಳುತ್ತಾರೆ. ನಿನ್ ಮಗುಳ ನೀನೇ ಅನುಬೋಸೋಕೆ ಏನು ಆದಾರ್‍ಕೈತೆ ಕೊಡು ಅನ್ನದಾಗಿ ಕೇಳುತ್ತಾರೆ. ಅದುಕ್ಕೆ ಯೇನೇಳುತ್ತಾನೆ. ಏಳೂರು ಗೌಡುಗೋಳಿರಾ .

ರಾಗಿ ಹಾಕಿದಿಂದಾಗಿ ಬೆಳಿತೀರಿ

ಏಳೂರು ಗೌಡುಗಳಿರಾ .ನಿಮ್ಮ ಬೆಳೇಯ ನೀವು ತಿನ್ನದಿಲ್ಲುವೇ ॥ತ॥

ರಾಗಿ ಹಾಕಿ ನೀವ್ ರಾಗೀ ಬೆಳಿತೀರಿ

ಗೌಡೂಗಳಿರಾ  ನಿಮ್ಮ ಬೆಳೆಯ ನೀವೇ ತಿನ್ನದಿಲುವೇ ॥ತ॥

ಬಾಳೆ ಹಾಕೀ ಬಾಳೇ ಬೆಳಿತೀರೀ

ಗೌಡೂಗಳಿರಾ ನೀವ್ ಹಾಕಿದ ಬಾಳೇ ನೀವೇ ತನದಿಲುವೇ ॥ತ॥

ಬತ್ತಾ ಹಾಕಿ ಬತ್ತಾ ಬೆಳಿಯೇರೀ

ಏಳೂರ್ ಗೌಡರೇ  ನಿಮ್ಮ ಬೆಳಿಯಾ ನೀವೇ ತಿನ್ನದಿಲುವೇ ॥ತ॥

ಸರಿ ನಮ್ಮ ಬೆಳೆ ನಾವ್ ಅನುಬೋಸ್ದೆ ಮತ್ತಾರಿಗೆ ಬಿಡುಬೇಕು ?

ಅದು ನಿಮ್ ಬೆಳೆ ಇದು ನನ್ ಬೆಳೆ !

ನಿಮ್ಮ ಬೆಳೆಯ ನೀವ್ ಬೋಗ ಮಾಡಿದಂಗೆ

ಗೌಡೂಗಳಿರಾ ನನ್ನ ಬೆಳೆಯ ನಾನ್ ಬೋಗ ಮಾಡುತೀನಿ ॥ತ॥

ನಿಮ್ಮ ಬೆಳೆಯ ನೀವು ಬಿಡಿರಯ್ಯ

ಏಳೂರು ಗೌಡುಗಳಿರಾ . ನನ್ನ ಬೆಳೆಯ ನಾನು ಬಿಡುತೀನಿ ॥ತ॥

ನಿಮ್ಮ ಬಳೆಯಾ ನೀವೂ ಬಿಟ್ಟಾರೇ

ಏಳೂರ್ ಗೌಡುಗಳಿರಾ  ನನ್ನ ಬೆಳೆಯ ನಾನು ಬುಟ್ಟೇ ಕೊಡುತೀನಿ ॥ತ॥

ನಿಮ್ಮ ಬೆಳೆ ನೀವ್ ಬೋಗ ಮಾಡಿದರೆ .ನಿಮ್ಮ ಬೆಳೆ ನೀವ್ ಬೋಗ ಮಾಡದರೇ .

ಏಳು ತುಂಡಿಗೆ ನಿಮ್ಮಾ ಕಡಿತೀನೀ

ಏಳೂರ್ ಗೌಡಗಳಿರೂ ಅರುಮನಿಗೆ ತೋರಣಾ ಕಟ್ಟಿಸೇನು ॥ತ॥

(ನೀವ್ ಬಿತ್ತಿದ್ ಬೆಳೆ ಅದು ನಿಮ್ಮ ಬೆಳೆ . ಇದು ನನ್ ಬೆಳೆ ನಿಮಿಗೆ ನಿಮ್ಮ ಬೆಳೆ ಬೇಕು. ನನಿಗೆ ನನ್ ಬೆಳೆ ಬ್ಯಾಡ್ವಾ. ನನ್ನ ಮಗಳೇ ಇರುಬೋದು ಅದು ನನ್ನ ಬೆಳೆ. ಆ ಬೆಳೆ ನಾನ್ ಬೋಗ ಮಾಡದು ಬ್ಯಾಡ್ವೂ ಓಹೋ ನಿನ್ ಮಗುಳು ನಿನ್ ಬೆಳಾ ಅದನೀನ್ ಬೋಗ ಮಾಡಬೇಕು ಅಂತೀಯಾ .ಈ ಪಂಚಾತಿಗೆ ಕುತುಗಂಡ್ರೆ ನಮಿಗೆ ಹನ್ನೆರಡು ಕರ್ಮ ಸುತ್ತಿಗಳುತ್ತೆ,)

ನಿನ್ ಕರ್ಮ ನೀನ್ ಅನುಬವಿಸ್ಕೊ ಅಂತಾ . ಏಳೂರ್ ಗೌಡುಗೋಳು

ಎದ್ದು ಎದ್ದು ಮನೀಗೆ ಹೋಗುವಾಕೆ

ಶಿವ ಶಿವ ಮಾತಿಗೆ ಮಾತು ಉತ್ತರ ಕೊಟ್ಟುನಲ್ಲಾ ॥ತ॥

ಮಾರಾಣಿಗೆ ಸುದ್ದಿ ಹೋಯ್ತು. ಏಳೂರು ಗೌಡುಗೊಳ್ಗು ನ್ಯಾಯಾ ಕೂಡ್ಲುಲ್ಲ ಕಾನಮ್ಮಾ ನಿನ್ನಾ ಮಗಳನ ನಿನ್ನ ಗಂಡಾ ಅನುಭವಿಸೊ ಕಾಲ ಬಂತು. ಮಾರಾಣಿ ಮಲ್ಲೋಜಿ ಮೈಸೂರು ಮಾರಾಜುರ ತಂಗ್ಯಲ್ಲೋ ಮೈಸೂರು ಮಾರಾಜುರ ತಂಗಿ ಮಾರಾಣಿ ಮಲ್ಲೋಜಿ.

ಅಣ್ಣನಾದ ದಳವಾಯಿಗೆ ನೋಡಯ್ಯ

ಮಾರಾಣಿ ಬದ್ಯುಬಾಲೆ ಬರಾದು ಕಳಸ್ಯಾಳೇ ॥ತ॥

(ಹುಟ್ಟಿದ್ ಗಳಿಗಿಂದ ಈ ತರುಕ್ ಹುಟ್ಟಿದ್ಲು ಈ ತರುಕ್ ಬೆಳುದ್ಲು .ಅವುಳು ಹುಟ್ಟಿದ್ ಗಳಿಗೆ ಸರಿ ಇರುನಿಲ್ಲ .ನಾನು ಮುಚ್ಚು ಮರೇಲಿ ನೆಲ ಮಾಳಿಗೇಲಿ ಸಾಕ್ದೆ. ಈಗ ಮಗುಳು ಅನ್ನ ಅರುವೂ ಇಲ್ದೆ ನನ್ ಗಂಡ ನನ್ ಮಗುಳುನ ಅನುಬೋದಕ್ಕೆ ನಿಂತವ್ನೆ .ಇದಕೆ ಯೇನಾರ ಮಾಡಿ ಉಳಿಸ್‌ಕೊತ್ತೀಯೋ ಇಲ್ಲ ಪ್ರಾಣ ಕಳ್ಕಳಿನೋ . ಅನ್ನದಾಗಿ ಅಣ್ಣುಗೆ ವಾಲೆ ಬರೀತಾಳೆ.)

ಅಣ್ಣ ಬಂದ್ ವಾಲೆ ನೋಡುತ್ತಾನೆ. ಅವುನೇನಂತ ಬರೀತಾನೆ. ಈ ತರ ನಾನು ಬತೀನಿ. ಅನ್ನ ಸುದ್ದಿ ಹೇಳಬೇಡಾ. ಮದ್ ರಾತ್ರೀಲಿ ಬತ್ತೀನಿ ಮುದ್ದು ರಾತ್ರೀಲಿ ನಾನು ಬತೀನಿ .

ಕೋಟೆ ಬಾಗುಲಲಿ ಕಾಯ್ತಾ ನಿಂತುಕಾಳೇ

ನನ್ನ ತಂಗಿ ಮದ್ದು ರಾತ್ರೀಲಿ ಅಲ್ಲೀಗೆ ಬರುತೀನಿ ॥ತ॥

ಅದೇ ಮದ್ದು ರಾತ್ರೇ ವತ್ನಲ್ಲಿ ಅಣ್ಣ ಬತ್ತನೆ ಅಂತ ಕಾಯ್ತಾ ಕೂತಿದ್ದಾಳೆ. ಅದೇ ಮದ್ ರಾತ್ರೀಲಿ ಅಣ್ಣ ದಳಬಾಯಿ ಕುದ್ರೆ ಮ್ಯಾಲೆ ಬಂದ ಬಂದಾಗ .

ಆಣ್ಣನ ಕೊಟ್ಟೆ ತೆಟ್ಟೂತ್ತಾಳೇ। ತಾನ ಎನ್ನಲಿದೇವಾ

ಆಣ್ಣ ಆಣ್ಣ ಅನ್ನಲುತಾಳೇ.

ಅಣ್ಣನ ಬಾಚೀ ತೆಬ್ಬಲು ತಾಳೇ।

ಅಣ್ಣಾ ಕೇಡುಗಾಲ ಕೂಡಿ ಬಂತೂ।

ಮರಣಾಗಾಲ ಕೂಡಿ ಬಂತೂ।

ಈ ಬಾಳು ನಮಗೆ ಆಗೀತಲ್ಲಾ।

ಏಳೂರು ಗೌಡುಗೋಳಿಗು ನ್ಯಾಯ ಕೊಡುನಿಲ್ಲ. ಮಾತಿಗೆ ಮಾತ ಕೊಡುತ್ತಾರೆ. ನೀವ್ ಬೆಳೆದ್ ಬೆಳೆ ನೀವ್ ತಿನ್ನಾಕುಲ್ಲ ಅಂಗೆಯ ನಿನ್ ಬೆಳೆ ನೀವ್ ತಿಂತಿರಿ. ಇದು ನನ್ ಬೆಳೆ ನಾನು ತಿಂತೀನಿ. ಇಲ್ಲಾ ನಿಮ್ ಬೆಳೆ ನೀವ್ ಬುಡಿ ನನ್ ಬೆಳೆ ನಾನ್ ಬುಡ್ತೀನಿ ಅಂತಾರೇ ಮಾತಿಗೆ ಮಾತು ಕೊಡ್ತಾರೆ. ಇದ್ದಕೇನು ಮಾಡ್ತೀಯ ಹೇಳು. ಇದ್ನ ತಪ್ಪಕೆ ಯೇನ್ ಮಾಡ್ತೀಯ ಹೇಳು.

ಹೋಗಿ ಬಿಡ್‌ಬೇಡಮ್ಮ . ಯೇನಂತ ಬೇಡು ಅಂದ್ರೆ..ಮಗುಳಿಗಿಂತ ಸುಂದ್ರಿ ಮಗುಳಿಗಿಂತ ಚಲುವೆ ತಂದು ಕೊಡುತ್ತೀನೀ ಸತ್ತ್ಯ ಮಾಡಿ ಸತ್ತ್ಯಮಾಡಿ ಹೇಳು ನಿನ್ನ ಗಂಡುಗೆ ಮುಂದೆ ಅವುನ ಬಾಯ್ಲಿ ಯೇನ್ ಬತ್ತದೆ ನೋಡುವ್ ತಿಳ್ಕಂದು ಬಾವೋಗು. ಆಗ ಗಂಡಿನ ಬಳಿಗೆ ಬಂದು ಮಾರಾಣಿ ಮಲ್ಲೋಜಿ ..

ನಾನು ಹೆತ್ತಂತ ಮಗುಳಾನಾ

ನಾನು ಹೆತ್ತಂತ ಮಗುಳಾನಾ। ಮಾದೇವನೆ

ನಾನು ಹೆತ್ತಂತ ಮಗುಳೀಗ

ಅಪ್ಪ ನಿನಿಗೂ ಮಗುಳಿಲ್ಲವೇ

ಗಂಡ ನನಿಗೂವೆ ಮಗುಳುಲ್ಲವೇ

ಗಂಡ ಮಗುಳೀಗಿಂತಾವ

ನಿನಗೆ ಚಲುವೆ ತರುತ್ತೀನಿ

ಬಳ್ಳಿ ರೂಪುಳು ಹೆಣ್ಣು ತಂದು ಕಟ್ಟುತೀನೀ।

ನನ್ನ ಮಗುಳಾ ಮ್ಯಾಲೀಗ

ಗಂಡ ಮನುಸನೀ ಇಡುಬ್ಯಾಡಾ

ಅವ್ವ ಕೈಮುಗುದು ಬೇಡುತಾಳೇ

ಅವ್ವ ನಿಡಿಗೋಳಾ ಮಾಡುತ್ತಾಳೇ

ಎಷ್ಟು ಬೇಡಿದುರು . ಕಾಡಿದರು .ಬಪ್ಪುನಿಲ್ಲ...ಗಂಡ ಗಂಡಾ ತಂದಿಗೆ ಮಗುಳು ಯಾವ ಮಕಾ ಬುಟುಗಂಡ್ ದಾರೆ ಉಯ್ಯಾಸ್ಕತ್ತಾಳೆ. ತನ್ ಯತ್ ತಂದೆಯನ್ನು ಈ ಕೋಟೆ ಜನುದ್ ಮುಂದೆ .ಪುರೋಹಿತುರ ಮುಂದೆ ಯಂಗೆ ದಾರೆ ಎರ್ಕತ್ತಾಳೆ .(ಈಗ ತಂದಿಗೆ ಮಗುಳ ದಾರೆ ಉಯ್ಯಿಸ್ಕಳಾದ ಯಂಗೆ ನೀಗೇನೋ ಕೇಡುಗಾಲ ಕೂಡಿ ಬಂದೈತೆ ಆಗಿ ಬುತ್ತೀಯಾ. ಆದ್ರೆ ಮಗುಳು ಯಂಗ್ ಆಯ್ತಾಳೆ. ಈಗ ದೊರೆ ಮನೆ ಮದ್ವೆ ಹದಿನಾರು ಹಳಿ ಜನ ಸೇರ್ತಾರೆ. ಹದಿನಾರ್ ಹಳ್ಳಿ ಜನುರು ಮುಂದೆ ಮಗುಳು ಯಂಗೆ ಹೆಣ್ಣಾಗಿ ನಿತ್ಕತ್ತಾಳೆ. ಸರಿ ಕನೆ ಬಾಂಚತ್ ನೀನೇಳುದು. ಹದಿನಾರು ಹಳ್ಳಿ ಜನ ಮದ್ವೆ ಅಂದ್ರೆ ಸೇರ್ತರೆ ನಿಜ.) ಸೇರಿದ್ರೆ ರೂಪುಳೂ ಹುಡುಗಿ ಅಂದುಳ್ಳ ಹುಡುಗಿ ಹದಿನಾರು ಹಳ್ಳಿ ಜನ ಸೇರ್ತಾರೆ. ದಿಸ್ಟಿ ಆಯ್ತಾದೆ ನೋಡೋ ಜನುಕೆ ಕಾಣ್ಣಂಗೆ .

ಅವುಳ ಮಕುದ್ ಮ್ಯಾಲೆ ಮುಸುಗ ಹಾಕಮ್ಮಾ

ಮಕುದ ಮ್ಯಾಲೆ ಮುಸುಗ ಹಾಕಮ್ಮಾ

ಅವುಳ ತಂದು ನನಿಗೆ ನೀನು ದಾರೆ ಎರಿಯಮ್ಮಾ ॥ತ॥

(ಯಾವ್ ಚಂದುಕ್ಕೆ ದಾರೆ ಎರಿಸ್ಕಾತ್ತಾಳೆ ಅಂದ್ರೆ ಹೌದು ರೂಪುಳ್ಳು ಹುಡುಗಿ ಅಂದುಳ್ಳ ಹುಡುಗಿ ಯಾರಾರ ನೋಡಿ ದಿಸ್ಯೆ ಆಗಿ ಬುಟ್ಪಾತು.ವಿಸಿ ಆಗಿ ಪಟ್ಟ ಅಂತ ಪ್ರಾಣ ಬುಟ್ಪಾಳು ಮಕುದ್ ಮ್ಯಾಲೆ ಮುಸುಕಾಗಿ ತಂದು ದಾರೆ ಉಯ್ಯಿ ಅಂತಾನೆ)

ಈಗ ಅನ್ನು ಮುಂದುಕು ಬಂದು ಮಾರಣಿ ಮಲ್ಲೋಜೀ ಅಣ್ಣಾ ಅಣ್ಣಾ ಅವುದು ಯಾರು ಹೇಳಿದ್ರು ಒಪ್ಪಾಲಿಲ್ಲ. ಈ ತರುಕ್ ಈತಣ .ನನು ಒಂದು ಹೇಳಿದ್ರೆ ಅವುರು ಒಂದ್ ಹೇಳ್ತಾರೆ ಚಂದುಳ್ಳೀ ಹುಡುಗಿ ಅಂದುಳ್ಳಿ ಹುಡುಗಿ ಮಕುದ್ ಮ್ಯಾಲೆ ಮುಸುಕಾಸಿ ದಾರೆ ಉಯ್ಯಿ ಅಂತಾರೆ ಮುಂದೇನ್ ಮಾಡ್ಬೇಕು ಅನ್ನ ದಾಗಿ ಕೇಳುವಾಗ ಮುಂದೇನ್ ಮಾಡ್ಬೇಕು ಅಂದ್ರೇ ತಂಗೇ ತಂಗೆ .ನಾಳೆ ಮದ್ ರಾತ್ರೀಗೆ ಮೈಸೂರಿನಿಂದ ಇಲ್ಲಿಗೇ ಬತ್ತೀನಿ. ನೀನೊಬ್ಬು ಕಾದು ಕೂತಿರು ಇನ್ನೊಮ್ಮೆ ತಂಗಿ ಕಿರಿಯೋಳು ಲೀಗೋಜಿ ಮನೇಲಿದ್ದಾಳೆ. ಮುಸುಕಾಕಿ ದಾರೆ ಉಯ್ಯಿ ಅಂತ ಹೇಳಿದ್ದಾನಲ್ಲಾ .

(ಹೋಗಿ ಮೈಸೂರಿಗೋಗಿ ತಂಗಿ ಕರ್‌ಕಂಡು ಬಂದು ಇವುಳನ್ನೇನಾರ ಮಾಡಿ ಮೋಸ ಮಾಡಿ ಪಾರ್ಸಲ್ ಮಾಡಿ ಮುಚ್ಚು ಮರೇಲಿ ತಂಗೀಯ ದಾರೆ ಎರುದ್ ಕೋಡಾನ ಅನ್ಕಂಡು ನಾಳೆ ಮದ್ ರಾತ್ರೀಗೆ ಕಾದು ಕೂತಿರು ಅಂತ ಹೇಳಿದ್ದಾನೆ. ಆ ದಿನ ಮದ್ ರಾತ್ರೀಗೆ ಮಾರಾಣಿ ಮಲ್ಲೋಜಿ ಕಾಯ್ಕಂಡ್ ಕೂತಿದ್ದಾಳೆ. ಅದೇ ದಿನ ಮದ್ ರಾತ್ರಿ ಮೈಸೂರ ಮಾರಾಜ ತನ್ನ ಕಡೀ ತಂಗಿ ನಿಂಗೋಜಿ ಕರ್‌ಕಂಡ್ ಬತ್ತಾನೆ. ಈತಂಗೆ ಕೆಯಿನ್ ಕೊಟ್ಟು. ತನ್ ಮಗುಳ ಕರಕಂಡೋಗಿ ನೆಲಮಾಳಿಗೇಲಿ ಅವಿಸಿದ್ದಾಳೆ. ತಂಗೇ ತಂದು .ಗಂಡುನ್ ಎದುರಿಗೆ ನಿಲ್ಲಿ ಆಯ್ತು ಕನಪ್ಪ ಎಲ್ಲ ನಿನ್ನಿಚ್ಚೆ ಯಂಗಾಗ್ಲಿ. ಯೇನ್ ಕರ್ಮ ಬತ್ತದೋ ಆದ ನೀನೇ ಅನುಬೋಸ್ಕೋ .ದಾರೆ ಊದ್ ಬುಡಾನ್ ಆಹಾ ಶಬಾಷ್ ಬಾಂಚತ್ ಈಗ್ ಮಚ್ಚೆ ಕನೆ ಮಡ್ದಿ ನಿನ್ .

(ರೂಪುಳ್ಳು ಉಡುಗಿ ವಿಸ್ಟಿ ಆಗಿ ಪಟ್ ಅಂತ ಜೀವ ಬುಟ್ಪಾಳ ಮುಸುಗಾಕಿ ದಾರೆ ಉಯ್ಯಿ ಅಂತ ಇವ್ನೆ ಹೇಳಿದ್ನಲ್ಲ..)

ತಂಗೇ ಕರ್‌ಕಂದು ಬಂದು ತನ್ನ ಮಗುಳ ಬಣ್ಣ ತಿದ್ದುತ್ತಾಳೆ. ತಂಗೆ ಸುಂಗಾರ ಮಾಡುತ್ತಾಳೆ. ತಂಗೆ ಮುಕುದ್ ಮ್ಯಾಲೆ ಮುಸುಗಾಕಿ. ಮುಕದ್ ಮ್ಯಾಲೆ ಮುಸುಗಾಕಿ ಕುಂಡೋಗಿ .ತಂಗೆ ನನ್‌ಗೋಳು ನಿನ್ ಗೋಳು ಕನವ್ವ ಅಂತ ಹೇಳಿ. ದಾರೆ ಅಟ್ಟಿ ವಳುಗೆ ಅಪ್ಪುಗೆ ಮಗುಳು ದಾರೆ ಉಯ್ಯತ್ತಾರಲ್ಲ ಅಂತ ಇಂಗ್ ಮಾಡ್ತವ್ರೆ ಅಂತ ಜನ ಅನ್ನಳ್ಳಿ ತಂಗೆಗೆ ಎಲ್ಲ ಹೇಳುತ್ತಾಳೆ. ಮಗುಳು ಈ ಕಡೆ ಪಾರ್ಸಲ್ ಮಾಡ್ಸವಳೆ. ತಂಗೇಗ್ ಮುಸುಕಾಕಿ ಕರ್‌ಕಂಡ್ ಬಂದು ನಿಲ್ಲಿಸ್ತಾಳೆ. ಚಪ್ಪರದಟ್ಟೀಲಿ ಆಗ

ದಿಟ್ಟೀಸಿ ಅವಳ ಮಕವ ನೋಡುತಾನೇ

ಶಿವ ಶಿವ ಕಡಿ ಕಡೀನೆ ಹಲ್ಲ ಕಡೀತಾನೇ ॥ತ॥

ನೀನು ಯಾರೇ ಲವಾಡಿ ಬಾಂಚತ್ತು

ನೀನು ಪುರುಸ್ಯಲ್ಲಿ ಮೈಸೂರೋರು ಮಾಡೇ ಅವುರಲ್ಲ ॥ತ॥

(ಮಕಾ ನೋಡಿದ್ರೆ ಗೊತ್ತಾಗಾಕುಲ್ವ. ಮುಸುಗ್ ತಗುದ್ ಮಕ ದಿಟ್ಟಿಸಿ ನೋಡ್ತಾನೆ. ಇವುಳು ನನ್ ನಾದ್ನಿ ಅನ್ನದ ಗೊತ್ತಾತದೆ. ಮೋಸ್ದಲ್ಲಿ ತಂದು ನನ್ ನಾದ್ನಿ ದಾರೆ ಉಯ್ಯಬೇಕಾರೆ ಇದು ಮೈಸೂರರು ಮಾಡಿದ ಮೋಸ ಅನ್ನದಾಗಿ ಗೊತ್ತಾತದೆ.)

ಅವುಳ ಯಣಿಗಾಕಿ ಮಣ್ಣು ಪಾಲು ಮಾಡುತ್ತೀನೀ
ಶಿವಶಿವ ಮುಂದೆ ಕದನಾ ಬರುವೋದೂ ॥ತ॥

ನಿನ್ನುನ್ ಇಲ್ಲಿಗೆ ತಂದನು ಯಾವೋನು? ನಿನ್ನುನ್ ಸುಂಗಾರ ಮಾಡ್ದೋಳು ಯಾವಳು ಇಲ್ಲಾ ಅಂದ್ರೆ ತುಂಡು ತುಂಡಿಗೆ ಕತ್ತುರಿಸ್ತೀನಿ ಅಂತಾನೆ. ಆಗ ಅವಳು ಕಂಡುದ್ ಕಂಡಂಗೆ ಹೇಳುತ್ತಾಳೆ. ನಮ್ಮಣ್ಣ ಮದ್ ರಾತ್ರೀಲಿ ನನ್ನ ಕರ್ ಕಂಡ್ ಬಂದ. ನಮ್ಮಕ್ಕ ನನ್ನ ಸುಂಗಾರ ಮಾಡಿ ತಂದು ನಿಲ್ಲಿಸಿದ್ಲು ಅಂತಾಳೆ. ಇದು ಮೈಸೂರರ ಮೋಸ .

ಅವರ ಯಣ್ಣಿಗಾಕಿ ಮಣ್ಣು ಪಾಲಾ ಮಾಡುತೀನೀ
ಶಿವ ಶಿವ ಮೈಸೂರ್ ಮ್ಯಾಲೆ ಸಿಟ್ಟೂ ಬಂದಾದೇ ॥ತ॥
ಬಣ್ಣದ ವಾಲೆ ಬರುದು ಕಳುಸ್ತಾನೇ
ಶಿವ ಶಿವ ಮೈಸೂರಿಗೆ ಯೇನಂತ ಬರುದು ಕಳಿಸ್ಯಾನೂ ॥ತ॥

ಯೇನಂತ ವಾಲೆ ಬರೀತಾನೆ ಮೈಸೂರು ದೊರಿಗೇ

ಗಂಡುಸಾದರೆ ಯುದ್ದಕೆ ಬಾರಯ್ಯ
ಮೈಸೂರು ದೊರೆ ಹೆಂಗುಸಾದರೆ ಹಿಂದಕೆ ನಿಲ್ಲಯ್ಯೋ ॥ತ॥
ಸೀರೆ ಉಟ್ಟುಕೋಳು ಸಣ್ಣ ಮುತ್ತು ಕಟ್ಟಿಕೋಳೂ
ನನ್ ಬಾವ ನೀನು ಹೆಂಗುಸಾದರೆ ಹಿಂದುಕೆ ನಿಂತುಕೋಳೊ ॥ತ॥
ಕುರಿಯ ಹಿಂಡಿಗೆ ತ್ವಾಳಾ ನುಗ್ಗಿದಂಗೇ
ನಿನ್ ಮೈಸೂರಾಗಳು ಗೋಳಾ ನಾನೇ ಮಾಡೇನೂ ॥ತ॥
ಸೀರೆ ಉಟ್ಟುಕೋಳೊ ಸಣ್ಣ ಮುತ್ತು ಕಟ್ಟಿಕೋಳೋ
ಹೆಂಗುಸಾದರೆ ಕಣ್ಣಿಲ್ಲಿ ನೀರು ಬುಟ್ಟು ನಿಂತುಕೋಳೋ ॥ತ॥
ಹೆಂಗುಸಾದರೆ ಹಿಂದುಕೆ ನಿಂತುಕೋಳೋ
ಮೈಸೂರಾ ದೋರೆ ಗಂಡುಸಾದುರೆ ಜಗುಳಕೆ ನೀಬಾರೋ ॥ತ॥

(ಹೋಯ್ತು ವಾಲೆ ಈ ಯಾವ್ ನುಡಿ ಬರ್ದಾವ್ನೆ ವಾಲೆ ವಳುಗೆ. ಹೆಂಗುಸಾದ್ರೆ ಹಿಂದುಕ್ ನಿಂತ್ಕೋ ಗಂಡುಸಾದ್ರೆ ಯುದ್ದುಕೆ ಬಾ ಅಂತ ಬರದವನೆ. ನೀನು ರಾಜನೇಯ. ನಾನು ರಾಜನೇಯ. ನಿಮಗು ಸೇಮಂಟು ನನಿಗೂ ಸೈಮಂಟು. ಯುದ್ದ ಮಾಡಬೇಕು. ನೀನು ಗೆಲ್ಲಬೇಕು ಇಲ್ಲ ನಾನು ಗೆಲ್ಲಬೇಕು. ಯುದ್ದ ಮಾಡೇ ತೀರ್‌ಬೇಕು. ಗಂಡುಸಾದ್ರೆ ಯುದ್ದಕೆ ಬಾ ಇಲ್ಲ ಹೆಂಗುಸಾದ್ರೆ ಹಿಂದುಕ್ ನಿಂತ್ಕೋ ಇನ್ ಬರಬೇಕೋ ಬುಡುಬೇಕೊ.)

ಈಗೇನು ಮಾಡುತ್ತಾನೆ. ಈಗ ಯುದ್ದಕೆ ಹೋಗಬೇಕು. ಈಗ ಯುದ್ದಕ್ ನುಗ್ಗು ಮೈಸೂರು ಚಾಮುಂಡಿ ದೇವಿ ಮನೆ ದೇವುರೂ  ಮನೆಯ ದೇವುರಿಗೆ ಮಾತು ಕೇಳಬೇಕು. ಮನೇ ದೇವುರು ಒಪ್ಪಿಗೆ ಕೊಟ್ರೆ ಯುದ್ದುಕೆ ಹೋಗಬೇಕು. ಇಲ್ದೆ ವಾದ್ರೆ ಯುದ್ದಕ್ ಹೋಗ ಅಂಗಿಲ್ಲ ಚಾಮುಂಡಿ,,,,ಚಾಮುಂಡೇಶ್ವರಿಗೋಗಿ ಪೂಜೆ ಮಾಡಿ ವರಾ ಕೇಳುಬೇಕು. ಅಂತ ಹೇಳಿ ಹೋಗುತ್ತಾನೆ. ಚಾಮುಂಡಿ ದೇವಿಗೆ ಎಲ್ಲಾ ಪೂಜೆ ಪರಸಾದ ಕೇಳುತ್ತಾನೆ. ನಾನು ಪಿರಿಯಾಪಟ್ಟಣುದು ಮ್ಯಾಲೆ ದಂಡೆತ್ತಿ ಹೋಗಬೇಕು. ದಂಡು ತಗಂಡು ಹೋಗಿ ನಾನು ಗೆದ್ದು ಬತ್ತೀನಿ ಅನ್ನದಾದ್ರೆ ಬಲುಗಡೆ ಕೊಡು ಇಲ್ಲ ಅನ್ನದಾದ್ರೆ ಎಡಗಡೆ ಪರಸಾದ ಕೊಡವ್ವಾ ಅನ್ನದಾಗಿ ಕೇಳುತ್ತಾನೆ. ಇಲ್ಲಾ ನೀಲಿ ಮ್ಯಾಲ್ ಬಂದು ದಿಟ್ಟಿಸಿ ಬಾಯ್ ಬುಟ್ ನನಿಗೆ ಹೇಳು.

ಚಾಮುಂಡಿಯ ಪೂಜಾ ಪಲುವೇ। ತಾನಾ ಎನ್ನಲಿದೇವೀ

ಈಗ ಮುಡಿ ಉಳ್ಳಿ ಉಳ್ಳಾತವನೇ

ಕಾಯಾ ವಡುದು ಕಯ್ಯಾಶಿವನೇ ಮುಗಿಯಾತಾನೇ

(ಚಾಮುಂಡೇಶ್ವರಿಗೆ ಕಯ್ ಮುಗುದೇನು ಹೇಳುತ್ತಾನೆ. ಚಾಮುಂಡೇಶ್ವರಿ ಯೇನ್ ಜಾನ ಮಾಡುತ್ತಾಳೆ. ಇವುನು ಪಿರಿಯಾಪಟ್ಟಣುದ ಮೇಲೆ ಯುದ್ದಕೆ ಹೋಯ್‌ತೀನಿ. ಅಂದ್ರೆ ಯೇನ್ ಮಾಡಾದು. ಈ ಪಿರಿಯಾಪಟ್ಟಣದ ದೇವಿ ಅರಿವು ಅವುಳು ಉರಿಗಣ್ಣು, ಉರಿನೇತ್ರ,ಇವುನು ದಂಡೇಲ್ಲನು ತಗಂಡು ಅಲ್ಲೋದ್ರೆ .ಅವುಳು ಉರಿಗಣ್ಣು ದಂಡಿಗಲ್ಲ ತಗುಲಿಬುಟ್ಟು ಸುಟೋಯ್ತುದೆ. ಪಿರಿಯಾಪಟ್ಟಣುದಮ್ಮ ಅವುಳಿಗೆ ತಲೆಗೂದುಲಿಗೆಲ್ಲ ಒಂದೊಂದು ಉರಿಗಣ್ಣು, ಉರಿನೇತ್ರ,,,,,ಈಗ ಅವುಳಿದ್ಯಾಗ್ಲೆ ನನ್ ಮೈಸೂರ್ ದಂಡು ಯುದ್ದಕ್ ಹೋದ್ರೆ ಸುಟ್ಟೋತದಲ್ಲಿ ಯೇನ್ ಮಾಡಾದು )

ಎರಡೊರುಸುರ ಮಗೀನ್ ಮ್ಯಾಲೆ ನೀಲಿ ಬಂದೇಳುತ್ತಾಳೆ. ಮೈಸೂರು ಚಾಮುಂಡಿ ಒಂಬತ್ತು ದಿನದೋರಿಗೆ ತಡೀರಿ,,,ಒಂಬತ್ ದೀನೂದ್ ಮ್ಯಾಲೆ ಬತ್ತೀನಿ. ಅನ್ನುದಾಗಿ . ಈಗಾ ಒಂಬತ್ ದಿನುದುವರಿಗು ನಿನ್ನ ಕಾಯ್ತೀನಿ. ಒಂಬತ್ ದಿನುದ್ ಮ್ಯಾಲೆ ಯುದ್ದಕ್ ಹೋಗುಕೆ .

(ಆಗ ನಂಜಯ್ನೋರು ಈ ಚಾಮುಂಡಿ ಮೇಲೆ ಹೊರೆ ಹಾಕಿ ಹೋಗುತ್ತಾರೆ. ಈಗ ಚಾಮುಂಡಿ ಯೇಚ್ನ ಮಾಡುತ್ತಾಳೆ. ಆ ಪಿರಿಯಾಪಟ್ಟಣುದಮ್ಮುನ್ನ ಯಂಗಾರ ಮಾಡಿ ಸೆರೆ ಹಿಡೀಬೇಕು. ಅವುಳ ಸೆರೆ ಹಿಡುದ್ರೆ .ಇವುನ್ ದಂಡು ಜಯಿಸ್ಕಂಬತ್ತದೆ ಇಲ್ದೆ ವಾದ್ರೆ ಸುಟ್ಟೋಯ್ತುದೆ .)

ಯೇನು ರೂಪ ತಾಳುತ್ತಾರೆ. ಪಿರಿಯಾಪಟ್ಟಣದುದಮ್ಮನತಾಕೆ ಬತ್ತಾರೆ. ನೋಡಮ್ಮ ನೀನು ನಾನು ಒಂದೆ ದೇವ್ತೀರು. ನೀನು ನಾನು ಬಂದೆ ಸಮ ಜೋಡಿಲ್ಲಿರಬೇಕು ನಮ್ಮ ಮುಂದೆ ಯಾರು ಇಲ್ಲ ಕನಮ್ಮ ನೀನು ನಾನು ಜೊತೆಯಲ್ಲಿರಬೇಕು .ಆತು ಕಾನುಮ್ಮ ನೀನು ನಾನೂ ಬಂದೆಯ. ನೀನು ದುಸ್ಟುವಾದ ದೇವತೆ. ನಾನೂ ದುಸ್ಟುವಾದ ದೇವತೇ .ಅಂಗೆ ಹೊಂದಿಕೊಂಡು ಬಾಳಾನ ಹೊಂದಿಸುಣ್ಣಾನ ಹೊಂದಿಗಿರಾನ ಅಕ್ಕ ಅಕ್ಕ ನೀನು ನನ್ನ ತಲೆ ಬಾಚು ನಾನು ನಿನ್ನ ತಲೆ ಬಾಚುತ್ತೀನಿ ನೀನು ಯಾವ್ ಚಂದುಕೆ ತುರುಬ್ ಹಾಕ್ತೀಯ ಹಾಕು. ನಾನ್ ಯಾವ್ ಚಂದುಕೆ ತುರುಬ್ ಹಾಕ್ತೀನೋ ಹಾಕ್ತೀನಿ. ಹಾಕೋ ಮದುಲ್ ಯಾವ್ದು ಚಂದ ನೋಡಾನ್  ಆಯ್ತು ಚಾಮುಂಡೇಶ್ವರಿ ನನ್ ತಲೆ ಬಾಚಿ ತುರುಬ್ ಹಾಕ್ತೀಯೋ ಹಾಕು ನೋಡಾನ. ನಾನು ಆಮೇಲೆ

ಹಾಕ್ತೀನಿ. ಆಕುತನಮ್ಮ ಅಂತ ಹೇಳಿ ಚಾಮುಂಡಿಗೆ ತಲೆ ಬಾಚಿ ತುರುಬ್ ಕಟ್ಟಿ ಹೂ ಮುಡುಸ್ತಾಳೆ. ಈ ಚಂಚ ನನಿಗೊಪ್ಪೊದಿಲ್ಲ ತುರುಬೂ ನಾನು ಹಾಕಿ ತೋರಿಸ್ತೀನಿ. ನೋಡು ತುರುಬೂ .ಯಾವ್ ಚಂದು ಯಾವ್ ಅಂದ ಕಾಣುಸ್ತದೆ ನೋಡು ತುರುಬೂ .ನಿನ್ನ ತುರುಬಿಗುವೆ ನನ್ನ ತುರುಬಿಗುವೆ ಯಾಷ್ಟು ಚಂದ ಅನ್ನದ ನೋಡುವಿಯಂತೆ ಅಂತೆ ತಲೆ ಬಿಚಳಂಗೆ ಹಿಂದೆ ಕೂತ್ಗಂಡು .ಮಂತ್ರುದ್ ಬೂದಿ ಮಾಯುದ್ ಬೂದಿ ಮಡುಲಲ್ಲಿ ಕಟಿಗಂಡು ಮರೆಯಾಗಿ ಹೋಗಿದ್ದಾಲಲ್ಲಾ ಚಾಮುಂಡಿ ಈಗ್

ಮುಡಿಕಾತೀಯಾ ನೋಡು ತುರುಬಾಕೂತಾನಾ। ತಂದನ್ನು ತಾನಂದೇ ನಾನಾ

ಚಾಮುಂಡಿ ಮಂಡೆಯ ಏಡರುವ ನೋಡಯ್ಯ।

ಅಯ್ಯ ಮಂಡಯ ವಡುದು ತುರುಬಾಕೂವಾಗ ।

ಮಂಕಿನ ಬೂದೀ ತಗುದು ಮಂಡಿಗೆಲ್ಲ ಹಾಕುತಾಳೇ।

ಮಂಕಿನ ಬೂದೀ ತಗದು ತಲಿಗೆಲ್ಲ ಹುಯ್ಯುತ್ತಾಳೆ ।

ಉರಿಗಣ್ಣ ನೋಡೂ ಉರಿಗಾತಿ ನೋಡಯ್ಯ।

ಗಂಟೆ ಗಳಿಗ್ಗೆ ಮಂಕು ಆದುಳಲ್ಲಾ ।

ಮಂಕಿನ ಬೂದಿ ಮಂಕಾಗಿ ಕೈಡಿವಾದೇ।

ಚಾಮುಂಡಿ ರೂಪೂ ಮಂಕೀನ ಬೂದ್ಯಲ್ಲ ।

ಮಂಕೀನ ಬೂದೀನಳುಗೆ ಮಂಕಾಗಿ ಹೋಗ್ಯಾಳೇ।

ಮುಂದೆ ನೋಡಿ ಮಾರಿ ಚಾಮುಂಡಿ ದೇವಿ ಉಲ್ಲಿನ ಪಂಜುರದಲ್ಲಿ ಪಿರಿಯಾಪಟ್ಟುಣದಮ್ಮನ್ನ ಸೆರೆ ಹಿಡಿದೂ .
(ಇವತ್ತು ಚಾಮುಂಡಿ ಬೆಟ್ಟದಲ್ಲಿ ನೋಡದ್ದೀಯೇನಪ್ಪ ಉಕ್ಕಿನ ಪಂಜುರದಲ್ಲಿ ಪಿರಿಯಾಪಟ್ಟುಣದ ಅಮ್ಮುನ್ನ ಸೆರೆ ಹಿಡುದು ಇಟ್ಟಿರಾದ ಚಾಮುಂಡಿ ಬೆಟ್ಟುದ ಮೇಲೆ)
ಈಗ ಯುದ್ದಕ್ಕೆ ನುಗ್ಗುವಾಗ ಚಾಮುಂಡಿ ದೇವಿ ಏಳುವರಸುದ ಮಗೀನ ಮ್ಯಾಲೆ ಬಂದು ಹೇಳುತ್ತಾಳೆ. ನೀನು ಯುದ್ದಕ್ಕೆ ಹೋಗಪ್ಪ ನಾನು ನಿನ್ನ ಬಲುಕಿದ್ದೀನಿ ಅಂತಾಳೆ ಆಗ ಮೈಸೂರು ದೊರೆ .

ಏಳು ಸಾವಿರ ದಂಡ ತಕ್ಕಂಡೂ

ನಾಳೆ ಮದ್ಯಾನಕೆ ಬರುತ್ತೀನೀ ॥ತ॥

ನಾಳೇ ಏಳು ಸಾವಿರ ದಂಡ ತರುತೀನೀ

ನಾಳೇ ಮದ್ಯಾನುಕೆ ಬರುತೀನೀ ॥ತ॥

ನಾಳೇ ಮದ್ಯಾನುಕೆ ಬರುತೀನಿ।

ಬಾವಾ ವೀರಾಜು ದೊರೆ ಯುದ್ದಕ್ಕೆ ಸಿದ್ದುನಾನೋ ॥ತ॥

ನಾಳೇ ಮದ್ಯಾನುಕ್ಕೆ ಪಿರಿಯಾಪಟ್ಟಣಕ್ಕೆ ಮೈಸೂರು ದಂಡು ಹೋಗುತ್ತಾದೆ. ಚಿರತೆಬಾಗುಲು ಅಂತೈತೆ. ಚಿಂಚಿತಿಜ ಬಾಗುಲಿಗೆ ಬಂದು ಮೈಸೂರು ದಂಡು ಬಂದು ಚಿಂಚಿತಿಜ ಬಾಗುಲಿಗೆ ದಂಡು ಬಂದು ನಿಂತ್ಕಂಡು .ಈಗ ಮೈಸೂರು ದಂಡು ಬಂದು ಸಿದ್ದುವಾಗಿದೆ. ಈಗಾ ಪಿರಿಯಾಪಟ್ಟುಣದಮ್ಮುನ ಬಲ ವೀರಾಜು ದೊರೇಗಿಲ್ಲಾ

ಪಿರಿಯಾಪಟ್ಟಣದಮ್ಮನ ಬಲಾ  ಇವನ ಮನೆ ದೇವುರು ಪಿರಿಯಾಪಟ್ಟುಣುದಮ್ಮ ಮೈಸೂರಿಗೋಗ್ಯವಳೇ . ಅಲ್ಲಿ ಸೆರೆ ಹಿಡಿದು ಇಟ್ಟವಳೇ

ಯುದ್ದಕ್ಕಾಗಿ ಸಿದ್ದಾಗಿ ನಿಂತುರಲ್ಲೋ

ಶಿವ ಶಿವ ಕತ್ತಿ ಚಾಕ ತೋರಿ ನಿಂತುರಲ್ಲೋ ॥ತ॥

ಚಾಮುಂಡಿ ಮಾಯಿದು ರೂಪಲ್ಲಾ

ಪಿರಿಯಪಟ್ಟುಣದ ದಂಡು ಇವುರ ಮ್ಯಾಲೆ ಮಾಡುಲಿಲ್ಲುವಲ್ಲಾ ॥ತ॥

ಪಿರಿಯಾಪಟ್ಟುಣ್ಣವನ್ನು ಯುದ್ದುದಲ್ಲಿ ಸೋಲಿಸಿಬುಟ್ಟೆ .

(ಈಗ ಕೊಡಗಿನ ಜಿಲ್ಲೆಗೆ ಆಚೆಗೆ ಪಿರಿಯಪಟ್ಟುಣದ ಗಡಿ .ಈಗ ಪಿರಿಯಪಟ್ಟುಣಾ ಸೆರೆ ಹಿಡಿದಾಯ್ತು. ಈಗ ಇದು ಮೈಸೂರು ದೊರೆಗೆ ಸೇರಾಯ್ತು. ಇದು ಮೈಸೂರು ಸೀಮಾಯ್ತು. ಇನ್ನ ಅತ್ಲಾಗಿ ಕೊಡಗಿಗೆ ಯಾವುದು ಗಡಿ ಮಾಡ್ತಾನೆ.)

ಕೊಡಗಿನ ಯಾವುದು ಗಡಿ ಮಾಡುತ್ತಾರೇ . ಮಡಿಕೇರಿ ಗಡಿ ಮಾಡುತ್ತದೆ. ಆಗ

ಪಿರಿಯಪಟ್ಟಣ ನೋಡೋ ದಮ್ಮಯ್ಯ

ಗ್ಯಾರೇ ಎಳೆದು ಮೈಸೂರು ಅಂತ ಮಾಡಿಕಂಡರಲ್ಲ ॥ತ॥

ಕೊಡಗೀಗ್ಯಾವುದ ಗಡಿಯ ಮಾಡುತಾರೇ

ಶಿವ ಶಿವ ಮಡಿಕೇರಿಯ ಗಡೀಯ ಮಾಡುತಾರೇ ॥ತ॥

ಮಡಿಕೇರಿ ಗಡಿ ಮಾಡುತ್ತಾರೆ. ರಾತ್ರುನ್ನಾಗ ಅಣ್ಣ ತಂಗಿ ಕತೆ ಹೇಳಿದ್ನಲಪ್ಪ .ಅದು ಇಲ್ಲಿಂದಿತ್ಲಾಗಿ ಬರ್ತಾದೆಯ ಕತೆ.

(ರಾತ್ರಿನಾಗ್ ಅಣ್ಣ ತಂಗಿ ಕತೆ ಹೇಳಿದ್ನಲ್ಲ ಅದು  ಇಲ್ಲಿಂದ ಮುಂದ್ಕೆ ಅದು ಅಕಡಿಕೆ ಹೊಟದೆ)

ಇಲ್ಲಿಗೆ ಇದು ಮುಕ್ತಾಯುವಲ್ಲೋ   .

# ಮಾಗಡಿ ಕೆಂಪೇಗೌಡ

ಅಯ್ಯ ಮಾಗುಡಿ ಕೆಂಪೇಗೌಡಾ .

ಮಾಗುಡಿ ಕೆಂಪೇಗೌಡ, ಮಾತಿನಲ್ಲಿ ತುಂಬಾ ಜಾಣಾ॥ ತಂದೆನ್ನಾ ತಾನಾಂದೇ ನಾನಾ॥

ಅಯ್ಯ ಮಾಗುಡಿ ಕೆಂಪೇಗೌಡ, ಮಾತಿನಲ್ಲಿ ತುಂಬಾ ಜಾಣಾ।

ಅಯ್ಯ ಕುಲುದಲ್ಲೊಕ್ಕುಲು ಗೌಡ, ಮಾಗಡಿ ಕೆಂಪೇಗೌಡಾ।

ಅವ್ವನಾಗಾರುಸುತ್ತಿನಾರುಮಾನೆ, ಯೇಳು ಸುತ್ತಿನ ಕಲ್ಲು ಕೋಟೇ ।

ಅವುನಿಗೇಳು ಕೊಪ್ಪರೀಕ್ಯಾಣ, ಯೇಳುಗೂಡಿನ್ ದೊಡ್ಡು ದಾನಾ ।

ಯೇಳು ಕೊಪ್ಪರೀಕ್ಯಾಣ, ಯೇಳು ಗೂಡಿನ್ ದೊಡ್ಡು ದಾನಾ।

ಯೇಳು ನೂರು ಕಂಡೂಗ ಯೇಳು ವಾಡೆ ರಾಗಿ ಬತ್ತಾ।

ಅಯ್ಯ ದೊಡ್ಡ ದರುಪತೀನಲ್ಲಿ ಬದುಕಿದ ಕೆಂಪೇಗೌಡಾ।

ಮಾಗುಡಿ ಕೆಂಪೇಗೌಡೂಗೆ ಆರು ಸುತ್ತಿನಾರುಮಾನೆ, ಏಳು ಸುತ್ತಿನ ಕಲ್ಲುಕೋಟೆ, ಆರು ಕೊಪ್ಪರಿಕೆ ಅಣ ಏಳು ಗೂಡಿನ ದೊಡ್ಡು ದನ, ಏಳು ನೂರು ಕಂಡುಗ, ಏಳುವಾಡ ರಾಗಿ ಬತ್ತೈತೆ .ಅವುನಿಗೆ..

ಸಕುಲ ಸಂಪತ್ತೈತೆ, ಸಂತಾನ ಇಲ್ಲುವಲ್ಲಾ।

ಅವುನಿಗೆಇ ಸಕುಲ ಸಂಪತ್ತೈತೆ, ಸಂತಾನವಿಲ್ಲುವಲ್ಲಾ

ಅವುನಿಗೆ ಹಿರಿಯಾ ಬಾಗ್ಯೇವೈತೆ, ಬಂದಿಗುಣ್ಣೊ ಮಗಾನಿಲ್ಲಾ।

ಅವುನಿಗೆ ಹಿರಿಯಾ ಬಾಗ್ಯೇವೈತೆ, ಬಂದಿಗುಣ್ಣೊ ಮಗಾನಿಲ್ಲಾ।

ಅವುನು ಮದಿದ್ಯಾಗ ನ್ನೆಡೊನರ್ಸ್, ಮಕ್ಕುಳ ಕಂಡೋನಲ್ಲಾ ।

ಮದಿವ್ಯಾಗನ್ನೆಡ್ರೊಸನ್, ಮಕ್ಕುಳ ಕಂಡೋನಲ್ಲಾ।

ಅವುನಾ ಮದಿವೇ, ಹಾಲುಕಡಿಕೆ ಲಿಂಗದಳ್ಳಿ।

ಹಾಲುಕುಡಿಕೆ ಲಿಂಗುದಳ್ಳಿ, ವಾವೇಗೌಡನ ಮಗಳು।

ವಾಬೇಗೌಡನ ಮಗಳು, ಹೆಸರೂ ಕಾವೇರಮ್ಮ।

ಮಾಗಡಿ ಕೆಂಪೇಗೌಡುನ ಮಡದಿ ಹಾಲುಕುಡಿಕ ಲಿಂಗದಳ್ಳಿ, ವಾಬೇಗೌಡನ ಮಗಳು ಕಾವೇರಮ್ಮ

ಅವರ ಮಡದಿ ಕಾವೇರಮ್ಮ ಕಣ್ಣೀರ ಬುಡುತಾಳೇ।

ಗಂಡಾ  ಸಕುಲ ಸಂಪತ್ತೈತೆ, ಸಂತಾನವಿಲ್ಲುವಲ್ಲ।

ನನಿಗೆ ಹಿರಿಯಾ ಬಾಗ್ಯೇವೈತೆ, ಬಂದಿಗುಣ್ಣೊ ಮಗನಿಲ್ಲಾ।

ಗಂಡಾ.. ಸಕುಲವಿದ್ದಾರೇನು, ಸಂತಾನಲ್ಲುದು ಮ್ಯಾಲೇ।

ನನಿಗೆ ಸಕುಲವಿದ್ದಾರೇನು, ಸಂತಾನಿಲ್ಲುದು ಮ್ಯಾಲೇ।

ನನಿಗೆ ಬಾಗ್ಯಾವಿದ್ದುರೇನು, ಬಾಲಕ ಇಲ್ಲುದು ಮ್ಯಾಲೇ।

ನಾನು ಮಕ್ಕಾಳಿಲ್ಲುದು ಮ್ಯಾಲ, ಬಾಳಲಾರೆ ನನುಗಂಡಾ।

ನಾನು ಮಕ್ಕಾಳಿಲ್ಲುದು ಮ್ಯಾಲೆ ಬಾಳುಲಾರೆ ನನುಗಂಡಾ।

ಮಡದಿ ಕಾವೇರಮ್ಮ ಮದಿವ್ಯಾಗನ್ನಡ್ರೋರ್ಸಾತು, ಮಕ್ಕಳ ಸಲುವಿಲ್ಲ ಅಂತ ಕಣ್ಣೀರ್ ಬುಡುತ್ತೀಯ, ಕಣ್ಣೀರ್ ಬುಡುಬ್ಯಾಡಾ .

ನಮ್ಮ ಮನಿಯಾ ದೇವರು ಮಡದಿ, ರಂಗುಸ್ವಾಮಿ ಅವುರಲ್ಲ।

*'।' ಎಂದು ಬರುವ ಪ್ರತಿ ಸಾಲಿನ ಮುಂದೆಯೂ ಈ ಸೊಲ್ಲನ್ನು ಹಿಮ್ಮೇಳದವರು ಹಾಡುತ್ತಾರೆ.

ನಮಿಗೆ ಮನಿಯಾ ದೇವರು ಮಡಿದಿ, ರಂಗುಸ್ವಾಮಿ ಅವುರಲ್ಲಾ।

ನಮ್ಮ ಮನೇ ದೇವ್ರ ಪೂಜೆ ಮಾಡಿ, ಮಕ್ಕಳ್ವಾರಾ ಬೇಡಾನಾ।

ಮನೇ ದೇವ್ರ ಪೂಜೆ ಮಾಡಿ, ಮಕ್ಕಳ್ವಾರಾ ಬೇಡಾನಾ।

ಮಕ್ಕಾಳಲ್ಲಾ ಎಂದು ದುಕ್ಕಾ ಮಾಡಾಬೇಡಾ।

ಇದೇ ಶನಿವಾರ, ಮನೇ ದೇವ್ರ ಪೂಜೆ ಮಾಡಿ ಮಕ್ಳ ವರಾ ಬೇಕಾಕೆ ನೀರು ಮಡಿ ಉಡ್ತಾರೆ. ನೀರು ಮಡು ಉಟ್ಟು ದೊಡ್ಡ ಬಂಡಿಯ ಮ್ಯಾಲೆ .

ಏಳು ಬಂಡಿಯ ಮ್ಯಾಲೆ, ಅಣ್ಣ ಕಾಯಿ ಏರಿ ಕಂಡೂ।

ಏಳು ಗಾಡೀಯ ಮ್ಯಾಲೆ, ಅಣ್ಣ ಕಾಯಿ ಏರಿ ಕಂಡೂ।

ಮನಿಯಾ ದೇವರಾ ಗುಡೀಗೆ, ಹೋಗುತಾರ್ ಕೆಂಪೇಗೌಡಾ।

ಹೋಗಿ ಮನಿಯ ರಂಗುಸ್ವಾಮಿಯ, ಪೂಜೇ ಮಾಡುತಾರೆ।

ಮನೆ ರಂಗುಸ್ವಾಮೀಯಾ ಪೂಜೇ ಮಾಡುತಾರೇ।

ಅಯ್ಯೆ ಏಳುಗಾಡಿ ಅಣ್ಣಕಾಯ, ಬಡುದ್ ರಾಶೀ ಬಡುದಾರೇ।

ಏಳುಗಾಡಿ ಅಣ್ಣು ಕಾಯ ಬಡುದ್ ರಾಶೀ ಬಡುದಾರೆ ಕೆಂಪೇಗೌಡ್ರಯ, ಒಂಬತ್ ಗಡಿಗೆ ಹಾಲು ತುಪ್ಪ ದೇವರ ತಲೆ ಮ್ಯಾಲುದು  ಬಾಳಾ ಬೋಗುವಾಗಿ ಪೂಜೆ ಮಾಡಿ

ಕಾಯಾ ಬಡಿಯಾತಾನೆ, ಕಯೆತ್ತಿ ಮುಗೀತಾನೇ।

ಕಯೆತ್ತಿ ಮುಗೀತಾನೆ, ಮಕ್ಕಳೊರ ಬೇಡೂತಾನೇ।

ಕಯೆತ್ತಿ ಮುಗುದೂ, ಮಕ್ಕಳೊರ ಬೇಡೂತಾನೇ।

ದೇವರಾ ಮುಂದುಗಾಡೆ, ಮುಡಿ ಉಳ್ಳ ಉಳ್ಳುತ್ತಾನೇ।

ಮುಡಿಯ ಉಳ್ಳ್ಯಂಡು, ಮಕ್ಕಳೊರು ಬೇಡುತಾನೇ।

ಆ ರಂಗುಸ್ವಾಮಿ ಅಲ್ಲಿ ನೆಲಸಿದ್ದು ಕಾಲದಿಂದ್ಲು ಅಸ್ಟು ಐಬೋಗವಾಗಿ ಯಾರು ಪೂಜಿಲ್ಲ. ಅಸ್ಟೈಬೋಗುವಾಗಿ ಪೂಜೆ ಮಾಡಿ,,, ಐಬೋಗವಾಗಿ ಪೂಜೇ ಮಾಡಿ ಮುಂದೆ ನಮಿಗೆ ಮಕ್ಳು ಸಂತಾನ ಆಗುತ್ತೆ ಅಂದೆ ಬಲ್ದೆ ಕಡೆ ಊವ್ವೆಸ್ಯಪ್ಪ.. ಮುಂದೆ ನಮಿಗೆ ಮಕ್ಳ ಸಂತಾನ ಅಗಾದಿಲ್ಲ ಅಂದ್ರೆ  ಎಡ್ದ ಕಡೆ ಊವ್ವೆಸ್ಯಪ್ಪ ದೇವಾ ಅಂತ ಕಣ್ಣೀರ್ ಬಡ್ಕಂದ್ ಕೈಮುಕ್ಕಂದ್ ..

(ಮುಂದೆ ನಮಿಗೆ ಸಂತಾನ ಕೊಡ್ತೀನಿ ಅನ್ನ ದೈರಿದ್ರೆ ಬಲ್ದಕಡೆ ಉವಾರು ಮುಂದೆ ನಮಿಗೆ ಮಕ್ಕಿಲ್ಲ ಅಂದ್ರೆ ಎಡ್ದ ಕಡೆ ಆರು)

ಬಾಳ ಐಬೋಗುದಲ್ಲಿ ಪಂಚುಬೋಗದಲ್ಲಿ ಮನೆ ದೇವರ ಪೂಜೆ ಮಾಡಿ ಮಕ್ಕೊರಾ ಬೇಡುತ್ತಾನೆ. ಮನೆದೇವ್ರು ರಂಗುಸ್ವಾಮಿ ಏನ್ ದ್ಯಾನ ಮಾಡ್ತಾನೆ. (ಈಗ ನಾನು ನೆಲಸಿದ ಕಾಲದಿಂದ್ಲೂವೆ ಇಸ್ಟು ಬೋಗವಾಗಿ ಯಾರು ಪೂಜೆ ಮಾಡಿಲ್ಲ. ಈಗ,,, ಮಕ್ಕೊರ ನೀಡಿ ಊಕೊಟ್ಟೆ ನನ್ನ ಪೂಜೆ ನಿಲ್ಲಿಸ್ತಾನೆ. ನಾನೂವು ಕೊಟ್ಟ ಗಳಿಗೇಲಿ ಇವ್ನು ಪೂಜೆ ನಿಲ್ಲಿಸ್ತಾನೆ,)

ಇನ್ನೂವಸ್ಟು ದಿನ ಇನವತ್ರ ಅನಂದುದ್ ಐಬೋಗುದ್ ಪೂಜೆ ಮಾಡಿಸ್ಕಂದು ಅಂತ್ಯಕಾಲುಕ್ಕೆ ಇವುನಿಗೆ ಮಕ್ಕೂರ ಕೊಡಬೇಕು ಅಂತ ತೀರ್ಮಾನ ತಕ್ಕೊಂಡು ಮನೆ ರಂಗಸ್ವಾಮಿ,,,,,

ಮನಿಯಾ ರಂಗುಸ್ವಾಮಿ, ಊವಾ ಕೊಡಾಲಿಲ್ಲ।

(ಯಾಕೆ ಕೊಡಲಿಲ್ಲ ಅಂದ್ರೆ,,,ಇಸ್ಟೈಬೋಗದಲ್ಲಿ ಪೂಜೆ ಮಾಡಿ ನನ್ನ ಗುಡೆಲ್ಲಿ ಗಮಗಮ ಅಂತದಲ್ಲಾ ಈಗ ಊಕೊಟ್ಟ ಗಳಿಗೇಲಿ ಪೂಜೆ ನಿಲ್ಲಿಸ್ತಾನೆ. ನನಿಗೆ ದೂಪುದೊರ ಕಮ್ಮಿಯಾತಾದೆ. ಮುಂದೆ ಇನ್ನೂ ಹಿಗೆ ಪೂಜೆ ಮಾಡ್ಲಿ. ಸಂತೋಷದಿಂದ ಇವ್ನು ಕೇಳಿದ್ ವರ ಬಾಗ್ಯೇವು ಕೊಡಾನ ಅನ್ನದಾಗಿ)

ಇಸ್ಟೈಬೋಗುವಾಗಿ ನಾನು ಪೂಜೆ ಮಾಡಿದ್ರುವೆ ದೇವರ ದರ್ಸುನ್ ಅಗ್ಲುಲ್ಲುವಲ್ಲ ಊಕೊಡ್ಲುಲ್ಲುವಲ್ಲ ಎಡಕ್ಕು ಇಲ್ಲ, ಬಲುಕ್ಕು ಇಲ್ಲವಲ್ಲಾ

ಇಂತಾ ದೇವರ ನಾನು, ಪೂಜೆ ಫಲವೇನೂ।

ಇಂತಾ ದೇವರ ನಾನು ಪೂಜೀಸಿ ಫಲವೇನೂ।

ದೇವರ..ಈನವೂನ ಬೋದು, ಇಣದು ಮಾಡಿ ನಿಲ್ಲುತಾನೇ।

ಕೊನೆ ಅಂತ್ಯು ಬಾಗುಕ್ಕೆ ಇವ್ನು ಕೇಳಿದ್ ಬಾಗ್ವೇವ ಕೊಡಕ್ಕೆ ತಯಾರಿದ್ದ. ಆಸ್ಟೊತ್ತಿಗೆ ಇವ್ನು ಆತುರ ಮಾಡಿಬಿಟ್ಟ. ಇಸ್ಟು ಪೂಜೆದ್ರೂ ವರ ಕೊಡ್ನುಲ್ಲ ಅಂದ್ಮೇಲೆ ಇಂತಾ ದೇವ್ರಿದ್ದು ಪಲುವೇನು? ಅಂತಾ...

ಅಣ್ಣು ಕಾಯಿ ತೆಗೀತಾನೆ, ಬೀದಿಗೆಲ್ಲ ಚಲ್ಲುತಾನೇ।

ಅಯ್ಯ ತೇರ್ತುದ್ ಬಟ್ಟಲ ತೆಗಿದು, ಬೀದಿಗೆಲ್ಲ ಉಯ್ಯಾತಾನೇ।

ದೇವ ಗುಡಿಯ ಬಾಗುಲಿಗೆಲ್ಲ ಮುಳ್ಳು ಬೇಲಿ ಕಟ್ಟುತಾನೇ।

ಆನೇಗಾತ್ರ ಕಲ್ಲಾ ತಂದು, ಗುಡಿ ಬಾಗುಲೀಹಾಕುತಾನೇ।

ಐವತ್ತಳ್ಳಿಗೆ ಇವ್ನು ದೊಡ್ಡ ಗೌಡ, ಇವುನ್ನ ಯಾರು ಪೂಜೆ ಮಾಡಬ್ಯಾಡದು ಇನ್ನು ಮುಂದೆ ಅಂತೇಳಿ ಗುಡೀ ಬಾಗುಲೀಗೆ ಮುಳ್ಳು ಬೇಲಿ ಕಟ್ಟಿ ಆನೆ ಗಾತ್ರುದ್ ಕಲ್ಲ ತಂದು ಬಾಗ್ಲಿಗಿಡುತ್ತಾನೆ.

ಈಗ ಮನಿದ್ಯಾವ್ರ ಬುಟ್ಟಾ, ಬೇರೆ ದೇವ್ರ ಮರಿಬಿದ್ದಾ।

ಮನೆಯ ದ್ಯವಾರ ಬುಟ್ಟ, ಬೇರೇ ದೇವರ ಮರಿಬಿದ್ದಾ।

ಅಯ್ಯ..ರಂಗುಸ್ವಾಮಿ ಬುಟ್ಟಿ, ಶಂಬುಲಿಂಗುದ್ ಮರಿಬಿದ್ದಾ।

ರಂಗುಸ್ವಾಮಿ ಬುಡುತ್ತಾನೆ, ಶಂಬುಲಿಂಗುನ ಹಿಡಿತಾನೇ।

ದೇವ್ರ ಶನಿವಾರ ಮಾಡುತಿದ್ದ, ಸ್ವಾಮಾರ ಮಾಡುತ್ತಾನೆ।

ದೇವ್ರೆ .ನಾಮಾ ಇಡುತಿದ್ದ, ಈಬತ್ತೀ ಇರೂತಾನೇ।

ದೇವ್ರಿಗೆ ಶನಿವಾರ ಮಾಡುತಿದ್ದನು ಸ್ವಾಮಾರ ಮಾಡಕ್ಕಾದ, ರಂಗುಸ್ವಾಮಿ ನಾಮ ಇಡ್ತಿದ್ದೋನ್ ಈ ಬತ್ತಿ ಇಡಕ್ಕಾದ. ಮನೆಗುಡಿಗೆ ಯಾರು ಕಯೆತ್ತಿ ಪೂಜಂಗಿಲ್ಲ. ಆನೆ ಗಾತ್ರುದ್ ಕಲ್ ತಂದು ಗುಡೀ ಬಾಗುಲೀಗಾಕ್ದ್. ಈಗ ಮನೆ ದೇವ್ರ್ ಪೂಜಂಗಿಲ್ಲ. ಮನೆ ದೇವ್ರು ಮೂರು ತಿಂಗ್ಳು ನೋಡ್ತಾರೆ. ಆರ್ ತಿಂಗ್ಳು ನೋಡಿ .ಒಂಬಂತ್ ತಿಂಗ್ಳಿಗೆ ಕೆಂಪೇಗೌಡನ ಕನಸಿಗೆ ಬರುತ್ತಾರೆ ಮನೆ ರಂಗುಸ್ವಾಮಿ

(ಮಾರ್ ತಿಂಗ್ಳು ನೋಡಿದ್ರು ಆರ್ ತಿಂಗ್ಳು ನೋಡಿದ್ರು ಒಂಬತ್ನೇ ತಿಂಗ್ಳಿಗೆ ಕೆಂಪೇಗೌಡ್ನ ಕನಸಿಗೆ ಬಂದ್ರು)

ಕೆಂಪೇಗೌಡನ ಕನಸಿಗೆ ಬಂದು ಯೇನೇಳುತ್ತಾರೆ.

ಕೆಂಪೇಗೌಡಾ ನಿನ್ ಬಕ್ತಿ ನೋಡಿ, ನಿನ್ ಯಿಕ್ತಿ ನೋಡಿ ನಾನು ಬಾಗ್ಯೇವು ಕೊಟ್ಟಿದು. ಐವತ್ತಳ್ಳಿ ಜನ ಸ್ಕಂಡು,,, ಬಡುವ್ರಿಗೆ ಅನ್ನ ಸಾಕಾರ ಮಾಡೋದು ನೋಡಿ, ನಿನ್ನ ಬಕ್ತಿ ನೋಡಿ ನಾನೇ ನಿನಿಗೆ ಬಾಗ್ಯೇವು ಕೊಟ್ಟಿದ್ದು ಈಗ ನನ್ನುನ್ನ ಕೈಬುಟ್ಟು ನೀನೊರಗಾದ್ ಮ್ಯಾಲೆ

ನಿನಿಗೆ ನಾನು ಕೊಟ್ಟುದ್ ಬಾಗ್ಯೇವು ಬಯಲಾಗಿ ಹೋಗುತಾದೇ।

ನಾನು ಕೊಟ್ಟುದ್ ಬಾಗ್ಯೇವು ಬಯಲಾಗಿ ಹೋಗುತಾದೇ।

ನಿನಿಗೆ ಬಾಗ್ಯೇವು ಬಯಲಾಗಿ ಬಿಡುತಾನ ಬದುಲಪ್ಪಾ।

ನಿನ್ನ ಏಳುಕೊಪ್ಪರಿಕ್ಯಾಣ ಬಕರಿ ಪಿಲ್ಯಾನುಲೇಳು।

ನಿನ್ನ ಆರು ಸುತ್ತೀನಾರುಮಾನೆ, ಮುರುದೆ ಬಿದ್ದೋಗಲೇಳು।

ಏಳು ಸುತ್ತಿನ ಕಲ್ಲುಕೋಟೆ, ಜರಿದು ಬಿದ್ದೋಗಲೇಳೊ।

ನಿನ್ನ ಏಳುಕೊಪ್ಪರಿಕ್ಯಾಣ, ಬಕರಿ ಪಿಲ್ಯ್ಯಾಗುಲೇಳೂ।

ನಿನ್ನ ಏಲೂ ಗೂಡಿನ್ ದೊಡ್ಡು ದನಿಗೆ , ಉಚ್ಚು ಬಂದೋಗಲೇಳೂ।

ನಿನ್ನ ಏಳು ವಾಡೆ ರಾಗಿ ಬತ್ತ, ಮಣ್ಣಾಗಿ ಹೋಗುಲೇಳೂ।

(ನಾನು ನಿನಗಿಎ ಬಾಗ್ಯೇವು ಕೊಟ್ಟಿದ್ದು. ನೀನು ನನ್ನ ಬುಟ್ಟು ಯರ್ರು ದೇವರ ಮರೆ ಬಿದ್ ಮ್ಯಾಲೆ .ನಿನಿಗೆ ನಾನ್ ಕೊಟ್ಟುದ್ ಬಾಗ್ಯೇವು ಬಯಲಾಗ್ಲಿ. ಏಳು ಕೊಪ್ರಿಕ್ಯಾಣ ಬಕ್ರೆ ಪಿಲ್ಲಾಗ್ಲಿ. ಏಳು ನೂರು ಕಂಡುಗ್ ರಾಗಿ ಬತ್ತ ಏಳ ವಾಡೇಲಿ ಅವೆಲ್ಲ ಮಣ್ಣಾಗ್ಲಿ. ಏಳು ಗೂಡಿನ ದೊಡ್ಡ ದನಿತ್ತಲ್ಲ ಅವುಕ್ಕೆಲ್ಲ ಉಚ್ ಬಂದು ಕಾಡುಪಾಲು ಸೇರ್ಲಿ. ನಿನಗೆ ಆರು ಸುತ್ತಿನಾರುಮನೆ, ಏಳು ಸುತ್ತಿನ ಕಲ್ಲು ಕೋಟೆತ್ತಲ್ಲ ಅದೆಲ್ಲ ಮುಂದ್ ದ್ ಬೂಮಿ ಸೇರ್ಲಿ. ನಾನು ಕೊಟೆ ಬ್ಯಾಗೇವು ಬಯಲಾಗಿ ನಿನಿಗೆ ಬಡುತಾನ ಬರ್ಲಿ, ಅಂತ ಸಾಪ ಕೊಡ್ತಾನೆ.)

ಆದೇ ಮನೆ ದೇವ್ರು ಸಾಪ ತಗುಲ್ಕ್ಯಂಡು ಕೆಂಪೇಗೌಡುನ್ ಮುಂದೆ ಬಡತಾನ ಯಾವ್ ಗಂಟೇಲಿ ಬಡತಾನ ಬರುತ್ತದೆ. ಮನೆ ದೇವ್ರಿಂದ ಮುಂದೆ ಬಡತಾನ ಉಂಟಾಗುತ್ತಾದೆ. ಮನೆದೇವ್ರು ಸಾಪ್ದಲ್ಲಿ .

ಏಳು ಗೂಡೀನ್ ದೊಡ್ಡು ದನೀಗೆ,

ಅಪ್ಪ ದನೀಗೆಲ್ಲಾ ಉಚ್ಚುಟಾಂದು। ಮಾದೇವನೆ

ಅಪ್ಪ ದನಿಗೆಲ್ಲಾ ಉಚ್ಚು ಬಾಂದು

ದನ ಕಾಡು ಪಲಾಗುತಾವೆ

ಇವ್ನ ಏಳು ಕೊಪ್ಪರೀಕ್ಯಾಣ

ಶಿವನೆ ಬಕರೆ ಪಿಲ್ಯಾಗುತಾದೆ

ಏಳುನೂರು ಕಂಡೂಗ

ಇವ್ನ ಏಳುವಾಡ ರಾಗಿಬತ್ತ

ಅದು ಮಣ್ಣಾಗಿ ಕೊಡುತಾದೆ.

*ಈ ಬಾಗದ ಪ್ರತಿ ಸಾಲಿನ ಮುಂದೆ ಮಾದೇವತೆ ಎಂಬ ಸೊಲ್ಲನ್ನು ಹಿಮ್ಮೇಳದವರು ಹಾಡುತ್ತಾರೆ.

ಇನ್ ಆರು ಸುತ್ತಿನಾರುಮಾನೆ

ಆಯ್ಯ  ಮುರಿದೇ ಬದ್ದೋಗುತಾದೆ

ಇನವ್ನ ಏಳು ಸುತ್ತೀನ್ ಕಲ್ಲು ಕೋಟೆ

ಅಯ್ಯ ಜರಿದೆ ಬಿದ್ದೋಗುತಾದೆ

ಇವ್ನ ಆರು ಸುತ್ತೀನಾರುಮಾನೆ

ಶಿವನೆ ಮುರುದೇ ಬಿದ್ದೋಗುತಾದೆ.

(ಏಳು ಕೊಪ್ರಿಕ್ಯಾಣ ಬಕ್ರೆ ಪಿಲ್ಲೆ. ಏಳುನೂರು ಕಂಡಾಗ ರಾಗಿ ಬತ್ತ ಏಳು ವಾಡೇಲಿತ್ತಲ್ಲ ಅದೆಲ್ಲಿ ಮಣ್ಣು. ಮನೆ ದೇವ್ರು ಮಣ್ ಮಾಡಿ ಕೂರೇಸ್ಯವರೆ. ದನ್ ಕರಿಗೆಲ್ಲ ಉಚ್ ಬಂದು ದಿಕ್ಕಪಾಲಾಗಿ ಕಾಡ್ ಸೇರ್‍ದೊ. ಆರು ಸುತ್ತಿನರುಮನೆ, ಏಳುಸುತ್ತಿನ ಕಲ್ಲು ಕ್ವಾಟತ್ತಲ್ಲಿ ಅದೆಲ್ಲ ಮುರುದ್ ಬಿದು ಬೂಮಿ ಸೇರೋಯ್ತು)

ಈಗ .ಕೆಂಪೇಗೌಡ್ಗೆ .

ಊಣ್ಣಾಕೆ ಅನಿಲ್ಲ.. ಉಡುವಾಕೆ ಬಟ್ಟಿಲ್ಲ।

ಬದ್ಕಿದ್ ಕೆಂಪೇಗೌಡ್ಗೆ, ಬಾಳ ಬಡುತಾನ ಬಂತಲ್ಲಾ।

ಉಣ್ಣಾಕೆ ಅನುವಿಲ್ಲ, ಉಡವಾಕೆ ಬಟ್ಟಿಲ್ಲಾ।

ಅಸು ಬದುಕದಾ ಕೆಂಪೇಗೌಡ್ಗೆ, ಬಡುತಾನ ಬಂದೀತಲ್ಲಾ।

ಈಗ ಬರಿ ಅಂಗ್ಲಿ ಕುಡಿತಾನೆ ಬಳ್ಳಿ ಸಪ್ಪ ತಿನ್ನುತಾನೇ।

ಕಾರೆ ಕಾಯಿ ತಿನ್ನುತಾನೆ, ಕೆರೆಗೆಡ್ಡೆ ತಿನ್ನುತ್ತಾನೆ.

(ಯೇನುವಿಲ್ಲ  ದಿಕ್ಕಾಪಾಲು ಈಗ ಮಾಗಡಿ ಕೆಂಪೇಗೌಡುನ್ ಬಡ್ತಾನ್ ಬಂತಲ್ಲ.. ಕೆಂಪೇಗೌಡುನ್ ಬಡ್ತಾನ ಬಂದ್ ಕಾಲ್ದಲ್ಲಿ  ಈ ಕೆಂಪೇಗ್ಭಡುನ್ ಬಡ್ತಾನ್ ಬಮದ್ ಕಾಲ್ದಲ್ಲಿ ಬೆಂಗ್ಳೂರೈತಲ್ಲ ಬೆಂಗ್ಳೂರು  ಬೆಂಗ್ಳೂರು ಆಗ ಇವ್ನಿಗೆ ಬಡ್ತಾನ ಬಂದ್ ಕಾಲ್ದಲ್ಲಿ ಮಹಾಂತ ದೊಡ್ಡ ಕಾಡು ಯಾವ್ದು? ಬೆಂಗ್ಳೂರು ಆ ದೊಡ್ಡ ಕಾಡಾದ್ರೆ., ಆ ದೊಡ್ ಕಾಡ್ಲೋಗಿ ಸಪ್ಪಿನ ಗುಡ್ಲಾಕ್ಯಂದ್)

ಸಪ್ಪಿನ್ ಗುಡ್ಲಾಕ್ಯಂಡು ಆ ಕಾಡನಲ್ಲಿ ಕೆಂಪೇಗೌಡ ಬ್ಯಾಟೆ ನಾಯಿ ಬಟ್ಕಂಡು ಬಿಲ್ಲು ಬಾಣ ಇಡ್ಕಂದು

ಆ ಕಾಡಲ್ಲಿನೂ ಶಿವನೆ, ಬ್ಯಾಟೇಯಾ ಮಾಡುತಾನೇ।

ಬ್ಯಾಟೆ ನಾಯಾ ಕಟಿತಂದು ಬ್ಯಾಟೇಗೆ ಹೋಗುತಾನೇ।

ಯಾವ್ದಾರ ಮಿಗುದ್ ಜಾತಿ ಸಿಕ್ತು ಅಂದ್ರೆ ಆ ಮಿಗುದ್ ಜಾತಿ ಯೇನ್ ಮಾಡುತ್ತಾನೆ ಕೆಂಪೇಗೌಡ ತಗಂದ್ ಬಂದು ಯಾರ್ಗ್ಗಾರಾ ಮಾರ್ಬಿಟ್ಟು ಉಳ್ಳಿ ಕಾಳು ತತ್ತಾನೆ.

ಉಳ್ಳಿಕಾಳಾ ತಂದು, ಬೆಂಗಳಚ್ಚಿ ತಿನ್ನುತಾನೇ।

ಉಳ್ಳಿಕಾಳಾ ತಂದು, ಬೆಂಗಳಚ್ಚಿ ತಿನ್ನುತಾನೇ।

(ಬಡುತಾನುರ್ ತಾನೆ ಇವ್ನು ಬೆಂಗುಳ್ಳಿ ಕಾಳ ತಿಂದುದ್ದು.. ಆ ಕಾಡಲ್ಲಿ ಈವಾಗ ಒಂದು ಮೊಲ ಸಿಕ್ತಾದೆ. ಆ ಕಾಡ್ನಲ್ಲಿ ಐದು ಬ್ಯಾಟೆ ನಾಯಿ ಆ ಮಾಲಾ ಓಡಿಸ್ಕ್ಯಂಡು ಹೋಯ್ತುವೆ. ಆ ಕಾಡ್ನಲ್ಲಿ ಆ ಮೊಲ ನಾಯಿ ಬಾಯಿಗ್ ಸಿಕ್ಕೊಲ್ದು ನಾಯಿ ಮಲ ಬಿಡೊಲ್ದು

ಜಂಪ್ ಮಾಡಿ ಜಂಪ್ ಮಾಡಿ ಮಲ ಯಂಗೋಯ್ತದೆ. ಅಂಗೆಯ ನಾಯೂ ಜಂಪ್ ಮಾಡಿ ಓಡ್ತವೆ. ಕೆಂಪೇಗೌಡ ನೋಡ್ತನೆ .ಮಲ ಸಿಕ್ಕೊಲ್ದು. ಆದು ಅಸ್ಟು ದೂರ ಓಡಿದ್ ಮಲ ಹಿಂತಿರುಗಿ ಇವ್ನ ನಾಯಿ ಮ್ಯಾಲೆ ರಾವಾಗ್ ತಿರುಕ್ಯಬುಡ್ತು. ರಾವಾಗಿ ತಿರುಕ್ಯಂಡ್ರುವೆ ನಾಯಿ ಬಾಯಿಗ್ ಸಿಕ್ಕೊಲ್ದು. ನಾಯಿ ಬೇನ್ ಮ್ಯಾಲೆ ಕುತ್ಗಂಡು ಅದ್ರ ಬೆನ್ನ ಕಚ್ಚದು। ಆದ್ರ ಬೆನ್ನಿಂದ್ ಆರಿ ಇನ್ನೊಂದು ನಾಯಿ ಬೆನ್ ಮ್ಯಾಕಾರಾಡು। ಆದ್ರು ಬೆನ್ನು ಕಚ್ಚದು। ಅದ್ರ ಬೆನ್ನಿನ ಮ್ಯಾಲಿಂದ ಆರಿ ಇನ್ನೊಂದ್ ನಾಯಿ ಬೆನ್ ಮ್ಯಾಕೋಗದು।

ನಾಯಿ ಬಾಯಿಗೆ ಮಲ ಸಿಕ್ಕೊಲ್ದು. ನಾಯಿ ಬೆನ್ ಮ್ಯಾಲೆ ಮಲ ಓಡಾಡುತ್ತಾದೆ. ಈಗ ಮಲುಕ್ಕೆ ನಾಯೆಲ್ಲ ಎದ್ರಿದೊ। ನಾಯೆಲ್ಲ ಎದ್ರಿ, ಬೆದ್ರಿ, ಬೆಚ್ಚಿ। .

ಬಂದು ಕೆಂಪೇಗೌಡ್ನ, ಕೈಕಾಲ ಸುತ್ತುತಾವೆ ಶಿವಶಿವಾ।

ಬಂದು ಕೆಂಪೇಗೌಡ್ನ, ಕೈಕಾಲ ಸುತ್ತಾತ್ತಾದೆ ಶಿವಶಿವಾ।

ಈಗ ಕೆಂಪೇಗೌಡ್ಗೆ ಬರುಬಾರ್ದ್ ಯೇಚ್ನೆ ಬಂತು. ಒಂದು ಮಲಕ್ಕೆ ಈ ನಾಯಿ ಎದ್ರಿಲಿಲ್ಲ.. ಒಂದು ಮಲಕ್ಕೆ ಐದು ನಾಯಿ ಎದ್ರಿದ್ವಲ್ಲ, ಮುಂದಕ್ಕೆ ನಂಗೇನು ಗಂಡಾಂತ್ರ ಗಾಚಾರ ಬತ್ತಾದೆ. ಚಿಂತೆ ಮಾಡುತ್ತಾನೆ. ಒಂದು ಮಲಕ್ಕೆ ಐದ್ ನಾಯಿ ಎದ್ರುದು ಮ್ಯಾಲೆ ಮುಂದೆ ಗಂಡಾಂತರ ಗಾಚಾರ ಬಂದು ನಂಗೆ ಕೂಡಬವ್ದು ಇದ್ಕೆ ಪಂಚಾಂಗ ಕೇಳಬೇಕು ಅನ್ನದಾಗಿ.

(ಮುಂದೇನ್ ಗಂಡಾಂತರ ಕೂಡುತ್ತಾದೆ. ಇದ ದೋಸಿಗ್ರಲ್ಲಿ ಹೋಗ್ ಕೇಳಬೇಕು. ಒಂದು ಮಲಕ್ಕೆ ಐದ್ ನಾಯಿ ಎದ್ರಿದ್ ಮ್ಯಾಲೆ. ಮುಂದೆ ಯೇನ್ ಅನ್ನದಾಗಿ ದೋಸಿಗ್ರಿಲ್ಲ ಕೇಳ್ಬೇಕು ಪಂಚಾಂಗ ತೋಸಿ ನೋಡಬೇಕು ಅಂತ).

ದೋಸಿಗ್ರತ್ರ ಹೋಗಿ ಸ್ವಾಮಿ,,,ಒಂದ್ ಮಲುಕ್ಕೆ ಐದ್ ನಾಯಿ ಎದ್ರಿಲಿಲ್ಲ. ಮುಂದೆ ನಂಗೆ ಗಂಡಾಂತ್ರ ಗಾಚಾರ ಕೂಡುಬವುದಾ ನೋಡಿ ಸ್ವಾಮಿ.

ಯಾತುಕ್ಕೋಸ್ಕರ ಒಂದ್ ಮಲಕ್ಕೆ ಐದ್ ನಾಯಿ ಎದ್ರಿದೊ)

ಅವ್ರು ಪಂಚಾಂಗ ತೆಗೆದು ನೋಡದ್ರಲ್ಲಿ ಪಂಚಾಂಗ್ದಲ್ಲಿ ಯೇನ್ ಬತ್ತದೆ ಅಂದ್ರೆ ..ಈ ಮಲ ಮಟ್ಟಿದ್ ಜಾಗ.. ಗಂಡು ಬೂಮಿ..ಗಂಡು ಬೂಮಿ ಮೇಲೆ ಹುಟ್ಟಿರೋ ಪ್ರಾಣಿ ನಿನ್ನ ನಾಯಿ ಮ್ಯಾಲೆ ಗಂಡುಸ್ತಾನ ತೋರುಸ್ತು.

(ಸ್ವಾಮಿ ಮಲ ಹುಟ್ಟಿರೋ ಜಾಗ ಗಂಡು ಭೂಮಿ ಗಂಡು ಭೂಮಿ ಮ್ಯಾಲೆ ಹುಟ್ಟಿರೋ ನಾಯಿ ಗಂಡುಸ್ತಾನ ತೋರಿ ನನ್ ನಾಯಿ ಸೋಲುಸ್ತಾ .? ಹೌದು ಸಾಮಿ ಮತ್ತೆ ಗಂಡು ಬೂಮಿ ಅಂದ್ರೆ ಎಸ್ಟು ಚದುರಾಳ್ತ .ಎಸ್ಟಗಲ? ಪಂಚಾಂಗ ತೆಗೆದು ನೋಡದ್ರಲಿ ನೂರಾರು ಮೈಲಿ ಮ್ಯಾಲೈತೆ)

ಆಗ ಈ ಕಾಡ ಗಂಡು ಭೂಮಿ ಅನ್ನದಾಗಿ ಕಂಡು ಇಡ್ಕಂದು ಕೆಂಪೇಗೌಡ (ಆವಾಗ ಕಂಡಿಡ್ಕಂಡ ಈ ಕೆಂಪೇಗೌಡ ಅದು ಗಂಡು ಬೂಮಿ ಅನ್ನದ) ಮನಿಗ್ ಬತ್ತಾನೆ .ಯೇನು ಬೇಟಿಲ್ಲ. ಉಳ್ಳಿ ಕಾಳುವಿಲ್ಲ..ಯೇನುವಿಲ್ಲ..ಗಂಡಾ ಹೆಡ್ತೀರು ಕಾಡಲ್ಲಿ ಉಪಾಸ ಮಲಗಿದ್ದಾರೆ. ಒಂದ್ ವತ್ನಲ್ಲಿ ಎದ್ದು ಕಣ್ಣೀರ್ ಬುಡ್ತಾರೆ ಮಡದಿ ಕಾವೇರಮ್ಮ.

ಸ್ವಾಮಿ ಸ್ವಾಮಿ

ನಾವು ಬದ್ಕಿದ್ದೂ, ಬಾಳುದೊಡ್ಡೀಸ್ತಾನಾ।

ನಾವು ಬದ್ಕಿದು ಸ್ವಾಮಿ, ಬಾಳಾ ದೊಡ್ಡೀಸ್ತಾನಾ।

ಈಗ ಉಣ್ಣಾಕೆ ಅನ್ನುವಿಲ್ಲ, ಉಡುವಾಕೆ ಬಟ್ಟೆಲ್ಲಾ।

ಆಗ ಆಲೂಬಾನ ಉಣ್ಣತ್ತಿದ್ದೊ, ಈಗ ಯೇನೂ ಇಲ್ಲುವಲ್ಲೊ।

ಸ್ವಾಮಿ,,ನಮಿಗೇ ಬಡ್ತಾನ ಬಂದ್ರೆ, ನಮಿಗ್ಯಾರೂ ಇಲ್ಲುವಲ್ಲೋ

(ಹಿಂದೆ ನಾವು ಬದ್ಕ್ಯಾಕಿದ್ ಕಾಲ್ದಲ್ಲಿ ಐವತ್ತಳ್ಳಿ ಜನಾ ಸಾಕ್ಯಂಡಿದ್ ಜನಾ ನಾವು ಇವತ್ತು ಸಪ್ಪು ಇಲ್ದೆ, ಯೇನು ಇಲ್ದೆ ಉಪಾನ ಮುಗಿದ್ವಿವಲ್ಲಾ ನಾವು)

ಆ ಮಾತಿಗೆ ಕೆಂಪೇಗೌಡ ಹೇಳುತ್ತಾನೆ .

ಮಡದಿ ಮನ್ಸುಗೆ ಬಡತಾನೆಸ್ಟೂದೀನ, ಮನುಸುಗೆ ಸಿರಿತಾನೇವೂ ದೀನಾ।

ಸಿರಿತಾನ ಎಂಬುದು ಅರ್ದ ಅರ್ವಿ ನೀರು ಕಾನೇ।

ಸಿರಿತಾನ ಎಂಬುದು ಅರೆ ಅರ್ವಿ ನೀರು ಕಾನೇ।

ಮಡ್ದಿ ಬಡತಾನ ಎಂಬುದು, ತುಂಬಿದಬಿಗ್ ನೀರು ಕಾನೇ।

ಬಡುತಾನ ಎಂಬುದು ತುಂಬಿದ್‌ಬಿನ್ ನೀರು ಕಾನೇ।

ಈಗ ಕಸ್ಟಾದಾಗಿದ್ದೀವಿ. ಹಿಂದೆ ನಾವು ಎಲ್ಲಾರ್ನು ಸಾಕ್ಯಂಡಿದ್ವಲ್ಲ ಕಂಡು ಮನೆ ಬಂತು ಮನೆ ಅನ್ನದಾಗಿ

ಉಡಿಕ್ಯಂಡ್ ಬತ್ತರೆ ಈ ಕಾಡ್ಗೆ ಉಡಿಕ್ಯಂದ್ ಬಂದ್ರೆ,,,,

ಅವ್ರುಗೆ ನಾವ್ ಕುಡಿಯೋ ಅಂಬ್ಲೀಯಾ, ನಾವು ಅವ್ರಿಗೆ ಬೀಡಾನ।

ನಾವು ಕುಡಿಯೋ ಅಂಬ್ಲೀಯಾ, ಅವರಿಗೆ ಬಿಡುವಾನಾ।

(ಹಿಂದೆಲ್ಲ ಬಂದಡು ಜನ ಕಂಡು ಜನ..ಉಡಿಕ್ಯಂದ್ ಬಂದ್ರೆ ಸಪ್ಪಾಗ್ಲಿ, ಅಂಬ್ಲಾಗ್ಲಿ, ಗಂಜ್ಯಾಗ್ಲಿ ಬಳಿಗಿರಾದು ನಾವ್ ಕುಡಿಯಾದು ಅಂಚಿಕ್ಕಮ್ಮ)

ನಾನ್ ಈ ಬಡತನ ನೀಸಲಾರೆ ಮಡಿದಿ.. ಬಡುತಾನ ನೀಸಲಾರೆ. ಬೀರೂರು ಹೆಬ್ಬಾರುವಯ್ನ ಮನಗೊಗಿ, ಬೀರೂರು ಹೆಬ್ಬಾರುವಯ್ನ ಮನಿಗೋಗಿ ಮಡಿದಿ

ಜೀತನಾರ ಮಾಡುತೀನಿ, ಕೂಲಿನಾರ ಮಾಡುತೀನಿ।

ಜೀತನಾರ ಮಾಡುತೀನಿ, ಕೂಲಿನಾರ ಮಾಡುತೀನಿ।

(ಬೀರೂರು ಹೆಬ್ಬಾರುವಯ್ಯ್ನ ಮನಿಗೋಗಿ ಅಲ್ಲಿ ಜೀತ ಸೇರ್ತೀನಿ. ಕೂಲಿಗ್ ಸೇರ್ತೀನಿ ಮಡಿದಿ)

ಕೆಂಪು ಕುದುರೆ ಅತ್ತಿ

ಅಯ್ನಾರ ಮನೇ ತಕ್ಕೆ ಊಟುಕ್ಕೆ ತಾರೇ ಮಡಿದಿ

ಅಯ್ನಾರ ಮನೆ ತಕ್ಕೆ, ಊಟುಕ್ಕೆ ತಾರೇ ಮಡಿದಿ.

ಅಯ್ನಾರ ಮನೆತಕ್ಕೆ ಊಟ ತಗಬಾ. ಏಳು ನೂರ್ ಕೊಪ್ರಕೈಣ ಬಕ್ರೆ ತಿಲ್ಲಾಗಿ ಏಳುನೂರು ಕಂಡಂಗ ಬತ್ತ ರಾಗಿ ಮಸ್ರಾಗಿ, ಆರು ಸುತ್ತೀನರಮನೆ, ಏಳು ಸುತ್ತಿನ ಕಲ್ಲುಕೋಟೆ ಎಲ್ಲ ಮುರಿದು ಜರಿದು ಬಿದ್ದೋಗಿ, ಏಳುಗೂಡಿನ ದನೆಲ್ಲ ಉಡ್ ಬಂದ್ ಕಾಡುಪಾಲು ಸೇರಿ ಬಾಳಿ ಬಿಡುತಾನ ಬಂದು  ಬಾಗ್ಯೇವೆಲ್ಲಿ ಬಯಲಾಗಿ ಇವತ್ತು ಬೀರೂರ್ ಆರುವಯ್ನ ಮನಿಗೆ ಜೀತಗ್ಕೋಯ್ತುವನಲ್ಲೋ ದೇವಾ .

ಹೋಗಿ ಬೀರೂರ ಪಾರುವಯ್ಗೆ, ಕಯೆತ್ತಿ ಮುಗೀತಾನೇ।

ಹೋಗಿ ಬೀರೂರ ಪಾರುವಯ್ಗೆ, ಕೆಯತ್ತಿ ಮುಗೀತಾನೇ।

ಅಯ್ಯ ಏನು ಬಂದೆ ಕೆಂಪೇಗೌಡ, ಬಂದಾ ಕಾರುಣುವೇನೂ।

ಅಯ್ಯ ಏನು ಬಂದೆ ಕೆಂಪೇಗೌಡ ಬಂದಾ ಕಾರುಣುವೇನೂ।

ಸ್ವಾಮಿ ದೇವ್ರು ಇಂತಾ ಕಾಲ್ಕೆ, ಬಾಳು ಬಡ್ತಾನ ಹೊಟ್ಟಾ।

ಸ್ವಾಮಿ ದೇವ್ರು ಇಂತಾ ಕಾಲ್ಕೆ, ಬಾಳಾ ಬಡ್ತಾನ ಕೊಟ್ಟ।

ನಮಿಗೆ ಉಣ್ಣಾಕೆ ಅನ್ನುವಿಲ್ಲ, ಉಡುವಾಕೆ ಬಟ್ಯಲ್ಲಾ।

ಉಡುವಾಕೆ ಬಟ್ಟಿಲ್ಲ, ಕುಡಿಯಾಕಂಬ್ಳೀ ಇಲ್ಲ।

ಸ್ವಾಮಿ ಜೀತನಾರ ಬೇರುತೀನಿ, ಕೂಲಿನಾರ ಮಾಡುತೀನಿ।

(ಉಣ್ಣಾಕನ್ನುವಿಲ್ಲ, ಉಡಾಕ್ ಬಟ್ಟಿಲ್ಲ, ಬಾಳ ಬಡ್ತಾನ ದೇವ್ರು ಕೊಟ್ಟ.ಏನೋರೆ ಜೀತ್ಕಾರ ಸೇರಿಸ್ಕಳಿ ಕೂಲಿನಾರ ಕೊಡಿ)

ಬೀರೂರು ಪಾರುವಯ್ಗೆ ಹೋಗಿ,,, ಕಯೆತ್ತಿ ಮುಗೀತಾನೇ।

ಬೀರೂರು ಪಾರುವಯ್ಯ ಏನಾರ ಬಂದ ಕೊಡಿ ಅಂದ್ಮೇಲೆ ಕೊಟ್ ತೀರಬೇಕು ಆಗ ಪಾರುವಯ್ಯ .

ಗುದುಲಿ ತತ್ತಾನೆ. ಕೆಂಪೇಗೌಡ್ನ- ಹಯ್ಗೆ ಕೊಡಾತಾನೇ।

ಗುದುಲಿ ತರಾತಾನೆ ಕೆಂಪೇಗೌಡ್ನ ಕಯ್ಗಾರ ಕೊಡುತಾನೇ।

ಅವುನ ಬಡಗ್ಲ ಬಾಳೇ ತೋಟ್ಕೆ ಕರಕಂಡು ಹೋಗೂತಾನೇ।

ಅವುನ ಬಡಗ್ಲ ಬಾಳೇ ತೋಟ್ಕೆ ಕರಕಂಡು ಹೋಗುತಾನೆ।

ಅಯ್ಯ ತೋಟುದಲ್ಲಿ ನಿಂತ್ಕಂಡು, ನಾಕುಮೂಲೆ ತೋರುತಾನೆ

ಅವ್ನ ನಾಕುಮೂಲೆ ತ್ವಾಟ ನಾಕೆಕ್ರೆ ಇರುಮೋಡು

ಅವ್ನ ಬಡುಗ್ಲ ಬಾಳೇ ತೋಟ. ಆಳುಬಿದ್ದೆ ಹೋಗೈತಲ್ಲಾ।

ಬಂದು ಆಳು .

ಮ್ಯಾಲೆ ಎತ್ತಿದ್ ಕಯ್ಯ್ನ ಎದ್ದ ದಬೆಗೆ ಉಲ್ಲು ಬೆಳುದಾದೇ।

ತೋಟುದಲ್ಲಿ ನಿಲ್ಲಿಸ್ಕಂಡು ನಾಕುಮೂಲೆ ತೋರುತ್ತಾನೆ.

(ತೋಟ್ದಲ್ಲಿ ನಿಲ್ಲಿಸ್ಕಂಡು ಕೆಂಪೇಗೌಡ್ಗೆ ನೋಡಪ್ಪ.. ಇಸ್ಟೆಲ್ಲಿ ತ್ವಾಟವ ನೀನಗತೆ ಮಾಡ್ಬೇಕು. ಆತು ಸ್ವಾಮಿ ಆಗೀತೀನಿ)

ಆತು ದೇವಾ ಆಗುತೆ ಮಾಡುತ್ತೀನಿ.

ನಾನು ತ್ವಾಟುದಗತೆ ಮಾಡಿದುರೆ, ಕೂಲಿಯೇನ ಕೊಡುತೀರಿ।

ನಾನು ತ್ವಾಟುದಗತೆ ಮಾಡಿದುರೆ, ನನಿಗೆ ಕೂಲಿಯೇನ ತೊಡುತೀರಿ।

ಕೂಲಿ ಕೇಳುವಾಗ ಕೆಂಪೇಗೌಡ,,, ಆರುವಯ್ಯ ಯೇನ್ ಚಿಂತೆ ಮಾಡುತ್ತಾನೆ. ಎಸ್ಟು ಅಸ್ತು, ಎಸ್ಟು ಕಂಗೆಟ್ಟು ಬಂದಿದ್ದಾನೆ. ಎಸ್ಸು ಕೂಲಿ ಕೊಟ್ರು ಇಸ್ಕತ್ತನೆ. ಕಂಗೆಟ್ಟು ನನ್ನಟ್ಟಿ ಬಾಗ್ಲೀಗ್ ಬಂದಿದ್ದಾನೆ ಎಷ್ಟು ಕೂಲಿ ಕೊಟ್ರು ಇಸ್ಕತ್ತಾನೆ. ..

ಕೆಂಪೇಗೌಡ,,, ಕೆಂಪೇಗೌಡ,,,,

ನನ್ನ ನಾಕುಮೂಲೆ ತ್ವಾಟಾವ ಚಂದಾಗಿ ಆಗುದಾರೆ।

ನನ್ನ ನಾಕು ಮೂಲೆ ತ್ವಾಟಾವ ಚಂದಾಗಿ ಆಗುದಾರೆ।

ನಿನಿಗೆ ಮೂರು ಪಡಿ ರಾಗೀಯ, ಕೂಲಿನಾರು ಕೊಡುತೀನಿ।

ಬದುಕಿದ್ ಕೆಂಪೇಗೌಡಾ . ನಾಕ್ ಮೂಲೆ ತ್ವಾಟ ಅಗುದ್ರೆ ಮೂರ್ ಪಡಿ ರಾಗಿ। ಬಾಳ ಸಂಕುಟ್ ಬತ್ತು..

ಕೆಂಪೇಗೌಡ್ಗೆ .

ಅಲ್ಲಿ ದಡ್ಡುನೆ ದರಣಿಗೆ ಬಿದ್ದಾ। ಮಾದೇವನೆ

ತನ್ನ ಬಾಗ್ಯಾವಾ ನೆನಕಂಡೂ

ನನ್ನ ಏಳು ಕೊಪರೀಕ್ಯಾಣ

ಬಕ್ರಿ ಪಿಲ್ಲಾಯಿತಲ್ಲಾ

ನನ್ನ ಏಳುಗೂಡಿನ್ ದೊಡ್ಡುದಾನ

ಶಿವನೆ ಕಾಡು ಪಾಲಾದುವಲ್ಲ

ನನ್ನ ಏಳು ಕೊಪರಿಕ್ಯಾಣ

ಬಕ್ರೆ ಪಿಲ್ಲಾಯಿತಲ್ಲಾ

ನನ್ನ ಏಳು ನೂರು ಕಂಡೂಗ

ನನ್ನ ಏಳು ವಾಡ ರಾಗಿ ಬತ್ತಿ

ಶಿವನೆ ಮುಗ್ಗಾಗಿ ಹೋಯಿತಲ್ಲ

ಕೆಟ್ಟು ಇವುವಟ್ಟಿಗೆ ಬಂದೆ. ನಾಕುಮೂಲೆ ತ್ವಾಟ ಅಗುದ್ರೆ–ಬಂದಾಳ ಮ್ಯಾಲೆ ಬಂದು ಕಯುದ್ದುಕೆ ದರ್ಬೆ ಉಲ್ಲು ಬೆಳುದಾದೆ. ಇನ್ನ ಆಗುದೆ ಣಗೆ ಮೂರು ಪಡಿ ರಾಗ್ಯಲ್ಲೋ ಶಿವನೇ। ಮೂರ್ ಪಡೀ ರಾಗೀಗ್ ಯಾರು ಆಗೀತಾರೆ. ಅಂತ ಹಿಂತಿರುಗಿ ವಾದ್ರೆ ಬಗುವಂತ ಬೂಮಿ ತಾಯಿ ನನ್ನ ಮೆಚ್ಚದಿಲ್ಲ. ಮಾಡ್ತೀನಿ ಅಂತ ಬಂದ್ಮೇಲೆ ಮಾಡಿ ತೀರ್ಬೇಕು. (ಈಗ ಕೆಂಪೇಗೌಡ ಮನ್ಸಿಗೆ ತಿಳ್ಕಿತ್ತಾನೆ. ಮೂರ್ ಪಡಿ ರಾಗೀಗೆ ಇಷ್ಟೆಲ್ಲಿ ತ್ವಾಟ ಯಾರು ಅಗೀತಾರೆ ಅಂತ ವಾದ್ರೆ ಬೂಮಿತಾಯಿ ಬಗುವಂತ ಮೆಚ್ಚುದಿಲ್ಲ. ಮಾಡ್ತಿನಿ ಅಂತ ಬಂದಾಯ್ತು. ಮಾಡೇ ತೀರಬೇಕು. ಎರಡು ದುಡ ಮಾಡಬಾರ್ದು ನಾನು)

ಬಗುವಂತ ಕೊಟ್ಟ ದಯ ಬಗುವಂತ್ಗೆ ನೋಡ್ಲಿ ಅನ್ನದಾಗಿ .

ಆಯ್ತು ಸ್ವಾಮಿ ಅಗತೀನಿ ಅಂದ

ಹಾರುವಯ್ಯ ಕೆಂಪೇಗೌಡ್ನ ತೋಟುದಲ್ಲಿ ಬುಟ್ಟಿ ಮನಿಗೆ ಬಂದ ಕೆಂಪೇಗೌಡಾ

ಬಟ್ಟೇನಾರ ಬಿಚ್ಚುತಾನೆ, ಬೂಮಿ ಮ್ಯಾಲೆ ಮಡುಗುತಾನೇ।

ಬಟ್ಟೇನಾರ ಬಿಟ್ಟೇ ಬೂಮಿ ಮ್ಯಾಲೆ ಮಡಗುತಾನೇ।

ಗುದ್ಲಿಶರಣ ಮಾಡಿಕಂಡ, ಬೂಮಿ ಶರಣ ಮಾಲೆಕ್ಯಂಡ।

ಇವ್ನು ಗುದ್ಲಿ ಶರಣ ಮಾಡಿಕ್ಯಂಡ, ಬೂಮಿ ಶರಣ ಮಾಡಿಕ್ಯಂಡ।

ತ್ವಾಟ ಆಗ ಸಣ್ಣಾಗುತ್ತಾದೆ. ಆ ಲಕ್ಷ್ಮಿ ದಾರಾಳವಾಗಿ ಕೊಡ್ತಿನಿ ಅಂದುರ್ರೆ ಸಣ್ಣಾತುರ್ನುಲ್ಲ. ಈಗ ಯಂಗ್ ಸಣ್ಣಾತದೆ ಅಂದ್ರೆ. ಬಲು ಸತ್ಯವಂತ ಗುದುಲಿ ಸೆರಗು ಮಾಡುತ್ತನೆ. ಬಕುತಿವಂತ ಗುದುಲಿ ಶರಣಮಾಡಿ, ಬೂಮಿ ಸೆರಣ ಮಾಡಿ ಗುದ್ಲಿ ಬೂಮಿಗ್ ಹಾಕ್ತನೆ.

ಗುದುಲಿ ಬಾಯಿಗೆ ನೋಡು ಎಪ್ಪಾರಿ ಬರುತಾನೆ।

ಎಪ್ಪಾ ತೆಗೀತಾನೆ, ಮೇಲುಕೆ ಎಸೀತಾನೇ।

ಎಪ್ಪಾ ತಗುದು ಮೇಲುಕೆ ಎಸಿಯೂತಾನೇ।

ಹದ್ದಾ ಹಾರಾಡಿದಂಗೆ ಎಷ್ಟೇ ಹಾರಾಡುತಾವೇ।

ಮರದಾ ತೆಂಗಿನ ಮರದ ಸೋಗೆಗಳ್ಳು, ಅಡಿಕೆ ಮರದ ಸೋಗೇಗೋಳು

ಎಪ್ಪಿನ ವಡುತ ತಡಿಲಾರ್ದೆ, ಮುರ್ದು ಮುರ್ದು ಬೀಳೂತಾವೇ।

ಅಯ್ಯ ಎಪ್ಪನ್ ವಡ್ತ ತಡಿಲಾರ್ದೆ. ಮುರ್ದು ಮುರ್ದು ಬೀಳುತಾನೇ।

ನನ್ನ ಬೀರೂರ್ ಕುಳಿವಾಡೀಗೋಳು ಕೋಟೆ ಮ್ಯಾಲೆ ನಿಂತುಗಂಡೂ।

(ಬೀರೂರು ಕುಳುವಾಡಿಗಳು ಕ್ವಾಟೆ ಮ್ಯಾಲೆ ನಿಂತ್ಕಂಡು ಅಯ್ನಾರ್ ತ್ವಾಟುದ್ ಕಡಿಕೆ ನೋಡ್ತಾರೆ)

ಯಪ್ಪು ಹದ್ದಾರಾಡ್ಡಂಗೆ ಹಾಕ್ತವಲ್ಲ .

ನನ್ನ ತಿಮ್ಮಣ್ಣ ಬೊಮ್ಮಣ್ಣ, ಕರಿಯಣ್ಣ ಕಾಳಣ್ಣ।

ತಿಮ್ಮಣ್ಣ ಬೊಮ್ಮಣ್ಣ, ಕರಿಯಣ್ಣ, ಕಾಳಣ್ಣ।

ನಮ್ಮ ಅಯ್ನೂರ್ ತ್ವಾಟ್ದಲ್ಲಿ, ದನುವೇ ಸತ್ತಿರಬೋದು।

ದನುವೇ ಸತ್ತಿರಬೋದು, ಹದೇ ಹಾರಾಡುತಾವೆ।

ಮಡಿಕೆ ತಕ್ಕಳಿರೊ. ಚೂರಿ ತೆಗೆದಿಟ್ಟಕೊಳ್ತೊ।

ಮಡಿಕೆಯ ಇಡುಕಂಡು, ಚೂರಿ ಕೈಲಿಡುಕಂಡೂ।

ಆರುವಯ್ಯ ತೋಟಕೆ. ಓಡಿ ಓಡಿ ಹೋಗುತಾರೇ।

ಎಪ್ಪಾ ನೋಡೀ ಶಿವನೆ ಎದರಿ ನಿಲ್ಲೂತಾರೇ।

(ದನ ಸತ್ತಾದೆ. ಹದ್ದು ಹಾರಾಡ್ತವೆ. ಬೊಮ್ಮಣ್ಣ ತಿಮ್ಮಣ್ಣ ಕರಿಯಣ್ಣ ಎಲ್ಲ ಮಡಿಕೆ ತಕ್ಕಂದು ಚೂರಿ ಇಡ್ಕಂದ್ ಓಡಿ ಬಂದ್ರೂವೆ ದಡಾ ದಡನೆ ಎಪ್ಪು ಬೀಳ್ತಾವೆ. ಬೂಮಿ ತಾಯೇ ಸಾಗುಸ್ತ ಇದ್ದಾಳೆ. ಈಗ ಎಪ್ ನೋಡಿ ಯದ್ರಿ ಓಡಿದ್ರು).

ಈಗ ನಾಕು ಬಾಗ ತ್ವಾಟದಲ್ಲಿ ಮೂರು ಬಾಗ ಅಗುದ್ನಲ್ಲ।

ನಾಕು ಬಾಗ ತ್ವಾಟದಲ್ಲಿ ಮೂರು ಬಾಗ ಅಗುದ್ನಲ್ಲ।

ಮೂರ್ ಬಾಗ ತ್ವಾಟ ಮುಗುದೋಯ್ತು ಆಗುದು. ಮಟ ಮಟ ಮದ್ಯಾಹ್ನ ಬಿಸುಲ ಜಳ.. ಅನ್ನಿಲ್ಲ ಆಡಿಲ್ಲ ಕೆಂಪೇಗೌಡ್ಗೆ,

ಅನ್ನಾ ಸಂಕ್ಟಾ ಬಂದು। ಮಾದೇವನೆ

ಅಯ್ಯ ಅನ್ನ ಸಂಕ್ಟ ಬಂದಾದೆ

ಇವ್ನು ಬಿಸುಲ ಜಳಾದಲ್ಲಿ

ಶಿವುನೆ ಜಳಜಳನೆ ಬೆವುರುತಾನೆ

ದಟ್ಟನೆ ದರಿಣಿಗೆ ಬಿದ್ದಾ

ಶಿವನೆ ಜಾನುವೇ ಇಲ್ಲುವಲ್ಲೋ

ಇವ್ನು ಸಪ್ಪಾಗಿ ಬಿದ್ದವನೆ

(ಬಿಸಿಲು ಜಳ, ಅನ್ನ ಸಂಕ್ಟ, ಜಳಜಳನೆ ಬೆವ್ತು ಅನ್ನ ಸಂಕ್ಟ ಬಂದು ಜಾನ ಮಾನಿಲ್ದೆ ಬಿದ್ದೋಯ್ತುನಿ. ಹಾರುವಯ್ನು ತೋಟುದಲ್ಲಿ ಈಗ ಹೆಡ್ತಿಗೇನೇಳೋಗಿದ್ದ .ಮಡದಿ ಕಾವೇರಮ್ಮ ಅಯ್ನೋರ ಮನೆತಾವೇನಾರ ಊಟ ತಗಬಾ ಅಂತ ಹೇಳಿಹೋಗಿದ್ನಲ್ಲ) ಈಗ ಮಡದಿ ಕಾವೇರಮ್ಮ ಮಾಗಡಿ ಕೆಂಪೇಗೌಡ್ನ ಅಲ್ಲಿ ಈ ಬೀರೂರ ಹಾರುವಯ್ನು ಮನಿಗೋಗಿ ಸ್ವಾಮಿ, ನಮಗೌಡ್ರು ನಿಮ್ಮನೆ ಜೀತಕ್ಕಾಗಿ ಬಂದ್ರು .ಕೂಲಿಗಾಗಿ ಬಂದ್ರು.. ಯಲ್ಲವ್ರೆ ಸ್ವಾಮಿ.. ಅವುರ್ಗೆ ಊಟ ತಂದಿದ್ದೀನಿ ..

ಹೋಗಮ್ಮ ಅಲ್ಲಿ ಆ ಬಡುಗ್ಲು ತ್ವಾಟ ಅಗಿತಾ ಅವ್ನೆ

(ಅದು ಅಲ್ಲ್ಯಾ .? ಈ ಹಿಂದ್ಕೆ .)

ಇವ್ನು ಜಲ್ಲಾ ಜಲ್ಲುನ್ ಬೆವುರೋದು, ಅನ್ನ ಸಂಕ್ಟ ಬಂದಿರೋದು ಯಾರಿಗೆ ಅರುವಾತು ಅಂದ್ರೆ ಮನೆದೇವ್ರು ರಂಗುಸ್ವಾಮಿಗೆ ದಿಟ್ಟಿಸಿ ನೋಡಿದ್ರು ನಾನು ಕೊಟ್ಟಂತ ಕಸ್ಟ ಗಂಡಾಂತ್ರ .ಅನ್ನ ಸಂಕುಟ ಬಂದು ಹಾರುವಯ್ನು

ತ್ವಾಟದ್ಲಲ್ಲಿ ಸಪ್ಪಾಗಿ ಬಿದ್ದವ್ನೆ ಬಿಸಿಲು ಜಳಿ ಯೋರುತ್ತಾದೆ ..ನಾನು ಕೊಟ್ಟ ಕಸ್ಟ ನಾನೇ ನೋಡ್ಬೇಕು ಅಂತ ಮನೆ ರಂಗುಸ್ವಾಮಿ ಮಾಯ್ದಲಿ ಹಾವಾಗಿ ಬಂದು ಉತ್ಕೋಗಿ  ಉತ್ತುದಿಂದ

ಯೇಳೆಡೆ ಸರುಪ್ಪಾಗಿ, ಹರುದು ಬರೂತಾದೇ।

ಯೇಳೆಡೆ ಸರುಪ್ಪಾಗಿ, ಹರುದು ಬರೂತಾದೇ।

ಯವ್ವೆ ಕೆಂಪೇಗೌಡ್ನ ಕ್ಯಾಪಾಲ. ತಕ್ಕೇ ಹೋಗೈತಲ್ಲಾ।

ಯೇಳೆಡೆ ಕೆದ್ರಿಕ್ಯಂಡು ನೆರಳಾ ಕಡಿಕಂಡೂ।

ಮನೆ ರಂಗುಸ್ವಾಮಿ ಮಾಯ್ದಲ್ಲಿ ಆ ತ್ವಾಟುಕ್ ಬಂದ್ರು.. ಉತ್ತೋಗಿ ಉತ್ತಿಂದ ಯೇಳೆಡೆ ಸರುಪ್ಪಾಗಿ ಅರುದ್ ಬಂದು ಈ ಕೆಂಪೇಗೌಡ್ನ ಬಲದ ಕ್ಯಪಾಲುತ್ತಾವ ತೆಕ್ಕೆ ಮಾಡಿ. ಯೇಳೆಡೆ ಕೆದ್ರಿಕ್ಯಂಡು ನೆರಳು ಕಡಿಗಂಡು ಕುಂತವ್ರೆ. (ಈಗ ಮಡಿದಿ ಕಾವೇರಮ್ಮ ನಿನ್ನ ಗಂಡ ಬಡುಗ್ಲು ತ್ವಾಟ ಅಗಿತಾವ್ನೆ ಹೋಗಮ್ಮ ಅಂತ ಹಾರುವಯ್ಯ ಹೇಳಿದ್ನಲ್ಲ ತ್ವಾಟುತ್ತಾಕೆ ಬತ್ತಾಳೆ–ಊಟ ತಿಕ್ಕಂದು)

ಗಂಡುನ್ ನೋಡುತ್ತಾಳೆ. ಗಂಡ ದರಣಿಗೆ ಬಿದ್ದವ್ನೆ। ಗಂಡುನ್ನ ಎದೆ ಮ್ಯಾಲೆ ಯೇಳಡೆ ಸರುಪ ಯಡೆಯಾತುಸ್ತೈತಲ್ಲೋ ದೇವಾ ..

ಸರುಪಾನಾ ನೋಡುತಾಳೇ

ತಲೆತಲೆ ಚಚ್ಚಕಂಡು। ಮಾದೇವನೆ

ಇವುಳು ಆಡಿ ಕಂಡು ಆಳುತಾಳೆ

ಸರುಪಾ ನನ್ನ ಗಂಡನ್ನ ಕಡುದಾದೆ

ಶಿವನೆ ನನ್ನ ಗಂಡ ಸತ್ತವ್ರೇ

ಇವುಳು ತಲೆ ತಲೆ ಚಚ್ಚಕಂಡು

ಇವುಳು ಆಡಿಕಂಡು ಅಳುತಾಳೆ

ಯವ್ವೆ ನಿಡಿಗೋಳ ಮಾಡುತಾಳೆ

ಗಂಡುನತ್ರ ಹೋಗಬೇಕು ಅಂದ್ರೆ ಸರುಪ ಅದೆ. ಬೆಚ್ಚ ಬೆದ್ರುತ್ತಾಳೆ. ಹಿಂತಿರುಗಿ ತ್ವಾಟ ಬುಟ್ಟು ಬಾರೆ ಮ್ಯಾಕೆ ಬಂದು ಜನ ನೋಡುತ್ತಾಳೆ. ಕುರುಬ್ರು ಮನೆ ಮಕ್ಳು ದನಾ ಬುಟ್ಗಂಡು ಕುರಿ ಕಾಯ್ತಾ ಅದೆ. ಆ ಮಕ್ಳ ಅತ್ರ ಹೋಗಿ ಮಕ್ಕಳ್ರಾ .ನನ್ನ ಗಂಡನ್ನ ಸರುಪ ಕಡುದು ಸತ್ ಬಿದ್ದಿದ್ದಾನೆ. ಬಲ್ಲಿರೋ ಮಕ್ಳ ಬಯವಾಗುತ್ತಾದೆ. ಆಗ ಮಕ್ಳ ಕಟ್ಕ್ಯಂಡು ಓಡಿ ಬರುತ್ತಾಳೆ. ಇವುಳ್ ಕಣ್ಣಿಗೆ ಸರುಪ್ಪಾಗಿ ಕಾಣುತ್ತಾದೆ.

ಆ ಮಕ್ಳ ಕಣ್ಣೆ ಮೂರ್ ನಾಮದ್ ಒಡೆಯನಾಗಿ ಕಾಣ್ತಾನೆ.

(ಇವುಳ ಕಣೆಗ್ ಮಾತ್ರ ಸರುಪ್ಪಾಗಿ ಕಾಣುಸ್ತಾರೆ. ಆ ಮಕ್ಳ ಕಣ್ಣಿ ಮೂರು ನಾಮುದ್ ರಂಗುಸ್ವಾಮಿಯಂಗ್ ಕಾಣ್ತಾವ್ರೆ)

ಅಮ್ಮ ಸುಮ್ನೆ ಯಾಕಮ್ಮ ಸರುಪ ಅಂತ ಯೇಳ್ತೀಯ. ಅವುರ್ ಮೂರು ನಾಮದ ಬರೆಯ ಕಣಮ್ಮ ಕಲಿಕಲಿಯಾಗಿ ಏಳೀತಾವ್ರೆ. ನೋಡಮ್ಮ ಇಲ್ಲ ಕಣ್ಣರಪ್ಪ ಅದು ಸರ್ಪ.

ಅದು ಸರುಪ್ನೆ ಆಗ್ಲಿ ಕರಿ ಆಲ ಕರ್ಕಂಬಂದು ಕೊಡ್ತಿವಿ ಕಯ್ಗೆ. ಅದು ಸರುಪ್ನೆ ಆಗಿದ್ರು ಅದ್ರ ಮುಂದ್ಕಿಡು ಅದು ಕುಡಿತದೆ .ಅಂತವೆ.

ಕೈಮುಗೀತಾಳೆ . ಮುಂದೇನ್ಮಾಡಾದು

ಓಡಿಹೋಗಿ ಮುತ್ತುದೆಲೆ ತಂದು ಜೊನ್ನೆ ಕಟ್ಟಿ ಕುರಿ ಆಲ ಕರ್ಕಂಬಂದು ಈ ವಮ್ಮುನ್ ಕೈಗೆ ಕೊಡ್ತಾವೆ .

ವೋಗಿ ಸ್ವಾಮಿ ಮುಂದುಕ್ಕೋಗಿ,,,ಸ್ವಾಮಿ ಮುಂದಕ್ ಮಡಿಗಿ ಅಂತವೆ. ಇವುಳೋಗಿ ಸರುಪನ ಮುಂದ್ಕೆ ಮಡ್ಗಿ ಕೈಯತ್ತಿ ಮುಗಿತಾವ ನಿಂತ್ಗಂಡು ದರ್ಮಾಗಿದ್ದಲ್ಲಿ ದರುಮ್ದಲ್ಲಿದ್ದಲ್ಲೀ ರಂಗುಸ್ವಾಮಿ ಈ ಕುರಿ ಆಲ ಕುಡುದ್‌ಬುಡು .

ಇವ್ನ ಬಲ್ದ ಕೈಪಾಲುತ್ವಾವ, ಬಲದ ಬುಜುದು ಮ್ಯಾಲೇ।

ಅರುದು ವೂಂಟೋಗುತ್ತಾದೆ।

ಬಲದ ಬುಜುದು ಮ್ಯಾಲೆ, ಅರುದು ವೊಂಟೋಗುತ್ತಾದೆ।

ಎದೆ ಮ್ಯಾಲೆ ಬಲದ ಬುಜೇದ್ ಮ್ಯಾಲೆ ಅರುದೋಗಬೇಕಾರೆ ಯೇನ್ ಕಾರಣ ಅಂದ್ರೆ ನಿನಗೆ ಗಂಡಾಂತರ ಗಾಚಾರ ಎಲ್ಲ ಕೊಟ್ಟುದ್ನಲ್ಲ ಅದೆಲ್ಲ ತಗಂದೋಯ್ತೀನಿ ಅಂತ. ಕೊಟ್ಟಂತ ಗಂಡಾಂತ್ರ ಗಾಚಾರ ತಗಳಕೆ ಸರುಪ್ನಾಗಿ ಬಂದು ಆ ಗಂಡಾಂತ್ರ ಗಾಚಾರನೆಲ್ಲಿ ತಗಂದ್ ಮಾಯ್ವಾಗಿ ಹೋದ ರಂಗುಸ್ವಾಮಿ.

ಈಗ ಗಂಡುನತ್ರ ಹೋಗಿ ಗಂಡುನ ಮಯ್ಯ ಚಿಂಗುತ್ತಾಳೆ. ಮೈ ಚುರುಕಂತಾದೆ. ಗಂಡ ಕಣ್ಬುಟ್ಟು ನೋಡುತ್ತಾನೆ .

ಯಾಕಮ್ಮ ನನ್ನ ಮಡಿದಿ, ಅಯ್ಲಾಟ ಮಾಡುತೀಯಾ।

ಯಾಕೇ ನನ್ನಾ ಮಡಿದಿ, ಅಯ್ಲಾಟ ಮಾಡುತೀಯಾ।

ನಾವು ಮದಿವ್ಯಾದ ಕಾಲದಿಂದ, ಅಯ್ಲೂಟ ಇಲ್ಲವಲ್ಲ।

ಈವತ್ನ ಕಾಲುದಲ್ಲಿ ಅಯ್ಲಾಟ ಮಾಡುತೀಯಾ।

ಅಯ್ಲಾಟ ಮಾಡುತ್ತಿಲ್ಲ ಸ್ವಾಮಿ . ಏಳೆಡೆ ಸರುಪ ಬಂದು ನಿಮ್ಮೆದೆ ಮ್ಯಾಲೆ ಎಡೆ ಆಡ್ತಿತ್ತು. ಸರುಪ ಕಡ್ದೇನಾರು ಸತ್ತವ್ರೋ ಅನ್ನ ಯೇಚ್ನೆತ್ತು ಮೈ ಚಿಂಗುಡ್ದೆ ಈಗ ನಿನ್ನ ಕಣ್ಣ ಪೂರ್ವ ನೋಡ್ದ ಏಳೇಕೆ ಸರ್ಪ ಅನ್ನದ?

ಹೌದು. ನಿಮ್ಮ ಬಲದೆ ಮಗ್ಗುಲಲ್ಲಿ ಅರುದು ಮಾಯ್ವಾಗಿ ಹೋಯ್ತು. ಅಸ್ಟು ದೂರ ಹೋಗಿ ಮಾಯ್ವಾತು.

ಮಡಿದಿ ಮಡಿದಿ ಯಾವ್ ದೇವ್ರ ಸಾಕಾರ್ವೊ ನಮಿಗೆ ಈಗ ಬಾಳ ಅನ್ನ ಸಂಕ್ಟ ಬಂದಾದೆ. ನಂಗೆ ಊಟುಕ್ಕೆ ಇಕ್ಕು ಬಾರೆ ಮಡಿದಿ.

ಆಗ,,,ಒಳ್ಳೆ ಸಪ್ಪು ಬಾರಕ್ಕೆ ಅಂಬ್ಲಿ ಬೇಸ್ಕ್ಯಂದೋಗಿದ್ಲಲ್ಲ ಕೆಂಪೇಗೌಡುಗೆ ಊಟುಕೆ ನೀಡಿದ್ಲು ಸಪ್ ತಿಂದು ಅಂಬ್ಲಿ ಕುಡುದ್ .

ಸಾಯಿಂಕಾಲುಕ್ ಬತ್ತಿನ್ ನಡಿ.. ಇನ್ನ ಕಾಲುಬಾಗ ಕಾಲ್ವಸಿ ತ್ವಾಟ ಪಿಟೆ.. ನಡಿಯಮ್ಮ ಅಂತ ಹೆಡ್ತಿ ಕಳುಸ್ತಾನೆ.

ಈಗ ಕಾಲ್ವಿಸಿ ತ್ವಾಟಾ, ಅಗುತ್ತೇ ಮಾಡುವಾಗ।

ಕಾಲುವಸೀ ತ್ವಾಟಾ, ಅಗುತ್ತೇ ಮಾಡುವಾಗ।

ಕಾಲುವಸಿ ತ್ವಾಟ ಅಗುತೆ ಮಾಡುವಾಗ ಇವ್ನ ಮನೆವಳುಗೆ ಏಳು ಕೊಪ್ಪಿಕೆ ಹಣ ಬಕ್ರೆ ಪಿಲ್ಲ್ಯಾಗಿತ್ತಲ್ಲಿ ಚಿನ್ನುದ್ ದೀಪಾಲ ಕಂಬ, ರನ್ನುದ್ ದೀಪಾಲೆ ಕಂಬೆಲ್ಲ ಮಾಯ್ವಾಗಿದ್ಯಲ್ಲಿ ಮಾಯ್ದಲ್ಲಿ ತ್ವಾಟುಕೆ ಬಂದು ಅಲ್ಲಡಿಸಿ

ಇವ್ನು ತ್ವಾಟುದಗ್ತೆ ಮಾಡುವಾಗ, ಗುದ್ಲಿ ಬಾಯ್ಗೆ ಸಿಕ್ಕುತಾದೇ।

ಏಳು ಕೊಪ್ಪರಿಕ್ಯಾಣ ದಗ್ಗು ದಗ್ಗನೆ ಯೇಳುತ್ತಾರೇ।

ಏಳು ಕೊಪ್ಪರೀಕ್ಯಾಣ ದಗ್ಗು ದಗ್ಗುನೆ ಯೇಳುತ್ತಾರೇ।

ಏಳು ಕೊಪ್ಪಿಕೆ ಹಣ ಕಂಡು ಸೆರಗು ಮಾಡುತ್ತಾನೆ. ಯೇನ್ ಜಾನ ಮಾಡುತ್ತಾನೆ. (ಗುದ್ಲಿ ಬಾಯ್ಗೆ ದಗನೆದ್ದು ನಿತ್ಕತ್ತು. ಈಗ ಏಳು ಕೊಪ್ಪಿಕೆ ಹಣ ಸೆರಣು ಮಾಡಿ ಕೈಮುಗಿದು ಯೇನ್ ಜಾನ್ ಮಾಡುತ್ತಾನೆಂದ್ರೆ ಯೇನಂತ ಬೇಡುತ್ತಾನೆ ಅಂದ್ರೇ ಇದು ನನ್ ಮನೆ ನನ್ ಬೂಮಿ ಏಳುಗ್ ಸಿಕ್ಕದ್ರೆ ನಂದು, ಇದು ಕಂಡಾರ ಜಮೀನಲ್ಲಿ ಸಿಕ್ಕಿರಾದು)

ನನ್ ಬೂಮಿ ನನ್ ಮನೇ ಏಳುಗೆ ಸಿಕ್ಕಿದ್ರೆ ನಂಗಿದು. ಕಂಡಾರ ಜಮೀನಲ್ಲಿ ಸಿಕ್ಕಿದರು ನಂದಲ್ಲ . ನಂಗೆ ಬೇಕುಲ್ಲ ಅಂತ..

ಐಪ್ಪ ಕಡಿಯೂತಾನೆ ಏಳು ಕೊಪ್ರಾಕ್ಯಾಣ ಮುಚ್ಚುತಾನೆ।

ಇದು ಬ್ಯಾಡ ಅನ್ನುತ್ತಾನೆ ಎಪ್ಪ ಕಡುದು ಮುಚ್ಚುತ್ತಾನೆ।

ಎಪ್ ತಗಿದಾಗ

ಚಿನ್ನುದ ದೀಪಾಲೆ ಕಂಬ, ರನ್ನುದಾ ದೀಪಾಲೆ ಕಂಬಾ।

ಗುದುಲಿ ಬಾಯಿಗೆ ನೋಡು, ದಗುದಗುನೆ ಯೇಳುತಾವೇ।

ಅದುನ್ನ ಸೆರಗು ಮಾಡ್ಕಂಡ.

(ಈವಾಗ ನನ್ನ ಬೂಮಿ ನನ್ ಮನೆ ವಳುಗಿದ್ದರೆ.. ನಾನು ನಂದು ಅಂತ ಮುಟ್ಟುಬೋದು ಇವು ನನ್ ಜಮೀನಲ್ಲಿಲ್ಲ. ಇದು ಕಂಡೋರ ಜಮೀನಲ್ಲಿರೋದು. ಇದು ನನಿಗೆ ಬೇಕುಲ್ಲ ಅಂತನ ಎಪ್ ಕಡುದ್ ಮುಚ್ತನೆ. ಆಷ್ಟೊತ್ತಿಗೆ ಇವ್ನ ಕಳೇವು ಕಾಂತಿ ಬದ್ಲಾವಣೆ ಆಗ್ಯದೆ. ದರಿದ್ರು ಕಳೇವು ಮಂಕಳೇವಿತ್ತು. ಈಗ ರಾಜಕಳೆ ಲಕ್ಷ್ಮಿಕಳೆ ಬಂದು ನಿಂತಾದೆ ಯಾವಾಗ ಇವ್ನ ಎದೆ ಮ್ಯಾಲೆ ಸರುಪ ಅರುದೋಯ್ತೊ ಅಲ್ಲೆ ಇವ್ನ ಗಾಚಾರ ಗಂಡಾಂತ್ರ ಎಲ್ಲ ಕಳುದೋಯ್ತಲ್ಲ.. ರಾಜಕಳೆ ಬಂತು. ಈಗ ಇನ್ನ ಕಾಲೊಸಿ ತ್ವಾಟಿತ್ತ? ಅಗಿಯಾದು. ಇದೆಲ್ಲನು ಮುಚ್ಚಕಚೆ ಎಲ್ಲನು ಕಡಿದ್ ಆಗ್ತಿನಾ ಈಗ ತ್ವಾಟ ಯಂಗ್ ಅಗುದವ್ನೆ ನೋಡ್ಬೇಕು ಅಂತ ಹಾರುವಯ್ಯ ಬತ್ತಿವ್ನೆ)

ಹಾರುವಯ್ಯ ಬಂದು ನೋಡಿದ್ರೆ ಕೆಂಪೇಗೌಡುನ ಮಂಕು ಕಳೇವು ಹೋಗಿಬುಟ್ಟು ರಾಜಕಳೇವು ಬಂದ್ಯೆತೆ. ಅವ್ನು ಮಕಾ ದಿಟ್ಟಿಸಿ ನೋಡಿ ಬುಟ್ಟು ಹಾರುವಯ್ಯಾ ನಮ್ಮ ಮನೀಗೆ ಜೀತುಕೆ ಕೇಳಾಕೆ ಬಂದಿದ್ದಾಗ ಇವುನ ಕಳೇವು ಕಾಂತಿ ಒಂದು ಲಕ್ಷಣವಾಗಿತ್ತು. ಈಗ ತ್ವಾಟ ಅಗುತೆ ಮಾಡುವಾಗ ರಾಜ ಕಳೇವು, ಲಕ್ಷ್ಮಿ ಕಳೇವು ಬಂದ್ಯೆತೆ ಯೇನಿರ್ ಬೋದು ಇವ್ನ ಮುಂದೆ .

ಸ್ವಾಮಿಗೆ ಕೆಯತ್ತಿ ಮುಗಿತಾನೆ ಕೆಂಪೇಗೌಡ .

ಕೆಂಪೇಗೌಡ, ತ್ವಾಟುದಗ್ತೆ ಮಾಡಾದ ಇಲ್ಲಿಗ್ ಸಾಕು ಮಾಡು ಬನ್ನಿ ಸ್ವಾಮಿ ಮನೆಗೆ ಹೋಗಾನ ಅಂತ ಮಾತ ಬಂದ್ಲುಸ್ತಾನೆ.

ಮನೆಗೆ ಕರ್ಕೊಂಡೋಗಿ, ನೀರ ಊಸುತಾನೇ।

ಆಲು ಬಾನದಡುಗೆಯ, ಮುಂದಕೆ ಇಕ್ಸುತಾನೇ।

ಐಬೋಗವಾದ ಆಡಿಗೇ ಮಾಡ್ಸಿ, ಕೆಂಪೇಗೌಡುಗ್ ಊಟುಕ್ ಇಕ್ಸಿ.. ಕೈಮುಗಿತಾ ನಿಂತ್ಕತ್ತಾನೆ. ಕೆಂಪೇಗೌಡ ನೋಡ್ಬುಟ್ಟು.. ಇದೇನ್ ಸೆರಣಾರ್ತಿ ಆಕ್ತೀರಲ್ಲ ನನ್ಗೆ? ಕೆಂಪೇಗೌಡ ಈಗ ನಿನ್ನತ್ರ ಒಂದು ಮಾತ ಕೇಳ್ಬೇಕು ನಾನು.

ಅದೇನ್ ಸ್ವಾಮಿ

ನನ್ ಮನೀಗೆ ಕೂಲಿ ಕೇಳಾಕೆ ಬಂದಿದ್ದಾಗ ನಿನ್ ಮಕುದ್ ಕಾಂತಿ ಕಳೇವು ಒಂದ್ ರೀತಿಯಿತ್ತು. ನನ್ನ ತ್ವಾಟುಕ್ ಕಾಲಿಟ್ ಮ್ಯಲೆ ಲಕ್ಷ್ಮಿ ಕಳೆ ರಾಜಕಳೆ ಕಾಣುಸ್ತಾದೆ. ಮುಂದೆ ನೀನು ದೊರೆಯಗಬೋದು. ಮುಂದೆ ನಿನ್ಗೆ ಸಿರಿತಾನ, ದೊರಿತಾನ ಬರಬೋದು. ರಾಜ್ಯಬಾರಿಕೆ ನಿಂಗೆ ಬರಬಹುದು. ಕೆಂಪೇಗೌಡ,,, ಕೆಂಪೇಗೌಡ ಮುಂದೆ ನೀನು ದೊರೆಯಾಗುತ್ತೀಯ.

ಸ್ವಾಮಿ ಸ್ವಾಮಿ

ನಿಮ್ಮ ಮನೇಲಿ ಕೂಲಿ ಮಾಡೋನು ನಾನೂ।

ಜೀತ ಮಾಡೋನಿಗೆ ದೊರೆತಾನೆಲ್ಲಿಂದ ಬಂತೋ।

ಇಲ್ಲಾ ಸ್ವಾಮಿ. ಮುಂದೆ ನೀವು ರಾಜ್ಯಬಾರಿಕೆ ಮಾಡ್ತೀರಿ. ಲಕ್ಷ್ಮಿ ಕಳೆ ರಾಜಕಳೆ ಇಟ್ಟಾಡುತ್ತಾದೆ. ಆಯ್ತಾ ಸ್ವಾಮಿ. ನೀವೇಳಾದು ದಿಟಾದ್ರೆ. ನಿಮ್ಮಾಶ್ರೀವ್ರಾದುದ್ಮೇಲೆ ನನಿಗೆ ರಾಜ್ಯಬಾರಿಕೆ ಸಿಗ್ಲಿ,,, ಅಂತಾನೆ. (ದೊರೆಯಾಗಲಿ, ರಾಜ್ಯಬಾರಿಕೆಯಾಗಲಿ ನಿಮ್ಮ ಆಶೀವ್ರಟ್ಕೇಲಿ ಸಿಕ್ಕಿದ್ರೆ.)

ಅಂಗೆ ಸಿಕ್ಕಿದ್ ಕಾಲುಕ್ಕೆ ನಿನಗೆ ದೊರೆತಾನ ಬಂದು ಕಾಲುಕ್ಕೆ..

ನಿಮಿಗೆ ಸಿರಿತಾನ ಬಂದ ಮೇಲೆ, ನನಗೇನ ಕೊಡುತೀರಿ।

ನಿಮಿಗೆ ಬಾಗ್ಯೇವುಂಟಾದು ಮೇಲೆ, ನನಗೇನ ಕೊಡುತೀರಿ।

ನಿಮಿಗೆ ಸಿರಿತಾನುಂಟಾದ ಮೇಲೆ, ನನಗೇನ ಕೊಡುತೀನಿ।

ಯೇನ್ ಕೊಡ್ಲಿ ನಿಮಿಗೆ ?

ನಿನುಗೆ ದೊರೆತಾನ ಬಂದಾರೆ, ನನಿಗೆ ಮಂತ್ರಿ ಸ್ಥಾನ ಕೊಡುಬೇಕು

ದೊರೆಸ್ಥಾನ ಬಂದು ಕಾಲ್ಕೆ, ಮಂತಿರಿ ಸ್ಥಾನ ಕೊಡಬೇಕೂ।

ಆಗ್ಲಿ ಕಾನಪ್ಪ .ನಾನು ದೊರಿಯಾದ್ರೆ ನಿಮಿಗೆ ಮಂತಿರಿ ಸ್ಥಾನ ಕೊಡುತ್ತೀನಿ.

ಕೆಂಪೇಗೌಡ,,,,ಕೆಂಪೇಗೌಡಾ

ಬರಿಯಾ ಮಾತೀನಿಂದ, ಪಲವಿಲ್ಲಾ ಶಿವಶಿವಾ।

ಇದುಕೊಂದು ಕೈಹಾಕ್ದ, ಮಾಡಿಕೊಡಪ್ಪ ನೀನೂ।

(ನನಿಗೆ ದೊರಿತಾನ ಆದ್ ಕಾಲುಕ್ಕೆ ನಿನಗೆ ಮಂತ್ರಿ ಸ್ಥಾನ ಕೊಡ್ತೀನಿ ಅಂತ ಕಾಗದ ಬರ್ಕೊಡು ಅಂತಾನೆ. ಈಗ ಆಯ್ತು. ಕೂಲಿಕೊಡು)

ಅಸ್ಟು ಕಂಡು ಬಂದ್ರು ಈ ಬ್ರಾಮ್ಮಣ

ಇವುನ್ಗೆ ಕೂಲಿ ರಾಗಿ ಕೊಡಾಕೆ, ಕಮ್ಮಿ ಪಡೀ ಉಡ್ಕುತಾನೇ।

ಇವುನ್ಗೆ ಕೂಲಿ ರಾಗಿ ಕೋಡಾಕೆ ಕಮ್ಮಿ ಪಡೀ ಉಡ್ಕುತಾನೇ।

ಮೂರು ಪಡೀ ರಾಗೀಯ ಅಳುದು ಸರುದುನಲ್ಲಾ।

ಆಗ ಮೂರ್ ಪಡದಿ ರಾಗಿಯಾ ಸೆರುಗಿನ್ ಕಟ್ಟಿಕೊಂಡು– ಆ ಬೆಂಗ್ಳೂರು– ಮಹಾಂತ ಕಾಡಲ್ಲ ಆಗ ಆ ಬೂಮೀ ಮ್ಯಾಲೋಯ್ತಾವ್ನೆ, ರಾಗಿ ಇಟ್ಟಂಡು ಈ ತ್ವಾಟ್ದಲ್ಲಿ ಸಿಕ್ಕಿತ್ತಲ್ಲ ಚಿನ್ನುದ್ ದೀಪಾಲೆ ಕಂಬ, ರನ್ನುದ್ ದೀಪಾಲೆ ಕಂಬ, ಏಳ್ಕೊಪ್ಪಿಕೆ ಹಣ ಇವ್ನು ಮ್ಯಾಲೇತುದ್ರೆ ಅದು ಬೂಮಿ ಬಳುಗೆ ಬತ್ತಾದೆ. ಕಂಡೋರ್ ಸ್ವತ್ತಲ್ಲಿ ಕಂಡೋರ್ ಅಸ್ತೀಲಿ ಸಿಕ್ಕಿದ್ದು ನಂಗೆ ಬ್ಯಾಡಾ ಅಂತ ಬುಟ್ಬುದ್ನಲ್ಲ ಇವ್ನು ಬೂಮಿ ಮ್ಯಾಲೋತುದ್ರೆ. ಅದು ಬೂಮಿ ಒಳುಗ್ ಬತ್ತದೆ ಅನುಸರಿಸ್ಕ್ಯಂಡು) ತಂದು ಅವತ್ತ ಮೂರ್ ಪಡೀ ರಾಗೀ ಅಂಬ್ಲೀ ಕಾಸ್ಕ್ಯಂಡು ಕುಡುದು ಮಲಗಿದ್ದಾರೆ. ನಿದ್ದೆಲಿ ಮನಗಿದ್ಯಾಗ ಸೊಪ್ಪಿನ್ ಗುಡ್ಲೊಳ್ಗೆ

ಏಳು ಕೊಪ್ಪರೀಕ್ಯಾಣ, ಎದ್ದು ನಿಂತೈತಲ್ಲೋ।

ಏಳು ಕೊಪ್ಪರೀಕ್ಯಾಣ, ಎದ್ದು ನಿಂತೈತಲ್ಲೋ।

ಚಿನ್ನುಆ ದೀಪಾಲೆ ಕಂಬ, ರನ್ನುದಾ ದೀಪಾಲೆ ಕಂಬಾ।

ಚಿನ್ನುದ್ ದೀಪಾಲೆ ಕಂಬ, ರನ್ನುದ್ ದೀಪಾಲೆ ಕಂಬೆಲ್ಲ ಬಂದು ದಗ್ಗನೆ ಹಣನ ಮುಂದೂಗಡೆ ಹಣುದ ಮುಂದೂಗಡೆ, ದೀವೀಗೆ ಉರಿಯೋದೂ।

ಎದ್ ನೋಡ್ದ್ರೆ ಏಳ್ ಕೊಪ್ರಿಕೆ ಹಣ, ಚಿನ್ನುದ್ ದೀಪಾಲೆ ಕಂಬ, ರನ್ನುದ್ ದೀಪಾಲೆ ಕಂಬ, ಅವಾಗ ಅದು ಕಂಡೋರ ಸ್ವತ್ತಲ್ಲ. ಇದು ಈಗ ತೋಟದಲ್ಲಿ ಇಲ್ಲ. ಈಗ ಬ್ಯಾಡ ಅನ್ನಬಾರ್ದು. ಈಸಪ್ಪನ್ ಗುಡ್ಲು ನಂದು ಅನ್ನದಾಗಿ ಇರುವಾಗ ಇದು ಇಲ್ಲಿ ಸಿಕ್ಕಿರಾದು . ಇದು ನಂದೆಯ ಈಗ ಏಳು ಕೊಪ್ಪಿಕೆ ಹಣ, ಚಿನ್ನುದ್ ದೀಪಾಲೆ ಕಂಬ, ರನ್ನುದ್ ದೀಪಾಲೆ ಕಂಬ,,,ಮುಂದೆ ಯೇನ ಮಾಡ್ಲಿ ಮಕ್ಳಿಲ್ಲವಲ್ಲ. ಇದುನ್ನ ಬಡುರ್ಗೆ ಅಂಚಬೇಕು, ಅನಾತುರ್ಗೆ ಇದುನ್ನ ಅಂಚಬೇಕು. ಯಾವ ರೀತಿಯಾಗಿ ಅಂಚ್ಲಿ ಅನ್ನದಾಗಿ ಜಾನ ಮಾಡುವಾಗ

(ಇದು ಮಲ ಸಿಕ್ಕಿದ್ದು, ನಾಯಿ ಬೆದ್ರಿಸಿದ್ದು ಆಗ ಪಂಚಾಂಗ ಕೇಳಿದ್ದು ,,,,,ಪಂಚಾಂಗ ತೆಗೆದಾಗ ಗಂಡು ಬೂಮಿ ಅನ್ನ ಹೆಸ್ರು ಬಂದಿತ್ತಲ್ಲ ಗಂಡು ಬೂಮಿ)

ಆ ಗಂಡ್ ಬೂಮೀಲೊಂದ್ ಊರ್ ಕಟ್ಬುಬೇಕು.

(ಬೆಂಗ್ಳೂರ )

ಆಗ ಆ ಕಾಡಲ್ಲಾನು ಕಡಿಸ್ಬುಟ್ಟು, ಬ್ರಾಮುಣ್ರ ಕರ್ಕಬಂದು ಎಸ್ಟೋ ಮೈಲಿ, ಎಸ್ಟೋ ಯೇಜಿನ ಗರುತ್ ಮಾಡುಸ್ತಾನೆ.

(ಆ ಕಾಡೆಲ್ಲನುವೆ ಕಡ್ಸಿ, ಎಸ್ಟೋಮ್ಯೆಲಿ, ಎಸ್ಟೋ ಊರ್ನೆಲ್ಲ ಸೇರಸಿ ಬಂದ್ ಊರು ಕಟ್ಟಾನೆ ಬಂದು ಸಾವುರಾಂತ್ರ ಮನೆಕಟ್ಟಿ)

ಅಟಿಲಿರೋದು, ಬೀದಿಲಿರ್ದೋದು, ಬಿಕಾರಿಗಳು ಎಲ್ಲಾರ್ನು ಕರ್ಕಂಬಂದು ಅಲ್ಲಿಗೆ ವಕ್ಲಾಕುಸ್ತಾನೆ.

( ವಕ್ಲಾಕ್ಸಿ ಊರ್ಗೇನಂತ ಹೆಸ್ರಿಡ್ಬೇಕು ಈಗ ಈ ಕಾಸ್ನಲ್ಲಿ ಸೇರ್ಕಂಡು ಮಿಗುದ್ ಜಾತಿ ವಡ್ಡು ಯಾರ್‍ಯಾರ ಮಾರಿ, ಆಕಾಸ್ಗೆ ಬಳ್ಳಿ ಕಾಳ ತಿಂದು ಬೆಂಗ್ಳಚ್ಚಿ ತಿಂತುದ್ನಲ್ಲ ಈ ಕಾಡ್ನಲ್ಲಿ)

ಉಳ್ಳಿ ಕಾಳೆಸ್ರ ಇಡುಬೇಕು ಅಂತ ಬಿಸ್ಟಿ ಬಿತ್ತು.

ಬೆಂದ್ ಕಾಳ ಊರಂತ ಹೆಸರ ಇಟ್ಟಾತ್ತಾನೆ।

ಬೆಂದ ಕಾಳ ಊರಂತ ಹೆಸರ ಇಟ್ಟಾತ್ತನೆ।

ಉಟ್ಟಿಸ್ರು ಬೆಂದ ಕಾಳೂರು ಅಡ್ಡೆಸ್ರು ಬೆಂಗಳೂರು

ಬೆಂಗ್ಳೂಳ್ಳ ಕಾಳು ನನ್ನ ಸಾಕ್ಯದೆ. ಆ ಉಳ್ಳಿ ಕಾಳೆಸ್ರ ಉಳಿಸ್ಬೇಕು ಅಂದ.

ಬೆಂಗಾಳೂರು ಅಂತ ಹೆಸರು ಇಟ್ಟಾನಲ್ಲ।

ಕೆಂಪೇಗೌಡ ಕಟ್ಟಿಸಿದ್ದು, ಬೆಂಗಳೂರು ಶಿವಶಿವಾ।

ಎಸ್ಟೋಕ್ಲ ಅಲ್ಲಿ ಅಕ್ಸಿದ್ದ ಅವ್ರೆಲ್ಲ ಇವುನ್ನ ನಮಿಗೆಲ್ಲ ನೀನೇ ರಾಜ ಅಂದ್ರು. ಆಗಾಗಿ ಇವುನಿಗೆ ರಾಜಬಾರಿಕೆ ಸಿಕ್ತು ಯಾರ್ಗೆ? ಕೆಂಪೇಗೌಡ್ಗೆ.

ಊರ್ ಕಟ್ಟಿವ್ನೆ, ಸಾವುರಾಂತ್ರ ಮನೆ ಕಟ್ಟಿ ವಕ್ಲಾಕ್ಸವನೆ.. ಅವುರೆಲ್ಲಿ ಇವುನ್ನ ರಾಜ ಅಂದ್ರು. ಅವನೆಸ್ರ ಮೆರುಸ್ಬೇಕು ಅಂತ 'ಕೆಂಪೇಗೌಡ್ನ ಸರ್ಕಲ್ಲು" ಅನ್ನದಾಗಿ ನಾಮಕರಣ ಮಾಡಿಬಿಟ್ಟು ಕೆಂಪೇಗೌಡ ಯಾವ್ ಚಂದುಕೆ ಇದ್ದ.

ಇವನ ಚಂದುಕೆ ಶಿವಶಿವ ಕೆಂಪೇಗೌಡ್ನ ಕಡುದಾರೆ।

ಸರ್ಕಲ್ಲ ಮಾಡಿ ಈ ಕೆಂಪೇಗೌಡ ಯಾವ ರೀತಿಯಿದ್ದ ಅದೇ ಚಂದುಕೆ ತಿದ್ದಿ 'ಕೆಂಪೇಗೌಡ್ನ ಸರ್ಕಲ್' ಅನ್ನದಾಗಿ ಹೆಸ್ರಿಟ್ರು.

ಆಗ ಕಟ್ಟಿದ್ದು ಬೆಂಗ್ಳೂರು. ಬೆಂಗ್ಳೂರು ಯಾರು ಕಟ್ಟಿದ್ದು ಅಂದ್ರೆ ಮಾಗಡಿ ಕೆಂಪೇಗೌಡ, ಬೆಂಗ್ಳೂರಲ್ಲಿರೋ ಇದಾನ ಸಬೆ ಯಾರ್ ಕಟ್ಟಿದ್ರು ಅಂದ್ರೆ
ಕೆಂಗಲ್ ಅನುಮಂತೇಗೌಡ
(ಕೆಂಗಲ್ ಅನುಮಂತೇಗೌಡ ಇದಾನ ಸಬೆ ಕಟ್ಟಿದ್ದು. ದುಡ್ ಕರ್ಚು ಮಾಡಿ, ಕಾಸ್ ಕರ್ಚು ಮಾಡಿ ಬೆಂಗ್ಳೂರ್ ಇದಾನ ಸಬೆ ಕಟ್ಟಿದ್ರು. ಯಾವ ತರ ಕಟ್ಟುದ್ರು ಅಂದ್ರೆ ಕಳ್ರು ಕೈಲಿ ಕಟ್ಟಿದ್ರು. ಈಗ ಆಗಿನ ಕಾಲ್ದಲ್ಲಿ ಇದಾನ ಸಬೆ ಕಟ್ಟಿದ್ ಕಾಲ್ದಲ್ಲಿ ಇವ್ರು ಮಂತ್ರಿ ಇವ್ರು ಮಿನಿಸ್ಟ್ರು. ಕೆಂಗಾಲ್ ಅನುಮಂತೇಗೌಡ್ರು ಮಿನಿಸ್ಟ್ರಾಗಿದ್ ಕಾಲ್ದಲ್ಲಿ ಈ ಕಳ್ರೆಲ್ಲ ಜೈಲಲ್ಲಿದ್ರಲ್ಲ ಅವರೆಲ್ಲಾರ್ನು ಕರ್ಸಿ)

ಆ ಕಳ್ರುಗೋಳ ಕರ್ಸಿ ಇದಾನ ಸಬ ಕಟ್ಟುಸ್ತಾನೆ. ಕೆಂಗಾಲ ಅನುಮಂತೇಗೌಡ ಕಳ್ರು ಕಟ್ಟಿದ್ ಇದಾನ ಸಬೇಲಿ ಡಾಕುಗಳು, ಕಳ್ಳುಗೋಳು ಕೈಲಿ ಕಟ್ಟಿಸಿದ್ರಿಂದ .ಇದಾನ ಸಬೆ ಕಟ್ಟಿಸ್ದೋನು ಅನುಮಂತೇಗೌಡ ಬೆಂಗ್ಳೂರ್ ಕಟ್ಟಿಸಿದ್ದು ಕೆಂಪೇಗೌಡ

ಇಲ್ಲಿಗೆ ಮುಕ್ತಾಯವಾಯತಲ್ಲೋ ದೇವಾ ..

# ಬಾಲ ನಾಗಮ್ಮ

ನನ್ನ ಪಕೀರು ಸಾಬುರ ಮಸೀದಿ ಬಳುಗಲ್ಲೋ

ನನ್ನ ಪಕೀರು ಸಾಬುರ ಮಸೀದಿ ಬಳುಗಲ್ಲೋ .। ತರುನಂದೇ ನಾನಾ।

ಪಕೀರು ಸಾಬುರ ಮಸೀದಿ ಬಳುಗಲ್ಲೋ।

ಸಾಬುರ ಮುಲ್ಲೆ ಸಾಸುರ ಅಲ್ಲೆ ನೋಡು ತಾರೇ।

ಮುಲ್ಲೆ ಸಾಸುರ ಅಲ್ಲೆ ನೋಡು ತಾರೇ।

ಅವುನಿಗೆ ಚಿನ್ನುದ ಮಸೀದಿ ರನ್ನುದ ಮಸೀದೀ।

ಚಿನ್ನುದು ಮಸೀದಿ ರನ್ನೂದು ಮಸೀತೀ।

ಚಿನ್ನುದು ಮಸತಿ ನೂರಾರು ಮಸೀತೀ।

ಸಾಬುರ ಮುಲ್ಲೆ ಸಾಸುರ ಅಲ್ಲೆ ಓದುತಾರೇ।

ಪಕೀರು ಸಾಬುರ ಮಸೀದಿ ಬಳುಗಲ್ಲೋ ಮುಲ್ಲೆ ಸಾಸುರ ಓದುವಾಗ

ಪಾನುಗಲ್ಲ ಪಟ್ಟುಣುದ ಬಳುಗಲ್ಲಾ।

ಪಾನುಗಲ್ಲ ಪಟ್ಟುಣುದ ಬಳುಗಲ್ಲಾ।

ಅಲ್ಲಿ ಏಳು ಕುಂಪನ ದೊರೀಗಳಿರುವಾರು।

ಏಳು ಕುಂಪಿನ ದೊರೀಗಳಿರುವಾರೂ।

ಏಳು ಕುಂಪಿನ ದೊರಿಯ ಮಡದೀರು।

ಅವುದು ಏಳು ಜಾನ ಅಕ್ಕ ತಂಗೀರೂ।

ದಾನುವತಿ ಚಂದುಕರವತಿಯಲ್ಲೋ।

ನಿಚ್ಚುಲುಗನ್ನೆ ನೀಲಗನ್ನೆಲ್ಲೊ।

ಬಾಲು ಸಂಗಮ್ಮ ನೀಲು ಸಂಗಮ್ಮ ।

ಬಾಲು ಸಂಗಮ್ಮ ನೀಲು ಸಂಗಮ್ಮ

ಆರಳಿಗಿಂತ ಕಿರೀಯವಳವುಲ್ದಲ್ಲೊ

ಆರಳಿಗಿಂತ ಕಿರೀಯವಳವುಲ್ದಲ್ಲೊ

ಬಾಲ ನಾಗೋಜಿ ಅಂತ ಹೆಸರಲ್ಲೋ

ಬಾಲ ನಾಗೋಜಿ ಕಾನೋ ಶಿವಶೀವಾ

ಏಳು ಕುಂಪಿನ ಏಳು ಜನ ಹೆಂಡ್ತೀರು ದಾನವತಿ ಚಂದುರವತಿ, ಅಚ್ಚಗನ್ನೆ, ನೀಲುಗನ್ನೆ, ಬಾಲ ಸಂಗಮ್ಮ ನೀಲ ಸಂಗಮ್ಮ ಆರು ಜನಕೆ ಕಿರಿಯಳು ಯಾರು  ಆರು ಜನುಕ್ಕೆ ಕಿರೊಯೋಳು

ಕಿರಿತೋಖಯೆಸರು ಬಾಲು ನಾಗೋಜಿ

ಅವುಳು ಮೂರು ತಿಂಗಳ ಬಾಣತಿ ಕಾನವೋ

ಮಂಗುಳಾರದ ಮದ್ದುರಾತ್ರಿವಳಗೆ

ಮಂಗುಳಾರದ ಮದ್ದುರಾತ್ರಿವಳಗೇ

ಬಾಲನಾಗೋಜಿ ನೀರ ವೀಯ್ತಾಳೇ

ಮೂರ್ ತಿಂಗ್ಳು ಬಾಣ್ತಿ ಬಾಲನಾಗೋಜಿ  ಮಂಗಳಾರದ ಮದ್ ರಾತ್ರಿ ವತ್ನಲ್ಲಿ ನೀರ್ ಮೀಯ್ತಾ ಬಾಲನಾಗಮ್ಮ ..ಅಂಗಳದಲ್ಲಿ ಕುತ್ಗಂಡು ನೀರ್ ಮೀಯ್‌ವಾಗ

ಅವಳ ತಲೆ ತಿಕ್ಯಂದು ನೀರ ಮೀಯುವಾಗಾ

ತಲೆ ತಿಕ್ಯಂದು ನೀರ ಮೀಯುವಾಗಾ

ತಲೆ ಕೂದಲು ಕಿತ್ತು ಬಾರುತ್ತಾದೇ

ತಲೇ ಕೂದಲು ಕಿತ್ತೇ ಬಾರುತ್ತಾದೇ

ಅಂಗಳದಲ್ಲಿ ಕುತ್ಗಂದು ನೀರ್ ಮೀಯುವಾಗ ತಲೆ ತಿಕ್ಯಂದ್ ನೀರ್ ಮೀಯುವಾಗ ತಲೇ ಕೂದಲು ಕಿತ್ತು ಬಂತು. ಕಿತ್ ಬಂದು ನೀರಲ್ಲಿ ಸೇರ್ಕಂದು ಹೊಳೇ ವೀಳ್ತು ಅಂಗುಳದಲ್ಲಿ ಹರಿದು ಬಂದು ಹೊಳೇ ಸೇರ್ಕಂದು (ಬಾಲ ನಾಗೋಜಿ ಅಂಗಳದಲ್ಲಿ ನೀರ್ ಮೀಯುವಾಗ ಮೂರೆಳೆ ತಲೆ ಕೂದ್ಲು ಕಿತ್ ಬಂದು ಅಂಗಳುದಲ್ಲಿ ಹರದು ಹೋಗಿ ಹೊಳೆ ಬೀಳ್ತು. ಈ ಪಕೀರು ಸಾಬುರು ಬೆಳಗಿನ ಜಾವದಲ್ಲಿ ನಮಾಜು ಕೂಗಬೇಕಿಲ್ಲ.  ಈ ಪಕೀರು ಸಾಬುರು ಬೆಳಿಗನ ಜಾವದಲ್ಲಿ ಹೊಳೀಗೆ ಹೋಗೊ. ..

ಹೊಳೀಗೋಗಿ ನೀರ ಮೀಯುತ್ತಾರೆ

ಹೊಳಿಗೇ ಹೋಗಿ ನೀರ ಮೀಯುತ್ತಾರೇ.

ಅಲ್ಲಿ ತಳಗೆ ಪಕೀರು ಸಾಬುರು ನೀರ್ ಮೀಯ್ತಾಅವರೆ ಹೊಳೇಲಿ. ಆ ಅಂಗಳದಲ್ಲಿ ತೇಲಿ ಹೋದ ತಲೆ ಕೂದ್ಲು

ಹೊಳೇಬಿದ್ದು ತೇಲ್ಕಂಡು ಬರ್‍ರೈತೆ

ಹೋಗಿ ಪಕೀರ ಸಾಬರ ಮಯಿಗೆ ಸುತಿಕಂಡೋ

ಪಕೀರ ಸಾಬತ ಮಯಿಗೇ ಸುತ್ತಿ ಕಂಡೋ

ಸಾಬುರು ಮಯ್ಯಿತಾವ ಕೂದ್ಲ ನೋಡುತ್ತಾರೇ

ಮಯ್ಯಿಗೆ ಸುತ್ತಿಕಂಡಾಗ ಸಾಬುರು ತನ್ ಮಯ್ಯಿಗೆ ಸುತ್ತಿ ಕಂಡ ತಲೆ ಕೂದ್ಲ ತಗುದು ನೋಡ್ತಾರೆ. ಸಾಬುರ ಕಣ್ಣಿಗೆ ರವರವನೆ ಹೊಳೀತಾವೆ. ಚಿನುದ್ ಕೂದ್ಲಂಗೆ

ಚಿನ್ನುದ್ ಎಳೆಯಂಗೆ ಕಾಣ್ತಾದೆ, ಬೆಳ್ಳಿ ಎಳೆಯಂಗೆ ಕಾಣ್ತಾದೆ. ಅದ ತಗುದು ನೋಡಿ ಕಣ್ಣಿಗೆ ಸೆರಗು

ಮಾಡಿಕ್ಯಂಡು ಪಕೀರು ಸಾಬೀ . ಸೆರಗು ಮಾಡಿಕ್ಯಂಡು

ಇದು ಚಿನ್ನುದೆಳೆಯಾ ಕಾಣೆ ರನ್ನುದೆಳೆಯೊ ಕಾಣೇ

ಚಿನ್ನುದೆಳೆಯ ಕಾಣೆ ಬೆಳ್ಳಿಯೆಣೆಯೊ ಕಾಣೇ

ಎಂಥಾ ಎಳೆಯೋ ಗೊತ್ತೇ ಆಗೋದಿಲ್ಲಾ

ಎಂಥಾ ಎಳೆಯೋ ಗೊತ್ತೇ ಆಗೋದಿಲ್ಲ

ಯಂತಾ ಎಳೆಯೋ ಗೊತ್ತೇ ಅಗದಿಲ್ಲ  ಆಗ ಪಕೀರ ಸಾಬುರು ಮುಂದೇನ್ ತಿಳ್ಕತ್ತಾರೆ ಅಂದ್ರೆ.. ಯೇನ್ ಜಾನ ಮಾಡುತ್ತಾರೆ ಅಂದ್ರೆ .ಈ ಪಕೀರ್ ಸಾಬುರು ಸೂಳೆ ಗಾಣಿಗರ ಸಂಗವತಿ, ಗಾಣಿಗರ ಸಂಗವತಿಯನ್ನು ಈ ಪಕೀರು ಸಾಬುರು ಸೂಳೆ ಮಾಡಿ ಇಟ್ಗಂಡಿದ್ರು. ಆ ಹೊಳೆವಳುಗೆ ಸೂಳೆ ಜಾನ ಮಾಡುತ್ತಾರೆ.

ನನ್ ಸೂಳೆ ಗಾಣಿಗರ ಸಂಗವತಿಗೆ ತಂಗಂದೋಗಿ ತೋರಿದ್ರೆ . ಅವುಳು ಎಲ್ಲನು ತಿಳಿದು ಹೇಳುತ್ತಾಳೆ.

ಸೂಳೆ ಮನೆತಕೆ ತಕ್ಕಂಡು ಬತ್ತಾನೇ
ಸೂಳೆ ಗಾಣಿಗ್ರ ಸಂಗವತಿ ಮನಿಗೇ
ತಲೆಯ ಕೂದಲ ತಗಂಡು ಬರ್ತಾನೇ
ಸೂಳೆ ಮನೆತಕೆ ತಗಂಡು ಬರ್ತಾನೆ
ಅವನ ಸೂಲೇ ಗಾಣಿಗರ ಸಂಗೋಜೆ
ಅವುಳ ಮಗುಳ ಕೇಳಕೆ ನೆಂಟರು ಬಂದಾರೆ
ಮಗಳ ಕೇಳಕೆ ನೆಂಟರು ಬಂದಾರೇ

ಗಾಣಿಗರ ಸಂಗವತಿ ಮಗುಳ್ ಕೇಳಿಕ್ಕೆ ನೆಂಟ್ರು ಬಂದು (ಇಸ್ಟು ಕೊಡಬೇಕು . ಇಸ್ಟು ಬುಡುಬೇಕು) ಅನ್ನದಾಗಿ ಹೆಣ್ಣಿನ ಸುದ್ದಿ ಮಾತಾಡುವಾಗ   ಈ ಪಕೀರ ಸಾಮಿರು  ಈ ಬಾಲ ನಾಗಮ್ಮ ತಲೆ ಕೂದ್ಲ ದಟ್ಟೀಗೆ ಸುತ್ಕ್ಯಂಡು ತಗೊಂಡೋಗಿ ಗಾಣಿಗರ ಸಂಗವತಿ ಮನೆ ಬಾಗ್ಲಿಗಲ್ಲಿ ನಿಂತ್ಗಂಡು..

ಲೇ ಯಾರ್ಲೇ ಅವುಳು ಲವೂಡಿ ಬಾಂಚೋತೂ
ಯಾರೇ ಅವುಳು ಲವೂಡಿ ಬಾಂಚೋತೂ
ಈಚಿಗೆ ಬಾರೇ ಲವುಡಿ ಬಾಂಚೋತೂ
ಬಿರ್ರುನೆ ಬಾರೇ ಲವುಡೀ ಬಾಂಚೋತೂ
ಅವುಳು ಬಾಗಿಲಿಗೆ ಬಂದು ಬಗ್ಗಿ ನೋಡುತ್ತಾಳೇ ।
ಸಾಬುರೆ ಕಯ್ಯ ಮುಗಿದು ನಾ ಕಾಲಿಗೇ ಬಿದ್ದೇನೂ
ಸಾಬುರೆ ಕಯ್ಯ ಮುಗಿದು ನಾ ಕಾಲಿಗೇ ಬಿದ್ದೇನೂ
ಸಾಬುರೆ ಮಗುಳಾ ಕೇಲಾ ನೆಂಟರು ಬಂದಾರೆ
ನನ್ನ ನೆಂಟರು ಮುಂದೆ ಬಾಂಚೋತ್ ಅನ್ನಬೇಡೀ
ನೆಂಟರು ಮುಂದೆ ಬಾಂಚೋತ್ ಅನ್ನಬೇಡೀ
ನಿಮ್ಮ ಮಸೀದಿಗ್ ಬತ್ತೀನಿ ನಡೀರಿ ಸಾಬೂರೇ
ನಿಮ್ಮ ಕುದುರೆ ಲಾಯಕ್ಕೆ ಬತ್ತಿನಿ ನಾಡೀರೀ
ನೆಂಟುರು ಮುಂದೆ ಬಾಂಚೋತು ಅನ್ನು ಬೇಡೀ
ಲೇ .ಎಸ್ಟು ಮಾತಲೇ ಲವುಡೀ ಬಾಂಚೋತೋ
ಈಚಿಗೆ ಬಾರಲೆ ಲವುಡೀ ಬಾಂಚೋತೂ

ಈಚಿಗೆ ಬಾರಲೆ ಲವುಡೀ ಬಾಂಚೋತೂ

ಒಳುಗೆ ಮಗುಳು ಕೇಳೋ ನೆಂಟರು ಕೂತಿದ್ದಾರೇ . ಕೊಡೋದು ಬುಡೋದು ಮಾತಾಡುತಿದ್ದಾರೆ. ಒಳುಗೆ ಅವುರು ಮಾತನಾಡುವಾಗ ಈ ಪಕೀರ ಸಾಬುರು ಬಂದು ನನ್ನ ಬಾಂಚೋತೂ ಅಂತರೆ .

ಅಪ್ಪ ಯಾರ ಸವಾಸ ಮಾಡಿದುರು ದಮ್ಮಯ್ಯ

ಯಾರ ಸವಾಸ ಮಾಡಿದುರು ದಮ್ಮಯ್ಯೊ

ಸಾಬುರ ಸಹವಾಸ ಮಾಡುಬಾರದಯ್ಯೊ

ಸಾಬುರ ಸವಾಸ ಮಾಡಬಾರದಯ್ಯೊ

ಸಾಬ್ರು ಒಳ್ಳೇದ್ಕು ಬಾಂಚತ್ ಕಟ್ಟದ್ಕು ಬಾಂಚತ್ತೊ

ಒಳ್ಳೇದ್ಕು ಬಾಂಚತ್ತು ಕೆಟ್ಟುದ್ಕು ಬಾಂಚತ್ತೊ

ಸಾಬ ಉ ಮಾತ್ಗು ಬಾಂಚತ್ತು ಸೊಲ್ಲಿಗು ಬಾಂಚತ್ತೂ

ಮಾತ್ಗು ಬಾಂಚತ್ತು ಸೊಲ್ಲೀಗು ಬಾಂಚತ್ತೂ

ಸಾಬುರ ಸವಾಸ ಮಾಡಬಾರದಯ್ಯ

ಪಕೀರು ಸಾಬುರೆ ಒಳಗೆ ಮಗುಳ ಕೇಳ ನೆಂಟುರು ಕೂತಿದ್ದಾರೆ ನೀವು ಅಚೇಲಿ ನಿಂತ್ಕಂಡು ಮಾತಾಡುವಾಗ ಒಳಗೆ ಹೆಣ್ಣಿನ ಸುದ್ದಿ ಮಾತಾಡುವಾಗ ನೀನು ಮಾತಿಗು ಸೊಲ್ಲಿಗು ಬಾಂಚತ್ತು ಅನ್ನದು ತರವಲ್ಲ.. ನೆಂಟ್ರೆ ಮುಂದೇ

ನಿನ್ನ ಮಸೀದಿಗೆ ಬತ್ತಿನ ನಡೀರಿ ದಮ್ಮಯೋ

ನಿಮ್ಮ ಕುದರಿ ಲಾಯುಕೆ ಬತ್ತೀನಿ ನಡೀರಿ।

ಲೇ.. ಎಸ್ಟು ಮಾತಲೇ ಲವೂಡಿ ಬಾಂಚೋತೂ

ಎಸ್ಟು ಮಾತಲೇ ಲವೂಡಿ ಬಾಂಚೋತೂ

ತತ್ತಾರೆ ಬಾಂಚತ್ ಗುಡೀಗೆ ಬೆಂಕೀಯಾ

ತತ್ತಾರೆ ಬಾಂಚತ್ ಗುಡೀಗೆ ಬೆಂಕೀಯಾ

ತಲೇ ಗಾತುರ ಗುಡಿ ಗುಡಿ ಐತಲ್ಲ..

ಎತ್ತು ಬಾರದ ಕೆಂಡ ತಾರುತಾಳೇ

ಗುಡಿ ಗುಡಿ ಮ್ಯಾಲೆ ಕೆಂಡ ಉಯುತ್ತಾಳೇ

ಪಕೀರು ಸಾಬುರು ಗುಡಿ ಗುಡಿ ಬಂದು ತಲೇ ಗಾತ್ರ ಐತೆ. ಇವಳೆತ್ತಬಾರ್ದ ಕೆಂಡ ತಂದು ಗುಡಿ ಗುಡಿಗೆ ಸುರಿತ್ತಾಳೆ. ಇವುಳು ಬಂದ್ ಮಾತ್ಗೆ ನನ್ನತ್ರುಕ್ಕೆ ಬರ್‍ನುಲ್ಲ ಅಂತ ಹೇಳಿ

ಕಡಿ ಕ್ವಾಪದಲ್ಲಿ ಗುಡಿ ಗುಡಿ ಸೇದ್ತಾನೇ

ಕಡೀ ಕ್ವಾಪದಲ್ಲಿ ಗುಡಿ ಗುಡಿ ಸೇದೋನೂ

ಒಂದು ಕಂಡುಗ ಹೊಗೆಯ ಕುಡುದಾನೊ

ಮೂರು ಕಂಡುಗ ಹೊಗೆಯ ಕುಡದಾನೊ

ಅವನ ಬಾಯಲಿ ತಿಗದಲಿ ಹೊಗೆಯೇ ಕಡುದಾದೂ

(ಇವುಳು ನನ್ ಬಂದ್ ಮಾತಿಗೆ ಹೊಲಿಕೆ ಬರುನುಲ್ಲುವಲ್ಲ ಅಂತ ಹೇಳಿ ಕಡಿ ಕಡಿ ಕ್ವಾಪದಲ್ಲಿ ಗುಡಿ ಗುಡಿ ಸೇದುವಾಗ ಮೂರ್ ಕಂಡುಗ ಹೊಗೆ ಕುಡಿದು ತಿಕದಲ್ಲಿ ಬಾಯ್ಲಿ ಹೊಗೆ ಕಡಿತಾದೆ)

ಆಗ ಗಾಣಿಗರ ಸಂಗಮ್ಮ ಬಂದು ಕೇಳುತ್ತಾಳೆ ಸ್ವಾಮಿ ಸ್ವಾಮಿ ಒಳುಗೆ ನೆಂಟುರು ಬಂದು ಕೂತಿದ್ದಾರೆ. ಯಾಕೆ ಒಂದೇ ಉಸುರಿಗೆ ಕರೀತಿರಲ್ಲ. ಮಾತಿಗು ಸೊಲ್ಲಿಗು ಬಾಂಚತು ಅಂತೀರಲ್ಲ,,,ಅಂದುಬುಟ್ಟು..

ನಿನ್ನ ಹೊಗೆಯ ಹೊಡ್ತ ತಡಿಯಲಾರೆನಪ್ಪಾ

ನಿನ್ನ ಹೊಗೆಯ ಹೊಡ್ತ ತಡಿಯಲಾರೆನಪ್ಪಾ

ಸರ್ರನೆ ಯಾಕೆ ಕರಿದಿರಿ ಹೇಳಿದಮ್ಮಯ್ಯ

ಇದು ಚಿನ್ನುದು ಯೆಳಿಯೇನೆ ರನ್ನುದು ಯಳಿಯೇನೇ

ಯಂತಾ ಯಳೆಯೇ ಹೇಳಲೇ ಬಾಂಚತ್ತೂ

ಯಂತಾ ಯಳೆಯಂತಾ ಹೇಳೇ ಬಾಂಚತ್ತೂ

ತಗುದು ಅವಳ ಕಯ್ಯಲಿ ಕೊಡುತ್ತಾನೆ.

ಬಾಲನಾಗೋಜಿ ತಲೆಕೂದ್ಲು ಇವುನ ಕಯ್ಲಿ ರವ ರವನೆ ಬಂದಾಗ ಇವುಳು ಗೊತ್ತು ಮಾಡಿ ಹೇಳ್ತಳೆ ಅನ್ನದಾಗಿ ತಂದು ಅವಳ ಕಯ್ಲಿ ಕೊಟ್ವನ್ನೆ. ಈ ಗಾಣಿಗರ ಸಂಗಮ್ಮ ಯಾರು ಅಂದ್ರೆ ದೊರೆಗಳ ಮನಿಗೆ ಯಣ್ಣೆ ಸಪ್ಲೇ ಮಾಡಳು ಅವಳೇಯ. ಈ ದೊರೆಗಳ ಮಡದೀರ ಮಂಡೆ ಬಾಚಿ ಎಣ್ಣೆ ಹಾಕಿ ತುರುಬು ಕಟ್ಟಿಳು ಇವುಳೇಯ. ಹೂವು ಮಡಿಸೋಳು ಇವುಳೇಯ. ಗಾಣಿಗರ ಸಂಗಮ್ಮ ಅವುಳಿಗೆ ಗೊತ್ತು ಬಾಲ ನಾಗಮ್ಮ ತಲೆ ಕಡೊಬೇಯ ಈ ತರಕಿರೋದು ಅಂತ ಪಕೀರು ಸಾಬುರೇ

ಈದು ಚಿನ್ನುದು ಯಳಿಯಲ್ಲಿ ಬೆಳ್ಳಿ ಯಳಿಯಲ್ಲಿ

ಚಿನ್ನುದು ಯಳಿಯಲ್ಲಿ ರನ್ನುದು ಯಳಿಯಲ್ಲಿ

ಪಾಲುಗಲ್ಲಿ ಪಟ್ಟುಣದೊಳುಗಲ್ಲಾ

ಏಲು ಗುಂಪನ ದೊರೀಗಳೇಲ್ಲೆವರಲ್ಲ

ಏಳು ಗುಂಪಿನ ದೊರೆಗಳ ಏಳು ಜನ ಮಡದೀರು ಅವುರು ಅಕ್ಕ ತಂಗೀನು ಏಳು ಜನದಲ್ಲಿ ಆರು ಜನುಕ್ಕೆ ಕಿರಿಯಳು ಬಾಲ ನಾಗೋಜಿ ಸ್ವಾಮಿ.

ಸಾಬ್ರೆ ಬಾಲನಾಗೋಜಿ ತಲೆಯ ಕೂದಲಲ್ಲೊ

ಬಾಲ ನಾಗೋಜಿ ತಲೆ ಕೂದುಲಲ್ಲೊ

ಲೇ ನಿನಿಗೆಂಗ್ ಗೊತ್ತು ಹೇಳೇ ಬಾಂಚತ್ತೂ

ನಿನಿಗೆಂಗ್ ಗೊತ್ತು ಹೇಳೇ ಬಾಂಚತ್ತೂ.

ಸ್ವಾಮಿ ಪಕೀರು ಸಾಬ್ರೆ ನನಿಗೆಂಗೆ ಗೊತ್ತು ಅಂದ್ರೆ . ನಾನು ದಿನಾ ಅರುಮನಿಗೆ ಯಣೆ ಸಪ್ಲೆ ಮಾಡಿಬತ್ತೀನಿ. ಸಪ್ಪಿನೇಣ್ಣೆ, ಸೆಂಟೆಣ್ಣೆ ಕುಂಡೋಗಿ ಯಣ್ಣೆ ಕೊಡೋಕ್ ಹೋದಾಗ ಏಳು ಜನ ಮಡದೀರ್‍ಗ್ಳ ಯಣ್ಣೆ ಹಾಕಿ ತಲೆ ಬಾಚಿ ತುರುಬು ಕಟ್ಟಿ ಹೂವು ಮಡಿಸಿ ಬತ್ತೀನಿ.

ಬಾಲೇ ನಾಗೋಜಿ ತಾಲೆ ಕೂದುಲಲ್ಲೊ

ಬಾಲೇ ನಾಗೋಜಿ ತಾಲೆ ಕೂದುಲಲ್ಲೊ

ಸಾಬಿ ತೊಡಿಯ ಕಟ್ಟು ಕಾಕಾ ಹೊಡಿತಾನೇ

ತಲೇ ಕೂದುಲು ಎಸ್ಟು ಚಂದುವಯ್ಯ

ತಲೇ ಕೂದಲು ಎಸ್ಟು ಚಂದುವಯ್ಯ

ಮತ್ತೇ ಬಾಲನಾಗೋಜಿ ಯಾಗೇ ಇರುವೋಳು

ಮತೇ ಬಾಲನಾಗೋಜಿ ಯಾಗೇ ಇರುವೋಳು

ಅವುಳ ಗಳಿಗಾದುರು ತಂದು ಆಳುತೀನೀ

ಅವುಳ ಗಳಿಗಾದುರು ತಂದು ಆಳುತೀನೀ

ತಲೆ ಕೂದುಲು ಇಸ್ಟು ಅಂದ ಇಸ್ಟು ಚಂದ ಇಸ್ಟು ರೂಪಾಗಿ ಕಾಣುತ್ತಾದೆ ಇನ್ನು ಬಾಲ ನಾಗೋಜಿ ಮತ್ತೆ ಯಾವ ಅಂದ ಯಾವ ಚಮದ ಯಾವ ರೂಪುಕ ಇರುದೋದು ಗಳಿಗಾರು ತಂದು ಆಳುಬೇಕು ಆಳುತೀನಿ ಅಂಬುದಾಗಿ

ತೊಡೀಯ ತಟ್ಟಿ ಕಾಕಾ ಹೊಡಿತಾನೇ

ತೊಡಿಯ ತಟ್ಟಿ ಕಾಕಾ ಹೊಡಿತಾನೇ

ಪಕೀರು ಸಾಬ್ರೆ ಗಾಣಿಗರ ಸಂಗಮ್ಮ ಹೇಳುತ್ತಾಳೆ.

ನೀವು ಯಾರ ಸವಾಸ ಮಾಡಿದುರು ದಮ್ಮಯ್ಯ

ಯಾರ ಸವಾಸ ಮಾಡಿದುರು ದಮ್ಮಯ್ಯ

ಅವಳ ಸವಾಸ ಮಾಡುವಾಡಿ ನೀವೂ

ಅವುಳ ನೀವು ಮುಟ್ಟಿದು ದಮ್ಮಯ್ಯ

ಮುಂದೆ ಮೂರು ಉಳ್ಳೀ ನೀವು ಉಳ್ಳಿತೀರೀ

ಮುಂದೆ ಉಳ್ಳಿ ಮರಾಣ ಹೊಂದುತೀರೀ

ಮಹಾ ಸೆರಣೆ ಬಾಲನಾಗೋಜಿ ಅಂದ್ರೆ ಯಾರ್ ಸವಾಸ ಮಾಡಿದ್ರು ಅವಳ ಸವಾಸ ಮಾಡಬೇಡಿ.

ನಡಿ ನಡಿಯಲೆ ಲವುಡಿ ಬಾಂಚಂತು

ನಡಿ ನಡಿಯಲೆ ಲವುಡಿ ಬಾಂಚೋತು

ಇಲ್ಲಿ ನಿಂತು ಜಾಗುದಲ್ಲೇ ಅವಾಳ ನೋಡುತೀನಿ

ನಿಂತು ಜಾಗುದಲ್ಲೆ ಅವಾಳ ನೋಡುತ್ತೀನೀ

ಪಕೀರು ಸಾಬುರು ಮಾಯ ಮಾಡಿದುರಲ್ಲ

ಪಕೀರು ಸಾಬುರು ಮಾಡ ಮಂತ್ರಗಾರ . ಮಾಯ ಮಾಡ್ತಾನೆ. ಇವನಲ್ಲಿ ಮಂತ್ರ ತಂತ್ರ ಯಂತ್ರ ಎಲ್ಲ ಉಂಟು ನಿಂತು ಜಾಗುದಲ್ಲಿ ಅವುನು ಬಾಲ ನಾಗಮ್ಮನ ನೋಡುಬೇಕಾರೇ.. ಒಂದು ಕನ್ನಡಿ ಮಾಡ್ದ ಮಕ ನೋಡ್ಕೇಳಿಕೆ ಇರ್ತದಲ್ಲಿ  ಅಂತದ ಕನ್ನಡಿ ಮಾಡಿ .

ಕನ್ನಡಿ ವಳುಗೆ  ಪಾಲುಗಲ್ಲಿ ಪಟ್ಟುಣುವ ನೋಡುತಾನೇ

ಪಾಲುಗಲ್ಲಿ ಪಟ್ಟುಣುವ ನೋಡುತಾನೇ

ಪಾಲುಗಲ್ಲಿ ಪಟ್ಟುಣದಲ್ಲಿ ಯಾರಾರು ಯೇನೇನ್ ಬಂಗ ಮಾಡ್ತಾ ಅವುರೆ ಅನ್ನದ ಕನ್ನಡಿ ವಳಿಗೆ ನೋಡ್ತನೆ. ಯಾರಾರು ಯೇನೇನು ಕೆಲಸ ಮಾಡ್ತಾರೆ ಅನ್ನದು .

ಎಲ್ಲಿ ಕನ್ನಾಡಿ ವಳುಗೆ ಕಾಣುತೈತಲ್ಲಾ

ಎಲ್ಲಿ ಕನ್ನಾಡಿ ಎಳುಗೆ ಕಾಣುತೈತಲ್ಲ

ಆ ಪಟ್ಟುಣುದೊಳಗೆ ಯಾರು ಯೇನು ಬಂಗ ಮಾಡ್ತಾರೆ ಯೇನ್ ಕೆಲಸ ಮಾಡ್ತಾರೆ ಅನ್ನದು ಈ ಕನ್ನಡಿ ವಳುಗೆ ಕಾಣ್ತದೆ. ಅವುನ ಮಂತ್ರದಲ್ಲಿ ಎಲ್ಲಿ ಕಾಣ್ತದೆ. ಕಾಣುವಾಗ   ಈ ಬಾಲ ನಾಗೋಜಿ ಮೂರ್ ತಂಗಳು ಮಗಾ ತೊಡೇ ಮೇಲೆ ಮನಗಿಸಿಕೊಂಡು ಹಾಲು ಕುಡುಸ್ತಾ ಅವಳೆ. ಮಗೀನ್ ಬಾಯಿಗೆ ಹಾಲು ಉಯ್ತಾವಳೆ. ಅಲ್ಲಿ ಯಾವ್ ಚಂದುಕೆ ಹಾಲು ಉಯ್ತಾವಳೆ .

ಅದೇ ಚಂದುಕೆ ಕನ್ನಡಿ ವಳುಗೆ ಕಾಣುತೈತಲ್ಲಾ

ಅದೇ ಚಂದುಕೆ ಕನ್ನಡಿ ವಳುಗೆ ಕಾಣುತೈತಲ್ಲಾ

ಬಾರೆ ಬಾರೆ ಲವುಡಿ ಬಾಂಚತು

ಇವುಳೆ ಯೇನೋ ನೋಡೇ ಬಾಂಚತ್ತು

ಇವುಳೆ ಯೇನೋ ನೋಡೇ ಬಾಂಚತ್ತು

ಆಗ ಗಾಣಿಗರ ಸಂಗಮ್ಮ ಬಂದು ಕನ್ನಡಿ ನೋಡಿ ಹೇಳ್ತಾಳೆ. ಇವುಳೆ ಸ್ವಾಮಿ ಬಾಲ ನಾಗಮ್ಮ  ಅಂದ್ರೆ ಮೂರ್ ತಿಂಗ್ಳು ಬಾಣ್ತಿ ಅಂತಾಳೆ.

ಶಬಾಸು ಅಂತ ತೊಡಿಯ ತಟ್ಟುತ್ತಾನೆ।

ನನಿಗೆ ಸರಿಯಾದ ಜೋಡಿ ಇವುಳೇಯಾ

ನನಿಗೆ ತಕ್ಕುನಾದ ಜೋಡಿ ಇವುಳೇಯಾ

ಈಗ ಬಾಲ ನಾಗಮ್ಮ ತಗಬರುಬೇಕಾದ್ರೆ ಯೇನ್ ಮಾಡುಬೇಕು ಅನ್ನದಾಗಿ ಜಾನ ಮಾಡುತ್ತಾನೆ. ಮಾಯದ ಬೂದಿ ಮಾಡುತ್ತಾನೆ.

ಮಾಯದ ಬೂದಿ ಮಂತ್ರದ ಬೂದೆಲ್ಲಾ

ಅಂತ್ರದ ಊದಿ ಮಂತ್ರದ ಬೂದೆಲ್ಲಾ

ಅಂತ್ರದ್ ಬೂದಿ, ಮಂತ್ರುದ್ ಬೂದಿ ಯಲ್ಲಾನು ಜೋಡಿಸ್ಕಂದು ಬಂದು

ಬಿಕ್ಸುಕನಾಗಿ ಅವುತಾರ ಎತ್ತೀಡಾ

ಬಿಕ್ಸುಕನಾಗಿ ಅವುತಾರೆತ್ತೀರಾ

ದಂಬಿಡೀಯ ಕಯ್ಯಲಿಡುಕಂದಾ

ದಂಬಿಡೀಯ ಕಯ್ಯಲಿಡುಕಂದಾ

ಪಾನುಗಲ್ಲ ಪಟ್ಟುಣಕ್ಕೆ ಹೋಗುತಾನೇ

ಪಾನುಗಲ್ಲ ಪಟ್ಟುಣುಕೆ ಹೋಯ್ತಾನೇ

ಮನೆ ಮನೇಲಿ ಬಿಕ್ಷ ಮಾಡುತಾನೇ

ಎಲ್ಲಾ ಮನೇಲು ಬಿಕ್ಸ ಮಾಡ್ತಾನೆ. ಬಿಕ್ಸುಕನಾಗಿ ಕಾಣುತ್ತಾನೆ. ಈ ಬಾನುಲಾಗೆ ನಿಂತವನೆ. ಈ ಏಳು ಗುಂಪಿನ ದೊರೆಗಳು ಏಳು ಗುಂಪಿನ ದೊರೆಗಳೂವೆ ಅವರವರ ಹೆಂಡುರು ಕರುಕಂಡು ಬ್ಯಾಸಿರಕೆ ಕಳಕೋ ಬರೋಕೆ ಇವರು ದೇಸಾಂತರ ಹೋಗಿದ್ದಾರೆ. ಈ ಬಾಲ ನಾಗೋಜಿ ಒಬ್ಬಳೇ ಇರೋಳು ಮೂರ್ ತಿಂಗಳು ಬಾಣ್ತಿ ಇವುಳ್ನ ಬುಟ್ಟು ಹೋಗ್ಯವರೆ. ಅವುಳೊಬ್ಬಳೆ ಅವುಳೆ ಅರುಮಲ್ಲಿ ಅವುಳೊಟ್ಕೆ ಇರೋದು ನೋಡಿಕ್ಯಂಡೂ .

ಬಾಲನಾಗೋಜಿ ಮನೀಗೆ ಬಂದನಲ್ಲೋ

ಬಾಲ ನಾಗೋಜಿ ಮನೀಗೆ ಬಂದನಲ್ಲೊ

ದಂಬಡಿ ಹೊಡಿತ ನಿಂತೇ ಅವುನಲ್ಲೊ

ದಬ್ಬ ದುಬ್ಬನ ದಂಬಾಡಿ ಹೊಡಿತಾನೇ

ಅವುರ ಮನೆ ಬಾಗುಲಲ್ಲಿ ನಿಂತ್ಗಿಂಡಿದ್ದಾನೆ. ಅವುಳು ಮೂರ್ ತಿಂಗಳು ಬಾಣ್ತಿ ಅಯ್ಯಾ ಸ್ವಾಮಿಗಳೇ ದೊರೆಗೋಳು ಗೌಡೀರೆಲ್ಲ ಬ್ಯಾಸಿರಿಕೆ ಕಳುಕೋ ಬರಾಕೆ ಹೋಗಿದ್ದಾರೆ. ಗೌಡೀರಿಲ್ಲ, .

ಗೌಡಿರು ಬರಲಿ ಅಮ್ಯಾಲೆ ಬಾರೋಗೀ

ಗೌಡರು ಬರಲಿ ಅಮ್ಯಾಲೆ ಬಾರೋಗೀ

ಮೂರು ತಿಂಗಳ ಬಾಣ್ತಿ ನಾನಲ್ಲೋ

ಮೂರ್ ತಿಂಗಳು ಬಾಣ್ತಿ ನಾನು ಬಿಕ್ಸ ತಂದಾಕಾ ಕಾಣಾದಿಲ್ಲ. ನೀವು ದೊರಿಗೋಳು
ದೊರಿಗೋಳು ಬಂದಾಗ . ಗೌಡೀರು ಬಂದಾಗ ಬಲ್ಲಿ ಬಿಕ್ಸ ಹಾಕ್ತಾರೆ. ಐಬೋಗುವಾಗಿ ಕೊಟ್ಟು ಕಳುಸ್ತಾರೆ.
ಅಮ್ಮ ಅಮ್ಮ .ನೀನು ಮುಂದಕ್ಕೆ ಹೋಗಿ ಬಾ ಅನ್ನು ನಾನು ಮುಂದ್ಕೆ ಹೋಗಿ ಬತ್ತೀನಿ. ನೀನು ಬಂದು ಕಂಡುಗ ಸುರಿಯತಕೆ ಒಂದು ಮರ ಕೊಡು ನನಿಗೆ ಕೂಲಿ ಕೊಟ್ಟಂಗೆ ಆಗುತ್ತಾರೆ.

ಕೂಲಿ ಕೊಟ್ಟಂಗೆ ನನಿಗೆ ಆಗುತ್ತಾದೇ

ಕೂಲಿ ಕೊಟ್ಟಂಗೆ ನನಿಗೆ ಆಗುತ್ತರೆ

ಒಂದೇ ದುಡುದಲ್ಲಿ ನೀಡಿ ಕಳುಸಲ್ವಾ

ಒಂದೇ ದುಡುದಲ್ಲಿ ನೀಡಿ ಕಳುಸಲ್ವಾ

ದೊರಿಗೋಳು ಮನೇ ಇದು. ಇಂತಾ ಮನೇಲಿ ಮುಂದ್ಕೆ ಹೋಗಿ ಬಾ ಅನ್ನಾದಿಲ್ಲ. ಇದೇ ಮನೆ ಬುಟ್ಟು ಮುಂದ್ಕೆ ಹೋದ್ರೆ ಊರು ಕೇರೀಲಿ ಇನ್ನೂ ನಾಕು ಮನೆ ಯಾಚ್ಕೆ ಮಾಡುಬೇಕು. ಹಿಂತಿರುಗಿ ಬರಾಕಾಗಾದಿಲ್ಲ ಕೊಡಮ್ಮ. ದೊರೆಗಳು ಮನೇಲಿ ಅಂಗೇ ಕಳಿಸೋದು ತರುವಲ್ಲ .

ಆಗ ಮುತ್ತು ಮಾಣಿಕ ಬರುನೇ ತುಂಬಿಕಂಡೂ

ಆಗ ಮುತ್ತು ಮಾಣಿಕ ಬರುನೇ ತುಂಬಿಕಂಡೂ

ಬಿಕ್ಯಾ ಕೊಡಕೆ ಬಂದು ನಿಂತಾಳೇ

ಇವುನು ಮಂತ್ರುದ್ ಬೂದಿ ಕಯ್ಯಲಿ ಹಿಡಿಕಂಡು

ಬಾಲ ನಾಗೋಜಿ ದರ್ಮಾ ಕೊಡಕೆ ಮುತ್ತು ರತ್ನ ಬನಸಿಗೆ ತುಂಬಿಕಂಡು ಬಂದು ಇವುನು ಮುಂದೆ ನಿಂತ್ಗಂಡು ತಲೆ ಬಗ್ಗಿಸಿ ಇವುನ ಜೋಳಿಗೆಗೆ ಹಾಕುವಾಗ

ಮಾಯುದ ಬೂದಿ ಮಂಕಿನ ಬೂದೆಲ್ಲೊ

ಮಾಯುದ ಬೂದಿ ಮಂಕಿನ ಬೂದೆಲ್ಲೊ

ಅವಳ ಮ್ಯಾಲೆ ಚಲ್ಲುತಾನಲ್ಲೊ

ಮಂತ್ರುದಲ್ಲಿ  ಮಾಯುದಲ್ಲಿ ಬಾಲ ನಾಗಮ್ಮನ  .

ನಾಯೀಮಾಡಿ ನಿಲ್ಲಿಸುತಾನಲ್ಲಾ

ನಾಯೀಮಾಡಿ ನಿಲ್ಲಿಸುತಾನಲ್ಲಾ

ಮಂತ್ರುದಲ್ಲಿ ನಾಯಿ ಮಾಡ್ದ ಬಾಲನಾಗಮ್ಮನ್ನ. ನಾಯಿ ಮಾಡಿ ಬಳೀಕ ಬುಟ್ಟಿ. ಇವುನು ಬಾಗುಲಲ್ಲಿ ನಿಂತ್ಗಂಡ ದೊರೆಗಳು ಬರೋವರ್ಗು .. ಅಲ್ಲೆ ನಿಂತಿದ್ದಾನೆ. ದೊರೆಗಳು ಬ್ಯಾಸಿಲಿಕೆ ಕಳ್ಕೊಂಡು ಮನೀಗೆ ಬಂದ್ ಮ್ಯಾಲೆ ಸೆರಣಾರ್ಥಿ ಮಾಡ್ತಾನೆ. ಸ್ವಾಮಿ ಸ್ವಾಮಿ.. ಎಸ್ಟೋ ಗಂಟ್ಯಾತ್ತು ನಿಮ್ಮ ಮನೆ ಬಾಗುಲಲ್ಲಿ ನಿತ್ಕಂಡು (ನಿಮ್ಮ ಮನೆ ಬಾಗುಲಲ್ಲಿ ಎಸ್ಟೋ ಟೇಮಾಯ್ತು . ಯಾಕಪ್ಪ ನಿಂತಿದ್ದೀಯ? ಯಾರು ಇಲ್ಲ ಸ್ವಾಮಿ  ಎಲ್ಲಾ ಮನೇಲಿ ಬಿಕ್ಸಾ ಮಾಡಿಕ್ಯಂಡು ಬಂದೆ. ಈ ಸರಪಣಿ ನಾಯಿ ಇಟ್ಕಂಡು ಎಲ್ಲಾ ಮನೆ ಮನೆ ಬಿಕ್ಸ ಮಾಡಿಕ್ಯಂಡು ನಿಮ್ಮ ಮನೆತಕ ಬಂದೆ. ಈ ಸರಪಣಿ ಅಕ್ಕಂಡು ನಾಯಿ ನಿಮ್ಮನೆ ಒಳೀಕೆ ಹೋಯ್ತು) ಈ ಬಾಗುಲಲ್ಲಿ ಹೋಯ್ತು ನಾಯಿ  ಅಂತಾನೆ. ಬಾಲ ನಾಗಮ್ಮನ ಜಾನಮಾನ ಎಲ್ಲ ಇವುನ ಮಂತ್ರುದಲ್ಲೆ  ಇವುನ ತಂತ್ರದಲ್ಲೆ ಐತೆ. ಹೋಗಿ ನಾಯಾಗಿ ಮಗಾ ಮುಸ್ತಾಳೆ.

ಹೋಗಿ ಕುಯ್ಯಕುಯ್ಯನೆ ಟೊಟ್ಟುಲು ಸುತ್ತುತಾದೇ.

(ಹೋಗಿ ತೊಟ್ಟು ಸುತ್ತಿ ಸುತ್ತುತದೆ  ಮಗಾ ಮೂಸ್ತದೆ. ಮನಸೆಲ್ಲ ಮನುಸುನ ಅವತಾರದೆ. ರೂಪು ನೋಡಿದ್ರೆ ನಾಯಿ. ಆಗ ಈ ದೊರಿಗೋಳಿಗೆ ಹೇಳಿದ್ನಲ್ಲ ಇವುನು ನಾನಿತ್ಗಂಡು ಎಸ್ಟೋ ಟೇಮಾತು ಸರುಪಣಿ ಅರುಕಂಡು ಒಳಿಕೋದ್ ನಾಯಿ ಬಂದುಲ್ಲಿ ಅಂತವ. ಇದ್ರು ಒಳಗಡೆ ಇದುಕೊಡಿ ಅಂತವ)

ಹೋಗಿ ನೋಡಿದ್ರೆ ..

ತೊಟ್ಟಿಲು ಮುಂದೆ ನಾಯಿ ಆಗೀ ನಿಂತೇ ಅವರಲ್ಲೊ

ನಾಯೀ ಆಗಿ ನಿಂತೇ ಅವರಲ್ಲಾ

ನಾಯಿ ಅನ್ನದನ್ನು ಕಂಡು ದೊರಿಗೋಳು ಹಿಡಿದು ತಂದು ಇವನ ಕಯ್ಯಿಗೆ ಕೊಡ್ತರಲ್ಲೋ ಶಿವನೇ .

ಅವಳ ನಾಯಿ ಮಾಡ್ಕ್ಯಂಡು ತಕ್ಕಂಡು ಬತ್ತಾನೆ

ಬಾಲ ನಾಗೋಜಿ ನಾಯಿ ಮಾಡಿಕಂಡೂ

ನಾಯಿ ಮಾಡ್ಕ್ಯಂಡು ಮಸೀದಿಗೆ ಬರ್ತಾನೇ

ಇನ್ನು ನಾಯಿ ಮಾಡ್ಕ್ಯಂಡು ಮಸೀದಿಗೆ ತಂದು ರೂಪ್ ಮಾಡಿ ನಿಲ್ಲಿಸ್ತಾನೆ. ಬಾಲ ನಾಗಮ್ಮನ್ನು ಇನ್ನ ಅಲ್ಲಿ ಅರುಮಲ್ಲಿ ಮನೀಗೆ ತಾಯಿಲ್ಲ ಬಾಲನಾಗಮ್ಮ ಇಲ್ಲಿ   ಬಾಲ ನಾಗಮ್ಮ ಇಲ್ಲ

ದೊರಿಗೋಳಲ್ಲಿ ಹುಡೂಕತವರಲ್ಲೋ

ದೊರಿಗೋಳಲ್ಲಿ ಹುಡೂಕತವರಲ್ಲೋ

ಎಲ್ಲಿ ಹುಡುಕಿದ್ರು ಅವಳೇ ಇಲ್ಲಿವಲ್ಲೊ

ಎಲ್ಲಿ ಹುಡುಕಿದ್ರು ಅವಳೇ ಇಲ್ಲಿವಲ್ಲೋ

ಮುಂದೆ ಯೇನ್ ಮಾಡಬೇಕು . ಯೇನ್ ಮಾಡಬೇಕು ಮುಂದೆ

# ಬಂಜೆ ಕತೆ

ಅವ್ವಾ ಬಂಜೇ ದೇವಿ ನಮ್ಮವಳು

ಯಾವೂರಾಯನ ಮಗುಳಮ್ಮಾ ॥ ತಂದನ್ನಾ .ತಾನಾ  ತಾನಂದನ್ನೇ ತಾನಾನ ॥

ಬಂಜೇ ದೇವಿ ನಮ್ಮವಳು

ಯಾವೂ ರಾಯುನ ಮಗುಳಮ್ಮಾ॥

ಬಂಜೆ ಕುಂತು ರಾಯುನ ಮಗುಳೇನೇ

ಬದಿಲೀ ರಾಯುನ ಸೊಸಿಯೇನೇ॥

ಬಂಜೆ ಹಾದಿಲ್ಲಾಡೊ ಮಕ್ಕುಳಾನೋಡೀ

ಹಾಡಿ ಸೋಕಾ ಮಾಡ್ಯವಳೇ॥

ಬಂಜೆ ಬೀದಿಲ್ಯಾಡೋ ಮಕ್ಕುಳಾ ನೋಡೀ

ಬಿದ್ದು ಸಂಕಟ ಮಾಡ್ಯವಳೋ॥

ಶಿವನೆ ಕಂಡೋರ ಮಕ್ಕುಳಾ ಕರಾದುನಾನೂ

ನನ್ನ ಕಯ್ಯಾ ತುಂಬಾ ಇಕ್ಕಿದುರೇ॥

ಕಯ್ಯಿ ತುಂಬಾ ಇಕ್ಕಿದುರೇ

ನನ್ನವ್ವ ಅಂತ ಕರುದಾರೇನು॥

ಅವ್ವಾ ಅಂತಾ ಕರುದಾರೇನು

ನನು ಬಂಜೆ ಅನ್ದ ಮರುತರೇನೂ॥

ಶಿವುನೇ ಮಕ್ಕುಳಿಲ್ಲದಾ ಬಾಳನಾ

ಬಾಳುಲಾರೆ ಬಗುವಂತಾ॥

ನನ ಬಂಜೆ ಅನ್ನ ಸೊಲ್ಲು ಶಿವನೇ

ಬಂಜೆ ಅನ್ನ ಸೊಲ್ಲು ಶಿವನೇ

ಯಾವು ಕಾಲುಕೆ ಮರತೇನೋ॥

ನನ ಬಂಜೆ ಅನ್ನೊ ಸೊಲ್ಲು ಶಿವನೇ

ಯಾವು ಕಾಲುಕೆ ಮರೆಸಾನೋ॥

ನನಿಗೆ ಗಾಗಾನವಾಗಲಿ ಮೂಗನಾಗಲೀ

ಕಣ್ಣು ಕಾಣುದ ಕಗ್ಗಲನಾಗಲಿಲ್ಲ ॥

ನನಿಗೆ ಗಾಗಾನಾಗಲಿ ಮೂಗನಾಗಲೀ

ಕಣ್ಣು ಕಾಣಾದ ಕಗ್ಗಲನಾಗಲೀ॥

ಶಿವುನೇ ನನ್ನ ಹೊಟ್ಟೆಲುಟ್ಟದುರೇ

ನಾನು ಬಂಜೆ ಅನ್ನದ ಮರಿಯದೋ॥

ನನಿಗೆ ಕುಂಟನಾಗಲಿ ಕುಸುವನಾಗಲೀ

ಬಂಡಿ ಮ್ಯಾಗಳ ಯಳವನಾಗಲೀ॥

ನನಿಗೆ ಕುಂಟನಾಗಲೀ ಕುಸವನಾಗಲೀ

ಬಂಡಿ ಮ್ಯಾಗಳ ಯಳವನಾಗಲೀ

ಶವನೇ ಬಂಡಿ ಮ್ಯಾಗಳ ಯಳುವನಾಗಲೀ

ನನ್ನಾ ಹೊಟ್ಟೆಲುಟ್ಟಿದುರೇ॥

ನನ್ನಾ ಹೊಟ್ಟೆಲುಟ್ಟಿದುರೇ॥

ನಾನು ಬಂಜೆ ಅನ್ನದ ಮರಿಬೋದೂ॥

ನಾನು ಹೆಣ್ಣುವಾಗಿ ಹುಟ್ಟುವಾಗ

ನಾನು ಹೆಣ್ಣುವಾಗಿ ಹುಟ್ಟುವಾಗ

ನಾಮಣ್ಣಾಗಾರಾ ಹುಟ್ಟುಬಾರದೇ॥

ಹೆಣ್ಣುವಾಗಿ ನಾ ಹುಟ್ಟುವಾಗಾ

ಮಣ್ಯಾಗ್ಯಾರಾ ನಾ ಹುಟ್ಟುಬಾರದೇ॥

ಮಣ್ಣಿನ ಮೇಲೆ ಮರವಾಗಿ

ನಾನು ಬಂಜೆ ಅನ್ನದ ಮರಿಬೋದೂ॥

ಶಿವನೇ ನನ ಬಂದಿಗೇ ಹುಟ್ಟುದೋರುಆ

ನನ್ನ ಬಂದಿಗುಟ್ಟಿದೋರೂ

ನನಿಗಾರು ಜಾನ ಅಕ್ಕತಂಗೇರೂ॥

ನನ್ನಕ್ಕತಂಗೇರಿಗೆ ಮಕ್ಕುಳುನೇರಿ

ನನಿಗೆ ಶಿವುನೆ ಗೊಡ್ಡುಸೀರೀ॥

ನನ್ನಕ್ಕು ತಂತೇರ ಮನಿಗೋಗಿ

ಮಕ್ಕುಳಾನಾರ ನೋಡೇನೂ॥

ಕಡಾಲೆ ಪುರಿಯ ಕುಂಡೋಗಿ

ಅಕ್ಕಂದಿರ ಮಕ್ಕುಳ ಮಡಾಲಿಗಿಕ್ಕೆ ॥

ಕಡಾಲೆ ಪುರಿಯ ಕಂಡೋಗಿ

ಅಕ್ಕುದಿರ ಮಕ್ಕುಳ ಮುದ್ದಾಡೇನೋ॥

ಕಡೆಲೆ ಪುರಿಯ ಕುಂಡೋಗಿ

ಕರೆದು ಕಳುಹಿ ಮುದ್ದಾಡೇನೋ॥

ಕಡಾಲೆ ಪೂರಿಯ ಕುಂಡೋಗಿ

ಗದ್ದ ಕಡಿದು ಮುದ್ದಾಡೇನೋ॥

ಗದ್ದ ಕಡಿದು ಮುದ್ದಾಡುವಾಗ

ಅವ್ವಾ ಅಂತ ಕರೆದಾವೂ॥

ನಾ ಗದ್ದ ಕಡುದು ಮುದ್ದಾಡುವಾಗ

ಅವ್ವ ಅಂತ ಕರಿಬೋದೂ ॥

ಅವ್ವಾ ಅಂತ ಕರುದಾಗಾ

ನಾ ಬಂಜೆ ಅನ್ನದ ಮರಿಬೋದೂ॥

ನಾನೇನು ಕರ್ಮ ಮಾಡಿದುನೊ

ನಾನೇನು ಕರ್ಮ ಮಾಡಿದುನೋ॥

ಮಕ್ಕಳಿಲ್ಲದ ಬಾಳಾನಾ

ಬಾಳುಲಾರೆ ಬಗುವಂತಾ॥

ಶಿವೂನು ತಾನೆ ಬಿಕ್ಸುಕೆ ಬಂದಾಗ

ರಾಡು ಬಾಕಲಾರೆ ನಾನು॥

ಶಿವುನಿಗೆ ರಾಡು ಬಾಕುಲಾಕಿದು ಕರ್ಮ

ನನಿಗಾಡೋ ಮಕ್ಕುಳಿಲ್ಲುವಲಾ॥

ಶಿವನೆ ಬಕ್ತಿ ನೋಡಕೆ ಕಾಡುವತರೇ

ಶಿವನಿಗರೀ ಬಿಕ್ಸೆ ನೀಡೀ ನಾನು॥

ಅರು ಬಿಕುಸೆ ನೀಡಿದ ಕರ್ಮ

ನನಿಗಾರೋ ಮಕ್ಕುಳಿಲ್ಲುವಲ್ಲೋ॥

ಹಾದಿಲ್ಲೋಗೋ ಜಮಾನ ಕರುದು

ಅನ್ನದಾನವ ನಾ ಮಾಡುವಾಗಾ॥

ಹಾದಿಲ್ಲೋಗೋ ಜಮಾನ ಕರುದು

ಅನ್ನದಾನವ ನಾ ಮಾಡುವಾಗಾ॥

ಅನ್ನದಾನ ಮಾಡುವಾಗ॥

ಅನ್ನದಾನ ಮಾಡುವಾಗ॥

ಮಕ್ಕಳೇಸು ಅನ್ನುವಾರೂ॥

ಮಕ್ಕಳಿಲ್ಲಾ ಅಂದಾಗಾ

ಬಂಜೆ ಕಯ್ಯಳ ಬಿಕ್ಸ ಬ್ಯಾಡಾ॥

ಬಂಜೆ ಕಯ್ಯಳ ಊಟ ಬ್ಯಾಡಾ

ಅಂತ ಜನುವೇ ಹೋಗಾರೂ॥

ಶಿವುನು ತಾನೇ ಬಿಕ್ಸುಕೆ ಬಂದಾಗ

ರಾಡು ಬಾಕುಲಾಕಿ ನಾನೂ॥

ಶಿವುನಿಗೆ ರಾಡು ಬಾಕುಲಾಕಿದ ಕರ್ಮ

ನನಿಗಾಡೋ ಮಕ್ಕುಳಿಲ್ಲುವಲ್ಲೋ॥

ಅಕ್ಕ ತಂಗೇರ ಮನೇಗೆ ಹೋಗೀ

ಮಕ್ಕುಳುವಾರ ನೋಡೇನೂ॥

ನನ ಬಂದಿಗೆ ಹುಟ್ಟಿದೋರೂ

ಆರು ಜನ ಅಕ್ಕ ತಂಗೇರೂ॥

ಅಕ್ದು ತಂಗೇಗೇನ ಮಕ್ಕೂಳು ಸೀರಿ

ನನಿಗೇ ಶಿವುನೆ ದುಕ್ಕುದು ಸೀರೀ॥

ಅಕ್ಕುದಿರು ಮಕ್ಕಳನೋಡಕೆ ಬಂಜೆ

ಅಂಗಡಿ ಬೀದಿಗೆ ಹೋಗೋಳೂ

ಅಕ್ಕುದಿರು ಮಕ್ಕಳ ನೋಡಕೆ ಬಂಜೆ

ಅಂಗಡಿಗೆ ಬೀದಗೆ ಹೋಗೋಳೂ॥

ಅಕ್ಕುದರಿ ಮಕ್ಕಳ ನೋಡಕೆ ತಂಗಿ

ಅಂಗಿ ಲಂಗ ಕೊಳ್ಳೋಳೂ।

ಅಕ್ಕ ತಂತೇರ ಮಕ್ಕುಳಿಗೇ ತಂಗಿ

ಅಂಗಿ ಲಂಗ ಕೋಳ್ಳೋಳೂ

ಬಣ್ಣಾದಂಗಿ ಇಕ್ಕುಬೇಕೂನನ್

ಕಣ್ಣಲ್ ನೋಡಿ ನಗುಬೇಕೂ॥

ಅಕ್ಕ ತಂಗೇರ್ ಮಕ್ಕಳಿಗೇ

ಕಡಲೇ ಪುರಿಯ ಕೊಂಡಾಳೂ॥

ಅಕ್ಕುದಿರು ಮಕ್ಕಳಿಗೇ ಬಂಜೆ

ಕಡಾಲೆ ಪುರಿಯ ಕೊಂಡಾಳೂ॥

ಕಡಾಲೇ ಪುರಿಯ ಕೊಂಡು ಕಂಡೂ

ಮಡೂಲು ತುಂಬ ಕಟ್ಟಿಗಂಡೂ॥

ಅಕ್ಕು ತಂಗೇರ ಮಕ್ಕುಳು ..

ಮಕ್ಕಾಳೀಗ ನೋಡುದುಕೇ

ಹೋಯ್ತಾಳವಳ ಅಕ್ಕುದಿರುಮನಿಗೇ॥

ಬಂಜೆ ಊರು ಬಾಗುಲಲೋಗುವಾಗ

ಬಂಜೆ ಊರು ಬಾಗುಲಲೋಗುವಾಗಾ

ಅವುರಾರು ಜಾನ ಅಕ್ಕು ತಂಗೇರು ॥

ಆರು ಜಾನ ಅಕ್ಕು ತಂಗೇರೂ

ಬಂಜೆ ಬರುವುದ ನೋಡುತವರೇ॥

ಬಂಜೇ ಬರುವುದ ನೋಡಿ ಅವುರು

ಏನಾ ನುಡಿಯ ನುಡುದಾರು॥

ಅಲ್ಲಿ ಬಂಜೆ ಶಿವನೆ ಬರುತವಳೇ

ಆ ಬಂಜಿಗೆ ಮಕ್ಕುಳ ತೋರರುಬ್ಯಾಡಾ॥

ಬಂಜಿಗೆ ಮಕ್ಕುಳ ತೋರದುಬ್ಯಾಡೀ

ಕರ್ಮಿಗೆ ಮಕ್ಕಳ ತೋರದುಬ್ಯಾಡೀ॥

ಬಂಜೆ ನಮ್ಮಾ ಮಕ್ಕುಳ ನೋಡಿದುರೆ

ಮಕ್ಕುಳು ಬಂಜೇರಾದೋರೊ॥

ಮಕ್ಕುಳು ಬಂಜೇರಾದೂರೇ

ನಾವು ಬಂಜೇರಾದೇವೂ॥

ಆಡೋ ಮಕ್ಕಾಳಾವಸೀರೇ

ತೂಗೋ ತೊಟ್ಟಾಲವಿಸೀರೇ॥

ಬಂಜೆ ಮನಿಗೆ ಕೂಡಾದು ಬೇಡಿ

ರಾಡು ಬಾಕುಲಾಕೀರೇ॥

ಅಕ್ಕ ತಂಗೇರು..

ಅಟ್ಟಿಲಾಡುವ ಮಕ್ಕುಳಾ ಕರದು

ಅಟ್ಟುದ ಮ್ಯಾಲೆ ಅವುಸಾತವರೇ॥

ಆಡೋ ಮಕ್ಕಾಳವೀಸ್ಯಾರೋ

ತೂಗೂ ತೊಟ್ಟಿಲು ಅವಿಸ್ಯಾರೂ॥

ಆಡೋ ಮಕ್ಕಳ ಅವಿಸೀ ಅವುರು

ರಾಡೂ ಬಾಕುಲ ಹಾಕ್ಯವರೇ॥

ಬಂಜೆ ಅಕ್ಕುದಿರ ಮನೆಯ ಬಾಗಿಲಿಗೋಗಿ

ಯಾರಿರವ್ವ ನನ್ನಕ್ಕ ತಂಗೇರಾ॥

ಯಾರೀರವ್ವಾ ಅಕ್ಕು ತಂಗೇರ

ತಗೀರವ್ವಾ ಬಾಗೂಲಾ

ತಗೀರವ್ವಾ ಬಾಗೂಲಾ

ನಿಮ್ಮಕ್ಕುಲುನಾರ ನೋಡೇನೋ॥

ಕಡಾಲೆ ಪುರಿಯ ಮಡೀಲಿಗಿಟ್ಟಿ

ಹಿಡಿದು ಕೊಂಡು ಮುದ್ದಾಡೇನೂ॥

ಗದ್ದಾ ಕಡಿದು ಮುದ್ದಾಡಿ

ಅದರಲ್ಲಾಸೆ ಕಳುಕಂಡೇನು

ಬಣ್ಣದಂಗಿ ಇಕ್ಕೇನೂ ಅವುರ್

ಕಣ್ಣಲ್ ನೋಡಿ ಮರುಗೇನೂ॥

ಬಣ್ಣಾದಂಗಿ ಇಕ್ಕೇನೂ

ಕಣ್ಣಲ್ ನೋಡಿ ಮರುಗೇನೂ

ತಗೀರವ್ವಾ ಬಾಗುಲಾ

ನಿಮ್ಮಕ್ಕುಳುನಾರು ನೋಡೇನೂ॥

ಬಂದು ಬಾಗಿಲಾ ತಗೀನಿಲ್ಲಾ

ಬಂದು ಬಾಗುಲಾ ತಗೀಯನಿಲ್ಲಾ

ಬಾಗಿಲಿಗ್ ತಲಿಯಾ ಚಚ್ಚೂತವಳೇ॥

ಬಂದೂ ಬಾಗುಲ ತಗೀಯನಿಲ್ಲಾ

ಬಾಗಿಲಿಗ್ ತಲೆಯ ಚಚ್ಚತವಳೇ॥

ಬಾಗುಲಿಗ್ ತಲೆಯಾ ಚಚ್ಚುವತಿಗೆ

ಬಂದು ಬಾಗುಲಾ ತಗುದಾರೋ॥

ಬಂದೂ ಬಾಗುಲಾ ತಗೂದು ಶಿವನೆ

ಏನಾ ಕಿಡಿಯಾ ಸುರುದಾರೋ

ಬಂಜೆ ಮಕ್ಕಳೀರ ಮನೀಗೆ ನೀನೂ

ಬರಬವುದೇನೆ ಬಂಜೇ ನೀನೂ॥

ಮಕ್ಕಳೀರ ಮನೀಗೆ ನೀನೂ

ಬರುಬವುದೇನೆ ಬಂಜೆ ನೀನ॥

ನಮ್ಮನಿಗೆ ನೀನೂ ಬರುಬೇಡಾ

ನಮ್ಮಕ್ಕಳ ನೀನು ನೋಡಾಬ್ಯಾಡಾ॥

ನಮ್ಮ ಮಕ್ಕಳ ನೋಡಿದ್ರೆನೀನೂ

ಮಕ್ಕುಳು ಬಂಜೇರಾದಾರೋ॥

ಮಕ್ಕುಳು ಬಂಜೆರು ಆದಾರೂ

ನಾವು ಬಂಜೆರು ಅದೇವೂ॥

ನಮ್ಮನಿಗೆ ನೀನು ಬರುಬ್ಯಾಡಾ

ನಮಮ್ಮ ಮಕ್ಕಳ ನೋಡಬ್ಯಾಡಾ॥

ಬಂಜೆ ನಮ್ಮ ಮಕ್ಕುಳು ನೋಡಿದುಕೆ

ನಾವು ಬಂಜೆರು ಅದೇವೂ॥

ನಮ್ಮ ಮಕ್ಕುಳ ನೋಡಿದುರೆ

ನಿಮ್ಮಕ್ಕುದೀರೆ ನಾವ್ ಕೊಲ್ಲಿಸೇವೂ॥

ಉಟ್ಟು ಸೀರೆಯ ಬಿಚ್ಚೀಸಿ ನಿನ್ನಾ

ಹಟ್ಟಿ ಕಲ್ಲಿಗೆ ಕಟ್ಟಿಸೇವೂ॥

ಹಟ್ಟಿ ಕಲ್ಲಿಗೆ ಕಟ್ಟಿಸಿ ನಿನ್ನಾ

ಮಕಾಡೆ ನಾವು ಎಳಿಸೇವೂ॥

ನಮ್ಮನಿಗೆ ನೀನು ಬರುಬ್ಯಾಡಾ

ನಮ್ಮ ಮಕ್ಕಳ ನೋಡಬ್ಯಾಡಾ॥

ಬಾಲ ಬಸ್ಸಿರಿ ಬಸಮ್ಮ ಬಂದು

ಬಂಜೆ ಕುತ್ತಿಗೆ ಕಯ್ಯಾರೇ॥

ಬಾಲ ಬಸ್ಸಿರಿ ಬಸಮ್ಮ ಬಂದು

ಬಂಜೇ ಕುತ್ತಿಗ್ಗೆ ಕಯ್ಯಾರೇ॥

ಬಂಜೇ ಕುತ್ತಿಗ್ಗೆ ಕಯ್ಯಾರೇ

ಹಟ್ಟಿಂದಾಚೆಗೆ ನೂಕಿದುಳೂ॥

ಹಟ್ಟಿಂದಾಚಿಗೆ ನೂಕುವಾಗ

ಬಂಜೆ ಮಕಡೆ ಬಿದ್ದವಳೇ॥

ಹಟ್ಟಿಂದಾಚಿಗೆ ನೂಕುವಾಗ । ಕಲ್ಯಾಣ ದೇವಾ।

ಹಟ್ಟಿಂದಾಚಿಗೆ ನೂಕುವಾಗಾ।

ಆರು ಜನಾ ಅಕ್ಕು ತಂಗೇರ್

ಹಟ್ಟಿಂದಾಚಿಗೆ ನೂಕುವಾಗಾ..।

ಬಾಗುಲಲ್ಲಿ ಮಕಾಡೆ ಬೀಳುತಾಳೇ।

ಅಣೆಗೆ ಏಟಾಯಿತಲ್ಲೊ

ತಾಳಿರವ್ವಾ ಅಕ್ಕದೀರಾ

ತಾಳಿರವ್ವಾ ತಂಗೇದೀರಾ।

ಊರು ಬುಟ್ಟು ಹೋಗುತ್ತೀನೀ।

ಬಂಜೆಯನ್ನ ಆರು ಜನ ತಂಗೇರು ನಮ್ಮನಿಗೆ ಬರು ಬೇಡ ಬಂಜೆ. ನಮ್ಮ ಮಕ್ಕಳ ನೋಡುಬ್ಯಾಡಾ. ನಮ್ಮಕ್ಕಳ ಬಂಜೆ ನೀನು ನೋಡಿದುರೆ ನಾವು ಬಂಜೆರಾಗುತೀವಿ, ನಮ್ಮಕ್ಕಳು ಬಂಜೆರಾಗುತ್ತಾರೆ, ನಮ್ಮ ಮನೆ ವಸುಲು ದಾಟಿ ಬರುಬೇಡ ಅಂತೇಳಿ ಬಂಜೆಯನ್ನು ಆರು ಜನ ಅಕ್ಕ ತಂಗೇರು .

ಹಟ್ಟಿಂದಾಚಿಗೆ ನೂಕುತಾರೇ। ಕಲ್ಯಾಣ ದೇವಾ

ಹಟ್ಟಿಂದಾಚಿಗೆ ನೂಕುವಾರೇ

ಅಕ್ಕ ತಂಗೇರು ನೂಕುವಾಗಾ॥

ಬಾಗುಲಲ್ಲಿ ಎಡಗಾಲು ಎಡುವುತಾದೇ।

ಮಕಾಡೆ ಬೀಳುತಾಳೇ

ಬಂಜೆ ಮಾಕಾಡೆ ಬೀಳುತಾಳೇ

ತಾಳಿರವ್ವ ಅಕ್ಕದೀರಾ

ತಾಳಿರವ್ವ ತಂಗೇದೀರಾ

ಊರು ಬುಟ್ಟು ಹೋಗುತ್ತೀನಿ

ನನ್ನ ಮಾನುಬಂಗ ಮಾಡುಬ್ಯಾಡಿ।

ಮಾನುಬಂಗ ಮಾಡುಬ್ಯಾಡಿ।

ಮಕ್ಕಳಿಲ್ಲದ ಬಾಳಾ

ಮಕ್ಕಳಿಲ್ಲುದು ಬಾಳಾ।

ಬಾಳಾಲಾರೆನು ಶಿವುನೇ

ಮಕ್ಕುಳೆತ್ತರಿಗೆ ನೋಡೂ .

ಮಕ್ಕುಳೆತ್ತರಿಗೆ ನೋಡೂ।

ಮಕ್ಕಾಳ ಸೀರಯಲ್ಲೋ।

ಮಕ್ಕುಳು ಇಲ್ದರಿಗೆ ನೋಡೂ

ಮಕ್ಕಾಳಿಲ್ದರಿಗೆ ನೋಡೂ।

ಮಕ್ಕಾದ ಸೀರೀ ನೋಡೂ।

ನನ್ನ ಯಾಕೆ ಹುಟ್ಟಿದೋ ಶಿವನೇ .

ಯಾಕೆ ಹುಟ್ಟೀದೋ ಶಿವನೇ।

ನಿನ್ನ ಭೂಮಿಗೆ ಹೊರಿಯ ಮಾಡೀ।

ನಿರಿಗೋಲಿಗೆ ದೊರಿಯ ಮಾಡೀ

ಯಾಕೆ ಉಳಿಸೀದೂ ಶಿವನೇ

ಮಕ್ಕಾಳಿಲ್ಲದ ಬಾಳಾ

ಬಾಳಾಲಾರೆನು ಶಿವನೇ

ನಾನು ಹೆಣ್ಣುವಾಗಿ ಹುಟ್ಟುವಾಗಾ

ನಾನು ಹೆಣ್ಣುವಾಗಿ ಹುಟ್ಟುವಾಗಾ।

ಮಗಾರ ಹುಟ್ಟಿದಾರೇ।

ಮಣ್ಣಾಗಿ ಹುಟ್ಟಿದಾರೇ

ಮಣ್ಣೀನ ಮ್ಯಾಲೆ ಮಾರ ಹುಟ್ಟೀ।

ಮಣ್ಣಿನ ಮ್ಯಾಲೆ ಮಾರ ಹುಟ್ಟೀ।

ಬಂಜೆ ಅನ್ನದು ಮರಿಯೋದೂ

ಏನು ಮಾಡಲಿ ನಾನು

ಅಕ್ಕ ತಂಗೆರಿಗೆ ನೋಡೊ

ಮಕ್ಕಾಳಾ ಸೀರಿಯಲ್ಲೊ

ನನಗೇನೋಡಪ್ಪ ಶಿವನೇ

ಮಕ್ಕಾದ ಸೀರಿಯಲ್ಲೋ

ಮಕ್ಕಾದ ಸೀರಿಯಲ್ಲೋ

ಏನು ಕರ್ಮವ ಮಾಡೀ

ಏನು ಕರ್ಮಾವ ಮಾಡೀ

ಹುಟ್ಟಿದೆ ನಾನು ಶಿವನೇ

ಮಕ್ಕಳಿಲ್ಲದುವಾಳಾ

ಬಾಳಾಲಾರೆನು ಶಿವನೇ

# <u>ಗುರು ಪತ್ರಾಯನ ಕತೆ</u>

ಅಯ್ಯ ಕಣ್ಣು ಕಾಣಾದಿಲ್ಲಾ ಕಿವಿ ಕೇಳಾದಿಲ್ಲಾ

ತಂದನ್ನ ತಾನಾ ತಾನಾನಿ ತಂದೇ ನಾನ ॥ತ॥

ಶಿವನೆ ಕಣ್ಣು ಕಾಣಾದಿಲ್ಲ ಕಿವಿ ಕೇಳಾದಿಲ್ಲಾ।

ಶಿವನೆ ಗಡುಗಡುನೆ ನಡುಕಂಡೂ ಮೂಲೇಲ್ ಕುಂತವರೇ।

ಚವುದಲಯ್ಯ ಚವುಡಲಮ್ಮ ಕಣ್ಣು ಕಾಣದೆ ಮೂಲೇಲ್ ಕುಂತಿದ್ದಾರೆ.

ಅವರಿಗೆ ಸೊಸೇ ನಾಗುದೇವೀ

ಮಗಾನೆ ಗುರುಪತ್ರಾ ॥ತ॥

ಅವುರಿಗೆ ಮಗುನೇ ಗುರುಪತ್ರ

ಸೊಸೆ ನಾಗುದೇವೀ ।ತ।

ಅವುರಿಗೆ ಸೊಸೇ ನಾಗುದೇವೀ

ಯೇನು ಮಾಡುತಾಳೇ ।ತ।

ಅವುರಿಗೆ ಸೊಸೆ ನಾಗುದೇವೀ

ಯೇನು ಮಾಡುತಾಳೇ ।ತ।

ತನ್ನ ಅತ್ತೆ ಮಾವ್‌ದೀರುಗೇ

ಬಂದು ಚಂದುದಡಿಗೇ ।ತ।

ತನ್ನ ಗಂಡುಗೂ ಇವುಳೀಗೂ

ಬಂದು ಚಂದದಡಿಗೆ ।ತ।

ಶಿವುನೆ ಅತ್ತೆ ಮಾವದಿರಿಗೇ ಮಗ್ಗುಲಕ್ಕಿ ಅನ್ನಾ॥

ಅವುರಿಗೆ ಎಂಟು ದಿನುದಲ್ಲಿ ಮಾಡೀದ। ಉಳಿ ಅಂಬ್ಲಿ ಸೀಕೂ॥

ಕಣ್ಣು ಕಾಣದಿಲ್ಲ ಕಿವಿ ಕೇಳಾದಿಲ್ಲ ಚವುಡಲಯ್ಯ ಚವುಡಲಮ್ಮ ಗಡಾಗಡನೆ ನಡುಗಿ ಮೂಲೇಲಿ ಕೂತುದ್ದಾರೆ. ಮಗಾ ಗುರುಪತ್ರಾಯ ಸೊಸೇ ನಾಗಾದೇವೀ

ತನ್ನ ಗಂಡುಗು ಇವ್ಳಿಗೆ । ಒಂದು ಚಂದುದಡಿಗೇ ।ತ।

ತನ್ನ ಗಂಡುಗು ಇವ್ಳಿಗೂ ಹಾಲು ಬಾನದಡಿಗೇ।

ತನ್ನ ಅತ್ತೆ ಮಾವಾರಿಗೆ। ಮುಗ್ಗಲಕ್ಕಿ ಅನ್ನಾ।

ಮಗ್ಗುಲಕ್ಕೀ ಅನ್ನಾ । ಮುಗ್ಗುಲ ತುಪ್ಪ।

ಅವರಿಗೆಂಟು ದಿನದಲ್ಲಿ ಮಾಡೀದ। ಉಳಿ ಅಂಬ್ಲಿ ಸೀಕೂ।

ಇವ್ನ ಗಂಡುಗೂ ಇವುಳೀಗೂ । ಹಾಲು ಬಾನದಡಿಗೇ।

ಅಯ್ಯ ಸೊಸೇ ಮಾಡೊ। ಏಲವಾರ ಮಗುನಿಗೆ ಗೊತ್ತೇ ಇಲ್ಲಾ

ಸೊಸೇ ಮಾಡೋ ಏಲವಾರ। ಮಗುನಿಗ್ ಗೊತ್ತೇ ಇಲ್ಲಾ।

ಸೊಸೇ ಮಾಡೋ ವಲಾವಾರ ಮಗುನಿಗೆ ಗೊತ್ತಿಲ್ಲ. ಮಗುನು ಕುಟ್ಟೆ ತಾಯಿ–ತಂದೆ ಬಾಯ್ ಬುಟ್ವುಲ್ಲ ಯಾವಾಗ ಬಾಯಿ ಬುಟ್ಟು ಅಂದ್ರೆ ಒಂದಿನಾ ಮಗಾ ತಾಯಿ ತಂದೇಯ ಊಟ ಮಾಡಿದ್ರ? ಅಂತ ಕೇಳ್ದೆ. ಅವತ್ತಾ ತಾಯಿ–ತಂದೆ ಮಗುನ ಕೈಲಿ ಬಾಯ್ ಬುಡ್ತಾರೆ.

(ಅವುರ ಬಾಯಿ ಬುಡ್ಲುಲ್ಲ. ತಂದೆ ತಾಯಿ ಮಗುನಿಗೆ ಬಾಯ್ ಬುಟ್ಟು ಹೇಳ್ನುಲ್ಲ ನಿನ್ ಹೆಡ್ತಿ ಈತರ ಏಲುವಾರ ಮಾಡ್ತಾಳೆ ಅನ್ನದ. ಒಳುಗೇ ಇಟ್ಗಂಡು ಜೀವನ ಸಾಕ್ತಾ ಇದ್ರು. ಒಂದಿನಿಲ್ಲ ಇಂದಿನ ಮಗುನೇ ಬಂದು ತಾಯಿ–ತಂದೆಯ ಊಟ ಮಾಡಿದ್ರ ಅಂತ ಕೇಳ್ತಿನಲ್ಲಿ..)

ಅವುತ್ತ ತಾಯಿ–ತಂದೆ ಕಣ್ಣೀರು ಬಿಟ್ರು ಯಾಕೆ ತಾಯಿ–ತಂದೆರು ಕಣ್ಣೀರು ಬುಡ್ತಾರಲ್ಲ ಯಾಕೆ ಅಂತ ಕೇಳ್ದೆ ಮಗುನೆ ಇವತ್ತ ಬಾಯಿ ಬುಟ್ಟು ಹೇಳ್ತೀವಿ ಇವತ್ತು ನೀನೆಯ ಊಟ ಮಾಡಿದ್ರ ಅಂತ ಕೇಳುವತ್ಗೆ ನಿನ್ನೆಂಡ್ರು ಮಾಡಾ ಅನ್ನಾಯ ಏಲುವಾರ ಬಾಯಿಬುಟ್ಟು ಹೇಳ್ತೀವಿ.

ಉಂಡುವಲ್ಲೋ ಮಗುನೇ। ನಿನ್ ಬಾಗ್ಯೇವಾ।

ಉಂಡು ಕಾನೋ ಮಗುನೇ। ನಿನ್ ಬಾಗ್ಯೇವಾ।

ನಿನ್ನ ಹೆಡಿತಿ ಮಾಡೋವಂತ। ಏಲುವಾರ ನೋಡೋ।

ನಿನ್ನ ಹೆಡಿತಿಗು ನಿನುಗೂವೆ। ಒಂದು ಚಂದುದಡುಗೇ।

ನಮಿಗೆ ಒಂದು ಚಂದುದಡಿಗೆ। ಮುಗ್ಗುಲಕ್ಕಿ ಅನ್ನಾ।

ನಮಿಗೆ ಮುಗ್ಗುಲಕ್ಕಿ ಅನ್ನಾ। ಮುಗ್ಗಾಲ ತುಪ್ಪಾ।

ನಮಿಗೆ ಎಂಟು ದಿನುದಲ್ ಮಾಡೀದಾ। ಉಳಿ ಅಂಬ್ಲಿ ಸೀಕೂ।

ನಿನ್ನ ಹೆಡಿತೀಗು ನಿನುಗೂ। ಹಾಲುಬಾನದಡುಗೇ।

ಉಂಡುವಲ್ಲೋ ಮಗುನೇ। ನಿನ್ನ ಬಾಗ್ಯೇವಾ।

ಎಲ್ಲಾ ನನ್ನ ಹೆತ್ತ ತಾಯಿ–ತಂದೆ .ಎಲಾ ನನ್ನ ಹೆತ್ತ ತಾಯಿ–ತಂದೇರಾ ನನ್ನೆಡ್ತಿ ಮ್ಯಾಲೆ ಹೊಟ್ಟಿ ಕಿಚ್ಚಿನ ಮ್ಯಾಲೆ ಹೇಳುತ್ತಾರೋ ದಿಟಾನೆ ಹೇಳುತ್ತಾರೋ ನನಿಗೆ ಒಂದು ಅರುವಿಲ್ಲಾ .

(ಅಲ್ಲಾ ನನ್ನೆತ್ತ ತಂದೆ–ತಾಯಿ ನನ್ನೆಡ್ತಿ ಮ್ಯಾಲೆ ಹೊಟ್ಟೀ ಕಿಚ್ಚಿಗೆ ಹೇಳ್ತಾರ ಅಥವಾ ದಿಟುವಾ ಅನ್ನದ ಪರೀಕ್ಷೆ ಮಾಡ್ಬೇಕು. ಇಂಥ ಏಲವಾರ ಮಾಡ್ತೀಯಲ್ಲ . ಅಂತ ಮಡಿದಿಗೆ ತಿಳುಸುಬಾರ್ದು. ನನ್ನ ಕಣ್ಣಲ್ಲಿ ನೋಡಿ ಆಮೇಲೆ ) ಮಡಿದಿಯ ಇಚಾರಣೆ ಮಾಡುನಿಲ್ಲ. ಯಾಕಮ್ಮ ಈತರ ನನ್ನ ತಾಯಿ–ತಂದೆಗೆ ಊಟುದಲ್ಲಿ ಏಲುವಾರ ಮಾಡ್ತೀಯಲ್ಲ ಅಂತವ. ಹೆಡ್ತಿಗೆ ತಿಳೀನಿಲ್ಲ. ತಿಳುಸ್‌ನಿಲ್ಲ. ಹೆಡ್ತಿ ಏಲುವಾರ ಮಾಡದ ಕಣ್ಣಲ್ಲಿ ನೋಡಬೇಕು ಅನ್ನದಾಗಿ ಒಂದಿಸ ಬಂದ್ ತಾಯಿ ತಂದೆ ಜೊತೇಲಿ ಊಟ ಮಾಡಬೇಕು. ಬಂದು ಊಟಕ್ಕೆ ಕೂತಗಂಡ. ಮಡಿದಿ ನಾಗುದೇವಿ ನನಿಗು ಊಟಕ್ಕೂ ಕೊಡು. ತಾಯಿ–ತಂದಿಗು ಊಟಕ್ಕೆ ಕೊಡು ಅಂದ. ಈಗ ಇವುಳಿಗೆ ಚಿಂತೆ ಬತ್ತಾದೇ (ಗಂಡ ಎದುರಿಗ್ ಕೂತವ್ನೆ. ಈಗ ಗಂಡುನ ಇದಿರಿಗೆ ಏಲುವಾರುದ ಊಟ ಇಕ್ಕಿದ್ರೆ ಗಂಡುಗೆ ಗೊತ್ತಾತದೆ. ಈಗ ಗಂಡುಗ್ ಇಕ್ಕಂಗೆಯ ಹಾಲುಬಾನ ಇಕ್ಕಿದ್ರೆ ನೋಡ್ದ ಅವುಳ ಗಂಡ ಇರವತ್ಗೆ ಇವತ್ತು ನಮಿಗೆ ಇಂಥ ಹಾಲು ಬಾನದ ಊಟ ಇಕ್ಕವ್ಳೆ ಅಂತ ಮಗನ್ಗೆ ಹೇಳ್ತಾರೆ. ನೀನು ಕೂತಿರೋವತ್ಗೆ ಮಗನೆ ನಿನ್ನೆಡ್ತಿ ಹಾಲು ಬಾನ ಇಕ್ಕವ್ಳೆ ಅಂತ ಇವ್ರು ಹೇಳ್ತಾರೆ. ಈಗ ಯತ್ಲಾಗಿ ಬೇಯ್ತಳೆ.)

(ಗಂಡ ಕೂತವ್ನೆ ಅಂತ ಹಾಲು ಬಾನ ಇಕ್ಕಿದ್ರೆ .ನೀನು ಕೂತಿರೊವತ್ಗೆ ನಿನ್ನೆಡ್ತಿ ಹಾಲು ಬಾನ ಇಕ್ಕಿದ್ಲು. ಇಲ್ದೆ ಹೋದ್ರೆ ಮುಗ್ಗಲಕ್ಕಿ ಅನ್ನ ಬಳ್ಳೆ ಸಪ್ಪಿನ ಸಾರು ಮುಗ್ಗುಲ ತುಪ್ಪಾ ಉಳಿ ಅಂಬ್ಲಿ ಇಕ್ತಾಳೆ ಅಂತಾ ಹೇಳ್ತಾರೆ. ಗಂಡುಗೆ ಕಂಡು ಬತ್ತಾದೆ. ಗಂಡುಗೆ ಕಂಡು ಬತ್ತಾದೆ. ಗಂಡುನ ಎದ್ರುಗೆ ಏಲುವಾರ ಮಾಡಿದ್ದು ಕಂಡು ಬತ್ತಾದೆ.) ಯೇನ್ ಮಾಡ್ಲಿ ಶಿವನೆ.

ಯಾವು ಚಂದುಕ್ಕೆ ಇಕ್ಕಾಲಿ ಶಿವನೇ।

ಯಾವು ಚಂದುಕ್ಕೆ ಇಕ್ಕಾಲಿ ಶಿವನೇ।

ಅಯ್ಯ ಮಡಿ ಬಟ್ಟೆ ಕುಂಡೋಗಿ ನೀರಿಗೆಜ್ಜುತವಳೇ।

ಮಡಿ ಬಟ್ಟೆ ಕುಂಡೋಗಿ ನೀರಿಗೆಜ್ಜುತವಳೇ।

ಮಡಿ ಬಟ್ಟೆ ಕುಂಡೋಗಿ ನೀರಿಗೆಜ್ಜಿ ಕುಕ್ಕೇಲಿಟ್ಟು ಸುಮ್ನೆ ನಿಂತಿದ್ದಾಳೆ. ಯಾಕೆ ಮಡಿದಿ ನೀನು ಊಟಕ್ಕೆ ಕೊಡುಲಿಲ್ಲುವಲ್ಲಾ. ಗಂಡಾ ಗಂಡಾ ಕುಕ್ಕಿದ ಬಟ್ಟೆ ಕುಕ್ಕೆಲ್ಲೇ ಕೂತಿದ್ದಾವೆ. ಬಟ್ಟೆ ವಣಗಾಕಿ ಊಟುಕ್ಕೆ ಇಕ್ಕುತ್ತೀನಿ ತಡೀರಿ ಅಂತಾವ .

ಬಟ್ಟೆ ವಣಗಾಕಾವ ತೆರೆ ಕಟ್ಟುತವಳೇ।

ಬಟ್ಟೆ ವಣಗಾಕಾವ ತೆರೆ ಕಟ್ಟುತವಳೇ।

ತೆರೆಯಾ ಕಟ್ಟಿ ಅತ್ತೆ ಮಾವ್ದೀರ ಮರಿ ಮಾಡುತವಳೇ

ಬಟ್ಟೆ ವಣಗಾಕಳಂಗೆ ತೆರೆ ಕಟ್ಟಿ ಅತ್ತೆ ಮಾವುನ ಮರಿ ಮಾಡಿದ್ಲು ಗಂಡುಗೆ ಆಗ ತೆರೆ ಕಟ್ಟ ಬಟ್ಟೆ ವಣಗಾಕೀ ಮೂರು ತಟ್ಟೇಲಿ .ಮೂರು ತಟ್ಟೇಲಿ ಹಾಲು ಅನ್ನನೆ ತತ್ತಾಳೆ. ಗಂಡುಗೆ ಪಸ್ಸು ಮಡುಗುತ್ತಾಳೆ. ಅತ್ತೆ ಮಾವುಗೆ ಇಕ್ಕೋಳಂಗೇ .ಹಾಲು ಬಾನವ ಅತ್ತೆ ಮಾವುನ ಅತ್ರುಕೆ ತಂದು . ಅವುರಿಗೆ ಕಣ್ಣು ಕಾಣಾದಿಲ್ಲ ಕಿವಿ ಕೇಳಾದಿಲ್ಲ .ಇಂತರು ಇತ್ಲಾಗಿ ಬಂದ್ರು ಇತ್ಲಾಗಿ ಬಂದ್ರು ಅನ್ನದಾಗಿ ಗೊತ್ತಾಗದಿಲ್ಲ.

ಅವುರ ಬೆನ್ನು ಬಾಗ್ಕೆ ಶಿನವೆ ಮಡಗೀ ಹೋದಾಳೂ।

ಅವುರ ಬೆನ್ನು ಬಾಗ್ಕೆ ಶಿನವೆ ಮಡಗೀ ಹೋದಾಳೂ।

ಸಾರು ತರಳಂಗೆ ಸಾರು ತರಾಳಂಗೆ ಕಣ್ಣಲಕ್ಕಿ ಅನ್ನ ಮುಗ್ಗುಲು ತುಪ್ಪ . ಬಳ್ಳೇ ಸಪ್ಪಿನ ಸಾರು ಉಳೀ ಅಂಬ್ಲಿ ಸೀಕಾ. ಸಾರು ತರುಳಂಗೆ ಹೋಗಿ ಸಾರು ತಂದಂಗೆ ಮಾಡೀ

ಅತ್ತೆ ಮಾವುಗೆ ಸುರುದೋಗುತವಳೇ।

ಅತ್ತೆ ಮಾವುಗೆ ಸುರುದೋಗುತವಳೇ।

(ಈಗ ಗಂಡ ಯೇನು ತಿಳ್ಕಂಡ ಅಂದ್ರೆ ನನ್ ಕಣ್ಣಿಗೆ ಕಾಣಂಗೆಯ ಹಾಲು ಬಾನ ಕುಂಡೋದ್ಲಲ್ಲ ನನ್ನೆಂಡ್ತಿ ನನ್ ತಾಯಿ ತಂದೆಗೆ ಇಕ್ತಾರೆ. ಇಕ್ಕವಳೆ ಅಂತ ಕಂಡು ಕಂಡ ಅವುಳು ಎಲ್ಲಿ ಇಕ್ಕಿದ್ಲು? ಕುಂಡೋಗಿ ತಂದೆ ತಾಯಿ ಬೆನ್ನ ಹಿಂದ್ಕೆ ಮಡಿಗಿಬುಟ್ಟು ಇವುಳು ಂದು. ಮಡಗಿಬುಟ್ಟು ಒಳಿಕೋಗಿ ಉಳಿ ಅಂಬ್ಲಿ ಸೀಕ ತಂದು ಇಕ್ಕಿದ್ಲು. ಈ ಬಟ್ಟೆ ವಣಗಾಕವತ್ತೆ ಸರಿಯಾಯ್ತು. ಗಂಡುಗೆ ಕಾಣ್ಲುಲ್ಲ. ಮಗ್ ಯೇನ್ ತಿಳ್ಕಂಡ ಇವುಳು ನನ್ನಿದ್ರಿಗೆ ತಗಂಡೋದ್ಲಲ್ಲ ಇಕ್ಯವಳೆ ಅನ್ಕಂಡ. ಈಗ ಒಂದೇ ಅಂತಿಲಿ ಮಗ ತೆರಿಂದಾಚಲಿ ಬಾನ ಉಣ್ತಾವ್ನೆ. ತಾಯಿ ತಂದೆ ತರಿಂದೀಚೆಲಿ ಯೇನ್ ಉಣ್ತಾವೇ. ಆವುಳು ನನ್ನಿದ್ರಿಗೆ ತಗಂಡೋದ್ಲಲ್ಲ ಇಕ್ಕಿದಾಳೆ. ಅವುರು ಹಾಲು ಬಾನನೆ ಉಣ್ತಾವ್ರೆ ಅನ್ಕಂಡ,)
ತೆರಿಂದೀಚೆಲ್ಲಿ

ಮಾಗಾ ಗುರುಪತ್ರ .ಹಾಲು ಬಾನಾದ ಊಟ ಮಾಡುತವನೇ॥
ತೆರೆಂದಾಚಲ್ಲಿ .ಯತ್ತಾ ತಾಯಿ ತಂದೆ..
ಬರು ನಂಬ್ಲಿ ಕುಡಿತಾರೆ ಬಳ್ಳೇ ಸಪ್ಪ ತಿನ್ನುತ್ತಾರೇ॥
ಎಂಟು ದಿನದಲ್ಲಿ ಮಾಡಿದ ಉಳಿ ಅಂಬ್ಲಿ ಸೀಕೂ॥
ಎಂಟು ದಿನದಲ್ಲಿ ಮಾಡಿದ ಉಳಿ ಅಂಬ್ಲಿ ಸೀಕೂ॥
ಕಡುಮ ಕಡುಮಾನೆ ಸೀಕು ಕಾಡಿತಾರೇ॥

ಉಳಿ ಅಂಬ್ಲಿ . ಉಳಿ ಅಂಬ್ಲಿ ಉಣ್ಣಾಕೆ ಆಗಾಕುಲ್ಲ. ಸೀಕ ಕಡುಮ ಕಡುಮನ ಕಡಿತಾರೆ. ಸೀಕ ಕಡಿವಾಗ .ತಾಯಿ ತಂದೆ ದಮಗ ತಾಯಿ ತಂದೆ ಸತ್ಯ . ಮಗುನಿಗೆ ತೋರಾಕೆ .

ಸೀಕೀನ ಚೂರು ಬಾಯಿಂದ ಹಾರೀ।

ಸೀಕೀನ ಚೂರು ಬಾಯಿಂದ ಹಾರೀ।

ಏಳು ತೇರೆ ದಾಟೋಗಿ ಮಗುನೆಡಿಗೆ ಬೀಳ್ತೂ।

ತಾಯಿ ತಂದೆ ಸತ್ಯ .ದರ್ಮ ಮಗುನಿಗೆ ತೋರಾಕೆ ಇವುರುತ್ತಿರ ಇದ್ದ ಸೀಕು ಬಾಯಿಂದ ಹಾರಿ ಹೋಗಿ ಏಳು ತೆರೆ ದಾಟಿ ಮಗುನ ಎಡೆಗೆ ಬೀಳ್ತಾದೆ. ಗಳಿಗೊಂದು ಗಂಟೆಗೊಂದು ಹೋಗಿ ಬೀಳ್ತಾದೆ.

ಹಿಂದೆ ತಾಯಿ ತಂದೆ ಅಂದುದ್ರಲ್ಲ ನಿನ್ನೆಡ್ತಿ ಉಳಿ ಅಂಬ್ಲಿ ಸೀಕ ಇಕ್ತಾಳೆ ಅಂದುದ್ರಲ್ಲ .ಅವುರು ಅಂಗೆ ಅಂದುದ್ಕುವೆ ಇವುನೆಡಿಗೆ ಅಕಡಿಂದ ಹಾರಿ ಬಂದು ಬಿದ್ದುದ್ದುವೆ. ಇವು ಯಾವು ನೋಡಬೇಕು. ಹೋಗಿ ತಾಯಿ ತಂದೆ ಯೆಡೆ ನೋಡುತ್ತಾನೆ. ತಾಯಿ ತಂದೆ ಯಡೆಯಲ್ಲಿ ಉಳಿ ಅಂಬ್ಲಿ ಸೀಕು ಕೂತೈತಲ್ಲೋ ದೇವಾ
ತಾಯಿ ತಂದೆ ಯಡೆಯಲ್ಲಿ ಉಳಿ ಅಂಬ್ಲಿ ಸೀಕು ಕೂತಾದೆ.

ತಟ್ಟನೆ ದರಣಿಗೆ ಬಿದ್ದ

ತಟ್ಟನೆ ದರಣಿಗೆ ಬಿದ್ದಾ। ಮಾದೇವನೆ

ನನ್ನ ಹೆಡ್ತಿ ಮಾಡಿದ ಕರ್ಮಾ।

ನನ್ನ ಕಣ್ಣಲ್ಲಿ ಕಾಂಡನೆಲ್ಲಾ।

ನನ್ನ ಹೆಡ್ತಿ ತಾಯಿ ತಂದೇ।

ನನಿಗೆ ಮಿಗಿಲಾದ ದೇವುರಲ್ಲ।

ಈ ಕಣ್ಣಲ್ಲಿ ಕಂಡಿನಲ್ಲಾ।

ನಾನು ಇಂತಾ ಕರ್ಮಾವ।

ಶಿವನೆ ನಾನೆಲ್ಲ ಕಳಿಯಾಲೀ।

ಅಯ್ಯ ಕಣ್ಣೀರ ಬಿಡುತಾನೇ।

ಕಾಸಿಗೆ ಹೋಗಲಿ, ದರ್ಮಸ್ಥಳಕ್ಕೆ ಹೋಗಲಿ, ಯಾವ್ ತಾಕೆ ಹೋಗಲಿ ನನ್ನವ್ವ ಕಾಪಾಡು ನನ್ನಪ್ಪ ಕಾಪಾಡು ಅಂತ ಅವ್ವ ಅಪ್ಪನ ಸೆರಣೆ ಯತ್ತುತ್ತೀವಿ.

ನನ್ನ ತಾಯಿ ತಂದಿಗಿಂತಾವಾ

ನನ್ನ ತಾಯಿ ತಂದಿಗಿಂತಾವಾ। ಮಾದೇವನೆ

ನನಿಗೆ ಮಿಗುಲಾದ ದೇವರಿಲ್ಲಾ।

ನನಿಗೆ ಮಿಗುಲಾದ ದೇವರಿಲ್ಲಾ।

ನನ್ನ ಹೆಡ್ತಿ ಮಾಡಿರ ಕರ್ಮ।

ನನ್ನ ಹೆಡ್ತಿ ಮಾಡಿದು ಕರ್ಮ।

ಶಿವನೆ ನಾನೆಲ್ಲಿ ಕಳಿಯಲ್ಲಿ।

ಅಯ್ಯ ಆಡಿಕಂಡು ಆಳುತಾನೇ।

(ಮಾಡಿದ ಕರ್ಮ ಕಣ್ಣಲ್ಲಿ ನೋಡಿದ್ನಲ್ಲಾ ಈಗ ಅವುಳ ಹೋಗಿ ದೊಣ್ಣೆ ತಗಂಡು ಹೊಡುದ್ರೆ ನನ್ನ ಕರ್ಮ ಅಳೀತದೆ. ಕೊಡ್ಲಿ ತಂದು ಕಡುದ್ರೆ ಕಳೀತದ. ಕಳಿಯಾಕುಲ್ಲ . ಈಗ ನನ್ನ ಕಣ್ಣಲ್ಲಿ ನೋಡಿದ ಕರ್ಮ ಕಳಿಬೇಕು ಅಂದ್ರೆ ನಾನೇನು ಮಾಡಬೇಕು)

ನಾನೇನು ಮಾಡಬೇಕು ಅಂದ್ರೆ ತಾಯಿ ತಂದೆ ಹೊತ್ಗೊಂಡೋಗಿ ಅಡುವಿ ಅರಣ್ಯಕೋಗಿ ವನುವಾಸದ ರೀತೀಲಿ ಕಳೀಬೇಕು. ತಾಯಿ ತಂದೆ ಸೇವೆ ಮಾಡಬೇಕು ಅಂತಾವ ಬಿದಿರು ಬಾಸ ಮಾಡಿ ಹೆಣ್ಣಾಗಲಿ ಗಂಡುಗಾಗಲಿ ಕಾಣುದೆಗಳೆದುರು ಅಡ್ಡೆ ಮಾಡ್ದ ಅಡ್ಡೆ ಮಾಡಿ ತಂದು ಮಡಿದಿ ನಾಗದೇವಿ ಕರಿತಾನೆ. ಮಡಿದಿ ನಾಗದೇವೀ .ನೀನು ಮಾಡಬಾಡುದು ಕರ್ಮ ಮಾಡಿಬುಟ್ಟು ನನ್ನಾ ಕಣ್ಣಲ್ಲಿ ನೋಡಿದ್ನಲ್ಲ. ತಾಯಿ ತಂದೆ ಉಳಿ ಅಂಬ್ಲಿ ಸೀಕು ತಿಂತಾರೆ. ನಾನು ಇಸ್ಟು ದಿಸ ಹಾಲು ಬಾನ ಉಣ್ತಾ ಇದ್ದೊ. ಇಸ್ಟು ದಿನ ಗೊತ್ತಾಗ್ನುಲ್ಲ. ಈ ದಿನ ಗೊತ್ತಾತು. ಈಗ ನಿನ್ನ ಹೊಡುದು ಕಡುದ್ರು ಯೇನು ಆಗಾದಿಲ್ಲ. ಈ ಕರ್ಮ ಪರಿಹಾರ ಆಗದಿಲ್ಲ. ತಾಯಿ ತಂದೆ ಹೊತ್ಗೊಂಡು ಹನ್ನೆರಡು ವರ್ಷ ವನುವಾಸಕ್ಕೆ ಹೋಗುತ್ತೀನೀ

ನಾನು ಹಿಂತಿರುಗಿ ಬರುವೋದು ಹನ್ನೆರಡು ವರುಸಾ।<br>
ನಾನು ಹಿಂತಿರುಗಿ ಬರುವೋದು ಹನ್ನೆರಡು ವರುಸಾ।<br>
ನನ್ನ ಮನಿಯೇ ಜೋಪಾನ ಮಕ್ಕುಳೇ ಜ್ವಾಪಾನಾ।

ಯೆಡ್ತಿಗೆ ಗಂಡ ಹೇಳುವಾಗ ತಾಯಿ ತಂದೆ ಕಿವಾರೆ ಕೇಳಿದ್ರು ಕಣ್ಣೀರು ಬುಟ್ರು . ಮಗನೆ ಮಗನೆ ಗುರುಪತ್ರಾ ನಮಿಗೆ ಕಣ್ಣು ಕಾಣದಿಲ್ಲ, ಕಿವಿ ಕೇಳುದಿಲ್ಲ, ಬೀಸಕ್ಕೆ ತೋಳಿಲ್ಲ, ನಡಿಯಕ್ಕೆ ತೊಡೆಯಿಲ್ಲ ಮಗನೆ ಹನ್ನೆರಡು ವರ್ಷ ಕಾಡಲ್ಲಿ ನಮ್ಮನ್ನು ಹೊತ್ಗೊಂಡು ಅರಣ್ಯ ವಾಸುಕ್ಕೆ ಹೋಗುತಿದ್ದೀಯ.

ನಮ್ಮ ಯಾವ ಚಂದುಕೊರುತೀಯೋ<br>
ಯಾವ್ ಚಂದುಕೊರುತೀಯೋ। ಮಾದೇವನೆ<br>
ನಿನ್ನ ಹೆಡ್ತಿ ಮಾಡಿದು ಕರ್ಮ।<br>
ಮಗುನೆ ನಿನಿಗೇ ಬಂದಿತಲ್ಲೋ।<br>
ನಮ್ಮ ಯಾವ ಚಂದಕೂರುತೀಯೋ।<br>
ಶಿವನೆ ಕಣ್ಣೀರ ಬುಡುತಾರೇ।<br>
ಅಯ್ಯ ನಿಡಿಗೋಳ ಮಾಡುತಾರೇ।

(ಅದ್ರೆ ಹೆಡ್ತಿಗೇಳಿ ತಾಯಿ ತಂದೆ ಹೊತ್ಗೊಂದೋಯ್ತಾವನಲ್ಲ. ಈಗ ಇವನ ಹೆಡ್ತಿ ನಾಗುದೇವಿಗೆ ಒಂದು ಚಿಂತೆ ಅತಿಲ್ಲಿ. ಯೇನು ಚಿಂತೆ .?)

ಹನ್ನೆರಡು ವರುಷ ಅತ್ತೆ ಮಾವ ಗಂಡ ಹೋಗುತಾರೇ. ನನ್ನ ಗಂಡ ಬರೋ ವರುಗ ಹನ್ನೆರಡು ವರ್ಷ ಆಗುತ್ತಾದೆ. ಹನ್ನೆರಡು ವರ್ಷದ ವರಿಗು

ಉಣ್ಣಾ ಅನ್ನುಕ್ಕೆ ಏನಾ ಮಾಡಾಲಿ। ತಂದನ್ನ ತಾನೆ ತಾನಾನಿ ತಂದೇನಾನಾ<br>
ನಾವುಡುವ ಬಟ್ಟೀಗೆ ಯೇನಾ ಮಾಡಲೀ।

ಉಣ್ಣಾ ಅನ್ನುಕ್ಕೆ ನಾಯೇನಾ ಮಾಡಾಲೀ।

ನಾ ಉಡುವ ಬಟ್ಟೀಗೆ ಯೇನಾ ಮಾಡಲೀ।

ಉಣ್ಣೋ ಅನ್ನಾ ಉಡೋ ಬಟ್ಟೆ ಹೋಗಿ ಅತ್ತೆ ಮಾವ ಗಂಡುನ್ನ ಹಿಡಿದು ಕೇಳುಬೇಕು ಅಂತಾ

ಓಡಿ ಓಡಿ ಹೋಗಿ ಅಡ್ಡುಗಾಡುವಳೇ।

(ಇವುನು ಅಪ್ಪ ಅಮ್ಮನ್ನ ಅಡ್ಡೇವು ಮಾಡ್ಕೆಂಡು ಹೊತ್ಕ ಹೋತಾ ಅವುನಲ್ಲ ಮಗ .) ಅಡ್ಡೆ ಮಾಡಿಕ್ಯಂದು ಹೊತ್ಗೊಂಡೋಗುವಾಗ ಸೊಸೆ ನಾಗುದೇವಿ ಹೋಗಿ ಅಡ್ಡ ನಿಂತಕತ್ತಾಳೆ. ಅತ್ತೆ ಮಾವ ಅತ್ತೆ ಮಾವಾ  ಗಂಡಾ .

ಹನ್ನೆರಡು ವರ್ಷ ನೀವೋಗುತ್ತೀರಿ।

ಹನ್ನೆರಡು ವರ್ಷ ನೀವೋಗುತ್ತೀರಿ।

ನೀವು ಹಿಂತಿರುಗಿ ಬರುವೋದು ಹನ್ನೆರಡು ವರ್ಸಾ

ನಾನು ಉಣ್ಣೋ ಅನ್ನಕೆ ಯೇನಾ ಮಾಡಾಲೀ।

ನಾನು ಉಡುವ ಬಟ್ಟೀಗೆ ಯೇನಾ ಮಾಡಾಲೀ।

ಉಣ್ಣೋ ಅನ್ನ ಉಡೋ ಬಟ್ಟೆಗೇನು ಮಾಡಿ ಹೋಯ್ತೀರಿ ಅಂತಾಳೆ. ಆಗ ,,,,ಸೊಸಿಗೇನು ಹೇಳ್ತಾರೆ ಅಂದ್ರೆ . ನೀನು ಸತ್ಯುದಲ್ಲೆ ದರ್ಮದಲ್ಲೇ ಮನೆ ವಳುಗೆ ಇದ್ದುದ್ರೆ ನನ್ನ ಮಗುನಿಗೆ ಈ ವನವಾಸಿರ್ತಿಲ್ಲ. ನಿನ್ನಲ್ಲಿ ವಲುವಾರ ಇತ್ತು. ನಿನ್ನಲ್ಲಿ ವಲುವಾರ ಇದ್ದುದ್ರಿಂದ ನನ್ ಮಗುನಿಗೆ ವನವಾಸ್ ಬಂತು. ಈ ಬಂದು ನಮ್ಮುನ್ನ ಹಿಡಿದು ಉಣ್ಣೋ ಅನ್ನ ಉಡೋ ಬಟ್ಟೆ ಕೇಳ್ತಾ ಇದ್ದೀಯ ಮತ್ತೆ )

ನೀನು ಮಾಡಿದು ಕರ್ಮುಕ್ಕೆ ನಾವಾಕೋ ಶಾಪ ನಿನುಗೆ ತಟ್ಟಲುಬೇಕು .ಸೊಸೆ ನಾಗುದೇವೀ.

ನೀನು ಮಾಡಿದಂತ ಕರ್ಮುಕ್ಕೆ ನಾಯಾಗಿ ತಿರುಗೂ।

ಅತ್ತೆ ಮಾವ್ದೀರ ಸಾಪುದಲ್ಲ

ನಿಂತು ನೀಲೀನೆ ನಾಯಾಗುತವಳೇ।

ನಾಯಾಗಿ ನಿಂತು ಮೇಲೆ ಸೊಸೆ .ಸೊಸೆ ನಾಗುದೇವಿ, ಉಣ್ಣೋ ಅನ್ನ ಉಡೋ ಬಟ್ಟೆ ಕೇಳಾಕೆ ಬಂದು ನಿಂತಿದ್ದಲ್ಲ ಈಗ ನಮ್ಮ ಸಾಪುಕ್ಕೆ ನಾಯಾಗಿ ನಿಂತಿದ್ದೀಯ ಈಗ ಏಳೂರ ಗೌಡರ

ಏಳೂರ ಗೌಡೂರ ಮನೆ ಮುಂದುಕೋಗಿ।

ಆವರು ಊಟ ಮಾಡ ಗಂಟ ಕಾದು ಕೂತುಗಾಳೇ

ಏಳು ತುತ್ತ ಎಂಜಿಲನ್ನ ನಿನಗಾಕುಲಮ್ಮಾ।

ಎಂಜಿಲನ್ನ ತಿಂದು ಕಂಡು ಜೀವನ ಸಾಕೋಗೇ।

ನಮ್ಮ ಸಾಪುಕ್ಕೆ ನಾಯಾದ್ ಮೇಲೆ ನಿನಿಗೆ ಉಣ್ಣೋ ಅನ್ನ ಉಡೋ ಬಟ್ಟೆ ಕೇಳಲ್ಲ  ಈ ಏಳೂರ ಗೌಡರ ಮನೆ ಮುಂದೆ ಅವರ ಮನೆ ಜಾಗಲಲ್ಲಿ ಕಾದ್ ಕೂತ್ಗಂಡು ಅವುರು ಊಟ ಮಾಡೊ ವರ್ಗುವೆ  ಏಳು ತುತ್ತು ಎಂಜುಲನ್ನ ನಿನಿಗಾಕುತ್ತಾರೆ. ನೀನ್ ತಿನ್ನಂಡು ಇರೋಗು)

ನಿನಗೆ ಎಂಟೂರ ತಿರುಗಿದುರು: ಸೊಂಟು ಕರುಬೆ ಬ್ಯಾಡಾ।

ನೀನು ಏಳೂರ ತಿರುಗಿದುರು ಒಂದು ಶ್ಯಾಲೆ ಬ್ಯಾಡಾ।

ಅದು ಅಲ್ದೆ ಸೊಸೆ ನಾಗದೇವಿ . ನಿನ್ನಲ್ಲಿ ವಲವಾರ ಮೋಸಿತ್ತು. ನಿನ್ನ ಬಾಯ್ಲಿ ಸುಳಿತ್ತು. ನಮ್ಮ ಪಾಪುಕೆ ಗುರಿಯಾದು ಮೇಲೆ ನಿನ್ನ ಬಾಯ್ಲಿ ಸುಳ್ಳೀ ಬ್ಯಾಡಾ ನಿಜಾ ಬರ್ಲೀ.

ನೀನು ಕಂಡು ಬಗುಳಬೇಕು ಕಾಣದೆ ಬಗುಳಬ್ಯಾಡಾ।

ಕಂಡು ಬಗುಳಾಬೇಕು ಕಾಣಾದೆ ಬಗುಳ ಬ್ಯಾಡಾ।

(ಮನುಸಾ ಕಂಡರ್ಥ ಮಾತಡ್ತದೆ ಕಾಣದೆ ಅರ್ಥ ಮಾತಾಡ್ತದೆ. ಈ ನಾಯಿ ಬಾಯ್ಲಿ ಎಲ್ಲಾರು ಸುಳ್ಳೈಯ್ತೆ ನೋಡಿ ಏನಾರ ಕಂಡ್ರೆ ಬಗುಳ್ತದೆ. ಕಾಣ್ದೆ ಹೋದ್ರೆ ಬಗುಳದಿಲ್ಲ ಅದ್ಕೆ ಒಂದ್ ಮಾತಿಲ್ವ? ನಾಯಿ ಕಂಡು ಬಗುಳ್ತು ಮನುಸ ಕಾಣ್ದೆ ಬಗುಳ್ದ ಅಂತ)

ಎರಡು ಸಾಪಾ ಆದೊ ಇಲ್ಗೆ ಏಳೂರ ಗೌಡರ ಮನೆ ಬಾಗುಲು ಕಾದು ಏಳು ತುತ್ತು ಎಂಜಿಲು ತಿನ್ನೋದು ಒಂದು ಸಾಪ. ನಾಯಾದ್ ಮ್ಯಾಲೆ ಕಂಡು ಬಗುಳು ಕಾಣ್ದೆ ಬಗುಳ ಬ್ಯಾಕಾ ಅನ್ನದು ಒಂದು ಸಾಪ. ಮೂರನೆ ಸಾಪ ಯಾವ್ಪು ಅಂದ್ರೇ  ಮೂರನೆ ಸಾಪ ಯಾವ್ಪು ಅದ್ರೆ ಯೇಳ್ತೀನಿ ಕೇಳು ಸೊಸೆ ನಾಗುದೇವಿ ಕುಲ ಹದಿನೆಂಟು ಜಾತಿಯೆಲ್ಲ ಹೆಣ್ಣು-ಗಂಡು ಒಂದಾಗುವಾಗ ಆ ಮಾನ ಮುಚ್ಕೋಗ್ಲೀ .

(ಕುಲ ಹದಿನೆಂಟು ಜಾತೆಲ್ಲ ಹೆಣ್ಣು ಗಂಡು ಒಂದಾದಾಗ ಅವು ಮಾನ ಮುಚ್ಕೋಗ್ಲಿ ನೀನು ಮಾಡಿರುವ ಕರ್ಮುಕ್ಕೆ ನೀವು ಹೆಣ್ಣು ಗಂಡು ಒಂದಾದಾಗ

ಇಬ್ರು ಸಮಜೋಡಿಲ್ಲಿ ಇರುಬೇಕು ಶಿವನೇ।

ನಿನ್ನ ಮಾನ ಮಾರ್ಯದಾ ಬೀದೀಲಿ ಹೋಗಲಿ।

ಎಲ್ಲಾ ಪ್ರಾಣಿಲುವೆ ಹೆಣ್ಣು-ಗಂಡು ಒಂದಾದಾಗ ಮಾನ ಮಾರ್ಯದಿ ಮುಚ್ಕೋಗ್ಲಿ ಮರಿಯಾಗಿ. ನೀವು ಹೆಣ್ನಾಯಿ-ಗಂಡ್‌ನಾಯಿ ಒಂದಾದಾಗ ನೀವು ಸಮ ಜೋಡಿಲಿ ಜಂಟಿಲಿ ಇರುಬೇಕು. ಆವಾಗ ನೀನು ಮಾಡಿದ ಕರ್ಮುಕ್ಕೆ ನಾರಾಜನ ನಿನ್ನ ನೋಡಿ ಜನ ಬೀದೀಲಿ ಉಗೀಬೇಕು.

(ಎಲ್ಲಾ ಹಕ್ಕಿ, ಪಕ್ಷಿ, ದನ, ಮನುಸ, ಕತ್ತೆ, ಕುದುರೆ ಎಲ್ಲಾವು ಹೆಣ್ಣು-ಗಂಡು ಒಂದಾದಾಗ ಮಾನ ಐದು ನಿಮಿಸುಕೆ ಮರೆಯಾಯ್ತದೆ. ಈ ನಾಯಿ ಮಾನ ಯಾಕೆ ಮುಚ್ಚಕುಲ್ಲ. ಅರ್ದಗಂಟೆ ಆಗ್ಲಿ ಐದು ನಿಮಿಷ ಆಗ್ಲಿ .ಸಮ ಜೋಡಿಲಿ ನಿಂತ್ಕಂಡಾಗ ಬೀದೀಲಿ ನಾಕಾರು ಜನ ನೋಡಿ ಥೂ ಅನ್ನ ಬೇಕಿಲ್ಲ .)

ಇದು ಹಾಕಿದ ಶಾಪ. ಸೊಸೆ ನಾಗುದೇವಿ ಯೇನಾಗಿ ಹೋದ್ಲು .? ನಾಯಾಗಿ ಹೋದ್ಲು. ತಾಯಿ ತಂದೆ ಹೊತ್ಕಂದು ..

ಅಡುವೀಯ ಒಳಗೆ ನಡೆದು ಹೋಗುತವನೆ।

ಯವ್ವೆ, ಅಡುವಿಯ ಬಳುಗೆ ನಡೆದೋಗುತವನೆ।

ಬೆಟ್ಟಗುಡಾನೆಲ್ಲ ಇಳಿತಾನೆ ಶಿವನೆ।

ಬೆಟ್ಟಾಗುಡ್ಡಾನೆಲ್ಲ ಇಳಿದೋಗುತವನೆ।

ಕಾಡು ಮೇಡು ಗೆಡ್ಡೆ–ಗೆಣಸು ತಾಯಿ ತಂದೆಗೆ ಕೊಡುತ್ತಾನೆ ಹುಡುಕಿ ತಂದು ಅರಣ್ಯದಲ್ಲಿ ಅರಣ್ಯವಾಸ ಮಾಡುತ್ತಾರೆ. ಯಾವಾಗಲೋ ಒಂದು ದಿನ ತಾಯಿ ತಂದೆಗೆ ಬಾಯಾರಿಕೆ ಬಂದೋತು ಮಗುನೇ ಗುರುಪತ್ರಾಯ.

ಬಾಯಾರಿಕೆ ನಮಿಗೆ ಬಂದಾದೆ ಮಗುವೆ

ಬಾಯಾರಿಕೆ ನಮಿಗೇ ಬಂದಾದೆ ಮಗುನೇ

ಎಲ್ಲ್ಯಾರ ನಮಿಗೆ ನೀರು ತಂದು ಕೋಡೊ।

ತಾಯಿ ತಂದೆ ಹೊತ್ಕೊಂದು

ಆ ಕಾಡೊಂದ್ ಕಾಡೆಲ್ಲಾವ ನೀರುಹುಕುತವನೇ

ಕಾಡು ಕಾಡೆಲ್ಲಾನು ನೀರುಡುಕುತವನೇ

ಎಲ್ಲಿ ಹುಡುಕಿದುರು ನೀರು ಸಿಕುನಿಲ್ಲಾ।

ಕಾಡು–ಕಾಡು ಅಂದ್ರೆ ಕಾಡೆಲ್ಲನು ಹುಡುಕ್ತನೆ ನೀರು ಸಿಕ್ಕದಿಲ್ಲ. ತಾಯಿ ತಂದೆ ಬಾಯಾರಿ ಕುಂತವ್ರೆ. ಮಗನೆ ನೀರ್ ತಂದು ಕೊಡು ಅಂತರೆ. ಕೊನೆಗೆ ಒಂದು ಬಿಲ್‌ಪತ್ರೆ ಮರ ದೊಡ್‌ದೂರಿದ್ ಮರ ಹತ್ತಿ ತುದಿಲಿ ನಿಂತ್ಕಂಡು ಸುತ್ಲು ನೋಡ್ತನೆ. ನೀರು ಎಲ್ಲಿ ಕಾಣ್ತವೆ ಅಂತವ. ಎಲ್ಲಿ ನೀರು ಕಂಡೊ ಇವುನ್ಗೆ ರಾಮದೇವರ ತಂದೆ ದಶರಥನ ಪಟ್ಣ ಅಯೋಧ್ಯ ಮರಾ ಹತ್ತಿ ನೋಡುವಾಗಾ  ರಾಮದೇವರ ತಂದೆ ದಶರತನ ಅರುಮನೆ ಮುಂದುವಾಡೆ ಹಾಲುಬಾನ ನೀರು ಬನ ಅಂಬುದಾಗಿ ಎರಡು ಕೊಳ. ಗುರುತ ಮಾಡ್ದ. ಈ ನ್ಯಾರ್‌ದಲ್ಲಿ ಹೋದ್ರೆ ನೀರ್ ತರುಬೈದು ಅಂತವ ಮರ ಇಳಿದು ಬಂದು ಬಂದನೆ ತಾಯಿ ತಂದೆ ಹತ್ರ ಬಂದು ತಾಯಿ ತಂದೆಗಳಿರಾ .ಎಸ್ಟೋ ದೂರ್ದಲ್ಲಿ . ನೀರ್ ಕಂಡೊ)

ಎಸ್ಟೋ ದೂರ್ದಲ್ಲಿ ನೀರ್ ಕಂಡೋ ಕುಡಿಸ್ಗಂಬತ್ತಿನಿ ನಡಿರಿ ಅನ್ನದಾಗಿ ಹೇಳ್ತಾನೆ.

(ಬಾಳ ದೂರ್ದಲ್ಲಿ ನೀರ್ ಕಂಡೋ ನಡೀರಿ ಕುಡಿಸ್ಗಂಬತ್ತಿನಿ ಅಂತನೆ. ಅದುಕ್ಕೆ ಅವುದು ಹೇಳ್ತರೆ ಮಗುನೆ ದಿನ ಬೆಳಾಗದ್ರೆ ನಮ್ಮುನ್ನ ಹೊತ್ತು–ಹೊತ್ತು ಸಾಕಾಗಿ ಹೋಗಿದ್ದೀಯ. ನಿನ್ ಹೆಗಲು ಹೋಗ್ಯೈತೆ. ದೂರ್‌ದಲ್ಲಿ ನೀರ್ ಕಂಡೋ ಅಂತೀಯಾ ಇಲ್ಲೆ ನೀರ್ ತಗಂಬಾ.. ಅಂತಾನೆ.. ಅವ್ವಾ ಯತ್ ತಾಯಿ ತಂದೆ ಈಗ ಮಹಾಂತ ಅರಣ್ಯ, ಮಹಾಂತ ಕಾಡು ಇದು.ಇಲ್ಲಿ ನೀವ್ ಕುಂತುರ್ತೀರಿ. ನಾನು ನೀರಿಗೋರ್ತೀನಿ. ಅಲ್ಲಿ ಹೋದ್ ತಾವು ಬಂದ ತಾವು ತಿಳಿದೆ ದಾರಿ ತಪ್ಪಿದ್ರೆ ಯೇನ್ ಗತಿ. ನೀಮೊಂದ್ ಕಡೆ ನಾನೊಂದ್ ಕಡೆ (ವಾದ್ ದಾರಿ ಬಂದ್ ದಾರಿ ತಿಳಿದೆ ದಾರಿ ತಪ್ಪಿಸ್ಗಂಬುಟ್ರೆ ಅರಣ್ಯದಲ್ಲಿ ನೀವೊಂದ್ ಕಡೆ ನಾನೊಂದ್ ಕಡೆ ಆಗಿಬುಡ್ತೀನಿ. ನಡೀರಿ ಹೊತ್ಗೊಂಡೆ ಹೋಯ್ತೀನಿ. ನೀರ್ ಸಿಕ್ಕತಕ್ಕವ)

ಬ್ಯಾಡ ಮಗುನೆ ಗುರುಪತ್ರಾಯ .ನಿನಗೆ ದಾರಿ ಗೊತ್ತಾಗದೆ ಹೋದ್ರೆ ನೀನೋಗೋ ದಾರೀಲಿ ಮಾರಿಗೊಂದ್ತಾಕೇ ಮಾರಿಗೊಂದ್ತಾಕೆ ಮಾರಿಗೊಂದ್ತಾಕೆ ಸಪ್ಪು ಮುರುದು ಬೂಮಿ ಮ್ಯಾಲೆ ಹಾಕ್ಯಂಡೋಗಪ್ಪ  ನೀನು ಹೋಗೊ ದಾರೀಲಿ ಮಾರಿಗೊಂದ್ತಾಕೆ ಮಾರಿಗೊಂದ್ತಾಕೆ ಸಪ್ಪಾ ಮುರುದು ಸಪ್ಪಾ ಮುರುದು ಬೂಮಿ ಮ್ಯಾಲೆ ಹಾಕ್ಯಂಡೋಗು ಅಲ್ಲಿ ನೀರು ತಂಗಂದು ಹಿಂತಿರುಗ್ತಿಯಲ್ಲ  ಅಲ್ಲಿ ಸಪ್ಪಾ ಮುರುದ್ ಹಾಕಿರ್ತೀಯಲ್ಲ ಅದರ

ನೆಪ್ಪನಲ್ಲಿ ನೀರು ತತ್ತಾ ಹೋಗು ನಮ್ಮುನ್ನ ಹೊತ್ತು ಹೊತ್ತು ನಿನ್ನೇಲು ಸತ್ತೋಗಿದೆ. ಆಗ ಅದೇ ತರವಾಗಿ, ತಾಯಿ ತಂದೆ ಅರಣ್ಯದಲ್ಲಿ ಕೂರಿಸಿಬಿಟ್ಟು ನೀರು ತರಾಕ್ ಹೋಗೋ ದಾರೀಲಿ ಮಾರಿಗೊಂದ್ತಾಕೆ, ಮಾರಿಗೊಂದ್ತಾಕೆ ಸಪ್ಪು ಮುರುದು ಸಪ್ಪು ಮುರುದು ಬೂಮಿ ಮ್ಯಾಲಾಕ್ಯಂಡೂ . ದಶರತನ ಪಟ್ಟುಣದ ಅರಮಾನೆ ಮುಂದುಗಡೆ ಇಟ್ಟಕೊಳ್ಳಕೆ ನೀರಿಗೋಗುತ್ತ ಇದ್ದಾರೆ. ಈ ಕಡೆ ಯೇನಾಗಿದೆ. ಅಂದ್ರೆ ದಿನಾ ರಾತ್ರಿ ದಶರತರಾಯ್ನ ಹಾಲುಗೊಣುದಲ್ಲಿ ದೇವಿಂದ್ರಾಯ್ನ ಬಳಿ ಆನೆ ಬಂದು ಮಧ್ಯರಾತ್ರಿವತ್ನಲ್ಲಿ ನೀರು ಮಿಂದು ಮಾಯವಾಯ್ತಾ ಇರ್ತಾವೆ.

(ಹಾಲು ಗೊಣುದಲ್ಲಿ ಮದ್ ರಾತ್ರೇ ವತ್ನಲ್ಲಿ ದೇವೇಂದ್ರಾಯ್ನ ಬಿಳಿ ಆನೆ ಬಂದು ನೀರು ಮಿಂದು ಮಾಯವಾಯ್ತಾ ಇರ್ತವೆ. ಇವುರು ಬೆಳಿಗ್ಗೆ ನೀರಿಗೋದ್ರೆ ನೀರೆಲ್ಲ ಬಗ್ಗಡಾಗಿರ್ತದೆ. ಯಾವ ಪ್ರಾಣಿ ಇಂಗೆ ಬಂದು ನೀರೆಲ್ಲನುವೆ ಬಗ್ಗಡ ಮಾಡ್ತದಲ್ಲ ಆ ಪ್ರಾಣಿ ಬಡೀಬೇಕು, ಅನ್ನದಾಗಿ ದಶರತ್ರಯ ಬಿಲ್ಲು ಬಾಣ ಹಿಡ್ಕಂಡು ಒಂದು ಗುತ್ತಿ ಅತ್ರ ಮರೆಯಾಗಿ ನಿಂತ್ಕಂಡವನೆ. ಆ ಟೇಮಿನಲ್ಲಿ ಇವುನು ಬತ್ತಾವ್ನೆ)

ಬಿಲ್ಲು ಬಾಣ ಹಿಡ್ಕಂಡು ದಶರತ ರಾಯಾ ಒಂದು ಗುತ್ತಿ ವಳಗೆ ಕೂತಿದ್ದಾನೆ. ಗುರುಪತ್ರಾಯ ತಾಯಿ ತಂದೆಗೆ ನೀರು ತರಾಕೆ ಬಂದೋನು ಹಾಲುಗೊಣ್ಣದಲ್ಲಿ ಬಗ್ಗಿ ನೀರ ಮಗೀತಿರುಬೇಕಾರೆ ಅರುಬಿ ಗೊಟ್ಟಾ ಗೊಟ್ಟಾ ಅಂತು. ಮನುಸ ಅನ್ನದಾಗಿ ತಿಳೀನಿಲ್ಲ. ..

(ಬಗ್ಗಿದ್ನಲ್ಲಿ ..ನೀರು ಮಗಿವಾಗ)

ನೀರ್ ಗೊಟ್ಟಾ ಗೊಟ್ಟಾ ಅನ್ನುದಾಗಿ ಯಾವ್ದೋ ಪ್ರಾಣಿ ಅನ್ನದಾಗಿ ಎತ್ತಿ ಬಾಣ ಬಿಟ್ನಲ್ಲೊ ದೇವಾ ..

ಇವ್ನ ಎದಿಗೆ ನಾಟೀದು ಬಾಣಾ .
ಎದಿಗೆ ನಾಟೀದು ಬಾಣಾ। ಕಲ್ಯಾಣದೇವಾ
ಬೆನ್ನಲ್ ಕಡುದೋಗುತ್ತಾದೇ।
ಬೆನ್ನಲ್ ಕಡುದೋಗುತ್ತಾದೇ।
ದಂಕಲನ್ನು ಬೀಳುತಾನೇ।
ದಂಕಲನ್ನು ಬೀಳುತಾನೇ।
ನನ್ನ ಯಾರಪ್ಪ ಬಡುದೋರೋ .
ಯಾರಪ್ಪ ಬಡುದೋರೋ।
ನಾನು ಇಲ್ಲೇಯ ಸಾಯಿತೀನೀ।
ನನ್ನ ಹೆತ್ತಂತ ತಾಯಿ ತಂದೇ।
ನನ್ನ ಹಡುದಂತಹ ತಾಯಿ ತಂದೇ
ಕಾಡಿನಲ್ಲಿ ಕೂತೆ ಅವರೇ।
ಅವುರಿಗೆ ಕಣ್ಣಿರುದು ಕಾಣದಿಲ್ಲಾ।
ಅವುರಿಗೆ ಕಿವಿಯೆಂತು ಕೇಳಿದಿಲ್ಲಾ।

ನಡಿಯಕ್ಕೆ ತೊಡಿಯೇಇಲ್ಲಾ।

ಅವರ ನೋಡೋರಾಪ್ಪ ಶಿವನೇ

ತಾಯಿ ತಂದೆ ನೋಡೋರಾರಪ್ಪ ದೇವಾ।

ಇಲ್ಲೇಯ ಸಾಯತೀನೀ।

ನನ್ನ ಯಾರಪ್ಪ ಬಡುದೋದೋ

ಕ್ವಾಡಾಡುವಾಗ ದಶರತ ದೊರೆ ನೋಡುತಾನೇ ನೀನ್ಯಾರಯ್ಯ ?

ನಾನು ಚವುಡಲಯ್ಯನ ಮಗ ಚವುಡಲಮ್ಮನ ಮಗ ಗುರಪತ್ರಾಯಾ ನನ್ನ ತಾಯಿ ತಮದೆ ಅಡುವೀಲಿ ಕ್ಯೂರಿ

ನೀರು ತಗಂಡೋಗಾಕೆ ಬಂದೆ. ಬಗ್ಗಿ ನೀರ ಮಗೀವಾಗ .

ಯಾರಪ್ಪ ಒಡುದೋರೋ .

ಯಾರಪ್ಪ ಒಡುದೋರೋ

ಇಲ್ಲೇಯ ಸಾಯುತೀನೀ।

ತಾಯಿ ತಂದೆ ನೋಡರ್ಯಾರೋ।

ಯಾರಪ್ಪ ಒಡುದೋರೋ।

ಅವಾಗ ದಶುರತ ಹೇಳುತ್ತಾನೆ.

ಅಯ್ಯ .ಅಯ್ಯ ನಾನೇ ಬಾಣ ಬುಟ್ಟಿದ್ದು ನಾನೇ ಬಕುದದ್ದೂ ಯಾವ್ ರೀತೀಲಿ ಒಡ್ಡೆ ಅಂದ್ರೆ ನರುಮನುಸ ಅನ್ನದು ನನಗೇ ಅರೀನಿಲ್ಲಾ .ನನಿಗೇ ಗುರುತುಸಿಕ್ಕುನಿಲ್ಲಾ . ದಿನಾಲು ರಾತ್ರೀ ಹಾಲು ಗೊಣ್ಣುದಲ್ಲಿ ಯಾವ್ದೊ ಪ್ರಾಣಿ ಬಂದು ಬಗ್ಗಡಾ ಮಾಡ್ತಾ ಇರುಬೈದು ಅದಾ ಬಡಿಯಾನ ಅಂತ ಕಾಯ್ತಾ ಕುಂತುದ್ದೆ. ಈಗ ನೀನು ಬಗ್ಗಿ ನೀ ಮಗೀವಾಗ . ಯಾವ್ದೊ ಪ್ರಾಣಿ ಅಂತ ಹೇಳಿ ನಾನೇ ಒಡುದದ್ದೂ .

(ಈಗ ನೀನು ಬಗ್ಗಿ ನೀರು ಮಗಿವಾಗ ಯಾವ್ದೊ ಪ್ರಾಣಿ ಅಂತೇಳಿ ನಾನೇ ಬಾಣ ಬುಟ್ಟುದ್ದು. ಅಯ್ಯ ಅರೀದೇ ನೀನು ಹೊಡುದ್ ಮ್ಯಾಲೇ  ನೀನು ಗುರುತುಸಕ್ಕೆ ಒಡುದಿದ್ದೀಯ ಮುಂದೆ .)

ನನ್ನೆತ್ತ ತಾಯಿ ತಂದೆ ಮಗ ನೀರ್ ತತ್ತಾನೆ. ಮಗ ನೀರ್ ತತ್ತಾನೆ ಅಂತ ಅಡುವೀಲಿ ಕಾದು ಕುಂತವ್ರೆ. ನೀರಿಗೆ ಬಂದ್ ಮಗಾ

ನಿನ್ನ ಬಾಣದಲ್ಲಿ ಸಾಯತೀನೀ .

ಬಾಣದಲ್ಲಿ ಸಾಯತೀನೀ। ಕಲ್ಯಾಣದೇವಾ।

ತಾಯಿ ತಂದೆ ನೋಡದ್ಯಾರೋ।

ನಾನೆಂತು ಸಾಯತೀನೀ।

ನಿನ್ನ ಬಾಣದಲ್ಲಿ ನಾನು ಇಲ್ಲಿ ಮರುಣುವಾಗುತೀನಿ. ಮುಂದೆ ನನ್ನ ತಾಯಿ ತಂದೆ ನೋಡಬೇಕಾದೋನು ನೀನು.

(ಈಗ ನಿನ್ನ ಬಾಣದಿಂದಾಗಿ ನಾನು ಇಲ್ಲಿ ಸಾಯ್ತೀನಿ. ನನ್ನ ತಾಯಿ ತಂದೆಯ ಮುಂದೆ ನೋಡಬೇಕಾದೋನು ನೀನಯ)

ಆದ್ದರಿಂದ ನೀರಾ ಕುಂಡೋಗಿ ನನ್ನ ತಾಯಿ ತಂದಿಗೆ ನೀರಾ ಕೊಡಪ್ಪಾ .ವಾದ್ ದಾರಿ ಬಂದ್ ದಾರಿ ಗೊತ್ತಾಗುದಿಲ್ಲಾ ಅಂತ ಸಪ್ಪಾ ಮುರುದು ಸಪ್ಪಾ ಮುರುದು ಮಾರಿಗೊಂದ್ತಾಕೆ ಮಾರಿಗೊಂದ್ತಾಕೆ ಬೂಮಿ ಮ್ಯಾಲೆ ಹಾಕ್ಯಂದ್ ಬಂದುದ್ದೀನಿ. ಆ ಸಪ್ಪ ಮುರದಾಕ್ಯಂಡು ಬಂದುದ್ದೀನಲ್ಲ ಭೂಮಿಮ್ಯಾಲೆ ಆ ಗುರತಲ್ಲಿ ನನ್ನ ತಾಯಿ ತಂದೆ ಕಂಡು ನೀರು ಕೊಡು ಅಂತೇಳಿ ಪ್ರಾಣಾ ಬುಟ್ನಲ್ಲೋ ಮಗುವೇ

(ಇವುನಿಗೇಳಿ ತಾನೆ ಪ್ರಾಣ ಬುಟ್ಟುದ್ದು ಅವುನು ವಾದ್ ದಾರಿ ಬಂದ್ ದಾರಿ ಗೊತ್ತಾಗದಿಲ್ಲ ಅಂತ ಸಪ್ಪ ಮುರುದ್ ಸಪ್ ಮುರುದ್ ಅಜ್ಜಿಗೊಂತಾವ್ ಅಜ್ಜಿಗೊಂತಾವ್ ಹಾಕ್ಯಂದ್ ಬಂದುದೀನಿ ಆ ನೆಪ್ನಲ್ಲಿ ನನ್ನ ತಾಯಿ ತಂದೆಗೆ ನೀರ್ ಕೊಡು ಅಂತೇಳಿ ಪ್ರಾಣ ಬುಟ್ಟು ಅವುನು ಅಲ್ಲ. ಈಗ ಇಲ್ಲಿ ಮಗ ನೀರ್ ತತ್ತಾನೆ . ಮಗ್ ನೀರ್ ತತ್ತಾನೆ ಅಂತೇಳಿ ಕಾಯ್ತಾ ಕಂತವ್ರೆ ಇಲ್ಲಿ ಅವುನ್ ತಾಯಿ ತಂದೆ ಕಣ್ಣು ಕಾಣಾದಿಲ್ಲ. ಕಿವಿ ಕೇಳಾದಿಲ್ಲ ನಡಿಯಾಕೆ ತೊಡಿಲ್ಲ. ಕಾಯ್ತಾ ಕುಂತವ್ರು)

ಮಗಾ ಗುರುಪತ್ರಾಯ ಹೇಳಿ ಸತ್ತಿದ್ನಲ್ಲಿ ದಶರತುರಾಜುಗೆ ಅದೇ ತರುದಲ್ಲಿ ನೀರು ತಗಂಡೋಗುತ್ತಾನೆ ದಶುರತ ರಾಜ ಗುರುಪತ್ರಾಯ್ನು ತಾಯೀ ತಂದೆಗೆ ಅತ್ರ ಸೇರಿ ಬಂದಾ. ಅತ್ರ ಸೇರಿ ಬಂದು ಆತ್ರ ಸೇರಿ ಬಂದಾಗ ಚವುಡಲಯ್ಯ ಚವುಡಲಮ್ಮಗೆ ಮಗುನ ವಾಸುನೆ ವಡೀವಲ್ದು ಅತ್ರ ಸೇರಿ ಬಂದ್ರೂವೆ ಮಗುನ ಹವಾ ವಡೀವಲ್ದು. ಕಣ್ಣು ಕಾಣ್ದೆ ಕಿವಿ ಕೇಳ್ದೆ ಇದ್ರು. ಬೇರೆ ವಾಸ್ನ ಬತ್ತಾದೆ ಇವುಗೆನ ವಾಸ್ನೆ ಹಿಡ್ದು ಯೇನಂತಾರೆ.

ಯಾರಪ್ಪ ಲಿಲ್ಲಿ ಬರುವೋದು ಶಿವನೇ।

ಯಾರಪ್ಪ ಅಲ್ಲಿ ಬರುವೋದು ಶಿವನೇ।

ದಶರುತು ರಾಯ ಸುಳ್ಳೇಳುತಾನೆ ಈಗ ನಿನ್ನು ಮಗ ಸತ್ತ ಅಂದ್ರೇ .(ಈಗ ನಿನ್ನು ಮಗ ಸತ್ತ ಅಂದ್ರೆ ನೀರ್ ಕುಡಿತರ ನೀರ್ ಕುಡಿಯ ತಕ್ಕ ನಿನ್ನು ಮಗನೆಯ ಅನ್ನುಬೇಕು. ಕಣ್ ಕಾಣಕುಲ್ಲುವಲ್ಲ)

ಯಾರಪ್ಪ ಅಲ್ಲಿ ಬರಾರು ಅಂದಾಗ .

ನಾಕಾನೆ ತಾಯೀ ನಿನು ಮಗನೇ ಗುರುಪತ್ರಾ।

ನಾಕಾನೆ ತಾಯೀ ನಿನು ಮಗುನೇ ಗುರುಪತ್ರಾ।

ಅಯ್ಯ ಅಯ್ಯ ನಿನು ಬಾಯ್ಲಿ ಸುಳ್ಳೈತೆ. ನಮ್ಮ ಮಗುನ ವಾಸ್ನೆ ಒಂದೇ ವಟಿಗೆ ಹಿಡ್ಕತ್ತೀನಿ. ನನು ಮಗುನ ಹವಾ ಹಿಡ್ಕತ್ತೀವಿ. ನೀನು ನನು ಮಗುನ ವಾಸ್ನೆ ಬಡೀತಾ ಇಲ್ಲ.

(ನನು ಮಗುನ ವಾಸ್ಗೆ, ನನು ಮಗುನ ಹವಾ ನಮಗೆ ಗೊತ್ತಾಗದೆ. ಕಂಡು ಬರ್ತಾರೆ ಈಗ ನನು ಮಗನ ವಾಸ್ನೆ ಹವಾ ಇಲ್ಲಿ ಕಂಡು ಬತ್ತಾ ಇಲ್ಲ.)

ಯಾಕಪ್ಪ ಕಣ್ಣು ಕಾಣ್ದರಿಗೆ ಸುಳ್ಳು ಹೇಳಿತ್ತೀಯ. ಸತ್ಯ ಹೇಳು ಸತ್ಯ ಹೇಳು ಅಂತಾರೆ. ಇವ್ನು ಸತ್ಯ ಹೇಳುತ್ತಾನೆ. ನಾನು ರಾಮುದೇವರ ತಂದೆ ದಶರತರಾಯ.. ರಾಯುನ ತಂದೆ ದಶುರತು ನೇನಪ್ಪಾ .ನಿನ್ನು ಮಗ ಗುರುಪತ್ರಾಯ ನಮ್ಮುನ್ನ ಇಲ್ಲಿ ಅರಣ್ಯದಲ್ಲಿ ಕೂರಿಸಿಬೂಟ್ಟು ನೀರು ತರಾಕೆ ಹೋದಾ ದಶುರತಾ.

ನೀರಿಗೋದಾ ಮಾಗ ಹಿಂತಿರುಗೇ ಇಲ್ಲಾ।

ನೀರಿಗೋದಾ ಮಾಗ ಹಿಂತಿರುಗೇ ಇಲ್ಲಾ।

ಎಲ್ಲಾರ ನಮ ಮಗುನ ಕಂಡು ಬಂದೆಯೇನೋ।

ನನು ಮಗುನೆ ಕಂಡುರೆ ಬರುವೇಳೋ ನೀನು।

(ನನು ಮಗ ಗುರು ಪತ್ರಾಯ ನೀರಿಗೋದನು ಹಿಂತಿರುಗಿಲ್ಲ. ನೀನು ಯಲ್ಲಾರ ಕಂಡ ಕಂಡರೆ ಹಿಂತಿರುಗಿ ಬರೇಳು ನೀನೆಲ್ಲಾರ ಕಂಡಾ ? ಯೇನೇಳಬೇಕು ಈಗ .)

ನಿನು ಮಗ ಗುರುಪತ್ರಾಯ ನನ್ನ ಹಾಲಗೊದಾದಲ್ಲಿ ಸತ್ತು ಬದ್ದವ್ಗೆ ಅಂದ್ನಲ್ಲೋ ದೇವಾ . ಯಾವ್ ಲೆಕ್ಕದಲ್ಲಿ ಸತ್ತಾ ಅಂದ್ರೇ .ಯಾವ್ದೊ ಪ್ರಾಣಿ ಬಂದು ನನ್ನ ಹಾಲುಗೊಣದಲ್ಲಿ ನೀರಾ ಮೀದು ನೀರು ಕೆಡಿಸಿ ಹೋಗಾದು. ಆ ಪಾಣಿ ಬಡೀಬೇಕು ಅಂತೇಳಿ ನಾನು ಬಾಳೆ ತೋಟುದ ಮರಿಯಾಗಿ ನಿಂತುದ್ದೆ ನಿನ್ನ ಮಗ ಬಂದು ನೀರ ಮಗಿವಾಗ ಗೊಟ ಗೊಟ ಸದ್ದಾಯ್ತು ಯಾವ್ದೊ ಪ್ರಾಣಿ ಅಂತೇಳಿ ನಾನೇ ಬಾಣ ಬುಟ್ಟು ನನ್ನ ಬಾಣುದಲ್ಲಿ ಮರಗಿವಾಗಿ ಬಿದ್ದವನಲ್ಲೊ ದೇವಾ

ಕಣ್ಣೀರ ಬಿಡುವತಾರೇ .

ಕಣ್ಣೀರ ಬಿಡುವತಾರೇ। ಕಲ್ಯಾಣದೇವ

ನಮ್ಮ ನೋಡೋರ್ಯಾರಪ್ಪ ಶಿವನೇ

ನಮಗೆ ಕಣ್ಣೆರಡು ಕಾಣದಿಲ್ಲಾ

ಕಿವಿಯೆರಡು ಕೇಳದಿಲ್ಲಾ

ನಡಿಯಕ್ಕೆ ಕಾಲೇ ಇಲ್ಲಾ

ನಿಲ್ಲುದುಕ್ಕೆ ತೋಳೇ ಇಲ್ಲಾ

ನಮ್ಮ ನೋಡೋರ್ಯಾರಪ್ಪ ಶಿವನೇ

ಸತ್ತು ಹೋದೇನೋ ಮಗುನೇ

ಕಣ್ಣೀರ್ ಬಿಡುವತಾರೇ

ಆಡಿಕಂಡಳುವತಾರೇ

(ದಶರಥ ಈಗ ನಮ್ಮುನ್ನ ಅರುಣ್ಯದಲ್ಲಿ ಕೂರಿಸಿ ಬುಟ್ಟು ನೀರ್ ತರಾಕೋದ್ ನನ್ನ ಮಗುನ್ನ ಅರೀದೇ ಬಾಣ ಬುಟ್ಟು ನಿನ್ನ ಬಾಣದಲ್ಲಿ ನನ್ನ ಮಗ ಸತ್ತೋದ್ ಮೇಲೆ)

ನನ್ನ ಮಗ ಅರಣ್ಯವಾಸ ಮಾಡಿ ಕರ್ಮಾ ತೀರಿಸಾಕ್ ಬಂದಿದ್ದ. ಹನ್ನೆರಡು ವರ್ಷ ಅರಣ್ಯವಾಸ ಮಾಡಿ ನನ್ನ ಮಗ ಕರ್ಮಾ ತೀರಿಸಿಲ್ಲ. ಈ ಕರ್ಮ ಯಾರ್ ತೀರುಸಬೇಕು ಅಂದ್ರೆ ಮುಂದೆ ನಿನ್ನೊಟ್ನಲ್ಲಿ ರಾಮ ಲಕ್ಷಣ ಅವರಲ್ಲಿ ಅವರಲ್ಲಿ ಅವರು ಅರಣ್ಯವಾಸ ಮಾಡಿ

ಇವನ ಕರ್ಮಾ ಅವರು ತೀರಿಸಾಲಿ ಹೋಗೂ।

ಕರ್ಮಾದ ನಿನ ಮಕ್ಳು ತೀರುಸ್ತಾರೆ ಹೋಗೂ।

(ರಾಮುರು ಅರಣ್ಯ ವಾಸುಕ್ಕೆ ಬತ್ತಾರಲ್ಲಿ ರಾಮುರು ಅರಣ್ಯ ವಾಸಾ ಮಾಡ್ತರಲ್ಲ ಅದು ಇವರ ಸಾಪ)

ಮಗುನ ಎದುರಿಗೆ ನಾವ್ ಸಾಯ್ನಿಲ್ಲ. ನಮ್ಮೆದುರಿಗೆ ಮಗಾ ಸಾಯ್ನುಲ್ಲ.

ಈಗ ಮಗುನ ಚಿಂತೆ .ಮಗುನ ಚಿಂತೆ ಮೇಲೆ ನಾವು ಪ್ರಾಣ ಬುಡ್ತೀವಿ. ಇನ್ನಾ ಮಗನ ಚಿಂತೆ ಅತ್ಕಂಡು ನಾವು ಸಾಯ್ತೀವಿ .ಇದೇ ಸಾವು ನಿನಿಗೂ ಇಲ್ಲಿ. ನಿನ್ ಮಕ್ಳು ಅರುಣ್ಯವಾಸುಕ್ಕೆ ಹೋದ್ ಮ್ಯಾಲೇ . ನಿನ್ನಾ ಮಕ್ಳು ಅರಣ್ಯ ವಾಸುಕ್ಕೋದ್ ಮ್ಯಾಲೆ.

ಮಕ್ಕೀಗೆ ಮರೆಯಾಗಿ ನೀ ಸಾಯುತೀಯಾ।

ಮಕ್ಕೀಗೆ ಮರೆಯಾಗಿ ನೀ ಸಾಯಬೇಕು।

ನೀನು ಮಗುನಾ ಮುಂದುಗಾಡೆ ನೀಸಾಯಿಬಾರ್ದು।

ನಿನ್ನ ಮಗುನಾ ಮುಂದುಗಾಕೆ ನೀ ಸಾಯಬಾರ್ದು।

(ಮಗುನ ಚಿಂತೆ ಅತ್ತಿ ನಾವ್ ಇಲ್ಲಿ ಸಾಯ್ತೀರಿ ಈಗ ಮಗುನ ಎದ್ರಿಗೆ ನಾವ್ ಸಾಯ್ನಲ್ಲ. ನಮ್ಮ ಮಗ ನಮ್ಮೆದ್ರುಗೆ ಸಾಯ್ನುಲ್ಲ ಅಂಗೆಯ ನೀನು ನಿನ್ ಮಕ್ಳ ಚಿಂತತ್ತಿ ನೀ ಸಾಯಬೇಕು. ನಿನ್ ಮಕ್ಳ ಎದ್ರುಗೆ ನೀನ ಸಾಯಬಾರ್ದು ಈ ತರವಾಗಿ ನಿನ್ ಮಕ್ಳು ರಾಮ ಲಕ್ಷ್ಮಣ ಅರಣ್ಯವಾಸಕ್ಕೋದಾಗ ನಿನ್ನ ಮಕ್ಳ ಚಿಂತತ್ತೀ ನೀಸಾಯಬೇಕು. ಈಗ ನನ್ ಮಗಾ ಗುರುಪತ್ರಾಯ ಹನ್ನೆರಡು ವರ್ಷ ವನವಾಸ ಮಾಡಿ ಕರ್ಮ ತೀರಿಸಾಕೆ ಬಂದಿದ್ದ ಅವುನು ತೀರುಸ್ನಲ್ಲ. ಅದ್ ನಿನ್ ಮಕ್ಳು ಮುಂದೆ ಹನ್ನೆರಡು ವರ್ಸ ವನವಾಸ ಮಾಡಿ ತೀರುಸ್ತಾರೆ)

ಅವುದು ಅರಣ್ಯವಾಸ ಮಾಡಿ ಪ್ರಾಣ ಬುಬ್ರಲ್ಲೊ ದೇವಾ .

ಅರಣ್ಯದಲ್ಲಿ ಮರಣುವಾದ್ರಲ್ಲೇ ಶಿವನೇ

ಸೊಸೆ ನಾಗುದೇವಿ ನಾಯಾಗಿ ಹೋದ್ಲು

ಮಗ ದಶುರತುನ ಬಾಣದಲ್ಲಿ ಮಗ ಸತಾ

ಮಗುನ ಚಿಂತೆ ಅತ್ಕಂಡು ಅರಣ್ಯದಲ್ಲಿ ಇವುರು ಸತ್ರಲ್ಲೋ ಶಿವನೇ

ಇಲ್ಲಿಂದೀಚೆಗೆ ರಾಮಣ್ಯಕೆ ಸೇರುತ್ತದೆ.

ರಾಮಣ್ಯದ ಬಡ್ಡೆ ಇದು. ಪೂರ್ತಿ ರಾಮಣ್ಯ ಇಲ್ಲಿಂದ ಸುರುವಾಗ್ತದೆ)

ಇಲ್ಲಗೆ ಮುಗಿತಲ್ಲೊ ದೇವಾ

# ಗಂಗೆ ಗೌರಿ ಕತೆ

ಕೈಲಾಸುದ ಪುರದಲ್ಲಿ ಶಿವರಾಯ

ಕಯ್ಯಿಲಾದುದ ಪುರದಲ್ಲಿ ಶಿವರಾಯಾ

ಅಲ್ಲಿ ಗೌರಿಗೆ ಶಿವುನಿಗೆ ತರುಕವಲ್ಲ ಶಿವರಾಯಾ

ಕಯ್ಯಿಲಾಸುದ ಪುರದಲ್ಲಿ ಮಾಸಿವನೇ

ಅಲ್ಲಿ ಗೌರಿಗೆ ಶಿವುನಿಗು ತರುಕವಲ್ಲೇ ಮಾದೇವ

ಶವುನು ಗೌರೀ ಕೂತವರಲ್ಲೋ ಮಾದೇವಾ

ಕವಡೆನಾಟವ ಆಡುವರಂತೆ ಶಿವರಾಯ

ಕವಟೇನಾಟಾ ಆಡುವಾಗ ಮಾದೇವಾ

ಮೂಡು ಮುಳಿಗೆ ಸ್ತಳಾದಲ್ಲೀ ಮಾದೇವಾ

ಗವಾರಮ್ಮ ಜರುದವಳೆಲ್ಲೊ ಮಾದೇವಾ

ಶಿವಾರಾಯ ಸೋತವನಲ್ಲೊ ಮಾದೇವಾ

ಕೈಲಾಸುದಲ್ಲಿ ಶಿವುನಿಎ ಪಾರ್ವತೀನೆ ಪಗಡೆ ಆಡುವಾಗ ಶಿವ ಸೋಲ್ತಾನೆ ಗವುರಮ್ಮ ಗೆಲ್ಲುತ್ತಾಳೆ

ಆಗ ಗವುರಿ ಪಕ್ಕಪಕ್ಕನೆ ನೋಡುವಾಳೆ ಜವರಾಜೊ

ಪಕ್ಕಪಕ್ಕನೆ ನೆಗಾಡುತಾಳೇ ಜವರಾಜೊ

ಗವುರಮ್ಮ ಪಕ್ಕಪಕ್ಕನೆ ನೊಡುತ್ತಾಳೆ. ಆಗ ಶಿವ ಕೇಳುತ್ತಾನೆ

ಯಾಕೆ ಗೌರಿ ನೋಡುತ್ತೀಯ ಜವರಾಜು

ನನ್ನ ಮುದಿಯ ಜಂಗಮನೆಂದು ತಿಳಿದು

ನನ್ನ ಮುದಿಯ ಜಂಗಮನೆಂದು ತಿಳಿದು

ನನ್ನ ನೋಡಿನೀ ನೆಗಾಡುತೀಯಾ

ನನ್ನ ಮುದಿಯ ಜಂಗಮನೆಂದು ತಿಳಿದು

ನನ್ನ ನೋಡಿನೀ ನೆಗಡುಬ್ಯಾಡಾ

ಗೌರಿ ನಿನ ಮ್ಯಾಲೊಬ್ಬುಳ ತರಾತೀನಿ

ನಿನ್ನ ಮ್ಯಾಲಬ್ಬಳ ತರಾತೀನಿ

ನಿನಗಿಂತ ಕಸ್ಟವೇ ಬರಲಿ

ನಿನಗಿಂತ ಅತಿ ರಂಬೇ ತರುವೆ

ನಿನಿಗಿಂತ ಸಿರಿ ರೂಪೇ ತರುವೆ

ನಿನಿಗಿಂತ ಸಿರಿ ರೂಪೇ ತರುವೇ

ಶಿವನೆ ನನ್ನುಮ್ಯಾಲೆ ಗಗೆ ತರಾದು ಬೇಡಿ ಶಿವರಾಯ

ಶಿವನೆ ನನ್ನು ಮ್ಯಾಲೆ ನೀ ಗಂಗೆ ತಂದರೆ

ನನ್ನುಮ್ಯಾಲೆ ನೀವ್ ಗಂಗೆಯ ತಂದುರೆ

ನಿಮಿಗೆ ಮಡದೀರಿಬ್ಬುರಾಳಾಗುತೀವಿ

ನಮಿಗೆ ಮನಗೊ ಮಂಚೆರಡಾಗುಬೇಕು

ನಮಗೆ ಉಡೋ ಸೀರೆರಡಾಗಬೇಕು

ನಮಗೆ ಇಕ್ಕೊ ವಡುಬೆರಡಾಗುಬೇಕು

ನನ್ನ ಮ್ಯಾಲೆ ಗಂಗೆ ತಂದುರೆ

ನಾವಿಬ್ಬುರಾಳು ಒಡುಡಾಡುತೀವಿ

ನಾವು ಇಬ್ಬರಾಳು ಒಡುಡಾಡುತೀವಿ

ನಾವು ಒಬ್ಬುಳು ಮುಂದಲೆ ಒಬ್ಬಾಳಿಡಿದು

ನಾವು ಒಬ್ಬುಳು ಮುಂದಲೆ ಒಬ್ಬಾಳಿಡಿದು

ನಮಿಗೆ ಹತ್ತಿದು ಜಗಳ ಹರಿಯಾದಿಲ್ಲ

ನಮಿಗೆ ಹತ್ತೀದು ಜಗುಳ ಹರಿಯಾದಿಲ್ಲ

ನಮಿಗೆ ಸವುತಿ ಮಚ್ಚರ ತಪುವುದಿಲ್ಲ

ನಮಿಗೆ ಸವುತಿ ಮಚ್ಚರ ತಪುವುದಿಲ್ಲ

ನಿನ ಮ್ಯಾಲೆ ಗಂಗೆ ತರಲೇ ಬ್ಯಾಡೀ

ನನ್ನು ಮ್ಯಾಲೆ ಗಂಗೆ ತರಲೇ ಬ್ಯಾಡೀ

ಗೌರಿ ಯೇನು ಪದೇಸ ಹೇಳಾತೀಯೇ ಜವರಾಜು

ಯೇನು ಪದೇಸ ಹೇಳಾತೀಯೆ

ಗಂಗೆ ನನಿಗ್ಯಾಗಿ ಬೆಳುದವಳೆ ಗಂಗೋಜಿ

ಅವುಳ ತರಾದೆ ನಾನು ಬಿಡೋದಿಲ್ಲ ಜವರಾಜೊ

ಅವುಳ ಮೂರುಗಡೆ ತರಾತೀನಿ

ಮೂರುಗಾಡೇ ಬುಡುವನಲ್ಲ

ಗಂಗೆ ನನಿಗ್ಯಾಗಿ ಬೆಳದವಳೇ ಗಂಗೋಜಿ

ಅವುಳ ತರೋದೆ ನಾನು ಬುಡೋದಿಲ್ಲ ಜವರಾಜು

ಶಿವುನೆ ನನ್ನ ಮ್ಯಾಲೆ ನೀವ್ ಗಂಗೆ ತಂದುರೇ ಸಿವರಾಜೊ

ಶಿವುನೆ ನನ್ನ ಮ್ಯಾಲೆ ನೀವ್ ಗಂಗೆ ತಂದುರೆ

ಶಿವನೆ ಗಂಗೊಂದು ಜಾತಿ ನಾವೊಂದು ಕುಲವೆ

ಗಂಗಗು ನಮಿಗು ಬೆರೆಯೋದಿಲ್ಲ

ಗಂಗಿಗು ನಮಿಗು ಬೆರೆಯೋದಿಲ್ಲ

ಗಂಗೊಂದ್ ಜಾತಿ ನಾನೊಂದ್ ಕುಲವೇ

ನಮ್ಮ ಕುಲ ಜಂಗುಮರಲ್ಲೊ

ನಮ್ಮ ಕುಲ ಜಂಗುಮರಲ್ಲೊ

ಗಂಗೆ ನೋಡಿ ಬೆಸ್ತುರ ಮಗುಳು

ಬೆಸ್ತುರ ಮಗುಳ ತಂದುಕೆ ನೀವು

ಆ ಬೆಸ್ತೂರು ಮಗೂಳ ತಂದುಕೆ ನೀವು

ಅವುಳು ನಮ್ಮ ಗುರುವಿನ ಮರಕೆ ಬರುವೊಳಿಲ್ಲ ಗಂಗೋಜಿ

ಅವುಳು ನಮ್ಮ ಗುರುವಿನ ಮಟುಕೆ ಬರುವೋಳಿಲ್ಲ

ನಮ್ಮ ಲಿಂಗ ಗಂಗೆ ಪೂಜೆವಳಲ್ಲಿ

ನಮ್ಮ ಲಿಂಗ ಗಂಗೆ ಸೋಕುಸೋಳಿಲ್ಲ

ನಮ್ಮ ಶಿವು ಪೂಜೆ ಮಾಡುವಳಲ್ಲ

ನಮ್ಮ ಶಿವು ದಾರ ದರುಸುತಳಲ್ಲ

ನಮ್ಮ ಕುಲ ಜಂಗುಮರಲ್ಲೋ ಮಾದೇವ

ಗಂಗೆ ನೋಡಿ ಬೆಸ್ತುರದೊಳು

ಗಂಗಿಗು ನಮಿಗು ಬೆರಿಯೇದಿಲ್ಲ ಮಾಶಿವುನೆ

ಗಂಗಿಗು ನಮಿಗು ಬೆರೆಯೋದಿಲ್ಲ

ಗಂಗೆ ಅಪ್ಪುದಿರು ತೆಪ್ಪ ಮಾಡುತ್ತಾರೆ

ಗಂಗೆ ಅಪ್ಪುದಿರ ತೆಪ್ಪ ಮಾಡುವಾರೇ

ಗಂಗೆ ಅಣ್ಣುದಿರು ಸುಣ್ಣ ಮಾರೂತಾನೇ

ಗಂಗೆ ಅಣ್ಣುದಿರು ಸುಣ್ಣ ಮಾಡುತ್ತಾರೆ

ಗಂಗೇನು ನಮಿಗು ಬೆರೆಯೋದಿಲ್ಲ

ಗಂಗೆ ಅಪ್ಪುದಿರು ತೆಪ್ಪ ಮಾಡುತ್ತಾರೆ ಶಿವನೆ . ಯಾತಾ ಎತ್ತೊರ ಕುಲ ಅಂದು ತೆಪ್ಪ ಮಾಡೋರ್ ಕುಲ ಬಲೆ ಎಸೆಯೋರ ಕುಲ

ಆ ಬಲಿಯ ಎಣೆಯಾ ಬಂಡು ನನ್ ಸವುತಿ ತರೋದು ಬ್ಯಾಡಿ। ಶಿವುರಾಯ

ಆ ಬಲಿಯ ಎಣೆಯೊ ಬಂಡು ನನ್ ಸವುತಿ ತರೋದು ಬ್ಯಾಡಿ।

ಆ ಮೀನ ಹಿಡಿಯೊ ಮಿಂಡು ನನ್ ಸವುತಿ ತರೋದು ಬ್ಯಾಡಿ।

ಆ ಮೀನಾ ಹಿಡಿಯೊ ಮಿಂಡು ನನ್ ಸವುತಿ ತರೋದು ಬ್ಯಾಡೀ।

ಆ ಸೀಗುಡಿ ಬಾಚೊ ಸಿಂಡು ನನ್ ಸವುತಿ ತರೋದು ಬ್ಯಾಡೀ।

ಆ ಸೀಗುಡಿ ಬಾಚೊ ಸಿಂಡು ನನ್ ಸವುತಿ ತರೋದು ಬ್ಯಾಡೀ।

ಆ ಬಲಿಯಾ ಎಣೆಯಾ ಬಂಡು ನನ್ ಸವುತಿ ತರೋದು ಬ್ಯಾಡೀ।

ಆ ಮೀನಾ ಹಿಡಿಯೊ ಮಿಂಡು ನನ್ ಸವುತಿ ತರೋದು ಬ್ಯಾಡೀ।

ಗಂಗೀಗು ನಮೀಗು ಬೆರೆಯೋದಿಲ್ಲ।

ಗೌರೀ ..ಗಂಗೇ ಯಾವ ಜಾತಿ ಅನ್ನಾದು ನಿಮಗರಿವಿಲ್ಲ. ಗಂಗೆ ಕುಲ ಯಾವುದು? ನಿಮ್ಮ ಕುಲ ಯಾವುದು?

ನೀವು ಒಂದು ತಾಯಿಯ ಮಕ್ಕಳು ಕಾನೇ । ಜವರಾಜೊ

ನೀವು ಒಂದು ತಾಯಿಯ ಮಕ್ಕಳು ಕಾನೆ।

ಗಂಗೇ ನೀನು ಹುಟ್ಟುವಾಗಾ। ಮಾದೇವ

ನಿಮ್ಮನ್ ನಾನು ಹೇಳಿದಾದ್ರೆ ನೀವು ಅವುಳಿ ಜವುಳಿ ಮಕ್ಕ್ಳು .ಮೊದಲು ಹುಟ್ಟಿದೋಳೆ ಗಂಗೆ ಕೊನಿಗುಟ್ಟಿದೋಳೆ ನೀನು. ನಿನ್ನು ಕುಲ ಗಂಗೆ ಕುಲ ಯಲ್ಲ ಒಂದೆ. ನೀನು ಹುಟ್ಟಿದು ಗಳಿಗೆ ಚನ್ನಾಗಿದೆ. ಗಂಗೆ ಹುಟ್ಟಿದ್ ಗಳಿಗೆ ಚನ್ನಾಗಿಲ್ಲ. ಆ ಗಂಗೇನ ಯೇನ ಮಾಡಬೇಕು ಅನ್ನದಾಗಿ ಕೇಳಲಾಗಿ ಗಂಗಿಗೆ ಬಂಗಾರುದ್ ತೊಟ್ಲು ಮಾಡ್ಸಿ .(ಗಂಗಿಗೆ ಬಂಗಾರುದ್ ತೊಟ್ಟು ಮಾಡ್ಸಿ, ಬಂಗಾರುದ್ ತೊಟ್ಲಿಗೆ ಮಗ ಮಲಗಿಸಿ ಮಗಿಗೆ ಗಂಗೆ ಅನ್ನ ಹೆಸರಿಟ್ಟು ಹರಿಯೋ ನದೀ ವಳುಗೆ ಬುಡಿ ಆವಾಗ ಆವುಳುಟ್ಟಿದ ಗಳಿಗೆ ಸರಿಯೋಯ್ತಿದೆ. ಆವುಳುಟ್ಟಿದ್ ಗಳಿಗೆ ಸರಿಯಿಲ್ಲ. ಅವುಳುಟ್ಟಿದ್ ಮನಿಗೆ ಬಳ್ಳೇದಲ್ಲಿ ಅನ್ನದಾಗಿ ಬಂತು. ಆಗ .

ಗಂಗೆ ಕುಂಡೋಗಿ ಹರಿಯೊ ನೀರಿಗೆ ಬುಟ್ಟರು ಕಾನೇ। ಜವರಾಜೊ

ಗಂಗೆ ಕುಂಡೋಗಿ ಹರಿಯೋ ನೀರಿಗೆ ಬುಟ್ಟುರು ಕಾನೇ

ಗಂಗೆ ನೀರಿನೊಳಗೆ ಬೆಳೆಯಾತಿದುಳು

ಆಗ ಬೆಸ್ತುರು ಮೀನು ಬ್ಯಾಡೀಗೋಗಿ

ಬೆಸ್ತುರು ಮೀನು ಬ್ಯಾಡೀಗೋಗಿ

ಗಂಗೆ ಬೆಸ್ತರು ಮನಿಗೆ ಸಿಕ್ಕಿದಳಲ್ಲೋ

ಬಲೆ ಬೀಸುವಾಗ .ಬಂಗಾರುದ್ ತೊಟ್ಟು ಬಂಗಾರುದ್ ತೊಟ್ಟು ಬೆಸ್ತುರ ಬಲಿಗೆ ಸಿಕ್ತು. ಯಳುದ್ ನೋಡದ್ರಲ್ಲಿ .ಮೀನಿಲ್ಲ। ಬಂಗಾರುದ್ ತೊಟ್ಲೈತೆ। ಆ ತೊಟ್ಟಲ್ಲಿ ಮಗು ಮನಗೈತೆ ಆಗ ಆ ಮಗನ ನೀರಿನೊಳಗೆ ಪೂಜೆ ಮಾಡಿ ದೋಸಿಗ್ರತ್ತ ಹೋಗಿ ಪಂಚಾಂಗ ಕೇಳಿದ್ರಲ್ಲೇ ಗೌರೂ

ಯೇನಂತ ಕೇಳಿದ್ರು .

ನಾವ್ ಮೀನಿನ್ ಬ್ಯಾಟಿಗೋಗಿ ಬಲೆ ಬೀಸಿದೂ

(ಮೀನು ಬ್ಯಾಟಿಗೆ ಬಲೆ ಬೀಸ್ದೊ, ಮಗಾ ಬಂತಲ್ಲ ಬಲಿಗೆ ಅನ್ನದಾಗಿ . ಆ ದೋಸಿಗ್ರತ್ರ ಪಂಚಾಂಗ ಕೇಳಿದ್ರಲ್ಲಿ ದೋಸಿಗ್ರೇಳುತ್ತಾರೆ ಈ ಮಗ ಸಿಕ್ಕಿದ್ದು ನಿಮ್ಮು ಕುಲುಕ್ಕೆ ಒಂದೇನ್. ಈ ಮಗಿಗೆ ಒಂದು ಮಠ ಕಟ್ಟಿ

ಮಠದೊಳಗೆ ಈ ಮಗಾನ ಬೆಳಸಬೇಕು. ಇದು ನಿಮ್ಮ ಕುಲದ ದೇವುರು ಅನ್ನದಾಗಿ ಹೇಳಲಾಗಿ ಆಗ ಗಂಗಿಗೆ ಮಡಕಟ್ಟಿ ಗಂಗೆ ದೇವಿ ನೀನು ನಮ್ಮು ಕುಲಕೆ ಒಂದ್ ತಾಯಿ ಒಂದ್ ದೇವುರು ಅಂತ ಹೇಳಿ .)

ಮುರೂದೊಳಿಗೆ ಬೆಳಸಿದುರಲ್ಲೇ । ಜವರಾಜು

ಅವಳ ಮಡೂದೊಳಗೆ ಬೆಳಸಿದರಲ್ಲೆ

ಅವಳ ತೆರದೆನಾನು ಬುಡುವಾದಿಲ್ಲ

ಆವಳ ಮುರಗನಾಣೆ ತರಾತೀನಿ

ನನ್ನ ಜಡೇಯ ಮ್ಯಾಲೆ ಗಂಗಿರಬೇಕು

ನನ್ನ ಜಡೇಯ ಮ್ಯಾಲೆ ಗಂಗಿರಬೇಕು

ನನ್ನ ತೊಡೇಯ ಮ್ಯಾಲೆ ನೀನಿರಬೇಕು

ನನ್ನ ಜಡೆ ಮೇಲೆ ಗಂಗೆ ತೊಡೆಮ್ಯಾಲೆ ನೀನು

ಅವುಳ ತರಾದೆ ನಾನು ಬುಡುವುದಿಲ್ಲ

ಅವುಳ ಮುರುಗನಾಣೆ ತರಾತೀನಿ

ಮುರುಗನಾಣೆ ಬುಡಾದಿಲ್ಲ

ಶಿವುನೆ ನನ್ನ ಮ್ಯಾಲೆ ಗಂಗೆ ತಂದರೆ। ಶಿವುರಾಯ

ನನ್ನ ಮ್ಯಾಲೆ ಗಂಗೆ ತಂದ್ರೆ.

ನನ್ನ ಕುಟ್ಟೆ ಐಲಾಟ ಬ್ಯಾಡೀ। ಶಿವರಾಯ

ನನುಕಟ್ಟೆ ನಿಮ್ಮ ಐಲಾಟ ಬ್ಯಾಡಿ

ನನ್ನಾ ಮಾಲೆ ನೀವ್ ಗಂಗೆ ತಂದುಕೆ

ನಾನು ಮನುಗ ಮಂಚುಕೆ ಬರಾದು ಬ್ಯಾಡಿ

ನಾನು ಮನುಗ ಮಂಚುಕೆ ಬರಾದು ಬ್ಯಾಡೀ ನನ್ನ ಶಿವುನೆ

ನನ್ನ ಕುಟ್ಟೆ ಐಲಾಟ ಬ್ಯಾಡಿ। ಶಿವರಾಯ

ನನ್ನ ಮ್ಯಾಲೆ ನೀವ್ ಗಂಗಿ ತಂದುಕೆ

ನಾನು ನೀವು ಕೂತುಗಂಡು। ಮಾಶಿವನೆ

ನಾನು ನೀವು ಕೂತುಗಂಡು

ತೊಡಿಯ ಮೇಲೆ ತೊಈಡಯ ಹಾಕಿ

ನಾವ್ ಪಗುಡೆ ಆಟವ ಆಡದುಬ್ಯಾಡಿ

ನಾವ್ ಪಗುಡೆ ಆಟವ ಆಡದುಬ್ಯಾಡಿ

ನನ್ನ ಮ್ಯಾಲೆ ನೀವ್ ಗಂಗೆ ತಂದುರೆ। ಶಿವುರಾಯ

ನಾನು ಇಕ್ಕೀದ ಊಟ ಮಾಡದುಬ್ಯಾಡಿ

ನಾನು ಇಕ್ಕಿದ ಊಟ ಮಾಡದುಬ್ಯಾಡಿ

ನಾನು ಕೊಟ್ಟ ವೀಳ್ಯವ ಮೆಲ್ಲದು ಬ್ಯಾಡಿ

ನಾನು ಕೊಟ್ಟ ವೀಳ್ಯವ ಮೆಲ್ಲದು ಮ್ಯಾಡಿ

ನನ್ನ ಮ್ಯಾಲೆ ನೀವ್ ಗಂಗೇ ತಂದುಕೆ

ನನ್ನ ಮ್ಯಾಲೆ ನೀವ್ ಗಂಗೇ ತಂದುರೆ

ನಾನಿರೋ ಮಲ್ಲೆ ಇರೋದು ಬ್ಯಾಡಿ

ನನ್ನರುಮಲ್ಲಿ ನೀವ್ ಇರೋದು ಬ್ಯಾಡಿ

ನೀವು ಕಯ್ಯಲಾಸುಕೆ ಹೋಗಬೇಕು

ನೀವು ಕಯ್ಯಲಾಸುಕೆ ಹೋಗಬೇಕು

ನೀವು ಗೋಕುಲ ಮಲ್ಲಿ ಇರುಲೇಬೇಕು

ನೀವು ಗೋಕುಲ ಮಲ್ಲಿ ಇರುಲೇಬೇಕು

ಶಿವನೆ ಗವೀರಿ ಮ್ಯಾಲೆ ಕೋಪಿಸಿಗೊಂಡ। ಮಾಶಿವನೆ

ಗವೀರಿ ಮ್ಯಾಲೆ ಕೋಪಿಸಿ ಕೊಂಡ

ಗಂಗೆ ತರಾಕೆ ಮಾಯವಾದ

ಗಂಗೆ ತರಾಕೆ ಮಾಯವಾದ

ಶಿವನ ರೂಪ ಮಾಯ ಮಾಡಿದ

ಗಂಗೆ ತರಾಕೆ ಪರಶಿವ ಶಿವುನ ರೂಪು ಮಾಯ ಮಾಡ್ತಾನೆ

ಜಂಗುಮನ ರೂಪನ ಹಾಕುತಾನೆ ಶಿವರಾಯ

ಜಂಗುಮನ ರೂಪನ ಎತ್ತಿಗಂಡ

ಶಿವನ ರೂಪ ಮಾಯ ಮಾಡಿ

ಜಂಗುಮನವತಾರ ಎತ್ತಿಗಂಡ

ಕಾವಿ ಬಟ್ಟೆಯ ಧರಿಸಿ ಗಂಡು .। ಶಿವರಾಯ

ಮುಂಗೈಲಿ ಶಿವ ಜೋಳಿಗೆ ಧರಿಸಿ। ಮಾದೇವ

ಮುಂಗೈಲಿ ಶಿವ ಜೋಳಿಗೆ ಧರಿಸಿ। ಶಿವರಾಯ

ನಾನು ಬೆತ್ತವ ಕಯ್ಯಲಿಡುದ

ಜಂಗುಮದ ರೂಪವ ತಾಳಿಕಂಡ

ಬಿಕ್ಷುಕನಾಗಿ ಹೊಂಟವನಲ್ಲೊ

ಶಿವ ಶಿವಾ ಅನ್ನತವರೇ

ಶಿವ ಪಾರಯಣ ಅನ್ನುತಾರೆ

ಶಿವ ಪಾರಯಣ ಅನ್ನುತಾರೆ

ಗಂಗಿದ್ದ ಮಟುಕೆ ಹೋಗಿ

ಗಂಗೇ ಇದ್ದ ಮಟುಕೆ ಹೋಗೆ

ಮಟದ ಬಾಗಿಲ ಮುಂದೆ ನೋಡು। ಮಾಶಿವನೆ

ಜಗ್ಗಿಸಿ ಕುಣಿಸಿ ತಾತರಲ್ಲೊ। ಶಿವರಾಯ

ಜಗ್ಗಿಸಿ ಕುಣಿದು ಆಡುತವರೆ

ಶಿವನ ನಾಟ್ಯೀನೀಗ ಆಡುತವರೆ

ಗಳಿಗ್ಗೊಂದು ರೂಪ ತಾಳೂತವರೆ ಮಾದೇವ

ಗಂಗೆ ದಿಟ್ಟೀಸಿ ಈಗ ನೋಡುತವಳೆ

ಶಿವುನ ದಿಟ್ಟೀಸಿ ಗಂಗೆ ನೋಡುತವಳೇ

ಇವರು ಯಾರಂದರೂ ನಿಲ್ಲೆವಲ್ರು

ಯಾರಂದುರೂ ನಿಲ್ಲೇ ಏಲ್ರು

ಎಂಥಾ ಚಂದುಕ್ ಕುಣಿಯಾತವರೆ

ಎಂಥಾ ಚಂದುಕ್ ಕುಣಿಯಾತವರೆ

ರೂಪು ರೇಟೆ ನೋಡಿ ಗಂಗೆ

ಇವುರು ಯಾರಪ್ಪ ಅನ್ನುತಾರೆ। ಗಂಗೋಜಿ

ಯಾರಂದುರೂ ಬುಡುಲೇ ಏಲ್ರು। ಮಾದೇವ

ಜಂಗುಮನೇ ನೀನು ಬಗುವಂತನೇ ನೀನು.. ಯಾವ್ ದೇವುರು ನೀನು ಹೇಳಿಪ್ಪ ಸ್ವಾಮಿ .ನಿಮ್ಮ ಅಂದಾ ಚಂದಾ ನೋಡಿದ್ರೆ .ಗಳಿಗ್ಗೊಂದು ಅವತಾರ ತಾಳ್ತೀನಿ ಗಂಡಿಗೊಂದು ಅವತಾರ ತಾಳ್ತೀರಿ ಆಗ ಶಿವಾ ಹೇಳ್ತಾನೆ . ನೋಡಮ್ಮ.

ನಾನು ಜಂಗುಮನೆಂದು ತಿಳಿಯೆ ನೀನು। ಗಂಗೋಜಿ

ಕ್ವಾರಣ್ಯ ಬಿಕ್ಷ ನೀಡು ನಂಗೆ।

ಶಿವ ಶಿವಾ ಅನ್ನತವರೇ। ಮಾದೇಶ

ಶಿವ ಪಾರಯಣ ಅನ್ನುತಾವರೆ। ಗಂಗೋಜಿ

ಶಿವ ಪಾರಾಯಣ ಅನ್ನತಾವರೆ।

ಗಂಗೆ ಮುತ್ತು ಮಾಣಿಕ ತಂದು ಶಿವುನೆ।

ಶಿವನ ಜೋಳಿಗ್ಗೆ ನೀಡುವಾಗ।

ಶಿವ ಮಾಯಿದ ಬೂದಿ ಮಂಕಿನ ಬೂದಿ। ಮಾದೇವ

ಗಂಗೆ ಮ್ಯಾಲೆ ಚಲ್ಲಿದುರುಲ್ಲೋ।

ಅವುಳಿಗೆ ಮರುದ ಜಾನ ಮರೆಯಾಗೋದು

ಮರುವು ಅವಳಿಗೆ ಬಂದೇ ಹೋತಾ

ಮಕುದ ಜಾನಾ ಮರೆತೆ ಹೋಯ್ತು

ಶಿವ ಯಾವಾಗ ಮಾಯಿದ್ ಬೂದಿ ಮಂಕಿನ್ ಬೂದಿ ತೈಗುದು ಗಂಗೆ ಮ್ಯಾಲೆ ಎರ್ಚಿದ್ರೊ ಗಂಗೆ ಮಕುದ್ ಜಾನ ಮಾಯ್ವಾತು. ಶಂಕ್ಯದ್ ಜಾನ ಹೊಂಟೋಯ್ತು.

ಶಿವುನ ಮ್ಯಾಲೆ ಜಾನ ಬಿದ್ದವುಳಲ್ಲೋ। ಮಾದೇವ

ಶಿವುನ ಮ್ಯಾಲ್ ಜಾನ ಬಿಟ್ಟವಳಲ್ಲೊ

ಶಿವುನ ಅಂತ್ರ ಮಂತ್ರಿ ನೋಡೋ ಶಿವನೆ

ಗಂಗೆ ಈಗ ತರಾತವನೆ। ಮಾಶಿವನೆ

ಗಂಗೇ ಶಿವುನೆ ತಂದಾನಲ್ಲೊ।

ಗಂಗೇ ತಂದು ..ಶಿವುನ ಬೋಗುದಲ್ಲಿ ಇಟ್ಟಗಂಡಿದ್ದಾರೆ. ಈಗ ಗೌರಿಗೆ ಗೊತ್ತಾಯ್ತು .ಗಂಗೆ ಶಿವುನ ಜತೆ ಮದ್ವೆ ಆಯ್ತು ಅನ್ನದಾಗಿ ಬೂಮಂಡ್ಲಕೆ ಗೊತ್ತಾಯ್ತು. ಈಗ ಅರಮಲ್ಲಿ ಗೌರಿ .ಶಿವುನ ಕೋಪುದಲ್ಲಿ ..

ಯಳುದಾಳೆ ಗೌರಮ್ಮ ಯಳಗಂಜಿ ಒಳುಗೆ

ಯಳುದಾಳೆ ಗೌರಮ್ಮ ಯಳಗಂಜಿ ಒಳುಗೆ

ಶಿವುನಿಗೆ ಕಟ್ಟೀದಂತ ಮಲ್ಲೀಗೊವಿನಾರಾ

ಶಿವಾ ಹಾಕಿ ದಂತ ಮಲ್ಲಿಗೂವಿನ ತ್ವಾಟಾ

ತ್ವಾಟಕೆ ಈರಣ್ಣ ಕಾವ್ಲಾ ಕಾಯ್ತವನೆ

ತ್ವಾಟಕೆ ಈರಣ್ಣ ಕಾವ್ಲಾ ಕಾಯ್ತವನೆ

ತ್ವಾಟುದಲ್ಲಿ ಈರಣ್ಣ ನೀಟಾದ ಊವಾ

ನೀಟಾದ ಹೂವನೆಲ್ಲ ಬೆಳದಾನೀರಣ್ಣ

ಪಾರಿಜಾತದ ಹೂವ ಪಾರುವತಿ ಮುಡಿದು

ಮೇಲು ಜಾತಿ ಹೂವನೆಲ್ಲ ಈರಣ್ಯ ಬೆಳೆದಾ

ಮಲ್ಲಿಗೇ ಹೂವನೆಲ್ಲಿ ಮಾದೇವ ಬೆಳೆದಾ

ಶಿವುನೂ ಹಾಕಿದಂತ ಮಲ್ಲಿಗೂವಿನ ತ್ವಾಟ

ಈಗ ಮಗುನ ಈರಣ್ಣುನಾ ಕರುದಾಳು ಗೌರಿ

ಮಗುನಾ ಈರಣ್ಣನ ಕರುದಾಳು ಗೌರಿ

ಬಾರಪ್ಪ ಮಗುನೆ ಮಗುನೇ ಈರಣ

ಹೂವಿನ ತ್ವಾಟುಕೆ ಹೋಗಿ ಬಾರೊ ಮಗನೆ

ಹೂವೀನ ವನುಕೆ ಹೋಗಿ ಬಾರೋ ಮಗುನೆ

ಬಳೊಳೋ ಹೂವನೆಲ್ಲ ಕೂದು ತಾರೊ ಮಗನೆ

ಈಗ ಹೂವೀನಾ ತ್ವಾಟುಕೆ ಹೋದಾ ಈರಣ್ಣ

ಈಗ ಹೂವಿನ ತ್ವಾಟುಕೆ ಹೋದಾ ಈರಣ್ಣ

ಮುರುಗಾದ ಹೂವ ಕೂದು ಬಟ್ಟಿ ಕಟ್ಟಿದರು

ಮುರಗಾದ ಹೂವಾ ಕೂದು ಬಟ್ಟಿ ಕಟ್ಟಿದರು

ನಾಡಾಳ ಹೂವ ಕೂದ ಜೋಳಿಗೆ ಕಟ್ಟಿದರು

ಬಳ್ಳೊಳ್ಳೆ ಹೂವಾ ಕೂದು ಈರಣ್ಣ

ತಾಯೀಯ ಬಳಿಗೆ ಹೂವ ತಂದಾನು

ತಾಯೀಯ ಮುಂದುಕೆ ಹೂವ ತಂದಾನು

ತಾಯೀಯ ಮುಂದುಗಾಡೆ ಹೂ ರಾಸಿ ಊದಾ

ಈರಣ್ಣ ಮಗಾ ಊವೆಲ್ಲಾ ಕೂದು ಊಮಟ್ಟೆ ಕಟ್ಟ್ಯಂಡು ಬಂದು

ತಾಯಿ ಗವರಮ್ಮನ ಮುಂದೆ ಸುರುದವನೆ

ತಾಯಿ ಗವರಮ್ಮನ ಮುಂದೆ ಸುರುದವನೆ

ಗವರಿ ಸಣ್ಣಾ ಮಲ್ಲೀಗೂವಿನ ಸರವ ಕಟ್ಟಿದುಳು

ದುಂಡು ಮಲ್ಲಿಗೆನೆಲ್ಲಿ ಚಂದಾಗಿ ಕಟ್ಟಿದುಳು

ಚಂದುವಾದ ಹೂವನೆಲ್ಲ ಹಾರ ಕಟ್ಟಿದುಳು

ಒಳ್ಳೇ ಒಳ್ಳೇ ಹೂವನೆಲ್ಲ ಗವರಮ್ಮ ಮುಡುದು

ಒಳ್ಳೇ ಒಳ್ಳೇ ಹೂವನೆಲ್ಲ ಗವರಮ್ಮ ಮುಡುದು

ಇವುಳಿಗೆ ಬ್ಯಾಡಾವಾದುವನೆಲ್ಲ ಬ್ಯಾರೆ ಮಡಿದ್ಯವಳೆ

ಬ್ಯಾಡಾದುವನೆಲ್ಲ ಬ್ಯಾರೆ ಮಡಗಿದಳು

ಮಗನ ಈರಣ್ಣನ ಕರೆದಾಳು ಗೌರಿ

ಬಾರಪ್ಪ ಮಗುನೆ ಮಗುನೆ ಈರಣ್ಣ

ಕೈಲಾಸಕ್ಕೀಗ ಹೋಗಿ ಬಾರೊ ಮಗನೆ

ಕೈಲಾಸದಲ್ಲೊ ಶಿವನ ಗುಡ್ಡುಕ್ಕೆ ಹೋಗಿ ಬಾರೊ ಮಗನೆ

ಶಿವನ ಗುಡ್ಡುದಲ್ಲಿ ಸಿರಿಗಂಗೆ ಉಂಟು

ಶಿವುನ ಗುಡ್ಡಾದಲ್ಲಿ ಸಿರಿಗಂಗೆ ಅವುಳೆ

ಮಗುನೆ ಗಂಗೀಗೆ ಒಂದು ಮಾಲೆ ಹೂವ ಕೊಟ್ಟುಬಾರೊ

ಒಳ್ಳೆ ಒಳ್ಳೆ ಹೂವನೆಲ್ಲ ಗವರಮ್ಮ ಮಡುದು

ಇವುಳಿಗೆ ಬ್ಯಾಡಾದ ಹೂವನೆಲ್ಲ ಗಂಗೀಗೆ ಕೊಟ್ಟವಳೆ

ಮಾಗಾ ಈರಣ್ಣ . ಕೈಲಾಸ ಗುಡ್ಡುಕ್ಕೀಗ ಹೋಗೂತಲವನೆ

ಶಿವನಾ ಗುಡ್ಡುಕೆ ವಾದಾ ಈರಣ್ಣ

ಹೋಗಿ ಚಿಕ್ಕ ತಾಯಿ ಗಂಗಮ್ಮ ಸೆರಣ ಮಾಡಿದನು

ಚಿಕ್ಕ ತಾಯಿ ಗಂಗವೆಲ್ಲ ಸೆರಣ ಮಾಡಿದನು

ಯಾಕಪ್ಪ ಬಂದೋ ಎಲ ಚಿಕ್ಕಿ ಮಗುನೆ

ನನು ತಾಯಿ ಗವರಮ್ಮ ಹೂವ ಕಳಿಸ್ಯವರೆ

ನನು ತಾಯಿ ಗವರಮ್ಮ ಹೂವಾ ಕಳಿಸ್ಯವರೆ

ಹೋಗಿ ಗಂಗೇಯ ಮುಂದುಗಾಡೆ ಹೂವಾ ಮಡಿಗಿದನು

ಗಂಗೇ ಮುಂದ್ಕೆ ಹೂವ ಮಡಿಗಿದ ಗಳಿಗೆಲ್ಲ ಇವುಳ ಕಲಿಯಾದ ಮಕ್ಕ ಸಪ್ಪಗಾಗಿ ಹೋಯ್ತು .

ಮಗುನೆ ಹೂವು ಬ್ಯಾಡೋಗವು ನೀನು ಬ್ಯಾಡೋಗೊ

ಮಗುನೆ ಹೂವೂ ಬ್ಯಾಡೋಗೊ ನೀನು ಬ್ಯಾಡೋಗೊ

ನಿನು ತಾಯಿ ಗವರಮ್ಮ ಮಡಿಯಬೋಗೇಳು

ನಿನು ತಾಯಿ ಗವರಮ್ಮ ಮಡಿಯಬೋಗೇಳು

ಅವಳಿಗೆ ಬೇಕಾದ ಹೂವನೆಲ್ಲ ನಿನ್ನು ತಾಯಿ ಮಡಿದು

ಅವಳಿಗೆ ಬ್ಯಾಡಾವಾದೂವನೆಲ್ಲಿ ನನಿಗೆ ಕಳಿಸ್ಯವಳೆ

ಅವಳಿಗೆ ಬ್ಯಾಡಾವಾದೂವನೆಲ್ಲ ನನಿಗೆ ಕಳಿಸ್ಯವಳೆ

ನಿನು ತಾಯಿ ಗವರಮ್ಮ ಮಡಿಯಲೋಗಯ್ಯ

ಆ ನನ್ನ ಸವತಿ ಮಡಿಯಾಲೋಗೇಳೂ

ಆ ನನ್ನ ಸವತೀಯ ಮಂಡೇ ಮಾಗಾಲಿ

ಆ ನನ್ನ ಸವತೀಯ ಸಿರುವೇ ಬಾಗಾಲೀ

ಆ ನನ್ನ ಸವತೀ ಮಡಿಯೊಗೋಗೆಯ್ಯ

ಮೂರು ಬೋಗುಳವ ಬೋದಾಳು ಗಂಗೆ

ಬೋದಂತ ಬೋಗುಳವ ಈರಣ್ಣ ಕೇಳಿ

ಬೋದಂತ ಬೋಗುಳವ ಈರಣ್ಣ ಕೇಳಿ

ತಾಯಿದ್ದ ಬಳಿಗೆ ಬಂದಾನೀರಣ್ಣ

ತನ್ನ ತಾಯಿ ಗವರಮ್ಮುನ ಬಳಗೇ ಬಂದಾನೆ

ಮಗುನೆ ಹೂ ಕೊಟ್ಟು ಬಂದೇನೊ ಮಗುವೇ ಈರಣ್ಣ

ಅವ್ವ ಇಲ್ಲಾ ಮೂರು ಬೋಗುಳನ ಬೋದಾರು ಗಂಗೆ

ಮೂರು ಬೋಗಳುನನ್ನ ಬೋದಾರ ಗಂಗೆ

ಏನಂತ ಬೋದುಳೊ ಎಲೆ ಚಿಕೆ ಮಗನೇ

ಆ ನನ್ನ ಸವತಿ ಮರಿಯಾ ಬೋಗೋಳು

ಆ ನನ್ನ ಸವತಿ ಮಂಡೇ ಮಾಗಾಲಿ

ಈ ನನ್ನ ಸವತಿ ಸಿರುವೇ ಬಗ್ಗಾಲಿ

ಆ ನನ್ನ ಸವತಿ ಮಡಿಯಾಬೇಗೇಳು

ಒಳೇ ಒಳೇ ಹೂವನೆಲ್ಲ ನಿನು ತಾಯಿ ಮಡುದು

ಆವಳಿಗೆ ಬ್ಯಾಡಾದ ಹೂವನೆಲ್ಲ ನನಿಗೆ ಕಳಿಸ್ಯಾವಳೆ

ಅಂತ ಮೂರು ಬೋಗುಳುವ ಬೋದಾಳು ಗಂಗೆ

ನೋಡಿದೇನು ಈರಣ್ಣ ಗಂಗ್ಯಾಡೊ ಮಾತೊ

ನೋಡೋ ಈರಣ್ಣ ಗಂಗ್ಯಾಡೊ ಮಾತಾ

ಮನಗೆ ಮೆಚ್ಚಿ ಬಂದೋಳಿಗೆ ಮಾತೆಸೊ ಮಗುನೆ

ಅವಳಿಗೆ ಕೂಡಿ ಬಂದಳಿಗೆ ಕುಲುವೆನ್ನೂ ಮಗುವೆ

ಓಡಿ ಬಂದಳು ಮಾತು ಮಾತು ತರವಲ್ಲ

ಲಂಗು ಲಗಾಮು ಇಲ್ಲಿಗೆ ಜರುದವಳೆ ಗಂಗೆ

ನಡಿಯಪ್ಪ ಮಗನೆ ಗಂಗೇಯ ಮನಿಗೆ

ಗಂಗೇಯ ಮನೆಗೆ ಹೋದಾಳು ಗವರಿ

ಗಂಗೇಯ ಮಕಾ ನೋಡಿ ಹಲ್ಲ ಕಡುದಾಳು

ಹಲ್ಲಾ ಕಡುದು ಕಣ್ಣಾ ಬುಟ್ಟವಳೆ

ನನ್ನ ಏನಂತ ತಿಳಿದೇ ಕುಲಗೆಟ್ಟ ಸವತಿ

ನನ್ನ ಏನಂತ ಬೋದೇ ಜಾತಿಗೆಟ್ಟ ಸವತಿ

ನನಿಗೂ ನಿನಗೂ ಸಮುಜೋಡಿ ಯೇನೇ

ನೀನು ಮೆಟ್ಟಿ ಬಂದಳಿಗೆ ಮಾತು ಗನುವೇನೇ

ಮೆಟ್ಟಿ ಬಂದಂತಳಿಗೆ ಮಾತೂ ಗನುವೇನು

ಕೂಡಿ ಬಂದ್ಯವಳಿಗೆ ಕುಲುವೆಸ್ಟೆ ನಿನುಗೆ

ಕೂಡಿ ಬಂದವಳಿಗೆ ಕುಲುವೆಸ್ಟೆ ನಿನುಗೆ

ನೀನು ಯಂಗೆ ಮೆಚ್ಚಿ ಬಂದೆ ಶಿವನಾ

ಯಂಗೆ ಮೆಚ್ಚದೆ ಗಂಗೆ ಶಿವನಾ, ಮಾರಹರುನ, ಈಸುಪುರನ, ಬೂದಿಶಿವನಾ

ಯಂಗೆ ಮೆಚ್ಚಿದೆ ಗಂಗೆ ಶಿವುನಾ . ಮಾರಹರನ, ಈಸುಪುರನ, ಬೂದಿಶಿವನಾ

ಆಕ್ಕಯ್ಯ ಗವತಿ . ಅಕ್ಕಯ್ಯ ಗವರಿ .

ಮುದುಕನೆನ್ನಲು ಬ್ಯಾಡಾ ತದುಕನೆನ್ನಲು ಬ್ಯಾಡಾ .

ಮುವತ್ತಾರುದು ಲೋಕಾ ನಾಳುವಂತ ನನಗಂಡ

ನಾಳುವಂತ ನನಗಂಡಾ

ಕಲ್ಲೀನಂತವನಲ್ಲಿವೆ ನಮ್ಮ ಶಿವ ಆರೆ ಅಂತಾವನಲ್ಲವೇ

ಆರೇಯಂತವನಲ್ಲವೆ ನಮ್ಮ ಶಿವ ಕಲ್ಲೀನಂತವನಲ್ಲವೇ

ಆರೇಯಂತವನಲ್ಲವೇ ಹುಡುಗಾರೋಡೊ ಚಂಡೀನಂತವನಲ್ಲಿವೆ

ಮುದುಕನ ನ್ನಲುಬೇಡಮ್ಮ ನಮ್ಮ ಶಿವನ, ತದುಕನನ್ನುಲುಬೇಡಮ್ಮಾ

ಆಕ್ಕಯ್ಯ ಗವರೀ .

ಆಕ್ಕಾಗವರೀ

ನಿನ್ನ ಕಣ್ಣಿಗೆ ನನ್ನ ಚಿಕಾವನಳೆನ್ನುಬೇಡಾ

ನಿನ್ನ ಕತ್ತುರುಸಾ ನಿನ್ನುತ್ತುರಸಾ ನಿನ್ ಬೆಳ್ಳು ಕೂಯ್ಯ

ಬೇಲೀ ಮ್ಯಾಲೇ ಚಲ್ಲಾ

ನಿನ್ನ ಕಣ್ಣಿಗೆ ನನ್ನ ಚಿಕ್ಕವಳೆನ್ನಾಬೇಡಾ ಆಕ್ಕಯ್ಯಗವರಿ .

ನಿನ್ನ ಕತ್ತುರುಸಾ ನಿನ್ನುತ್ತುರಸಾ ನಿನ್ ಬೆಳ್ಳುಕೂಯಿ ಬೇಲಿ ಮ್ಯಾಲೆ ಚಲ್ಲಾ

ಬಗ್ಗೂವಳಲ್ಲಾ ನಾನೇ ನಿನ್ನಿಗೆ ನಾನು ಸಿಕ್ಕೂತಳಲ್ಲಾ ಕಾನೇ

ಬಗ್ಗೂವಳಲ್ಲಾ ಕಾನೇ ಅಕ್ಕ ಗವರಿ ಸಿಕ್ಕುವಳಲ್ಲಾ ಕಾನೇ

ಗಂಗೆ ನನಿಗೆ ನೀನೀಡೇನೇ ನನಿಗೆ ನೀನ್ನೂಡೇನೇ

ಜಾಳರಿ ಗಂಗೇ .

ನಿನ್ನ ಕೊರಳುಯ್ಯ ಬೆಳ್ಳು ಕೂಡ್ಯ ಬೇಲಿ ಮ್ಯಾಲೆ ಚಲ್ಲಾ

ನನಿಗೆ ನೀನ್ ಸರಿ ಬಂದೇಯ ಜಾಳಾರಿಗಂಗೆ ನನಿಗೆ ಸಮನಾದೀಯಾ

ಗಂಗೆ ನನಿಗೆ ನೀನೇಡೇನೆ ನನಿಗೆ ನೀನ್ನೂಕಡೇನೇ

ಜಾಳಾರಿ ಗಂಗೇ

ನಿನ್ ಕೊರುಳ್ ಕುಯ್ಯ ಬೆಳ್ಳು ಕುಯ್ಯ ಬೇಲಿ ಮ್ಯಲೆ ಚಲ್ಲಾ

ನನಿಗೇ ಸರಿ ಬಂದೀಯಾ ? ಜಾಳಾರಿ ಗಂಗೆ ನನಿಗೆ ಸಮನಾದೀಯ

ಮದಿವಾಗಿ ಬಂದದ್ದೀಯಾ

ನನಂಗೆ ನೀನು ಗಂಡಾನ ಕೂಡಿದ್ದೀಯಾ

ನಿನಿಗೆ ಗಂಡಾನ ಕೂಡದ್ದೀಯ ನನ್ನಂಗೆ ನೀನು ಮಕ್ಕಾಳಾ ಹಡುದಿದ್ದೀಯ

ಮಕ್ಕಾಳ ಹಡುದಿದ್ದೀಯಾ ನನ್ನಿಂಗೆ ನೀನು ಗಂಡಾನ ಕೂಡಿದ್ದೀಯಾ

ಮಕ್ಕಾಳ ಹಡುದಿದ್ದೀಯ ನನ್ನಂಗೆ ನೀನು ಮನೆ ತಾನ ಪಡುದಿದ್ದೀಯ

ಗಂಗೆ ಮನಿಸಾನ ಪಡುದಿದ್ದೀಯ ನನ್ನಂಗೆ ನೀನು ಹಸೆ ಮ್ಯಾಲೆ ಕೂತುದ್ದೀಯ

ಮನಿಸಾನ ಪಡುದಿದ್ದೀಯ ನನ್ನಂಗೆ ನೀನು ಹಡೆ ಮ್ಯಾಲೆ ಕೂತುದ್ದೀಯ

ಗಂಗೆ ಶಿವನಾ ಮೆಟ್ಟಿ ಓಡಿ ಬಂದುಳಿಲ್ಲವೇ?

ಗಂಗೆ ನೀನು ಕೂಡಿ ಬಂದವಳಲ್ಲವೆ?

ಶಿವನಾ ಮೆಟ್ಟಿ ಓಡಿ ಬಂದಳಲ್ಲವೆ

ಗಂಗೆ ನೀನು ಶಿವುನಾ ಕೂಡಿ ಬಂದವುಳಲ್ಲವೆ

ಗಂಗೇ ನನಿಗೇ ನೀನೀಡೇನೆ ನನಿಗೆ ನೀಸೂಡೇನೆ

ಜಾಣೆರಿಗಂಗೆ

ನಿನ್ನ ಕೊರುಳು ಕುಯ್ಯ ಬೆರುಳುಕುಯ್ಯ ಬೇಲಿ ಮ್ಯಾಲೆ ಚಲ್ಲಾ

ನನಿಗೇ ನೀನು ಸರಿ ಬಂದೀಯಾ

ಜಾಳಾರಿ ಗಂಗೇ ನನಿಗೇ ನೀ ಸಮುನಾದೀಯ

ಗಂಗೆ ತಾಟುದಲ್ಲಿ ಹುಟ್ಟೀ

ತ್ವಾಟುದಲ್ಲಿ ಹುಟ್ಟೀ ನೀಲಾಗಿ ಬೆಳೆದು

ಸಾಸುರುಕ್ಕೆ ಬರೋದು

ಅದ ಕಂಡುದ್ದ ಬಡುದೇಳು

ಜಾಳರಿ ಗಂಗೆ ತಿಳುದುದ್ದ ಬಡುದೇಳು

ತ್ವಾಟುದಲ್ಲಿ ಹುಟ್ಟಿ, ನೀಲಾಗಿ ಬೆಳೆದು

ಸಾಸಿರುಕ್ಕೆ ಬರುವೋದು

ಅದ ಕಂಡುದ್ದ ಬಡುದೇಳು

ಜಾಳರಿ ಗಂಗೆ ತಿಳುದುದ್ದ ಬಡುದೇಳು..॥

ಕಂಡುದ್ದುರಕ್ಕಯ್ಯ ತಿಳಿದು ಹೇಳುವೆ ನಾನು .

ತ್ವಾಟುದಲ್ಲಿ ಹುಟ್ಟಿ ನೀಲಾಗಿ ಬೆಳೆದು

ಸಾಸುರುಕ್ಕೆ ಬರುವೋದು

ಅದು ಅಡಿಕೇ ಹೊಂಬಾಳೆ ಅಲ್ಲವೇನೆ

ಅಕ್ಕಾ ಅದ ಕಳುಸುಕ್ಕೆ ತರುದಿಲ್ಲುವೇನೆ

ಅಡಿಕೆ ಹೊಂಬಾಳೆ ಅಲ್ಲವೇನೆ

ಅಕ್ಕ ಅಉ ಕಳುಸಕ್ಕೆ ಬರುದಿಲ್ಲುವೇ

ಅಕ್ಕಯ್ಯ .ಗೌರಿ

ನಿನ್ನ ಕಣ್ಣಿಗೆ ನನ್ನ ಚಿಕ್ಕವಳೆಸೆಬೇಡ

ನಿನ್ನ ಕತ್ತುರುಸ ನಿನ್ನುತ್ತುರುಸಾ

ನಿನ್ನ ಬೆಳ್ಳು ಕುಯ್ಯ  ಬೇಲಿ ಮ್ಯಾಲೆ ಚೆಲ್ಲಾ

ಬಗ್ಗುವಳಲ್ಲಾ ಕಾನೆ

ನಿನಿಗೆ ನಾನು ಸಿಕ್ಕುವಳಲ್ಲಾ ಕಾಣೇ॥

ಬಗ್ಗುವಳಲ್ಲಾ ಲಾಣೇ

ಅಕ್ಕಾ ಗೌರಿ ನಿನಿಗೆ ಸಿಕ್ಕುವಳಲ್ಲಾ ಕಾನೆ॥

ಗಂಗೇ ನನಿಗೇ ನೀ ನೀನೀಡೇನೆ, ನನಿಗೇ ನೀಸೂಡೇನೇ।

ಜಾಳಾರಿ ಗಂಗೆ .

ನಿನ್ನ ಕೊರಳು ಕುಯ್ಯ

ಬೆರುಳುಕುಯ್ಯ ಬೇಲಿ ಮ್ಯಾಲೆ ಚಲ್ಲಾ

ನನಿಗೆ ನೀ ಸರಿ ಬಂದೀಯ

ಜಾಳಾರಿ ಗಂಗೆ ನನಿಗೆ ನೀ ಸಮುನಾದೀಯ॥

ಗಂಗೆ ಮನೆ ಮ್ಯಾಲೆ ಮನೆ ಕಟ್ಟೀ

ಗಂಗೆ ಮನೆ ಮ್ಯಾಲೆ ಮನೆ ಕಟ್ಟೀ

ಮ್ಯಾಲೆ ಮಾಳಿಗೆ ಕಟ್ಟೀ

ಅಡುಕೆ ಹುಲ್ಲೋಚು ಗಳುವಿಲ್ಲವೋ

ಜಾಳರಿಗಂಗೆ ಕಂಡುದ್ದರೊಡದೇಳೋ॥

ಮನೆ ಮ್ಯಾಲೆ ಮನೆ ಕಟ್ಟಿ

ಮ್ಯಾಲೆ ಮಾಳಿಗೆ ಕಟ್ಟಿ

ಅದುಕೆ ಹುಲ್ಲೋಚ್ಚೋ ಗಳುವಿಲ್ಲವೋ

ಜಾಳರಿ ಗಂಗೆ ಕಂಡುದ್ದ ರೊಡುದೇಳು॥

ಕಂಡುದ್ದ ರಾಕ್ಕಯ್ಯ..ಒಡುದು ಹೇಳುವೆನಾನು

ಮನೆ ಮ್ಯಾಲೆ ಮನೆ ಕಟ್ಟೀ

ಮ್ಯಾಲೇ ಮಾಳೀಗೆ ಕಟ್ಟೀ

ಅದು ಗಿಳಿಯೀರೋ ಗೂಡಲ್ಲವೇ

ಅಕ್ಕ ಗೌರಿ ಹುಟ್ಟೋಚ್ಚೋ ಗಳುವಿಲ್ಲವೆ

ಜಾನ ಗೂಡಲ್ಲವೆ

ಅಕ್ಕ ಗೌರಿ ಹುಲ್ಲುಂಡು ಗಳುವಿಲ್ಲವೋ ।

ನಿನ್ನಾ ಕಣ್ಣಿಗೆ ನನ್ನ ಚಿಕ್ಕವಳೆನುಬೇಡಾ.

ನಿನ್ನ ಕತ್ತುರುಸಾ ನಿನ್ನತ್ತುರುಸಾ

ನಿನ್ನ ಬೆಳ್ಳು ಕುಯ್ಯ  ಬೇಲಿ ಮ್ಯಾಲೆ ಚಲ್ಲಾ .

ಜಗ್ಗುವಳಲ್ಲಾ ಕಾನೆ

ನಿನಿಗೆ ನಾನು ಸಿಕ್ಕುವಳಲ್ಲ ಕಾನೇ

ಜಾಳರಿ ಗಂಗೆ .ಆಕ್ಕಯ್ಯ ಗೌರಿ  ಸಿಕ್ಕುವಳಲ್ಲಾ ಕಾನೆ॥

ಗಂಗೇ ಹೆಣ್ಣು ಜಾತಿ ನಾ ಬಲ್ಲೇನು

ಜಾಳರಿ ಗಂಗೆ ಹೆಣ್ಣು ಕುಲುವ ನಾಬಲ್ಲೇನು।

ಗಂಗೇ ಹೆಣ್ಣು ಜಾತಿ ನಾ ಬಲ್ಲೇನು

ಜಾಳರಿ ಗಂಗೆ ಹೆಣ್ಣು ಕುಲುವ ನಾಬಲ್ಲೇನು।

ನೀನು ಬೆಸ್ತರೂ ಮಗಳೋ .ಜಾಲಾರಿ ಗಂಗೇ

ನೀನು ಬೆಸ್ತರೂ ಮಗಳೋ .ಜಾಲಾರಿ ಗಂಗೇ

ಗಂಗೆ ತ್ಯೆಪ್ಪ ಬುಡುತಾರೇ  ನಿಮ್ಮಪ್ಪಾದೀತು

ಗಂಗೆ ತ್ಯೆಪ್ಪ ಬುಡುತಾರೇ  ನಿಮ್ಮಪ್ಪಾದೀತು

ಗಂಗೇ ಸುಣ್ಣವ ಸುಡರೂ ನಿಮ್ಮಣ್ಣಾದೀರೂ

ಗಂಗೆ ಸುಣ್ಣಾ ಸುಡತಾರೆ ನಿಮ್ಮಣ್ಣಾದೀರೂ

ಯಾತಾ ಎತ್ತುತಾರೆ ನಿಮ್ಮಣ್ಣದೀರೂ

ನನ್ನ ಜಾತಿ ಮತುಕೆ ನೀನು ಸಂಬಂದಿಯೇನೇ

ನನ್ನ ಜಾತಿ ಮತುಕ್ಕೆ ಸಂಬಂದಿಯೇನೆ

ನನ್ನಂಗೆ ನೀನು ಶಿವ ಪೂಜೆ ಮಾಡುತೀಯ

ನನ್ನಂಗೆ ಶಿವಪೂಜೆ ಮಾಡುತೀಯೆ ನೀನೂ

ನನ್ನಂಗೆ ಶಿವುದಾರ ನೀನು ದರಿಸಿದ್ದಯೇ?

ನನ್ನಂಗೆ ಲಿಂಗಾ ಜಂಗಾ ಪೂಜುತೀಯೇ ಗಂಗೆ

ನನ್ನಂಗೆ ಲಿಂಗಾ ಜಂಗಾ ಪೂಜುತೀಯೇ ಗಂಗೆ

ನನ್ನಂಗೆ ಲಿಂಗ ಜಂಗಾ ದರಿಸಿದ್ದಿಯೇನೆ

ನೀನು ಬೆಸ್ತಾರ ಕುಲಕಾನೆ ಜಾಲಾರಿ ಗಂಗೆ

ನೀನು ಹೂಲಸಿನ ಕುಲುವಲ್ಲೇ ಜಾಲಾರಿ ಗಂಗೆ

ನೀನು ಬಲೆಯ ಎಣಿಯೊ ಜಾತಿ ಬಡು ನನ್ನ ಗರತಿ

ನೀನು ಬಲಿಯ ಎಣಿಯೋ ಜಾತಿ ಬಡುನನ್ನ ಸವತಿ

ನೀನು ಮೀನು ಹಿಡಿಯೊ ಜಾತಿ ಮಿರಿದು ನನ್ನ ಸವತಿ

ನೀನು ಸೀಗುಡಿ ಮಾಡುವ ಜಾತಿ ಸಿಂಡು ನನ್ನ ಸವತಿ

ನೀನ ಹೊಲಸಿನ ಕುಲವಲ್ಲೆ ಜಾಲಾರಿ ಗಂಗೆ

ನನ್ನ ಹತುರ ನಿಲ್ಲುಬ್ಯಾಡ ಹಡುಕಿ ನಾರುವೇಯ

ಹತುರ ನಿಲ್ಲಬ್ಯಾಡ ಗಂಗೆ ಹಡುಕಿ ನಾರುತೀಯ

ನೀನು ದೂರ ನಿಂತು ಮಾತನಾಡೆ ಗಬ್ಬು ನನ್ನ ಸವತಿ

ನೀನುತೂರ ನಿಂತು ಮಾತನಾಡು ಗಬ್ಬು ನನ್ನ ಸವತಿ

ಇವುರಿಗೆ ಮಲ್ಲಿಗೆ ಹೂವಿಗೆ ಮಾರು ಬಂದಾವೆ

ಇವುರಿಗೆ ಮಲ್ಲಿಗೆ ಹೂವಿಗೆ ಮಾರು ಬಂದಾವೆ

ಜಾಜೀಯ ಹೂವಿಗೆ ಜಗಳು ಬಂದಾವೆ

ಜಾಜೀಯ ಹೂವಿಗೆ ಜಗಳು ಬಂದಾವೆ

ಗಂಗೇಗು ಗೌರೀಗು ಹತ್ತುಲಲ್ಲೋ ಶಿವನೆ

ಸವತಿ ಮಚ್ಚರ ಬಂದು ಒಡೆದಾಡುತವೆ

ಒಬ್ಬುರ ಮುಂದಾಲೆ ಒಬ್ಬಳು ಹಿಡಿದು

ಒಬ್ಬಳ ಮುಂದಾಲೇ ಒಬ್ಬಳು ಹಿಡಿದು.

ಬಡುದಾಡಿ ಶಿವನೆ ಕೈಡಿವಾಡಿತವರೆ

ಬಡುದಾಡಿ ಶಿವನೆ ಕೈಡಿವಾಡಿತವರೆ

ಒಬ್ಬಳಿಗೆ ಒಬುಳು ದಕ್ಕಾವಳಲ್ಲಿ

ಬಡುದಾಡಿ ಶಿವನೆ ಕೈಡಿವಾಡಿತವರೆ

ಮುಂದಾಲೆ ಹಿಡು ಕಂಡು ಬಡೆದಾಡುತವರೆ

ಮುಂದಾಲೆ ಹಿಡು ಕಂಡು ಬಡೆದಾಡುತವರೆ

ಬಡಿದಾರೆ ಶಿವನೆ ಕ್ಯಡಿವಾಡುತವನೇ

ಈಗ ಗಂಗೀಗೆ ಒಂದೇಟು ಗವರೀ ಬಡುದಾಳು

ಗಂಗೀಗೆ ಒಂದೇಟು ಗವತೋ ಬಡೆದಾಳೂ

ಅಕ್ಕ ಗವರಿ ನನ್ನ ಕೈಯ ಬರುತಾರೆ ತಾಳಿ ಕಾಳೇ ಸವತಿ

ನನ್ನ  ಕಯ್ಯೇ ಬರುತಾದೆ ತಾಳಕಾಳೆ ಸವತಿ

ಈಗ ಗೌರೀಗೆ ಒಂದೇಟು ಬಡೆದಾಳು ಗಂಗೆ

ಗೌರೀಗೆ ಒಂದೇಟ್ ಬಡೆದಾಳು ಗಂಗೆ

ಯಾವಾಗ ಗಟ್ಟಿಕಾತೆ ಗಂಗೆ ಕಡಿ ಕ್ವಾಪದಲ್ಲಿ .ಗವರಿಗೆ ಒಂದೆಂಟು ಹೊಡುದ್ಲು ಗಂಗೆ ಮುಟ್ಟುದಂತಹ ಗಳಿಗೆಲ್ಲಿ .ಗೌರಿ ..

ಇವಳಾಡುದಂತೆ ಗಳಿಗೇಲಿ

ಸೂತು ಕಾಡಾಳೂ ಗವರಮ್ಮ ಶಿವನೇ

ಇವುಳು ಮುಟ್ಟಿದಂತ ಗಳಿಗೆಲ್ಲಿ  ಸೂತೂಕಣ್ಯಳೆ

ಇವುಳಿಗೆ ಸೂತುಕಾದುರು ನೋಡಿ ಗಂಗೆ ಮಾಯವಾದಳು

ಜಲಕಾನೆ ಊರು ಬಳಿಗೆ ಹೋಗುತಾಳೆ ಗಂಗೆ

ಜಲಕಾನೆ ಊರು ಬಳಿಗೆ ಹೋಗುತಾಳೆ ಗಂಗೆ

ಜಲುವಕ್ಕೆ ಬರುದಂಗೆ ತಡುಕಂಡು ಅವಳೆ

ಜಲುವಕ್ಕೆ ಬರುದಂಗೆ ತಡಿವಾಳೆ ಗಂಗೆ

ವಾಸುದೇವನ ಬಳಿಗೆ ಹೋಗುತ್ತಾಳೆ ಗಂಗೆ

ಗಾಳಿ ಬೀಸೂದಂಗೆ ಬಾಸೆ ತಕ್ಕಂಡ್ಳು

ಗಾಳಿ ಬೀಸುದಂಗೆ ಬಾಸೇ ಮಾಡಿದಳು

ಜಲವುಕ್ಕಿ ಬರುದಂಗೆ ತಡೆಯ ಕಟ್ಟಿದಳು

ಗವರೀಯ ಅಗುಲಕ್ಕೆ ತಡೆಯ ಕಟ್ಟಿದಳು

ಗವರೀಯ ಅಗುಲುಕ್ಕೆ ತಡೆ ಕಟ್ಟಿ ನೀರು ಸಿಕ್ಕದಂಗೆ ಮಾಡಿ ಗಾಳಿ ಬೀಸುದಂಗೆ ಮಾಡಿ  ಗಂಗೆ (ಬೂಮಂಡ್ಲಕ್ಕೆ ನೀರಿರಬೋದು  ಗೌರಿ ಸೆರಗೆತ್ತಿ   ಈ ಗೌರಿ ಇದ್ ಕಡೆ ನೀರಸಿಕ್ಕಬಾದರ್ವ ನೀರ್ ಸಿಕ್ಕುದಂಗೆ ತಡೆ ಕಟ್ಟಿ)

ಗಂಗೆ ನೀರು ಮಾಯ ಮಾಡಿ ಅವತು ಕೂತವಳೆ

ನೀರು ಮಾಯ ಮಾಡಿ ಅವತೂ ಕೂತವಳೆ

ಗೌರಿ ಸೂತಕ ಕಳೆಯಾಕೆ ನೀರುಡುತವಳೆ

ಸೂತಕ ಕಳೆಯದುಕೆ ನೀರುಡುಕುತವಳೆ

ಹರಿಯಾ ಹಳ್ಳಾಕೋಗಿ ನೀರು ಹುಡುಕುತವಳೆ

ಹರಿಯ ಹಳ್ಳಿಲ್ಲ  ಜಲಬತ್ತಿ ನೋಡೋ ಬರುದಾಗ್ಯಾತಿ

ಅವಳು ಕಟ್ಟಿ ಕಾವೇರಿನೆಲ್ಲ ಹುಡುಕ್ಯಾಡುತವಳೆ

ಗೌರಿ ನಿಂತಂತೆ ಜಾಗುದಲ್ಲಿ ಕಣ್ಣಿಗೆ ಕಂಡಾ ನೀರು ಮಾಯವಾಗುತ್ತಾದೆ

ಹರಿಯೊ ಗಂಗ್ಯೆಲಿ ಜಲಬತ್ತಿ ಶಿವನೆ ಬರುದ್ಯಾಗುದೇ

ಜಲಗೋಡಿ ಕೊಳುಕೋಗಿ ನೀರು ನೋಡುತಾಳೆ

ಜಲನೋಡಿ ಕೊಳುದಲ್ಲಿ ಜಲಬತ್ತ್ಯೋಗ್ಯಾಕೆ

ಬೆನುವನಾನ ಕೊಳಕೋಗಿ ನೀರು ನೋಡುತಾಳೆ

ಬೆನುವತಾನ ಕೊಳದಲ್ಲಿ ಬೊಗಸೆ ನೀರಿಲ್ಲಿ

ಹಿರಿಯಣ್ಣನ ಕೊಳಕೋಗಿ ನೀರು ನೋಡುತಾಳೆ

ಹಿರಿಯಣ್ಣನ ಕೊಳದಲ್ಲಿ ಒಂದೀಸು ನೀರಿಲ್ಲ

ಈರಣ್ಣನ ಕೊಳುಕೋಗಿಎ ನೀರು ನೋಡುತಾಳೆ

ಎಲ್ಲಿ ಹುಡುಕಿದರೂ ಏನು ಹುಡುಕಿದರೂ ಒಂದೀಸು ನೀರಿಲ್ಲ

ಈಗ ಮಗುನ ಈರಣ್ಣ ಕರುದಾಳು ಗೌರಿ

ಬಾರಪ್ಪ ಮಗುನೆ ಮಗನೇ ಈರಣ್ಣಾ

ಸೂತುಕಾಗಿ ದಾನಲೋ ಮಗುನೇ ಈರಣ್ಣ

ತಂಗೆ ಸವತಿ ಮಚ್ಚರ ಬಂದು ನೀರು ಮಾಯವಾಗಿ

ಸವತಿ ಮಚ್ಚರ ಬಂದು ನೀರು ಮಾಯವಾಗಿ

ನೀರು ಮಾಯ ಮಾರಿ ಅವುತು ಕೂತವಳೆ

ಮಗನೆ ಲಿಂಗಾ ಜಂಗಾ ಪೂಜೆಲ್ಲುವಲ್ಲೋ

ಶಿವಪೂಜೆ ನಾನು ಮಾಡಿಲ್ಲ ಮಗುನೆ

ಸೂತಕ ನಾನು ಕಳುದಿಲ್ಲ ಮಗುನೇ ಈರಣ್ಣ

ಎಲ್ಲಾರ ಹೋಗಿ ನೀರು ತಾರೋ ಮಗನೆ

ಈಗ ಬೆಳ್ಳಿಯ ಕೊಡುವನ್ನು ಕೈಯಲ್ಲಿಡಕಂಡು

ಕಟ್ಟೆ ಕಾವೇರಿನಲ್ಲೆಇ ಹುಡಿಕ್ಯಾಡುತ್ತಾನೆ

ಎಲ್ಲಿ ಹುಡುಕಿದರೂ ಒಂದೀಸು ನೀರಿಲ್ಲ

ಎಲ್ಲಿ ಹುಡುಕಿದರ ಒಂದು ಬೊಗಸೆ ನೀರಿಲ್ಲ.. ಮಗ ಈರಪ್ಪ ಬೆಳ್ಳಿ ಕೂಡ ಕೈ ಬಿಡಕಂಡು ತಾಯಿ ಸೆರಗಲ್ಲಿ ನೀರುಡುಕುತ್ತಾನೆ ಹಳ್ಳ ಕೊಳ ಹುಡುಕುತ್ತಾನೆ . ತಡಕುತ್ತಾನೆ.

ಇವಳ ಸೆರಣೆ ಎತ್ತಿಗಂಡು

ನೀರಿಗೋದಾರೆ ನೀರೇ ಕಾಣಾದಿಲ್ಲ

ಎಲ್ಲಿ ಹುಡುಕಿದುರು ನೀರೇ ಸಿಗುನಿಲ್ಲ

ತಾಯಿಯ ಬಳಿಗೆ ಬಂದಾ ಈರಣ್ಣ

ತಾಯಿ ಎಲ್ಲಿ ಹುಡುಕಿದುರು ನೀರಿಲ್ಲ ತಾಯಿ

ಏನು ಮಾಡಲೋ ಮಗುನೇ ಈರಣ್ಣ

ಏನು ಮಾಡಲಪ್ಪ ಮಗುನೇ ಈರಣ್ಣ

ನಾವೇನು ಮಾಡಲವ್ವ ನನ್ನವ್ವ ಗವರಿ

ಹಾಲು ತರುತೇನೆ ನನ್ನವ್ವ ಗವರಿ

ಹಾಲು ತರುತೇನೆ ನನ್ನವ್ವ ಗವರಿ

ಮಗುವೆ ಹಾಲನಲ್ಲಿ ಸೂರುಕ ಕಳೆಯದಿಲ್ಲ

ಅವು ಎಳನೀರ ತರುತೇನೆ ನನ್ನವ್ವ ಗವರಿ

ಮಗನೆ ಎಳೆನೀರಲ್ಲಿ .ಸೂತಕ ಮಗುನೇ ಕಳೆಯೋದು ಇಲ್ವೆ

ಅವು ಜೇನುತುಪ್ಪ ತರಲೇನೆ ನನ್ನವ್ವ ಗವರಿ

ಮಗುನೆ ಜೇನು ತುಪ್ಪದಲ್ಲಿ ಸೂರುಕ ಮಗನೇ ಕಳೆಯೋದಿಲ್ಲ

ಏನು ಮಾಡಾಲವ್ವ ನನ್ನವ್ವ ಗವರಿ

ಮಗನೆ ಕಾಸೀ ದೇಸಕ್ಕಾರ ಹೋಗಬಾರೊ ಮಗುನೆ

ಕಾಸೀ ದೇಸಕ್ಕಾರ ಹೋಗಿ ಬಾರೊ ಮಗನೆ

ಕಾಸೀ ಈಸುಪೂರ ಸತ್ತ್ಯುಳ್ಳ ದೇವ

ಅಂತ ಸತ್ತ್ಯುಳ್ಳ ದೇವರತ್ರ ನೀರೀರತಾವೆ

ಅಲ್ಲಿಗಾರ ಹೋಗಿ ನೀರನಾರ ತಾರಪ್ಪ

ಈಗ ಕಾಸೀ ದೇಸಕ್ಕೆ ಹೋಗುತಾನೆ ಈರಣ್ಣ

ಕಾಸಿ ರಾಮೇಶ್ವರ ಸತ್ಯುಳ್ಳ ದೇವ ಕೊಳ ಕೊಳವೆಲ್ಲ ತುಂಬಿ ತುಂಬಿ ತುಳುಕುತ್ತಾರೆ. ಹೋಗಿ ನೋಡುತ್ತಾನೆ. ನೀರು ಕಣ್ಣಿಗೆ ಕಂಡೋ .

ಈಗ ಗವರೀಯ ಹೆಸರೆತ್ತಿ ನೀರೀಗಿಳಿತವನೆ

ಗವರೀಯ ಹೆಸರೆತ್ತಿ ನೀರೀಗಿಳಿತಾನೇ

ನನ್ನ ತಾಯಿ ಗವರಮ್ಮ ಸೂತಕದಲ್ಲಿವರೆ

ನನ್ ತಾಯಿ ಗವರಮ್ಮ ಶಿವಪೂಜೆ ಮಾಡುತಾರೆ

ನನ್ ತಾಯಿ ಗವರಮ್ಮ ಲಿಂಗ ಪೂಜೆ ಮಾಡುತಾರೆ

ಗವರೀಯ ಹೆಸರೆತ್ತಿ ನೀರಿಗಳಿಯುತಾನೆ

ಮಗ ಈರಣ್ಣ ತಾಯಿ ಗವರಿಯ ಹೆಸರೆತ್ತಿ ನೀರಿಗಿಳಿಯುತ್ತಾನೆ. ನನ್ನ ತಾಯಿ ಗೌರಮ್ಮ ಸೂತಕದಲ್ಲಿದ್ದಾರೆ . ನನ್ನ ತಾಯಿ ಗೌರಮ್ಮ ಶಿವ ಪೂಜೆ ಮಾಡಬೇಕು  ನನ್ನ ತಾಯಿ ಗೌರಮ್ಮ ಲಿಂಗ ಪೂಜೆ ಮಾಡಬೇಕು .ಅಂತ

ಇವಳ ಸರೆಹೆತ್ತಿದಗಳಿಗೆಲ್ಲ

ತುಂಬೀದ ಕೊಳುವೆಲ್ಲ ಬರಿದಾಯಿತಲ್ಲಾ

ಕಣ್ಣಿಗೆ ಕಂಡಾ ನೀರು ಮಾಯವಾದುವಲ್ಲಾ

ಕಣ್ಣಿಗೆ ಕಂಡಾ ನೀರು ಮಾಯವಾದುವಲ್ಲಾ

ತಂಬೀದ ಕೊಳುವೆಲ್ಲ ಬರಿದಾಯಿತಲ್ಲಾ

ಬರಿಕೊಡಾ ಈಡುಕಂಡು ಬಂದಾ ಈರಣ್ಣ

ಬರಿಕೊಡಾ ಈಡುಕಂಡು ಬಂದಾ ಈರಣ್ಣ

ತಾಯಿ ಎಲ್ಲಿ ಹುಡುಕಿದುರುನೀರಿಲ್ಲ ತಾಯಿ

ಕಣ್ಣಿಗೆ ಕಂಡಾ ನೀರು ಮಾಯವಾಗುತಾದೆ

ಏನಾ ಮಾಡ್ಕಾಲೊ ಮಗನೇ ಈರಣ್ಣ

ಏನಾ ಮಾಡಾಲಪ್ಪ ಮಗುನೇ ಈರಣ್ಣ

ಮಗನೇ ಕೈಲಾಸುಕಾರೇ ಹೋಗಿಬಾರ ಮಗುನೆ

ಕೈಲಾಸದಲ್ಲಿ  ನಿಮು ತಂದೆ ಶಿವುರಾಯ್ನು ಗೋಕುಲಾಕಾರ

ಶಿವನ ಗೋಕುಲದಲ್ಲಿ ನಿಮ್ಮು ತಂದೆ ಶಿವರಾಯ ಇರುವೋದು ಮಗನೆ

ಹೋಗಿ ಆವರಾ ನೀರ್ ಕೇಳಿ ಬಾರೋ .

ಕೈಲಾಸುದಲ್ಲಿ ನಿಮ್ಮು ತಂದೆ ಪರ ಶಿ ಇರುತ್ತಾರೆ. ಹೋಗಿ ನಿಮ್ಮ ತಂದೆ ಶಿವುರಾಯುನ್ನ ನೀರ್ ಕೇಳಿಪ್ಪ ಮಗುನೇ

ಈಗ ಕೈಲಾಸಕೀಗ ವಾದಾನೀರಣ್ಣ

ಕೈಲಾಸ ಪುರಕೆ ಹೋದಾನೀರಣ್ಣ

ಶಿವನ ಗೋಕುಕಕೆ ಹೋದಾನೀರಣ್ಣ

ತಂದೆ ಶಿವುನೀಗೆ ಸೆರಣಾ ಮಾಡಿದನು

ತಂದೆ ಶಿವುನೀಗೆ ಸೆರಣಾ ಮಾಡಿದನು

ಯಾತುಕ್ಕೆ ಬಂದೂ ನನ ಚಿಕ್ಕು ಮಗುನೆ

ತಂದೆ ನನ ತಾಯಿ ಗವರಮ್ಮ ಸೂತುಕ್ಯಾಗವಳೇ

ನನ್ನ ಚಿಕ್ಕು ತಾಯಿ ಗಂಗಮ್ಮ ನನ ತಾಯಿ ಗವರಿ

ಅವುದು ಹೂವಿನಾ ಮಾತೀಗೆ ಹೂಡು ರಾತೀ ತಂದೆ

ಅವುದು ಹೂವಿನ ಮಾತೀಗೆ ಹೊಡುದಾರೇ ತಂದೆ

ನನ ತಾಯಿ ಗವರಮ್ಮ ಸೂತಕಾಗ್ಯವರೆ

ಗಂಗೆ ನೀರು ಮಾಯ ಮಾಡಿ ಅವುತು ಕೂತವರೆ

ನೀರಾ ಕೊಡು ಬಾರೊ ನನ ತಂದೆ ಶಿವನೆ

ಮಗುನೇ ಈರಣ್ಣ .ಬೂಮಂಡ್ಲುಕ್ಕೆ ಗಂಗೆ . ಗಂಗೆಯಂತ್ರ ಬೂಮಂಡ್ಲಕ್ಕೆ ದೊಡ್ಡೋಳು ಅವಳ್ಳಿ ಅಂದ್ಮೇಲೆ

ಇಲ್ಲುದಾ ನೀರಾ ನಾನೆಲ್ಲಿ ತರಲಿ

ನನಿಗಿಂತ ಮೇಲು ಗಂಗಮ್ಮ ಮಗನೇ

ಏನು ಮಾಡಾಲೊ ಏನು ತಂದೆ ಶಿವನೆ

ಈರಣ್ಣ .ಮಗುನೇ ಈರಣ್ಣ ..ಗಂಗಿಲ್ದಿ ಮ್ಯಾಲೆ ನಾನು ನೀರ ತರಾಕಾಗಾದಿಲ್ಲ ನಿನ್ನ ತಾಯಿಗೋಗಿ ಹೇಳು ಯೇನಂತ .? ಯೇನಂತ ಹೇಳು ಅಂದ್ರೆ .

ನೀವು ಸವತಿ ಮಚ್ಚರುವ ಮರಿಯಾರೋಗೇಳು

ಅವುರು ಸವತಿ ಮಚ್ಚರನ ಮರಿಯಾಲೇಗೇಳು

ಸೂಜುಗಲ್ಲ ಗುಡ್ಡದಲ್ಲಿ ಚಿಕ್ಕು ತಾಯಿ ಗಂಗೆ

ನೀರನೆಲ್ಲ ಮಾಯ ಮಾಡಿ ಅವತೂ ಕೂತವಳೆ

ಗಂಗಿದ್ದ ಮನಿಗೆ ಹೋಗಿ ನೀನು ತಾಯಿ ಗವರಮ್ಮ ಮಗುನೆ

ಹೋಗಿ ಅವಳ ಬಿದ್ದು ಬೇಡೋ ಕೇಳು

ಅವಳ ಕಾಡೀ ಬೇಡಿ ಮಗನೆ ನೀರು ಕೇಳಾಕೇಳು

ನಿನ್ನ ತಾಯಿ ಗವರಮ್ಮ ಮಗನೆ .ನಿನ್ನ ಚಿಕ್ಕು ತಾಯಿ ಗಂಗಮ್ಮ ಇರೋ ಮನಿಗೋಗಿ

ಅವಳ್ನ ಕಾಡಿ ಬೇಡಿ ನೀರ್ ಕೇಳಿ ಕೇಳು . ಸೆರಣಾರ್ತಿಯಾಗಿ ದೈನೋ ಅಂತ ಬಿದ್ದು ಬೇಡೋಕೇಳು .

ಆಗ ಗಂಗಮ್ಮ ನೀರಾ ಕೊಡುತಾಲೇ ಮಗುನೆ

ನಿನಗಿಗೆ ಸವತಿ ಮಚ್ಚರವ ಮರೆಯಾಲೊಗೇಳಿ

ಆಗ ತಾಯೀಯ ಬಳಿಗೆ ಬಂದಾನೀರಣ್ಣ

ಅವ್ವ ಬಾರವ್ವ ನನು ತಾಯಿ ನನ್ನವ್ವ ಗವರಿ

ಇಲ್ಲಿಗೆ ಸವತಿ ಮಚ್ಚರುವ ಮರಿಯಮ್ಮ ತಾಯಿ

ಸೂಜುಗಲ್ಲ ಗುಡ್ಡದಲ್ಲಿ  ಚಿಕ್ಕ ತಾಯಿ ಗಂಗಮ್ಮ ಅವುತು ಕೂತವರೆ

ಗಂಗೇಯ ಬಳಿಗೆ ಹೋಗಾನ ಬಾರೇ

ಅವಳ ಬಿದ್ದು ಬೇಡಿ ತಂದು ನೀರು ಕೇಳೋದು

ಅವಳ ಕಾಡೀ ಬೇಡೀ ತಾಯಿ ನೀರು ಕೇಳೋದು

ಆಗ ಮಗುನ ಮಾತ್ ಕೇಳಿ ಗವರಮ್ಮ  .

ಗಂಗಿದ್ದ ಬಳಿಗೆ ಹೋಗುತಾಳೆ ಗವರಿ

ಗಂಗಿಗೆ ಎರಡು ಕೆಯತ್ತಿ ಸೆರಣಾ ಮಾಡಿದುಳು

ಗಂಗಿಗೆ ಎರಡು ಕಯತ್ತಿ ಸೆರಣಾ ಮಾಡಿದಳು

ಗಂಗೇ ನೀರು ಕೊಟು ಬಾರೆ ನನು ತಂಗಿ ಗಂಗೆ

ಇಲ್ಲಿಗೆ ಸವತಿ ಮಚ್ಚರವ ಮರೆಯಾನ ಬಾರೇ

ನೀರು ಕೊಡು ಬಾರೆ ನನ ತಂಗಿ ಗಂಗೆ

ಮಾತುನಾಡೋದಿಲ್ಲ ಗಂಗಮ್ಮ ಶಿವನೆ

ಅಡ್ಡುಮಾರೆ ತಕ್ಕಂದು ಕೂತವರೆ ಗಂಗೆ

ಗಂಗೆ ಕಯ್ಯಾ ಮುಗಿದು ಕಾಲಿಗೇ ಬಿದ್ದೇನು..

ಆಗ ಅಕ್ಕ ಗವರಿ ಬಿದ್ದು ಬೇಡುತಿರೋದು ನೋಡಿ ಗಂಗಮ್ಮ

ಗಂಗಮ್ಮ ಬಾಸೇ ಕೊಟ್ಟರೆ ನಿನಗೆ ನೀರ್ ಕೊಡಾತೀನಿ

ನೀನು ಬಗುವಂತನಾಣೆ ಬೂಮಿ ತಾಯಿಣೆ

ನೀನು ಬಗುವಂತನಾಣೆ ಬೂಮಿ ತಾಯಾಣೆ

ಶಿವುರಾಉುಉನ ಕೊಡುತ್ತೀನಿ ಅಂತ ಹೇಳಬೇಕು. ಶಿವರಾಯ ನಿನಿಗೆ ಹೇಗೆ ಗಂಡನೋ ನನಿಗೂ ಹಾಗೆ ಗಂಡ ಅನ್ನದಾಗಿ ಹೇಳಬೇಕು. ನೀನು ಶಿವರಾಯನ ನನಿಗೆ ಕೊಟ್ಟರೆ ನಾನು ನಿನಿಗೆ ನೀರು ಕೊಡುತ್ತೀನಿ ಅಂತಾಳೆ ಗಂಗಮ್ಮ .

ಆಗ .ಗವರಮ್ಮ,,,,,,ಶಿವರಾಯ್ನ ಕೊಡ್ತೀನಿ ಅಂತಾ .

ಈಗ ಹೊರಕಯ್ಯ ಬಾಸೆ ಕೊಡುತಾಳೆ ಗೌರಿ

ಹೊರಕಯ್ಯ ಬಾಸೇ ಮಾಡಾಳು ಗವರಿ

ತಿಳಿಯಾನಿಲ್ಲ ಗಂಗಮ್ಮ ಶಿವನೆ

(ಹೊರಕೈಬಾಸೆ.. ಅದು ನಂಬಿಕಿಲ್ಲ. ಹೊರಕ್ಕೆ ಬಾಸೆ ನಂಬಿಕೆ ಬರುದಿಲ್ಲ. ಹಿಂಗಂದಳು ಮತ್ತೆ ತಿರುಗಿ ಬಾನೆ ಕೊಟ್ಲು ಈಗ ಇದು ಗಂಗೆಮ್ಗೆ ತಿಳಿಸಿಲ್ಲ.)

ಈಗ ಜಲಾಕದೇವುರು ಬಳಿಗೆ ಹೋಗುತಾಳೆ ಗಂಗೆ

ಈಗ ಜಲಾಕದೇವುರು ಬಳಿಗೆ ಹೋಗುತಾಳೆ ಗಂಗೆ

ಜಲುವುಕ್ಕೆ ಬರುವಂಗೆ ತಡಿ ಹೊಡಿಯುತಾಳೆ

ಜಲವುಕೆ ಬರುವಂಗೆ ತಡೆ ಹೊಡಿಯುತಾಳೇ

ವಾಸುದೇವನ ಬಳಿಗೆ ಹೋಗುತಾಳೆ ಗಂಗೆ

ಗಾಳೇ ಬೀಸೋ ಅಂಗೆ ಬಾಸೇ ತೆಗುದಾಳು

ಜಲವುಕ್ಕ ಬರುವಂಗೆ ತಡಿಯ ಹೊಡೆದಾಳು

ಜಲವೆಲ್ಲ ಉಕ್ಕಿ .ಕಟ್ಟೆ ಕಾವಲೇಲಿ ನೀರು ಉಕ್ಕಿ ಹರುದಾವೇ

ಎಲ್ಲಿ ಕಡೇಲು ನೀರು ತುಂಬಿ ತುಳುಕ್ಯಾವೇ

ಗಂಗಾ ದೇವಿ ಸೆರಣೆ .ಜಲಉಕ್ಕಿ ಹಳ್ಳ ಕೊಳ್ಳಲ್ಲಿ ಸಮುದ್ರ ಹರುದಂಗೆ ಹರಿತಾದೆ. ಗೌರಮ್ಮ ಈಗ ಸೂತಕ ಕಳೀಬೇಕು..

ಮಾರುದ್ದ ನೀರಾ ಹಾದಾರು ಗವರಿ

ಮೂರಾ ಮುಳಕಾ ಹಾಕಿದರು ಗವರಿ

ಇವಳು ನೀರ ಮಿಂದಾ ಗಳಿಗೆ ಸೂತಕ ಶಿವನೆ ಕಳೆದೋತು ಶಿವನೆ

ಮೂರಾ ಮುಳುಕೆ ಮುಳುಕಾದ ಮ್ಯಾಲೆ ಸೂತುಕ ಕಳೆದೋತು.

(ಮೂರು ಮುಳುಕು ಮುಳಿತಿದ್ ಮ್ಯಾಲೆ ಗೌರಮ್ಮ ಸೂತಕ ಇಲ್ಲಿ ಕಳಿದೋಯ್ತು ಅನ್ನಗಾಗಿ ತಿರುಗಾ ಕೀಟ್ಲೆ .ತಂಗೆ ಮ್ಯಾಲೆ.)

ನೀರಿನಲ್ಲಿ ನಿಂತ್ಗಂಡು ಯೇನಂತಾರೆ ಗೌರಮ್ಮ

ಗಂಗೆ ಎತ್ತು ಕುಡುತಾರೆ ಕಾನೆ ಬತ್ತಿ ಕೂಡ್ತಾರೆಕಾನೆ

ಯಾರಾದ್ರು .

ಕೂಡಿದ ಗಂಡಾನ ಕೊಡುತಾರ ಹೇಳೇ

ಕೂಡಿದಂತ ಗಂಡಾನ ಕೊಡುವಾದು ದಿಟುವಾ

ಎತ್ತು ಕುಡುವಾಗ ಕಾನೇ ಬತ್ತಾ ಶುರುವಾನಾ

ಯಾರಾದ್ರು ಕೂಡಿದಾ ಗಂಡಾನ ಕೊಡುವಾರೇ ಗಂಗೆ

(ನನ್ ಗಂಡ್ಗೆ ವರ್ತು ಶಿವ ನಿನ್ ಗಂಡಲ್ಲ ..ಎತ್ತು ಕೊಡ್ತಾರೆ. ಬತ್ತ ಕೊಡ್ತಾರೆ. ಕೂಡಿದ್ ಗಂಡನ್ನ ಯಾರಾದ್ರು ಕೊಡ್ತಾರ. ಎತ್ತು ಕೊಡುಗಾಡ ಬತ್ತಿ ಕೊಡುಗಾಡ ಕೂಡಿದ ಗಂಡ ಕೊಡು ಗಾಡಾದಾನ, ಬೂಮಂಡ್ಲುದಲ್ಲಿ ಅದ ಯಾರಾದ್ರು ಕೊಡ್ತಾರೇನೆ? ನೀರಿನೊಳುಗ ನಿಂತ್ಗಂಡು ಗೌರಿ ಲಿಂಗಂದುದ್ ಗಂಗಿಗೆ ಸಿಟ್ಟು ಬಂತು. ಈಗ )

ಗಂಗೆ ನೀರ ಮುಳುಕೆ ನೋಡು ಶಿವನೇ

ಬಾಯಿಂದ ನೀರ ಗಂಗೇಗೆ ಉಗುದ್ರು

ಈಟುದ್ದ ನೀರು ಓಟುದ್ದ ಆತೂ

ಈಟುದ್ದ ನೀರು ಓಟುದ್ದ ಆತೂ

ಈಗ.. ನೀರಲ್ಲಿ ಗವರಮ್ಮ ತೇಲಾಡುತಾರೆ

ಗವರಮ್ಮ ಶಿವನೆ ತೇಲಾಡುತಾರೆ

ಇದು ಪಾರ ಶಿವನೀಗೆ ಆರುವಾಯಿತಲ್ಲೊ

(ಬಾಯ್ನಲ್ಲಿ ನೀರ್ ತುಂಬ್ಕ್ಯಂಡು ಗಂಗಮ್ಮ .ಯಾವಾಗ ಗವರಮ್ಮ ಮ್ಯಾಲೆ ಉಗುದ್ರೋ .ಎತ್ತುಕೊಡಾದುಂಟು. ಬತ್ತಿ ಕೊಡಾದುಂಟು. ಕೂಡಿದ ಗಂಡನ್ನ ಯಾರಾರ ಕೂಡ್ತದೇನೆ. ಅಂತ ಅಂದ್ಲೊ ಇಲ್ವೇ .ಬಾಯಲ್ಲಿ ನೀರ ಉಗುದ್ಲು. ನೀರಲ್ಲಿದ್ದಲ್ಲಿ ಗೌರಮ್ಮ ನೀರ್ ಏಕಂಡುವಾಗಿ ಉಕ್ಕಿ ಹರಿಯಾಕಾತು. ಗೌರಮ್ಮ ನೀರಲ್ಲಿ ತೇಲಾಡ್ತಾವೆ ಈಗ ಈವಾಳು ಈಗೋಳು ಶಿವುನಿಗೆ ಅರುವಾತು.)

ಗವರಮ್ಮ ಶಿವನೆ ತೇಲಾಡು ತನಕೆ

ಆಲ್ಲೀಗೆ ಪರಶೀವ ಇಳುದಾರು ಶಿವನೆ

ಅಲ್ಲೀಗೆ ಪರಶೀವ ಇಳಿದಾರು ಶಿವನೆ

ಗೌರೀಯ ಹಿಡಿದು ದಡುಕೇ ಮಡುಗಿದು

ಗೌರೀಯ ಹಿಡಿದು ದಡುಕೇ ಮಡುಗಿದು

ನೀರ್ ಮುಳುಗಿ ಗಂಗೇ ಹಿಡುದವರೆ

ಶಿವ ನೀರಾ ಮುಳುಕೆ ಗಂಗೇ ಹಿಡುದವರೆ

ನೆತ್ತಿ ಮ್ಯಾಗುಳ ಜಡೆಯ ಒಡುದಾರು ಶಿವನೆ

ನೆತ್ತಿ ಮ್ಯಾಗುಳ ಜಡೆಯ ಒಡುದಾರು ಶಿವನೆ

ಗಂಗೇಯ ಹಿಡಿದ ಜಡೆಗೇ ಕಟ್ಟಿದಲು

ಗಂಗೇಯ ಹಿಡಿದು ಜಡೆಗೇ ಕಟ್ಟಿದಳು

ನಾಗಾ ಸರ್ಪನ ಕರು ದಾರು ಶಿವನೆ

ಗಂಗೀಗೆಲು ಓಡಿಸು ಸರಪಾನ ಹಿಡಿದು ಕಟ್ಟಾರು ಶಿವನೆ

ಗಂಗೇ ಜಡೇವಡುದು ಗಂಗೇಯ ಜಡೇ ವಳುಗೆ ಮಡಗಿದ್ರು. ಸರುಪನ ಕರೆದು ಗಂಗಿಗು ಜಡಿಗ್ಗು ಹಿಡಿದು ಕಟ್ಟಿದ್ರು.

ಈಗ ಚಂದ್ರಾ ದೇವಾರ ಕರುದಾರು ಶಿವನೆ

ಚಂದ್ರಾ ದೇವಾರ ಕರುದಾರು ಶಿವನೆ

ಜಡೆ ಮ್ಯಾಲೆ ಚಂದ್ರಾನ ಕಾವಲ ಇಟ್ಟುವರೆ ಶಿವನೆ

ಶಿವನ್ ತಲೆ ಮ್ಯಾಲ್ ಚಂದ್ರನ್ನಲ್ಲ ಗಂಗೀಗ್ ಕಾವ್ಲು

ಚಂದ್ರಾ ದೆಔರ ಗಂಗೀಗೆ ಕಾವಾಲ ಜಡಿ ಮ್ಯಾಲಿಟ್ಟ

ಈಗ ಗವರೀಯ ಹಿಡಿದು ತೊಡೆ ಮ್ಯಾಲಿಟ್ಟು

ಈಗ ಜಡೆ ಮ್ಯಾಲೆ ಗಂಗೆ ತೊಡೆ ಮ್ಯಾಲೆಡ ಗವರಿ

ಜಡೆ ಮ್ಯಾಲೆ ಗಂಗೆ ತೊಡೆ ಮ್ಯಾಲೆ ಗವರಿ

ಅವರ ಇಟುಗಂಡು ಶಿವನೆ ಮಾಯುವಾದನು.

ಪರಮಾತ್ಮ ಮಾಯವಾಗಿ ಹೋದಾನು. ದೇವಮಾನ್ಯ ಸೆರಣ್ರೆ ನಿಮಿಗೆಲ್ಲ ಸೆರಣ್ಣಪ್ಪ ಇದನ್ನು ಹಾಡಿದವರು ಯಾರು ಅಂದ್ರೆ ಹೊಳೇನರಸೀಪುರದ ತಂಬೂರಿ ಮರಿಯಪ್ಪ ಇದನ್ನು ಹಾಡಿಸಿದವರು ಯಾರು ಅಂದ್ರೆ ಹನುಮನಹಳ್ಳಿ ಮಲ್ಲೇಶ್‌ಪ್ನೋರು. ಮಲ್ಲೇಶಪ್ನೋರು ಇದನೆಲ್ಲ ಇದ್ದಾರೆ ಎಲ್ಲಾ ದೇವೆಮಾನ್ಯರಿಗೂ ಸೆರಣಪ್ಪ ಸೆರಣೋ .

# ಮಡಿಕೇರಿ ನಿಂಗವ್ವ

ಅಯ್ಯ ಏಳುತಾನೆ ನಿಂಗರಾಜ, ಮೇಲಾದ ಕುದುರೇಯಾ? ತಂದನ್ನಾ ತಾನಂದೇನಾನ

ಅಯ್ಯ ಮಡಿಕೇರಿ ನಿಂಗರಾಜು, ಬಳ್ಳಾರಿ ಹೋಗುತಾನೇ।

ಮಡಿಕೇರಿ ನಿಂಗರಾಜು, ಬಳ್ಳಾರಿ ಹೋಗುತಾನೇ।

ಅಯ್ಯ ತಂಗೇಯ ಅರುಮನಿಗೆ, ಹೋಗುತಾನೆ ನಿಂಗರಾಜು।

ತಂಗೇಯ ಅರುಮನಿಗೆ, ಹೋಗುತಾನೆ ನಿಂಗರಾಜೂ।

ತಂಗೆ ಬಂದಂತ ಅಣ್ಣತ

ತಂಗೆ ಬಂದಂತ ಅಣ್ಣಾನ ಬಾಚಿಕೊಳ್ಳ ತಬ್ಬಿಕೊಂಡೂ।

ಬಂದೇನೂ ನಮ್ಮ ಣ್ಣ ಬೋಗುವೆಲ್ಲ, ಚಂದುವೇನೋ ನಮ್ಮಣ್ಣ

ನಿನ್ನ ಆರುಮನೆ ಬೋಗುವೆಲ್ಲ, ಚಂದುವೇನೋ ನಮ್ಮಣ್ಣ

ನಿನ್ನ ಆರುಮನೆ ಬೋಗುವೆಲ್ಲ, ಚಂದುವೇನೋ ನಮ್ಮಣ್ಣ

ಅಣ್ಣ ಅತ್ತಿಗೆ ಮಲ್ಲಿಗೆಮ್ಮ ನೋಡ, ಬೋಗುವೆಲ್ಲ ಚಂದುವೇನೊ।

ಬಂದಲ್ಲ ನನ್ನಣ್ಣ ಬೋಗುವೆಲ್ಲ ಚಂದುವೇನೋ।

ಬಂದೇನು ನನು ತಂಗಿ ಬೋಗುವೆಲ್ಲ ಚಂದ ಕಾನೇ।

ತಂಗೆ ನನ ಬೋಗ ಚಂದಾ ನಿನ್ ಬೋಗ ಚಂದುವೇನೇ।

ನಿನ್ನ ಅತ್ತಿಗೆ ಮಲ್ಲಿಗೆಮ್ಮ ನೋಡ ಬೋಗುವೆಲ್ಲಿ ಚಂದ ಕಾನೇ

ನಿನ್ನ ತಪ್ಪಿರಲ್ಲಿ .

ತವುರಲ್ಲಿರೂವಂತ ಎಲ್ಲಾರು ಬೋಗ ಕಾನೇ।

ಬಾರೇ ನನ್ನ ತಂಗೆ ತವರೀಗೆ ಹೋಗಾನು।

ಬಾರೇ ನನ್ನ ತಂಗೆ ತವರೀಗೆ ಹೋಗಾನಾ।

ತಂಗೆ ತವರಾಣೆ ನೀನೂ ತೊರುದಲ್ಲೇ ನನ್ನ ತಂಗೇ।

ನೀನು ಹುಟ್ಟಿದಂತ ಮನೆಗೆ ಮರೆಯಾಗಿ ಹೋದೆಯಲ್ಲೇ।

ನೀನು ಸೇರಿದಂತೆ ಮನಿಗೆ ಸೆರೆಯಾಗಿ ಸಿಕ್ಕಿದಲ್ಲೇ।

ನಿನ್ನ ಅತ್ತೆ ಮಾವಾರೀಗೆ ನೀನು ಆಲಾಗಿ ಸೇರಿದಲ್ಲೇ

ನಿನ್ನ ಅತ್ತೆ ಮಾವರಿಗೆ ತಂಗಿ ಆಳಾಗಿ ಸೇರಿದಲ್ಲೋ।

ನೀನು ಕೂಡಿದಂತ ಗಂಡುಗೆ ಕುರಿಯಾಗಿ ಸಿಕ್ಕದಲ್ಲೇ।

ನೀನು ಕೂಡಿದಂತ ಗಂಡುಗೆ ನೀನು ಕುರಿಯಾಗಿ ಸಿಕ್ಕಿದಲ್ಲೇ।

ಬಾರೇ ನನ್ನ ತಂಗಿ ತವರೀಗೆ ಹೋಗಾನಾ।

ಅಣ್ಣ ತವರಾಸೆ ನನಿಗೆ ನನ್ನಿಕ್ಯಾಕಣ್ಣ ಹೋಗಣ್ಣಾ।

ಅಣ್ಣ ತವರಾಸೆ ನನಿಗೆ ನನ್ನಿಕ್ಯಾಕಣ್ಣ ಹೋಗಣ್ಣ।

*1 ಈ ಗುರುತು ಬರುವ ಕಡೆಯಲಲ್ಲ ಈ ಸೊಲ್ಲನ್ನು ಹಿಮ್ಮೇಳದವರು ಹಾಡುತ್ತಾರೆ.

ಅಣ್ಣ ಮದಿವೆ ಮಾಡಿ ನನ್ನ ಇಲ್ಲೀಗ್ ಹನ್ನೆರಡು ವರ್ಸಾ।

ನನ್ನ ಮದಿವೆ ಮಾಡಿ ಅಣ್ಣ, ಇಲ್ಲೀಗನ್ನೆರಡು ವರ್ಸಾ।

ನನ್ನ ಕರೆಯಾ ಕಳಿಸಿ, ಬಂಊದ ನನ್ನ ನೋಡಲಿಲ್ಲಾ

ನನ್ನ ನೀ ಕಳಿಸಿಲ್ಲ ಬಂದು ನೀನು ಕರೀನಿಲ್ಲಾ।

ಅಣ್ಣ .ತಾಯಿ ಸತ್ತಾಗೇಳಿಲ್ಲ, ತಂದೆ ಸತ್ತಾಗ್ ಕರೀನಿಲ್ಲಾ।

ನನ್ನ ತಾಯಿ ಸತ್ತಾಗೇಳಿಲ್ಲ, ತಂದೆ ಸತ್ತಾಗ್ ಕರೀನಿಲ್ಲಾ।

ಅಂತ ತಾಯಿ ತಂದೆ ಸತ್ತ ಮೇಲೆ, ತವುರಾಸೆ ನನ್ನಿಗ್ಯಾಕೇ।

ಅಣ್ಣ, ತಾಯಿ ತಂದೆ ಸತ್ತ ಮೇಲೆ..ತವುರಾಸೆ ನನಗ್ಯಾಕೆ।

ನನ್ನ ಯತ್ತವ್ವ ಇದ್ದರೇ ನೆತ್ತಿಗೆಣ್ಣೇ ಒತ್ತೀ।

ನನ್ನ ಯತ್ತವ್ವ ಇದ್ದರೇ ನನ್ನ ನೆತ್ತಿಗೇಯ ಒತ್ತಿ।

ಯತ್ತವ್ವ ..ನೆತ್ತಿಗೆಣ್ಣೆಯ ಒತ್ತಿ ನಡುಡಾರೀಗ್ ಕಳಿಸೋಳು।

ನೆತ್ತೇಗೆಣ್ಣೆಯ ಒತ್ತೀ ನಡುದಾರೀಗ್ ಕಳಿಸೋಳು।

ನನ್ನ ಹಡುದವ್ವ ಇದ್ದರೆ ಹಾಲು ಅನ್ನ ಇಕ್ಕಾಳೂ।

ಹಡುದವ್ವ ಹಾಲೂ ಅನ್ನಾ ಇಕ್ಕಿ ನಡುದಾರೀಗ್ ಕಳಿಸೋಳು।

ಯತ್ತವ್ವ ..ನೆತ್ತಿಗೆಣ್ಣೆಯ ಒತ್ತಿ ನಡುಡಾರೀಗ್ ಕಳಿಸೋಳು।

ಅಂತ ತಾಯಿ ಇರೋಗಂಟ ತವ್ರುರಾಸೆ ನನಗಣ್ಣ।

ಅಂತ ತಾಯಿ ಇರೋಗಂಟ ತವ್ರುರಾಸೆ ನನಗಣ್ಣ।

ಅಣ್ಣ ತಂದೆ ಇರೋಗಂಟ ಒಳುಗಾದೆ ಆಸ್ಯಣ್ಣ।

ಅಣ್ಣ ತಾಯಿದ್ರೆ ತವರಾಸೆ ತಂದಿದ್ರೆ ಒಳುಗಾಸೇ।

ನನ್ನ ತಾಯಿದ್ರೆ ತವರಾಸೆ ತಂದಿದ್ರೆ ಒಳುಗಾಸೇ।

ಅಂತ ತಾಯಿ ತಂದೆ ಸತ್ತ ಮೇಲ ತವುರಾಸೆ ನನಿಗ್ಯಾಕೇ।

ಅಂತ ತಾಯಿ ತಂದೆ ಸತ್ತ ಮೇಲೆ ತವುರಾಸೆ ನನಿಗ್ಯಾಕೇ।

ಅಣ್ಣ ತಾಯಿಲ್ಲ ತವರೀಗೆ ಬರುವೋದು ತರುವಲ್ಲಾ।

ಅಣ್ಣ ತಾಯಿಲ್ದ ತವರೀಗೆ ಬರುವೋದು ತರುವಲ್ಲಾ।

ತವ್ರುರಾಣೆ ನನಿಗ್ಯಕೆ ನನಿಗ್ಯಾಕೋಣ

ಅವ್ವ ಯಾಕೇ ನನ್ನ ತಂಗಿ ಗೋಳು ದುಃಖ ಮಾಡುತೀಯಾ

ಯಾಕಮ್ಮ ನನು ತಂಗಿ ಗೋಳು ದುಃಖ ಮಾಡಿತೀಯಾ

ತಂಗಿ ನಾನು ಇರೋಗಂಡ ನಿನಗೇನು ಬಯವಮ್ಮ

ಬಾರೇ ನನ್ನಾ ತಂಗಿ ತವುರೀಗೆ ಹೋಗಾಗಿ,

ನೀನು ಮದ್ಯವಾಗಿ ಬಂದ ಮೇಲೆ ನನ್ ತಂಗೀ

ನೀನು ಮದುವ್ವಾಗಿ ಬಂದ ಮೇಲೆ .

ಮರುಗಾ ಮಲ್ಲಿಗೆ ಗೀಡಾ ಒಣಗಿ ಬಾಡೋಗ್ಯಾದೇ।

ತಂಗೆ ಸುರುಗಿ ಶ್ಯಾವಂತೀಗೆ ಸುರುಳಿ ಬಾಡೋಗ್ಯವಲ್ಲ

ಬಾರೇ ನನ್ನ ತಂಗಿ ತವರೀಗೆ ಹೋಗಾನಾ।

ತಂಗೆ ಬಾವ ಬಸಪ್ಪನೋರು ಎಲ್ಲಿಗೆ ಹೋದರು ತಂಗೀ।

ಬಾವ ಬಸಪ್ಪನೋರು ಎಲ್ಲಿಗೆ ಹೋದರು ತಂಗೀ।

ಅಣ್ಣ ಅವರು ಯಾಲಕ್ಕಿಯಾನಾಡಿಗೆ, ಮಲೆನಾಡೀಗೊಗ್ಯವರೇ

ಅವರು ಯಾಲಕ್ಕಿಯಾನಾಡಿಗೆ, ಮಲೆನಾಡೀಗೊಗ್ಯವರೇ।

ಅಂತ ದೊರೆಯಿಲ್ಲದ ಮನೆಯಲ್ಲಿ ಕರಿಯಾಕೆ ಬಂದ್ಯಲ್ಲಾ।

ನನ್ನ ದೊರೆಯಿಲ್ದ ಮನೆಯಲ್ಲಿ ಕರಿಯಾಕೆ ಬಂದ್ಯಲ್ಲಾ।

ನನ್ನ ದೊರೆಯಿಲ್ದ ಮನೆಯಿಂದ ನಾನೆಂಗೆ ಬರುಲಣ್ಣಾ।

ನನ್ನ ಪುರುಸಿಲ್ದ ಮನೆಯಿಂದ ನಾನೆಂಗೆ ಬರುಲಣಾ।

ಅಣ್ಣಾಗರಿವಾಣಾ ಬೆಳಗಿ

ಅಣ್ಣಾಗರಿವಾಣಾ ಬೆಳಗಿ ಹಾಲು ಅನ್ನ ಇಕ್ಕುತ್ತಾಳೇ।

ಅಣ್ಣ ತಂಗಿ ಮಲ್ಲಿ ಹಾಲು ಅನ್ನ ಉಣ್ತಾ ಯೇನು ದ್ಯಾನ ಮಾಡುತ್ತಾನೆ .ಅಣ್ಣಯ್ಯ ಅಣ್ಣಯ್ಯ ಯಾಲಕ್ಕಿಯಾನಾಡಿಗೆ ಆಳಿಗೆಲ್ಲ ಮರೆಯಾಗಿ ಮಲೆನಾಡಿಗೋಗಿದ್ದಾರೆ. ಈಗ ನನ್ನ ದೊರೆಯಿಲ್ದ ಮನೆಯಲ್ಲಿ ನೀನು ಕರಿಯಾಕೆ ಬಂದದ್ದೀಯ. ನನ್ನ ಪುರಸಿಲ್ದ ಮನೆಯಲ್ಲಿ ನನ್ನ ದೊರೆಯಿಲ್ದ ಮನೆಯಲ್ಲಿ ನಾನೆಂಗೆ ಬರುಲಣ್ಣಾ ಅಂತಾ ನೋಡು

ಅಣ್ಣಾಗರಿವಾಣ ಬೆಳಗಿ ಹಾಲು ಅನ್ನ ಇಕ್ಕುತ್ತಾಳೇ

ಅಣ್ಣ ತಂಗಿಯಲ್ಲಿ .

ಹಾಲು ಅನ್ನ ಉಣ್ಣುತಾ ಏನು ಜಾನಾ ಮಾಡುತ್ತಾನೇ

ತಂಗಿಯಲ್ಲಿ ಹಾಲು ಅನ್ನ ಉಣ್ಣುತಾ ಏನು ಜಾನಾ ಮಾಡುತ್ತಾನೇ।

ನನ್ನ ಮಡಿಕೇರಿ ಒಳಗೆ ನಾನು ಅರುಮಾನೆ ಕಟ್ಟುವಾಗ

ಮಡಿಕೇರಿ ಒಳಗೆ ನಾನು ಅರುಮಾನೆ ಕಟ್ಟುವಾಗಾ।

ಶಿವುನೆ ಕಟ್ಟಿ ಕಟ್ಟಿ ನಿಲ್ಲಿಸೂವೆ ಮುರುದು ಅದು ಬೀಳಾದೂ।

ಕಟ್ಟಿ ಕಟ್ಟಿ ನಿಲ್ಲಿಸೂವೆ, ಮುರುದು ಅದು ಬೀಳಾದೂ।

ತಂಗಿ ಮಲ್ಲಿ ಅಣ್ಣ ಹಾಲು ಅನ್ನ ಉಣ್ಣುವಾಗ ಯೇನು ಜಾನ ಮಾಡುತ್ತ ಅವನೆ. ನಾನು ಮಡಿಕೇರೀಲಿ ಅರಮನೆ ಕಟ್ಟಿ ಕಟ್ಟಿ ನಿಲ್ಲಿಸೂವೆ.. ಅದು ಬಿದ್ದು ಬಿದ್ದು ಹೋಗಾದು. ಯಾಕಿಂಗ್ ಅರಮನೆ ಬೀಳ್ತಾದೆ ಅಂತ ಹೋಗಿ ದೋಸಿಗ್ರಾನ್ ಕೇಳಿದ್ರಲಿ ಪಂಚಾಂಗ ತಗುದು ದೋಸಿಗ್ರೇಳುತ್ತಾರೆ ಯಾಕಿಂಗ್ ಅರಮಾನೆ ಬೀಳ್ತಾದೆ ಅನ್ನದುಕೆ ದೋಸಿಗ್ರೇನ್ ಹೇಳುತ್ತಾರೆ. ದೋಸಿಗ್ರೇನು ಹೇಳಿದ್ರು ಅಂದ್ರೆ..

ಬಡಗ್ಲಾಗ್ ಬಾನ ಚಿಕ್ಕಿ ಮೂಡಿ ಮೂಡ್ಲಾಗ್ ಕೇತು ಮಾಡೀ।
ಮುಂಗೋಳಿ ಕೂಗಿ ಮಾಡಲು ಕೇಪೇರೊ ವತ್ತಿನಲ್ಲೀ।
ನನ ತಂಗೆ ಗಂಡುನ ಮನೆ ಬಲಿಯಾ ಕೇಳ್ಳತಲ್ಲಾ।
ನನ್ನ ತಂಗೆ ಗಂಡನ ಮನೆ ಬಲಿಯಾ ಕೇಳ್ಳೈತಲ್ಲಾ।

ತಂಗೆ ಗಂಡುನ್ ಬಲಿ ಕೇಳಾದೆ. ಅವುನ್ ತಂದು ಅರುಮನೆಗೆ ಬಲಿ ಕಡುದ್ರೆ ಮುಂದೆ ನಿನ್ನ ಸಂತಾನುಳಿತ್ತಾದೆ ಅಂತ ದೋಸಿಗ್ರೇಳಿದ್ದಾರೆ. ವಾವುನ್ ಬಲೀ ಕಡೀದೇ ವೋದ್ರೆ ಮುಂದೆ ನನ್ನ ಸಂತಾನ–ಮಂತಾನ ಹೋಗುತ್ತಾದೆ. ಬಾವುನಾಸೆಗೆ, ಒಬ್ಬುನಾಸೆಗೆ ಯಾಕೆ ಮುಂದೆ ನನ್ನ ಸಂತಾ–ಮಂತಾನ ಆಳು ಮಾಡಿ ಕೊಳ್ಳೀ ನನ್ನ ಬಾವ ಯಾಲಕ್ಕಿಯಾನಾಡಿಗೆ ಆಳಿಎಲ್ಲ ಮರೆಯಾಗಿ ಮಲೆನಾಡಿಗೆ ಹೋಗಿದ್ದಾನೆ. ಇಂತಾ ಬಾವಾ ಇಲ್ದ ಮನೆಯಲ್ಲಿ

ಬಾವಿಲ್ದ ಮನೆಯಲ್ಲಿ
ತಂಗೇಯ ಕರುಕೊಂಡು ತವುರೀಗೆ ನಾನೋದೇರೇ।
ತಂಗೇಯ ಕರುಕೊಂಡು ತವುರೀಗೆ ಹೋದಾರೇ।
ಮುಂದೆ ನನ ತಂಗಿ ಆಸೀಗೆ ನನ ಬಾವ ಬರುತಾನೇ
ನನ ತಂಗಿ ಆಸೀಗೆ ನನ ಬಾವಾ ಬರೂತಾನೇ।

ಬಾವಿಲ್ದ ಮನೆಯಲ್ಲಿ ತಂಗೇಯ ಕರಕೊಂಡೋಗಿ ತವರಲ್ಲಿರಿಸಿಕೊಂಡ್ರೆ ಮುಂದೆ ನನ್ ತಂಗಿ ಆಸೆಗೆ ನನ್ನ ಬಾವ ನನ್ನ ಮನಿಗೆ ಬತ್ತಾನೆ. ಅವತ್ತು ಅವುನ್ನ ಅರುಮನಿಗೆ ಬಲಿಕಡದು ನನ್ನ ಮಂತಾನ–ಸಂತಾನ ಉಳಿಸಿಕೋಡೋದು ಅಂತ ತಂಗೆ ಮಲ್ಲಿ ಹಾಲು ಅನ್ನ ಬಾನ ಉಣ್ತಾ ಜಾನ ಮಾಡುತ್ತಾನಲ್ಲೋ ದೇವಾ

ಅಣ್ಣ ಹಾಲು ಬಾನ ಉಂಡು ಮೇಲೆ .ಅಣ್ಣಗೆ .

ಬೆಳ್ಳಿಯ ತಟ್ಟೇಲಿ ವೀಳ್ಯೇವ ತರುತಾಳೇ।
ಬೆಳ್ಳಿಯ ತಟ್ಟೇಲಿ ವೀಳ್ಯೇವ ತರೂತಾಳೇ।
ತಂಗೆ ಅಣ್ಣನಿಗಿಳ್ಳೇವ್ ಇಡುವಾಗ, ತಂಗೇ ಕಯ್ಯ ಇಡುಕಂಡಾ।
ಅಣ್ಣನಿಗಿಳ್ಳೇವ್ ಇಡುವಾಗ, ತಂಗೆ ಕಯ್ಯ ಕಾಡುಕಂಡಾ।

ತಂಗೆ,,,ಹಾಲು ಬಾನ ಉಂಡಾತು. ಅಣ್ಣ ಅಂತ, ಊಟ ತೀರಿದ್ ಮೇಲೆ ಬೆಳ್ಳೀ ತಟ್ಟೇಲಿ ವೀಳ್ಯೇವು ಇಡಾಕ್ ಬಂದಾಗ ತಂಗೆ ಕಯ್ಯ ಇಡಕಂಡ.

ತಂಗೆ ಕಯ್ಯ ಇಡಕಂಡ, ಮುಂದೆ ಕೂರಿಸಿಕಂಡ।
ಬಾರೇ ನನ್ನಾ ತಂಗಿ ದರುಮಾದ ಲಿಂಗವ್ವಾ।

ತಂಗೆ ಬಾವಾ ಬಂದ್ ದೀನಾ ಬರುತಾನೆ ಬಾರವ್ವಾ।

ತಂಗೆ ಬಾವಾ ಬಂದ್ ದೀನಾ ಅಲ್ಲಿಗೆ ಬರುತಾನೆ ಬಾರವ್ವಾ।

ನಿನ್ನ ಹತ್ತು ಸುತ್ತೀನದು ಮನಿಗೆ ಮುತ್ತಿನಾ ಬೀಗಾ ಆಕೂ।

ನಿನ್ನ ಆರು ಸುತ್ತೀನರುಮನಿಗೆ ಅರುಗೀನ ಬೀಗಾ ಆಕೂ।

ತಂಗೆ ಬಣ್ಣುದು ವಾಲೆಯ ಬರೆದು ಬಾಗುಲಿಗೆ ಕಟ್ಟವ್ವಾ।

ಹತ್ತು ಸುತ್ತಿನರುಮನಿಗೆ ಮುಸತ್ತನ ಬೀಗಾ ಹಾಕು ತಂಗ್ಯೆ. ಆರು ಸುತ್ತಿನರುಮನಿಗೆ ಅರಗಿನ ಬೀಗಾ ಹಾಕು ತಂಗ್ಯೆ. ಬಣ್ಣುದು ವಾಲೆ ಬರೆದು ಬಾಗುಲಿಗೇನಂತ ಕಟ್ಟು ಅಂದ್ರೆ ನನಾ ಗಂಡ ಬಸಪ್ಪ ದೊರಿಯೇ ನಮ್ಮಣ್ಣ ಬಂದು ನನ್ನ ತವುರಿಗೆ ಕರಕೊಂಡೋಗಿದ್ದಾನೆ. ನಾನು ತವರಲ್ಲಿದ್ದೀನಿ. ಗಂಡಯ್ಯ .ನೀವು ಮಲ್ನಾಡಿಂದ ಮನೇಗೆ ಬಂದ್ ದೀನ ನನ್ನ ತವುರಿಗೆ ನೀವು ಬಲ್ಲಿ ಅಂತ.

ಬಣ್ಣುದ್ವಾಲೆ ಬರುದು ಬಾಗುಲೀಗೆ ಕಟ್ಟವ್ವಾ।

ಬಣ್ಣುದ್ವಾಲೆ ಬರುದು ಬಾಗುಲೀಗೆ ಕಟ್ಟವ್ವಾ।

ಬಾವ ಬಂದೀನಾ

ಬಾಗಿಲ ವಾಲೆ ಓದಿ ಬರುತಾನೆ ಬಾರವ್ವಾ।

ಬಾಗಿಲ ವಾಲೆ ಓದಿ ಬರುತಾನೆ ಬಾರವ್ವಾ।

ಮಟ ಮಟ ಮಂಗಳಾರ ಕರಿಯಾಕೆ ನೀ ಬಂದ್ಯಲ್ಲಾ

ಮಟ ಮಟ ಮಂಗಳಾರ ಕರಿಯಾಕೆ ನೀ ಬಂದ್ಯಲ್ಲಾ

ಅಣ್ಣ ಮಂಗಳಾರ ನಾನು ಮನಿಯಾ ಬಿಡಾದಿಲ್ಲಾ

ಅಣ್ಣ ಶುಕ್ರವಾರ ನಾನು ಪಯಣ ಮಾಡೋದಿಲ್ಲಾ।

ಅಣ್ಣ ಶನಿವಾರ ನಾನು ಬರೂತೀನಿ ನಡಿಯಣ್ಣಾ।

ಅಣ್ಣ ನಿನ್ನಾಣೇ ನನ್ನಾಣೇ ಶನಿವಾರ ಬರೂತೀನಿ।

ನನಿಗೆ ಇರೋನೊಬ್ಬ ಮಗನಾಣೆ ಶನಿವಾರ ಬರೂತೀನಿ।

(ಅಣ್ಣ ಮೋಸ ಮಾಡಿ ನನ್ನ ಮುಂಡೇ ಮಾಡಾಕ್ ಕರಿಯಾಕ್ ಬಂದವ್ನೆ ಅನ್ನೋದು ಇವುಳೂರಿವಿಲ್ಲ. ಮಂಗ್ಳಾರ ಕರಿಯಾಕ್ ಬಂದಿದ್ದೀಯ, ಮನೆ ಬುಡೋದಿಲ್ಲ, ಶುಕ್ರಾರ ನಾನು ಪಯಣ ಮಾಡೋದಿಲ್ಲ ನಿನ್ನಾಣೆ ನಾನು ಶನಿವಾರ ಬತ್ತೀನಿ. ಇರೋನೊಬ್ಬ ಮಗನಾಣೆ ಶನಿವಾರ ನಾನು ತಪ್ಪಲ್ಲ ಬತ್ತೀನಿ।

ತಂಗೆ ನಿಂಗಮ್ಮ ಯವ್ ಮಗನಾಣೆ ಇಟ್ಮೇಲೆ.. ನಾನೋಗಿ ಬತ್ತೀನಿ. ನಿನ್ ಮಗನಾಣೆ ನೀನ್ ತಪ್ಪಬೇಡ. ಶನಿವಾರ್ದ್ವೆ ಬಾರಮ್ಮ ಅಂತ.

ನಿನ್ನ ಹೆತ್ತ ಮಗನಾಣೇ ತಪ್ಪಬ್ಯಾಡಾ ನನ ತಂಗೀ।

ನಾನು ಹೋಗಿ ಬರಾತೀನಿ ಶನಿವಾರ ಬಾರಮ್ಮ।

ಈರ ಏರುತಾನೆ ನಿಂಗರಾಜು ಮೇಲಾದ ಕುದುರೇಯಾ।

ಈಗ ಮಡಿಕೇರಿ ನಿಂಗುರಾಜು ಮಡಿಕೇರೀಗೋಗುತಾನೇ।

ಇವಳಿಗೆ ವಾರವಾರ ಶನಿವಾರ ತುಂಬೇಯ ಬಂತಲ್ಲಾ

ಇವಳಿಗೆ ವಾರ ವಾರ ಶನಿವಾರ ತುಂಬೇಯ ಬಂತಲ್ಲಾ

ವಾರ ವಾರ ಶನಿವಾರ ತುಂಬಿ ಬಂತು. ಏಳೊರ್ಸುದ್ ಮಗ ದೂಪಾರ್ತಿ

ಮಗಿನ ದೂಪಾರ್ತಿ ಕಂದುನ ತೊಡೆ ಮ್ಯಾಲೆ ಕೂರಿಸ್ಕಂಡು ಮಗನೇ ಮಗನೇ ಮಲೆನಾಡಿಗೋಗಿದ್ದ ನಿನ್ನ ತಂದೆ ಮನೆಗೆ ಬಂದಿಲ್ಲ. ನಮ್ಮಣ್ಣ ಬಂದು ತವುರಿಗೆ ಕರೆದೋಗಿದ್ದಾನೆ. ಮಗನೆ ಯವ್ ಮಗನಾಣೆ ಬತ್ತೀನಿ ಅಂತ ನಿನ್ನಾಣೆ ಇಟ್ಟಿದ್ದೀನಿ.

ಏಳಪ್ಪ ನನು ಕಂದ ತವರೀಗೆ ಹೋಗಾನಾ।

ಏಳೋ ನನ್ನಾ ಮಗನೆ ತವರೀಗೆ ಹೋಗಾನಾ।

ಅಮ್ಮ ತವರೀಗೆ ಹೋಗಾಕೆ ಸುಂಗಾರ ವಾಗ್ಯವಳೇ।

ತವರು ಮನಿಗೋಗಾಕೆ ಸುಂಗಾರ ವಾಗ್ಯವಳೇ।

ಬಂಗಾರ ಹರಿಸ್ಯವಳೇ ಸುಂಗಾರ ವಾಗುತಾಳೇ।

ಇವಳ ಹತ್ತು ಸುತ್ತೀನರ ಮನಿಗೆ ಮುತ್ತಿನ ಬೀಗಾ ಹಾಕೀ।

ಇವಳ ಆರು ಸುತ್ತನರುಮನಿಗೆ ಅರಗಿನ ಬೀಗಾ ಹಾಕೀ।

ಬಣ್ಣದ ವಾಲೇ ಬರುದು ಬಾಗಿಲೀಗೆ ಕಟ್ಟುತ್ತಾಳೆ।

ಇವುಳು ಮನಿಗೆ ಮನಿಗೆಲ್ಲ ಬೀಗ ಮುದ್ರಿಕೆ ಮಾಡೀ ಬಾಗಿಲೀಗೆ ಬಣ್ಣದ್ವಾಲೆ ಬರೆದು ಏನಂತ ಕಟ್ಟುತ್ತಾಳೇ 'ನನ್ ಗಂಡ ಬಸಪ್ಪ ದೊರಿಯೇ, ನಮ್ಮಣ್ಣ ಬಂದು ನನ್ನ ತವುರಿಗೆ ಕರ್ರೊಂಡೋಗ್ಯವನೆ. ನಾನು ತವರಲ್ಲಿದ್ದೀನಿ. ನೀವು ಮನಿಗೆ ಬಂದೀಸ ನನ್ನ ತವುರಿಗೆ ಬಲ್ಲಿ' ಅಂತ.

ಅಕ್ಷಾರ ಬರೀತಾಳೇ ಉತ್ತುರಾಸುಕ್ ಕಟ್ಟುತ್ತಾಳೇ।

ಬಣ್ಣುದ್ವಾಲೆ ಬರುದು ಬಾಗಿಲಿಗೆ ಕಟ್ಟುತ್ತಾಳೇ।

ಅಮ್ಮ ಮನೆ ಬುಟ್ಟಿ ಬರುವಾಗ ಅವುಸಕುನ ತಡುದಲ್ಲೋ।

ಹೊದ್ಲು ದಾಟಿ ಬರೂವಾಗ ಅವುಸಕುನ ತಡುದಲ್ಲೋ।

ಮನೆ ಹೊಸುಲು ದಾಟಿ ಬರುವಾಗ ಇವುಳು ಸತ್ಯ ಇವುಳ ದರ್ಮ .ಎನಪುಸಕುನ ತೋರುತ್ತಾದೆ. 'ಹೋಗುಬ್ಯಾಡಾ ನಿಂಗಮ್ಮ. ಹೋಗು ಬ್ಯಾಡಾ. ನಿಮ್ಮಣ್ಣ ಬಂದು ನಿನ್ನ ಮುಂಡೆ ಮಾಡೀ ಮೋಸಾ ಮಾಡಾಕ್ ಕರ್ದೊಗಿದ್ದಾನೆ ಹೊಸ್ಲು ದಾಟಿ ಹೊರಗೋಗಬೇಡಾ ಅಂತ.

ಉತ್ತುರಾಸ ಅಣೆಗೊಡೆದು ತಡೆದು ನಿಲ್ಲೈತಲ್ಲೋ

(ಇವುಳ ಸತ್ಯ ಧರ್ಮ ಹೊಸುಲು ಬುಟ್ಟು ಹೊರಕ್ಕೆ ದಾಟಬೇಡ ಅನ್ನದಾಗಿ ಉತ್ತುರಾಸ ಅಣೆಗೆ ಹೊಡುದು ನಿಲ್ಲಿಸ್ಕ್ಯತ್ತು. ಅಲ್ಲಿ ಯೇಚ್ನೆ ಮಾಡಿದ್ಲು) ಯೇನ್ ಯೇಚ್ನೆ ಮಾಡುತ್ತಾಳೆ. ಯಾವಾಗ್ಲು ಉತ್ತುರಾಸ ಅಣೆಗೆ ತಾಗಿತಿಲ್ಲಿ. ಇವತ್ತು ಉತ್ತರಾಸ ಅಣೆಗೆ ತಾಗುತಲಪ್ಪ. ನನ್ನ ತವುರಿಗೆ ನಾನು ಹೋಗುದುಕ್ಕೆ ಅವುಸಕುನ ಇದು

ನನ ತವುರಿಗೆ ನಾನು ಹೋಗುದುಕೆ ಅವುಸಕುನ ಉಂಟೇನೂ।

ನನ್ನ ತವುರಿಗೆ ನಾನು ಹೋಗುದೂಕೆ ಅವುಸಕುನ ಉಂಟೇನೂ।

ನನಿಗೆ ಯಾವ್ ಕಸ್ಟ್ ಬಂದ್ರು ನಮ್ಮಣ್ಣ ಅವುನಲ್ಲಾ।

ನನಿಗೆ ಯಾವ ಕಸ್ಟ್ ಬಂದ್ರು ನಮ್ಮಣ್ಣ ಅವುನಲ್ಲಾ।

ನನ್ನ ತವುರಿಗೆ ನಾನು ಹೋಗಾದುಕೆ ಅವುಸಕುನ ಆದುರೇನು? ಯಾವ ಕಸ್ಟ ಬಂದ್ರು

ನಮ್ಮಣ್ಣ ಅವನೆ ನನ್ನಾ ಕಾಪಾಡುತಾನೇ।

ನಮ್ಮಣ್ಣ ಅವನೆ ನನ್ನಾ ಕಾಪಾಡುತಾನೇ।

ಅಣ್ಣನ ನೆನೀತಾಳೇ ಸಕುನ ಹಿಂದುಕೆ ಮಾಡೀ।

ಮುಂದಕೆ ಮೂರು ಮೈಲಿ ಹೋಗುತಾಳೆ ನಿಂಗವ್ವಾ।

ಅಣ್ಣ ನಡು ದಾರೀಗೋಗುವಾಗ ಅಲ್ಲೊಂದವಸಕುನಲ್ಲೊ।

ನಡು ದಾರೀಲೋಲುಗುವಾಗ ಅಲ್ಲೊಂದವಸಕುನಲ್ಲೊ।

ಮನೇ ಬುಟ್ಹೋಗುವಾಗ ಉತ್ತರಾಸ ಅಣೇಗೊಡುದು ಒಂದು ಅವನ ಸಕುನ.,, ಉತ್ತುರಾಸು ಅಣೇಗೊಡುದು ತಡೆದು ನಿಲ್ಲಿಸ್ಕ್ಯಂಡು ನಮ್ಮಣ್ಣವನೆ ನನ್ನ ಕಾಪಾಡುತ್ತಾನೆ ಅಣ್ಣುನ್ ನೆನೆಕೊಂಡು ಮುಂದುಕ್ ಮೂರ್ ಮೈಲಿ ಹೋದುಳು. ನಡುದಾರೀಲೋಗುವಾಗ ಅಲ್ಲೊಂದವಸಕುನ ಏನು ಅಂದ್ರೆ ಇವುಳ ಸತ್ಯ ಇವುಳ ದರ್ಮ–ಯೇನು ಅಂದ್ರೆ ಯೇನು ಸಕುನ ತೋರುತ್ತಾರೆ.

ಹೋಗಬ್ಯಾಡಾ ನಿಂಗಮ್ಮ ಹೋಗಬ್ಯಾಡಾ ನಿಮ್ಮಣ್ಣ ಬಂದು ನಿನ್ ಮುಂದೆ ಮಾಡಾಕ್ ಮೋಸ ಮಾಡಿ ಕರೆದೋಗಿದ್ದಾನೆ. ನಿನ್ನ ಮುಂದೆ ಮುಂಡೆ ಮಾಡುತ್ತಾನೆ. ಮೋಸ ಮಾಡುತ್ತಾನೆ. ಆದ್ದರಿಂದ ವಸಲು ದಾಟಿ ಅಣ್ಣನ ಮನೆ ವಳೀಕೆ ಹೋಗುಬ್ಯಾಡ ಅನ್ನದಾಗಿ

ಹೋಗೋ ಅ ದೀಯ ವಳುಗೆ ಸೂತುಕ ಆದುಳಿಲ್ಲೊ।

ನಡುದಾರೀಲೋಗುವಾಗ ನಂಗೇ ಮಾಸಿದಳಲ್ಲೊ।

ನರಿಗೇ ಮಾಸೀ ಹೊರಗೆ ಆವಾಳಲ್ಲೊ।

ಅಲ್ಲಿ ಯೇನು ಯೇಚ್ನೆ ಮಾಡುತ್ತಾಳೆ. ಮನೆ ವಸುಲ ಬುಟ್ಟು ಹೊಂಟಾಗ ಉತ್ತುರಾಸು ಅಣೆಗೊಡುದ್ ನಿಲ್ಲಿಸ್ಕ್ಯಂಡು. ನಡುದಾರಿಲಿ ಬಂದೆ ನರಿಗೆ ಮಾಸೀ ಹೊರಗೆ ಆಗಿ ಸೂತಕ ಅದ್ನಲ್ಲ. ಅಣ್ಣುನ ಮನೆ ಬಳಿಗೆ ಹೋಕ್ಕಾಕ್ಕುಲ್ವಲ್ಲ. ಇದು ನನಿಗೆ ಅವುಸಕುನ. ನನ್ನ ತವರಿಗೆ ನಾನು ಹೋಗಾಕೆ ನನಿಗೆ ಅವುಸಕುನ ಅದ್ರೇನು? ನನ್ನಣ್ಣ ಲಿಂಗಾಜ ದೊರೆ ಮಡಿಕೇರೀಲಿ ಕೊಡಿಗ್ಗೆಲ್ಲೆ ದೊರೆಯಾಗಿ ಕೂತುದ್ದಾನೆ. ಅಂತಾ ದೊರೆ ಮನಿಗೆ ಹೋತಾ ಇದ್ದೀನಿ.

ನನಿಗೆ ಯಾವ ಕಸ್ಟ ಬಂದಾರು ನನ್ನಣ್ಣ ಅವುನಲ್ಲಾ।

ನನ್ನಣ್ಣ ಅವುನೆ ನನ್ನ ಕಾಪಾಡು ತಾನೇ।

ಅಣ್ಣುನಾ ನೆನೀತಾಳೇ ಸಕುನ ಹಿಂದುಕೆ ಮಾಡೀ।

ಅಣ್ಣಾನಾ ನೆನೀತಾಳೇ ಸಕುನ ಹಿಂದುಕೆ ಮಾಡೀ।

ತನ್ನ ತವುರೀಗೆ ಹೋದೋಳು ಹೊರಗೆ ನಿಂತವುಳಲ್ಲಾ।

ಒಳಗೆ ಅತ್ತಿಗೆ ಮಲ್ಲಮ್ಮ ಮಾತನಾಡುತ್ತಾಳೇ।

ಬಂದೇನೇ ಅತ್ತೆಗ್ಯಮ್ಮ ಬೋಗುವಲ್ಲಿ ಚಂದುವಮ್ಮಾ।

ಬಂದೇನೇ ಅತ್ತಗ್ಯಮ್ಮ ಬೋಗುವಲ್ಲಿ ಚಂದುವಮ್ಮ।

ಅತ್ತಿಗೆ  ನನ್ನ ಬೋಗ ಚಂದ, ನಿನ್ನ ಬೋಗ ಚಂದುವಮ್ಮಾ

ಮಾತಾಡಿಸ್ಕ್ಯಂಡು ಅತ್ತಿಗೆ ಮಲ್ಲಮ್ಮ ನೀರ್ ತತ್ತಾಳೆ. ಕಾಲ್ ತೊಳ್ಕಂಡ್ ಬಳೀಕ ಬಲ್ಲ ಅತ್ತಿಗೆ ಮಲಿಗ್ಯಮ್ಮ ನಾನು ಕಾಲ್ ತೊಳ್ಕಂಡು ಒಳುಕೆ ಬರಾಂಗಿಲ್ಲ. ನಡು ದಾರೀಲಿ ಬರುವಾಗ ನರಿಗೆ ಮಾಸಿ ಹೊರಗಾಗಿದ್ದೀನಿ. ಸೂತಕಾಗಿ ಬಂದಿದ್ದೀನಿ. ಕಾಲ್ ತೊಳೆದು ಒಳುಗ್ ಬರಾಂಗಿಲ್ಲ. ನೀರ್ ಮಯ್ಯಿಗೆ ಬೇಕು. ನೀರ್ ಕಾಸಮ್ಮ ಒಳಗೋಗಿ ಅತ್ತಿಗೆ ಮಲ್ಲಿಗ್ಯಮ್ಮ ನೀರ್ ಕಾಸುತಾಳೆ. ನಿಂಗಮ್ಮ ಅಣ್ಣುನ್ ಮನೆಯಲ್ಲಿ ಅಟ್ಟೀಲಿ ಕುಂತಿದ್ದಾಳೆ. ನಿಂಗಮ್ಮ ಅಣ್ಣುನ್ ಮಲ್ಲಿ ಅಟ್ಟೀಲಿ ಕುಂತಿದ್ದಾಳೇ. ಒಳುಗೆ ಅತ್ತಿಗೆ ಮಲ್ಲಿಗ್ಯಮ್ಮ ನೀರು ಕಾಸುತ ಇದ್ದಾಗ ಎಲ್ಲೋ ಹೋಗಿದ್ದ ಅಣ್ಣ ಮನಿಗೆ ಬತ್ತಾನೆ. ತಂಗೆ ಬಂದ್ ಬಾಗುಲಲ್ಲಿ ಕೂತಿದ್ದಾಳೇ ತಂಗೆ ಬಂದ್ಮೇಲೆ ತಂಗೆ ಆಸೀಗ್ ಬಾವ ಬತ್ತಾನೆ. ಅವುನ್ನ ಅರುಮನಿಗೆ ಬಲಿ ಕೊಡಬಹುದು. ತಂಗೆ ಬಂದುದುಕು ಸಾರ್ಥಕವಾಗುತ್ತದೆ ಅಂತ..

ತಂಗೆ ಮಕುನ ನೋಡಿ ಹುಸಿ ನೆಗೆ ನ್ಯಗೂತಾನೆ।

ತಂಗೆ ಮಕಾ ನೋಡಿ ಹುಸಿ ನೆಗೆ ನ್ಯಗೂತಾನೆ।

ಅಣ್ಣ  ತಂಗೆ ಮುಂದುಕು ಬಂದು ಕಿಲಕಿಲನೆ ನಗುತಾನೇ।

ಬಂದೇನೇ ನನು ತಂಗಿ ಬೋಗುವೆಲ್ಲ ಚಂದುವೇನೇ।

ಬಂದೇನೇ ನನು ತಂಗಿ ಬೋಗುವೆಲ್ಲ ಚಂದುವೇನೇ।

ಬಾವುಗೆ ಬಾ ಅಂತ ಬಣ್ಣುದ್ವಾಲೆ ಬರೆದೆಯೇನೇ।

ಬಣ್ಣುದ್ವಾಲೆ ಬರುದು ಬಾಗ್ಲುಗೆ ಕಟ್ಟಿದಿಯೇನೇ।

ಬಂದೇನೇ ನನು ತಂಗಿ ಬೋಗುವಲ್ಲ ಚಂದವೇನೆ।

ಅಣ್ಣ ನನ್ನ ಬೋಗ ಚಂದ ನಿನ್ನ ಬೋಗ ಚಂದುವೇನೋ

ವಾಲೆ ಬರುದು ನಾನು ಬಾಗಿಲೀಗೆ ಕಟ್ಟಿಬಂದೆ

ಅಣ್ಣ ನನ್ನ ಬೋಗ ಚಂದ ನಿನ್ನ ಬೋಗ ಚಂದುವೇನೋ

ಅಣ್ಣ ತಂಗಿ ಅಟ್ಟೀಲಿ ಮಾತಾನಾಡುವಾಗ ಅತ್ತಿಗೆ ಮಲ್ಲಿಗ್ಯೆಮ್ಮ ಗಂಡುನ ಮಕಾ ನೋಡಿಬುಟ್ಟು ಒಳಗೋಗಿ ಗಂಡುಗೆ ಹಾಲು ಬಾನ ಇಕ್ಕುತ್ತಾಳೇ ಗಂಡುನ್ನೋಡಿ ಗಂಡುಗೆ ಒಳಗೋಗಿ ಹಾಲು ಅನ್ನ ಊಟಕ್ಕೆ ಇಕ್ಕುತ್ತಾಳೆ. ಅಣ್ಣ ಒಳಗೋಗಿ ಕುತಗಂಡ

ಬಾರಮ್ಮ ನನ್ನು ತಂಗಿ ಮದಿಗೂಟ ಮಾಡಾನಾ।

ಬಾರೇ ನನ್ನ ತಂಗಿ ಮದಿಗೂಟ ಮಾಡಾನಾ।

ಅಣ್ಣ ಒಳಗೇ ಬರಾಂಗಿಲ್ಲ ಮಂದಿಗೂಟ ಮಾಡಂಗಿಲ್ಲ

ಮಂದಿಗೆ ಉಣ್ಣೋದುಕೆ ಹೊಂಗೆ ನಾ ಆಸಿದೀನಿಲ್ಲ

ನಾನು ನಡುದಾರೀಲ್ ಬರುವಾಗ ನರಿಗೇ ಮಾಡೀಸಿದಲ್ಲಾ

ನಾನು ನರಿಗೇ ಮಾಸಿ ಒರಗೇ ಆಗೀದೀನಲ್ಲಾ।

ನಾನು ನರಿಗೇ ಮಾಸಿ ಒರಗೇ ಆಗೀದೀನಲ್ಲಾ।

ಆ ಮಾತಿಗೆ ಅಣ್ಣ ಹೇಳುತ್ತಾನೆ. ವಂದಿಗೂಟ ಮಾಡಾನ ಅಂದ್ರೆ. ನೆರಿಗೆ ಮಾಸಿ ಹೊರಗಾಗಿದೀನಿ ಅಂತ ಹೇಳ್ತಿಯಲ್ಲ ತಂಗಿ.

ನೀನು ನೆರಿಗೆ ಮಾಸಿದ ಮೇಲೆ ಆ ಸೆರಗು ಬ್ಯಾಕೆ ಐತಲ್ಲ।

ನೆರಿಗೆ ಮಾಸಿದ ಸೆರಗು ಬ್ಯಾರೇ ಕೂತೈತಲ್ಲಾ।

ಬಾಯೀಗು ಕೈಯೀನು ಬೇದವಿಲ್ಲ ಬಾರಮ್ಮ

ನರಿಗೆ ಮಾಸಿದೀನಿ. ವರವಾಗಿದೀನಿ, ಮಂದಿಗೂಟ ಮಾಡಾದಿಲ್ಲ  ಆ ಮಾತಿಗೆ ಅಣ್ಣ ಹೇಳುತ್ತಾನೆ. ನೆರಿಗೆ ಮಾಸಿದ ಸೆರಗು ಬ್ಯಾರೆ ವರಸ್ ಕೂತಾದೆ. ಈ ಬಾಯ್ಲಿ ಕೆಯ್ಯ್ಗಿ ಬೇದುವಿಲ್ಲ ಬಾ  ಊಟ ಮಾಡಾನ  ಬಾ ಅಣ್ಣಯ್ಯ ಅಣ್ಣಯ್ಯ

ನಾನು ನೆರಿಗೆ ಮಾಸಿದು ಮ್ಯಾಲೆ ನಿನ್ನ ಸಮಾ ಕೂರಬವುದೇ।

ನೆರಿಗೆ ಮಾಸಿದು ಮ್ಯಾಲೇ ಸರೀಸಮ ಕೂಡಬಹುದೇ।

ಅಣ್ಣ ವರುಗೆ ನಾನಾದ ಮ್ಯಾಲೇ ಒಂದುಗೂಡಿ ಮಾಡಬವುದೇ।

ನಿನ್ನ ಒಂದಿಗೂಡ ಮಾಡುದಿಲ್ಲ ಸರಿಸಮ ಕೂರುದಿಲ್ಲಾ।

ಆ ಮಾತಿಗೆ ಅಣ್ಣಾ ಯೇನ್ ಹೇಳುತ್ತಾನೆ. ತಂಗೇ ತಂಗೇ ನನ್ನ ಒಂದಿಗೂಡ ಮಾಡ್ಡಿದ್ರು ಚಿಂತಿಲ್ಲ. ಒಂದು ಸರಿಸಮ  ಕೂಡುದಿದ್ರು ನನಿಗೆ ಚಿಂತಿಲ್ಲ. ನನಿಗೆ ಒಂದು ಚಿಂತೆ ಹತ್ಯದೆ. ನನಿಗೆ ಒಂದು ಚಿಂತೆ ಹತ್ಯಾದೆ ತಂಗಿ. ಅ ಚಿಂತೆಗೇನು ಹೇಳುತ್ತೀಯಮ್ಮ

ಯೇನಣ್ಣಯ್ಯ ನಿನ್ನ ಚಿಂತೆ

ನಿನಗೆ ಕೈ ಮುಗಿದು ಬೇಡ್ಕ್ಯತ್ತೀನಿ.,,,

ಯೇನ್ ಬೇಡುವುದು ಅಣ್ಣಯ್ಯ

ನಿನಿಗೆ ಗಂಡುನ ಮನೆ ಅಸ್ಯವ್ವ.. ತವುರು ಮನೆ ಆಸ್ಯವ್ವ।

ನಿನಿಗೆ ಗಂಡುನ ಮನೆ ಆಸ್ಯವ್ವ, ತವುರು ಮನೆ ಅಸ್ಯವ್ವ।

ನೀನು ಗಂಡನಾಸೆ ಮಾಡುತೀಯ ತವುರಾಸೆ ಮಾಡುತೀಯಾ

ನೀನು ಗಂಡುನಾಸೆ ಮಾಡುತೀಯ, ತವುರಾಸೆ ಮಾಡುತೀಯಾ।

ನಿನಗೀರೋ ವಾಸೇ ನನಿಗೆ ಹೇಳೇ ನನ್ನ ತಂಗೀ।

ನಿನಗೀರೋ ವಾಸೇ ನನಿಗೇಳೇ ನನ ತಂಗೀ।

ಅಣ್ಣಯ್ಯ  ಅಣ್ಣಯ್ಯ ಹೆಣ್ಣು ಮಕ್ಳೂ.. ಹೆಣ್ಣು ಮಕ್ಳೂ ತವುರಿಗೆ ಬಂದಾಗ ಒಂದಿಗುಟ್ಟಿದ ಅಣ್ಣುದೀರು ಗಂಡನಾಸೆ ಮಾಡುತ್ತೀಯೋ ತವುರಾಸೆ ಮಾಡುತ್ತೀಯೋ ಅಂತ ಕೇಳ್ತಿರಲ್ಲ ಹೆಣ್ಣು ಮಕ್ಳು ತವುರಿಗೆ ಬಂದ್ರೆ .ಗಂಡನಾಸೆ ಮಾಡುತ್ತಿರಾಯ, ತವುರಾಸೆ ಮಾಡುತ್ತೀಯಾ ಅಂತ ಕೇಳ್ತೀಯಾ,.. ಎಲಾ ಗಂಡನಾಸೆಯಾ ತವುರಾಸೆ ಅಂತ ಯಾರು ಕೇಳಾದಿಲ್ಲ. ಅಣ್ಣಯ್ಯ ಬರಾ ಆದೀವಳುಗೆ ಅವುಸಕುನ ಆಗ್ಯಾದೆ..ಅಲ್ಲಿ ಆವುಸಕುನ ಆಗಿರಾದು ಇಲ್ಲಿ ನೀನು ಹಿಂಗ್ ಕೇಳಾರು ಯಾಕೋ ನನ ಮನಸು ಬೆಚ್ಚಿ ಬೆವರಿ ಹೆದುರುತ್ತಾದೆ

ಯಾರಪ್ಪಾ ನಮ್ಮಣ್ಣಾ ಬಿನ್ನುದಾ ಮಾತಾಡುತ್ತೀಯಾ।
ಯಾಕೋ ನಮ್ಮಣ್ಣಾ ಬಿನ್ನುದಾ ಮಾತನಾಡುತ್ತೀಯಾ।
ಬಿನ್ನುದಾ ಮಾತಾಡಬ್ಯಾಡಾ ಬಿಡಿಸೇಳೋ ನಮ್ಮಣ್ಣ

ತಂಗೆ ತಂಗೆ ಬಿಡಿಸೇಳು ಅಂತೀಯಾ

ನಾನು ಬಿಡುದೇಳ ಬೇಕಾರೆ ಬಾಸೇ ಕೊಡೂ ನಂಗೇ।
ನನಿಗೆ ಬ್ಯಾಸೇ ಕೂಟ್ಟ್ಯಾರೆ ನಿನಗೆ ಒಡೆದು ನಾ ಹೇಳುತ್ತೀನೀ।
ನನಿಗೆ ಬಾಸೇ ಕೊಟ್ಟಾರೆ ತಂಗಿ ಒಡೆದು ನಾ ಹೇಳುತೀನೀ।

ಅಣ್ಣ ಅಣ್ಣ

ನೀನು ನಾನುವೆ ಅಣ್ಣ ಒಂದಿಗುಟ್ಟಿಲುವೇನೋ।
ನಾವು ಒಂದೀಗೆ ಹುಟ್ಟಿ ಒಂದೀಗೇ ಬೆಳೆಂದಿಲ್ಲುವಾ।
ಬಿನ್ನುದಾ ಮಾತಾಡಬ್ಯಾಡಾ ಬಿಡಸೇಳೂ ನಮ್ಮಣ್ಣ।
ಅಣ್ಣುಗು ತಂಗೀಗು ಬಾಸ್ಯಾಕೋ ನಮ್ಮಣ್ಣಾ।

ಅಣ್ಣಗು ತಂಗಿಗು ಬಾಸೇ ಅಂದ್ರೇನು. ನೀನು ನಾನು ಒಂದ್ತಾಯಿ ಮಕ್ಳು ಒಂದಿಗುಟ್ಟಿ ಒಂದಿಂಗ್ ಬೆಳೆದೋರು ಅಣ್ಣ..ಬಿಡಿಸೇಳು ಅಂತ ಕೈ ಮುಗೀತಾಳೇ.

ನೀನ್ ಬಾಸೇ ಕೊಟ್ಟೊತ್ತು ನಾನ್ ಬಿಡಿಸೇಳದಿಲ್ಲ ನನ್ ತಂಗಿ. ನನ ಮಂತಾನಾ ಸಂತಾನಯಲ್ಲಾ ಆಳಾಗೋ ಕಾಲ ಬಂದಾದೆ. ನಿನ್ನಿಂದ ನನ್ನ ಮಂತಾನ ಸಂತಾನ ಉಳೀಬೇಕು.

ನೀನು ಹುಟ್ಟಿದಂತ ಮನೆ ಕಸ್ಪ ನಿನುಗಿಲುವೇ ನನ ತಂಗೀ।
ನೀನು ಹುಟ್ಟಿದಂತ ಮನೆ ಕಸ್ಪ ನಿನುಗಿಲುವೇ ನನ ತಂಗೀ।
ನನಿಗೆ ಬಾಸೆ ಕೊಡು ನಿನಿಗೆ ಒಡೆದೂ ಹೇಳಾತೀನೀ।
ತಂಗಿ ಕಯತ್ತಿ ಮುಗೀತಾನೆ ಕಣ್ಣೀರ ಬುಡೂತಾನೇ।
ತಂಗೀಯ ಮುಂದುಗಾಡೆ ಮುಡಿ ಬಳ್ಳ ಎಳ್ಳುತ್ತಾನೇ।

ಕಣ್ಣೀರ್ ಬುಟ್ ಕೈ ಮುಗಿದು ತಂಗೇ ಮುಂದುಗಾಡೇ ಯಾಕ್ ಮುಡಿ ಬಳ್ಳು ಬಳ್ಳುತ್ತಾನೇ ಅಂದ್ರೆ,,,ನಾನು ಯಾಸ ತಾಳ್ಕ್ಯಂದ್ರೆ, ನನ್ ಕಣ್ಣೀರ್ ನೋಡಿ ತಂಗೀಗ್ ನನ್ ಮ್ಯಾಲೆ ಕನಿಕಾರ ಕೂಡಿ ಬಾಸೆ ಕೊಡ್ಲಿ ಅಂತ ಯಾಸ ತಾಳ್ಕಂಡ್ ಅಳ್ತನೇ.,,

ಯಾಸ ತಾಳ್ಕ್ಯಂಡ್ ಅತ್ತೆ ನನ್ ಕಣ್ಣೀರ್ ನೋಡಿ  ಕನಿಗಕಾರ ಕೂಡ್ಲಿ ಆಮ್ಯಾಲ್ ನೋಡ್ಕಳಾನ ಮುಂದೆ )
ಅಣ್ಣುನ ಕಣ್ಣೀರ್ ನೋಡಿ ಇವುಳಿಗೆ ಕನಿಗಕಾರ ಕೂಡಿ ಬಂತು. ಅಣ್ಣಯ್ಯ ಅಣ್ಣಯ್ಯ ನನ ಮುಂದೆ ಕಣ್ಣೀರು ಬುಟ್ಟು ನನಿಗೆ ಕನಿಕಾರ ತಂದಿಡಬ್ಯಾಡ. ನಿನಗೆ ಯಾವ ಕಸ್ಟ ಬಂದ್ರು ನನ್ನಿಂದಾಗದಾದ್ರೆ ನಾನು ಬಾಸೆ ಕೊಡ್ತೀನಿ. ಇವುಳೇನ್ ತಿಳ್ಕಂಡು ಬಾಸೆ ಕೊಡ್ತಾಳೆ ಅಂದೆ ಅಣ್ಣ ರಾಜ್ಯಬಾರ ಮಾಡ್ತಾವ್ನೆ. ರಾಜಕೀಯದ ಯವಾರುವೋ, ಇಲ್ಲಾ ದುಡ್ಡು ಕಾಸೀನ ಯವರಾವೊ  ಈ ಕಸ್ಟಕ್ಕೆ ನಮ್ಮಣ್ಣ ಬಾಸೆ ಕೇಳ್ತಾನೆ ಅಂತ.

ಅಣ್ಗೆ ಬಲಗೈಯ ಬಾಸೇ ಮಾಡೀ ಕೊಟ್ಟವಳಲ್ಲಾ।
ಬಲಗೈಯ ಬಾಸೇಯ ಮಾಡೀ ಕೊಟ್ಟವಳಲ್ಲಾ।
ತಂಗೆ ಬಾಸೇ ಕೊಟ್ಟಾ ಮ್ಯಾಲೆ ನೀರಾ ಬಸೂತಾನೇ।
ತಂಗೆ ಬಾಸೇ ಕೊಟ್ಟಾದು ಮ್ಯಾಲೆ ನೀರಾ ಬಸೂತಾನೇ।

ನೀರ ಉಸಾತು. ನೀರೂಸಿದ ಮೇಲೆ ಸೂತಕ ಕಳೆದೋತು. ಬಳೀಕ್ ಕರಕೊಂಡೋಗಿ ಸಾಲು ಮಂಚುದು ಮ್ಯಾಲೆ ಕೂರಿಸ್ಕ್ಯಂಡು ಐಬೋಗದೆಇಗೆಯನ್ನ ಮಾಡಿ ಪಂಚ ಬೋಗುದ ಅಡಿಗೆಯನ್ನು ಮಾಡಿ ತಂಗೆಯನ್ನು ಕರಕಂಬರುತ್ತಾನೆ. ಊಟ ಮಾಡು ತಂಗೆ ಅನ್ನುತ್ತಾನೆ.
ಆಣ್ಣಯ್ಯ ಅಣ್ಣಯ್ಯ  ಪಂಚ ಬೋಗುದ ಅಡಿಗೆಯನ್ನು ಮಾಡಿಸಿ ಐಬೋಗುದ ಅಡಿಗೆಯನ್ನು ಮಾಡಿಸಿ ಇಕಿಸಿದ್ದೀಯ  ಆದ್ರೆ ನನಿಗೆ ಊಟ ಮಾಡಕೆ ಮನಸಾಗುತ್ತಿಲ್ಲ. ಯಾಕೆ ಅಂದ್ರೆ,,,,ನೀನು ಕಸ್ಟ ಅಂತ ಬಾಸೇ ತಕ್ಕಂಡಿದ್ದೀಯಾ. ಆ ಕಸ್ಟನ ಬಡದೇಳೂ ಅಣ್ಣಯ್ಯ ಅನಂತರ ಊಟ ಮಾಡುತ್ತೀನಿ ನಿನ್ನ ಕಸ್ಟ ಬಡದೇಳು ಅಣ್ಣಯ್ಯ  ಅನಂತರ ನಾನು ಊಟ ಮಾಡುತ್ತೀನಿ. ತಂಗಿ ತಂಗಿ ನೀನು ಊಟ ಮಾಡ್ತಾ ನೀನು ಕೂತ್ಕೊ. ಒಡೆದು ಹೇಳ್ತಾ ನಾ ಕೂಕ್ಳತ್ತೀಇ.
ಆಗಲಿ ಅಣ್ಣ ಅಂತ ಬಾಯ್ಲಿ ಒಂದು ಗುಕ್ಕಾಕಿ ಕಯಲ್ಲಿ ಒಂದು ಗುಕ್ಕಿಡ್ದು  ಈಗ ಒಡುದೇಳು ಅಣ್ಣ ಅಂತ ಕೈ ಮುಗಿತಾಳೇ

ಕೇಳವ್ವ ನನ ತಂಗಿ ದರ್ಮಾದ ನಿಂಗವ್ವಾ
ಕೇಳೇ ನನ್ನ ತಂಗಿ ದರ್ಮಾದ ನಿಂಗವ್ವಾ
ನನ್ನ ಮಡಿಕೇರಿ ಒಳಗೆ ನಾ ಅರುಮನೆ ಕಟ್ಟುವಾಗ
ನಾನು ಕಟ್ಟಿ ಕಟ್ಟಿ ನಿಲ್ಲಿಸೂವೆ ಮುರುದು ಬೀಳಾದು ಕಾನೇ
ನಾನು ಕಟ್ಟಿ ಕಟ್ಟಿ ನಿಲ್ಲಿಸೂವೆ ಮುರುದು ಬೀಳಾದು ಕಾನೇ।

ಯಾತಕಾಗಿ ಅರಮನೆ ಮುರುದು ಬೀಳುತಾದೆ ಅಂತ ಹೋಗಿ ದೋಸುಗ್ರಲ್ಲಿ ಪಂಚಾಂಗ ಕೇಳ್ದೆ ತಂಗಿ  ದೋಯಿಸ್ರಲ್ಲಿ ಪಂಚಾಂಗ ತೆಗುಸಿ ನೋಡದ್ರಲ್ಲೆ ದೋಯಿಸ್ರಲ್ಲಿ ಯೇನ್ ಉಟ್ಟು ಅಂದ್ರೆ . ಬಡಗಲಾಗಿ ಬಾಲುದ್ ಚುಕ್ಕಿ ಮೂಡಿ.. ಬಡಲಾಗ್ ಬಾಲುದ್ ಚುಕ್ಕಿ ಮೂಡಿ.. ಮೂಡುಲಾಗೆ ಕೇತು ಮೂಡಿ ಮುಂಗೋಳಿಕೂಗಿ ಮೂಡು ಕೇಪೇರೋ ವತ್ನಲ್ಲಿ ನಿನ್ನ ಗಂಡುನ್ನ ಬಲಿ ಕೇಳಾದೆ. ನಿನ್ನ  ಗಂಡುನ್ನ ಅರುಮನೆಗೆ ಬಲಿ ಕಡಿಬೇಕು

ಕೊಡು ಅಂತಾವ ಇದ್ಕೆ ನಿನ ಕೈಲಿ ಬಾಸೆ ತೆಗಂಡಿದೀನಿ ಅಂದ ಕೆಟ್ಟ ಅಣ್ಣಾ.. ಕೆಟ್ಟ ಅಣ್ಣಾ.,ಇಕ್ಕಿದಂತಾ ಹಾಲು ಬಾನದ ಮ್ಯಾಲೆ ಕೆಟ್ವೇ ಅಂತ ಮಕಾಡೆ ಬೀಳ್ತಳಲ್ಲೊ ದೇವಾ ..

ಹೋಗಿ ಅಣ್ಣನ ಪಾದದ ಮಾಲೇ

ಹೋಗಿ ಅಣ್ಣನ ಪಾದದ ಮ್ಯಾಲೇ। ಮಾದೇವನೇ।

ಹೋಗಿ ಆಸುವಾದುರೆ ಬೀಳೂತಾಳೇ

ಅಣ್ಣ ನನ್ನ ಮುಂಡೆ ಮಾಡಬ್ಯಾಡಾ

ಅಣ್ಣ ನನ್ನ ಮುಂಡೆ ಮಾಡಾಕೇ

ನನ್ನ ಮೋಸದಿಂದ ಕರೆತಂದೇ

ಅಣ್ಣ ಮನೆ ಗಂಡನ ಕೊಡುಲೇ

ನಾನು ಮುಂಡೇ ಆಗಾಲೇ

ಅಣ್ಣ ಗಂಡಾನ ಕೊಟುಗಂಡೂ

ಅಣ್ಣ ಗಂಡಾನ ಕೊಟುಗಂಡೂ

ಅಣ್ಣ ಮುಂಡೆ ಬಾಳ ಬಾಳಿಕಂಡೂ

ಹೋಗಿ ಸೇರುದಾರ ಮನಿ ಮುಂದೆ

ಅಣ್ಣ ಸೆರಗೊಡ್ಡಿ ತಿನ್ನಲೇನೂ

ಅಣ್ಣ ಪುಂಡಾ ಕೋರ ಮನಿಮುಂದೆ

ಹೋಗಿ ಕೂಲಿ ಮಾಡಿ ತಿನ್ನುಲೇನೂ

ಅಣ್ಣ ಮುಂಡಿ ಬಾಳಿ ಬಾಳಲೇನೂ

ನೀನು ನನ್ನ ಗಂಡಾನ ಕೇಳುಬ್ಯಾಡಾ

ಅಣ್ಣ ನನ್ನ ಗಂಡಾನ ಕೇಳುಬ್ಯಾಡಾ

ನನ್ನ ಗಂಡಾನ ಕೊಟುಗಂಡೂ

ಅಣ್ಣ ಮುಂಡೆ ಬಾಳಿ ಬಾಳಿ ಕಂಡೂ

ಹೋಗಿ ಸೇರುದಾರ ಮನೆ ಮುಂದೆ

ನಾನು ಸೆರಗೊಡ್ಡಿ ತಿನ್ನಲಾರೇ

ಅಣ್ಣ ಪುಂಡು ಕೋರ ಮನೆ ಮುಂದೆ

ಅಣ್ಣ ಕೂಲಿ ಮಾಡಿ ತಿನ್ನಲಾರೇ

ನಾನು ಮುಂದೆ ಬಾಳ ಬಾಳಲಾರೇ

ಅಣ್ಣ ಮುಂಡೆ ಬಾಳ ಬಾಳಲಾರೇ

ನೀನು ನನ ಗಂಡಾನ ಕೇಳುಬ್ಯಾಡಾ

ಅಣ್ಣ ನನ್ನ ಮುಂಡೆ ಮಾಡುಬ್ಯಾಡಾ

ತಂಗೆ ಅಣ್ಣಾನ ಕೊಳ್ಳ ತೆಬ್ಬಿ

ಶಿವುನೆ ಕಣ್ಣೀರ ಬೀಡುತಾಳೇ

ಎಸ್ಟು ಕಣ್ಣೀರು ಸುರಿಸಿದ್ರು, ಎಸ್ಟು ಕಣ್ಣೀರ್ ಬುಟ್ರು ಅಣ್ಣುಗ್ ಕನಿನಕರವಿಲ್ಲ. ನಿನ ಗಂಡುನ ತಂದು ಅರಮನೀಗೆ ಬಲೀ ಕಡುದ್ರೆ ಸರಿ ತಂಗೆ.. ನಿನ ಗಂಡುನ ಅರುಮನಿಗೆ ಬಲೀ ಕಡೀದೆವಾದ್ರೆ ನನ ಮಂತಾನ ಸಂತಾನ ಉಳಿಯಾಕಿಲ್ಲ. ನನ್ನ ಮಂತಾನ ಸಂತಾನ ಉಳಿಯಾಕುಲ್ಲ. ಯಾಕ್ ನನ್ನ ಮಂತಾನ ಸಂತಾನ ಆಳು ಮಾಡಿಕ್ಯಳ್ಳಿ. ಒಬ್ನಿಂದ ಮಂತಾನ ಸಂತಾನ ಯಾಕ್ ಆಳು ಮಾಡಕಳ್ಳಿ

ನೀನು ಗಂಡುನಾಸೆ ಮಾಡುಬ್ಯಾಡಾ ತವುರಾಸೆ ಮಾಡವ್ವಾ

ನೀನು ಗಂಡುನಾಸೆ ಮಾಡುಬ್ಯಾಡಾ ತವುರಾಸೆ ಮಾಡವ್ವಾ

ನಿನ್ನ ಮಗುನೀಗೆ ನಾನು ರಾಜ್ಯ ಪಟ್ಟ ಕಟ್ಟುತೀನಿ।

ನಿನ್ನ ಮಗುನೀಗೆ ನಾನು ರಾಜ್ಯ ಪಟ್ಟ ಕಟ್ಟುತೀನಿ।

ನನ್ನ ಕೊಡಗಿನ ದೇಶವ ನಿನಗೆ ಜಾಗಿರೀಯ ಹಾಕುತೀನೀ।

ತಂಗೆ ನಿಂಗಮ್ಮ  ನಿನ್ನ ಗಂಡ ಅರುಮನಿಗೆ ಬಲಿಯಾಗಿ ಹೋದ ಮ್ಯಾಲೆ ನಿನ್ನ ಮಗುನಿಗೆ ರಾಜ್ಯಪಟ್ಟಿ ಕಟ್ಟುತ್ತೀನಿ. ನನ್ನ ಕೊಡಗಿನ ದೇಶದ ಜಾಗರಿಯಾಗಿ ನಿನಗೆ ಕೊಡುತ್ತೀನಿ. ನಿನ್ನ ಗಂಡ ಅರುಮನಿಗೆ ಬಲಿಯಾಗಿ ಹೋದ ಮ್ಯಾಲೆ ನಾನು ರಾಜ್ಯ ಬಾರಿಕೇಲಿದ್ದೀನಲ್ಲಾ–ಕೊಡನ್ಗ್ಲೆಲ್ಲವ – ಇದೇ ರಾಜ್ಯಬಾರಿಕೆ ನಿನ್ನಂತೆ ಮಾಡುತ್ತೀನಿ.

ಮುಂದೆ ನಾನಾಳೊ ದೊರೆತಾನ ನೀನೇ ಆಳೇ ತಂಗೀ।

ಮುಂದೆ ನಾನಳೊ ದೊರೆತಾನ ನೀನೇ ಆಳೇ ತಂಗೀ।

ಅವ್ವ ಗಂಡುನಾಣೆ ಮಾಡಬ್ಯಾಡ ತವರಾಸೆ ಮಾಡವ್ವಾ

(ನಿನ ಗಂಡ ಅರುಮನಿಗೆ ಬಲಿಯಾಗಿ ಹೋದ ಮ್ಯಾಲೆ ನಿನ್ನ ಮಗನಿಗೆ ರಾಜ್ಯ ಪಟ್ಟ ಕಟ್ತೇನಿ ತಂಗಿ. ನನ ಕೊಡಗಿನ ಜಿಲ್ಲೆಯನ್ನ ನಿನಗೆ ಜಾಗರಿಕೆಯಾಗಿ ಕೊಡ್ತೇನಿ. ನಾನು ರಾಜ್ಯಬಾರ ಮಾಡ್ತಿದೀನಲ್ಲಿ  ರಾಜ್ಯಬಾರಿಕೆ – ನಿನ್ನಂತೆ ಮಾಡ್ತೇನಿ. ನಾನಾಳೊ ದೊರೆತಾನ ಸಿರಿತಾನ ನೀನಾಳು. ತಂಗಿ ಗಂಡನಾಸೆ ಮಾಡುಬ್ಯಾಡ ತವುರಾಸೆ ಮಾಡು) ಅಣ್ಣಯ್ಯ..ಅಣ್ಣಯ್ಯ, ಅಣ್ಣಯ್ಯ ..ಅಣ್ಣಯ್ಯ ನನ್ನ ಗಂಡುನ್ನ ಅರುಮನಿಗೆ ಬಲಿ ಕಡಿಯಾಕೆ ಕೊಟ್ ಮ್ಯಾಲೆ ನನ್ನ ಗಂಡ ಬಲಿಯಾಗಿ ಹೋದ್ ಮ್ಯಾಲೆ ನಿನ್ನ ರಾಜ್ಯಬಾರಿಕೆ ನನ್ನಂತೆ ಮಾಡುತ್ತೀಯಾ ?

ಮಾಡುತ್ತೀನಿ.

ಅಣ್ಣಯ್ಯ ಅಣ್ಣಯ್ಯ..ನನ್ ಗಂಡ ಅರುಮನೆಗೆ ಬಲಿಯಾಗಿ ಹೋದ್ ಮ್ಯಾಲೆ ನನ್ ಮಗನಿಗೆ ರಾಜ್ಯಪಟ್ಟಿ ಕಟ್ಟುತ್ತೀಯಾ ?

ಕಟ್ಟಿಕೊಡುತ್ತೀನಿ.

ನನ ಗಂಡ ಅರುಮನೆಗೆ ಬಲಿಯಾಗಿ ಹೋದ್ ಮ್ಯಾಲೆ ನಿನ್ ಕೊಡಗಿನ ದೇಶವ ಜಾಗರಿಕೆಯಾಗಿ ಕೊಡುತ್ತೀಯಾ )

ಕೊಡುತ್ತೀನಿ ತಂಗಿ. ನಾನಾಳೊ ದೊರೆತಾನ, ನಾನಾಳೊ ಸಿರಿತಾನ ಮುಂದೆ ನೀಳಿವಾಳು ಗಂಡುನಾಸೆ ಮಾಡುಬ್ಯಾಡಾ ತವುರಾಸೆ ಮಾಡು.

ಅಣ್ಣಯ್ಯ ಅಣ್ಣಯ್ಯ ನನ್ ಗಂಡ ಅರುಮನೆಗೆ, ಅರೂಮನೀಗೇ ನನ್ ಗಂಡ ಅರಮನಿಗೆ ಬಲಿಯಾಗಿ ಹೋದ್ ಮ್ಯಾಲೆ

ನಾ ಮುಂಡಿ ಬಾಳ ಬಾಳ ಕಂಡು। ಕಲ್ಯಾಣ ದೇವ
ನಾನು ಮುಂಡಿ ಬಾಳ ಬಾಳ ಕಂಡೂ
ನಿನ್ನ ದೊರೆತಾನ ಆಳಲೇನೋ
ನಿನ್ನ ಸಿರಿತಾನ ಆಳಲೇನೋ
ನನ್ನ ರಾಜಾ ಇಲ್ಲಾದು ಮ್ಯಾಲೇ
ನನ್ನ ರಾಜಾ ಇಲ್ಲಾದು ಮ್ಯಾಲೇ
ನಿನ್ನ ರಾಜ್ತಾನ ನನಿಗೆ ಯಾಕೋ
ನನ್ನ ದೊರೆಯೇ ಇಲ್ಲಾದು ಮ್ಯಾಲೇ
ನಿನ್ನ ದೊರಿತನಾನ ನನಿಗೆ ಯಾಕೋ
ಅಣ್ಣ ರಾಣೀ ಇದ್ದೂರುವೇನೋ
ಅಣ್ಣ ರಾಣೀ ಇದ್ದೂರುವೇನೋ
ಮನೆಯಲ್ಲಿ ದೊರೆಯೇ ಇಲ್ಲಾದು ಮೇಲೇ
ಮನೆಯಲ್ಲಿ ದೊರೆಯೇ ಇಲ್ಲಾದು ಮೇಲೇ
ಅಣ್ಣ ಗೌಡಮ್ಮಿದ್ದುರುವೇನೂ
ಮನೆಯಲ್ಲಿ ಗೌಡಾ ಇಲ್ಲದು ಮೇಲೇ
ಗೌಡಾ ಇಲ್ಲಾದು ಮ್ಯಾಲೇ
ದೇವರ ಗುಡಿಯೇ ಇದ್ದುರುವೇನೋ
ದೇವರ ಗುಡಿಯೇ ಇದ್ದುರುವೇನೋ
ಗುಡಿಯೊಳಗೆ ದೇವರೇ ಇಲ್ಲಾದುಮ್ಯಾಲೇ
ಗುಡಿಯೊಳಗೆ ದೇವರೇ ಇಲ್ಲಾದುಮ್ಯಾಲೇ
ಗಂಡಾನ ಕೊಟ್ಟು ಗಂಡೂ
ಗಂಡಾನ ಕೊಟ್ಟು ಗಂಡೂ
ಮುಂಡಿ ಬಾಳ ಬಾಳಿ ಕಂಡು
ನಿನ್ನ ದೊರೆತಾನ ಆಳಲಾರೆ
ನಿನ್ನ ದೊರೆತಾನ ಆಳಲಾರೆ

ನಿನ್ನ ಸಿರಿತಾನ ಆಳುಲಾರೇ
ಮುಂಡಿ ಬಾಳ ಬಾಳಿಕೊಂಡು
ಹೋಗಿ ಸೇರುದರ ಮಾನಿ ಮುಂದೆ
ಸೇರುದಾರ ಮನೇ ಮುಂದೆ
ಸೆರಗೊಡ್ಡೀ ನಾ ತಿನ್ನುಲಾರೇ
ಕೇಳುದರ ಮನೇ ಮುಂದೇ
ಕೂಲಿ ಮಾಡಿ ತಿನ್ನುಲಾರೇ
ಮುಂಡಿ ಬಾಳಿ ಬಾಳಲಾರೇ
ನನ್ನ ಗಂಡಾನ ಕೇಳಿ ಬ್ಯಾಡಾ
ನನ್ನ ಮುಂಡೇ ಮಾಡುಬ್ಯಾಡಾ
ಅಣ್ಣಾನ ಕೊಳ್ಳ ತ್ಯೆಬೀ
ಕಣ್ಣೀರ ಬಿಡುವ ತಾಳೇ

ಎಸ್ಟು ಕಣ್ಣೀರು ಬುಟ್ರೂವೆ ಅಪ್ನಿಗೆ ಕನಿಕಾರವಿಲ್ಲ. ನಿನ್ನ ಗಂಡುನ ಅರಮನಿಗೆ ಬಲೀ ಕಡುದ್ರೆ ಸರಿ ತಂಗಿ. ನಿನ ಗಂಡುನ ಅರುಮನಿಗೆ ಬಲೀ ಕಡೀದೆ ವಾದ್ರೆ ನನ ಮಂತಾನ ಉಳಿಯಾಕುಲ್ಲ. ಸಂತಾನ ಬೆಳೆಯಾಕುಲ್ಲ. ಯಾಕೆ ಒಬ್ನಿಂದ ಮಂತಾನ ಸಂತಾನ ಆಳು ಮಾಡಿಕ್ಯಳ್ಳೀ.

ನೀನು ಗಂಡುನಾಸೆ ಮಾಡುಬ್ಯಾಡಾ ತವುರಾಸೆ ಮಾಡವ್ವಾ।
ನೀನು ಗಂಡುನಾಸೆ ಮಾಡುಬ್ಯಾಡಾ ತವೂರಾಸೆ ಮಾಡವ್ವಾ।
ಅಣ್ಣ ನಾನು ಮುಂಡೆ ಆಗುಲಾರೆ ನನ್ನ ಗಂಡ್ನ ಕೊಡುಲಾರೇ।
ನಾನು ಮುಂಡೆ ಆಗುಲಾರೆ ನನ್ನ ಗಂಡ್ನ ಕೊಡುಲಾರೇ।
ನೀನು ಕೊಡುದೇವಾದುರು ತಂಗಿ ನಾನು ಬುಡೋದಿಲ್ಲುವಲ್ಲಾ।
ನೀನು ಕೊಡುದೇವಾದುರು ತಂಗಿ ನಾನು ಬುಡೋದಿಲ್ಲುವಲ್ಲಾ।
ನೀನು ಬುಡುದೇವಾದರು ಅಣ್ಣ ನಾನು ಕೋಡೋದಿಲ್ಲುವಲ್ಲಾ।
ನೀನು ಬುಡುದೇವಾದರು ಅಣ್ಣ ನಾನು ಕೋಡೋದಿಲ್ಲುವಲ್ಲ
ಕೊಡೋದಿಲ್ಲ ಬೀಡೋದಿಲ್ಲ. ಆಟುವೇ ಬಂದೋಗ್ಯೆತಲ್ಲಾ।
ಅಣ್ಣುಗು ತಂಗೀಗು ಅಟುವೇ ಬಂದ್ಯೆತಲ್ಲ.।

ನಾನು ಮುಂಡಿ ಬಾಳ ಬಾಳಾಕುಲ್ಲ, ನನ್ನ ಗಂಡುನ್ನ ನಾನು ಕೊಡಾಕುಲ್ಲ. ನೀನು ಕೊಡದೇ ವಾದ್ರೆ ನಾನು ಬುಡಾಕುಲ್ಲ. ಅವುನೊಬ್ಬುನ್ನ ಅರುಮನಿಗೆ ಬಲಿ ಕಡುದ್ರೆ ನನ ಮಂತಾನ ಸಂತಾನ ಉಳಿತ್ತಾದೆ.,,ಕಡೀದಿದ್ರೆ ನನ್ ಮಂತಾನ ಸಂತಾನ ಉಳಿಯಾಕುಲ್ಲ. ಅವುನೊಬ್ಬುನ್ನ ಬಲೀ ಕಡಿದೇ ವಾದ್ರೆ ನನ್ನ ವಂಸುವೇ ಆಳಾಗೋಯ್ತದಲ್ಲ. ಒಬ್ನಂದ.. ನಾನು ಬುಡಾಕುಲ್ಲ.

ನಾನು ಕೊಡಾಕುಲ್ಲ..

ಕೊಡೋದಿಲ್ಲ,,, ಬುಡೋದಿಲ್ಲ, ಅನ್ನೊ ಅಟುವೇ ಬಂದೋತು. ಅಣ್ಣುಗು ತಂಗೀಗು ಅಟ ಬಂದೋದ್ ಮ್ಯಾಲೆ..ಇಸ್ಟೊತ್ತು ತಂಗೇ.. ಅಂತಿದ್ದನು ಈಗಾ ಮುಂಡೆ ಮುಂಡೆ ಅನ್ನಕಾದ.

ಎಲಾ ಮುಂಡೇ..ಬಲಗೈಲಿ ಬಾಸೇ ಕೊಟ್ಟು ಬಾಸಿಗೆ ತಪ್ಪಿ, ಕೊಡೋದಿಲ್ಲ ಅಂತ ಅಟ ಮಾಡುತ್ತೀಯ. ಬಾಸೆಗೆ ತಪ್ಪಿ ದೋಳು ನನ್ನ ಮನೇ ಬಳುಗ್ ಕೂರುಬ್ಯಾಡಾ ಏಳು ಮುಂಡೆ ಅಂತಾನೆ. ಬಾಸಿಗೆ ತಪ್ಪಿದ ಮುಂಡೆ ನೀನು ನನಿಗೆ ಮಕಾ ತೋರುಬ್ಯಾಡಾ. ನನ್ ಮನೇ ವಳುಗೆ ಕೂರುಬ್ಯಾಡ ಏಳು ಮುಂಡೆ ಅಂತಾನೆ. ತಂಗೆ ಮುಂದೆಲೆ ಇಡಿತಾನೆ, ಬೀದಿಗಳಕೆ ಬತ್ತಾನೆ. ಬಾಸಿಗೆ ತಪ್ಪಿದಾಳು ನನಿಗೆ ಮಕಾ ತೋರು ಬ್ಯಾಡಾ ಅಂತಾ ಮುಂದಾಲೆ ಇಡುದು ಅಟ್ಟಿಂದಾಚೆಗೆ ನೂಕ್ತಾನಲ್ಲೋ ದೇವಾ

ಅಣ್ಣ ನೂಕಾ ಜಾಗ್ದಲ್ಲಿ .. ಅಣ್ಣುನ್ ಮನೆ ಬಾಗುಲಲ್ಲಿ ಬಲಗಾಲೆಡವಿ ಮಕಾಡೆ ಬೀಳುತ್ತಾಳೆ. ಬಾಗುಲಲ್ಲಿ ಬಲಗಾಲೆಡವಿ ಮಕಾಡೆ ಬಿದ್ಲು.,.. ಅಣೀಗೆ ಕಲ್ ತಾಗಿ ರಗುತ್ ಬಂತು. ಹುಟ್ಟಿದ ಮನೇಲಿ ಅಣ್ಣ ಅಟ್ಟಿಂದ್ಯಾಚಗೆ ದೂಕುವಾಗ ಅಣೆಗೆ ಕಲ್ತಾಗಿ ರಕುತ್ ಇಳಿದು ಬಂತು. ಎದ್ದು ನಿತ್ಕಂಡು ತಟ್ಟನೆ ತಿರುಗಿ ನೋಡುತ್ತಾಳೆ. ಕೆನ್ನೆ ಮ್ಯಾಲೆ ಕಣ್ಣೀರಿಳಿಸಿಕಂಡು ಮೂಗಿನ ಮೇಲೆ ರಕುತ ಇಳಿಸ್ಕಂಡು ತವುರ ತಿರುಗಿ ನೋಡುತ್ತಾಳೆ. ಬಾಳ ಕನಿಕಾರ ಕೂಡಿ ಬಂತು. ಅಣ್ಣೆಗೆ ಎರಡು ಕೆಯತ್ತಿ ಮುಗಿತಾಳೆ. . ಪಾಪಿಗಾರ ಸೂಳೆ ಮಗನೇ.. ಅನ್ನಯಕಾರ ಬಡ್ಡೀ ಮಗನೆ ನಾನು ಹುಟ್ಟಿದಂತ ಮನೆಯಲ್ಲಿ ನನ್ನ ಹಟ್ಟಿಂದ್ಯಾಚೆಗೆ ನೀನು ದೂಕುತೀಯ. ಮುಂದೆ ನನ್ನ ಗಂಡನ ನಿನ್ನ ಅರುಮನಿಗೆ ಬಲಿ ಕಡಿಯಾಕೆ ಕೊಟ್ರೆ ನನ್ನೆದೆ ಮ್ಯಾಲಿರಾವು ಯಕ್ಕುದ್ ಕಾಯಿ ಅಂತೇಳಿ ಎದೆ ತಟ್ಟಿಗಂಡಲ್ಲೋ ದೇವಾ .

(ನಾನು ಹುಟ್ಟಿದ ಮನೆಯಲ್ಲಿ ನನ್ನ ಅಟ್ಟಿಂದ್ಯಾಚೆಗೆ ದೂಕುತ್ತೀಯ ಪಾಪಿ ಮುಂದೆ ನಾನು ನನ ಗಂಡುನ್ನ ನಾನು ಕೊಟ್ರೆ ನನ್ನ ಎದೆ ಮ್ಯಾಲಿರಾವು ಯಕ್ಕುದ್ ಕಾಯಿ ಅಂತ ಎದೆ ತಟ್ಕಂಡ್ಲು)

ಈಗ ರಾವು ಬಂತು ಎಲಾ ಮುಂಡೆ ನೀನು ನೋಡಿದ್ರೆ ಹೆಂಗ್ಸು ಎದೆ ತಟ್ತೀಯ ಮಂತ್ರಿ ಸೈನಾದಿಪತಿಗಳಿರಾ.. ಜಲ್ದಿ ಓಡಿ ಬಲ್ಲಿ.. ಈ ಮುಂದೆ ಹೆಂಗ್ಸಾಗಿದ್ಕಂಡು ನನ್ನಂತ ಗಂಡ್ಸಿನ್ ಮ್ಯಾಲೆ ಎದೆ ತಟ್ತಾಳೆ.

ಇವ್ವಾ ಕೈಸೇರೆ ಹಿಡೀರಯ್ಯ ಕಂಬಕ್ಕೆ ಕಟ್ಟೀರಯ್ಯ।
ಇವ್ವಾ ಕೈಸೆರೆ ಹಿಡೀರಯ್ಯ ಕಂಬಕ್ಕೆ ಕಟ್ಟಿರಯ್ಯ।
ಇವಳಾ ಮುಳ್ಳೀನ ಕೋಲಿನಲ್ಲಿ ಮಯ್ಗೆಲ್ಲಾ ಒಡೀರಯ್ಯ।
ಮುಳ್ಳಾ ಕೋಲಿನಲ್ಲಿ ಮಯ್ಗೆಲ್ಲ ಒಡೀರಯ್ಯ।
ಇವಳು ಹೆಂಗಸಾಗಿ ಇದುಕಂಡು ಎದಿಯ ತಟ್ಟುತ್ತಾಳೆ

ಎಸ್ಟಾದ್ರು ರಾಜ್ಯಬಾರಿಕೆ ಮನಸ. ಮಂತ್ರಿ ಸೈನಾದಿಪರವರೆ ಓಡಿಬಂದು ಸೈನಾಪತಿಗಳೆಲ್ಲ

ಇವ್ವಾ ಕೈಸೆರೆ ಹಿಡಿಯುತಾರೇ ಕಲ್ಯಾಣದೇವಾ
ಇವ್ವಾ ಕೈಸೆರೆ ಹಿಡಿಯುತಾರೆ
ಕಂಬಾಕೆ ಕಟ್ಟುತ್ತಾರೆ

ಮುಳ್ಳಾ ಕೊಳ್ಳಾನ ತಂದು

ಇವಳ ಮಯ್ಯೆಗೆಲ್ಲಾ ಒಡೆಯುತಾರೆ

ಮುಳ್ಳಾ ಕೊಳ್ಳದಾ ಏಟೂ

ಮುಳ್ಳಾ ಕೊಳ್ಳದಾ ಏಟೂ

ಇವಳ ಮಯ್ಯೆಗೆಲ್ಲಾ ನಾಟಿಕಂಡು

ಮೈತುಂಬ ರಕುತ ಇಳಿಯುತಾದೇ

ಅಣ್ಣ ಅಣ್ಣ ಅನ್ನುತ್ತಾಳೇ

ಕಯೆತ್ತಿ ಮುಗಿಯುತಾಳೇ

ಅಣ್ಣ ಒಡಿಯಾದ ತಡಿಯಲಾರೆ

ಒಡಿಯಾದ ತಡಿಯಲಾರೆ

ಈ ಬಾಳ ಬಾಳುಲಾರೆ

ಈ ಗೋಳ ತಾಳುಲಾರೆ

ಮುಳ್ಳಿ ಕೊಳ್ಳದ ಏಟೂ

ಮೈತುಂಬ ನಾಟಿಕಂಡು

ಮೈತುಂಬ ರಕುತ ಇಳಿಯಾಲುತಾದೆ

ಮೈತುಂಬ ರಕುತ ಇಳಿಯಾಲುತಾದೆ

ಅಣ್ಣ ಈ ಬಾಳ ಬಾಳಲಾರೇ

ಈ ಗೋಳ ತಾಳುಲಾರೇ

ಕಯತ್ತಿ ಮುಗಿಯುತಾಳೇ

ಅಸ್ಟು ಬಂದಾನ ಅಸ್ಟು ನಿಗೊನಗಳು ಕೊಟ್ಟು ಈ ಬಂದಾನ ತಾಳಲಾರೆ ಸೆರೆ ಬುಡು ನನ್ನ ಗಂಡುನ ಕೊಡ್ತೀನಿ ಅಂತಾಳ ನೋಡಾನ ಅಂತ ತಂಗಿ ಅತ್ರಾಕೆ ಬತ್ತಾನೆ.,, ಈಗಲಾರು ನಿನ್ನ ಗಂಡುನ್ ಕೊಡ್ತೀಯ ಅಂತಾನೆ

ಅಣ್ಣ ಅಣ್ಣ ಅಣ್ಣಯ್ಯ ನನ್ನ ಗಂಡುನ ಅರುಮನೆಗೆ ಬಲಿ ಕಡುದು ತೀರಾಬೇಕು ನೀನು ನನ್ನ ಗಂಡುನ್ನಾ ನೀನು ಅರುಮಾನಿಗೆ ಬಲಿ ಕಡಿದು ತೀರಾಬೇಕಾ? ನಿನ್ನ ಗಂಡುನ್ನ ಅರುಮನಿಗೆ ಬಲಿಕಡುದ್ರೆ ಮಂತಾನ ಸಂತಾನ ಉಳಿತಾದೆ. ಇಲ್ಲ ಅಂದ್ರೆ ಆಳಾಗಿ ಹೋಗುತ್ತಾದೆ. ನಿನ್ ಗಂಡುನ್ ಬಲೀ ಕಡುದೇ ತೀರಬೇಕು,

ಅಣ್ಣಯ್ಯ ಅಣ್ಣಯ್ಯ ನನ್ನ ಗಂಡುನ ಬಲಿ ಕಡೀತೀಯ ಮುಂದೆ ನನ್ನ ಮುಂದೆ ಮಾಡುತ್ತೀಯ. ನನ್ನ ಮುಂಡೆ ಮಾಡಬ್ಯಾಡಾ. ನನ್ನ ಗಂಡುನ್ನ ನೀನು ಅರುಮನಿಗೆ ಬಲೀ ಕಡೀಬೇಕಾರೆ ನನ್ನ ಗಂಡುನ್ನ ನೀನು ಅರುಮನಿಗೆ ಬಲಿ ಕಡೀಬೇಕಾದರೆ ನಾನು ಮುತ್ತೈದೆ ಮೇಲಾಗಿ ಮುಂದೇ ಸಾಯುತ್ತೀನಿ.

ಕೊರಗು ಬುಡು ಬ್ಯಾಡಾ ನನ್ನಾ। ಕಲ್ಯಾಣದೇವಾ

ಕೊರಗ ಬುಡು ಬ್ಯಾಡಾ ನನ್ನಾ

ಕೊಂದೇ ಬುಡಪ್ಪ ನೀನೂ

ಕೊಂದೇ ಬುಡುಪ್ಪ ನೀನೂ

ಮುತ್ತೈದೇ ಮೇಲಾಗೀಗ

ಮುಂದಾಗ್ಗೆ ಸಾಯುತೀನಿ

ಗಂಡಾನ ಕಡಿಯಾದಾ

ನನ ಗಂಡನ ಕಡಿಯಾದಾ

ಕಣ್ಣಲ್ ನಾನು ನೋಡಲಾರೇ

ಮುಂಡಿ ಬಾಳ ಬಾಳಲಾರೇ

ಮುಂಡಿ ಬಾಳ ಬಾಳಲಾರೇ

ಕೊಂದೆ ಬುಡಪ್ಪ ನೀನೂ

ಎಲಾ ಮುಂಡೆ ಎಸ್ಟು ಬಂದಾನ ಎಸ್ಟು ನಿರ್ಗೋಳು ಕೊಟ್ರು ಕೊಡ್ತೀನಿ ಅನ್ನ ಸಬ್ದ ಇವಳಲ್ಲಿ. ಮಂತ್ರಿ ಪರದಾನಿ. ಮಂತ್ರಿ ಸೈನರನ್ನು ಕರೀತಾನೆ. ಮಂತ್ರಿ ಪರದಾನಿಗಳಿರಾ ಇವಳ ಗಂಡನ್ನ ಬಲೀ ಕಡೀಬೇಕಾರೆ ನನಿಗೆ ಬಂದ್ ಸಕ್ತಿ ಸಾದನೈತೆ

(ಇವಳ ಗಂಡುನ್ನ ನಾನು ಬಲಿ ಕಡಿಯಾಕೆ ನನಿಗೆ ಒಂದು ಸಕ್ತಿ ಸಾದನೈತಿ. ಅದೇನೆಂದ್ರೆ ಇವಳು ತವುರಿಗೆ ಬರೋವಾಗ ತನ್ನ ಗಂಡುಗೆ ಒಂದ್ ಪತ್ರ ಬರುದ್ ಬಂದವ್ಳೆ. ಏನಂತ..ಗಂಡಯ್ಯ ಗಂಡಯ್ಯ ನನ್ನ ಅಣ್ಣ ಬಂದು ನನ್ನ ತವುರಿಗೆ ಕರ್ಕೊಂಡೋಗ್ವವನೆ. ನಾನು ತವರಲ್ಲಿದ್ದೀನಿ. ಮಲ್ನಾಡಿಂದ ಮನೀಗೆ ಬಂದೀನ, ನನ್ನ ತವುರಿಗೆ ಬಲ್ಲಿ ಅಂತ ಅಕ್ಸಾರ ಬರುದು ಬಾಗುಲಿಗೆ ಕಟ್ಟಿ ಬಂದವ್ಳೆ)

ಇವಳ ಗಂಡ ಮಲ್ನಾಡಿಂದ ಮನೀಗ್ ಬಂದೀನ ಇವ್ಳ ವಾಲೆ ಓದಿ ಸೀದ ಇಲ್ಲೀಗ್ ಬತ್ತಾನೆ ಮಂತ್ರಿ. ಅವುನ್ನ ಅರುಮನೀಗೆ ಬಲಿ ಕಡೀಬೋದು. ಇವಳ ಸೆರೆ ಬುಡಬ್ಯಾಡಿ ಅನ್ನದಾಗಿ ಹೊಂಟೋದನ್ನಲ್ಲೋ ದೇವಾ (ವಾಲೆ ಓದ್ತಾನೆ ಹೆಡ್ತಿ ತವುರಲ್ಲವ್ಳೆ ಅಂತಾ ಇಲ್ಲೀಗ್ ಬತ್ತಾನೆ. ಅವ್ನು ಬಂದ್ ಗಳೀಗೇಲಿ ಬಲೀ ಕಡೀಬೋದು. ಇವುಳ್ನ ಸೆರೆ ಬುಡುಯಾಡಿ. ಅಲ್ಲಿ ಗಂಡುನ ಮುಚ್ಚಾಕಿ ಬುಟ್ರೇನ್‌ಮಾಡದು ಯಂತ ಕಸ್ಟುಕೀಡಾದ್ಲು..)

ಹೇಳಿ ಹೊಂಟೋಗುತಾನೇ ಕಲ್ಯಾಣದೇವ

ಇವ್ಳ ಮುಳ್ಳ ಕೊಳ್ಳುದ ಏಟೂ

ಬಾಳ ಬಂದಾನುವಲ್ಲೋ

ತಡಿರಪ್ಪ ಒಡಿಯಬ್ಯಾಡೀ

ತಡಿರಪ್ಪ ಒಡಿಯಬ್ಯಾಡೀ

ಈ ಬಾಳ ಬಾಳಲಾರೇ

ನನ್ನ ಮಗನ ತಂದು ಕೊಡಿರಪ್ಪಾ

ಮಗನ ತಂದು ಕೋಡಿರಪ್ಪಾ

ಮಗನ ಮಕಾನ ನೋಡೀ

ಮಗನ ಮಕಾನ ನೋಡೀ

ಪ್ರಾಣಾವ ಬುಡವತೀನಿ

ಎಲ್ಲಿ ಇದ್ದೀಯೊ ಮಗನೇ

ಎಲ್ಲಿ ಇದ್ದೀಯೊ ಮಗನೇ

ನನ್ನ ಐಬೋಗ ನೋಡುಬಾರೊ

ನನ್ನ ಸಿರಿಗೋಳಿ ನೋಡುಬಾರೊ

ನನ್ನ ಸಂತೋಸಾ ನೋಡುಬಾರೊ

ಮಗನ ಹಾಲಿಟ್ಟು ಕೂಗುತಾಳೇ

ಮಗನ ತಂದು ತೋರಿದಪ್ಪಾ

ಮಗನ ಹಾಲಿಟ್ಟು ಕೂಗುತಾಳೇ

ಎಂಟು ವರ್ಸುದ್ ಮಗ ದೂಪಾರತಿ ಕಂದ ಎಂಟೂ ವರ್ಸುದ್ ಮಗಾ ದೂಪಾರತಿ ಕಂದ ಊರ್ ಮಕ್ಳ ಕುಟ್ಟೆ ಊರ್ ಮುಂದೆ ಲಗೋರಿ ಆಡುತ್ತೈತೆ. ತಾಯಿ ಯೇಚನೆ ದುಕ್ಕ ಮಗನಿಗೆ ತಿಳಿತಾದೆ. ತಾಯಿ ಗೋಳು, ತಾಯಿ ಕೂಗಿದ ಕೂಗು, ಮಗನಿಗೆ ಕೇಳುತ್ತಾದೆ. ಲಗೋರಿ ಆಟ ಬುಟ್ಟು ಮನಿಗೆ ಓಡಿ ಬಂತು. ,,, ಮೌಉನ್ ಮನೆಯಲ್ಲಿ ತಾಯೀ ಹುಡುಕುತ್ತಾದೆ. ಕಂಬುಕ್ ಕಟ್ಟಿ ಒಡುದು ಮೈ ತುಂಬ ರಕುತ ಇಳುದು ತಾಯೀ ಗುರುತು ಮಗನಿಗೆ ಸಿಕ್ತಾ ಇಲ್ಲ. ತಾಯೇ ಮಗೀನ್ ಕಂಡು, ಮಗನೇ ಮಗನೇ ದೂಪಾರತಿ ಕಂದಾ ಅಂತ ಕೂಗ್ತಾಳೆ. ಅತ್ರುಕ್ ಬಂದು ದಿಟ್ಟಿಸಿ ನೋಡಿ ಕಂದ, ಇವಳೇ ನನ್ನೆತ್ತಾಯಿ ಅನ್ನದಾಗಿ ಗುರುತಿದ್ದು ಬಾಯ್ ಬಡುಕೊಂಡು ಎದೆ ಬಡುಕೊಂಡು, ಕೊಳ್ ತಬ್ಬಿಕಂಡ್ ಗೋಳಾಡ್ತೈತಲ್ಲೊ ಶಿವನೇ

ಆಗ ಮಗುನ ಗದ್ದಾವಾ ಹಿಡಿದು

ಮಗುನ ಗದ್ದಾವಾ ಹಿಡಿದೂ। ಕಲ್ಯಾಣ ದೇವ

ಕೆಟ್ಟಲ್ಲೊ ನನ್ನು ಮಗುನೇ

ಕೆಟ್ಟಲೋ ನನ್ನು ಮಗುನೇ

ನೀನು ತಾಯಿಲ್ದ ತಬ್ಲಿಯಾದೇ

ನೀನು ತಾಯಿಲ್ದ ತಬ್ಲಿಯಾದೇ

ನೀನು ತಂದಿಲ್ದ ಕಂದುನಾದೇ

ತಂದಿಲ್ದ ಕಂದುನಾದೇ

ನಾನೂವೆ ಸಾಯುತೀನಿ

ನಿನ್ನ ತಂದೂವೆ ಸಾಯುತಾರೆ

ತಬ್ಲಿ ಯಾದೆಲ್ಲೊ ಮಗುನೇ

ಅವ್ವ ಅಂತಾವ ನೀನೂ
ಮುಂದುಕೆ ಯಾರ್ನ ಕರೆಯತೀಯ
ತಂದೆ ಅಂತಾವ ನೀನೂ
ತಂದೆ ಅಂತಾವ ನೀನೂ
ಮುಂದ್ಯಾರ್ನ ಕರೆಯತೀಯಾ
ತಬ್ಲಿಯಾದೆಲ್ಲೊ ಮಗನೇ
ತಾಯಿಲ್ದೆ ತಬ್ಲಿಯಾದೇ
ತಂದಿಲ್ದ ಕಂದುನಾದೇ

ಅವ್ವಾ ಯತ್ತಾಯಿ ನೀನಿದ್ದೀಯ,,, ತಂದೆ ಇದ್ದಾರಲ್ಲ ಇಬ್ರು ಇದ್ದಂಗೆ ನಾನು ತಂದಿಲ್ಲ ಕಂದ ಯಂಗಾಗುತ್ತೀನಿ. ತಾಯಿ ಹೆತ್ತಾಯಿ ನೀನು ಇದ್ದೀಯಲ್ಲವ..ತಾಯಿ ಇಲ್ದ ತಬ್ಲಿ ಯಂಗಾಗುತ್ತೀನಿ ತಂದೆ ಇದ್ದಾರೆ ತಾಯಿ ಇದ್ದೀರಿ ನಾನೆಂಗ್ ತಂದೆ ತಾಯಿ ಇಲ್ದ ತಬ್ಲಿಯಾಗುತ್ತೀನಿ ತಾಯಿ

ಮಗನೆ..ಮಗನೆ ದೂಪಾರತಿ ಕಂದ ನಿನ್ನಪ್ಪುನ್ನ ತಂದು.. ನಿನ್ನ ಅಪ್ಪುನ್ನ ತಂದೂ ಅರಮನೆಗೆ ಬಲಿ ಕಡೀತ್ತಾರೆ. ಮಗನೆ ನನ್ನ ಇಲ್ಲಿ ಕಟ್ಯಾಕಿ ಗೋಳು ಕೊಟ್ಟು ಕೊಲ್ಲುತ್ತಾರೆ ನಾನು ಸಾಯುತ್ತೀನಿ  ನಿಮ್ಮ ತಂದೆ ಅರಮನೆಗೆ ಬಲಿಯಾಗಿ ಹೋದ ಮ್ಯಾಲೆ ಆಗ

ಆಗ..ತಂದೆಯಿಲ್ಲದ ತಬ್ಬಲಿಯಾದೇ
ತಂದಿಲ್ದ ಕಂದುನಾದೇ। ಕಲ್ಯಾಣದೇವಾ
ಮುಂದೆ ತಾಯಿಲ್ದ ತಬ್ಬುಲಾದೇ
ಕೆಟ್ಟಲ್ಲೊ ನನ್ನ ಮಗುನೇ
ನೋಡ್ದ–ತಾಯಿ ಮಯ್ಯಾಗಯ ನೋಡಿ।
ತಾಯೀಯ–ಮಯ್ಯಾಗಳ ರಗುತ ನೋಡಿ
ಬಾಯ್ ಬಾಯ ಬಡುಕೊಂಡಾ
ತಲ್ ತಾಲೆ ಚಚ್ಚಿಕೊಂಡಾ
ತಲ್ ತಾಲೆ ಚಚ್ಚಿಕೊಂಡಾ
ತಾಯೀ ಕಂಡಳವತಾನೇ

ತಾಯಿ ಮಾಯ್ಯಾಗಯ ನೋಡಿ..ಮೈಲೆಲ್ಲಾ ಹರೀತಿದ್ ರಕುತ ನೋಡಿ, ಮಗಾ..ಬಾಯ್ ಬಡುಗೊಂಡು, ತಲೆ ಚಚ್ಚಗೊಂಡು ಗೋಳೋ ಅಂತ ಅಳುತ್ತಾದೆ.

ಮಗುನೆ ಮಗುನೆ ದೂಪಾರತಿ ಕಂದಯ್ಯ ಮಗನೆ ದೂಪಾರತಿ ಕಂದಾ ನಮ್ಮುನ್ ಸಿಟ್ಟು ಸಂಕಟಾ ನಮಿಗೆ ಕೊಟ್ಟಿರೋ ಸಿಟು ಸಂಕಟ ಮದಲೆ ತುಂಬಿ ತುಳುಕುತ್ತಾದೆ. ಈ ಸಿಟ್ಟು ಸಂಕಟದ ಮ್ಯಾಲೆ ನನ್ನ ಮಗನೆ

ನಮ್ಮುಂದ್ ನೀನು ಅಳುಬ್ಯಾಡಾ। ಕಲ್ಯಾಣದೇವ

ಮಗನೆ ನಮ್ಮುಂದ್ ನೀನ್ ಅಳುಬ್ಯಾಡಾ

ನನಿಗೆ ಸಂಕಟ ತಂದು ಕೊಡುಬ್ಯಾಡಾ

ಸಂಕಟ ತಂದು ಕೊಡು ಬ್ಯಾಡಾ

ನಮ್ಮುಂದ್ ನೀನಾಳುಬ್ಯಾಡಾ

ನಮ್ಮಣ್ಣ ನಮ್ಮಣ್ಣ ನನ್ನ ಕಂಬುಕೆ ಕಟ್ಟಿ ನಿರ್ಗೋಳು ತಂದಿದ್ದಾನಲ್ಲಾ

ನಮ್ಮಣ್ಣನ ಬಳಿಗೋಗಿ

ನನ್ನ ಅಣ್ಣನ ಬಳಿಗೆ ಹೋಗಿ

ಅಳೋಗೋ ನನ್ನ ಮಗನೇ

ನನ್ನ ಅಣ್ಣಾನ ಮುಂದೆ ಹೋಗಿ

ಆಳೋಗೋ ನನ್ನ ಮಗನೆ

ನಮ್ಮುಂದ್ ನೀನಾಳು ಬ್ಯಾಡಾ

ಕಣ್ಣೀರ ಬುಡುವತಾಳೇ

ಆಗ ಆಳತ್ತಾ ಆಳುತ್ತಾ ಮಗ ಮಾವನತ್ರ ಹೋಗಿ

ಮಾವಾನ ಕಾಲ ಮ್ಯಾಲೇ

ಮಾವಾನ ಕಾಲ ಮ್ಯಾಲೇ

ಮಾಕನಡೆ ಬೀಳುತಾದೇ

ಮಾವಯ್ಯ ಮಾವಯ್ಯ ತಾಯಿ ಸೆರೇಯ ಬೀಡೊ

ನನ್ನ ತಾಯಿ ಸೆರೇಯ ಬೀಡೊ

ನನ್ನ ಹೆತ್ತಂತ ತಾಯಿ ನೋಡೋ

ನನಿಗೆ ದೇವರಲ್ಲೊ ನನ್ನ ಮಾವಾ

ನನ್ನ ತಾಯಿ ಗೋಳಾ ನೋಡಲಾರೆ

ತಾಯಿ ಗೋಳ ನೋಡಲಾರೇ

ತಾಯೀ ಸೆರೇಯ ಬೀಡೊ

ಮಾವನಾ ಕೊಳ್ಳ ತಬ್ಬಿ

ಕಣ್ಣೀರ ಬಿಡುವತಾದೇ

ಎಷ್ಟು ಕಣ್ಣೀರು ಬುಟ್ರು ಮಾವನಿಗೆ ಕನಿಕಾರವಿಲ್ಲ ನಿನ್ನಪ್ಪುನ ತಂದು ಅರುಮನೀಗೆ ಬಲೀ ಕಡೀದೊರ್ತು..ನಿನ್ನಪ್ಪುನ ತಂದು ಅರಮನಿಗೆ ಬಲೀ ಕಡೀದೊರ್ತು ನಿನ್ನ ತಾಯಿ ಸೆರೆ ಬುಡೋದಿಲ್ಲ ಹೊಂಟೋಗು ಅಂತಾನೆ

ಮಾವಯ್ಯ ಮಾವಯ್ಯ ನನ್ನಪ್ಪ ತಂದು ನನ್ನ ತಂದೆ ತಂದು ಅರುಮನಿಗೆ ಬಲಿ ಕಡೀತ್ತೀಯಾ?

ಬಲಿ ಕಡುದ್ರೆ ನನ್ನ ಮಂತಾನ ಸಂತಾನ ಉಳಿತಾದೆ. ನಿಮ್ಮಪ್ಪ ಬಲಿ ಕಡೀದೆ ವಾದ್ರೆ ನನ್ನ ಮಂತಾನ ಸಂತಾನವೆಲ್ಲ ಆಳಾಗಿ ಹೋಯ್ತದೆ. ನಿನ್ನ ತಂದೆ ಬಲಿ ಕಡಿದೇ ತೀರಬೇಕು.

ಮಾವಯ್ಯ ಮಾವಯ್ಯ ನಿನ್ನೊಂದು ಮಾತ ಕೈಮುಗಿದ್ ಬೇಡ್ಕತ್ತೀತಿ ಯೇನ್ ಬೇಡ್ತೀನಿ ಅಂದ್ರೆ ತಾಯಿ ತಂದೆ ಸತ್ಮೇಲೆ ಮಕ್ಳು ತಾಯಿ ತಂದೆ ಹಡಿಯಾ ಕಾಣದಿಲ್ಲ ಪಡೆಯಾಕಾಗಾದಿಲ್ಲ.. ಮಕ್ಳು ಸತ್ರೆ ತಾಯಿ ತಂದಿದ್ರೆ ಮಕ್ಳ ಹೆತ್ಕತಾರೆ.

(ತಾಯಿ–ತಂದೆ ಸತ್ರೆ ಮಕ್ಳು ಹೆತ್ತಾಯಿ ತಂದೆ ಪಡೆಯಕಾಗಕಿಲ್ಲ. ಅದೇ ತಾಯಿ ತಂದೆ ಇಬ್ರಿದ್ರೆ ಮುಂದೆ ನನ್ನಂತ ಮಗುನ್ನ ಪಡ್ಕತ್ತಾರೆ)

ಮಾವಯ್ಯ ಮಾವಯ್ಯ ನನ್ನ ಹೆತ್ತಾಯಿ ತಂದಿದ್ರೆ ನನ್ನಂತ ಮಗುನ್ನ ಹಡೀತಾರೆ ಪಡೀತಾರೆ. ನನ್ನ ತಾಯಿ ಮುಂಡೆ ಮಾಡಬ್ಯಾಡ.. ನನ್ನ ತಂದೆ ಅರುಮನಿಗೆ ಬಲಿ ಕಡಿಬ್ಯಾಡಾ

ನನ್ನ ತಂದೆ ಕಡಿಯಾಕ್ಕೆ ನೀನು ಕಲ್ಯಾಣದೇವ
ತಂದೆ ಕಡಿಯಾಕ್ಕೆ ನೋಡೂ
ನನ್ನ ಕಡಿಯಪ್ಪ ನೀನೂ
ನನ್ನ ಕಡಿಯಪ್ಪ ನೀನೂ
ತಾಯಿ ಮುಂಡೆ ಮಾಡಬ್ಯಾಡಾ
ತಂದೆಯ ಕಡಿಯಬ್ಯಾಡಾ
ನನ್ನ ಕಡಿಯಪ್ಪ ನೀನೂ
ಕೈಮುಗಿದು ಬೇಡುತಾನೇ
ಆಡಿಕೊಂಡಳಿವ ತಾನೇ

ಎಸ್ಟು ಕಣ್ಣೀರು ಸರುಸಿದ್ರುವೆ ಇವುನಿಗೆ ಕನಿಕಾರ ಅನ್ನಾದು ಕೂಡುನಿಲ್ಲ. ಮಾವುನ್ ಬುಡ್ತು ಅತ್ತೆ ಬಳಿಗೆ ಆಳುತಾ ಹೋಗುತ್ತಾದೆ. ಅತ್ತೆ ಬಳಿಗೆ ಆಳ್ತಾ ಹೋಗಿ

ಅತ್ತೇಯ ಕಾಲು ಮ್ಯಾಲೇ
ಅತ್ತೆಮ್ಮನ ಕಾಲ ಮ್ಯಾಲೇ
ಮಾಕುನಡೆ ಬೀಳುತಾದೇ
ಮಾಕುನಡೆ ಬೀಳುತಾದೇ

ಅತ್ತೆಮ್ಮ ಅತ್ತೆಮ್ಮ ನನ್ನ ತಾಯಿ ನಿನ್ನಂತ ಹೆಣ್ನು ಜನ್ಮಾ

ಅತ್ತೆಮ್ಮ ನನ್ನಪ್ಪ ನಿನ್ನಂತ ಹೆಣ್ಣು ಜನ್ಮಾ
ಕಣ್ಣಲ್ಲಿ ನೋಡುಬಾರೇ
ಕಣ್ಣಲ್ಲಿ ನೋಡುಬಾರೇ
ಅತ್ತೆಮ್ನ ಸೆರೆಗಿಡಿದು ಎಳೆಯುತ್ತಾದೇ

ಸರೆಗಿಡಿದು ಎಳೆಯುತಾದೇ

ಆಡಿಕಂಡಳುವತಾದೇ

ಎಸ್ಟೇ ಆದ್ರು ಹೆಣ್ಣು ಜನ್ಮ ಅದು. ಮಗೀನ್ ಕಣ್ಣೀರ್ ನೋಡಿ ಕನಿಕಾರ ಕೂಡಿಬಂತು. ಹಿಡುದ್ ಸೆರಗ ಬುಟ್ಟಿಲ್ಲ. ಅವ್ನ ಮುಂದ್ಕೆ ಎಳ್ಳಬತ್ತಿದೆ ಅತ್ತ ಮಲ್ಲಮ್ಮನ್ನ

ನೋಡವ್ವ ಅತ್ತೆ ನೀನೂ

ಕೈ ಮುಗಿದು ಕೇಳತಾದೇ

(ಅತ್ತಿಗೆ ಮಲ್ಲಮ್ಮ ದಿಟ್ಟಿಸಿ ನೋಡಿದ್ರೆ ಇವಳ ಮೈತುಂಬ ರಕ್ತ ಇಳಿದು ಅಟ್ಟೀಲಿ ರಕ್ತ ಯಪ್ಪಾಗಿ ನಿಂತಾದೆ. ಇವುಳಿಗೆ ಬಾಳ ಕನಿಕಾರ ಕೂಡಿ ಬಂತು. ಹೆಣ್ಣು ಜನ್ಮಕ್ಕೆ ಕನಿಕಾರ ಕೂಡಿ ಬತ್ತು)

ಕನಿಕಾರ ಕೂಡಿ ಗಂಡುನ ಬಳಿಗೋಗಿ ಆಳ್ತಾ ನಿಂತ್ಕಂಡು. ಕೈಮುಗಿದು ಕಣ್ಣೀರ್ ಬುಟ್ಟು ಗಂಡ ಗಂಡ ನಿನ್ನ ತಂದೆ ನಿನ್ನ ತಂದೆ ನನ್ನಂತಾ ಹೆಣ್ಣು ಜನ್ಮ

ನನ್ನ ಕಣ್ಣಲ್ಲಿ ನೋಡಲಾರೇ

ನಿಮ್ಮ ತಂಗೆ ಸೆರೇಯ ಬೀಡೀ

ತಂಗೇ ಸೆರೇಯ ಬೀಡೀ

ಅವ್ಳು ನನ್ನಂತ ಹೆಣ್ಣು ಜನ್ಮಾ

ಕಣ್ಣಲ್ಲಿ ನಾನು ನೋಡುಲಾರೆ

ಕೈಮುಗಿದು ಬೇಡುತಾಳೇ

ಅವುಳ ಮಾತಗು ಕನಿಕಾರವಿಲ್ಲ. ಅವ್ನ ಗಂಡುನ್ ತಂದು ಅರುಮನಿಗೆ ಬಲಿ ಕಡಿದೊರ್ತು ಅವಳ ಸೆರೆ ಬುಡೋದಿಲ್ಲ.. ಹೊಂಟೋಗು.

ಗಂಡಾ ನನ್ ಮಾತಿಗೆ ಬೆಲಿಲ್ವೆ? ಈಗ ಮಾತಿಗ್ ಮಾತು ಉತ್ರ ಕೊಡ್ತೀರಾ..? ಏನೀಗಾ

ಏನುವಿಲ್ಲ ನಿನ್ನ ತಂಗೇನ ಕಂಬುಕೆ ಕಟ್ಟಿ ನಿರ್ಗೋಳು ಬಂದಾನ ಇಟ್ಟಿದ್ದೀಯಲ್ಲಾ.. ಅವುನ್ನ ತಮದು ಬಲಿ ಕೊಟ್ಟಂಗಾತಾ. ನೀನು ಸೆರೆಲಿಟ್ರೆ ಅವುನ್ನ ತಂದು ಅರುಮನಿಗೆ ಬಲಿ ಕೊಟ್ಟಂಗಾತಾ ಆಗಾದಿಲ್ಲ.

(ಅಲಾ ಬಲಿ ಕಡುದ್ರೆ ನಿನ್ನ ಮಂತಾನ ಸಂತಾನ ಉಳಿತಾದೆ. ಇಲ್ದೆವಾದ್ರೆ ಆಳುತಾದೆ ಅಂದ್ಮೇಲೆ ಅವುಳ್ನ ಸೆರೇಲಿಟ್ರೆ ನಿನ್ನೊಂಸ ಉಳಿದಂಗಾತು ? ನಿನ್ ಮಂತಾನ ಉಳಿದಂಗಾತಾದ? ಆಗಾದಿಲ್ಲ)

ಕೈ ಮುಗಿದು ಬೇಡ್ಕತ್ತೀನಿ.. ಅವುಳ ಕಂಬುಕಟ್ಟೆ ಹೊಡಿಯೋದು ನಿನಗೆ ಸಾರ್ಥುಕವಿಲ್ಲ ಯಾವುದುಕೂವೆ. ನನ್ನಂತ ಹೆಣ್ಣು ಜನ್ಮ ಅವಳ್ನ ಸೆರೆಬುಟ್ಟು ಕಳಿತಪ್ಪ. ಅನ್ನದಾಗಿ ಕೇಳುತ್ತಾಳೆ.

ಆಗ ಬಾನ ಮಾಡುತ್ತಾನೆ. ಮಂತ್ರಿ ಪರದಾನಿಗಳನ್ನು ಕರೆದು ಹೇಳುತ್ತಾನೆ. ಮಂತ್ರಿ ಪರದಾನಿಗಳ್ರಾ ಇವುಗಳಿಗೆಸ್ತು ನಿರ್ಬಂದಾನವಿಟ್ಟು ಗೋಳ್ಕೋಟ್ರುವೇ. ಇದು ಸಾರ್ತುಕ್ವಾ ಗಾದಿಲ್ಲ ಮಂತ್ರಿ ಅವುನ್ನ ಅರುಮನಿಗೆ ಬಲಿ ಕಡೀಬೇಕು. ನನಿಗೆ ಸಾರ್ತುಕ್ವಾಗಬೇಕು ಅವುನ್ನ ಬಲಿ ಕಡಿದೆ ಇವಳ ಸೆರೆ ಕೊಟ್ರೆ ಯಾವುದಕ್ಕೂ ಸಾರ್ತುಕ್ವಾಗಾದಿಲ್ಲ.

ಮುಂದೇನ್ಮಾಡಬೇಕು

ಮುಂದೇನ್ಮಾಡಬೇಕು..ಏಳು ಸಾವಿರ ದಂಡ ಕುಂಡೊಯ್ಯಬೇಕು. ಏಳುಸಾವಿರ ದಮಡ ಕುಂಡೋಗಿ ,, ಏಳು ಸಾವಿರ ದಂಡಿನಲ್ಲಿ ಇವಳ ಗಂಡುನ್ನ ಕೈ ಸೆರೆ ಹಿಡಿತೀನಿ.

ಇವಳ್ನ ಕೈಸೇರೆ ಬಿಡಿರಯ್ಯ ಹಟ್ಟೀಗೆ ದೂಡಿರಯ್ಯ}
ಕೈಸೆರೆ ಬುಟ್ಟು ಅಟ್ಟೀಗೆ ದೂಡಿರಯ್ಯ
ಆಗ ದರುಮಾದ ನಿಂಗವ್ನ ಕೈ ಸೇರೆ ಬುಡುತಾನೇ
ಹೊಡೂದು ಅವಳನ್ನ ಹಟ್ಟೀಗೆ ದೂಡುತಾರೇ

(ಯಾರಿಂದ ಸೆರೆ ಬುಟ್ಟಂಗಾತು. ಈ ಮಗ ಮಾವುನ್ ಕಾಲ್ ಕಟ್ಟಿ ಕೊನಿಗೆ ಅತ್ತೆ ಕಾಲ್ ಕಟ್ಟೊ ವತ್ಗೆ ಅತ್ತಿಂದ ತಾಯಿ ಸೆರೆ ಬುಟ್ಟಂಗಾತು. ಹೆಣ್ಣಿಗೆ ಹೆಣ್ಣು ಸತ್ರು ಅಂತಾಕೆ ಆದ್ರೆ ಇಲ್ಲಿಂಗಾತಾ)

ಇವುಳ ಗಂಡನ ಮನಿಂದ ತವುರಿಗೆ ಬರಬೇಕಾರೆ ತನ್ನ ತವುರ ಮನಿಂದ ಹಟ್ಟಿಗೆ ದೂಡಿಸ್ಕ್ಯಂದು ಗಂಡುನ್ ಮನಿಗೋಗಬೆಕಾರೆ ಅಲ್ಲಿಗಾಗಲೆ ಬರುತ್ತಿನ. ಒಂಬತ್ತಿನುದ್‌ವರಿಗೂ ಅನ್ನುದಾನುವಿಲ್ಲ ನೀರೂ ಇಲ್ಲ ಇವ್ಳಿಗೆ. ಒಂಬತ್‌ದಿನ ಸೆರೆ ಕಟ್ಟವನೆ. ಒಂಬತ್ತೆನಾ ಅನ್ನಾ ನೀರಿಲ್ಲ ತವುರ್ ಮಲ್ಲಿ. ಒಂದ್ ತುತ್ ಬಾಯ್ಗಾಕಿಲ್ಲ. ಒಂಬತ್ತಿಮದ್‌ವರಿಗೂ,

ಅನ್ನ ಸಂಕುಟ ಬಂದು ಮೈತುಂಬ ಹೊಡಿಸ್ಕ್ಯಂಡು ರಕುತ ಸುರಿಸ್ಕ್ಯಂಡು ಮಗೀನ ಹೆಗಲು ಮ್ಯಾಲೆ ಕೈಮಡಿಕ್ಯಂಡು ಕಣ್ಣೀರ್ ಬುಟ್ಕಂಡು. ತೂಬುದ್ಸ್ಯಾಡ್ಕಂಡು ಗಂಡುನ್ ಮನೀಗೆ ಹೊಂಟವಳಲ್ಲೋ ದೇವಾ

(ಏನಂದ..? ಏಳು ಸಾವಿರ ದಂಡ ಕುಂಡೋಗಿ. ಏಳು ಸಾವಿರ ದಂಡ್ನಲ್ಲಿ ಅವಳ ಗಂಡುನ್ ಕೈ ಸೆರೆ ಹಿಡಿದು ತಂದು ಅರಮನಿಗೆ ಬಲಿ ಕಡೀತೀನಿ ಅಂತ ಹೇಳ್ತಾರೆ. ಇವುಳ ಸೆರೆ ಬುಟ್ಟಂಗಾತ್ರಿ.. ಅನ್ನ ನೀರಿಲ್ಲ: ಅನ್ನ ಸಂಕುಟ ಬಂದಾದೆ. . ದುಕ್ಕ ದುಮ್ಮಾನ್ದಲ್ಲಿ ಗಂಡುನ್ ಮನಿಗೆ ಬತ್ತಾಳೆ. ಗಂಡ ಬಂದಿಲ್ಲ.)

ಮನಿಗೇ ಹೋಗುತಾಳೆ ಬೀಗಾವ ಬಿಚ್ಚುತ್ತಾಳೇ।
ಗಂಡುನ್ನ ನೆನುಕಂಡು ಮಕಾಡೆ ಮನಿಗ್ಯವಳೇ।

ಅನ್ನಾ ನೀರಿನ್ ಮ್ಯಾಲೆ ಜಾನುವಿಲ್ಲ: ಗಂಡಂದೇ ಚಿಂತೆ। ಹೋಗಿ ಮಕಾಡೆ ಮನಿಕ್ಯಂದು ಮಗುನ್ ಕರೀತಾಳೆ. ಮಗನೆ ಮಗುನೇ ದೂಪಾರತಿ ಕಂದಾ ಕೆಟ್ಟ ಮಗನೇ ..ಅಂತಾಳೆ ಯಾತುಕೆ ತಾಯಿ ?

ನಮ್ಮಣ್ಣ ನಮ್ಮಣ್ಣ ನನ್ ಕರಿಯಾಕೆ ಬಂದಿದ್ದಾಗ ..ಬಾವ ಎಲ್ಲಮ್ಮ ತಂಗೆ ಅಂತ ಕೇಳ್ದೆ ಆಳಿಗೆಲ್ಲ ದೊರೆಯಾಗಿ ಮಲ್ನಾಡಿಗೋಗ್ಯವರೆ ಅಂತ ನನ್ನಣ್ಣೆ ತಿಳಿಸಿದ್ದೀನಿ. ಇವತ್ತು ಏಳು ಸಾವಿರ ದಂಡ ಕುಂಡೋಗಿ ನಿಮ್ಮಪ್ಪುನ್ನ ಸೆರೆ ಹಿಡಿದು ಬುಟ್ರೆ ಅಂತ ಚಿಂತೆಕನಪ್ಪ ಅನ್ನುತ್ತಾಳೆ.

ಅವ್ವ ಬಣ್ಣುದ್ವಾಲೆ ಬರೆದು ಗಂಡಾಗೆ ಕಳುಸ್ತಾಳೇ।
ಬಣ್ಣುದ್ ವಾಲೆ ಬರೆದು ಗಂಡಾಗೆ ಕಳುಸ್ತಾಳೇ।
ಬಣ್ಣದ ಬಣ್ಣದ್ವಾಲೆ ಎನಂತ ಬರುದಾಳೇ
ಗಂಡ ಹಾಲಿನಂತ ನಮ್ಮ ಮಾನೆ ಹಾಳುಬಿದ್ದು ಹೋಗುತ್ತಾದೇ।
ಗಂಡ ತುಪ್ಪದಂತ ನಮ್ಮ ಮನೆ ತಿಪ್ಪೆ ಹಳ್ಳ ಆಗುತಾರೇ।

ಗಂಡ ನಾನು ಮುಂಡೆ ಆಗುತ್ತೀನಿ, ಮಗ ತಬ್ಲಿ ಆಗುತಾನೇ

ಗಂಡ ನಾನು ಮುಂಡೆ ಆಗುತ್ತೀನಿ, ಮಗ ತಬ್ಲಿ ಆಗುತಾನೇ

ಜಲಿದಿ ಬಂದು ನನಿಗೆ ಮಕುವ ತೋರೋ ದೊರೇ।

ನಿನ್ನ ಕಂಡ ಗಳಿಗೆಲ್ಲಿ ಪ್ರಾಣಾವ ಬಿಡುತ್ತೀನಿ।

ನಿನ್ನ ನೋಡಿದಂತ ಗಳಿಗೆಲ್ಲಿ ಪ್ರಾಣ ಬುಡುತೀನಿ।

ನಾನು ಮುತ್ಯೆದೆ ಮೇಲಾಗಿ ಮುಂದಾಗ್ಲೆ ಸಾಯುತೀನಿ।

ಬಣ್ಣುದ್ವಾಲೆ ಬರುದು ಗಂಡಾಗೆ ಕಳುವ್ಯಾಳೇ।

ವಾಲೆ ಹೋಗೀ ಶಿವನೆ ಗಂಡಾನ ತಲುಪುದೆ ।

ವಾಲೆ ಹೋಗಿ ಗಂಡುನ ಕೈ ತಲುಪುತ್ತದೆ. ಗಂಡುಬಂದು ವಾಲೆ ಓದಿ ಏನ್ ಕಸ್ಟ ಅಂತ ಬರುದಾಳೆ. ಹಾಲ್ನಂತ ಮನೆ ಹಾಳಾಗ್ ಹೋಗುತ್ತಾರೆ. ತುಪ್ಪದಂತ ಮನೆ ತಿಪ್ಪೆ ಹಳ್ಳಾಗುತ್ತಾದೆ. ನನ್ನ ಮಗ ತಬ್ಲಿಯಾಗುತ್ತಾನೆ. ನಾನು ಮುಂಡೇ ಆಗುತ್ತೀನಿ ಗಂಡ ಜಲ್ದಿ ಬಂದು ಮಕಾ ತೋರು ನಿನ್ನ ಮಕಾ ನೋಡಿದ್ ಗಳಿಗೆಲ್ಲಿ ನಾನ ಮುತ್ಯೆದೆ ಮೇಲಾಗಿ ಮುಂದಾಗ್ಲೆ ಸಾಯುತ್ತೀನಿ ಅಂತ ಬರ್ದವ್ಳೆ. ಮನೇಲೇನೋ ಕಸ್ಟಾವಿರಬಹುದು. ನೋಡಿಬರಬೇಕು ಅಂತಾ..

ವಾಲೆ ಕಂಡ ಗಳಿಗೆಲ್ಲಿ ಮನೆಗೆ ಬಂದುವುಲ್ಲಾ।

ವಾಲೆ ಕಂಡ ಗಳಿಗೆಲ್ಲಿ ಮನೆಗೆ ಬಂದುವುನಲ್ಲಾ।

ಇವುಳು ಮಕಾಡೆ ಮನಿಗ್ಯವಳೆ ಮೇಲಕೆದ್ದುಲುವಲ್ಲಾ।

ಮನೆಗೇ ಬಂದ ಮಡದಿ ನಿಂಗಮ್ಮ

ಮಡಿದಿ ನಿಂಗಮ್ಮ ಕದವ ತಟ್ಟುತ್ತಾನೇ।

ಗಂಡ ಬಂದ ದನಿ ಕೇಳಿ ಎದ್ದು ಬಂದ್ ತೂಗುರಿಸ್ಯಾಡಿಕಂಡು ಬಾಗಿಲಿ ತೆಗಿತ್ತಾಳೆ.

ಗಂಡಾನ ಮಕವ ನೋಡಿ। ಕಲ್ಯಾಣದೇವಾ

ಕಾಲು ಮ್ಯಾಲೆ ಬೀಳೂತಾಳೇ।

ಗಂಡಾ ನನು ಮುಂಡೆ ಆಗತೀನೀ

ನಮ್ಮ ಹಾಲಿನಂತ ಮನೆ ಗಂಡಾ

ಹಾಳುಬಿದ್ದು ಹೋಗುತಾನೇ

ತುಪ್ಪದಂತ ನಮ್ಮ ಮಾನೇ

ತಿಪ್ಪೆಹಳ್ಳ ಆಗುತ್ತಾದೇ

ಕಟ್ಟುನಲ್ಲೊ ನನ್ನು ಗಂಡಾ

ನಾನು ಮುಂಡೇ ಆಗತೀನಿ

ನನ್ನ ಮಗ ತಬ್ಲಿಯಾಗುತಾನೇ

ಕೆಟ್ಟನಲ್ಲೊ ನನ್ನ ಗಂಡಾ.

(ಮಡದಿ ನಿಂಗಮ್ಮ ನಾನು ಸತ್ರೆ ನೀನು ಮುಂಡಾಯ್ತಿಯಾ, ನಾನಿದ್ದಂಗೆ ನೀನೆಂಗ್ ಮುಂಡಾಯ್ತೀಯ? ಯೇನ್ ಉಚ್ಚೋ ಬಾನೋ ತಲೆಕೆಟ್ಟು ಮಾತಾಡ್ತೀಯೋ. ಯಾಕೆ ತುಪ್ಪದಂತ ಮನೆ ತಿಪ್ಪೆ ಹಳ್ಳಾಗುತ್ತದೆ. ಯಾಕೆ ಅಲ್ಲಂತ ಮನೆ ಹಾಳಯ್ತದೆ. ನಾನಿದ್ದಂಗೆ ನೀನೆಂಗ್ ಮುಂಡಾಯ್ತಿಯ?)

ಗಂಡಾ ಗಂಡಾ ಕೈ ಮುಗಿದು ಬೇಡುತ್ತೀನಿ. ನಮ್ಮಣ್ಣ ನಿಮ್ಮುನ್ನ ಕುಂಡೋಗಿ ಅರುಮನೀಗೆ ಬಲಿ ಕಡೀತಾನೆ. ಮುಂದೆ ಆಗ ಬಲಿ ಕಡುದ್ ಮ್ಯಾಲೆ ನಾನು ಮುಂಡೆ ಆಗೋದಿಲ್ಲ ನೀವ್ ಸ್ವಲ್ಪ ಮಣ್ಣಿಗೆ ಮಿರೆಯಾದ ಮೇಲೆ ನಮ್ಮನೆ ಹಾಳುಬಿದ್ದೋಗದಿಲ್ಲ. ಗಂಡ ಹೆಡ್ತೀಳಿದ್ರೆ ಹೆಡ್ತೀ ಮಾತು ಇವನ ತಲೇಗ್ ಇಡೀವಲ್ದು. ಇವುನ್ಮನದಲ್ಲ. ಇವುನ್ ಬುಡದಲ್ಲಿ ಯೇನೈತೆಯಿಂದ್ರೆ ಅಣ್ಣುಗು ತಂಗೀಗು ಜಗುಳ ಬಂದು ಇವರಿವರ್ಗೆ ಅಗೆತಾನ ಬಂದದೆ ಅಂತ್ಕತ್ತಾನೆ.)

ನನ್ನ ಹಾಲಿನಂತ ಬಾವುಗೆ ನೀನು ಹಗೇತಾನ ಹೇಳತೀಯ।
ನನ್ನ ಹಾಲಿನಂತ ಬಾವುಗೆ ನೀನು ಹಗೇತಾನ ಹೇಳತೀಯ।
ನನ್ನ ತುಪ್ಪದಂತ ಬಾವುಗೆ ನೀನು ತಿದ್ದಿ ತಂದು ಹೇಳುತ್ತೀಯ।
ನಾವು ಕ್ರಷ್ಣ ಅರ್ಜುನರಂಗೆ ಬಾಳುಮೇ ತೋರಿದಿಲಲ್ಲಾ।
ಅಂತ ಹಾಲಿನಂತ ಬಾವುಗೆ ಹಗೆತಾನ ಹೇಳಬ್ಯಾಡಾ।
ಅಂತ ತುಪ್ಪದಂತ ಬಾವುಗೆ ತಿದ್ದಿ ತಂದು ಹೇಳುಬ್ಯಾಡಾ।

ನಿಮ್ ನಿಮ್ಮ ಅಣ್ಣಾ-ತಂಗೀಗೆ ಜಗುಳ ಬಂದು ಹಾಲ್ನಂತ ಬಾವುಗೆ ಹಗೆತಾನ ಹೇಳಿದ್ದೀಯ

ನಿಮ್ಮ ಜಗುಳೇನು ತಿಳಿತೀನಿ ಬಾವುನ ನೋಡಿ ಬರಾತೀವಿ।
ನಿಮ್ಮ ಜಗಳಾ ತಿಳಿತೀನಿ ಬಾವುನ ನೋಡಿ ಬರಾತೀನಿ।
ಹೆಡುತಿಯ ಮುಂದುಗಡೆ ಅರುಗಳಿಗೆ ಕೂರಾನಿಲ್ಲ।
ಬಾವುನ ಮನಿಗೆ ಪಯಣ ಮಾಡೂತಾನೇ।

(ಹೆತ್ತ ಮಾತ ಕಿವಿ ಮ್ಯಾಲೆ ಹಾಕ್ಕಳ್ಲಲ್ಲ. ಅಣ್ಣಾ ತಂಗಿಗು ಜಗುಳ ಬಂದ ಅಂತ ಹಾಲ್ನಂತ ಬಾವುಗೆ ಹೇಳಿದ ಮ್ಯಾಲೆ.. ನಿಮ್ಮಣ್ಣುನ ಮನೆಗೆ ಹೋಯ್ತಿನಿ. ನಿಮ್ಮಗೆತಾನ ಯೇನ್ ತಿಳಿತೀನಿ. ಬಾವುನ್ ನೋಡಿ ಸರಿಸಮ ಕೂತು ಬತ್ತಿನಿ.)

ಹೆಡ್ತಿ ಮುಂದ್ಗಡೆ ಅರಗಳಿಗೆ ಕೂರ್ನಿಲ್ಲ .

(ಬಾವುನ್ಮನಿಗೆ ಅವನು ಅತ್ಲಾಗಿ ಹೋಗ್ತಾನೆ. ಇತ್ಲಾಗಿ ಇವುಳ ಪಾಡೇನು?)

ಹೆಡ್ತಿ ಜೀವ ತಡೀನಿಲ್ಲ. ನನ್ ಗಂಡ ನನ್ ಮ್ಯಾಲೆ ಕುಡಿ ಮದ್ದಾಲ್ದೆ ಹೋಗುತ್ತಾನೆ ಕೇಳಲಾರೆ. ನನ ಗಂಡ ಕುಡಿ ಮದ್ದಲ್ದೆ ಹೋಗುತ್ತಾನೆ. ನನ್ ಜಿವ ತಡಿಲಾರೆ ತಾಳಲಾರೆ.

ಓಡಿ ಓಡಿ ಹೋಗುತಾಳೇ ಗಂಡನ್ ಹಿಡಿದು ಬಾಚಿ ತಬುತ್ತಾಳೇ।
ಗಂಡಾನ ಬಾಚಿ ತಬ್ಬೀ ಹಿಡಿದವಳಲ್ಲೋ।

ಗಂಡ ಮರಣಾದವ ಕೂಡಿ। ಮಾದೇವನೆ

ನಿಮ್ಮ ಮರಣ್ಕಾಲ ಕೂಡಿ ಬಂತು

ಗಂಡ ಮದ್ದಿಲ್ಲದೆ ಹೋಗುತೀರು

ನಿನಗೆ ಕೇಡುಗಾಲ ಕೂಡಿ ಬಂತು

ಹೋಯ್ತೀಯ ನನ್ನ ದೇವರೆ

ಇವಳ ಮೈಮ್ಯಾಗಳ ಬಟ್ಟೆ ತೆಗೆದು

ಗಂಡ್ಗೆ ಮೈಕೈಯ್ಯ ತೋರುತಾಳೇ

ಗಂಡ್ಗೆ ಮೈಕೈಯ್ಯ ತೋರುತಾಳೇ

ಯೇನಮ್ಮ ಮಯ್ಯೆಲ್ಲ ಇಸ್ಟು ರಂಪ, ಇಸ್ಟು ಗಾಯ

(ಈಗ..ತಳ್ಳಿಂದ ಹೇಳ್ಳಂಡೋದ್ಲು. ನಮ್ಮಣ್ಣ ನನ್ನ ಮೋಸ್ದಲಿ ಕರಕೊಂಡೋಗಿ 'ನಂಗೇನೋ' ಕಸ್ಟೈತೆ ಬಾಸೆ ಕೊಡು ಅಂದ. ಯೋನೋ ದುಡ್ಡು ಕಾಸಿನ ಯವಾರವೋ, ರಾಜಕೀಯದ ಯವಾರವೋ ಅಂತ ಬಾಸೆ ಕೊಟ್ಟೆ. ಬಾಸೆ ಕೊಟ್ಮೇಲೆ ಗೊತ್ತಾತು. ನಿಮ್ಮ ಅವನೂರಿಗೆ ಬರಾಂಗ್ಮಾಡಿಕ್ಯಂಡು ಅರುಮನಿಗೆ ಬಲಿ ಕಡಿಯಾಕ್ ಮಾಡಿದ್ದ ಅಂತವ. ನಾನೇನೋ ದುಡ್ಡು ಕಾಸೀನ್ ಯವಾರವೋ ರಾಜಕೀಯದ ಯವಾರವೋ ಅಂತ ಬಾಸೆ ಕೊಟ್ಟೆ. ನಾನು ಬಾಸೆ ಕೊಟ್ಟು ನನ್ನ ಗಂಡುನ್ನ ಕೊಡಾಕುಲ್ಲ, ಮುಂಡಿ ಬಾಳ ಬಾಳಕುಲ್ಲ ಅಂತ ಚಂಡಿ ಅಟ ಹೋರ್ದೆ)

ಕಂಬಕ್ಕೆ ಕಟ್ಟಿ ನನ್ನಾ। ಕಲ್ಯಾಣದೇವ

ಕಂಬಕ್ಕೆ ಕಟ್ಟಿ ನನ್ನ

ಹೊಡುದಂತ ಗಾಯವಲ್ಲೊ

ಹೊಡುದಂತ ಗಾಯವಲ್ಲೊ

ನೋಡಪ್ಪ ನನ್ನ ದೊರೆಯೇ

ಗಂಡಾಗೆ ಮೈಕೈಯ್ಯ ತೋರುವಾಳೇ

ಕಣ್ಣೀರ ಬಡುವ ತಾಳೇ

ಆಗ ಹೆಡ್ತಿ ಮಯ್ಯಾಗ್ಯ ನೋಡಿ ಸ್ವಲ್ಪ ಕನಿಕಾರ ನಂಬಿಕೆ ಇವ್ನಿಗೆ ಕೂಡಿ ಬತ್ತು. ಕನಿಕಾರ ಕೂಡಿ  ಈಗ ತಡೆದು ತಾಳಿದವನು ಒಬ್ಬ ಮನುಸ. ದುಡುಕಿ ಹೋಗ್ತಾ ಇದ್ದೀನಿ. ದುಡುಕಬಾರ್ದು. ತಡುದು ತಾಳಿ ನೋಡಬೇಕು. ನಡೀ ಮನೀಗೋಗನ ಅಂತ, ಹಿಂತಿರುಗಿ ಬಂದ. ಬಗುವಂತಾ ಗಂಡ ತಾನು ಬಂದ್ ಗಳಿಗೇಲಿ ಹಿಂತಿರುಗಿದ್ ನೋಡಿ ಇವ್ಳಿಗೆ ಕೈಲಾಸ ಪಂಚಪರ್ವತ ನೋಡ್ದಂತಾತು.

ಅವತ್ತು ಐಬೋಗುದ್ ಅಡಿಗೆ ಮಾಡಿ, ಗಂಡ ಹೆಡ್ತಿ ಎದುರ್ ಬದ್ರಿಗೆ ಕೂತಗಂಡು ಸಂತೋಷವಾಗಿ ಊಟ ಮಾಡಿ ಹೋಗಿ ಸಾಲು ಮಂಚುದ್ ಮ್ಯಾಲೆ ಮಲಿಕ್ಯಂಡ್ರು.

ಅದೇ ರಾತ್ರಿ ವಳಿಗೆ ತಂಗೇ ಗಂಡನ ಸೆರೆ ಹಿಡಿದು ಕಡಿಯಾದುಕ್ಕೆ ಏಳು ಸಾವಿರ ದಂಡ ತಕ್ಕಂಡು ಅಣ್ಣ ತಂಗೇ ಮನಿಗೆ ಬತ್ತವನಲ್ಲೊ ದೇವಾ

(ಇವ್ರು ಬಂದ್ ಮನೆ ಸೇರುತ್ಲು, ಅದೇ ರಾತ್ರೀಲಿ ಏಳು ಸಾವಿರ ದಂಡು ತಂಗೇ ಮನಿಗೆ ಬತ್ತಾಐತೆ. ಅದು ಏಳು ಸಾವಿರ ದಂಡು, ಇವ್ರು ನೋಡಿದ್ರೆ ಗಂಡ ಹೆಡ್ತಿ ಇಬ್ರು. ತಡದಾರೆ ಏಳು ಸಾವಿರ ದಂಡ? ಮುಂದೆ ಇವುಳ ಸತ್ಯ ಇವುಳ ದರ್ಮ, ಇವುಳ ಮುತ್ತೈದೆ ಬಾಗ್ಯ ಯಂಗುಳಿಬೇಕು?

ಇವುಳ ಸತ್ಯ ಇವುಳ ದರ್ಮ ದಂಡು ಅಲ್ಲಿಗ್ ಬರೋವತ್ಗೆ ಗಂಡುನಿಗೆ ಒಂಉ ಕೆಟ್ಟ ಕನಸು ಬೀಳ್ತದೆ. ಗಂಡುನ್ ಕನಸು ಯೇನಂದ್ರೆ

(ಇವುಳ ಸತ್ಯ ಇವುಳ ದರ್ಮ ಕೆಟ್ಟ ಕನಸು ಬೀಳ್ತಾದೆ ಗಂಡ್ಗೆ)

ಇವ್ನ ಕನುಸ್ನಲ್ಲಿ

ಮನೆಯಲ್ಲಿ ಅತಿಗಂಡು ದಾನುಗಿನುವೆ ಬರೀತಾದೆ।

ಮನೆಯಲ್ಲಿ ಅತಿಗಂಡು ದಾನುಗಿನುವೆ ಬರೀತಾದೆ।

ಮನೆ ಕತ್ಲಂತ್ಕೆತೆ ಕನಿಸ್ನಲ್ಲಿ ನೀರು ನೀರು ಅಂತಾನೆ. ಹೊಳೆಯ ನೀರೆಲ್ಲ ಮನಿಗ್ ನುಗ್ದಂಗಾಗುತ್ತದೆ. ನಿದ್ದೇಲಿ ಮಲಗಿದ್ದೋನು ನಿದ್ಗೆಂಟಂಗೆದ್ದು ನಿದ್ದಲಿ ಮನಗಿದ್ದೋರು ನಿದ್ಗೆಟ್ಟಂಗೆದ್ದೂ ಮನೆ ಕತ್ಲಂತೂ..ಮನೆ ಕತ್ಲಂತೂ ಅಂತಾ ತಕಾತಯ್ನೆ ಕುಣಿತಾನೆ ಆಗಾ ಎದ್ದು ಗಂಡುನ್ನ ಬಾಚಿ ತಬ್ಕಂಡು ನಿಲ್ಲಿಸ್ಕಂಡ್ಲು. ..ಆಗ ಸ್ವಲ್ಪ ಬುದಿಕೆಟ್ಟಂಗೆ ಎದ್ದೋನು ಜಾನ ಬಂದ್ಮೇಲೆ ಯಾಕಮ್ಮ ನನ ಮಡಿದಿ ?

ಯಾರೋ ಗಂಡಯ್ಯ ನಿದ್ದಲಿ ಮಲಗಿದೋರು ಬುದ್ದಿಗೆಟ್ಟಂಗೆದ್ದು ಮನೇ ಮನೇ ಅಂತ ಕೂಗಿದ್ರಲ್ಲ. ನಿದ್ದೆಲಿ ಮನಗಿದ್ದೋರು ಬುದ್ದಿಗೆಟ್ಟಂಗೆದ್ದೂ ಮನೇ ಕತ್ಕತ್ತು ಕತ್ಕತ್ತು ಅಂತ ಕೂಗಿದ್ರಲ್ಲಾ ಕಾರಣವೇನು ಸ್ವಾಮಿ

ಮಡಿದಿ ನನಿಗೆ ಬಿದ್ದಿದಾಗ ಕೆಟ್ಟ ಕನುಸು, ಕೆಟ್ಟ ಕನುಸು ಬಿತ್ತು. ಇದು ಕನಸು ಕನಮ್ಮ ಕನಿಸ್ನಲ್ಲಿ..

ಮನೆಯಲ್ಲಿ ಕರೆಗಂಡು ಬರೀತಿತ್ತು ನನ್ನ ಮಡಿದಿ।

ಹೊಳೇಯ ನೀರೆಲ್ಲಿ ಮನೆಗೆ ನುಗ್ಗಿದಂಗಾತೂ।

ಹೊಳೇ ನೀರೆಲ್ಲಿ ಮನೀಗ್ ನುಗ್ಗಿದಂಗಾತು, ಮನೆ ಕತ್ತಿ ಬರೀತಿತ್ತು. ನಿದ್ದೆಲಿ ಮನಗಿದ್ದೋನ್ಗೆ ಬುದ್ಗೆಟ್ಟಂಗಾತು. ನನಿಗೆ ಜಾನವತಾನ ಸಿಕ್ನುಲ್ಲ. ಅದ್ಕೆ ಎದ್ದು ತಕತಯ್ನೆ ಕುಣಿದೆ ಮಡಿದಿ.

ಈಗ ಗಂಡ ನಿಮ್ಗೆ ಕೈಮುಗಿದ್ ಒಂದ್ ಮಾತ ಬೇಡ್ಕತ್ತೀನಿ ನಾನು ಯೇನ್ ಮಡಿದಿ..

ಯೇನು ಅಂದ್ರೆ.. ಈ ಕನಸು ನಿಮಗೆ ಬಿದ್ದಿರೋದು. ಈ ಸಪ್ನ ನಿನಿಗೆ ಬಿದ್ದಿರೋದು ಯಾಕೆ ಅಂದ್ರೆ ಮುಂದೆ ನಮಿಗೆ ಕೇಡುಗಾಲಕ್ಕೆ. ಮನೇಗೆ ಬೆಂಕಿಬಿದ್ರೆ ನಾಳೆ ನಮಿಗೆ ಕಿಚ್ಚು. ಹೊಳೇ ನೀರ್ ಕಾಣಿಸ್ಕಂಡ್ರೆ ನಾಳೇ ದಿನ ನಮಿಗೆ ಗೋಳು ಕಣ್ಣೀರು. ಕನಿಸ್ನಲ್ಲಿ ಬೆಂಕಿ ಕಾಣಸ್ಕಂಡ್ರೆ ನಮಿಗೆ ಕಿಚ್ಚು ಗಂಡ, ಹೊಳೇ ನೀರು ಕಾಣಿಸ್ಕಂಡ್ರೆ ನಮ್ಗೆ ಕಣ್ಣೀರು ದೇವ. ಈಗ ಬಂದ್ ಮಾತು ಕೈ ಮುಗಿದ್ ಬೇಡುತ್ತೀನಿ. ಯೇನ್ ಬೇಡುತ್ತೀನಿ ಅಂದ್ರೆ ನನಿಗೆ ಸಕಲ ಸಂಪತ್ತು ಐಶ್ವರ್ಯ ಇದು ನಂದಲ್ಲ. ಸಿರಿಬಾಗ್ಯ ವಡುಬೆ ವಜ್ರ ನಂಗಲ್ಲ ಗಂಡ. ಸಿರಿಬಾಗ್ಯ ವಡುಬೆ ವಜ್ರ ನನಗಲ್ಲ. ಈ ಸಕಲ ಸಂಪತ್ತು ವಡುಬೆ ವಜ್ರ ನನಗಲ್ಲ. ನನಿಗೆ ಸಕಲ ಸಂಪತ್ತು ಸಿರಿಬಾಗ್ಯೇವು ಅಡುವು ಆಸ್ತಿ ಯಾವ್ದು ಅಂದ್ರೆ. ನೀನೊಬ್ಬ ಬದುಕಿದ್ರೆ ನೀನೇ ಬಾಗ್ಯೇವು ನನಿಗೆ.

(ನನಿಗೆ ನೀನೇ ವಡುಬೆ, ವಜ್ರ ಸಿರಿಬಾಗ್ಯೆವು. ನೀನ್ನು ಗಂಡ ಒಬ್ಬಿದ್ರೆ. ಬದುಕಿದ್ರೇ. ಅದೇ ಸಕುಲ ಸೌಭಾಗ್ಯ. ಈಗ ನೀನು ಸತ್ರೆ ನನಿಗೆ ಯೇನಿದ್ರೇನು?)

ನೀನೊಬ್ಬಿದ್ರೆ ನನಿಗೆ ಸಕಲ ಸಂಪತ್ತಾಗುತ್ತಾದೆ ಗಂಡ. ಈ ಮನೇಲಿ ನಾವಿದ್ರೆ, ನಾಳೆ ನಮಗಿಎ ಕಿಚ್ಚು ಸಂಕಟ ಬರುತ್ತಾದೆ. ಕಣ್ಣೀರು ಬರುತ್ತಾದೆ. ಈ ಮನೆ ವಳುಗೆ ನಾವು ಇರ್ವಾದು ನನ ಮುತ್ತೈದೆ ಬಾಗ್ಯ ಉಳೀ ಬೇಕಾದ್ರೆ ನಾವ್ ಹೊರದೇಶಕ್ಕೋಗಬೇಕು. ಕದ್ದು ಗಂಡ ಪರದೇಶದೊಳಗೆ ಹಾದೀ ಬೀದೀ ವಳುಗೆ ತಿರುದು ತಿನ್ನೋದಾಗ್ಲಿ ಗಂಡಾ..

ನಮ್ಮ ದೇಶವ ಬುಟ್ಟು ಬ್ಯಾರೆ ದೇಶಕೋಗಾಬೇಕೂ।
ನಮ್ಮಾ ದೇಶವ ಬುಟ್ಟು ಬ್ಯಾರೆ ದೇಶಕೋಗಾಬೇಕೂ।
ಆಗ ಮುತ್ತೈದೆ ತಾನ ನನಿಗೇ ಇರುತಾದೇ।
ಕೈಯಾ ಮುಗಿಯುತಾಳೆ ಗಂಡನ ಬೇಡೂತಾಳೆ।

ನಡೀರಿ ಹಾದೀ ಬೀದೀಲಿ ಹರಿದು ತಿರುಗ್ ತಿನ್ನಾನ. ಈ ವಡುಬೆ, ವಜ್ರ ನಂಗಲ್ಲ ನಡೀರಿ ಹೋಗಾನ.

ಅದೂ ಮದ್ಯರಾತ್ರಿವೊತ್ತು. ಬ್ಯಾರೇ ದೇಶುಕ್ಕೋಗುದುಕ್ಕೆ ಹಾದೀ ಜನ ಬೀದೀ ಜನುಕೆ ಗೊತ್ತಾಗಬಾರ್ದು. ನಾವ್ ಯಾರು ಅಂತ, ಯಾಕಡೆ ವೋದ್ರು ಎಲ್ಲಿ ವಾದ್ರು ಅಂತ ಹಾದೀ ಜನುಕ್ ನಮ್ಮ ರೂಪ ಸಿಕ್ಕಬಾರ್ದು. ಅಂಗೇ ನಮ್ಮ ವೇಸ ಬದ್ಲು ಮಾಡಬೇಕು. ನಮ್ಮ ಕೂಸ ಬದ್ಲು ಮಾಡಬೇಕು ಅಂತ.

ಇವಳು ಯಣ್ಣು ರೂಪಾ ಬುಡುತಾಳೇ ಗಂಡು ರೂಪಾ ತಾಳುತಾಳೇ।
ಹೆಣ್ಣಾ ರೂಪಾ ಬುಟ್ಟು ಗುಂಡು ರೂಪಾ ತಾಳುತಾಳೇ।
ನಿಂತು ದರಿಸ್ಯಾಳೆ ನಿಲುವತಂಗಿ ದುರುಗಾವಾ।
ಕುಂತ ಕಟ್ಟುತಾಳೇ ಬಿಗುದಾದ ಪೇಟಾವ।
ಬಲಗಡೆ ಬಣ್ಣುದ ಬಾಕಾ ದರಿಸಿದಳುಲ್ಲ।
ಎಡುಗಡೆ ಬೆಡಗೀನ ಚೂರಿ ದರಿಸಿದುಳಲ್ಲ।
ಯಣ್ಣು ರೂಪಾ ಬುಟ್ಟು ಗಂಡು ರೂಪ ತಾಳ್ಯಳೇ।

ನಿನ್ನೆ ಜಾವ ನಿನ್ನ ತಂಗೆ ಇಲ್ಲವಾದ್ರು. ಅನ್ನದಾಗಿ ಜನ ಯಾರಾರ ಅಣ್ಣಗ್ ತಿಳುವಳಿಗೆ ಕೊಟ್ರೆ ನಾವ್ ಯಾವ ದೇಕಕ್ಕೋಯ್ತೀನೊ ಅಲ್ಲೆ ಬಂದು ಅಣ್ಣ ಹಿಡ್ಕಂಡೋದ್ರೆ. ಯೇನ್ ಮಾಡಾದು ಅಂತ ಗಂಡುನ ರೂಪು ಬದ್ಲಾವಣೆ ಇವುಳು ರೂಪು ಬದ್ಲಾವಣೆ. ಇವುಳು ರೂಪು ಬದ್ಲಾವಣೆ ಈ ಮನೆ ಜನ ಇಲ್ಲೋದ್ರು ಅನ್ನೋದು ಈ ಬೀದೀ ಜನುಕ್ ಗೊತ್ತಾಗಬಾರ್ದು. ಅವತಾರ ಎತ್ತಿದ್ರು.

ದೂಪಾರ್ತಿ ಮಗುನ್ನ ಎಂಟು ವರ್ಸ್ದ ಮಗನ ಬೆನ್ನೀನ ಮ್ಯಾಲೆ ಕ್ಟಟ್ಗಂಡ್ಳು. ರಾಜನಂಗೆ ಇವ್ಳೇ ಮುಂದ್ ಕುತ್ಕಂಡ್ಲು. ಗಂಡುನ್ ಬೆನ್ ಹಿಂದೆ ಕೂರಿಸ್ಕಂಡ್ಳು

ಮದ್ದುರಾತ್ರೇ ವಳಗೆ ಕದ್ದು ಹೊಂಟಾರಲ್ಲಾ।

(ಅಣ್ಣುನ್ ದಂಡು ಬಂದು ಮುಟ್ಟೈತೆ ಅಲ್ಲಿ .. ಅಸ್ಟೋತ್ತಿಗೆ ಇಲ್ಲಿ)

ಕುದ್ರೆ ಮ್ಯಾಲೆ ಕುತ್ಕಂಡು ಮೂರ್ ಜನುವೆ ಕದ್ ಹೊಂಟೋಗುವಾಗ ಇಲ್ಲಿ ಕುದ್ರೆ ಬಾಗ್ಲಿಲ್ಲಿ ಲದ್ದಿ ಹಾಕಿ ಹೊಂಟೋಯ್ತು. ಕುದ್ರೆ ಬಾಗುಲಲ್ಲಿ ಸಗುಣಿ ಹಾಕೋಯ್ತು.

ಮದ್ದು ರಾತುರೆಲ್ಲಿ ಕದ್ದೆ ಹೊಂಟೋಗುತ್ತಾರೇ।

ಊರು ಬುಟ್ಟು ಮೂರು ಮೈಲಿ ದೂರ ಹೋಗ್ಯವರಲ್ಲಾ।

ಎಲ್ಲಿ ಹೋಯ್ತಾ ಅವ್ರೆ ಅಂದ್ರೆ ಹಾದೀವಳ್ಗೆ ಬೀದೀವಳ್ಗೆ, ಅಲ್ಲಿ. ಹಾದೀವಳ್ಗೆ ಹೋಯ್ತಾ ಇಲ್ಲ. ಮಹಾಂತ ಕಾಡ್ನಲ್ಲಿ ಮಹಾಂತ ಅರಣ್ಯದಲ್ಲಿ ಮಳೆವಳ್ಗೆ ನುಸ್ತು ಹೋಯ್ತಾವ್ರೆ..ಈಗ ಅಣ್ಣುನ್ ದಂಡು ಬಂತು ತಂದೆ ಮನೆಗೆ ನುಗ್ಗಾಯ್ತು.

ಅಣ್ಣುನ ದಂಡು ಬಂತು ತಂಗೆಯ ಮನೆಗೆ ನುಗ್ಗಾತು.।

ಅವ್ವ ಕ್ವಾಣೆ ಕೊಟ್ಟೇನೆಲ್ಲಿ ಹುಡ್ಕಿ ನೋಡುತಾದೇ

ಎಲ್ಲಿ ಹುಡುಕಿದುರು ಇವರೇ ಇಲ್ಲವಲ್ಲ.

ಅಟ್ಟಿ ಕಾಗೆ ಕ್ವಳಿಗೆ ಎಲ್ಲಾನು ಹುಡುಕುತ್ತಾರೆ ಎಲ್ಲಿ. ಪಾರ್ಸಲ್ಲಾಗೋಗವ್ರರೆ. ಈಗ ಬಾಳ ಬರುಬಾರ್ದು ಸಿಟ್ಟು ಬಂತು ಅಣ್ಣುಂಗೆ. ನಾನು ರಾಜ್ಯಬಾರಿಕೆ ಮನುಸ. ಏಳುಸಾವಿರ ದಂಡು ತಂದು ನನಿಗೆ ಪಲುವೇನು? ಮುಂದೆ ಮಂತ್ರಿ ಅವುನು ಕೈಗೆ ಸಿಕ್ದೆ ವೋದು ಮ್ಯಾಲೆ ಯೇನ್ ಮಾಡುವ ಅಂತ ಯೇಚ್ನೆ ಮಾಡ್ತ.. ಮಾಡ್ತ.. ಕುದುರೆ ಸಗಣಿ ಹಾಕಿ ಹೋಗಿತ್ತಲ್ಲ. ಆ ಕುದುರೆ ಲದ್ದಿ ನೋಡ್ದ. ಕುದುರೆ ಲದ್ದಿ ಆ ಗಳಿಗೆಲ್ಲಿ ಹಾಕೋಗಿತ್ತಿಲ್ಲ ಬಿಸಿಬಿಸಿಯಾಗಿ ಇವನ ಕಣ್ಣಿಗೆ ಕಾಣ್ತೈತೆ. ಆಗ ಯೇಚ್ನೆ ಮಾಡ್ದ್ ಮಂತ್ರಿ ನನ ಬಾವ ಕೂರ ಅಂತ ಕುದ್ರೆ ಈ ರೂಮ್ನಲ್ಲಿ ಕಟ್ತ ಇದ್ದ. ಆ ರೂಮಿನ್ ಬ್ಯಾಗಲ್ಲಿ ಅದೇ ಕುದ್ರೆ ಲದ್ದಿ ಅಕ್ಯೋಗ್ಯತೆ..ಕುದ್ರೆ ಲದ್ದಿ ನೋಡಿದ್ರೆ ಹೊಗೆ ಕಡಿತೈತೆ. ಬಾಳ ಬಿಸಿ ಬಿಸಿಯಾಗಿ ಕಾಣ್ತೈತೆ. ಆವುರು ಈ ಗಳೀಗೆಲ್ಲಿ ಆ ಕುದ್ರೆ ಮ್ಯಾಲೆ ಕದ್ದೊಂಟೋಗಿದ್ದಾರೆ. ಯಾವ್ ದಿಕ್ಕಿನಲ್ಲಿ ಹೊಯ್ತಾತ್ತೊ ನನಿಗೆ ಗೊತ್ತಾಗುತ್ತಿಲ್ಲ. ನನಿಗೆ ಅರವಾಗುನಿಲ್ಲ. ಈ ಗಳಿಗೇಲಿ ಅವ್ರು ಕದ್ದೋಯ್ತಾ ಅವ್ರೆ ಯೇನ್ ಮಾಡನ ಮಂತ್ರಿ ಅನ್ನದಾಗಿ ಕೇಳುವಾಗ ಬ್ಯಾಟೀ ನಾಯಿ ಕರಿರಪ್ಪ. ಬ್ಯಾಟೀ ನಾಯಿ ಕರ್ದು ಯಾವ್ ದಿಕ್ಕಿನಲ್ಲೋಗುತ್ತಾವ್ರೋ. ಆ ದಿಕ್ಕ ತೋರಿಕೊಡ್ಲಿ.

ಐದು ಬ್ಯಾಟೀ ನಾಯಿ ಕರಿತಾರೆ. ಬ್ಯಾಟೆ ನಾಯಿಗಳಿರಾ.. ಯಾವ್ ದಿಕ್ಕಿನಲ್ಲಿ ಅವ್ರು ಕದ್ದೋಗುತ್ತ ಅವ್ರೆ ವಾಸ್ನೆ ಹಿಡಿದು ತೋರ್ಸಿ ಅಂದ್ರು. ನಾಯೀ ಹೋಗೋ ದಿಕ್ಕಿನಲ್ಲಿ ವಾಸ್ನೆ ಹಿಡ್ಕಂಡು.

ವಾಸ್ನೇಯ ಹಿಡುಕಂಡು ನಾಯೆಲ್ಲ ಹೋಗುತಾವೇ।

ವಾಸ್ನೇ ಹಿಡ್ದುಕಂಡು ನಾಯೆಲ್ಲ ಹೋಗುತಾವೇ।

ನಾಯಿ ಓಡಿದಂಗೆ ದಂಡೆಲ್ಲಿ ಓಡುತ್ತಾದೆ।

ಗಂಡೆ ಆನೆ ಅಟ್ಟಿಂಸ್ಯಾರು ಕೊಟ್ಟ ಕೂಗೂವುದಿಲ್ಲಾ

ಆನೆ ಅಬ್ಬರಿಸ್ಯಾದು ಕೊಟ್ಟ ಕೂಗೂತಾದೇ।

ಹೆಜ್ಜೇನು ಮರುದಂಗೆ ಗಂಡೆಲ್ಲ ಮರುದಾದೆ

ಬಾರಿ ಅಬ್ರಿಸಿ ಕೂಗಾಡುತ್ತಾದೆ ದಂಡು. ಹೆಜ್ಜೇನು ಮರುದಂಗೆ ಮರಕಂಡು ಅಬ್ರಸ್ತಾರೆ. ದಂಡು ನಾಯಿ ವಾಸ್ನೆ ಇಡ್ಕಂಡು ಮುಂದೋಗುತ್ತಾರೆ. ದಂಡು ಹಿಂದೆ ಹೊಂಟು ಬತ್ತೈತೆ. ದಂಡು ಹಿಂದೆ ಹೊಂಟು ಬತ್ತೈತೆ.

ನಿಂಗಮ್ಮು ದಂಡ್ಗು ಹತ್ರ ಸೇರೋದುದಲ್ಲಾ।

ನಿಂಗಮ್ಮು ದಂಡ್ಗು ಹತ್ರ ಸೇರೋದುದಲ್ಲಾ।

ಹತ್ರಾ ಸೇರಿದ್ರು. ದಂಡು ಹೆಜ್ಜೇನು ಮರುದಂಗೆ ಮರಿತೈತೆ. ಗಂಡಾ ಗಂಡಾ ಇಂತ ಮಹಾಂತ ಅರಣ್ಯದಲ್ಲಿ, ಇಂತಾ ಕಾಡೊಳಗೆ ಮದ್ ರಾತ್ರೀ ವತ್ನಲ್ಲಿ ಬೊಟ್ಟೆ ಬೋರಾಗುತ್ತಾದಲ್ಲ ಯೇನು ಎಂಬುದಾಗಿ

(ಇಂತಾ ಮದ್‌ರಾತ್ರೇ ವತ್ನನಲ್ಲಿ ಮಹಾಂತ ಅರಣ್ಯದಲ್ಲಿ ಕಾಡ್ನಲ್ಲಿ ಬೊಟ್ಟೆ ಬೋರಾಗುತ್ತೈತಲ್ಲ. ಗಂಡ ಯೇನಿರಬೋದು? ಯೇನಾರ ಆಗ್ಲಿ ಬಂದ್ ಗಳಿಗೆ ಅವುತ ಕೂತಬುಟ್ ನೋಡಬೇಕು ಅಂತ ಹೇಳಿ.)

ಬಿದಿರು ಮೆಳಾಗೆ ಕುದ್ರೆ ಕಟ್ಟಾಕಿದ್ರು।

ಬಿದಿರು ಮೆಳಾಗೆ ಕುದ್ರೆ ಕಟ್ಟಾಕಿದ್ರು।ಬ

ಮರುದ್ ತರಗೆಲ್ಲಾನು ಬಾಚ್ಕಂಬಂದು. ಮರದ್ ತರುಗೆಲ್ಲಾನು ಬಾಚ್ಕಂಬಂದು ಕೈಳಿಕೆ ಕೂತ್ಕಂಡು ಮ್ಯಾಲೆ ತರಗೇಲೆ ಕವುಚ್ಚಂಡ್ರು.

ಈಗ ..ಹಿಂದುಲಿಂದ ಬಂದ ದಂಡು ಮುಂದರಿದು ಹೋಗುತ್ತಾರೆ।

ಹಿಂದೂರಿಂದ ಬಂದ ದಂಡು ಮುಂದರಿದು ಹೋಗುತ್ತಾರೆ.

ಮುಂದರಿದು ಹೋಗುವಾಗ ನಾಯ್ಗೆ ವಾಸ್ನೆ ಸಿಕ್ಕುಲ್ಲ. ಹಿಂದುಕ್ ತಿರುಗುತಾನೆ.

ಹಿಂದ್ಕೇ ತಿರುಗುತಾವೆ ವಾಸ್ನೀಯ ಹಿಡೀತಾವೇ।

ಹಿಂದ್ಕೇ ತಿರುಗುತಾವೇ ವಾಸ್ನೀಯ ಹಿಡಿತಾವೇ।

ಹಿಂದುಕ್ ತಿರುಗಿ ವಾಸ್ನೆ ಇಡುದೋ. ಎಲ್ಲಿ ಅವುತ್ ಕುಂತಿದ್ರು ಅಲ್ಲಿಗೆ ಮಾಸ್ಕ್ಯಂಡ್ ಮೂಸ್ಕ್ಯಂಡು ಬಂದು ತರಗತಿ ಮೂಸುತಾವೆ. ವಾಸ್ನೆ ಚನ್ನಾಗಿ ಸಿಕ್ಕುತ್ತಾದೆ.

ತಮ್ಮ ಬೊಗಳ ಕೂಗತಾವೆ ಬೊಟ್ಟೆ ಹೊಡಿಯಾತಾವೆ।

ತಮ್ಮ ಬೊಗಳ ಕೂಗಾತಾವೆ ಬೊಟ್ಟೆ ಹೊಡಿಯಾತನೆ।

ದಂಡೆಲ್ಲ ಓಡಿ ಬಂದು ತಂಗೇಲೆ ಬಗಿದು ನೋಡುತ್ತಾದೆ. ಅಲ್ಲಿ ಕೂತವರೆ ಸರೆ ಹತಿರಾಕದ್ರಲ್ಲೋ ಶಿವನೇ

ಕೈಸೆರೆ ಹಿಡಿದಾರು

ಯಳ್ಕಂಡು, ಹಿಡ್ಕಂಡು ಬಡ್ಕಂಡು ಹೋಗುತ್ತಾರೆ।

ಕೈಸರೆ ಹಿಡಿತಾರೆ ಬಡ್ಕಂಡು ಹೋಗುತಾರೇ।

(ಈಗ ಇವಳ ಮುತ್ತೈದೆ ಬಾಗ್ಯೇವು ಐವಾ? ಮುಗಿದೋಯ್ತು? ಇವಳ ಮುತ್ತೈದೆ ಬಾಗ್ಯ ಉಳೀಬೇಕಾದರೆ ಮುಂದೇನ್ ಮಾಡ್ಬೇಕು?)

ಹೊಡ್ಕಂಡು ಹಿಡ್ಕಂಡು ದಂಡೆಲ್ಲ ದೂಕ್ಯಂಡೋಗುವಾಗ ಗಂಡುನ್ ನೋಡ್ತಾಳೆ. ಕಣ್ಣೀರ್ ಬುಡುತ್ತಾಳೆ.

ನನ್ನ ಮುತ್ತೈದೆ ಬಾಗ್ಯ ಮುಗುದೋತು. ಏನ್ ಮಾಡ್ಲಿ ಶಿವನೆ ಅಂತಾವ ಬಗುವಂತನ ನೆನಿತಾಳೆ, ಬೂಮಿ ತಾಯೀನ ನೆನಿತಾಳೆ. ನಮ್ಮಣ್ಣ ನನ್ಗಂಡುನ್ನ ಕುಂಡೋಗಿ ಅರುಮನಿಗೆ ಬಲಿ ಕಡೀತಾನೆ. ಮುಂದೆ ಮುಂಡೆ ಬಾಳ ಬಾಳಬೇಕು. ಮುತ್ತೈದೆ ತಾನ ಮುಗುದು ಹೋಗುತ್ತಾದೆ.

ಅಣ್ಣನ ಬಳಿಗೋಗಿ, ಅಣ್ಣನ ಬಳಿಗೋಗಿ ಎರಡು ಕಯೆತ್ತಿ ಮುಗುದೂ ಅಣ್ಣಯ್ಯ.. ಅಣ್ಣಯ್ಯ ನಿನ್ನಂತ್ಲೇ ಆತು. ನಾನು ಮುಂದೆ ಮುಂಡೆ ಬಾಳ ಬಾಳಕಾಗಾದಿಲ್ಲ. ನಾನು ಮುತ್ತೈದೆಯಾಗಿ ಮುಂದಾಗ್ಲೆ ಸಾಯುತ್ತೀನಿ.

ಕೊಂದೆ ಹೋಗಪ್ಪಾ ನನ್ನಾ। ಕಲ್ಯಾಣದೇವ
ಕೊಂದೆ ಹೋಗಪ್ಪ ನನ್ನಾ।
ಕಯೆತ್ತಿ ಮುಗಿಯುತಾಳೇ
ಕಣ್ಣೀರ ಬಿಡುವತಾಳೇ

ಕಣ್ಣೀರ್ ಬುಟ್ ಕೈ ಮುಗಿವಾಗ ಆ ಮಾತಿಗೆ ಅಣ್ಣ ಯೇನ್ ಹೇಳುತ್ತಾನೆ. ಅಲ್ಲು ಕಡೀತ್ತಾನೆ. ಮುಂಡೆ ಅಂತಾನೆ. ಎಲಾ ಮುಂಡೆ ಯೇನಂತಾ ನೀನ್ ಎದೆ ತಟ್ದೆ. ನನ್ನ ಗಂಡುನ್ನ ನಾನು ಕೊಟ್ರೆ ನನ್ನ ಗಂಡುನ್ನ ನಾನು ಕೊಟ್ರೆ ನನ್ನ ಎದೆ ಮಾಲೀರಾವು ಯಕ್ಕುದ್ ಕಾಯುದಲ್ಲಿ ಎದೆ ತಟ್ಟೆಲ್ಲಿ. ಗಂಡಿನ್ ಮುಂದೆ ಹೆಂಗ್ಸು ಎದೆ ತಟ್ಟೆಲಾ..

ಮಾರೀಯ ಮುಂದೆ ಕ್ವಾಣಾವ ಕಡುದಂಗೆ।
ಮಾರೀಯ ಮುಂದೆ ಕ್ವಾಣಾವ ಕಡುದಂಗೆ।
ನಿನ್ನ ಮುಂದೆ ನಿನ್ ಗಂಡಾನ ಕಡೀತೀನೀ।
ನಿನ್ ಮುಂದೆ ನಿನ್ ಗಂಡಾನ ಕಡೀತೀನೀ

(ಹೆಂಗ್ಯಾಗಿ ನನ್ನಂತ ಗಂಡ್ಸಿನ್ ಮ್ಯಾಲೆ ಎದೆ ತಟ್ಟಲ್ಲಾ ಮಾರಿ ಮುಂದೆ ಕ್ವಾಣುನ್ ಕಡುದಂಗೆ ನಿನ್ ಮುಂದೆ ನಿನ್ ಮುಂದೆ ನಿನ್ ಗಂಡುನ್ ಕಡೀತೀನಿ.)

ಬಡುಕೊಂಡು ಹಿಡಾಕೊಂಡು ದೂಡಿಕೊಂಡೆ ಹೋಗುತ್ತಾನೆ.।
ಬಡಕೊಂಡು ಹಿಡಾಕೊಂಡು ದೂಡಿಕೊಂಡೆ ಹೋಗುತ್ತಾನೆ।

ಯೇನ್ ಮಾಡ್ಲಿ ಬಗುವಂತ, ಬೂಮಿ ತಾಯಿ ನನ್ನ ಮುಂದೆ ನಿಲ್ಲಿಸ್ಕಂಡು ನಮ್ಮಣ್ಣ ನನ್ ಗಂಡುನ್ನ ಕಡೀತಾನೆ. ಕಡಿಯಾದ ನೋಡುಬಾರ್ದು. ಮುಂದೆ ಮುಂಡೆ ನನ ಬಾಳು ಬಾಳುಬಾರ್ದು. ನನ್ ಪ್ರಾಣಾನಾರು ಕಳ್ಡಬುಡ್ತೀನಿ ಬಗುವಂತ ಅಂತೇಳಿ ಯಂಗ್ ಕಳ್ಳಳ್ಳೋ ಬಗುವಂತಾ. ಯಾವ್ ರೂಪ್ದಲ್ಲಿ ಪ್ರಾಣ ಕಳ್ಕಳೀ ಜಾನ ಮಾಡುತ್ತಾಳೆ. ಅಣ್ಣುನ್ ದಂಡಿನ್ ಮ್ಯಾಲೆ ಯದ್ದವಕೆ ನುಗ್ಗಬೇಕು ನಾನು. ಇವುನ್ ದಂಡಿನ ಮ್ಯಾಲೆ ಯುದ್ದಕ್ ನುಗ್ಗಿದ್ರೆ.. ಯಾವನಾದ್ರು ಕತ್ತೀಲಿ ನನ್ನ ಅತ ಮಾಡ್ತಾನೆ.

ಪ್ರಾಣ ತೆಗೀತಾನೆ. ಆಗ ಮುತ್ತೈದೆ ಮುಂದಾಗಿ ಸಾಯುತ್ತೀನಿ. ಇವ್ನ ದಂಡಿನ್ ಮ್ಯಾಲೆ ಯದ್ದಕೆ ನುಗ್ಗಬೇಕು ನಾನು ಅನ್ನ ಮನಸಾಗೋತು.

ಅಣ್ಣುನ ದಂಡಿನ್ ಮ್ಯಾಲೆ ಯುದ್ದಕೆ ನುಗ್ಗುವಾಗ, ನುಗ್ಗಬೇಕಾರೆ ಬೂಮಿ ತಾಯಿ ನೆನುಸ್ತಾಳೆ. ಬೂಮಿ ತಾಯಿ ಬೇಡುತ್ತಾಳೆ. ಬೂಮಿ ತಾಯಿ ಬೂಮಿ ತಾಯಿ ಈಗ ಅಣ್ಣೆಲ್ಲಿ ತಂಗೆಲ್ಲ. ಅನ್ನದು ನೀನು ತೂಗಿ ನೋಡು

ಬಗುವಂತ ಬಗುವಂತ ನಿನ್ನ ಕೈಮುಗಿದ್ ಬೇಡುತ್ತೀನಿ. ಅಣ್ಣಲ್ಲಿ ಅನ್ಯಾಯ ಐತಾ.. ನನ್ನಲ್ಲಿ ಅನ್ನಾಯ ಐತಾ। ನೀನು ತೂಗಿ ನೋಡು. ಬೂಮಿ ತಾಯಿ ನೀನು ತೂಗಿ ನೋಡು. ನಿಮ್ಮ ಶರಣೆಲ್ಲಿ ಯುದ್ದಕೆ ನುಗ್ಗುತ್ತೀನಿ. ಬೂಮಿ ತಾಯಿಗೆ ಸೆರಣೆ ಮಾಡಿ ಬಗುವಂತಂಗೆ ಸೆರಣು ಮಾಡುತ್ತಾಳೆ.

ಮುಂಗಾಲ ಸೆರೆಗ ಹಿಂದುಕ್ಕೆ ಕಟ್ಟುತ್ತಾಳೇ।

ಶಿವಶಿವ ಬಣ್ಣುದ್ ಕತ್ತಿ ಬಲಿಗೈಲಿ ಇಡಿದಾಳೇ।

ತಂದೇನಾನ ತಂದೆನ್ನ ತಾನಾನಾ ತಂದೆನ್ನತಾ  ತಂದೆನಾನಾ ತಂದೆನ್ನ ತಾನಾನಾ.

ಬಣ್ಣದ ಕತ್ತಿ ಬರಿಗೈಲಿಡಕಂಡು

ಅಣ್ಣನ ದಂಡಿಗೆ ಹಾಕುತ್ತಾಳೆ ಉಲ್ಲೆ ಮರಿಯಂಗೆ।

ತಂದೇನಾನಂ ತಂದೆನ್ನ ತಾನಾನಾ..ತಂದೆನ್ನತಾ.  ತಂದೇನಾನಾ ತಂದೆನ್ನ ತಾನೂ॥

(ಯಾರುನ್ನ ಬೇಡಿ ಯುದ್ದಕ್ಕೆ ನುಗ್ಗಿದ್ಲು. ಬೂಮಿ ತಾಯಿ ಬಗುವಂತನ್ನ ಬೇಡಿ ತಾನೆ ಯುದ್ದುಕೆ ನುಗ್ಗಿದ್ದು ನೀನೇ ನನಿಗೆ ಸಾಕಾರ ಅನ್ನಾದಾಗಿ)

ಬೂಮಿ ತಾಯಿ ಯೇನ್ ಸಾಕಾರ ಮಾಡುತ್ತಾಳೆ ಬೂಮಿ ತಾಯಿ ಇವಳ್ಗೇನು ಸಾಕಾರ ಮಾಡುತ್ತಾಳೆ. ಅಂದುರೆ ಅಣ್ಣನ್ ದಂಡಿಗೆಲ್ಲ ಬೆಪ್ಪು ತಂದು ಕೂಡಿಬುಟ್ಟು ಬೂಮೀ ತಾಯಿ

(ಅಣ್ಣುನ್ ದಂಡಿಗೆಲ್ಲಿ ನಿಂತ ಜಾಗದಲ್ಲಿ ಬೆಪ್ಪು ಜಾನ ಅವತಾರವೆ ಇಲ್ಲಿ. ಈಗ ಬಗುವಂತ ಯೇನ್ ಸಾಕಾರ ಮಾಡ್ತಾನೆ ಅಂದ್ರೆ ಇಲ್ಲುದ್ ಬಲ, ಇಲ್ಲುದ್ ಸಕ್ತಿ..ರಾವು..ರವುಸು? ಬಗುವಂತ ಕೊಟ್ಟಿದ್ದು ಬಲಸಕ್ತಿ. ರಾವು ರವುಸು, ಉಂಟು ಮಾಡಿರ ಬಗುವಂತ ಬೂಮಿ ತಾಯಿ ಅಣ್ಣನ್ ಸೈನ್ಯಕ್ಕೆ ಮೂರು ತಂದು ಕೊಟ್ಲು.)

ಹಾಕುತ್ತಾಳೆ ಹುಲ್ಲೆ ಮರಿಯಂಗೆ

ಅಣ್ಣನ ದಂಡ ಕತ್ತಿಯಾಡಿಸಿ ಕಡಿಯಾತಾಳೇ॥

ತಂದೇನಾನು ತಂದೆನ್ನ ತಾನಾನಾ ತಂದೆನ್ನನಾ.. ತಂದೆ ನಾನಾ ತಂದೆನ್ನ ತಾನಾನಾ।

ಆನೆ ಮ್ಯಾಲೆ ಆನೆ ಕಡುದಾಳೊ

ಅಣ್ಣನ ದಂಡ ಒಂಟೆ ಮ್ಯಾಲೆ ಒಂಟೇ ಕಡುದಾಳೊ॥

ತಂದೇ ನಾನು ತಂದೆನ್ನ ತಾನಾನಾ.. ತಂದೆನ್ನನಾ ತಂದೆನಾನಾ ತಂದೆನ್ನ ತಾನಾನಾ।

ಕುದುರೆ ಮ್ಯಾಲೆ ಬರುವ ಜಾನುರಾನ

ಕುದುರೆ ಮ್ಯಾಲೆ ಬರುವ ಜಾನುರಾನಾ

ಅಣ್ಣನ ದಂಡ ಸಿಗುರಿ ಸಿಗುರಿಗೆ ಕಡಿಯಾತ್ಯಾಳಲ್ಲಿ॥

ತಂದೇನಾನಾ ತಂದೆನ್ನ ತಾನಾನಾ.. ತಂದೆನ್ನತಾ  ತಂದೇನಾನಾನ ತಂದೆನ್ನ

*ಈ ಗುರುತು ಬರುವೆಡೆ ಈ ಸೊಲ್ಲನ್ನು ಮುಖ್ಯಗಾಯಕನ್ನೂ ಸೇರಿ ಹಿಮ್ಮೇಳದವರು ತಾನಾನು ಹಾಕುತ್ತಾರೆ.

ಇದ್ದೊಂದು ಬೀಸಾ ಬೀಸುವಾಳಲ್ಲಿ

ಅಣ್ಣನ ದಂಡು ಮೂರು ಸಾವಿರ ದಂಡೇ ಮುರುದಾದೆ॥

ತಂದೇನಾನ ತಂದೆನ್ನ ತಾನಾನಾ ತಂದೆನ್ನತಾ ತಂದೇತನಾನಾ ತಂದೇನ್ನ ತಾನಾನಾ।

ಕುರಿಯ ಹಿಂಡಿಗೆ ತ್ವಾಳ ನುಗ್ಗಿದಂಗೇ\

ಕುರಿಯ ಹಿಂಡಿಗೆ ತ್ವಾಳ ನುಗ್ಗಿದಂಗೇ

ಅಣ್ಣನ ದಂಡ ಗಾಳು ಗೋಳಾ ಮಾಡೂತಾಳಲ್ಲೊ॥

ಕಬ್ಬೀನ ಗದ್ದೆಗೆ ಮದ್ದಾನೆ ನುಗ್ಗಿದಂಗೆ

ಕಬ್ಬೀನ ಗದ್ದೆಗೆ ಮದ್ದಾನೆ ನುಗ್ಗಿದಂಗೆ

ಅಣ್ಣನ ದಂಡ ನುಗ್ಗಿ ನುಗ್ಗಿ ಮಾಡುತ್ತವಳಲ್ಲಾ॥

ಅತ್ತೊಂದು ಬೀಸ ಬೀಸೂವಾಳಲ್ಲಾ

ಅಣ್ಣನ ದಂಡು ಐದು ಸಾವರ ದಂಡೇ ಮುರುದಾರೇ॥

ದಂಡು ಸತ್ತರ ರಕುತ ಹರಿಯಾರೊ

ರಕುತದ ಮ್ಯಾಲೆ ಹಾರಿ ಹಾರಿ ಯದ್ದ ಮಾಡ್ಯಾಳೇ॥

ಆರು ಸಾವಿರ ದಂಡೇ ಮುರುದಾದೇ

ದಂಡಿನ ತರಕುತ ಹದ್ದು ಕಾಗೇಗೆ ಹರೆಬ್ಬ ಮಾಡ್ಯಾದೊ॥

ಆರು ಸಾವಿರ ದಂಡು ಮಡುದಾದೆ..ಇಲ್ಲಿ ಮನೇ ಬಳುಗಿಂದ ಕದ್ದೋಗುವಾಗ ಮನೀನ್ ಬೆನ್ನೀಗೆ ಕಟ್ಕ್ಯಂಡಿದ್ದಲ್ಲಿ ಆದರ ಜಾನವೇ ಇಲ್ಲ.

ಹ್ಯಾರಿ ಹಾರುತ ವಿದ್ದ ಮಾಡುವಾಗಾ

ಬೆನ್ನ ಮ್ಯಾಗುಳ ಮಗಾ ಕಸುಗಂಡ ರಕುತ ಕೋಡೀ ಬಳೀಕೆ ಬೀಳಾದು॥

ದಂಡ ಕೊಲ್ಲಿ ರಾವು ರವುಸದಲ್ಲಿ

ಇವುಳಿಗೆ ಮಗಾ ಬಿದ್ದುದು ಗೊತ್ತೇ ಆಗುಲಿಲ್ಲ॥

ರಾವು ರವುಸು ,,,ಈ ಬೆನ್ ಮ್ಯಾಗಳ ಮಗಾ ಕಸ್ಗಂಡು ರುಕುತದ ಕೋಡೀ ವಳಿಕೆ ಬಿದ್ದುದ್ ಇವುಳಿಗೆ ರಾವು ರವುಸ್ನಲ್ಲಿ ಗೊತ್ತಾಗ್ನುಲ್ಲ.

ರಕ್ತುದ್ ಕೋಡಿಯವಳಿಗೆ ಮುಳುಕಿ  ಮುಳಿಕೆ ಏಳುತಾದೇ।

ರಕ್ತುದ್ ಕೋಡಿಯವಳಿಗೆ ಮುಳುಕಿ ಮುಳುಕಿ ಏಳುತಾದೇ।

ಬಂದ ಯಾಣ ಸಿಕ್ಕುತ್ತಾದೆ ಯಣಿನ್ ಮ್ಯಾಲೆ ಅತ್ತಿಕತ್ತು।

ಯಾಣಾನೇ ಸಿಕ್ಕುತ್ತಾದೆ ಯಣಿನ್ ಮ್ಯಾಲೆ ಅತ್ತಿಕತ್ತು।

ಯಣೀನ್ ಮ್ಯಾಲೆ ಅತ್ಕ್ಯತ್ತು ಮಗಾ, ಜೀವಾ ಉಳಿಸ್ಕ್ಯತ್ತು. ಆರು ಸಾವಿರ ದಂಡು ಮಡುದಾದೆ. ಏಳುಸಾವಿರ ದಂಡ್ನಲ್ಲಿ ಒಂದು ಸಾವಿರ ದಂಡು ಉಳಿದಾರೆ. ಒಂದು ಸಾವಿರ ದಂಡಿಗೆ ಬೂಮಿ ತಾಯಿ ಬೆಪ್ಪ ತಗಮಡು ಜಾನಮಾನ ಬತ್ತು. ಈಗ ಬಂದ್ ಸಾವಿರ ದಂಡು ಕಣ್ ಬುಟ್ ನೋಡಿದ್ರೆ ರಮೆರಮೆಯಾಗಿ ಹದ್ದು ಕಾಗೆ ಹರಬ್ಬ ಮಾಡ್ತಾವೈ. ರಕ್ತಾವ ಅಣ್ಣುಗು ಜಾನಾವತಾರ ಬಂತು. ಮಂತ್ರಿ ಪರದಾನಿಗಳಿರಾ,,,,ನನ್ನ ತಂಗಿಗೆ

ಸೆರೆಣಾರ್ತಿಯಾಗಿರಪ್ಪ. ಅವುಳಿಗೆ ಸೆರಣಾರ್ತಿಯಾಗಿ ಇಸ್ಟು ದಂಡು ಕಡುದ್ ಮ್ಯಾಲೆ ನಮ್ಮನ್ನು ಕಡೀತಾಳೆ. ಸೋತು ಬುಟ್ಟೋ..ನಮ್ಮ ಜೀವಾ..

ಉಳುಸವ್ವ ಅನ್ನದಾಗಿ ಬೇಡಿರಪ್ಪ. ಆಗ ಒಂದು ಸಾವಿರ ದಂಡೆಲ್ಲ..

ತಾಯಿ ತಾಯಿ..ನಾವು ಸೆರಣಾಗಿದ್ವೀವಿ ನಮ್ಮ ಜೀವ ಉಳಿಸವ್ವ,, ಅನ್ನದಾಗಿ ಕಯೆತ್ತಿ ಮುಗಿತಾರೆ.

(ಆವಾಗ ಕಯೆತ್ತಿ ಮುಗುದು ಕಣ್ಣೀರ್ ಬುಡಾಕಾದ್ರು. ಇವುಳು ರಾವು ರವುಸು ಮಾಯವಾಗಿ ಕನಿಕಾರ ಬರಾಕಾತು)

ಸೆರಣಾರ್ತಿ ಯಾರ ಮ್ಯಾಲೆ ವಿದ್ದ ನಿಲ್ಲಿ .

ಎಡಕೆ ಬಲಕೆ ತಿರುಗಿ ಗಂಡನ್ನ ಬಡುಕತಾಳೇ।

ಎಡಕೆ ಬಲಕೆ ತಿರುಗಿ ಗಂಡನ್ನ ಬಡುಕಾತಾಳೇ।

ಗಂಡ ಕಣ್ಣಿಗೆ ಕಂಡ ಗಂಡನ ಬಳಿಗೆ ಹಾರ್‍ಯಾಳು।

ಗಂಡ ಕಣ್ಣಗೆ ಕಂಡ. ಹಾರಿ ನೈಗುದು ಬಂದ್ಲು ಗಂಡನ್ ಬಳಿಗೆ

ಗಂಡನ ಬಾಚೀ ತಬ್ಬಿ ಕುದುರೇಗೇ ಎಸುದಾಳು।

(ಗಂಡುನ್ನ ಬಾಚಿ ತಬ್ಬಿಕ್ಯಂಡು ಎಸುದ್ಲು ಕುದುರೆ ಮ್ಯಾಕೆ ಇವುಳು ಕುದುರೆ ಮ್ಯಾಲಿಕೆ ಹಾರಿ ಕುತ್ಕಂದ್ಲು. ಹೊಂಟೋಯ್ತು ಇದ್ರು. ಮನ ಮರ್‍ತು ಬುಟ್ರು. ಆ ರಾತ್ರಿ ರವಸ್ಸು ಮಗೀನ್ ಮ್ಯಾಲೆ ಜಾನಿಲ್ಲ. ಗಂಡುನ ಮ್ಯಾಲ್ ದಿಗುಲು. ಇಲ್ಲಿ ಮಂತ್ರಿ: ಯಾವ್ ಪ್ರಾಣಿಗಳು ಉಳಿತಾವೆ. ಯಾವ ಜನ ಉಳಿತಾರೆ ಅವ್ವನ್ನ ಉಡುಕ್ಯಾಡಿ ತಗಳಿ ಹೋಗಾನ ಅಂದ್ರು. ಉಳಿಯೋ ಜೀವಾನ ಎಡುಕ್ಯಾಡಿ ನೋಡುವಾಗ ಈ ಮಗ ಸಿಕ್ತು. ಹೆಣೀನ್ ಮ್ಯಾಲೆ ಕುತ್ಗಂಡು ಮಗ ನಮ್ಮಪ್ಪ ನಮ್ಮವ್ವ ಯಲ್ಲವ್ರೆ ಅಂತ ತಿರುತಿರುಗಿ ನೋಡ್ತಾ ಇತ್ತು. ಆಗ ಅವುರುಈ ಮಗಾನು ತಗಾಬೇಕಲ್ವ.. ತಗಂಡ್ರು ಯಳದು ನೋಡಿದ್ರೆ ತಂದೆ ಮಗನಲ್ಲೋ ಶಿವನೇ .

ಆಗ ಅಲ್ಕಡಿತ್ತಾನೆ. ಮಂತ್ರಿ ಪರದಾನಿಗಳಿರಾ ನನ್ ತಂಗೆಗೆ ಸಿರಿ ಬಂದಾದೆ. ತಂಗೇಗೆ ಸಿರಿ ಅಂದ್ರೆ ಯಾವುದು? ಏಳು ಸಾವಿರ ದಂಡು ಕೊಂದೇ. ಏಳು ಸಾವಿರ ದಂಡು ಕೊಂದೆ ಅಂಬುದಾಗಿ

ದಂಡು ಕೊಂದ ಸಿರಿ ಬಂದು ಮಗನ ಮರೆತೋಗ್ಯವಳೆ।

ಅವಳಿಗೆ..ದಂಡು ಕೊಂದ ಸಿರಿ ಬಂದು ಮಗನ ಮರೆತೋಗ್ಯವಳೆ।

ಅದು ಒಂದ್ ಸಿರಿ: ಮತ್ತೊಂದ್ ಸಿರಿ ಯಾವುದು ಅಂದ್ರೆ. ನನ್ನ ಗಂಡುನ್ ನಾನ್ ಕೊಟ್ರೆ ನನ್ ಎದೆ ಮ್ಯಾಇರಾವು ಯಕ್ಕುದ್ ಕಾಯಿ ಅಂತ ಹೇಳಿ ಅಟ ಮಾಡಿ ಗಂಡುನ್ನ ಉಳಸ್ಕಂಡೆ ಅನ್ನ ಸಿರಿ ಇನ್ನೊಂದು.

ಇವಳಿಗೆ ಗಂಡುನಾ ಸಿರಿ ಬಂದು ಮಗುವ ಮರೆತೋಗ್ಯವಳೆ

ಗಂಡನಾ ಸಿರಿ ಬಂದು ಮಗುವ ಮರೊತೋಗ್ಯವಳೆ

ಮಗುವಾ ಇಡುಕಂಡು ಮಡಿಕೇರಿಗೆ ನಡಿರಪ್ಪ

ಮಗಾ ತಗಂಡು ಮಡಿಕೇರಿಗೋದ್ರು ಇವುಳು ಗಂಡನ್ನಾರಿಸ್ಕಂಡು ಮನಿಗೆ ಬಂದ್ಲು. ಗಂಡುನ್ ರಕುತದ್ ಮಯ್ಯ ಮದ್ಲು ತೊಳುದ್ಲು: ಆಮೇಲೆ ಇವುಳು ತೊಳ್ಕಂಡ್ಲು. ಇವುಳು ತೊಳ್ಕಂಡಾದ್ ಮೇಲೆ ಮಗಾ ತೊಳಿಬೇಕು ಅನ್ನದಾಗಿ ಜಾನಾನು ಮಗಾ ತೊಳಿಯಾಕೆ ಮಗುನೇ ಇಲ್ಲವಲ್ಲೋ ಶಿವನೇ ..

ಕಣ್ಣೀರ ಬುಡುತ್ತಾಳೇ। ಮಾದೇವನೆ

ಕಣ್ಣೀರ ಬುಡುತ್ತಾಳೇ

ನನ್ನ ಮಗನ ಮಯ್ಯ ತೊಳಿಯಾಕೆ

ನನ್ನ ಮಗನೇಯ ಇಲ್ಲುವಲ್ಲೊ

ನನ್ನ ದೂಪಾರ್ತಿ ಕಂದಯ್ಯ

ಎಲ್ಲಪ್ಪ ನನ್ನ ದೊರೇ

ನನ್ನ ಮಗುವೇ ಇಲ್ಲುವಲ್ಲಾ

ಯವ್ವ ಕಣ್ಣೀರ ಬುಡುತಾಳೇ

ಮಡದಿ ನಾವು ಮನಿಂದ ಕದ್ಲೊಂಟೋಗುವಾಗ ಬೆನ್ನೀಗೆ ಮ್ಯಾಲೆ ಮಗಾ ಕಟ್ಟಂದ್ಯೆಲ್ಲ ಅವಾಗ ಮಗನ ನೋಡಿದ್ದು. ಅಲ್ಲಿಂದ ನಾವು ಅರಣ್ಯದಲ್ಲಿ ತರುಗ ಮುಚ್ಚ್ಕಂಡು ಅವುತ್ ಕೂತವಲ್ಲಿ ಆವಾಗ ನಿನ್ ಬೆನ್ ಮ್ಯಾಲೆ ಮಗಿತ್ತು. ಅಲ್ಲಿಂದ ನಿಮ್ಮಣ್ಣ ಬಂದು ನಮ್ಮುನ್ನ ಸರೆ ಇಡುದ್ನಲ್ಲ. ಆಗ ಮಗಿತ್ತು. ನೀನ್ ವಿದ್ದುಕ್ಕೆ ನುಗ್ಗಿದ್ ಮ್ಯಾಲೆ ಮಗಾ ಮಾಯ್ ವಾದ.

ಜಾನ ಮಾಡುತ್ತಾಳೆ ಸ್ವಾಮಿ, ಸ್ವಾಮಿ ನಾನ್ ಹೆತ್ ಮಗಾನ ನಾನೇ ಮರಣ ಮಾಡಿ ಬಂದಿದ್ದೀನಿ. ಬೆನ್ ಮ್ಯಾಲೆ ಮಗ ಇದ್ದ. ಯಿದ್ದಾ ಮಾಡುವಾಗ ಎಡುಕ್ಕೆ ಬಲುಕ್ಕೆ ಕತ್ತಿ ಆಡಿಸಿ ತರುದ್ ಕಡಿವಾಗ

ನನ್ನ ಕತ್ತೀ ಬಾಯೀಗೆ ನನ್ನ ಮಗಾ ಸಿಕ್ಕವನೆ

ನನ್ನ ಕತ್ತೀ ಬಾಯೀಗೆ ನೋಡೋ ನನ್ನ ಮಗಾ ಸಿಕ್ಕವನೆ

ನನ್ನ ಮಗನಾ ಸಾಕಿದ ಕೈಲಿ। ಮಾದೇವನೇ

ನನ್ನ ಮಗನಾ ಸಾಕಿದ ಕೈಲಿ

ಗಂಡ ನಾನೇಯ ಕೊಂದು ಬಂದೆ

ನನ್ನ ಮಗನಾ ನಾ ಸಾಕುವಾಗ

ನನ್ನ ಮಗುನಾ ನಾ ಸಾಕುವಾಗ

ಗಂಡ ಯಾವ್ ಕೈಲಿ ಹಾಲೂದೆ

ನಾನು ಹಾಲು ಊರಂತ ಕೈಲೇ

ನಾನು ಕೊಂದು ಬಂದೆ ನನು ಗಂಡ

ನಾನು ಕೊಂದು ಬಂದೆ ನನ್ನು ಗಂಡ

ದಂಡು ಕಡಿವಾಗ, ದಂಡು ಕೊಲ್ಲುವಾಗ ಎಡುಕ್ಕೆ  ಬಲುಕ್ಕೆ  ಕತ್ತಿ ತಿರುಗಿಸಿ ನಾನು ದಂಡು ಕೊಲ್ಲುವಾಗ ಕತ್ತಿಗೆ ಸಿಕ್ಕಿ ನನ್ ಮಗ ಮರುಣವಾದ. ನನ್ ಮಗುನ ಸಾಕುವಾಗ ಯಾವ್ ಕೈಲಿ ಹಾಲೂದ್ ಸೌಕಿದ್ನೊ ಅದೇ ಕೈಲಿ ಮಗನ್ನ ಕೊಲೆ ಮಾಡಿ ಬಂದಿದ್ದೀನಿ. ಸಾಕಿ ಬೆಳಸಿದ ಕೈಲಿ ಮಗಾ ಮರಣ ವಾದ ಗಂಡೋ .

ಮಗಿನ ಚಿಂತೆ ಬಂದಿಲ್ಲ ಮಕಾಡೆ ಮಲಗಿದ್ರು. ಅಲ್ಲಿ ಮಡಿಕೇರೀಲಿ ಮಗ ಕುಂಡೋಗಿ ಮಗೀನ್ ರೂಪ, ಮಗೀನ್ ಅಂದ ಚಂದ ನೋಡುತ್ತಾನೆ. ನಿಂಗರಾಜ ಮಂತ್ರಿ ಪರದಾನಿಗಳಿರಾ

ತಂದೆಯ ಚಂದುಕ್ಕೆ ಈ ಕಂದ ಕಾಣುತಾನೇ।

ಇವ್ನ ತಂದೆಯ ಚಂದುಕ್ಕೆ ಈ ಕಂದ ಕಾಣುತಾನೇ।

ಅಪ್ಪ ಮಗಾ ಎಲ್ಲಿ ಒಂದೇಯ ಚಂದುವಲ್ಲ

ತಂದೆಯ ಚಂದುಕ್ಕೆ ಮಗಾ ಕಾಣುತ್ತಾನೆ. ಅಪ್ಪುನ್ ರೂಪ ಮಗುನ್ ರೂಪ ಒಂದೇ ಮಂತ್ರಿ. ಅಪ್ಪುನ್ ರಗುತ ಮಗುನ್ ರಗುತ ಒಂದೇ ವರ್ತು ಬ್ಯಾರೆ ಅಲ್ಲ ಅರುಮನೀಗೆ

ಅಪ್ಪುನ ಕಡುದಾರೇನು, ಮಗುನ ಕಡುದಾರೇನು

ಅಪ್ಪುನ ಕಡುದಾರೇನು, ಮಗುನ ಕಡುದಾರೇನು।

ಈ ಮಗುವ ಕಡಿಯಾದುಕ್ಕೆ ಮನಸ ಮಾಡಿದುನಲ್ಲ।

ಅಪ್ಪಾ–ಮಗ ಒಂದೇ ರೂಪ ಒಂದೇ ಚಂದ. ಅಪ್ಪುನ ರಗುತುವೆ ಮಗುನ ರಗುತುವೆ ಎಲ್ಲಿ ಒಂದೇ. ಆರಮನಿಗೆ ಅಪ್ಪುನ್ನ ಕಡಿದ್ರೇನು? ಮಗನ್ನ ಕಡುದ್ರೇನು? ಮಗಾ ಕಡಿಯಾಕ್ ಮನಸ ಮಾಡಿದ್ರು. ಈ ಮಗೂನ ಅರಮನಿಗೆ ಕಡೀಬೇಕಾರೆ ಆನೇ ಮ್ಯಾಲೆ ಅಂಬಾರಿ ಹಾಕಿ ಅಂಬಾರಿ ವಳುಗೆ ಮಗೂನ್ ಕೂರಿಸಿ.

ಮಡಿಕೇರಿ ವಳುಗೆಲ್ಲ ಮೆರವಣಿಗೆ ಮಾಡುತ್ತಾರೆ।

ಮಡಿಕೇರಿ ವಳುಗೆಲ್ಲ ಮೆರವಣಿಗೆ ಮಾಡುತ್ತಾರೆ।

ಇಂತಾ ತಾಳ ತಂಬೂರಿಲಿ ಸೂಳೇರ ಮೇಳದಲ್ಲಿ।

ದೂಪಾರ್ತಿ ಕಂದುನ್ನ ಮೆರವಣಿಗೆ ಮಾಡುತ್ತಾರೆ।

ಒಂಟಿ ಕಾಳೇ ಹಿಡಿಸ್ಯಾರು ಹುಲಿ ಸಂತೆ ಒಡಿಸ್ಯಾರು।

ಒಂಟಿ ಕಾಳೇ ಹಿಡಿಸ್ಯಾರು ಹುಲಿ ಸಂಜೆ ಒಡಿಸ್ಯಾರು।

ಒಂಟಿಗಾಳೆ, ಹುಲಿಸಂತೆ ಒಡ್ಕಂಡು, ತಾಳ ತಂಬೂರಿಲಿ ಸೂಳೇರ ಮೇಳದಲ್ಲಿ, ಆನೆ ಮ್ಯಾಲೆ ಅಂಬಾರಿ ಅಂಬಾರಿ ಒಳುಗ್ ಮಗಾ ಕೂರಿಸ್ಬುಟ್ಟು. ಮಗಾ ಕಡಿಯಾಕೆ ಮರವಳಿಗೆ ಮಾಡ್ತಾವೆ ಬೀದ್ ಬೀದಿ ವಳುಗೆ.

ಈ ಕಂದ ಇಲ್ಲ ಬೆಚ್ಚುತ್ತಾರೆ. ನನ್ ಯಾಕ್ ಹಿಂಗ್ ಮಾಡ್ತಾವ್ರೆ. ಅಂತ. ಮರವಳಿಗೆ ಮಾಡ್ಕಂಡು.

ಅರುಮನೆ ಮುಂದಕ್ಕೆ ತಂದು ನಿಲ್ಸುದುರಲ್ಲೊ।

ಅರುಮನೆ ಬಾಗುಲೀಗೆ ತಂದು ನಿಲ್ಸದುರಲ್ಲೊ।

ಓಡಿಸ್ಯಾಣೆ ಕಲ್ಲಿನು ಮ್ಯಾಲೆ ಕತ್ತಿ ಮಸೆಯೂತಾರೆ।

ಸ್ಸಾಣೇ ಕಲ್ಲಿನು ಮ್ಯಾಲೆ ಕತ್ತಿ ಮಸೆಯೂತಾರೇ।

ಕತ್ತಿ ಮಸೆಯಾದ ಈ ಕಂದ ನೋಡುತ್ತಾದೆ।

ಅವ್ವ ಕತ್ತೀ ಮಸುಗಂಡು ಕಂದನತ್ರ ಬಂದಕಲ್ಲಾ।

ಕತ್ತಿ ಅತ್ರುಕೆ ಬತ್ತಾದೆ. ಮಗಾ ಇಲ್ಲಿ ಬೆದ್ರುತ್ತಾದೆ. ಕತ್ತಿ ಮಸ್ಗಂಡು, ಕತ್ತಿ ಕೈಲಿಡ್ಕಂಡು ಅರುಮನೆಗೆ ಕೆಯತ್ತಿ ಮುಗಿ ಅಂದ್ರು

ಅರುಮನಿಗೆ ಕೈಯತ್ತಿ ಮುಗಿತು.

ಬೂಮಿಗೆ ಬಾಗಿ ನಮಸ್ಕಾರ ಮಾಡು ಅಂದ್ರು.

ಬೂಮಿಗೆ ಬಾಗಿ ನಮಸ್ಕಾರ ಮಾಡುದುಕ್ಕೆ, ಅಡ್ಡ ಬೀಳುದಕ್ಕೆ ಬಗ್ತು.

ಕತ್ತಿ ಬಂದ್ ಕುತ್ಗೆ ಮ್ಯಾಲ್ ಬೀಳ್ತಿಲ್ಲೋ ದೇವಾ

ಸಿರವೇ ತುಂಡಾಯಿತಲ್ಲೊ

ಹಾರಾರಿ ಬೀಳುತ್ತಾದೆ। ಕಲ್ಯಾಣದೇವ

ಹಾರಾರಿ ಬೀಳುತ್ತಾದೆ

ಮಯ್ಯಿನ ರಕ್ತಾರುತ್ತಾದೆ.

ಮಗ ಮ್ಯಾಳೆಯಲ್ಲಿ ಕೂಗುತ್ತಧೆ.

ತಾಯಿ ತಂದೆ ಮ್ಯಾಳೆಲ್ಲಿ ಕೂಗುತ್ತಾದೆ.

ಎಲ್ಲಿ ಇದ್ದೀಯ ತಾಯೀ

ನನ್ನ ಹೆತ್ತಂತ ತಾಯಿ ನೀನೂ

ನನ್ನ ಐಬೋ ನೋಡುಬಾರೇ

ನನ್ನ ಸಿರಿಗೋಳ ನೋಡುಬಾರೇ

ನನ್ನ ಹಡುದಂತ ತಂದೆ ನೀನೂ

ನನ್ನ ಸಿರಿಗೋಳ ನೋಡುಬಲ್ಲೀ

ನನ್ನ ಸಂತೋಸ ನೋಡಬಲ್ಲೀ

ನನ್ನ ಐಬೋಗ ನೋಡಬಲ್ಲೀ

ಮ್ಯಾಳೆಲ್ಲಿ ತಾಯಿ ತಂದೆ ಕೂಗುತ್ತಾದೆ.

ತಾಯಿ ತಂದೆ ನೆನುಕೊಂಡೂ

ಮಗಿನ ಜೀವ ಜಲಿದಿ ಹೋಗುದಲ್ಲಿ

ಮಗಿನ ಜೀವ ಬಿರಬಿರನೆ ಹೋಗದಲ್ಲಾ

(ತಾಯಿ ತಂದೆ ನೆನಕಂದು ಮಗೀನ್ ಜೀವ ಬಿರುಬಿರುನೆ ಪಟ್ಟಂತೆ ಹೋಗೊಲ್ದು)

ಕ್ವಾಡಾಡಿ..ಕ್ವಾಡಾಡಿ ತಾಯಿ ತಂದೆ, ತಾಯೀ ತಂದೇ ನಿನ್ನ ಸಿರಿ ಮುಗುದೋತು ಅರನ್ಯಾಲಿಗೆ ಕಚ್ಗಂಡು ಮರಣಾತಲ್ಲೋ ಶಿವನೇ

ಅರುಮನೆ ಬಾಗುಲು ಮ್ಯಾಲೆ, ಅರುಮನೆ ಬಾಗುಲಮ್ಯಾಲೆ ಮಗೀನ್ ತಲೇ ಮಡಗಿ,,,

ಮಗೀನ ಬಲಗಾಲ ಕೂದು ಬಾಯಿಗೆ ಕೊಟ್ಟವರಲ್ಲ।

ಮಗೀನ ಬಲಗಾಲ ಕೂದು ಬಾಯಿಗೆ ಕೊಟ್ಟವರಲ್ಲ।

ಮಗೀನ ಹೊಟ್ಟೇ ಕೂದು ಚರ್ಬಿ ತಗುದವುರಲ್ಲಾ।

ಮಗೀನ ಚರ್ಬಿ ತಗುದು ಮಗಿನ ತಲೇ ಮ್ಯಾಲೇ।

ಮಗೀನ ತಲೆಯ ಮ್ಯಾಲೆ ಜೀವ ಬೆರಸ ಇಟ್ಟರಲ್ಲಾ।

ಮಗೀನ ರಕ್ತವ ತಗುದು ಅನ್ನಕೆ ಬಿರ್ಸಿದುರಲ್ಲಾ।

ಅರುಮಾನೆ ಸುತ್ತ ಬಲಿಯಾ ಚಲ್ಲೂತಾರೇ।

(ಮಗೀನ್ ತಲೆ ತಗುದು ಅರುಮನೆ ಬಾಗುಲು ಮ್ಯಾಲಿಟ್ಟು, ಮಗೀನ ಬಲಗಾಲ ತೆಗುದು ಬಾಯ್ಗಿಟ್ಟು, ಹೊಟ್ಟೆ ಬಗುದು ಹೊಟ್ಟೇಲಿದ್ದ ಚರ್ಬಿ ತಗುದು, ಮಗೀನ್ ತಲೇ ಮ್ಯಾಲೆ ಅದ್ನ ಜೀವ್ ಬೆರಸ್ ಇಟ್ಟು..ಮಗೀನ್ ರಕ್ತವ ಅನ್ನುಕ್ ಬೆರ್ಸಿ ಅರುಮನೆ ಸುತ್ತ ಬಲಿ ಚಲ್ತಾರೆ ಬಲಿಯ..)

ಬಲಿಯಾದ್ ಮ್ಯಾಲೆ ಈ ಕಡಿದ್ ಮಗಾನ ಬಂಗಾರದ್ ಪೆಟ್ಗೆಗೆ ತುಂಬುಸ್ತಾರೆ.

ಬಂಗಾರುದ್ ಪೆಟ್ಟೀಗೆ ಮಗಾ ತುಂಬಿ ಬೀಗ ಮುದ್ರೆ ಹಾಕಿ, ಬಂಗಾರುದ್

ಪೆಟ್ಗೇ ಮೇಲೇನಂತ ಅಕ್ಸಾರ ಬರೀತಾನೆ

ನನ್ ತಂಗೆ ದರ್ಮುದ್ ನಿಂಗವ್ವ ಇದಾ  ನಿನಿಗೆ ಬವುಮಾನ ಕಳಿಸ್ತಿದೀನಿ.

(ನನ್ ತಂಗೆ ದರ್ಮುದ್ ನಿಂಗವ್ವ ನಿನ್ನ ಮನೀಗೆ, ಇದಾ ನಿನಿಗೆ ಬಹುಮಾನ ಕಳಿಸ್ತೀನಿ ಯಾಕ್ ಕಳುಸ್ತಿದೀನಿ ಅಂದ್ರೆ ನೀನು ಏಳು ಸಾವಿರ ದಂಡು ಕಡುದು ತರುದು ಹದ್ದು ಕಾಗೇಗೆಲ್ಲ ಹರ್ಯಬ್ಬ ಮಾಡ್ದಲ್ಲ )

ಅದ್ಕೆ ನಿನ್ನಾ ಮನಿಗೆ ಬವುಮಾನ ಕಳವೇನೂ।

ಅದ್ಕೆ ನಿನ್ನಾ ಮನಿಗೆ ಬವುಮಾನ ಕಳುವೇನೂ।

ಒಡೆದು ನೋಡೀ ತಂಗೆ ಸಂತೋಷ ಪುಡುನೀನೂ।

ಅದೂ ಅಲ್ದೆ ಮುಂದ್ಕೆ  ನನ್ ಗಂಡುನ್ನ ನಾನು ಕೊಟ್ರೆ ನನ್ನದೆ ಮ್ಯಾಲಿರಾವು ಯಕ್ಕುದ್ ಕಾಯಿಂತೇಳಿ ನನ ಮ್ಯಾಲೆ ಎದೆ ತಟ್ಟಿ ಗಂಡುನ್ನುಳಿಸ್ಕ್ಯಂಡಲ್ಲಾ.

ಅದ್ಕೆ ನಿನ್ನಾ ಮನಿಗೆ ಬವುಮಾನ ಕಳುವೇನೂ।

ಅದುಕೆ ನಿನ್ನಾ ಮನಿಗೆ ಬವುಮಾನ ಕಳುವೇನೂ।

(ನನ್ ಗಂಡುನ್ ನಾನ್ ಕೊಟ್ರೆ ನನ್ನದೆ ಮ್ಯಾಲರಾವು ಯಕ್ಕುದ್ ಕಾಯಿ ಅಂತೇಳಿ ಅಟ ಮಾಡಿ ನಿನ್ ಗಂಡುನ್ನ ಉಳಿಸ್ಕ್ಯಂಡಲ್ಲ. ಅದುಕ್ಕೆ ನಿನ್ನ ಮನಿಗೆ ಬವುಮಾನ ಕಳುಸ್ತಾ ಇದ್ದೀನಿ. ಒಡುದ್ ನೋಡಿ ಸಂತೋಸಪಡು ತಂಗೆ. ಏಳು ಸಾವಿರ ದಂಡು ಕೊಂದು ಹದ್ದು ಕಾಗೇಗಂಗ್ ಹಬ್ಬ ಮಾಡ್ದೆ.. ಹೆಣ್ಣೆಂಗ್ಸು ಏಳು ಸಾವಿರ ದಂಡ ಕೊಂದುದ್ಕೆ ನಿನ ಮನೀಗೆ ಬವುಮಾನ ಕಳುಸ್ತಾ ಇದ್ದೀನಿ. ಅಂತ ಬರೀತಾನೆ.

ಮಗಾ ಕಡುದ್ ಬಂಗಾರುದ್ ಪೆಟ್ಟೀಗ್ ತುಂಬಿ ತಂಗೆ ಮನಿಗೆ ಕಳುಸ್ರವನಲ್ಲೊ ಶಿವನೇ .

ಮಗೀನ್ ಚಿಂತೇಲಿ, ಅಂತ್ಕಂಡ್ ಮಕಾಡೆ ಮಲಗಿದ್ದಾರೆ. ನಾನೇ ಮಗುನ್ನ ಕೊಂದು ಬುಟ್ಟೆ ಅನ್ನೊ ದುಕ್ಕದಲ್ಲಿ ಇವುರು ಮಕಾಡೆ ಮಲಗಿರೋದು. ಮ್ಯಾಕೆದಿಲ್ಲ. ಆ ನೋವಿನಲ್ಲಿರೋದ್ಗೆ ಆ ಮಗಾನೆ ಕಡ್ಡು ಕಳುಸಿದ್ರೆ ಇನ್ನೆಸ್ಟು ದುಕ್ಕ ಸಿಟ್ಟು ಬರಾದಿಲ್ಲ. ಬಾಗುಲು ಹಾಕ್ಯವರೆ. ಮುಚ್ಚಿದ್ ಬಾಗುಲು ಬಿಟ್ಟಿಲ್ಲ. ಮಕಾಡೆ ಮಲಗಿರ್ವೋರು ಮ್ಯಾಕೆದ್ದಿಲ್ಲ. ಆನೆ ಮ್ಯಾಲಂಬಾರಿ, ಅಂಬಾರಿ ಮ್ಯಾಲ್ ಬಂಗಾರುದ್ ಪೆಟ್ಗೆ ಬತ್ತಾದೆ. ಬಂದು ತಂಗೆ ಮನೆ ಬಾಗುಲಲ್ಲಿ ನಿಂತ್ಕಂಡು.

ಕೊಂಬಾ ಊದುತಾರೆ ಕಅಳೇಯ ಹಿಡೀತಾರೇ।

ಕೊಂಬಾ ಊದುತಾರೆ ಕಅಳೇಯ ಹಿಡಿತಾರೇ।

ಕೊಂಬು ಕಾಳೇಯಾಗುವಾಗ.. ಇದೇನ್ ಮನೆ ಮುಂದೆ ಕೊಂಬು ಕಾಳೇ ಆತಾವಲ್ಲ ಅಂತ ಎದ್ ಬಂದು ಬಾಗುಲ್ ತಗುದ್ ನೋಡಿದ್ರೆ

ಅಣ್ಣನ ದಂಡೂ ಬಂದು ಅಟ್ಟೇಲಿ ನಿಲ್ಲುತ್ತಾದೆ.

ದಂಡ ನೋಡಿ ಬುಳುಬುಳನೆ ಕಣ್ಣೀರ್ ಬುಟ್ಟು

ಅಣ್ಣಾ ನನ್ನಲ್ಲಿ ಯೇನಿರಬಾದು ನಿಂಗೆ. ಯೇನಗಿತಾನ ಇರಬೋದು. ತಿರಗಾ ಬಂದು ದಂಡೆಲ್ಲಿ ಅಟ್ಟೇಲಿ ನಿಂತಿದ್ದೀರಲ್ಲಾ ಎಸ್ಟು ಸಿಟ್ಟು ಅಗಿತಾನ ಇರಬೌದು ಅನ್ನದಾಗಿ ಕೇಳುವಾಗ

ಅವ್ವಾ ನಿನ್ ಗಂಡುನ್ ಸೆರೆ ಇಡಿಯಾಕೆ ಬಂದುಲ್ಲ. ನಿನ್ಮೇಲೆ ಸಿಟ್ಟು ಅಗಿತಾನುಕ್ಕು ಬಂದಿಲ್ಲ ತಾಯಿ. ನಿಮ್ಮಣ್ಣು ಕೈಕೆಳಗೀನ ಜವಾನ್ರು ನಾವು. ನಿಮ್ಮಣ್ಣ ಬವುಮಾನ ಕೊಟ್ಟು ಕಳ್ಸಿದ್ದಾನೆ ತಾಯಿ. ಆ ಬವುಮಾನಾದ ಕೊಟ್ಟೋಗಕ್ಕೆ ಬಂದಿದ್ದೀನಿ ತಾಯಿ. ಬಾಗ್ಲು ಬಳಿಗೇ ನಿಂತ್ಕಂಡು ಚಿಂತೆ ಮಾಡುತ್ತಾಳೆ. ಅಗ್ಯಾರ ಅಣ್ಣ ಯೇನ್ ಕಳ್ಸ್ಯವನೋ ಕಾಣ್ನಲ್ಲಪ್ಪ. ಅಗ್ಯಾರ ಅಣ್ಣ ಯೇನ್ ಕಳ್ಸ್ಯವನೋ ನನಿಗರಿವಿಲ್ಲವಲ್ಲಪ್ಪ. ಅಣ್ಣ-ತಂಗಿ ನಾವು ಸಂತೋಸವಾಗಿದ್ದಿದ್ದರೆ ಸಿರಿ ಬಂದಂಗಾಗುದು.

(ಅಣ್ಣ-ತಂಗಿ ನಾವು ಸಂತೋಸವಾಗಿ ಇದ್ದಿದ್ರೆ ಅವುನು ಕಳಸಿದ್ದು ನೋಡಿ ಸಿರಬಂದಂಗಾಗಾದು. ಈ ಲಿಗ್ಯಾರ ಅಣ್ಣ ಯೇನ್ ಕಳ್ಳವನೋ? ಇದ್ನ ಯಂಗ್ ನೋಡಾದು)

ಇದ್ನ ಬಡೀಬೇಕಾರೆ.. ಬೂಮಿ ತಾಯಿ ನೆನಿಬೇಕು. ಬಗುವಂತನ್ನ ನೆನಿಬೇಕು. ಅನಂತರ ಒಡೀಬೇಕು. ಹರಿಯೋ ಗಂಗಾ ನದಿಗೆ ಕುಂಡೋಗಿ, ಹರಿಯೋ ಗಂಗೆ ವಳುಗೆ ಬಂಗಾರುದ್ ಪಟ್ಗೆ ಮಡ್ಗಿ,ಯೇನಂತ ಬೇಡುತ್ತಾಳೆ. ಬಂಗಾರುದ್ ಪೆಟ್ಗೆ ಪೂಜುಸ್ತಾಳೆ. ಬಗುವಂತ್ನ ಯೇನ್ ಕೇಳುತ್ತಾನೆ.

ಬಗುವಂತಾ..ಬಗುವಂತಾ..ಇದು ನಿನಿಗೆ ಸೇರಿದ್ದು. ನನಿಗೆ ಅಣೆಕಾರ ನನ್ನಣ್ಣ ಯೇನ್ ಕಳ್ಸ್ಯವನೊ ತಿಳೀವಲ್ದು. ಒಂದು ಅರುವಿಲ್ಲ. ನನ್ನಣ್ಣ ನನಿಗೆ ಅಣೆಕಾರ ಅಂತ ಅಣ್ಣ ನನಿಗೆ ಬವುಮಾನ ಕಳ್ಸುವನೆ ಅಂದ್ಮೇಲೆ ಅದ್ನ ನಾನು ಒಡುದ್ ನೋಡಿದ್ರೆ ಬಗುವಂತಾ..

ನಿನ್ ಸತ್ಯುದಲ್ಲಿ ನನಗೆ ಸಿರಿಬಂದಂಗಾಗುಬೇಕೂ।

ಎಲ್ಲ ನಿನಿಗೆ ಸೇರಿದ್ದು ಬಗುವಂತ ಶಿವಾ ಶಿವಾ।

ಎಲ್ಲಾ ನಿನಿಗೆ ಸೇರಿದ್ದು ಬಗುವಂತಾ. ನಿನ್ನ ಸೆರುಗ್ನಲ್ಲಿ ಅದ ಬಡುದ್ ನೋಡಿದ್ರೆ ನನಿಗೆ ಪಂಚ ಪರ್ವತ ಸಿರಿ ಬಂದಂಗಾಗಬೇಕು. ಸಂತೋಸವಾಗಬೇಕು. ಇದು ನಿನಿಗೆ ಸೇರಿದ್ದು.

(ಬಗುವಂತನ್ನ ನೆನುದಾತೋ ? ಇನ್ನ ಬೂಮಿ ತಾಯಿ ನಿನ್ನ ನೆನಿತೀನಿ. ಯೇನ್ ಬೇಡ್ತೀನಿ.?)

ಅಣೆಕಾರ ಅಣ್ಣ ನನಿಗೆ ಯೇನ್ ಕಳ್ಸವನೋ ನನಿಗರುವಿಲ್ಲ. ಬೂಮಿ ತಾಯಿ ನಿನ್ನ ಸೆರೇಲಿ ಪೂಜಿಬುಟ್ಟು ಪೆಟ್ಗೆ ಒಡುದ್ ನೋಡ್ತೀನಿ. ನಮ್ಮಣ್ಣ ನನಿಗೆ

ಇಸುವ ಕಳ್ಸಿದುರು ನನಿಗೆ ಅಮೃತವಾಗಬೇಕು।
ಇಸುವ ಕಳ್ಸಿದುರು ನನಿಗೆ ಅಮೃತವಾಗಬೇಕು।
ಬೂಮಿ ತಾಯಿ ನೆನಿತಾಳೆ ಪೆಟ್ಟೀಗೆ ಪೂಜುತಾಳೇ।
ಬಗುವಂತುನ್ ನೆನಿತಾಳೆ ಪೆಟ್ಟೀಗೆ ಪೂಜುತಾಳೇ।

ಈಗ ಬಲ್ಲಂತ ಬೂಮಿ ತಾಯಿ ನನೆಕಂದ್ ತಾನೆ ಪೆಟ್ಗೆ ಪೂಜೆ ತೆಗುದುರೋದು ಈಗ ಅವುಳ ಸಾಕರ ಬೇಕೋ ಬ್ಯಾಡ್ವೋ..?

ನಮ್ಮಣ್ಣ ಆಣೆಕಾರ ನನಿಗೆ ಇಸ್ ಕಳಿಸಿದ್ರೂ ಅದು ನನಿಗೆ ಅಮೃತವಾಗಬೇಕು. ಅದ್ನ ಒಡುದ್ ನೋಡಿದ್ರೆ ಸಿರಿ ಸಿರಿ ಸಂತೋಸವಾಗಬೇಕು. ಅಂತೇಳಿ ಬಗುವಂತನ ಸೆರೇಲಿ, ಬೂಮಿ ತಾಯಿ ಸೆರೇಲಿ ಪೆಟ್ಗೆ ತೆಗೀತಾಳೇ ಆವುಳ ಸಾಕಾರಕ್ಕೆ ಇವ್ಳ ಸತ್ಯಕ್ಕೆ, ಇವ್ಳ ದರ್ಮುಕ್ಕೆ ಮಗಾ ಜೀವಾಗುತ್ತಾದೆ.

ದೂಪುದಾರ ಹೋಗಿ ಮಗೀನೊಟ್ಟು ಸೇರುತ್ತಾದೇ।
ಮಗೀನೊಟ್ಟಿ ಸೇರಿ ಜೀವ ತಾನಘುತ್ತಾದೇ।
ಬಗುವಂತ್ನ ಸತ್ಯುದಲ್ಲಿ ಬೂಮಿ ತಾಯಿ ಸತ್ಯುದಲ್ಲಿ।
ದೂಪದಾರ ಹೋಗಿ ಮಗೀನ ಹೊಟ್ಟೇಯ ಸೇರಿ।
ಮಗೀನ ಹೊಟ್ಟೆಯ ಸೇರಿ ಜೀವ ತಾನಾಗುತಾದೇ।
ಬಗುವಂತ್ನ ಸತ್ಯುದಲ್ಲಿ ಬೂಮಿ ತಾಯಿ ಸತ್ಯುದಲ್ಲಿ।
ಮಗಾ.. ಮದಲೆಂಗಿದ್ದ ಅಂಗೇ ಆಗ್ಯವಾನಲ್ಲೋ।

ಇವುಳ ಸತ್ಯುಕ್ಕೆ ಮೊಗಾ ಮದ್ಲೆಂಗಿತ್ತು. ಅಂಗೇ ಆಗೋತ್ತು. ಈಗ ಪೆಟ್ಗೆ ಒಳುಗ್ ನೋಡಬೇಕಾರೆ

ಇವಳೆಂಗ್ ಬೀಗಾ ಬಿಚ್ಚುತ್ತಾಳೆ ಅಂಗೇ ಎಟ್ಟಿರಿಕಾದಾ।
ಯಂಗೆ ಬೀಗಾ ಬಿಚ್ಚುತ್ತಾಳೆ ಅಂಗೇ ಎಟ್ಟಿರಿಕಾದು।

ಯಂಗ್ ಬೀಗ ಬಿಚ್ತಾಳೆ: ಅಂಗೆ ಮಗಾ ಎಟ್ಟಿರಿಕ್ಯಾದಾ. ಮುಸುಗೆತ್ತಿ ನೋಡಬೇಕಾರೆ

ಇವಳೆಂಗೆ ಮುಸಕ ಎತ್ತುತಾಳೆ ಅಂಗೆ ಕಣ್ಣ ಬುಡುತಾನೇ।
ಇವಳು ಮುಸುಕೆಂಗೆ ಎತ್ತುತಾಳ ಅಂಗೆ ಕಣ್ಣ ಬುಡುತಾನೇ।
ತಾಯಿ ಮಕಾ ಕಾಣ್ತು ಕಿಲಿಕಿಲಿನೆ ನೆಗುತಾನೇ।

ಬಂದೋತು ಸಿರಿಬೋಗ, ಸಿರಿ ಸಂಪತ್ತು, ಕೈಲಾಸವೇ ಇವುಳ್ಳುಂದುಕೆ ಬಂದಂಗಾತು. ಈವಾಗ ಅಣ್ಣ ನನಿಗೆ ಕಳಿಸಿರುವ ಬವುಮಾನ ನನಿಗೆ ಆನಂದ ಪಂಚ ಪರ್ವತಾಗೋತು. ಈಗ ಅಣ್ಣುನ್ ಮನಿಗೆ ನಾನು ಕಳಿಸಿ ಕೊಡಬೇಕು.

ಬಂದ್ ಜನುಕ್ಕೆಲ್ಲ ಹೊಸಬಟ್ಟೆ ಉಡಿಸಿ, ಐಬೋಗುವಾದ ಅಡಿಗೆ ಮಾಡ್ಸಿ ಬಂದ್ ಜನುಕೆಲ್ಲ ಇಕ್ಕಿ, ಅಣ್ಣುನ್ ಮನೀಗೆ ಬವುಮಾನ ಕಳುಸ್ಬೇಕಾರೇನು ಮಾಡುತ್ತಾಳೆ. ಒಂಬತ್ ಜಾತಿ ಹಣ್ ತತ್ತಾಳೆ. ಒಂಬತ್ ಜಾತಿ ಹಣ್ಣು ಅಂದ್ರೆ ಒಂಬತ್ ರಸಬಾಳೆ ಹಣ್ಣು, ಒಂಬತ್ ಮೋಸಂಬಿ ಹಣ್ಣು, ಒಂಬತ್ ಕಸಿ ಮಾವಿನಣ್ಣು, ಇಂಗೆ ಒಂದೊಂದ್ ಜಾತೀವು ಒಂಬೊಂಬೊಂಬತ್ ಹಣ್ಣು ತಂದು.

(ಒಂದ್ ಜಾತಿ ಹಣ್ಣು ಒಂಬತ್ತು. ಒಂಬತ್ತು ಒಂಬಂತ್ತು ಒಂಬತ್ ಜಾತಿ ಹಣ್ಣು)

ಅದೇ ಪೆಟ್ಟೀಗೆ ಹಣ್ಣು ತುಂಬಿ ಬೀಗ ಮುದ್ರಿಕೆ ಮಾಡಿ..ಅಣ್ಣ ಬರೆದಿದ್ ವಾಲೆ ಜಾಗುಕ್ಕೆ ಇವಳೇನಂತ ಬರೀತಾಳೆ

ಅಣ್ಣ ಅಣ್ಣ ನೀನ್ ಕಳಿಸ್ದಂತ ಬವುಮಾನ ನನಿಗೆ ಸಂತೋಸಾತು. ನನಿಗೆ ಐಬೋಗ ಬಂದಂಗಾತು. ನನ್ನ ಸಂತೋಸುಕ್ಕೆ ಅಣ್ಣ

ಈ ಹಣ್ಣಾ ನೀನ ತಿನ್ನ್ಣಣ್ಣ ಮುಂದುಕೆ ತಣ್ಣಾಗೆ ಬದುಕಣ್ಣಾ।
ಹಣ್ಣಾ ನೀ ತಿನ್ನಣ್ಣ ತಣ್ಣಾಗೆ ಬದುಕಣ್ಣಾ।
ಅಣ್ಣಾನ ಮನಿಗೆ ತಂಗೆ ಹಣ್ಣಾನೀಗ ಕಳುಸ್ಯಾಳೇ।
ಅಣ್ಣಾನ ಮನೇಗೆ ಹಣ್ಣಾ ಕಳುಸ್ಯಾಳೇ।
ಹಣ್ಣಾ ತಿನ್ನಣ್ಣ ತಣ್ಣಾಗೆ ಬದುಕಣ್ಣಾ।
ಹಣ್ಣಾ ಕುಂಡೋಗಿ ಅಣ್ಣುಗೆ ಕೊಟ್ಟವರಲ್ಲಾ।

ಬೀಗ ಬಿಚ್ಚಿ ನೋಡಿದ್ರು. ಒಂಬತ್ ಜಾತಿ ಒಂಬತ್ತೊಂಬತ್ತಣ್ಣು.. ಮಂತ್ರಿ ಪರದಾನಿಗಳಿರಾ ನಾನು ಮಗುನ್ನ ಕಡಿದು ಪೆಟ್ಟಿಗೆಗೆ ತುಂಬಿ ಕಳಿಸಿದ್ರೆ ನನಿಗೆ ಸಿರಿ ಬಂತು, ಸಂತೋಸಾತು. ನನ್ನ ಸಂತೋಸಕ್ಕೆ ಹಣ್ಣು ತಿಂದು ತಣ್ಣಾಗೆ ಬಾಳು ಅಂತ ಬರದವಳಲ್ಲ. ಅವುಳ್ಗೇನು ಸಿರಿ ಬಂತು? ಸಂತೋಸಾನು? ಆಗೇಳುತ್ತಾರೆ. ..ವಾದ್ ಜನ್

ಸ್ವಾಮಿ ಈ ಬಂಗಾರುದ್ ಪೆಟ್ಗೆ ತಗಂಡೋಗಿ ಬಾಗುಲಲ್ಲಿ ನಿತ್ಕಂಡು ಕೊಂಬು ಕಾಳೆ ಊದ್ಗೊ. ಅವ್ವಾವ್ರು ಬಂದು ಸುಮಾರೊತ್ತು ನಿತ್ಕಂಡು ಯೇಚ್ನೆ ಮಾಡಿ ಈ ಬಂಗಾರುದ್ ಪೆಟ್ಗೆ ಸಮೇತವಾಗಿ ಹರಿಯೇ ಗಂಗಾ ನದೀಗೋಗಿ, ಗಂಗಾ ನದೀ ಒಳುಗೆ ಪೆಟ್ಗೆ ಇಟ್ಟು ಯೇನಂತ ಪೂಜೆ ಮಾಡಿದ್ರು. ಅಂದ್ರೆ .ನಮ್ಮಣ್ಣ ಆಣೆಕಾರ, ವೈರಿಕಾರ, ದಾದಿಕಾರ, ಅಂತಾ ದಾರಿಕಾರ, ಅಣೆಕಾರ, ವೈರಿಕಾರ ಕಳಿಸಿರೋ ಬವುಮಾನ ಬಗುವಂತಾ ನನಿಗೆ ನಿನ್ನ ಸತ್ಯುಕ್ಕೆ, ಈ ದರ್ಮುಕ್ಕೆ ಅವುದು ಪಾಶಣ ಕಳ್ಳಿಸಿದ್ರು. ನನಿಗೆ ಅಮೃತವಾಗಬೇಕು. ಅಂತ ಬಗುವಂತನ್ನ ನೆನಿಸ್ಕಂಡ್ರು. ಈಗ ಮುಂದ್ಕೆ ಬೂಮಿ ತಾಯಿ, ನಿನಿಗೆ ಸೇರಿದ್ದು, ನಮ್ಮಣ್ಣ ಯೇನ್ ಕಳಸಿದ್ರು ನನಿಗೆ ಸಿರಿ ಬಂದಂಗಾಗಬೇಕು. ಅಂತ ಬೇಡಿ ಬೇಡಿ ಪೆಟ್ಗೆ ಬಾಗ್ಲು ತೆಗುದ್ರೆ ಮಗಾ ಜೀವಾಗಿತ್ತು.

ಅವನೇನು ಜಾನ ಮಾಡುತ್ತಾನೆ

ಈಗ ನಾನು ಅರುಮನಿಗೆ ಬಲಿ ಕಡಿದ್ರೇ ಇದ್ರೆ ನನ್ ಮಂತಾನ ಸಂತಾನ ಆಳಾಗಾದು. ಈಗ ನನ್ನ ಮಂತಾನ ಸಂತಾನ ಉಳಿದಂಗಾತು. ಬಲೀನು ಕಡಿದಂಗಾತು. ತಂಗೆ ಗಂಡುನ್ನ ತಂದು ಬಲಿ ಕೊಟ್ಟುದ್ರೆ ತಂಗೆ ಮುಂಡ್ಯಾಗಲು ಅವಳ ಮಂತಾನ ಸಂತಾನ ಆಳಾಗಾದು.

(ತಂಗೇ ಗಂಡುನ್ನ ತಂದು ಬಲಿ ಕೊಟ್ಟುದ್ರೆ ತಂಗೆ ಮುಂಡ್ಯಾಗಳು. ಈಗ ಅವಳ ಮುತ್ತೈದೆ ತಾನ ಉಳೀತು. ಈಗ ಅರುಮನಿಗೆ ನಾನು ಬಲೀ ಕಡೀದೇ ಹೋಗಿದ್ರೆ ನನ್ ಮಂತಾನ ಸಂತಾನ ಹಾಳಾಗೋಗೋದು. ಬಲೀನೂ ಕಡಿದಂಗಾತು. ಇಬ್ರ ಮಂತಾನ ಸಂತಾನು ಉಳೀತು.)

ಎಲ್ಲಾ ಒಂದ್ ಮಟ್ಟುಕ್ ಬಂದಂಗಾತು. ತಂಗೆ ಮುತ್ತೈದೆ ಬಾಗ್ಯ ಉಳೀತು. ನನ್ನ ಮಂತಾನ ಸಂತಾನ ಉಳೀತು. ಎಲ್ಲ ಒಂದ್ ಮಟ್ಟಕ್ ಬಂದಂಗಾತು ತಂಗಿ ಇಲ್ಲಿಂದೀಚ್ಗೆ.

ನಿನುಗು ನನುಗುವೆ ತಂಗಿ ಅಗಿತಾನ ಬ್ಯಾಡವ್ವಾ।
ತಂಗಿಗೆ ವಾಲೇಯ ಯೇನಂತ ಬರುದಾನೇ।
ಮುಂದೆ ನಾವು
ಒಂದು ತಾಯಿ ಮಕ್ಕಳಂಗೆ ಒಂದಿಕೊಂಡು ಬಾಳಾನಾ।
ನಿನಿಗೂ ನನಿಗೂ ಅಗಿತಾನ ಬ್ಯಾಡವ್ವಾ।

ತಂಗೀಗೆ ವಾಲೆ ಬರೀತಾನೆ. ಈಗ ತಂಗಿಗೆ ಮುತ್ತೈದೆ ಬಾಗ್ಯುಳೀತು. ಅರುಮನಿಗೆ ಬಲಿ ಕಡುದಂಗಾತು. ನನ್ನ ಮಂತಾನ ಸಂತಾನ ಉಳಿದಂಗಾತು. ಇಲ್ಲಿಗೆ ಎಲ್ಲಿ ಒಂದ್ ಮಟ್ಟುಕೆ ಬಂದೋಯ್ತು. ಇಲ್ಲಿಗೆಲ್ಲಾ ಸರಿಯಾತು ದೇವಾ ಇಲ್ಲಿಗೀ ಕತೆ ಮಗುವಾಯಾತೂ. ಬಗುವಂತ ಬೂಮಿ ತಾಯಿ, ಮೂಡ್ಲಗಿರಿ ತಿಮ್ಮಪ್ಪ ಮೂಲೋಕದೊಡೆಯ..ಅಣ್ಣಯ್ಯ ಗೋವಿಂದ ತಣ್ಣಾನೆ ವತ್ನಲ್ಲಿ ನನ್ನ ಸೆರಣೆಲ್ಲಿ ಕಾಡುತ್ತೀನಿ. ಬೇಡುತ್ತೀನಿ. ಯಾವ್ ತೆಪ್ಪದ್ರು ಮನ್ನಸ್ಬೇಕು ಗೋವಿಂದ ದೇವಿ ದೇವ ಮಾನ್ಯ ಸಕ್ತ ಸೆರಣೆ ಎಲ್ಲಿಗೂ ಸೆರಣಪ್ಪ ಸೆರಣೇ..

# ನಂಜುಂಡೇಶ್ವರ–ಚಾಮುಂಡೇಶ್ವರಿ

ತಂದೇನಾನಾ ತಾನಂದನ್ನನಾ

ತಾನಂದನ್ನಾ ತಾನಂದನ್ನಾ

ತಂದೇನಾನಾನ ತಾನಂದನ್ನಾ

ಎಡುಗಾಡೇ ದೇವೀರಿ ಬಲಗಾಡೆ ಪಾರುವಾತೀ

ನಟ್ಟ ನಡುವಲ್ಲಿ ನಂಜುಂಡ ಲಿಂಗೂ॥ ತಾನಂದನ್ನಾ ..ತಂದೇನಾನಾ ತಾನಂದನ್ನಾ

ಸ್ವಾಮಿ ಇಬ್ಬುರಾಳ ಮಡದೀರ ನಡುವಲ್ಲಿ ಮನಿಕ್ಯಂಡು

ಏನೇನೂ ಜ್ಯಾನ ಮಾಡವರಲ್ಲಾ॥ತಾ॥

ಇಬ್ಬುರಾಳ ನಡುವಲ್ಲಿ ಮನಿಕ್ಯಂಡ್ ನಂಜುಂಡಲಿಂಗು

ಏನೋನೊ ಜ್ಯಾನ ಮಾಡುವರಲ್ಲಾ॥ತಾ॥

ನಾನು ಮೈಸೂರು ಚಾಮುಂಡಿಗೆ ಕೈಮುಟ್ಟಿ ಬಾಷೆಯ ಮಾಡಿ

ನೀರ್ ಮುಟ್ಟಿ ಸತ್ಯವ ಮಾಡಿ

ನಾನು ಇನ್ನು ಹೋಗಲಿಲ್ಲಾ ಚಾಮುಂಡಿ ಮನಿಗೇಗ ॥ತಾ॥

ನಾನು ಬೆಟ್ಟುದಾ ಚಾಮುಂಡಿ ಮನಿಗೆ

ಹೋಗಿ ಬರಾನಂದ್ರೆ

ನನಿಗೆ ಪಟ್ಟುದಾ ಮಡಿದೀರು ಸೆರೆಯವರೇ ॥ತಾ॥

ನಾನು ಬೆಟ್ಟುದಾ ಚಾಮುಂಡಿ ಮನಿಗೆ

ಹೋಗಾನಂದುರೆ ಶಿವನೆ

ನನಿಗೆ ಪಟ್ಟುದಾ ಮಡಿದೀರು ಸೆರೆಯವರೇ ॥ತಾ॥

ನನ್ನ ಸೂಳೇ ಚಾಮುಂಡಿ ಮನಿಗೆ

ಹೋಗೀ ಬರಾನಂದ್ರೆ

ನನಿಗೆ ಸೂಲ ಮನಗಾರೆ ನನ ಮಡದೀರೂ ॥ತಾ॥

ನನ್ನ ಸೂಳೆ ಚಾಮುಂಡಿ ಮನಿಗೆ

ಹೋಗಾನಾದುರೆ ಶಿವನೆ

ನನಿಗೆ ಸೂಲ ಮನಿಗ್ಯವಕೆ ನನ ಮಡದೀರೂ ॥ತಾ॥

ಅಯ್ಯ ಕದ್ದು ಸೂಳೇ ಮನಿಗೆ

ಎದ್ದು ಹೋಗಾನಂದುರೆ

ನನ ತೈಬ್ಬಿ ಮನಗ್ಯಾರೆ ನನ್ ಮಡದೀರೂ ॥ತಾ॥

ಕದದು ಸೂಳೇ ಮನಿಗೆ

ನಾನು ಎದ್ದು ಹೋಗಾನಂದರೆ

ನನ್ನ ತೆಬ್ಬಿ ಮನಗ್ಯಾರೆ ಮಡದೀರೂ ॥ತಾ॥

*॥ತಾ॥ ಎಂದು ಬರುವ ಕಡೆಯಲ್ಲೆಲ್ಲಾ ಹಿಮ್ಮೇಳದವರು ಈ ಸೊಲ್ಲು ಹಾಡುತ್ತಾರೆ. ಕೆಲವೊಮ್ಮೆ ಮುಖ್ಯ ಗಾಯಕನೇ ಇದನ್ನು ನಿರ್ವಹಿಸಬಹುದು.

ಇಬ್ಬರಾಳ ಮಡಿದಿರು ನನ್ನ

ತೆಬ್ಬಿ ಮನಗ್ಯವರಲ್ಲ

ಇವುರ ಹೆಬ್ಬೂಲಿ ಶಿವನೆ ಮುರೀಬಾರದೇ ॥ತಾ॥

ನನಿಗೆ ಇಬ್ಬುರಾಂಳೆಡಿರು ಕಾಟ

ಇರುಳು ತಿಗಣೆಯ ಕಾಟ್ವ

ನನಿಗೆ ಕಬ್ಬತ್ತಿ ಕಾಟ ಕಣುವಲ್ಲಿ ॥ತಾ॥

ಅಯ್ಯ ಕಬ್ಬತ್ತಿ ಕಾಟ

ಕಣುವಲ್ಲಿ ಜವರಾಯ

ಇವರ ಒಬ್ಬಳ ಬುಟ್ಟೊಬ್ಬಾಳ ಕಟುಕೋಳೊ ॥ತಾ॥

ಒಬ್ಬಾಳ ಬುಟ್ಟೋಬ್ಬಾಳ ಕಟ್ಟುಕೋಳೋ ॥ತಾ॥

ನನ್ನ ಪಟ್ಟದ ಮಡಿದಿರಿಗೆ

ಯಾವ್ದಾರ ರ‍್ವಾಗ್ ತೆಗುಳಿ

ಇಬ್ಬುರಾಳ್ ಮಡಿದಿರೀಗ್ಲೆ ವರೀಗೋಗಲೀ ॥ತಾ॥

ಇಬ್ಬುರಾಳ ಮಡಿದೀರೂ

ಈಗಲೇ ವರಿಗೋಗಲಪ್ಪ

ನನ್ನ ಮೈಸೂರ್ ಚಾಮುಂಡೀಗೋಗುತೀನಿ ॥ತಾ॥

ನಾನು ಬೆಟ್ಟುಕಾ ಚಾಮುಂಡಿ ಮನಿಗೆ

ಹೋಗಾತಲ್ಲೇ ಶಿವನೇ

ಇಬ್ಬುರಾಳು ಮಡಿದಿರುವೆ ವರೀಗೋಗಲೀ ॥ತಾ॥

ನನ್ನಾ ಬೆಟ್ಟುದಾ ಚಾಮುಂಡಿ..

ನನ್ನ ಮೈಸೂರ್ ಚಾಮುಂಡಿದೇವಿ

ಹಟುವಾಗಿ ಬದುಕಿದರೆ

ನನಿಗೆ ಹಾಲಿನಲ್ಲಿ ತುಪ್ಪ ಬೆರಾತಾಂಗೇ ॥ತಾ॥

ನನ್ನ ಸೂಳೆ ಚಾಮುಂಡಿದೇವಿ

ಸುಖದಲ್ಲಿ ಬದುಕಿದುರೇ

ನಾಳೇ ಹೋಗೀ ಬತ್ತೀನವಳರಮನೀಗೇ ॥ತಾ॥

ಕದ್ದು ಚಾಮುಂಡಿ ಮನಿಗೆ

ಕದ್ದು ಸೂಳೇ ಮನಿಗೆ

ಎದ್ದು ಹೋಗಾನಂದೇ ಶಿವನೆ

ನನ್ನ ತೈಬ್ಬಿ ಮನಗ್ಯವರೇ ಮಡಿದಿರೋ ॥ತಾ॥

ನನ್ನ ತೊಡಿ ಮ್ಯಾಲ್ ತೊಡೀಹಾಕಿ

ಎದೆ ಮ್ಯಾಲ ಕಯ್ಯ ಮಡಿಗಿ

ನನ್ನ ಮುಂಗೈಯ್ಯ ಮುರಿಗೆ ಹಿಡಾದವರೇ ॥ತಾ॥

ನಾನು ಯೇಳಾಕಾಗುವುದಿಲ್ಲ

ಎದು ಕೂರಾಕಾಗುವುದಿಲಲ್

ಯಂಗೆ ಹೋಗಲೀ ಚಾಮುಂಡಿ ಮನಿಗೇ ॥ತಾ॥

ಮೈಸೂರ್ ಚಾಮುಂಡೇಶ್ವರಿಗೆ ಒಂಬತ್ ದಿನೂಕೆ ಒತ್ತೀನಂತ ಯೇಳಿ ಅವುಳಿಗೆ ಬಲಗೈ ಬಾಸೆ ಮಾಡಿ, ನೀರ್ ಮುಟ್ಟಿ ಸತ್ಯಾ ಮಾಡಿ ಬಂದಿದ್ದೆ ಒಂಬತ್ ದಿನೂಕ್ ಚಾಮುಂಡಿ ಮನೀಗೆ ಕದ್ದೋಗನಾ ಅಂತ ಮಾಡಿ. ನನ್ನ ಮಡದೀರು ಎಡುಗಾಡೆ ದೇವೀರಿ ಬಲಗಡೆ ಪಾರ್ವತಿ ಇಬ್ಬುರಾಳ ಮಡಿದೀರು ತೊಡೆ ಮ್ಯಾಲ್ ತೊಡೆ ಇಟ್ಗಂಡು ಎದೆ ಮ್ಯಾಲೆ ಕೈ ಮಡಿಕ್ಯಂಡು. ನನ್ ಮುಂಗೈ ಇಡ್ಕಂದು. ಮಲಿಕ್ಯಂಡವರೆ. ನಾನು ಮೇಲುಕೆ ಯೇಳಕಾಗಾದಿಲ್ಲ. ಎದ್ದು ಕೂರಾಗಾಗಾದಿಲ್ಲ. ಅತ್ಲಾಗಿತ್ಲಾಗಿ ಒಳ್ಳಾಡಾಕಾಗಾದಿಲ್ಲ ಯೇನವತಾರ ಯತ್ತದು ಶಿವನೇ

ಕೇಳ್ರೇ ನನ್ನ ಮಡದೀರ

ಕೇಳ್ರೇ ನನ್ನ ಮಡದೀರ್

ತಿಗುಣೇಯ ಹೊಡತ ಕನ್ನೆ

ತಿಗುಣೇಯ ಹೊಡುತ ಕಣ್ರೆ

ಚಿಗುಟಾನ ಕಡುತಾ ಕನ್ರೆ

ಚಿಗುಟಾನ ಕಡುತಾ ಕಣ್ರೆ

ತಿಗುಣೇಯ ಕಡುತಾ ಕಣ್ರೆ

ಗುಂಡು ಗೂಳೀನ ತನ್ನ

ಕಂಚೀ ದೇವೀರಿ ಕೇಳಿ

ಸ್ವಲ್ಪ ಆಕಾತ ಜಿಗಿಯೇ

ಪಟ್ಟಾದ ಪಾರೂವತೀ

ಸ್ವಲ್ಪ ಇತ್ತೀತ ಜಿಗಿಯೇ

ಇಬುರಾಳ ಮಡಿದೀರ ಸ್ವಾಮಿ

ಕುಂಡಿ ಕುಂಡೀಲೆ ತಿವುದಾ॥ ತಾನು ತಂದೇನಾನು

ತಂದನು ತಂದೇನಾನು

ತಂದನ್ನ ತಾನೇನಾ

ತಾನು ತಂದೇನಾನಾ॥

ಕುಂಡಿ ಕುಂಡಿಲ್ಲೇ ತಿವುದಾ

ಮಂಡಿ ಮಂಡಿಲ್ಲೇ ಇರುದಾ

ಕುಂಡಿ ಕುಂಡಿಲ್ಲೇ ತಿವುದಾ

ಮಂಡಿ ಮಂಡಿಲ್ಲೇ ಇರುದಾ

ಬಲುಗಾಡೆ ಪಾರೂವತೀ

ಬಲಕೇ ಏಳ್ಪಾಡುತಾಳೇ

ಎಡುಗಾಡೆ ದೇವೀರಮ್ಮ

ಎಡುಕೆ ಏಳ್ಪಾಡುತವಳೆ

ಮೊಳದಗಲ ಜಾಗಾ ಮಾಡಿದ

ಮೆಲ್ಲಕೆ ಮ್ಯಾಕೆದು ಕೂತಾ॥ ತಾನು ತಂದೇನಾನ ತಂದನು ತಂದೇನಾನ

ತಂದನ್ನೆ ತಾನೇನ..ತಾನು ತಂದೇನಾನ॥

ಮೊಳದಗಲ ಜಾಗಾಮಾಡಿ ನಂಜುಂಡೇಶ್ವರ ಮ್ಯಕೆದ್ ಕೂತು ಯೇನ್ ಜಾನ ಮಾಡುತ್ತಾನೆ. ತಾನು ಆಕಡೆ ಎದ್ದು ಚಾಮುಂಡೀ ಮನೀಗೋದ್ರೆ. ಈ ಕಡೆ ಯಾವಳಿಗಾರ ಎಟ್ರಿಕ್ಯಾಣ್ರೆ.

ಯೇನ್ ಮಾಡ್ಲಿ ಶಿವುನೆ. ಆಕಡೆ ಚಾಮುಂಡೀ ಮನೇಗೋದ್ರೆ ಇತ್ಲಾಗ್ ಎಟ್ರಕ್ಯಾದ್ರೇನು ಮಾಡ್ಲಿ ಶಿವನೆ. ನಾನು ಚಾಮುಂಡಿ ಮನೇಗೆ ಹೋಗಿ ಬರೋವರ್ಗು ಇಬ್ಬುರಾಳಗೆ ಎಟ್ರಿಕ್ಯಾಣ್ದೆ ನಿದ್ದೆಲ್ಲೆ ಮನಿಗಿರಬೇಕು. ಆತರ ನಿದ್ದೆ ಮಾಡಬೇಕು ಅಂದ್ರೆ.

ನಾನು ದ್ಯಾವ್ರಿಗೆಲ್ಲ ಅರಿಕೆ ಕಟ್ಟಾಬೇಕೂ ॥ತಾ॥

ನಾನು ದ್ಯಾವ್ರಿಗೆಲ್ಲ ಅರಿಕೆ ಕಟ್ಟಾಬೇಕೂ ॥ತಾ॥

ಬೆಟ್ಟುದಾ ಮ್ಯಾಲಿರುವಂತ ಬಿಳೀಗಿರೀ ರಂಗುಸ್ವಾಮಿ

ದೇವ ನನುಗ್ ಬಂದ ಕಸ್ಟ ನಿನೂಗಲ್ಲುವೇ ॥ತಾ॥

ನನಿಗ್ ಬಂದ ಕಸ್ಟ ನಿನುಗಲುವೆ ರಂಗುಸ್ವಾಮೀ

ನನ್ನ ಮಡದೀರ್ಗೆ ನಿದುರೇ ಕೊಡೂಬಾರೋ ॥ತಾ॥

ಬೆಟ್ಟುದ ಮ್ಯಾಲಿರುವ ಬಿಳಿಗಿರಿ ರಂಗುಸ್ವಾಮಿ ನಾನು ಚಾಮುಂಡಿ ಮನಿಗೆ ಹೋಗ್ ಬರೋವರ್ಗು ನನ್ನ ಇಬ್ರಾಳ್ ಹೆಡ್ತೀರು ನಿದ್ರೇಲಿ ಮಲಗಿದ್ರ

ನನ್ನ ಇಬ್ರಾಳ್ ಮಡೀರು ದೇವ ನಿದುರೇಲಿ ಮನಿಗಿದರೆ

ನಿನಗೆ ಗೊಂಬೇಯ ತೇರ ಹರೋಸೇನೂ ॥ತಾ॥

ಮೇಲುಕೋಟೇಲಿರುವ ಗರುಡಾ ಗೋಪಾಲದೇವ

ಮೇಲುಕೋಟೇಲಿರುವ ಗೋಪಾಲದೇವಾ

ಸ್ವಾಮಿ ನನಿಗೆ ಬಂದ ಕಸ್ಟ ನಿನೂಗಲ್ಲುವೇ ॥ತಾ॥

ನನಿಗೆ ಬಂದ ಕಸ್ಟ ನಿನುಗಲುವೇ ಗೋಪಾಲಾ

ನನ್ನ ಮಡಿದೀರಿಗೆ ನಿದುರೆ ಕೊಡಾಬಾರೋ ॥ತಾ॥

ಮೇಲುಕೋಟೇ ಗರಡ ಗೋಪಾಲ ದೇವಾ ನಾನು ಚಾಮುಂಡಿ ಮನೀಗೆ ಹೋಗಿ ವರೋವರ್ಗು

ನನ ಇಬುರಾಳ್ ಮಡಿದೀರೂ ನಿದುರೇಲಿ ಮನಿಗಿದುರೆ

ನಿನಿಗೆ ಬಂಗೀಯ ಸ್ಯಾವೇ ಮಾಡೀಸೇನು॥ತಾ॥

ಚುಂಚುನಕಟ್ಟೇಲಿರುವಾ

ಚುಂಚನಕಟ್ಟೆಲಿರುವಂತಾ ಪಂಚ ಬಕುತ ಸಿರಿರಾಮಾ

ದೇವ ನನಿಗೆ ಬಂದ ಕಸ್ಟ ನಿನೂಗಲ್ಲುವೇ ಸಿರಿರಾಮಾ

ನನ್ನ ಮಡಿದೀರಿಗೆ ನಿದುರೆ ಕೊಡಾಬಾರೋ ॥ತಾ॥

ಚುಂಚನಕಟ್ಟೆ ಪಂಚ ಬಕುತ ಸಿರಿರಾಮ ನಾನು ಚಾಮುಂಡಿ ಮನಿಗೆ ಹೋಗಿ ಬರೋವರ್ಗು ನಾನು ಚಾಮುಂಡಿ ಮನೇಗೋಗಿ ಬರೋವರ್ಗು

ನನ್ನ ಇಬ್ಬುರಾಳ್ ಮಡದೀರು ನಿದುರೇಲಿ ಮನಗಿದುರೆ

ನಿನಗೆ ಸಂದು ರಾತ್ರೀಲ್ ತೇರ ಹರೀಸೇನೂ ॥ತಾ॥

(ಶರಣಾರ್ತಿ ಚುಂಚುನಕಟ್ಟೇಲಿ ತೇರು ಯಾವಾಗ ? ಸಂದು ರಾತ್ರೀಲಲ್ವೆ ಈ ನಂಜುಂಡೇಶ್ವರನ ಅರಕೆ ಕಾನಪ್ಪ)

ಸಂಕು ರಾತ್ರೀಲಿ ತೇರಾ ಹರೀಸೇನೋ ॥ತಾ॥

ಬಾಯಾಳು ಅರಿಕೇ ಬಾಯಲ್ಲಿದ್ದಂಗೆ ನೋಡೂ

ಇಬ್ರಿಗೆ ಮಾಯಾದ ನಿದ್ದೆ ಬರಾತಾವೇ ॥ತಾ॥

ಬಾಯಾಳ ಅರಕೇ ಬಾಯಲ್ಲಿ ಇದ್ದಂಗೆ ನೋಡೂ

ಮಡಿದಿರಿಗೆ ಮಾಯದ ನಿದ್ಯೇ ಬರಾತಾವೇ ॥ತಾ॥

ನಾನೆಲ್ಲ ದೇವಿರ್ಗು ಹಾಡಿ ಅರಿಕೆ ಕಟ್ಟಿದೆ. ಎಲ್ಲಾ ದೇವುರ್ನು ನಾನು ಬೇಡ್ದೆ. ಎಲ್ಲಾ ದೇವಿರ್ಗು ಅರಕೆ ಕಟ್ಟಿ ನನ್ನ ಹೆಡ್ತೀರು ಮನಿಗ್ಯವರೋ ಕಾಣೆ ಇಲ್ಲುವೊ ಕಾಣ್ಣಲಪ್ಪಾ

ಮನಿಗ್ಯವರೋ ಇಲ್ಲುವೋ ಕಾಣೆ

ಮನಿಗ್ಯವರೋ ಇಲ್ಲುವೋ ಕಾಣೆ

ಕಣ್ಣಿಗೆ ಕೈಹಾಕಿ ನೋಡ್ದ

ಕಣ್ಣಿಗೆ ಕೈಹಾಕಿ ನೋಡ್ದ

ಬಾಯ್ಗೆ ಬೆಳ್ಳಾಕಿ ನೋಡ್ದ

ಅತ್ಲಾಗಿತ್ಲಾಗಿ ಸ್ವಾಮಿ

ಹೆಡ್ತಿರ ಉಳ್ಸಾಡೂತವನೆ

ಹೆಡ್ತಿರ ಉಳ್ಳಾಡೂತವನೆ

ಗೊರ್ ಗೊರುನೆ ಗೊರಿಕೆಯನ್ನೇ

ಉಯ್ತಾವ್ರೆ ಮಡದೀರು

ಉಯ್ತಾವ್ರೆ ಮಡದೀರು

ಈಗ ಬದುಕೋಯ್ತು ನನ್ನು

ಬಡೂ ಜನ್ಮ ಬಡುಜನ್ಮಾ ತಾನು ತಂದೇನಾನ

ತಂದನು ತಾನೇನಾನಾ

ತಂದನ್ನ ತಾನೇನಾ

ತಾನು ತಂದೇನಾನಾ

ಈಗ ಬದುಕ್ತು ನನ್ ಜನ್ಮ ಅಂತವ ನಂಜುಂಡೇಶ್ವರ ರಾಡುಬಾಗಿಲು ತೆಗಿತಾನೆ..ವಜ್ರುದು ಬಾಗಿಲು ತೆಗಿತ್ತಾನೆ. ಬೀದಿಬಾಗಿಲಿಗೆ ಬಂದು ಮತ್ತೇನ್ ಜಾನ ಮಾಡುತ್ತಾನೆ. ನಾನು ಚಾಮುಂಡಿ ಮನಿಗೆ ಅತ್ಲಾಗಿ ಹೋದ್ ಮೇಲೆ ಇತ್ಲಾಗಿ ಯಾವಲಾರ ಒಟ್ಟಿಗೇ ಎಟ್ರಿಕ್ಯಾಗಿ ನನ್ನ ಮಡಿದೀರು ನನ್ನ ತಡಕಾಡಿ ನೋಡಿದ್ರೆ ಯೇನ್ ಮಾಡ್ಲಿ ಶಿವನೆ ನನ್ನಾ ಇವುರೂ ತಡಿಕ್ಯಾಡಿ ನೋಡಿದ್ರೆ..ಗಂಡ ಇಲ್ಲೆ ಮನಿಗ್ಯವರೆ ಅನ್ನಂಗೆ ಮಾಡಿ ಹೋಗಬೇಕು. ಅವುರು ತಡಿಕ್ಯಾಡಿ ನೋಡಿದ್ರೆ. ನನಗಂಡ ನಂಜುಂಡೇಶ್ವರ ನನ್ ಮಗ್ಲಲ್ಲೆ ಮನಿಗ್ಯವರೆ ಅನ್ನಂಗ್ ಕಾಣಬೇಕು ಆತರಾ ಮಾಡಿ ಹೋಗಬೇಕೂ..ಅಂತಾ..

ಮದ್ದುರಾತೂರೆ ವಳುಗೆ

ಮದ್ದುರಾತೂರೆ ವಳುಗೆ

ಕಗ್ಗಲೀಯ ಬೆತ್ತಾಕೋದ

ಕಗ್ಗಲೀಯ ಕೊಂಡಾ ತಂದ

ಕಗ್ಗಲೀಯ ಕೊಂಡಾ ತಂದು

ಇವ್ನ ಚಂದಕ್ಕೆ ಕೊರೆದ

ಮುಕ ಮೂಗನೇ ಮಾಡ್ದ

ಹಲ್ಲು ಬಾಯನ್ನೇ ಕೊರುದ

ಹೊಟ್ಟೆ ಬೆನ್ನವೇ ಕೊರುದ

ಕಗ್ಗಲೀಯ ಕೊಂಡಾತಂದು.

ಇವುನ ರೂಪೀಗೆ ಮಾಡಿ

ಇವುನ ಚಂದಕ್ಕೆ ಮಾಡಿ

ಇವುನ ಅಂದಕ್ಕೆ ಮಾಡಿ

ಇವುನಂಗಿಬತ್ತಿ ಧರಿಸಿ

ಇವುನಂಗ್ ಶಿವುದಾರ ಧರಿಸಿ

ಇಬುರಾಳ ಮಗ್ಗಲೀಗೆ ಸ್ವಾಮಿ..

ಕಗ್ಗಲೀಯ ಕೊಂಡಾ ಎಳುದಾ॥ ತಾನು ತಂದೇನಾನಾ

ತಂದನು ತಂದೇನಾನಾ

ತಂದನ್ನ ತಾನಾನಾ

ತಾನು ತಂದೇನಾನಾ॥

ಕಗ್ಗಲಿ ಕೊಂಡು ತಂದು ಇಬ್ಬುರಾಳ್ ಮಗ್ಗುಲಿಗೆ ..ಇವುನ್ ರೂಪು ಇವುನ್ ಚಂದುಕೆ, ಅಂದುಕೆ ಮಾಡಿ ಮಡಗಿ ಹೆಂಡ್ತೇರೆಂಗ್ ಗಂಡ ಕದ್ದೋಯ್ತನೆ ಅಂತವ ಗಂಡುನ್ ತೊಡೆ ಮ್ಯಾಲೆಂಗ್ ತೊಡೆ ಹಾಕಿ ಮಲಗಿದ್ರು. ಗಂಡುನ್ ಎದೆ ಮ್ಯಾಲೆಂಗ್ ಕೈ ಮಡಗಿದ್ದುರು ಗಂಡುನ್ ಮುಂಗೈ ಯಂಗ್ ಹಿಡಿದಿದ್ರು ಅದೇ ತರ ಮಾಡಬೇಕಾದರೆ

ಮಡಿದರೀ ತೊಡಿಯಾ ತೆಗೆದು

ಮಡಿದೀರ ತೊಡಿಯಾ ತೆಗೆದು

ಕೊಂಡಿನ್ ತೊಡಿ ಮೇಲೆ ಇಟ್ಟು

ಕೊಂಡಿನ್ ತೊಡಿ ಮೇಲೆ ಇಟ್ಟು

ಇಬ್ಬುರಾಳ ಹೆಡ್ತೀರ್ ಕೆಯ್ಯ

ಕೊಂಡಿನ್ ಎದೆ ಮ್ಯಾಲೆ ಮಡಿಗ್ದ

ಸೂಳೆ ಚಾಮುಂಡಿಗೆ ನೋಡು

ಸೂಳೆ ಚಾಮುಂಡಿಗೆ ನೋಡು

ಪಾರ್ವಾತಿ ಪದಕ ಬಿಚ್ಚ

ಕಿರಿಹೆಡ್ತಿ ದೇವಿರಮ್ಮ

ವಡುಬೆ ಸುಲಿಗೇಯ ಮಾಡ್ದ

ಹೆಡ್ತಿರ ವಡುಬೇಯ ಬಿಚ್ದ

ಸುರಳಿ ಗಂಡನ್ನೆ ಕಟ್ಟಿದಾ

ಉಸಿನಗೆ ನ್ಯಗಾಡುತಾವಾ

ಹೊಯ್ತಾ ನಿಂತವ್ನಲ್ಲಾ॥ ತಾನು ತಂದೇನಾನ

ತಂದುನು ತಂದೇನಾನಾ

ತಂದನ್ನ ತಾನಾನಾ

ತಾನು ತಂದೇನಾನಾ॥

ಯೇನಂತ ಬಯ್ತಾನೆ ಮಡಿದೀರ್ನ ನಾನು ಚಾಮುಂಡಿ ಮನಿಗೆ ಒಂಬತ್ ದಿನುಕ್ಕೆ ಬತ್ತಿನಿ ಅಂತೇಳಿ ಅವುಳ ಬಲಗೈ ಬಾಸೆ ಮಾಡಿ ಬಂದಿದ್ದೆ.. ನೀರ್ ಮುಟ್ಟಿ ಸತ್ಯವ ಮಾಡಿ ಬಂದಿದ್ದೆ. ನಾನು ಒಂಬತ್ ದಿನೂಕೆ ಚಾಮುಂಡಿ ಮನೀಗೆ ಕದ್ದೋಗಾನಾ ಅಂತ ಕಾದು ಕೂತಿದೆ.

ಕದ್ದು ಹೋಗಾನಾ ನೀವು ತೈಬ್ಬಿ ಮನುಗಿದುರಲ್ರೆ
ಈಗ ತೈಬಿಕ್ಯಳ್ರೆ ನಿಮ್ಮ ಹೊಸಾ ಗಂಡನಾ ॥ತಾ॥

ನಾನು ಗಂಡನಾಗಿ ಬಟ್ಟಿದೆ .ಈಗ ಇಬ್ಬುರಾಳ ಗಂಡ್ದೀರಾದೊ

ಈಗ ಕಬ್ಬುಕ್ದಾಂತ ಗಂಡುನ ತೈಬ್ಬೀಕ್ಯಳೀರೇ ॥ತಾ॥
ಒಬ್ರೀಗಿಬ್ಬರು ಲೇಸು ಹಬ್ಬಕೆ ಮದುವೇಯು ಲೇಸು
ಈಗ ಮಾಡೀದೆ ನಿಮ್ಮ ಮದಾವೇಯಾ ॥ತಾ॥
ಮಾಡೀದೆ ನಿಮ್ಮಾ ಮದಾವೇಯಾ ॥ತಾ॥

ಗಂಡ ಕದ್ದೋದ್ ಮೇಲೆ ಗಂಡಿಲ್ ಗಂಡಿಲ್ಲ ಅಂತ ಬಾಯ್ ಬಾಯ್ ಬಡ್ಕೋತಿದ್ರಿ

ಈಗ ಕಬ್ಬುಕ್ದಾಂತ ಗಂಡುನ ತೆಬ್ಬೀಕ್ಯಳೀರೇ ॥ತಾ॥
ಕಗ್ಗಲೀಯ ಕೊಂಡ ತಂದು ಇಬ್ಬುರಾಳ ಮಗ್ಲೀಗೆ ಎಳ್ದು
ಕೆಟ್ಟ ಕೆಟ್ಟ ಬಯ್ಗಳ ಬಯ್ಯಾತಾನೇ ॥ತಾ॥
ಕೆಟ್ಟು ಬೋಗುಳ ಬೋದೂ ಉಸಿನ್ನೇಗೆ ನ್ಯಗಾಡೀ
ಮೆಲ್ ಮಲ್ಕೆ ಬಾಗ್ಲಾ ತೆಗೀತಾನೇ ॥ತಾ॥
ಹಣೀದ್ ಕೊಪ್ರಿಕೆ..
ಹಣೀದ್ ಕೊಪ್ರಿಕೆ ಅರುಮನಿಗೆ ಹೋಗುತಾನೆ
ಚಾಮುಂಡ್ಗೆ ಮೂರ್ ಬಳ್ಳ ಹಣುವ ಅಳಾಕಂಡಾ ॥ತಾ॥
ಮೂರ್ ಬಳ್ಳ ಹಣುವಾ ಕೈಗೇ ತುಂಬೀಕಂಡಾ
ಮದ್ದು ರಾತ್ರೀಲಿ
ಕದು ಹೊಂಟಾನು ಚಾಮುಂಡಿ ಮನಿಗೇ ॥ತಾ॥
ಮದ್ದು ರಾತ್ರೀಲಿ ಕದ್ದು ಹೊಂಟಾನು ಚಾಮುಂಡಿ ಮನಿಗೇ ॥ತಾ॥

ಕಗ್ಗಲೀಕೊಂಡ್ ತಂದು ಇಬ್ಬುರಾಳ್ ಮಗ್ಗಿಲೇಗೆಳದು ಕೆಟ್ಟು ಬೋಗುಳ ಬೋದು ಉಸಿ ನೇಗೆ ನ್ಯಗಾಡಿಕೊಂಡು ಹದಿನಾರು ಕೊಪ್ರಿಕೆ ಅರುಮನಿಗೋಗಿ ಚಾಮುಂಡ್ಗೆ ಮೂರು ಬಳ್ಳ ಹಣ ಅಳಕಂಡು. ಮದ್ ರಾತ್ರೀಲಿ ಚಾಮುಂಡಿಗೆ ತಿಂಡಿ ಕೊಳ್ಳೋದುಕ್ಕೆ.

ಮದ್ದುರಾತೂರೆ ವಳುಗೆ
ಮದ್ದು ರಾತೂರೆ ವಳುಗೆ

ಅಂಗಡೀಯ ಬೀದೀಗೋದಾ

ಅಂಗಡೀಯ ಬೀದೀಗೋಗಿ

ಸೂಳೇ ಚಾಮುಂಡಿಗೇ ನೋಡು

ತಿಂಡೀಯ ಕೊಳ್ಳೂತ್ತವನೆ

ತಿಂಡೀಯಾ ಕೊಳ್ಳೂತ್ತವನೆ

ಒಲುದಾರ ಒಲಿಸೀಗೋಳೋ

ಅವುಲೇ ಕಟ್ಟೀನ ಬೆಲ್ಲ

ಅದುನೂ ಕೊಂಡಾನೂ ಸ್ವಾಮಿ

ಕಡಲೆ ಕರ್ಜೂರ ಕೊಂಡ

ಸಕ್ಕರೆ ಮಿಠಾಯಿ ಕೊಂಡ

ರಸಬಾಳೆ ಹಣ್ಣ ಕೊಂಡ

ಕಸಿ ಮಾವೀನಣ್ಣ ಕೊಂಡ

ಸೂಳೇ ಚಾಮುಂಡೀ ಮಂಡೇ

ಏಳು ಮಾರುದ್ದ ಮಂಡಿಗೆ

ದುಂಡುಮಲ್ಲಿಗೇ ಹೂವಾ ಕೊಂಡ

ಚಂಡು ಮಲ್ಲಗೇ ಹೂವಾ ಕೊಂಡ

ಮರುಗ ಮಲ್ಲೀಗೇ ಕೊಂಡಾ

ಆರು ಲೋಕ ಉರೀ ಅಂತ

ಆರು ಲೋಕ ಉರೀ ಅಂತಾ

ಗಾರೇ ಬಣ್ಣಾದು ಸೀರೆ

ಅದುನೂ ಕೊಂಡಾನು ಸ್ವಾಮಿ

ಅದುನು ಕೊಂಡಾನು ದೇವಾ

ಬಲ್ಲಾನು ಕೊಂಡಾ ಕೊಂಡಾ

ಪಟ್ಟೇ ದೋತುರಕೇ ಕಟ್ಟಿದಾ॥ ತಾನು ತಂದೇನಾನಾ–ತಂದನು ತಂದೇನಾನಾ

ತಂದನ್ನ ತಾನಾನಾ ತಾನು ತಂದೇನಾನಾ॥

ತಿಂಡ್ಯೆಲ್ಲ ಮುಗುದು ಮ್ಯಾಲೆ ಎಲ್ಲಾನು ಗಂಟು ಬಿಕ್ಕಂಡವನೆ. ಅಂಗಡಿ ಬೀದೀ ಒಳುಗೆ ಮದ್ ರಾತ್ರೀ ವತ್ತಿನಲ್ಲಿ ಇವುನ ಕಿರಿ ಮಡಿದಿ ದೇವಿರಮ್ಮ ಯಾರ್ ಮಗಳು ದೇವೇಂದ್ರ ರಾಯನ ಮಗುಳು ದೇವಿರಮ್ಮ. ಮಾವ ದೇವೇಂದ್ರ ರಾಯ ಅಳಮಯ್ನ ಅವುತಾರ ನೋಡುತ್ತಾ ಇದ್ದಾರೆ. ಕಗ್ಗಲಿ ಕೊಂಡು ತಂದು ಮಗ್ಗಲಿಂಗೆ

ಮಡಗಾರ ನೋಡುತಾನೆ ದೇವೆಂದ್ರಾಯ..ಮಗಳ ಬುಟ್ಟು ಸೂಳೇ ಮನೇಗೋಗಾದ ದೇವೇಂದ್ರಾಯ ನೋಡುಬುಟ್ಟು ಇವುನು ಹೋಗದಂಗೆ ದಾರೀಲೇನಾರ ತಂಟೆ ಮಾಡಬೇಕು ಅಂತ.

ಇವುನು ಬರೂವ ದಾರೀಗೆ ಇಳೂದವರೇ ॥ತಾ॥

ಇವುನು ಬರೂವ ದಾರೀಗೆ ಇಳಾದವರೇ ॥ತಾ॥

ಕಡೆಯ ಬಾಗಿಲೀಗೆ ಬಂದು ದೇವೆಂದ್ರಾಯಾ

ಕಾಡೊಟ್ಟೆ ಬೆನವನ ಕರೆದವನೇ ॥ತಾ॥

ಕಡೇ ಬಾಗುಲಿಗೆ ಬಂದು ಬಿಟ್ಟು ದೇವೇಂದ್ರಾಯ ಇವ್ನು ಹೋಗೋ ದಾರೀಗೆ ಕಾಡೊಟ್ಟೆ ಬೆನವನ ಕಾವಲಿಡುತ್ತಾರೆ. ನನ್ನ ಅಳಿಯ ನಿನ್ನ ಬಾವ ನಂಜುಂಡೇಶ್ವರ ಚಾಮುಂಡಿ ಮನೀಗೋಗಾಕೆ ಕಡೇ ಬಾಗಿಲಿಗೆ ಬತ್ತಾನೆ. ಅವುನ್ನ ಮಾತೀಗ್ ಮಾತು ಕೊಟ್ಟು. ಅವುನ್ನ ಅಟ್ಟಾಡಿಸು ಅಂತೇಳಿಬಿಟ್ಟು. ಅಲ್ಲಿ ,,,ಕಡೇ ಬಾಗುಲಲ್ಲಿ ಕಾಡೊಟ್ಟೆ ಬೆನುವನ ಕಾವಲಿಟ್ಟು ಬುಟ್ಟು,,,ಅಲ್ಲಿಂದ ಮುಂದ್ಕೆ ಎಲ್ಲಿಗೆ ದಾಟ್ದೆ ದೇವೇಂದ್ರಾಯ ಅಂದ್ರೆ. ನಂಜನಗೂಡಿನಾ–ಮೈಸೂರಿಗೂವೆ ಮದ್ಯದಲ್ಲಿ ಯಜ್ವರೊಳಿ ಅಂತ ಅಯ್ತೆ. ಯಜ್ವೊರೊಳೇಗೋಗಿ ದೇವೇಂದ್ರಾಯ ಗಂಗಾ ದೇವಿ ಕಂಡು.. ಗಂಗಾ ದೇವಿ, ನಂಜುಂಡೇಶ್ವರ ಚಾಮುಂಡಿ ಮನೀಗೆ ಈ ಹೊಳೇ ಆದು ಹೋಗಬೇಕು.ಆವ್ನು ಹೊಳೀಗ್ ಬಂದ್ ಕಾಲ್ದಲ್ಲಿ ಅವ್ನು ಹೊಳೆ ದಾಟ್ದಂಗೆ ಎಕಾಂತವಾಗಿ ಉಕ್ಕಿ ಅರೀಬೇಕಮ್ಮ..ಅಂತ ಹೇಳಿ, ಅಲ್ಲಿಂದ ಮುಂದ್ಕೆ ಎಲ್ಲಿ ದಾಟ್ದಿ ಅಂದ್ರೆ. ..ಚಾಮುಂಡಿ ನಡುಬೆಟ್ಟಕ್ಕೋದ ಚಾಮುಂಡಿ ನಡುಬೆಟ್ದಲ್ಲಿ ಜಲಗೋಡಿ ಬಸುವಣ್ಣ ಕರ್ದ. ಬಸುವಣ್ಣಾ ನನ್ನಾಳಿಯ ನಂಜುಂಡೇಶ್ವರ ಚಾಮುಂಡಿ ಮನೇಗೋಗಾಕೆ ಈ ದಾರೀಲಿ ಬತ್ತಾನೆ. ಈ ಅದೀಲಿ ಅವ್ನು ಬೆಟ್ಟ ಹತ್ತಿ ಬರೋವಾಗ ಅವುನ್ನ ಒದ್ದು ಆಚಿಗೆ ಹಾಕಿ ಬುಡಪ್ಪ ಅಂತೇಳಿ.. ಜಲಗೋಡಿ ಬಸುವಣ್ಣ ಕಾವಲಿಡುತ್ತಾನೆ. ಅಲ್ಲಿ ಕಡೇ ಬಾಗುಲಲ್ಲಿ ಕಾಡೊಟ್ಟೆ ಬೆನುವಣ್ಣ.. ಯಜ್ವೊರೋಳೇಲಿ ಗಂಗಾ ದೇವಿ ಚಾಮುಂಡಿ ನಡುಬೆಟ್ದಲ್ಲಿ ಜಲಗೋಡಿ ಬಸುವ ಹಿಂಗೆ ಎಲ್ಲಾರ್ನು ಕಾವಲಿಡುತ್ತಾನೆ ಇವನ್ನೂ.

ಅಂಗಡಿ ಮನೇಯ ಬುಟ್ಟು ಆಚ್ಗೆ ಹೋಗುತಾನೇ

ಇವನ ಅಲ್ಯಾರೋ ಸೆರೆಗಾ ಹಿಡಾದವರೇ ॥ತಾ॥

ಅಯ್ಯ ಕಡೆಯ ಬಾಗ್ಲಲ್ಲಪ ಕಾಡೊಟ್ಟೆ ಬೆನುವಾ

ಇವನ ಕಂಡುನಲ್ಲ ಸೆರಗ ಹಿಡಾಕಂಡಾ ॥ತಾ॥

ಇವನ ಕಂಡುನಲ್ಲ ಸೆರಗ ಹಿಡಾಕಂಡಾ ॥ತಾ॥

ಬಾವ ಆರೇಳಂಕುಳದಲ್ಲಿ ಅಕ್ಟೀರಿಬ್ಬರ ಬುಟ್ಟು

ಎತ್ತಲಾಗೋಗಾತಿಯಾ ಯಮತುಂಟಾ ॥ತಾ॥

ಹತ್ತೇಳುಂಕುಳದಲ್ಲಿ ಅಕ್ದೀರಿಬ್ಬರ ಬುಟ್ಟು

ಯತ್ಲಾಗೋಗ್ತೀಯೋ ಯಮಾತುಂಟಾ ॥ತಾ॥

ನಂಜುಂಡೇಶ್ವರ ಚಿಂತೆ ಮಾಡುತ್ತಾನೆ. ನನ್ನ ಮಾವುನ ಮನಿಯ ಕಾಡೊಟ್ಟೆ ಬೆನುವರ್ಗೋಳು ಇಲ್ಲಿ ಹಿಡ್ದಾಕಿದ್ನಲ್ಲ. ಇವುನಿಗೇನು ಸುಳ್ಳೀಲ್ಲಿ..ಇವುನ್ಗೇನ್ ತಳ್ಳೀಲ್ಲಿ ಯೇನ್ ಸುಳ್ಳಂಳುತ್ತಾನೆ. ಕಾಡೊಟ್ಟೆ ಬೆನುವಗಳಿರಾ..

ಮೂಡುಆ ಸೀಮೇ ಒಳುಗೆ, ಅಲ್ಲಿ ನಮಕುಲದಾ ಪಂಚಾತಿ

ಅಂತಾ ನ್ಯಾಯಾಕ್ಕೆ ಹೋಗಾತೀನಿ.॥ತಾ॥

ಆಯ್ತು ಬಾವಯ್ಯ ಮೂಡುಸೀಮೇ ಒಳುಗೆ ನಿಮ್ಮ ಕುಲದ ಪಂಚಾತಿ. ನ್ಯಾಯ ತೀರ್ಮಾನ ಮಾಡಕ್ಕೆ ಹೋಯ್ತಾ ಇದ್ದೀಯಾ.

ನ್ಯಾಯಾ ತೀರ್ಮಾನ ಮಾಡಾಕೋಗಾರೀಗೆ

ಭಾವ ಬೆನ್ನುಮ್ಯಾಗ್ಳಗಂಟು ಇದೂ ಯಾಕೋ ॥ತಾ॥

ಬೆನ್ನು ಮ್ಯಾಗಳ ಗಂಟು ಇದು ಯಾಕೋ ॥ತಾ॥

ನ್ಯಾಯಾ ತೀರ್ಮಾನ ಮಾಡಕೋಗಾರು ಗಂಟು ಹೊತ್ಕೊಂಡೋಯ್ತಾರ ಅಂತ, ಗಂಟು ಯಾಕೆ ಅಂತ ಕೇಳಿದ್ನಲ್ಲ .ಇದ್ಕೇನು ಸುಳ್ಳೀಲ್ಲಿ ಇದ್ಕೇನು ತಳ್ಳೀಲ್ಲಿ ಅಂತ ಹೇಳಿ ಹೇಳುತ್ತಾನೆ. ಬಾವದೀರ..ಕುದಲ ನ್ಯಾಯ ಹರೀದೇ ತಡವಾಗಿ ಬುಟ್ರೆ ನನ್ ಗಂಡ ಅಸ್ತುಬುಡ್ತಾನೆ ಅಂತೇಳಿ.

ನಿಮ್ಮಕ್ಕ ದೇವೀರಿ ನಿಮ್ಮಕ್ಕ ಪಾರುವಾತಿ

ನನಿಗೆ ಕೊಟ್ಟ ಬುತ್ತಿ ಮಾಡಿ ಕಳಿಸ್ಯವರೇ ॥ತಾ॥

ನ್ಯಾಯಾ ತೀರ್ಮಾನ ಆಗಾದು ತಡವಾಗಿ ಬುಟ್ರೆ ನಿಮ್ಮಕ್ಕ ದೇವೀರಿ ನಿಮ್ಮಕ್ಕ ಪಾರ್ವತಿ ಗಮಡ ಅಸ್ತು ಬುಡ್ತಾನೆ. ಅಂತೇಳಿ ರೊಟ್ಟಿ ಬುತ್ತಿ ಮಾಡಿ ಕಳ್ಸ್ಯವರೆ ಅನ್ನದಾಗಿ ಹೇಳ್ತೀಯ ಬಾವಯ್ಯ,,, ಅದುನ್ನ ಒಪ್ಕಳಾನ

ನ್ಯಾಯಾ ತೀರ್ಮಾನ ಮಾಡಾಕೋಗಾರೀಗೆ

ಬಾವ ಜೋಳಿಗೆಲ್ಲಿ ಹಣಾ ಇದೂ ಯಾತಕೋ ॥ತಾ॥

ನ್ಯಾಯ ತೀರ್ಮಾನ ಮಾಡಕೋಗಾರು ಹಣಾ ಜೋಳಿಗೆಲ್ಲಿ ಮಡಿಕ್ಯಂಡೋಗ್ತಾರೆ. ಜೋಳಿಗೆಲ್ಲೆ ಹಣ ಯಾತುಕ್ಕೆ ಇದ್ದೇನ್ ಸುಳ್ಳೀಲ್ಲಿ ಇದ್ಕೇನ್ ತಳ್ಳೀಲ್ಲಿ ಅಂತ ಯೇನೇಳುತ್ತಾನೆ.

ನಾನು ಕುಲದ ನ್ಯಾಯಕ್ಕೆ ಹೋಗೋದು ತಡವಾದ್ರೆ

ಅಲ್ಲಿ ನನ್ ಮ್ಯಾಲೆ ದಂಡ ಇಡುತಾರೇ ॥ತಾ॥

ನನ್ನ ಮ್ಯಾಲೆ ದಂಡಾ ಇಡಾತಾರೇ ॥ತಾ॥

ನನ್ನ ಮ್ಯಾಲೆ ದಂಡಾ ಬೀಳುತಾದೆ ಅಂತೇಳಿ

ನಾನು ದಂಡುಕ್ಕ ಹಣಾ ತಗಂಡೀನಿ ॥ತಾ॥

ನಾನು ದಂಡುಕ್ಕೆ ಹಣಾ ತಂದೀದಿನಲ್ಲ ॥ತಾ।

ಬಾವಯ್ಯ ಎಲ್ಲಿ ಒಪ್ಕಳಾನ. ಬಾವ ನಿನ್ನ ಮಾಕ ನೋಡಿದ್ರೆ

ನಿನ್ನ ಮೊಕವಾ ನೋಡಿದ್ರೆ ಬಾವ ಪುಂಡುನಂಗೆ ಕಾಣುತೀಯ

ಚಾಮುಂಡಿ ಮನೆಗೆ ಹೋಗಾತೀಯಾ ॥ತಾ॥

ಬಾವಾ ಚಾಮುಂಡಿ ಮನೆಗೆ ಹೋಗಾತೀಯಾ ॥ತಾ॥

ಚಾಮುಂಡಿ ಮನಿಗೆ ಹೋಗುತ್ತೀಯ ಅಂದ ಗಳಿಗೆಲ್ಲಿ.. ಇದ್ಕೇನು ಹೇಳ್ಲಿ ಜಾನ ಮಾಡುತ್ತಾನೆ ಚಾಮುಂಡಿ ಯಾರು? ನಾನು ಯಾರು? ನಿಮಿಗೆ ಆರಿವೈತೇನಪ್ಪ? ಚಾಮುಂಡಿ ಮೈಸಾಸೂರುನ್ನ ಕೊಂದು ಕೋಣ್ಣಾ ಮೇಲೆ ಮೈಸಾಸೂರ ಯುದ್ದಕೆ ಬಂದುದು. ..ಆ ಕೋಣ್ಣ ಬಲಿ ತಗಂಡಳು. ಮೈಸಾಸರುನ್ನು ಬಲಿ ತಗಂಡಳು.

ನಾನು ಲಿಂಗಾವ ಇಟುಕೊಂಡು ಇಂಥ ಶಿವುದಾರ ಇಟುಕೊಂಡು

ನಾನು ಅಂತಾವ್ಳ ಮನಿಗೆ ಹೋಗಾ ಬವುದೇ ॥ತಾ॥

ನನ್ನ ಜಾತಿ ಮತುಕ್ಕೆ ಈ ಮಾತು ಗೊತ್ತು ಆದುರೆ ನೋಡು

ನನ್ನ ಕುಲದಿಂದ ಒರಗೆ ಇಡಾತಾರೇ ॥ತಾ॥

ಅವುಳ ಮ್ಯಾಲೆ ನನ್ನ ಹೋಲುಸಬವುದೇ ॥ತಾ॥

ಏನೇನು ಕಾಣದಂತ ಯಡ್ಡಿ ಬೆನವೋಗೋಳು

ನಂಜಯ್ಗೆ ದಾರಿ ಬುಟ್ಟವರಲ್ಲಾ ॥ತಾ॥

ಮುಂದೆ ಯಾರ್ ಅವ್ರೆ ಇವ್ನಗೆ ಯಜ್ಜೂರೊಳೇಲಿ ಗಂಗಾ ದೇವಿ ಕಾಯ್ತಾ ಕೂತವೇ ಯಾವೊತ್ತಿಗ್ ಬತ್ತಾನೆ ವಳೀಗೆ ಕಾಲಿಡುತ್ತಾನೆ. ನೇನೆಸ್ಟೊತ್ತಿಗೆ ಏಕಂತವಾಗಿ ಉಕ್ಕಿ ಹರೀಲಿ ಅಂತೇಳಿ ಗಂಗಾದೇವಿ ಕಾದು ಕುಂತಿದಾಳೆ. ಯಜ್ಜೂರು ವಳೇಲಿ

ಯಜ್ಜೂರ ವಳೀಗೋಗಿ ಮಾರುದ ನೀರಾದಾ

ಗಂಗಾ ದೇವೀಗುಕ್ಕ್ಯವಳಲ್ಲಾ. ॥ತಾ॥

ಮಾರುದ್ದ ನೀರಾದ ಮೆಟ್ಟಿಗೆ ಬಂದೈತಲ್ಲಾ

ಮುಂದಕ್ಕಾಯುವುದ ಕಾಣುವುದಿಲ್ಲಾ ॥ತಾ॥

ನಾನು ಯಂಗೇ ಹೋಗಾಲಿ ಚಾಮುಂಡಿ ಮನಿಗೇ ॥ತಾ॥

ಯಜ್ಜೂರೊಳಿಗೋಗಿ ಮಾರುದ್ದ ನೀರಾದ. ಗಂಗಾದೇವಿ ಏಕಂಡವಾಗಿ ತುಂಬ ಉಕ್ಕಿ ತುಂಬಿ ತುಳುಕಾಡಿಬುಟ್ಟು. ವಳೇವಳುಗ್ ನಿತ್ಕಂಡು. ಕುತ್ತಿಗ್ಯುದ್ದ ನೀರ್ನಲ್ಲಿ. ಯೇನ್ ಜಾನ ಮಾಡುತ್ತಾನೆ. ನಾನು ದೇವತಾ ಪುರುಸನಾಗಿ. ಚಾಮುಂಡಿ ಮನಿಗೆ ಒಂಬತ್ ದಿನೂಕ್ ಬತ್ತೀನಿ ಅಂತೇಳಿ ಬಲಗೈ ಬಾಸೆ ಮಾಡಿ ನೀರ್ ಮುಟ್ಟಿ ಸತ್ಯ ಮಾಡಿ ಬಂದಿದ್ದೆ. ನಾನೀಗ ಒಂಬತ್ತ ದಿನುಕ್ಕೆ. ಚಾಮುಂಡಿ ಮನಿಗೆ ಹೋಗೇತಿರಬೇಕಲ್ಲ. ಈ ಗಂಗಾದೇವಿ ಉಕ್ಕಿ ಬುಟ್ಟು ನನ್ನ ಹಿಡಿದು ನಿಲ್ಲಿಸ್ಕ್ಯಂಡವಳೆ. ಯೇನ್ ಮಾಡ್ಲಿ ಶಿವುನೇ. ಬಗುವಂತಾ ಯಾರ ನೆನಿಸ್ತಾನೆ. ವಳೆವಳುಗೆ ನಿಂತ್ಕಂಡು.

ನನ್ನ ಮೂಡ್ಲಾಗಿರಿಯಲೀರೋ ಹೆಜ್ಜಿನ ತಿಮ್ಮಪ್ಪ ದೋರೆ

ಸ್ವಾಮಿ ನನಿಗ್ ಬಂದ ಕಸ್ಟಾ ನಿನೀಗಲ್ಲುವೇ ॥ತಾ॥

ಸ್ವಾಮಿ ನನಿಗ್ ಬಂದ ಕಸ್ಟ ನೀನೀಗಲ್ಲುವೇ ॥ತಾ॥

ಮೂಡ್ಲುಗಿರಿ ತಿಮ್ಮಪ್ಪ.. ಮೂರ್ ನಾಮದೊಡೆಯ..ಏನಾರ ಮಾಡಿ ದಾರಿ ಬಿಡಿಸಿಕೊಡು ದೊರಿಯೇ

ಮೂಡ್ಲುಗಿರಿಯಲ್ಲಿ ಇರುವ ಹೆಚ್ಚಿನ ತಿಮ್ಮಪ್ಪದೋರೆ

ಮೂಡ್ಲುಗಿರಿಯಲ್ಲಿ ಇರುವ ಹೆಚ್ಚಿನ ತಿಮ್ಮಪ್ಪದೋರೆ

ನಿನಗೆ ವರುಸಕೊಂದಾನೆ ಮುಡುಪ ಕಳ್ಳಾತೀನೀ ॥ತಾ॥

ಗಂಗಾದೇವಿ ನನುಗೆ ದಾರಿ ಬುಡಲಿ ದೇವಾ ॥ತಾ॥

ವರುಸಕೊಂದು ಮುಡುಪು ಅಂದ್ರೆ. ಬೂಮಂಡಲ ಇರೋವರ್ಗು ವರುಸಕೊಂದು ವರುಸಕೊಂದು ಮುಡುಪು ನಂಜನಗೂಡಿಂದ ಮೂಡ್ಲುಗಿರಿಗೋಗುತ್ತಾದೆ. ಮಾಯ್ಕಾರ ತಿಮ್ಮಪ್ಪ.. ಮೂಡ್ಲುಗಿರಿ ತಿಮ್ಮಪ್ಪ ..ಎಡಗೈಲಿ ರಾಮಬಾಣ, ಬಲಗೈಲಿ ಚಕ್ರಬಾಣ ಇತ್ತಲ್ಲ ಬಲಗೈಲಿದ್ದ ಚಕ್ರುವಾಣ ಗರಿಗರಿನೆ ತಿರುಗಿಸಿ ಬುಟು

ಚಕ್ರಾ ಬಾಣಾವ ತೆಗೆದು

ಮಾಯ್ದಲಲ್ಲಿಗೆ ಬುಟ್ಟಾ.

ಮಾಯ್ದಲಲ್ಲೀಗೆ ಬುಟ್ಟಾ

ಅವುನ ಚಕ್ರಾಬಾಣಾ

ಮಾಯ್ದಲ್ಲಿ ಬರುವಾತಾದೆ

ನೀರೀನ ವಳುಗೆ ನೋಡು

ಗರಿಗರಿನೆ ತಿರುಗೂತೈತೆ

ಗರಿಗರಿನೆ ತಿರುಗೂತೈತೆ

ನೀರು ಬಾಣಾ ಆಯ್ತು

ನೀರು ಬಾಣಾ ಆಯ್ತು

ಸಣ್ಣ ಮರದಲ್ಲಿ ಇವುನ ಪುಟ್ಟು ಪಾದ ಮಡಿಕ್ಯಂಡು

ಸ್ವಾಮಿ ಮೆಲ್ ಮೆಲ್ಕೆ ಅಚ್ಚೆ ದಾಟೇವಾರಾ ॥ತಾ॥

ಸ್ವಾಮಿ ಚಕ್ರಬಾಣ ನೀರೊಳಗೆ ಗರಿಗರಿನೆ ತಿರುಗುವಾಗ ನೀರಿನ ಮೇಲೆ. ನೀರೇ ಬಾಗುವಾಗಿ ಹೋಯ್ತು ಸ್ವಾಮಿ ಮಾಯ್ಕೆ. ಆಗ ಆಚ್ಗೆ ದಾಟ್ದಿ ಹೊಳೆ ಬುಟ್ಟು ಇನ್ನು ಮುಂದ್ಕೆ ಯಾರವ್ರೆ? ಜಲನೋಡಿ ಬಸವಣ್ಣ ಬೆಟ್ಟುದ್ ಮ್ಯಾಲೆ ನಿಂತಿದ್ದಾನೆ. ನಂಜುಂಡೇಶ್ವರನ ತಡಿಯಾಕೆ.

ಬೆಟ್ಟುದಾ ಬಾಗೀಲಿಗೊಂದು

ಸ್ವಾಮಿ ಬಸವಣ್ಣ ಕಾಲ ಕ್ಯರಿಯಾತಾನೇ ॥ತಾ॥

ಕಾಲ ಕ್ಯರಿಯಾತಾನೆ ಗುಟ್ರ ಹೊಡೆಯುತ್ತಾನೆ

ಇನ್ನ ದಿಟ್ಟಿಸಿ ಸ್ವಾಮಿ ನೋಡುತ್ತಾನೇ ॥ತಾ॥

ಬಸವಣ್ಣ ಯಾವೊತ್ತಿಗೆ ಬತ್ತಾನೆ. ಏಟೊತ್ತಿಗೆ ಅವ್ನ ಬಿದ್ದು ಹಿಂದುಕ್ಕೆ ಅಟ್ಯಾಡಿ ನೂಕ್ಲಿ ಅನ್ನದಾಗಿ ಚಾಮುಂಡಿ ನಡು ಬೆಟ್ಟದಲ್ಲಿ ಬಸವಣ್ಣ ಕ್ಯಾಕರಿಸುತ್ತಾನೆ, ಗುಟ್ರ ಹೊಡೀತಾನೇ. ಈ ಗುಟ್ರ ಹೊಡಿಯೋ ಸಬ್ದ ನಂಜುಂಡೇಶ್ವರಗೆ

ಕಂಡು ಬಂತು. ನನ್ನ ಮಾವುನ ಮನೆ ಜಲಗೋಡಿ ಬಸವಣ್ಣ ಬಂದು ಇಲ್ಲಿ ಕಾವುಲು ಕುಂತ್ಯೆತಲ್ಲಪ್ಪ. ಎಲ್ಲಾರ್ಲು ಸುಳ್ಳು ತಳ್ಳು ಏನೋನೋ ಮಾಡಿ ಬಂದೆ. ಈ ಬಸವಣ್ಗೆ ಸುಳ್ಳೇಳಾಕೆ ಆಗಾದಿಲ್ವಲ್ಲಾ. ಈಗ ಬಸವಣ್ಗೆ ಯೇನ್ ಪಾಪ ಇಡುತ್ತಾನೆ.

ಈ ಲೋಕಲಲ್ಲಿ ಇಲ್ದಂತ ದೊಡ್ರೋಗ ತಗುಲ್ಬುಟಟು

ಆ ಜಲಗೋಡಿನ ಬಸುವ ವರೀಗೋಗಲೇ ||ತಾ||

ಇಂದಿನ ಕಾಲುದಲ್ಲಿ ದೊಡ್ರೋಗ ಇರುನಿಲ್ಲ

ಇವುನ್ನ ಸಾಪುಕೆ

ಆಗ್ಲೆ ಉಟ್ಕ್ಯಂತು ಗೋವೂದನಿಗೇ ||ತಾ||

ಆಗ್ಲೆ ಉಟ್ಕ್ಯತ್ತು ಗೋವೂದನೀಗೆ ||ತಾ||

ಮಲ್ಲೂರ ಮನ ಆದೀಲಿ ಬಸವಣ್ಣ ಕೂತಿದ್ದಾನೆ. ಕಾಡಾದೀಲಿ ಕದ್ದೋಗಬೇಕು ಅಂತ ನಂಜುಂಡೇಶ್ವರ

ಕಾಡಾ ಹಾದೀಯ ಒಳಗೆ

ಕಾಡಾ ಹಾದೀಯ ಒಳಗೆ

ಗೌರೀ ಕಾವೀಲಿನೊಳಗೆ

ಉಗುನೆ ತೋಪೀನ ಒಳುಗೆ

ಕಾಡಾ ಹಾದೀಯ ಒಳುಗೆ

ಕದ್ದೇ ಓಡೋಗೂತವನೆ

ಓಡೋ ಬರಸೀಗೆ ನೋಡು

ಓಡೋ ಬರಸೀಗೆ ನೋಡು

ಕೆಂದೂಳು ಕೆದುರೂತಾವೆ

ಕೆಂದೂಳು ಕೆದುರೂತಾವೆ

ಗಗನಕ್ಕೆ ಹಾರಾತಾವೆ

ಹಾದಿ ಕಲ್ಲಾರು ತಾವೆ

ಎಡದಲ್ಲಿ ಬಲಾದಲ್ಲಿ

ಮರ ಮುರುದು ಬೀಳೂತಾವೆ.

ಎಲ್ಲಿ ಬಸವಣ್ಣ ಹಿಡ್ದಾತ್ತಾನೆ. ಅನ್ನುವುದಾಗಿ ಅಸ್ಟು ಬಿರುಸಾಗಿ ಓಡುತ್ತಾನೆ. ಓಡುವಾಗ ಎಡದಲ್ಲಿ ಬಲದಲ್ಲಿ ಇವುನ ಬರಸ್ಗೆ ಮರ ಮುರುದು ಬೀಳ್ತಾವೆ. ಹಾದಿ ಕಲ್ಲಾರ್ತವೆ. ಕೆಂದೂಳ್ ಕೆದ್ರಾ ಗಗುನಕ್ಕೆ ಹಾಕ್ತದೆ.

ಇವುನು ಕದ್ದೋಡುಬೇಕು ಅನ್ನದಾಗಿ ಓಡುವಾಗ ಬಸವಣ್ಣ ಕಂಡು ಬುಟ್ಟು ಬಸವಣ್ಣ

ಹಾರಿ ಬಂದಾವನಲ್ಲೊ

ಹಾದು ನಿಲ್ಲಾಉತವನೆ

ಹಾದು ನಿಲ್ಲಾಉತವನೆ

ಬಿದ್ದು ನಿಲ್ಲಾಉತವನೆ

ಬಾವಯ್ಯ ಬಾವಯ್ಯ

ಆರೇಳಿಂಕಾಳದಲ್ಲಿ

ಅಕ್ಕದೀರಿಬ್ಬಾರ ಬುಟ್ಟು

ಎತ್ಲಾಗೋಯ್ತೀಯೋ ಭಾವ

ಹತ್ತೇಳಂಕಾಳದಲ್ಲಿ

ಅಕ್ಕದೀರಿಬ್ಬಾರ ಬುಟ್ಟು

ಎತ್ತಲಾಗೋತೀಯೋ ಭಾವಾ

ಮೂಡುಸೀಮೆಯ ಒಳುಗೆ

ನಮ್ಮ ಕುಲವ ಪಂಚಾತಿ

ನಮ್ಮ ಕುಲವ ಪಂಚಾತಿ

ಅಂತಾ ನ್ಯಾಯಕ್ಕೆ ನಾನು

ಹೋಗೂವೆ ಬಸವಣ್ಣ

ಹೋಗುತೀನಿ ಬಸವಣ್ಣ

ಬಲ್ಲೇನು ಬಲ್ಲೇನು ಬಾವ

ನಿನ್ನ ಬೆಲ್ಲದಂತಾ ಮಾತನ

ನಿನ್ನಾ ಬೆಲ್ಲದಂತಾ ಮಾತಾ

ಚಾಮುಂಡಿ ಮನಿಗೇ ನೀನು

ಕದ್ದೇ ಹೊಂಟೋಗುತ್ತೀಯ

ಕದ್ದೇ ಹೊಂಟೋಗುತ್ತೀಯ

ಮಾತೀಗೆ ಮಾತು ಬಂತು

ಮಾತೀಗೆ ಕಯ್ಯೇ ಹೋದೂ

ಸಿಟ್ಟೀಗೆ ಸಿಟ್ಟೇ ಬಂತು

ಸಿಟ್ಟೀಗೆ ಸಿಟ್ಟೇ ಬಂತು

ಜುಟ್ಟೀಗೆ ಕಯ್ಯೇ ಹೋದೂ

ಜುಟ್ಟೀಗೆ ಕಯ್ಯೇ ಹೋದೂ

ಗಬ್ಬುಲು ಬಸವಣ್ಣ ನಂಜಯ್ಯು

ಗಬ್ಬುಲು ಬಸವಣ್ಣ ನಂಜಯ್ಯು

ಹಿಡಿದ್ ಸೆರೆಗೆ ಬಿಡಾನಿಲ್ಲ

ತೆಕ್ಕೆ ಬೇಲಿ ಬೀದ್ದವರೆ

ತೆಕ್ಕೆ ಬೇಲಿ ಬೀದ್ದವರೆ

ಒಬ್ಬರಿಗೆ ಒಬ್ರು ನೋಡು

ಸಿಕ್ಕಾದೆ ಇಲ್ಲಾವಲ್ಲೊ

ಸಿಕ್ಕಾದೆ ಇಲ್ಲಾವಲ್ಲೋ

ದಕ್ಕಾದೆ ಇಲ್ಲಾವಲ್ಲೋ

ಅಸ್ಟು ರಮೆ ರಮೆಯಾಗಿ ಬಸವಣ್ಣನೂವೆ ನಂಜುಂಡೇಶ್ವರಮಾಲೆ. ಇವುನ್ಗೆ ಅವುನು ದಕ್ಕೂಲ್ಲ. ಅವುನ್ಗೆ ಇವುನು ದಕ್ಕೂಲ್ಲ. ಆವುನ್ಗೆ ಇವುನು ಸಿಕ್ಕಿಲ್ಲ ಇವುನ್ಗೆ ಅವುನ್ ಸಿಕ್ಕಿಲ್ಲ. ಅಸ್ಟು ರಾಂಗಾಗಿ ಯುದ್ದುಕ್ ನಿಂತಿದಾರೆ. ನನಿಗೆ ದಕ್ಕೊಲ್ನಲ್ಲ. ಅಂತೇಳಿ ಬಸವಣ್ಣ ಜೋರಾಗಿ ಗುಟ್ರ ಹೊಡಿತಾದೆ. ಆ ಗುಟ್ರ ಸಬುದ ಎಲ್ಲಿಗೆ ತಾಗುತ್ತಾದೆ. ಎಲ್ಲಿಗೆ ಕೇಳುತ್ತಾದೆ ಅಂದ್ರೆ ಮನೇಲಿ ಮನಿಗಿದ್ರಲ್ಲ ಹೆಡ್ತೀರು. ಮಡಿಡೀರು ಪಾರ್ವತಿ ದೇವಿರಮ್ಮ ಅವ್ರಿಗೆ ಕೇಳುತ್ತಾದೆ.
(ಅವ್ನು ಅಲ್ಲಿ ಗುಟ್ರು ಹೊಡಿಯೋ ಸಬುದ ಎಲ್ಲಿಗೆ ಕೇಳುತ್ತಾದೆ ಅಂದ್ರೆ ಇವುನ ಮನೇಲಿ ಮನಗಿದ್ರಲಲ್ಲಿ ಇವ್ನು ಹೆಂಡ್ತೀರು ಅವ್ರಿಗೆ ಕೆಪಾಲುಕೆ ವಡುದು ಯೇಳಿಪ್ಪಂಗಾಯ್ತಾದೆ.). ಅವು ಎದ್ದು ಬುಟ್ಟು ಎಚ್ರಿಕೆಯಾಗಿ ಕಣ್ಣು ಬುಟ್ಟು ಲಾಲಿಸಿ ಕೇಳುತ್ತಾಳೆ ದೇವಿರಮ್ಮ ಮಗ್ಗಲಲ್ಲಿ ಗಂಡುನ್ ನೋಡುತ್ತಾಳೆ.

ಮಗ್ಗುಲಲ್ಲಿ ಕಗ್ಗಲಿ ಕೊಂಡೀಗ ಬಿದ್ದೈತಲ್ಲಾ ॥ತಾ॥

ಮಗ್ಗುಲಲ್ಲಿ ಕಗ್ಗಲಿ ಕೊಂಡೀಗ ಬಿದ್ದೈತಲ್ಲಾ ॥ತಾ॥

ಏಳೇ ನಮ್ಮಕ್ಕಯ್ಯೊ ಏಳೇ ನಮ್ಮವ್ವಯೋ

ನಾವು ಕೆಟ್ಟುವಲ್ಲೆ ನನ್ನ ಹಿರೀಯಾಕ್ಕೆ ॥ತಾ॥

ಗಂಡ ಕದ್ದೋಯ್ತಾನೆ ಅಂತ ತೆಬ್ಬಿ ಮನಗಿದ್ದೋ ನಾವು ನಿದ್ದೆತ್ತಿ ಮನಗಿದ ಮ್ಯಾಲೆ

ಕದ್ದು ಹೋಗ್ಯವರೆ ಚಾಮುಂಡಿ ಮನೀಗೇ ॥ತಾ॥

ಅಕ್ಕ ಹೋಗ್ಯವರೆ ಚಾಮುಂಡಿ ಮನಿಗೇ ॥ತಾ॥

ಅಕ್ಕ ಕಗ್ಗಲೀಯ ಕೊಂಡ ತಂದು ಮಗ್ಗಲೀಗೆ ಮಡಿಗ್ಯವರೆ

ಅವ್ರು ಕದ್ದು ಸೂಳೇ ಮನಿಗೆ ಹೋಗೇ ಅವರೇ ॥ತಾ॥

ಕಗ್ಗಲೀಯ ಕೊಂಡ ತಂದು ನಮ್ಮ ಇಟ್ಟುರಾಳ ಮಗ್ಲೀಗೆಳೆದು

ಕದ್ದು ಸೂಳೇ ಮನಿಗೆ ಅವ್ರು ಹೋಗೇ ಅವರೇ ॥ತಾ॥

ಹಲ್ಲಾ ಕಡಿಯೂತಾಳೆ ದೇವಿರಮ್ಮ ಲೊಟಿಕೆ ಮುರಿಯಾತಾಳೆ

ಗಂಡುನ ಕೆಟ್ಟ ಕೆಟ್ಟ ಬೊಗುಳ ಬಯ್ಯಾತಾಳೇ ॥ತಾ॥

ಅಕ್ಕಯ್ಯ ಅಕ್ಕಯ್ಯ ನಮಗಂಡ ಕಗ್ಗಲಿ ಕೊಂಡು ತಂದು ಮಗ್ಗಿಲೀಗ್ಯೆಳಿದು ಕದು ಸೂಳೇ ಮನಿಗೋಗುತಾವನೆ ಕಾಡಾದಿವಳಿಗೆ.

ಅವ್ನು ಹೋಗೋ ಹಾದೀವಳುಗೆ ಹಾವ್ ಚೇಳು ಕಡೀಬಾರ್ದೆ

ಅವ್ನ ಕಳ್ಳಾರು ತಲೀಯ ಉಯ್ಯಾಬಾರುದೇ ॥ತಾ॥

ಹೋಗೋ ಹಾದೀ ವಳುಗೆ ಹಾವ್ ಚೇಳು ಕಡಿಬಾರುದೆ

ನಮ್ಮ ಗಂಡುನ ಕಳ್ಳಾರು ತಲೆಯ ಉಯ್ಯಾಬಾರುದೇ ॥ತಾ॥

ಅವ್ನು ಹೋದಾ ಮನೇವಳುಗೆ ಮಜ್ಜಿಗ್ಗೆ ಮದ್ದಾಕಿ ಕೊಡಲಲ್ವ

ಅವ್ನು ನಾಳೆ ಮದ್ವನದ ಹೊತ್ತೀಗೊರೀಗೋಗಲಿ ॥ತಾ॥

ಅವರ ಯಜ್ಞೂರ ವಳಿಯೇ ಎಳಾಕಳಲೀ ॥ತಾ॥

ನಮಗಂಡ್ನ ಯಜ್ಞೂರ ವಳೀ ಎಳಾಕಾಳಲೀ ॥ತಾ॥

ಅಂಥ ಎಣ್ಣೆಯ ಹೊಳೆಯಲ್ಲಿ ತಣ್ಣನ ಮರಳಲ್ಲಿ

ಅವರ ತುರುದೆ ಬರಿಕೈಲಿ ಬರಾವಾನಾ ॥ತಾ॥

ಅಕ್ಕಯ್ಯ ನಾನು ತೊಟ್ಕೋರುವಂತ ಇಡಂಜಿ ಬಳೇಗಾಳೂ

ಎಂದಿಕೊಡಿಯಾನ ಎದೀ ಮ್ಯಾಲೇ ॥ತಾ॥

ಅಕ್ಕ ಎಂದಿಕೊಡಿಯಾನ ಎದೀ ಮ್ಯಾಲೇ ॥ತಾ॥

ಕಗ್ಗಲೀಯ ಕೊಂಡ ತಂದು ನಮ್ಮ ಮಗ್ಗಲೀಗೆ ಎಳದವರೇ

ಕದ್ದು ಸೂಳೇ ಮನಿಗೆ ಹೋಗೇ ಅವರೇ ॥ತಾ॥

ಹಲ್ಲ ಕಡಿಯೂತಾಳೆ ದೇವಿರಮ್ಮ ಲೊಟಿಕೆ ಮುರಿಯಾತಾಳೆ

ಗಂಡುನ ಕೆಟ್ಟು ಕೆಟ್ಟ ಬೊಗುಳ ಬಯ್ಯಾತಾಳೇ ॥ತಾ॥

ಗಂಡುನ ಕೆಟ್ಟ ಕೆಟ್ಟ ಬೊಗುಳ ದೇವಿರಮ್ಮ ಬಯ್ಯುವಾಗ ಆಕ್ಕ ಪಾರುವತೀಗೆ ಕನಿಕಾರ. ಗಂಡುನ್ನ ಬಯ್ಯೋದು ತಂಗೆ ದೇವಿರಮ್ಮ. ತಂಗೆ ಸ್ವಲ್ಪ ಸಾಂತಿಯಾಗಮ್ಮ ಗಂಡುನ ಕೆಟ್ಟ ಬೊಗುಳ ಬಯ್ಯೋದು ತರವಲ್ಲ ನಮಿಗೆ. ನೀನು ಬೋದಂತ ಬೊಗುಳ.. ಹೋಗೋ ದಾರೀ ವಳಗೆ ಗಂಡನೀಗೆ ತಗುಲಿಬುಟ್ರೆ.

ಮುಂದೇ ನಾವು ಮಂಡೇಯ ಆಗಾತೀವೀ ॥ತಾ॥

ಸೂಳೆ ಅನ್ನೋ ಪ್ರೀತಿಗೆ, ಸೂಳೆ ಅನ್ನೋ ಪ್ರೇಮಕ್ಕೆ ರಾತ್ರಿ ಅಗುಲು ಅನ್ನೋದು ಅರಿವಾಗುನಿಲ್ಲ ಕಾಡಾದೀವಳುಗೆ ಕಲ್ಲು, ಮುಳ್ಳು ಅನ್ನೋದು ಗೊತ್ತಾಗೋದಿಲ್ಲ. ಅವುಳ ಮ್ಯಾಲಿನ ಪ್ರೀತಿಗೆ. ಮದ್ಯು ರಾತ್ರೀ ವತ್ನಲ್ಲಿ ನೀನು ಬೋದಂತ ಬೋಗುಳ ಅವ್ರಿಗೆ ತಗುಲಿಬುಟ್ರೆ

ನೀನು ಬೋದಂತ ಬೋಗೂಳ ಹಾದೀ ವಳಗೆ ತಗುಲಿ ಬುಟ್ರೆ

ಮುಂದೆ ನಾವು ಮುಂಡೇರು ಆಗಾತೀವಿ ॥ತಾ॥

ಅವ್ರು ಎಲ್ಲಿಗಾರ ಹೋಗಲಮ್ಮ ಯಾತಕಾರ ಹೋಗಲಮ್ಮ

ನಮ್ಮ ಮುತ್ತೈದೇತಾನ ಇರಾಲಮ್ಮ ॥ತಾ॥

ನಾವು ಮುಪ್ಪಾಗ ಮುಂಚಾವ ಮುತ್ತೈದೆ ತನವಿರಲಿ

ತಡಿಯೆ ತಂಗಿ ನೀ ಬಯ್ಯಾ ಬ್ಯಾಡಾ ॥ತಾ॥

ಅಕ್ಕ ಪಾರ್ವತಿ ಗಂಡ ಸೂಲೆ ಮನಿಗೋಗುವಾಗ ಹೆಂಡ್ರು ಸಾಂತೀಲಿರುತ್ತಾರೆ. ನಿನ್ನ ಮನಸು ಸಾಂತಿಲೈತೆ. ನನ್ನ ಮನಸು ಕತ್ತಿ ಕವುರುತ್ತೈತೆ. ನನ್ನ ಸಿಟ್ಟು ನನ್ನ ಕೋಪ ತಡಯಾಕಾಗದಿಲ್ಲ. ಅವು ಚಾಮುಂಡಿ ತಾವುಕ್ ನಾನು ಬುಡಾದಿಲ್ಲ. ಅವುರೇಲ್ಲಿದ್ರು ಹಿಡಿದು ತತ್ತೀನಿ. ಹೋಗಿ ಬಾ ಅನ್ನದಾಗಿ ಅಪ್ಪೆ ಕೊಡು. ಅವುದು ಚಾಮುಂಡಿ ಪುರದಲ್ಲಿದ್ರು ನಾನು ಬುಡಾದಿಲ್ಲ ಹಿಡಿದು ತತ್ತೀನಿ. ಹಿಡಿದು ತಂದೊರ್ತು ನನ್ನ ಮನಸಿಗೆ ಸಾಂತಿಯಾಗಾದಿಲ್ಲ. ಹೋಗಿ ಬಾ ಅನ್ನದಾಗಿ ಅಪ್ಪಣೆ ಕೊಡು ಅಕ್ಕಯ್ಯ ಅನ್ನದಾಗಿ ಕೇಳುವಾಗ ಅಕ್ಕ ಪಾರ್ವತಿ ಹೇಳ್ತಾಳೆ. ತಂಗೆ ದೇವಿರಮ್ಮ ನಿನ್ನಲ್ಲಿ ರಾವುರವುಸೈಕೆ ಸಾಂತಿಯಾಗಿ ಹೋಗಿ ಅವ್ನು ಯಾವ್ದಾರ ಒಂದು ರೂಪದಲ್ಲಿ ಹಿಡದ್ ತತ್ತೀನಿ ಅನ್ನದಾದ್ರೆ ಹೋಗಿ ಬಾ. ರಾವು ರವುಸಿನಲ್ಲಿ ಗಂಡಾಂತರಿಸಬೇಡ. ಅವ್ರಿಗೆ ಬಂದ ಅವಮಾನ ನಮಿಗಿರುತ್ತದೆ. ಏನೋ ಒಂದು ರೂಪಿನಲ್ಲಿ ತತ್ತೀನಿ ಅನ್ನದಾದರೆ ಹೋಗಿಬಾರಮ್ಮ ಅಕ್ಕ ಹೋಗಿ ಬಾ ಅಂದಾತು. ಈಗ ಗಂಡುನ ಹುಡಿಕ್ಯಂಡು ದೇವಿರಮ್ಮ ಹೊಂಡುತ್ತಾರೆ.

ಮುಂಗಾಲ ಸೆರಗಾ ಇವಳು
ಮುಂಗಾಲ ಸೆರಗಾ ಇವಳು
ಹಿಂದುಕ್ಕೆ ಕಟ್ಟುತ್ತವಳೆ.
ಹಿಂದುಕ್ಕೆ ಕಟ್ಟುತ್ತವಳೆ
ಅರಗಾಸೆ ಅಕ್ಯವಳೆ
ಅರುಗಾಸೆ ಅಕ್ಯವಳೆ
ಹೀರುಗಂಡ ತೋರವಳೆ
ಹೀರುಗಂಡ ತೋರವಳೆ
ಬಣ್ಣಾದ ಕತೀ ತೆಗೆದು
ಬಣ್ಣಾದ ಕತೀ ತೆಗೆದು
ಬಲಗೈಲಿ ಹಿಡಾಕಂಡು
ಗಂಡಾನ ಹುಡೀಕ್ಯಂಡು
ಹುಲಿವಾಟ ಹೋಡೂತವಳೆ
ಹಕ್ಕಿ ಹಾರೀದಂಗೆ
ಹಕ್ಕಿ ಹಾರೀದಂಗೆ
ಹಾರಿ ಹೊರಟು ಹೋಗುತವಳೆ
ಹಾರಿ ಹೊರಟು ಹೋಗುತವಳೆ
ನಂಜಯ್ನು ಬಸುವಣ್ಣನು
ಹಿಡದ್ ಸೆರಗಾ ಬೂಟ್ಟಿಲ್ಲ

ಹಿಡಿದ್ ಸೆರಗಾ ಬೂಟ್ಟಿಲ್ಲ

ಗಂಡ ಕಣ್ಣೀಗೆ ಕಂಡಾ

ಗಂಡ ಕಣ್ಣೀಗೆ ಕಂಡಾ

ಹೋಗಿ ಬೆನ್ನಿನ ಮ್ಯಾಲೆ ಒಂದೇಟು ಹೊಡಿಯುತ್ತಾಳೆ ಗಂಡುಗೆ. ತಿರುಕ್ಯಂಡು ನೋಡಿದ್ರೆ ಹೆಡ್ತಿ ಬಂದು ನಿಂತವಳಲ್ಲೋ ಶಿವನೇ

ಹೆಡ್ತಿ ಮಕಾ ನೋಡಿದ್ದು ಸಪ್ಪೂಗೆ ಮಕ ಮಾಡಿಕ್ಯಂಡು ಬೂಮಿಗೆ ಕತ್ತೆಟ್ಟುತ್ತಾನೆ. ಗಂಡುನ ಮ್ಯಾಲೆ ರಾವಾಗುತ್ತಾಳೆ. ಕಡಿಕಡಿನೆ ಹಲ್ಲು ಕಡಿಯುತ್ತಾಳೆ.

(ಈಗ ಯಾರದು ತಪ್ಪು. ಗಂಡ ಸೂಳೇ ಮನೀಗೆ ಹೋಗುವಾಗ ಹೆಡ್ತಿ ಹಿಡ್ಕಳಿಕೆ ಆಕ್ಕುಲ್ವ? ಸಕ್ತಿ ಇಲ್ವಾ?)

ಹೋಗಿ ಹಿಡಿದ್ಲು, ಈಗ ಕುಲಸ್ತ್ರ ಕೂರುಸ್ತಾಳೆ. ಪಂಚಾತಿ ಮಾಡುತ್ತಾಳೆ. ಮ್ಯಾಡಿ ಮಾನ ಕಳಿತಾಳೆ. ಕುಲಸ್ತ್ರ ನನ್ನ ಮ್ಯಾಲೆ ತಪ್ಪೊರುಸ್ತಾರೆ. ಅಂತ ಹೇಳಿಬುಟ್ಟು ನಂಜುಂಡೇಶ್ವರ ಯೇನ್ ಯೇಚ್ನೆ ಮಾಡುತ್ತಾನೆ, ಯೇನ್ ಜಾನ ಮಾಡುತ್ತಾನೆ. ಕುಲಸ್ತ್ರು ಇವುಳ ಮ್ಯಾಲೆ ತಪ್ಪೊರುಸ್‌ಬೇಕು. ಅಂಗ್ ಮಾಡಬೇಕು. ಅಂತ ಯೇಚ್ನೆ ಮಾಡಿ..ಯಾವ್ ತರದಲ್ಲಿ ಮಾಡಬೇಕು? ಯೇನ್ ಯೇಚ್ನೆ ಮಾಡುತ್ತಾನೆ. ಯೇನ್ ಯಾಸ ತಾಳುತ್ತಾನೆ.

(ಇದು ನಡೀತಿರದ ಎಸ್ಟೊತ್ನಲ್ಲಿ? ಮದ್ ರಾತ್ರೀ ವತ್ತು)

ಮದ್ ರಾತ್ರೇವತ್ನಲ್ಲಿ ಯೆಣ್ಣೆಂಗ್ಸು. ನೀನೊಟ್ಟೆ ಬಂದಿಲ್ಲ. ಯಾವನ್ನೊ ಕರ್ಕಂಡು ಬಂದಿದ್ದೀಯ. ಮದ್ ರಾತ್ರೇ ವತ್ನಲ್ಲಿ ಎದ್ದು ನೀನೊಬ್ಬೆ ಬಂದಿಲ್ಲ ಯಾವನ್ನೊ ಕರೊಕಂಡ್ ಬಂದಿದ್ದೀಯ ಮಡಿದಿ.

ಇಸ್ಟೆಂಬೋ ರಾತ್ರೀವಳಗೆ

ಇಸ್ಟೆಂಬೋ ರಾತ್ರೀವಳಗೆ

ಒಬ್ಬೆ ಬಂದಿಲ್ಲ ನೀನು

ಒಬ್ಬೆ ಬಂದಿಲ್ಲ ನೀನು

ಕಯ್ಯ ಹಿಡಿದಿದ್ದಾನ್ಯಾರೆ

ಕಯ್ಯ ಹಿಡಿದಿದ್ದಾನ್ಯಾರೇ

ಸೆರಗ ಹಿಡಿದಿದ್ದಾನ್ಯಾರೆ

ಸೆರಗಾ ಹಿಡಿದಿದ್ದಾನ್ಯಾರೇ

ಎದಿ ಮ್ಯಾಲ್ ಕೂತಿದ್ದಾನ್ಯಾರೇ

ಎದಿ ಮ್ಯಾಲ್ ಕೂತಿದ್ದಾನ್ಯಾರೆ

ಯೇಳ್ದೇ ವೋದೂರೆ ನೀನು

ಏಳು ತುಂಡಿಗೆ ಕಡಿಯಾತೀನಿ॥ ತಾನು ತಂದೇನಾನಾ

ತಂದನ್ನ ತಾನಾನಾ। ತಾನು ತಂದೇನಾನಾ॥

ಈಗ ಬೂಮೀಗೆ ಕತ್ತಾ ಎಟ್ಟಾತ್ತಾಳೇ ॥ತಾ॥

ಬೂಮಿಗೆ ಕತ್ತೆಟ್ಟಬ್ಯಾಡ. ಈಗ ನಿನ್ನ ಕೈಯಿಡಿದ್ ನಿನ್ನ ಸೆರಗ ಹಿಡ್ದು ನಿನ್ನ ಎದಿಮ್ಯಾಲೆ ಕೂತಿದ್ದನ್ನ ತೋರಿದ್ರೆ ಸರಿ. ತೋರದೆ ವಾದ್ರೆ.

ನಿನ್ನ ಬೂಮೀಗೆ ಬಲಿಯಾ ಕೊಡಾತೀನೀ ॥ತಾ॥

ಇವ್ಳು ಬಾಳಾ ಚಿಂತೆಯ್ಯ ಮಾಡಾತಾಳೇ ॥ತಾ॥

ಕೈಯಿತಿದಿದ್ದೋರ, ಸೆರಗ ಹಿಡಿದಿದ್ದೋರ, ಎದಿ ಮ್ಯಾಲ್ ಕೂತಿದ್ದೋರ ತೋರಿದ್ರೆ ಒದುತ್ತೀನಿ. ಇಲ್ದೆ ವಾದ್ರೆ ನನ ಗಂಡು ನನ್ ಬೂಮಿಗೆ ಬಲಿ ಕೊಡ್ತಾನೆ. ಯಾರ್ನ ತೋರ್ಲಿ? ಸ್ವಾಮಿ ಸ್ವಾಮಿ ನಿಮಿಗೆ ಶರಣಾಗುತ್ತೀನಿ ನನ್ನ ಕೆಯಿಡಿದಿದ್ದೋರ, ಸೆರಗಹಿಡಿದಿದ್ದೋರ ಎದಿ ಮ್ಯಾಲೆ ಕುಂತಿದ್ದೋರ ತೋರುತ್ತೀನಿ ಅಂತಾ

ನಿಮ್ಮಿಗು ನನ್ನೀಗು ಸ್ವಾಮಿ
ನಿಮ್ಮಿಗು ನನ್ನೀಗು ಸ್ವಾಮಿ
ಮದಿವ್ಯಾಗೋ ಕಾಲಾದಲ್ಲಿ
ಮದಿವ್ಯಾಗೋ ಕಾಲಾದಲ್ಲಿ
ಬಳೆಗಾರ ಸೆಟ್ಟಿ ಬಂದು
ಬಳೆಗಾರ ಸೆಟ್ಟಿ ಬಂದು
ಬಳೆಯ ತೊಡಾಕೆ ಬಂದು
ಕಯ್ಯ ಹಿಡಿದಿದ್ದ ಸ್ವಾಮಿ
ಅಡುಲು ದಂಗೇರು ಬಂದು
ಅಡುಲು ದಂಗೇರು ಬಂದು
ಸೀರೇಯ ಉಡುಸಕೆ ಬಂದು
ಸೀರೇಯ ಉಡುಸಕೆ ಬಂದು
ಸೆರಗಾ ಹಿಡಿದಿದ್ದಾರವರು
ಸೆರಗಾ ಹಿಡಿದಿದ್ದಾರವರು
ನೀವು ಕಟ್ಟೀದ ತಾಳೀ
ನೀವು ಕಟ್ಟೀದ ತಾಳೀ
ಎದೆ ಮ್ಯಾಲೆ ಕುಂತೈತೆ ಗುರುವೇ। ತಾನು ತಂದೇನಾನಾ॥
ತಂದನ್ನ ತಾನಾನಾ। ತಾನು ತಂದೇನಾನಾ॥
ಈಗ ಬೂಮಿಗೆ ಇವ್ನು ಕತ್ತಾ ಎಟ್ಟುತ್ತಾನೇ ॥ತಾ॥

ಮಾತಿಗೆ ಮಾತು ಉತ್ರ ಮುಂದ್ಕೇನು ಇವುಳಿಗೆ

ನಾನು ಕುಲುದು ನ್ಯಾಯಾಕ್ಕೆ
ಕುಲದಂತ ನ್ಯಾಯಕ್ಕೆ ಹೋಗುವಂತ ಪುರುಸಾನಾ

ಬಂದು ಕೂಡಿದೆಷ್ಟಿ ಸೆರಗ ಹಿಡೀಬವುದೇ ॥ತಾ॥

ಹೀಗೆ ಕೂಡಿದೆತ್ತಿ ಸೆರಗಾ ಹಿಡೀ ಬವುದೇ ॥ತಾ॥

(ಹಿಂಗಾರ ವಳ್ಳ್ಯಳನ ಅಂತ) ಕುಲದ ನ್ಯಾಯಕ್ಕೆ ಹೋಗುವಂತ ಗಂಡನ್ನ ಕೂಡಿದೆತ್ತಿ ಬಂದು ಹಿಂಗೆ ಹಿಡ್ಕೋಬೋದಾ? ಅಂದ.

ನ್ಯಾಯಕ್ಕೆ ಹೋಗ್ತಾ ಇದ್ದೀರಾ ಸ್ವಾಮಿ?

ಹೌದು ಅಂದ.

ಅದು ಯಂತ ನ್ಯಾಯ ನಾನು ಸ್ವಲ್ಪ ನೋಡುತೀನಿ

ನಿಮ್ಮ ಕುಟ್ಟೆ ನಾನೂ ಬರಾತೀನೀ ॥ತಾ॥

ನಿಮ್ಮ ಕುಟ್ಟೆ ನಾನೂ ಬರಾತೀನೀ ॥ತಾ॥

ಅದು ವೆಂತ ನ್ಯಾಯಾ ನಾನು ಸ್ವಲ್ಪ ನೋಡತೀನಿ

ನಿಮ್ಮ ಕುಟ್ಟೆ ನಾನೂ ಬರುತೀನಿ ॥ತಾ॥

ಅಯ್ಯೇ ಶಿವನೆ ಹಿಂದ್ಗುಟ್ಟೆ ಬತ್ತೀನಿ ಅಂತಾಳಲ್ಲ. ಅಲ್ಲಿ ಯಂತಾ ನ್ಯಾಯ ತೋರುಸ್ಲಿ ನಾನು. ಪಂಚಾತಿವಿಲ್ಲ, ನ್ಯಾಯವಿಲ್ಲ. ಹಿಂದುಗುಟ್ಟಾ ಬತ್ತೀನಿ ಅಂತಾಳಲ್ಲಿ ಅಂತ ಯೇಳ್ವೀಟು. ಅಯ್ಯೋ ಮಡಿದಿ ಅಲ್ಲಿ ನನ್ನಂತರು ಗಂಡುಸ್ರು ನ್ಯಾಯಕ್ಕೆ ಬಂದಿರ್ತಾರೆ. ಅಲ್ಲಿಗೆ ಗಂಡುಸ್ರು ಹೋಗ್ತಾರ ವರ್ತು ಹೆಂಗುಸ್ರು ಬರ್ತಾರ?

ಗಂಡಾ ಹೆಂಡೀರು ನಾವು ನ್ಯಾಯಕ್ಕೋದರೆ ನಾರಿ

ಅಲ್ಲಿ ಕೂತ ಸಬೆಲ್ಲ ನಗಾತಾದೇ ॥ತಾ॥

ನಾವು ನ್ಯಾಯಾಕೋಗೋದು ತರಾವಲ್ಲ ॥ತಾ॥

ಹಾಳು ನ್ಯಾಯಾದ ಸುದ್ದಿ ಹಾಳುಬಿದ್ದು ಹೋಗಲಮ್ಮ

ನಡಿಯಮ್ಮ ಮಾನೇಗೋಗಾನ ನಾವೂ ॥ತಾ॥

ನಡಿಯಮ್ಮ ಮನೀಗೆ ಹೋಗನ ನಾವೂ ॥ತಾ॥

ಹಿಂತಿರುಗಿ ಮನಿಗೆ ಬರುವಾಗ ಗಂಡ ಹೆಂಡ್ತೀರು, ನಂಜುಂಡೇಶ್ವರ–ದೇವಿರಮ್ಮ ಮತ್ತೇನು ಯೇಚ್ನೆ ಮಾಡಿಕ್ಯಂಡ್ ಬರುತ್ತಾನೆ. ನಂಜುಂಡೇಶ್ವರ. ಇವುಳು ಕುಟ್ಟೆ ನಾನು ಚಂದಾಗಿ ಹೋದುಕೆ ಕುಲಸ್ತ್ರ ಕರುಸ್ತಾಳೆ, ಪಂಚಾತಿ ಮಾಡುಸ್ತಾಳೆ. ಮಾನ ತೆಗಿತಾಳೆ. ದಂಡುಕ್ ಗುರಿ ಮಾಡುತ್ತಾಳೆ. ಇವುಳ್ಗೆ ನನ್ನ ಮ್ಯಾಲೆ ರಾವು ರವುಸ್ಯೆತೆ. ಇವುಳಿಗೆ ನನ್ನ ಮೇಲೆ ಕನಿಕಾರ ಬರಬೇಕು. ಕಣ್ಣೀರು ಬರಬೇಕು. ರಾವುರವೂಸೋಗಬೇಕು, ಪಂಚಾತಿ ಇಸ್ಯ ಮರೀಬೇಕು. ಅಂಗ ನಾನು ಮಾಡಬೇಕು ಅಂತ ಹೇಳ್ಬಿಟ್ಟು ಯೇನ್ ಯಾಸ ತಾಳುತ್ತಾನೆ.

ಬರುವ ದಾರೀಯ ಒಳಗೆ

ಹಿಂತಿರುಗಿ ನೋಡತ್ತವನೆ

ಬರುವ ದಾರೀಯ ಒಳಗೆ

ಗರಿಗರಿನೆ ತಿರುಗುಸ್ತವನೆ

ಗರಿಗರಿನೆ ತಿರುಗುಸ್ತವನೆ

ದರಣಿಗೆ ದೊಪ್ಪಂತ ಬಿದ್ದಾ

ದರಣಿಗೆ ದೊಪ್ಪಂತ ಬಿದ್ದಾ

ಬುಟ್ ಬಾಯ್ ಬುಟ್ಟಂಗೆ ಬುಟ್ಟ

ಬುಟ್ ಬಾಯ್ ಬುಟ್ಟಂಗೆ ಬುಟ್ಟ

ನೆಟಗಣ್ಣ ತಿರುಗತ್ತವನೆ

ನೆಟಗಣ್ಣ ತಿರುಗತ್ತವನೆ

ಬುರುಬುರುನೆ ಊದಾತವನೆ

ಬುರುಬುರುನೇ ಊದಾತವನೆ

ಊದಿ ನೋಡಪ್ಪಾ ಶಿವನೇ

ಸತ್ತಂಗ್ ಬಿದ್ದಾನಲ್ಲಾ। ತಾನು ತಂದೇನಾನ

ತಂದನು ತಂದೇನಾನ। ತಾನು ತಂದೇನಾನಾ॥

(ಈಗ ಗಂಡುನ್ ಮ್ಯಾಲೆ ರಾವೈತಾ? ರವುಸೈತಾ? )

ಚಿಂತೆ ಮಾಡುತ್ತಾಳೆ ನಾನು ಮನೇಲಿ ಬೋದ್ನಲ್ಲ ಆ ಬೋಗುಳ ತಗ್ಲುಕತ್ತ ಕಾಣೇ.. ಹಿಂತಿರುಗ್ಸಿ ಕರುಕಂಬರೋವತ್ತಿಗೆ ಚಾಮುಂಡಿ ತೊಡಿಕ್ಯಂಡ್ಳ ಕಾಣೇ

ಬಾಯ್ ಬಾಯಾ ಬಡಾಕಂಡು

ಬಾಯ್ ಬಾಯಾ ಬಡಾಕಂಡು

ತಲೆ ತಲೇ ಚಚ್ಚೀಕಂಡು

ತಲೆ ತಲೇ ಚಚ್ಚೀಕಂಡು

ಪಟ್ಟೇ ದೋತಾರ ತೆಗುದು

ಪಟ್ಟೇ ದೋತಾರ ತೆಗುದು

ಕಯಲ್ಲಿ ಹಿಡಾಕಂಡು

ಕಯಲ್ಲಿ ಹಿಡಾಕಂಡು

ಹರಿಯೋ ಹಳ್ಳಾಕೋಗೀ

ಹರಿಯೋ ಹಳ್ಳಾಕೋಗೀ

ಪಟ್ಟೇಯ ದೋತುರ ತಗುದು

ಪಟ್ಟೇಯ ದೋತುರ ತಗುದು

ನೀರೀಗೆ ಎಚ್ಚುತಾಳೇ

ನೀರೀಗೆ ಎಚ್ಚುತಾಳೇ

ಪಟ್ಟೀಯ ದೂತುರದಲ್ಲಿ
ನೀರನ್ನು ತಾರಾತಾಳೇ
ಗಂಡನ ಬಾಯ್ಗಿಂಡಾ ತಾಳೆ
ಗಂಡನ ಬಾಯ್ಗಿಂಡಾ ತಾಳೆ
ನೀರೇ ದಕ್ಕೂವಾದಿಲ್ಲ
ಬಾಯ್ ಬಾಯಾ ಬಡಾಕಂಡು ತಲೇ ತಲೇ ಚಚ್ಚಿಕಂಡು
ಹಾಡಾಡಿಕಂಡು ಆಳುತಾಳೇ ॥ತಾ॥
ಇವ್ಳು ಹಾಡಿಡಿಕಂಡು ಅಳಾತಾಳೇ ॥ತಾ॥

ಒಂದು ಗಂಟೆ ಅಳಾವರ್ಗು ಸುಮ್ನಿದ್ದ. ಈಗ ನನ್ನ ಹೆಡ್ತೀಗೆ ನನ್ನ ಮ್ಯಾಲೆ ಸಿಟ್ಟೋತು ಕ್ವಾಪ ಹೋತು. ನನ್ನ ಮ್ಯಾಲೆ ಕನಿಕಾರ ಬಂತು. ಇವುಳಿಗೆ ಪಂಚಾತಿ ಜಾನ ವೋಯ್ತು. ನನ್ ಮ್ಯಾಲೆ ಕಣ್ಣೀರು ಬುಟ್ಟು ಕನಿಕಾರ ತೋರುತ್ತಾಳೆ. ಅಂತ ಹೇಳ್ಬಿಟ್ಟು ಅಯ್ಯಾ

ಈಗ ಮೆಲ್ ಮಲ್ಕೆ ಕಾಲ ನಿಗುರುಸ್ತಾನೆ ಮಾಯ್ಕಾರ
ಮಿಳಮಿಳನೆ ಕಣ್ಣ ಬಡಾತಾನೇ ॥ತಾ॥
ಯಾಕೇ ನನ್ನಾ ಮಡಿದಿ ಅಳಾತೀಯಾ ॥ತಾ॥

ಯಾಕೆ, ಮಡಿದಿ ಆಳ್ತೀಯಾ?

ಸ್ವಾಮಿ ಹಿಂತಿರುಗಿ ನಾವ್ ನೈಡ್ಕಂಡು ಬರೂವಾಗ.. ಗರಿಗರಿನೆ ತಿರುಗಿ, ದರಣೀಗುರುಳಿ ಬಿದ್ದು, ಬುಟ್ ಬಾಯ್ ಬುಟ್ಟಂಗೆ ಬುಟ್ಟು, ನೆಟ್ ಕಣ್ಣ ತಿರುಗಿಸಿ, ಬುರುಬುರನೆ ಊದಿ ಸತ್ತೋಗಿದ್ರಲ್ಲ ಯಂಗ್ ಜೀವಾದ್ರಿ

ಯಂಗ್ ಜೀವಾದೆ ಅಂದ್ರೆ ಮಡಿದಿ .ಯಮದೂತ್ರು ಬಂದು ಯಮುನ್ ಪಟ್ಟುಕ್ಕೆ ನನ್ನ ಕರ್ಕೊಂಡೋದ್ರು ಯಮುನ್ ಪಟ್ಟುದಲ್ಲಿದ್ದೆ ಯಮುರಾಯ ನಿನ್ನ ದುಕ್ಕ ನೋಡಿ, ನಿನ್ನ ಗೋಳು ನೋಡಿ ನಿನ್ನಡ್ತಿ ಕರ್ಕೊಂಡೋಗಿ ಮನಿಗೆ ಬುಟ್ಬುಟ್ಟು ಬಾ ಅಂತೇಳಿ ನನ್ನ ಇಲ್ಲಿಗ್ ಕಳಿಸಿದ್ರು

ನಾನು ಸಾಯಾರ ಬೇಯಾದ ಮಲ್ಲಿ ನೋಡುವೆ ಮಡಿದಿ
ನಡಿಯಮ್ಮ ಮನಿಗೆ ಹೋಗನ ನಾವೂ ॥ತಾ॥

ಈಗ ಗಂಡುನ್ ಮ್ಯಾಲಿನ ಸಿಟ್ಟು ಹೋಯ್ತು. ಗಂಡ ಮನೇಲಿ ಸಾಯ್ತಾನಲ್ಲ ಅಂತ ಹವಣಿಕೆ ಬಂತು. ಪಂಚಾತಿ ಜ್ಞಾನ ಹೋಯ್ತು. ಗಂಡುನ ಮೇಲಿನ ಸಿಟ್ಟು ಕ್ವಾಪೆಲ್ಲ ಹೋಯ್ತು. ಮನಿಗೋಯ್ತಾನೆ. ಬಂದುಗಳಿಗೆ ಊದ್ತಾನೆ ಒಂದು ಗಳಿಗೆ ಇಳಿತ್ತಾನೆ. ಒಂದ್ ಗಳಿಗೆ ಸತ್ತಂಗ ಕಾಣುತ್ತಾನೆ..ಒಂದು ಗಳಿಗೆ ಜೀವಾದಂಗ್ ಕಾಣುತ್ತಾನೆ.

(ಪಂಚಾತಿ ಕೂರ್ಸಿ ಮರ್ಯಾದಿ ಮಾನ ತೈಗಿತಾಳ ಅಂತ)

ಯಾಸ ಹಾಕ್ಯಂಡ್ ಮುಸ್ಗಾಕ್ಯಂಡ್ ಮನಿಗ್ಯಾನೆ. ಎರಡಾಳು ಯಂಡ್ರು ಎರಡು ಕಡೆ ಕುತ್ಗಂಡು ಆಳುತ್ತಾರೆ. ನಮ್ಮ ಗಂಡುಗೆ ಯೇನ್ ತಗುಳ್ಕ್ಯಂತು.. ಚಿಂತೆ ಮಾಡುತ್ತಾರೆ. ಇವುನ ಯಾಸ ಯಾರಿಗೆ ಅರಿವಾತು? ಅಂದ್ರೆ

ಮೈಸೂರ್ ಚಾಮುಂಡಿಗೆ, ಅರಿವಾಗೋಯ್ತು. ಚಾಮುಂಡಿದೇವಿ .ಬರೋ ಪುರಸನ್ನ ಅವುಳು ಹಿಡ್ಕಂಡೋಗ್ಯವಳೆ ..ಅವ್ರು ಯಾಸ ತಾಳ್ಕ್ಯಂಡ್ ಮಲಗ್ಯವರೆ. ನಾನು ಈಗ ಕಣಿಕಾತಿ ಯಾಸ ತಾಳ್ಕ್ಯಂಡೋಗಬೇಕು. ಕಣಿ ಹೇಳಾಳಂಗೆ ಸಾಸ್ತ್ರ ಹೇಳಾಳಂಗೆ ..ಅವುರ ಮನಗೊಗಿ ಯೇನಾರ ಮಾಡಿ ಅವುರ್ನ ಹಿಡಿದು ತರಬೇಕು ಅಂತೇಳಿ.

ಚಾಮುಂಡಿ ರೂಪಾ ಮಾಯಾ ಮಾಡಿದುರಲ್ಲಾ
ಕೊರುಮ್ತಿ ಅವುತಾರ ಎತ್ಯವರಲ್ಲಾ ॥ತಾ॥
ಕೊರುಮ್ತಿ ಅವ್ತಾರ ಎತ್ಯವರಲ್ಲಾ ॥ತಾ॥
ಚಾಮುಂಡಿ ರೂಪಾ ಮಾಯಾ ಆದೋ ॥ತಾ॥

ಬಿದುರು ಬಾಸ ಮಾಡಿ, ಕೊರವಂಜಿ ಗೂಡೆಣೆದು, ಕೊರವಂಜಿ ಗೂಡಿಗೆ ಕಪ್ಪಿನ್ ಕುಡಿಕೆ ಮಾಡಿ ಮಡಗಿ, ಏಳು ಸುತ್ತು ಬರುವಂತೆ ಮಾಡಿ ಕಟ್ಟಾಕಿ, ಕಪ್ಪಿನ ಕುಡಿಕೆ ಮಡಗಿ ಬಿದಿರು ಬಾಸ ಮಾಡಿ..ಕಪ್ಪಿನ ಕುಡಿಕೆ ಇಟ್ಟು.

ಅಮ್ಮ ಕೊರಮ್ತಿ ಯಾಸ ಎತ್ತ್ಯವರಲ್ಲಾ ॥ತಾ॥
ಅಮ್ಮ ಕೊರಮ್ತಿ ಯಾಸ ಎತ್ತ್ಯವರಲ್ಲಾ ॥ತಾ॥
ಅಮ್ಮ ಹರಿದೋಗೋ ಸರುಪಾನ..
ಹರುದೋಗೋ ಸರುಪಾನ ಹಿಡಿದು ಸಿಂಬಿಯಮಾಡಿ
ಕೊರವಂಜಿ ಗೂಡು ತಲೆ ಮ್ಯಾಲೇ ॥ತಾ॥
ಕೊರವಂಜಿ ಗೂಡ ತಲೆ ಮ್ಯಾಲೇ ಒತುಕೊಂಡು
ಬಂದವರೆ ನಂಜಲಗೂಡೀಗೀಗಾ ॥ತಾ॥
ನಂಜಲಗೂಡಿಗೆ ಬಂದು ಬೀದಿ ಬೀದಿಯ ಮ್ಯಾಲೆ
ಕಣಿಕಣಿ ಎಂದೂ ಕೂಗುತಾರೇ ॥ತಾ॥
ಅಮ್ಮ ಕಣಿಯ ಕಣಿಯೆ ಎಂದು ಸಾರಾತಾರೇ ॥ತಾ॥
ಅಮ್ಮ ಸಾಸ್ತ್ರ ಕೇಳೋದಿಲ್ವೆ ನಮ್ಮ ಕಣಿಯ ಕೇಳೋದಿಲ್ವೆ
ನಾನು ಕಂಡುದ್ ಕಂಡಂಗೆ ಹೇಳಾತೀನೀ ॥ತಾ॥
ನಾನು ಕಂಡುದ್ ಕಂಡಂಗೆ ಹೇಳಾತೀನೀ ॥ತಾ॥
ಯಾರದು ಹೆಣ್ಣುಮಕ್ಳು ಅಚ್ಚೆ ಹುಯ್ಯ್ಕಳೋರಿದ್ರೆ
ನಾನು ಚಂದಾಗಿ ಅಚ್ಚೆ ಹುಯ್ಯಾತೀನೀ ॥ತಾ॥
ನಾನು ಚಂದಾಗಿ ಅಚ್ಚೆ ಹುಯ್ಯಾತೀನೀ ॥ತಾ॥
ಯಾರಾರು ಮರಕುಕ್ಕೆ ಹೋದಾವ್ರಿದ್ದರೆ ಅಮ್ಮ
ನಾನು ಚಂದಾಗಿ ಬಾಸ ಎಣಿಯಾತೀನೀ ॥ತಾ॥
ನಾನು ಚಂದಾಗಿ ಬಾಸ ಎಣಿಯಾತೀನೀ ॥ತಾ॥

ಕೊರುಮ್ತಿ. ಅವುತಾರದಲ್ಲಿ ಚಾಮುಂಡೇಶ್ವರಿ ನಂಜಲಗೂಡಿಗೆ ಬಂದು

ಸ್ವಾಮಿ ಕಣಿಯ ಕಣಿಯ ಎಂದು ಕೂಗಾತಾಳೇ ॥ತಾ॥

ಅಮ್ಮ ಸಾಸ್ತ್ರ ಕೇಳಾಲಿಲ್ವ ಕಣಿಯ ಕೇಳಾರಿಲ್ಲ

ನಾನು ಕಂಡುದ್ ಕಂಡಂಗೆ ಹೇಳಾತೀನೀ ॥ತಾ॥

ಗಂಡ ಇಲ್ದರಿಗೆ..

ಗಂಡ ಇಲ್ದಂಲೆರಿಗೆ ನಾನು ಗಂಡುನ್ನ ಕೊಡಿಸೇನು

ನಾನು ಗಂಡುಳ್ಳ ಗರುತೇರ ಬಡಿಸೇನೂ ॥ತಾ॥

ನಾನು ಕುಡುದ್ ಕಂಡಂಗೆ ಹೇಳಾತೀನೀ ॥ತಾ॥

ಕುಂಬಾರ ಬೀದೀಲಿ ಕೂಗುತಾ ಹೋಗೂತಾರೆ

ಗಾಣಿಗಾರ ಬೀದಿಲಿ ಸಾರಾತಾರೇ ॥ತಾ॥

ಸಾಸ್ತ್ರ ಕೇಳಾರಿಲ್ವ ಕಣಿಯ ಕೇಳಾರಿಲ್ವ

ನಾನು ಕಂಡುದ್ ಕಂಡಂಗೆ ಹೇಳಾತೀನೀ ॥ತಾ॥

ಎಲ್ಲಾ ಬೀದೀಲೂ ಕೂಕ್ಯಂಡು ಎಲ್ಲರ ಮನೇ ಮುಂದು ಸಾರ್ಕ್ಯಂಡು ಬಂದು ನಂಜುಂಡೇಶ್ವರನ ಮನೆ ಮುಂದೆ ಬಂದು ಕಣೀ ಕಣೀ ಕಣೀ ಅಂತ ಕೂಗುತ್ತಾ ನಿಂತಿದ್ದಾರೆ. ಎಂಡಾಳು ಯಂಡ್ರು ಆಳ್ತಾ ಕುಂತಿದ್ರಲ್ಲ ಆ ಕಡೆ ಈ ಕಡೆ ..ಅಕ್ಕ ಹೇಳುತ್ತಾಳೆ,.. ತಂಗಿ, ಯಾರೋ ಕಣೀ ಕಣೀ ಅಂತ ಕೂಗ್ತಾವ್ರೆ. ನಮ್ಮ ಗಂಡುಗೇನ್ ಕಾಯ್ಲಿ

ನಾವೊಂದು ಮಾತಾ ಕಣಿಯ ಕೇಳಾನ ತಂಗೆ

ಕರಿಯಮ್ಮ ನಮ್ಮ ಮನೆಗೀಗ ನೀನು ॥ತಾ॥

ಕರಿಯಮ್ಮ ನಮ್ಮ ಅರಾಮನಿಗೇ ॥ತಾ।

ನಾವೊಂದು ಮಾತಾ ಕೇಳಾವಾನಾ ॥ತಾ॥

ನಮ್ಮ ಗಂಡುಗೇನ್ ಕಾಯ್ಲೆ ನಾವೊಂದು ಮಾತ ಕಣಿ ಕೇಳಾನ. ಕರೆದು ಬರೋಗು ತಂಗೆ ದೇವಿರಮ್ಮ ದೇವಿರಮ್ಮ ಬಂದು ದಿಟ್ಟಿಸಿ ನೋಡಿಬುಟ್ಟು ಎರಡು ಕೈಯತ್ತಿ ಶಿರಗಾರ್ತಿ ಮಾಡಿ

ಅವ್ವಾ ಯಾವ್ ಸೀಮೇ ಕಣಿಕಾತಿ ನೀನ್ ಯಾವ್ ಸೀಮೆ ಕೊರಮತ್ತಿ

ಬಾ ತಾಯಿ ನಮ್ಮ ಅರಾಮನೆಗೇ ॥ತಾ॥

ಬಾ ತಾಯಿ ನಮ್ಮ ಅರಾಮನೆಗೇ ॥ತಾ॥

ನಾವೊಂದ್ ಮಾತ ಕಣಿ ಕೇಳಬೇಕು ಬಾತಾಯಿ

ಯಾವುದವ್ವಾ ನಿಮ್ಮನೆ?

ನಮ್ಮನೆ ನಂಜುಂಡೇಶ್ವರ ಮನೆಕನ ಬಾ ತಾಯಿ

ನಿಮ್ಮನೆ ನಂಜುಂಡೇಶ್ವರನ ಮನ್ಯಾ? ನನ್ನ ಮನಸು ಬೆಚ್ಚಿ ಬೆದುರುತ್ತಾದೆ .ಹೆದರುತ್ತಾದೆ. ನಿನ್ನ ಮನೀಗೆ ಕಣೀ ಹೇಳಾಕೆ ಬರೋದಿಲ್ಲ. ಹೊಂಟೋಗು ಯಾಕೆ ತಾಯಿ ನಂಜುಂಡೇಶ್ವರನ ಮನೆ ಅಂದ್‌ಗಳಿಗೆಲ್ಲೆ ಬೆಚ್ಚಿ

ಬೆದರುತ್ತೀಯ..? ನಿನ ಗಂಡ ಮೈಸೂರು ಚಾಮುಂಡೇಶ್ವರಿ ಇಟ್ಕಂಡು ನಿನ್ನ ಗಂಡ ನಂಜುಂಡೇಶ್ವರ ಅವ್ನಲ್ಲ.. ಮೈಸೂರು ಚಾಮುಂಡಶ್ವರ ಇಟ್ಕಂಡು ಬಾಳ ಮುಂಡಾಟಿಕೇಲಿ ಬಾಳುತ್ತಾನೆ.

ಅಂತ ಗಂಡೀರೋ ಮನಿಗೆ ನಾ ಗರುತ್ಯೆಂಗೆ ಬರುಲಮ್ಮ

ನನ್ ಕಂಡು ಅವ್ನು ಸುಮ್ನೆ ಬಟ್ಟಾನೇನೇ ॥ತಾ॥

ನಿನ ಗಂಡ ಬಾಳಾ ಮುಂಡಾ ಕಾನೇ ॥ತಾ॥

ಅಂತ ಗಂಡ್ಸೀರೋ ಮನಿಗೆ ಬರಾದಿಲ್ಲ ॥ತಾ॥

ಅಲ್‌ಕನ್ ತಾಯಿ ನಮ್ಮ ಗಂಡ ನಂಜುಂಡೇಶ್ವರ ಚಾಮುಂಡೇಶ್ವರಿಗೆ ಮುಂಡುಗಾರನೇ ಹೌದು. ಅಂತ ಗಂಡೀರೋ ಮನಿಗೆ ಬರೋದಿಲ್ಲ ಅಂತ ಹೇಳ್ತಿಯಲ್ಲಾ..ನಾವು ಹೆಂಡ್ತೀರಿದ್ ಮ್ಯಾಲೆ ನಿನಗೇನು ಬಯ ಅಮ್ಮ. ನಾವಿದ್ ಮೇಲೆ ನಿನಗೇಟು ಬಯ? ನಮ್ಮ ಗಂಡ ಮುಂಡ ಅದ್ರೂವೆ

ನಾವೊಂದು ಮಾತಾ ಕಣಿಯ ಕೇಳಾಬೇಕು

ಬಾ ತಾಯಿ ನಮ್ಮ ಮನೆಗೆ ನೀನೂ ॥ತಾ॥

ನೀನು ದೈರ್ಯ ಕೊಟ್ರೆ ನಿಮ್ಮನಿಗೆ ಬತ್ತೀನಿ. ನೀನು ದೈರ್ಯ ಕೊಡುದೆವಾದ್ರೆ ನಿನ್ನ ಗಂಡ ಬಾಳ ಮುಂಡ ಬಯವಾಗುತ್ತದೆ.

ಆಗ್ಲಿ ತಾಯಿ ..ನಾವೊಂದು ಮಾತು ಕಣಿ ಕೇಳಾವರ್ಗು ನಿನ್ನ ಬಾಗುದಲ್ಲಿ ಬಾಳುತ್ತೀವಿ. ನಿನ ಬಾಗುದಲ್ಲಿ ಬದುಕ್ತೀವಿ. ಹಟ್ಟಿಂದಾಚೆಗೆ ದಾಟೋವರ್ಗು ನಿನ್ನ ಬಾಗದಲ್ಲೆ ಇರ್ತೀವಿ ಬಾ ತಾಯಿ ಬಾ ತಾಯಿ..ಎಂದು ಶರಣಾಕೆ ಕರೆಯುತ್ತಾಳೆ.

ಆಯ್ತು ನಡಿಯವ್ವ.. ಅಂತ ಒಳಗೋಗಿ ನಂಜಯ್ಯ ಯಾಸ ಹಾಕ್ಯಂಡು ಮನಗಿರುವ ಜಾಗಕೆ ಬಮದು

ನಂಜಯ್ಯ ಮಕ ನೋಡಿ ಉಸಿ ನೇಗೆ ನೈಗಾರೇ

ಅಲ್ಲಿಗೋಡಿ ಶಿವನೆ ಕೂರಾತಾಳೇ ॥ತಾ॥

ಎಲ್ಲಾ ಸಾರ್ಸಿ ರಂಗಾಲೆ ಬುಟ್ಟು ನಾಕು ಬೆನುವನ ಮಾಡಿ ನಾಕು ಮೂಲಿಗೂ ಮಡಿಗಿ. ನಾಕೆಲೆ ನಾಕಡಿಕೆ ಮಡಿಗೆ ಕಣಿ ಕೇಳಾಕೆ ಕುತಕತಾರೆ.

ಕೈಲಿ ಕಲ್ಲುರವಾ ಹಿಡಿಕಂಡು ಕಣಿಕಾತಿ ಕೊರವತ್ತಿ

ಏನೇನಾ ಕಣಿಯಾ ಹೇಳುತವರೆ ॥ತಾ॥

ಅಮ್ಮ ಏನೇನು ಕಣಿಯ ಹೇಳುತವರೆ ॥ತಾ॥

ನಾನು ಕಣಿಯ ಹೇಳಲು ಬಂದೆ ಕೇಳಾ

ನಾನು ಕಣಿಯ ಹೇಳಲು ಬಂದೆ ಕೇಳಾ

ಇದು ಸುಳ್ಳೆಂದು ತಿಳಿಬ್ಯಾಡಾ ಮಗಳೇ

ಇದು ಸುಳ್ಳೆಮದು ತಿಳಿಬ್ಯಾಡಾ ಮಗಳೇ

*ಈ ಭಾಗದ ಕಣಿ ಕೇಳುವ ಧಾಟಿಯಲ್ಲ ಬಹಳ ಸುಂದರವಾಗಿ ಮೂಡಿಬರುತ್ತದೆ.

ನಾನು ಕಣಿಯಾ ಹೇಳುವ ಎಂದೆ ಕೇಳು

ನಿಮಿಗೆ ಯಾಕಾ ಚಿಂತೆ ಉಂಟು

ನಿಮಿಗೆ ಯಾರಾ ಚಿಂತೆ ಉಂಟು

ನಿಮಿಗೆ ಗಂಡಾನ ಯೇಚಾನೆ ಉಂಟು

ನಿಮಿಗೆ ಗಂಡಾನ ಯೇಚಾನೆ ಉಂಟು

ಇದು ಸುಳ್ಳೋ ದಿಟುವೋ ಮಗುಳೆ

ಇದು ಸುಳ್ಳೋ ದಿಟುವೋ ಮಗುಳೆ

ನಾನು ಕಣಿಯಾ ಹೇಳಲು ಬಂದೆ ಕೇಳಾ

ನಿಮಿಗೆ ಯಾರಾ ಚಿಂತೆ ಉಂಟು

ನಿಮಿಗೆ ಗಂಡಾನ ಯೇಚನೆ ಉಂಟು

ಇದು ಸುಳ್ಳೋ ದಿಟುವೋ ಮಗಳೆ

ನಾನು ಕಣಿಯಾ ಹೇಳಲು ಬಂದೆಕೇಳಾ

ಹೌದು ಕಣ್ ತಾಯಿ.. ಗಂಡುನಾ ಚಿಂತೆ ಮ್ಯಾಲೆ ಕಣಿ ಕೇಳ್ತಿರಾದು..ಮುಂದ್ಕೆ ಕಣಿ ಹೇಳು ತಾಯಿ ಅಂತ ಕೈ ಮುಗಿತಾರೆ.

ನಿಮ್ಮ ಗಂಡಾ ನಂಜುಂಡುಲಿಂಗು

ನಿಮ್ಮ ಗಂಡಾ ನಂಜುಂಡು ಲಿಂಗು

ಅವ್ರು ಮೈಸೂರ್ ಚಾಮುಂಡಿ ಮನಿಗೆ

ಅವ್ರು ಕದ್ದೇ ಹೋತೂರುಲಿಲುವೆ

ಇದು ಸುಳ್ಳೋ ದಿಟುವೋ ಮಗಳೆ

ನಾನು ಕಣಿಯ ಹೇಳಲು ಬಂದೆ ಕೇಳು

ನಿಮ್ಮ ಗಂಡಾ ನಂಜುಂಡು ಲಿಂಗು

ಅವ್ರು ಮೈಸೂರ್ ಚಾಮುಂಡಿ ಮನಿಗೆ

ಅವ್ರು ಕದ್ದೇ ಹೋಗಾನಿಲುವೆ

ಇದು ಸುಳ್ಳೋ ದಿಟುವೋ ಮಗುಳೇ

ಹೌದು ನನ್ ತಾಯಿ ಅವ್ರು ಚಾಮುಂಡಿ ಮನಿಗೆ ನಮ್ ಗಂಡ ಕದ್ ಹೋತಾ ಇದ್ದುದ್ ದಿಟ

ಅವ್ರು ಮುದ್ದೂ ರಾತುರೆ ವಳುಗೆ

ಅವ್ರು ಮುದ್ದು ರಾತೂರೆ ವಳುಗೆ

ಅವ್ರು ಕದ್ದೇ ಹೋಗುವಾಗ

ಅವ್ರು ಕದ್ದೇ ಹೋಗುವಾಗ

ನೀವು ಎದ್ದು ಕೂತಾಗಂಡು

ನೀವು ಎದ್ದು ಕೂತಾಗಂಡು

ನಿಮ್ಮ ಗಂಡನ ಬಯ್ಯಾನಿಲುವೆ

ನಿಮ್ಮ ಗಂಡನ ಬಯ್ಯಾನಿಲುವೆ

ಇದು ಸುಳ್ಳೋ ದಿಟುವೊ ಮಗುಳೆ

ನಾನು ಕಣಿಯಾ ಹೇಳಲು ಬಂದೆ ಮಗಳೆ

ತಾಯಿ ತಾಯಿ ಗಮಡ ಸೂಳೆ ಮನಿಗೋಗುವಾಗ ಹೆಂಡ್ರು ಯಾಕಾರ ಬಯ್ದೆ ಇರ್ತಾರ. ಬೋದುದ್ ದಿಟುವೆ ಕನ್ ತಾಯಿ ಕಂಡುದ್ ಕಂಡಂಗೆ ಹೇಳುತ್ತೀಯ. ನಿನ್ನ ಬಾಯ್ಲಿ ಸುಳ್ಳಿಲ್ಲ.. ಮುಂದ್ಕೆ ಕಣಿ ಯೇಳ ತಾಯಿ

ಮದ್ ರಾತ್ರೇ ವತ್ನಲ್ಲಿ ನಿಮ್ಮ ಗಂಡ ಕದ್ದೋಗುವಾಗ ನೀವು ಎದ್ದು ಕತ್ಗಂಡು ಬೋಯ್ದರಲ್ಲ .ನೀವು ಬೋದಂತ ಬೋಗುಳ

ನೀವು ಬೋದಂತ ಬೋಗುಳ ನಿಮ್ಮ ಗಂಡ್ಗೆ ತಗುಳ್ಕ್ಯತ್ತು

ಅವ್ರು ನಾಳೆ ಮದ್ದನ್ಕೆ ಸಾಯಾತಾರೇ ॥ತಾ॥

ನೀವು ಬೋದಂತ ಬೋಗುಳ ನಿಮ್ಮ ಗಂಡ್ಗೆ ತಗುಳ್ಕ್ಯಂಡು

ಅವ್ರು ನಾಳೆ ಮದ್ದಾನ್ಕೆ ಸಾಯಾತಾರೆ ॥ತಾ॥

ಯಾವಾಳೆ ಗಂಡಾನ ಬೋದಾಳು ನೀವೂ ॥ತಾ॥

ಅವ್ರು ನಾಳೆ ಮದ್ದನ್ಕೆ ಸಾಯಾತಾರೇ ॥ತಾ॥

ಮುಂದೆ ಮುಂಡೆರು ನೀವು ಆಗಾತೀರಿ ॥ತಾ॥

ನೀವು ಮುಂದೆ ಮುಂಡೇರ ಆಗಾತೀರಿ ॥ತಾ॥

ಕೊರುಮತ್ತಿ ಕೊರುಮತ್ತಿ ನಾವು ಬೋದುದ್ ಸವೂರ ತಪ್ಪಾತು. ಇಲ್ಲಿಂದೀಚ್ಗೆ ಅವ್ರು ಎಲ್ಲಾರು ಹೋಗ್ಲಿ.. ಯಾತಕ್ಕಾದ್ರು ಹೋಗ್ಲಿ ಕಾನಮ್ಮ

ಅವ್ರೆಲ್ಲಾರು ಹೋಗಲಮ್ಮ ನಮಗಂಡ..ಯಾತಕಾರು ಹೋಗಲಮ್ಮ

ನಮ್ಮ ಮುತ್ತೈದೆತಾನ ಇರಾಲಮ್ಮಾ ॥ತಾ॥

ನಾವು ಮುಪ್ಪಾಗ ಮುಂಚಾವ ಮುತ್ತೈದೆ ತನವಿರಲಿ

ಉಳಿಯ ಮಾತೀಗ ಹೇಳೇ ತಾಯೀ ॥ತಾ॥

ಇಲ್ಲಿಂದೀಚ್ಗೆ ಅವ್ರು ಎಲ್ಲಿ ತಿರುಗಿದ್ರು ನಾವ್ ಕೇಳಲ್ಲ ಯಾತಕಾರ ಹೋಗ್ಲಿ ನಾವ್ ಬಯ್ಯಲ್ಲ..ಮುಪ್ಪಾಗ ಮುಂಟವ ಮುತ್ತೈದೆ ತನವಿರ್ಲಿ.. ಉಳಿಯೋ ಮಾತೇಳಪ್ಪ .

ನಾನು ಸಾಯರ ಉಳಿಸಾಕೆ ಬಂದಿಲ್ಲ ಸಾಯರ ಉಳಿಸಾಕೆ ಬಂದಿಲ್ಲ ಕಂಡುದ್ ಕಂಡಂಗ್ ಹೇಳಾಕೆ..ಬಂದಿದ್ದೀನಿ. ನಿಮ್ಮ ಗಂಡ ನಾಳೆ ಮದ್ದನಕೆ ಸಾಯ್ತಾನೆ .

ನಿಮ್ಮ ಗಂಡ ನಾಳೆ ಮದ್ವಾನ್ಕೆ ಸಾಯಾತಾನೇ

ನೀವು ಮುಂದೆ ಮುಂಡೇರು ಆಗಾತೀರಿ ॥ತಾ॥

ಯಾವೋಳೆ ಗಂಡನ ಬೋದೋಳು ನೀವೂ ॥ತಾ॥

ಕೊರುಮ್ತಿ ಕೊರುಮ್ತಿ ಕೈಮುಗೀತೀನಿ .ಶರಣಾತಿಯಾಗುತ್ತೀವಿ

ಉಳಿಯೋ ಮಾತೀಗ ಹೇಳೇ ತಾಯೀ ॥ತಾ॥

ಆಮ್ಮದೀರ ಅಮ್ಮದೀರ ಎಲ್ಲಾ ಬೀದೀಲು ಸಾಸ್ತ್ರ ಹೇಳ್ತಾ ಬಂದೆ. ಎಲ್ಲ ಬೀದೀಲು ಕಣಿ ಹೇಳ್ತಾ ಬಂದೆ. ಎಲ್ಲ ಬೀದೀಲು ಕಣಿ ಕಣಿ ಸಾಸ್ತ್ರ ಹೇಳಿದ್ರೂವೆ ಯಾರು ನಿಮ್ಮಂಗ್ ಮಾಡ್ಲಿಲ್ಲ. ಸಾಯಾರ್ನ ಉಳಿಸಾಕೆ ಬಂದಿಲ್ಲ. ಕಂಡುದ್ ಕಂಡಂಗ್ ಹೇಳಬಲ್ಲೆ. ನಿಮ್ಮ ಗಂಡ ನಾಳೆ ಮದ್ದನಕೆ ಸಾಯ್ತಾನೆ. ಅವ್ವಾ ಇಸ್ಟೊತ್ತು ಸುಳ್ಳೇ ಬಂದಿಲ್ಲ ನಿನ್ ಬಾಯ್ಲಿ. ಅವ್ರು ಕದ್ದೋದುದ್ದು ನಿಜ ನಾವ್ ಬೋದುದ್ದು ನಿಜ,..ನೀನು ನಾಳೆ ಮದ್ದಾನುಕ್ ಸಾಯ್ತಾರೆ ಅಂದಲ್ಲ ಅದೂ ನಿಜ. ನಿನ್ನ ಅಟ್ಟಿಂದಾಚೆ ದಾಟಾಕೆ ಬುಡಾದಿಲ್ಲ. ನಮ್ಮ ಗಂಡನ್ನ ನೀನೇ ಉಳುಸಬೇಕು.. ಅಂತಾರೆ.

ಅಮ್ಮ ನಿಮ್ಮದೊಂದು ಬಾಳಾತಲ್ಲ ನನಿಗೆ. ನಿಮ್ಮ ಬಂದಾನ ಬಾಳಾ ಅಗೋತು ನನಿಗೆ. ಮಂಜುನಾಥ ಸ್ವಾಮಿ ಸರಣೆತ್ತಿ ಕವಡೆ ಬುಡಮ್ಮ. ಮಂಜುನಾಥ ಸ್ವಾಮೇನಾರ ನಿಮ್ಮ ಗಂಡುನ ಕಾಯ್ತಾರ ನೋಡಾನ

ಮಂಜುನಾಥ ಸ್ವಾಮಿ ನೀವ್ ಕೇಳಿದ್ ಅರಕೆ ಕೊಡಾಕೆ ನಾವ್ ತಯಾರಿದ್ದೀವಿ ನೀವು ನಮ್ಮ ಗಂಡುನೆ ಉಳಿಸಿಕೊಡಪ್ಪ ಅಂತ ಕವಡೆ ಬುಡ್ತಾರೆ.

ಅಕ್ಕದೀರ ಈ ಕವಡೆ ಸರಿಬರ್ನಿಲ್ಲ. ಮಂಜುನಾಥ ಸ್ವಾಮಿ ನಿಮ್ಮ ಗಂಡುನ ಉಳಿಸಾಕಾಗಾದಿಲ್ಲ ಅಂತವ್ರೆ.

ನಿಮ ಗಂಡ ನಾಳೆ ಮದ್ದಾನ್ಕೆ ಸಾಯಾತಾನೇ ॥ತಾ॥

ನಿಮ ಗಂಡ ನಾಳೆ ಮದ್ದಾನ್ಕೆ ಸಾಯಾತಾನೇ ॥ತಾ॥

ತಾಯಿ ಕೈಮುಗುದು ನಿನ್ನ ಕಾಲ ಮ್ಯಾಲೆ ಬೀಳುತೀವಿ

ಉಳಿಯೋ ಮಾತೀಗ ಹೇಳೇ ತಾಯೀ ॥ತಾ॥

ಯೇನುಳುಸ್ಲಮ್ಮ ಮೂಡ್ಲುಗಿರಿ ತಿಮ್ಮಪ್ಪನ ಸರಣೆತ್ತಿ ಕವಡೆ ಬುಡ್ರಮ್ಮ ಮೂಡ್ಲುಗಿರಿ ತಿಮ್ಮಪ್ಪೇನಾರ ನಿಮ್ಮ ಗಂಡುನ ಉಳಸ್ತಾರ ನೋಡಾನ. ಮೂಡ್ಲುಗಿರೀ ಮೂರುಗಾವುದೊಡಯ ತಿಮ್ಮಪ್ಪಾ ನೀವ್ ಕೇಳಿದ ಅರಕೆ ನಾವ್ ಕೊಡಾಕೆ ತಯಾರಿದ್ದೀವಿ. ನೀನು ಕೇಳಿದ ಅರಕೆ ಕೊಡಾಕೆ ನಾವು ತಯಾರಿದ್ದೀವಿ, ಅಂತಾ ನೀನಾರ ನಮ್ಮ ಗಂಡುನ ಉಳಿಸಿಕೊಡಪ್ಪ ಅಂತಾ ತಿಮ್ಮಪ್ನ ಸೆರಣೆತ್ತಿ ಕವಡೆ ಬುಡ್ತಾರೆ.

ಅಮ್ಮದೀರ ಅಮ್ಮದೀರ ಈ ಕವಡು ಸರಿಬರ್ನಿಲ್ಲ ಮೂಡ್ಲುಗಿರಿ ತಿಮ್ಮಪ್ಪ್ನ ನಿಮ್ಮ ಗಂಡುನ್ನ ಉಳುಸಾಕಾಗಾಕಿಲ್ಲ ಅಂತಾವ್ರೆ.

ನಿಮ್ಮ ಗಂಡ ನಾಳೆ ಮದ್ದಾನ್ಕೆ ಸಾಯಾತಾನೇ ॥ತಾ॥

ಮುಂದೆ ಮುಂಡೆರು ನೀವು ಆಗಾತೀರಿ ॥ತಾ॥

ಕಯನ್ನು ಮುಗುದು ನಿನ್ ಕಾಲ ಮ್ಯಾಲೆ ಬೀಳುತೀವಿ

ಉಳಿಯೋ ಮಾತೀಗ ಹೇಳೇ ತಾಯೀ ॥ತಾ॥

ನಿಮ್ಮ ಬಂದಾನ ಬಾಳ ಆಗೋತುನನಿಗೆ. ಯಂಗಮ್ಮ ಉಳುಸ್ಲಿ ನಿಮ್ಮ ಗಂಡುನ್ನ ಸಾಯಾನ.. ನನ್ನಿಂದಾಗಾದಿಲ್ಲ. ಮೈಸೂರು ಚಾಮುಂಡಿಗೆ ಸೆರಣೆತ್ತಿ ಕವಡೆ ಬುಡಿ ಮೈಸೂರ್ ಚಾಮುಂಡಿದೇವೀಗೆ ಸೆರಣೆತ್ತಿ ಕವಡೆ ಬುಡ್ರಮ್ಮ.. ಅವಳೇನಾರು ನಿಮ್ಮ ಗಂಡುನ್ನ ಉಳುಸ್ತಾಳ ನೋಡಾನ. ಚಾಮುಂಡಿಗೆ ಸೆರಣೆತ್ತಿ ಕವಡೆ ಬುಡ್ರಮ್ಮ ಚಾಮುಂಡೇಶ್ವರಿ ಯೇನಾರ ನಿಮ್ಮ ಗಂಡುನ್ನ ಉಳುಸ್ತಾಳೆ ನೋಡಾನ

ಆಗ ಚಾಮುಂಡೇಶ್ವರಿ ನೆನಸಿ ಕವಡೆ ಬುಡ್ತಾಎ. ಚಾಮುಂಡಿ ದೇವಿ ನೀನು ಕೇಳಿದ ಅರಕೆ ಕೊಡಾಕೆ ನಾವ್ ತಯಾರಿದ್ದೀವಿ ಚಾಮುಂಡೇಶ್ವರಿ ನೀನು ಕೇಳಿದ ಅರಕೆ ಕೊಡಾಕೆ ನಾವೂ ತಯಾರಿದ್ದೀವೀ ನೀನಾರ ನಮ್ಮ ಗಂಡುನ್ನ ಉಳಿಸಿಕೊಡಮ್ಮ ಅಂತ ಚಾಮುಂಡಿ ಸೆರಣೆತ್ತಿ ಕವಡೆ ಬುಡ್ತಾರೆ.

ಆಗ ಕಿಲಿಕಿಲಿಗೆ ನೈಗಾಡುತ್ತಾಳೆ

ಅವುಳೆ ನಿಮ್ಮ ಗಂಡುನ ಉಳಿಸಲು ತಾಳೇ ॥ತಾ॥

ಚಾಮುಂಡಿ ಮರೆ ಬಿದ್ರೆ ಅವುಳು ಕೇಳಿದ ಅರಕೆ ನೀವ್ ಕೊಡೊದಾದ್ರೆ ಚಾಮುಂಡಿ ನಿಮ್ಮ ಗಂಡುನ ಉಳುಸ್ತಾಳೆ. ಇಲ್ದೆವಾದ್ರೆ ನಿಮುಗಂಡ

ನಾಳೆ ಮದ್ದನ್ಕೆ ಸಾಯಾತಾನೇ ॥ತಾ।

ಅವಳಿ ಕೇಳೀದರಿಕೆಯ ನೀವ್ ಕೊಡಾಬೇಕು ॥ತಾ॥

ಮುಂದೆ ಮುಂಡೇರು ನೀವು ಆಗಾತೀರಿ ॥ತಾ॥

ಅವುಳು ಕೇಳಿದ ಅರಿಕೆ ಕೊಟ್ರೆ ನಿಮ್ಮ ಗಂಡ ಉಳಿತ್ತಾನೆ. ಇಲ್ದೆ ವಾದ್ರೆ ನಾಳೆ ಮದ್ದನಕೆ ನಿಮ್ಮ ಗಂಡ ಸಾಯ್ತಾನೆ. ಮುಂದೆ ಮುಂಡೇರಾಗುತ್ತೀರಿ.

ಆಯ್ತು ತಾಯಿ ಚಾಮುಂಡಿ ಅರಕೇನು ಅನ್ನಾದು ನಮಿಗೆ ಅರುವಾಗ್ನುಲ್ಲ. ಚಾಮುಂಡೇನು ಅರಕೆ ಕೇಳುತ್ತಾಳೆ ಅನ್ನದು ಗೊತ್ತಾಗ್ನುಲ್ಲ. ನೀನೇ ಹೇಳು ತಾಯಿ ಚಾಮುಂಡಿಗೇನು ಅರಕೆ ಕೊಡಬೇಕು ಅಂದಾಗ.

ತಡೀರಮ್ಮ ಕವಡೆ ಬುಟ್ಟು ಕೇಳ್ತೀನಿ. ಕವಡೆ ಬುಟ್ಟು ನೋಡಿ ಯೇನೇಳುತ್ತಾಳೆ. ಚಾಮುಂಡಿದೇವಿ ಕೊರುಮ್ತಿ ಅವತಾರದಲ್ಲಿ ಚಾಮುಂಡಿಗೇನು ಅರಕೆ ಅಂದ್ರೆ ನಿಮ್ಮ ಗಂಡ ನಂಜುಂಡೇಶ್ವರ ಅವ್ನಲ್ಲ ನಿಮ್ಮ ಗಂಡ ನಂಜುಂಡೇಶ್ವರ ಅವ್ನಲ್ಲ

ಅವ್ರ ಮಲ್ಲಿ ಆರು ತಿಂಗ್ಳು ನಿಮ್ಮಲ್ಲಿ ಮೂರು ತಿಂಗ್ಳು

ಹಿಂಗೆ ನಿಮ್ಮ ಗಂಡಾ ಇರಾಬೇಕೂ ॥ತಾ॥

ಅವ್ರಮಲ್ಲಿ ಆರುತಿಂಗ್ಳು ನಿಮ್ಮಲ್ಲಿ ಮೂರು ತಿಂಗ್ಳು

ಹಿಂಗೆ ನಿಮ್ಮ ಗಂಡಾ ಇರಾಬೇಕು ॥ತಾ॥

ಹಿಂಗೆ ನಿಮ್ ಗಂಡಾ ಇರಾಬೇಕೂ ॥ತಾ॥

ಅವ್ನೆ ನಿಮ್ ಗಂಡೂನ್ ಉಳುಸಲು ತಾಳೇ ॥ತಾ॥

ಯಾಸಾ ಹಾಕ್ಕಂಡ್ ಮುಸುಗಾಕ್ಯಂಡ್ ಮಲಗಿದ್ನಲ್ಲ ನಂಜುಂಡೇಶ್ವರ ಈ ಕಣಿ ಕೇಳಿ

ಮುಸುಗ್ನೊಳಗೆ ಉಸಿ ನೇಗೆ ಇವ್ನು ನೋಡುತಾನೇ ॥ತಾ॥

ಅಕ್ಕಾಕ್ಕ ತಂಗೇರು ಮಕಾ ಮಾಕ ನೋಡಿ ಕಂಡು

ಬೂಮೀಗೆ ಕತ್ತ ಎಟ್ಟಾತ್ತಾರೇ ॥ತಾ॥

ಬೂಮೀಗೆ ಕತ್ತಾ ಎಟ್ಟಾತ್ತಾರೇ ॥ತಾ॥

ಚಾಮುಂಡಿ ಮಲ್ಲಿ ಅರ್ ತಿಂಗ್ಳು ನಮ್ಮಲ್ಲಿ ಮೂರು ತಿಂಗ್ಳಿದ್ರೆ ನಮ್ಮ ಮುತ್ತೈದೆ ಬಾಗ್ಯ ಉಳಿತ್ತಾದೆ. ಇಲ್ಲಿದ್ರೆ ಮುಂಡೇರಾಗುತ್ತೀವಲ್ಲ ಯೇನು ಮಾಡನ.

ಅವ್ರು ಎಲ್ಲಾರು ಹೋಗಲಮ್ಮ ಯಾತಕಾರು ಹೋಗಲಮ್ಮ

ನಮ್ಮ ಮುತ್ತೈದೆತಾನ ಇರಾಲಮ್ಮಾ ॥ತಾ॥

ಅವ್ರ ನಾಳೆ ಮದ್ದಾನ್ಕೆ ಕಳ್ಸಾತೀವೀ ॥ತಾ॥

ಅವ್ರ ನಾಳೆ ಮದ್ದಾನ್ಕೆ ಕಳ್ಸಾತೀವೀ ॥ತಾ॥

ಅವ್ಳಾ ನಾಳೆ ಮದ್ದಾನ್ಕೆ ಕಳುಸ್ತೀನಿ ಅಂತ ನನ್ನ ಕುಟೆ ಹೇಳಿದ್ರೆ ಆ ಚಾಮುಂಡಿ ಒಪ್ಪಾಕಿಲ್ಲ. ಹರಿಯೋ ಗಂಗಾ ನದಿಗೋಗಿ ಮಂಡಿ ಮಟ್ಟ ನೀರ್ನಲ್ಲಿ ನಿಂತುಕಂಡು ಚಾಮುಂಡಿಗೆ ಹಾಡಾಡಿ ಅರಿಕೆ ಕಟ್ಟಿ.. ಯಂಗ್ ಕಟ್ಟಿ ಅಂದ್ರೆ

ನಿನ್ ಮಲ್ಲಿ ಆರ್ ತಿಂಗ್ಳು ನಮ್ಮಮಲ್ಲಿ ಮೂರು ತಿಂಗ್ಳು

ಹಿಂಗೆ ನಮಗಂಡಾ ಇರಾತಾನೇ ॥ತಾ॥

ಆರು ದಿನ ನಿಮ್ಮ ಮಲ್ಲಿ ಮೂರು ದಿನ ನಮ್ಮಮಲ್ಲಿ

ಹಿಂಗೆ ನಮಗಂಡ ಇರುತಾನೇ ॥ತಾ॥

ಹೋಗಿ ಹಾಡಾಡಿ ಅರಿಕೆ ಕಟ್ಟೀರಮ್ಮಾ ॥ತಾ॥

ಹಿಂಗಲ್ಲ..ಜಲ್ ಜಲ್ದಿ ಹೋಗಿ ..ಬಾಳ ನಿಸ್ರಾಣೆಡ್ದೈತೆ ನಿಮು ಗಂಡ್ಗೆ. ಹರಿಯೇ ಗಂಗಾನದೀಗೋಗಿ ಮಂಡಿದ್ದ ನೀರಲ್ಲಿ ನಿಂತ್ಕಂಡು ಚಾಮುಂಡಿಗೇಳಿ. ನಿನ್ ಮಲ್ಲಿ ನಮ್ಮ ಗಂಡ ಆರ್ ತಿಂಗ್ಳಿರ್ತಾರೆ ನಮ್ಮಲ್ಲಿ ಮೂರ್ ತಿಂಗ್ಳು. ನಿನ್ ಮಲ್ಲಿ ಆರ್ ದಿಸಿದ್ರೆ ನಮ್ಮಲ್ಲಿ ಮೂರ್ ದಿನಿರ್ತಾರೆ ಅಂತ ಅರ್ಕೆ ಕಟ್ಕಳಿ  ನಿಮ್ಮ ಗಂಡ ಉಳಿತಾನೆ. ಹರಿಯೋ ಗಂಗಾ ನದಿಗೋಗುತ್ತಾರೆ. ಇಬ್ಬುರಾಳ್ ಮಡಿದೀರ್ನು ಅರಿಕೆ ಕಟ್ಟಾಕೆ ಅತ್ಲಾಗ ಕಳ್ಸಿದು ಮೇಲೆ..ಯಾಸಾ ತಾಳ್ಕ್ಯಂಡು ಮಲಗಿದ್ನಲ್ಲ ನಂಜುಂಡೇಶ್ವರ ಮುಸುಗು ತಗುದು ಮುಸಿ ಮುಸಿ ನಗುತಾ

ನನ್ ಅವುತಾರ ಯೇನಂದ್ರೆ ನೀವು ಒಂಬತ್ ದಿನುಕ್ ಬತ್ತೀನಿ ಅಂತ ಬಾಸೆ ಮಾಡಿ ಬಂದಿದ್ರಿ. ನೀವು ಒಂಬತ್ ದಿನೂಕ್ ಬರ್ನಿಲ್ಲ. ನಿಮ್ಮ ಮಡದೀರು ನಿಮ್ಮ ಬುಡ್ನಿಲ್ಲ. ಕಳ್ಳನಾಗಿ ಕದ್ದು ಬತ್ತಾ ಇದ್ದೆ. ಇಲ್ಲೀ ವರ್ಗು ಈಗ ರಾಜಾರೋಸಾಗಿ ಬರಾಂಗೆ ಮಾಡಿದ್ದೀನಿ.

ನಾಳೆ ಮದ್ದಾನ್ಕೆ ಬರಾಬೇಕೂ ॥ತಾ॥

ಮಂಡೆ ಬಾಚಿಲ್ಲ ಸ್ವಾಮಿ ನಾನ್ ಮಡಿ ಸೀರೆ ಉಟ್ಟಿಲ್ಲ

ನಾನು ದುಂಡು ಮಲ್ಗೆ ಹೂವಾ ಮಡಾದಿಲ್ಲ ॥ತಾ॥

ದುಂಡು ಮಲ್ಗೆ ಹೂವಾ ಮಡಾದಿಲ್ಲ ಶಿವ ಶಿವ

ನಾನು ನಿನು ಮ್ಯಾಗಳ ಜಾನ ಮರಾತಿಲ್ಲ ॥ತಾ॥

ನನಿಗೆ ಉಂಡೂಟ ಅರಗಿಲ್ಲ

ಉಂಡೂಟ ಅರಗಿಲ್ಲ ನನಿಗೆ ಕಂಡು ಕನಸು ಮರೆತಿಲ್ಲ

ನಿನ್ನ ಕಳವಾಳ ನನಿಗೆ ತಪ್ಪೇ ಇಲ್ಲ ॥ತಾ॥

ನೀವು ನಾಳೆ ಮದ್ದನಕೆ ಬರಾಬೇಕು ॥ತಾ॥

ಸ್ವಾಮಿ ಆರೇಳುಕುಳದಲ್ಲಿ ನಾರೀ ನಾನೊಬ್ಬಳೇಯ ॥ತಾ॥

ನನಿಗೆ ಮಾತಾಡೊ ಗಂಡ ಮಲ್ಲೇ ಇಲ್ಲಾ ॥ತಾ॥

ಮಾತಾಡೋ ಗಂಡ ಮನೇಲಿಲ್ಲ ನಂಜುಂಡ ಲಿಂಗ

ನಿನಿಗೆ ದ್ಯಾನಿಲ್ಲವೇನೋ ನನ್ನಾ ಮ್ಯಾಲೇ ॥ತಾ॥

ನಿನಿಗೆ ದ್ಯಾನಿಲ್ಲವೇನೋ ನನ್ನಾ ಮ್ಯಾಲೇ ॥ತಾ॥

ಸ್ವಾಮಿ ಹತ್ತೇಳುಕುಳದಲ್ಲಿ ನಾರೀ ನಾನೊಬ್ಬಳೇಯ

ನನಿಗೆ ಒತ್ತೀಲಿರುವಂತ ಪುರುಸಿಲ್ಲಾ ॥ತಾ॥

ನನ್ನ ಒತ್ತೀಲಿರುವಂತ ಪುರುಸಿಲ್ಲ ನಂಜುಂಡಲಿಂಗು

ನಿನಗೆ ದ್ಯಾನಿಲ್ಲವೇನೋ ನನ್ನಾ ಮ್ಯಾಲೇ ॥ತಾ॥

ನಿನಗೆ ದಾನಿಲ್ಲವೇನೋ ನನ್ನಾ ಮ್ಯಾಲೇ ॥ತಾ॥

ಅತ್ಲಾಗಿ ಅವುದು ಚಾಮುಂಡಿ ದೇವಿ, ಅಮ್ಮಾ ನಮ್ಮ ನಂಜುಂಡೇಶ್ವರ ಅವರಲ್ಲ ನಿಮ್ಮಲ್ಲಿ ಆರ್ ತಿಂಗ್ಳು ನಮ್ಮಲ್ಲಿ ಮೂರ್ ತಿಂಗ್ಳು ಇರ್ತಾರಂತವ ಹರಿಯೋ ಗಂಗಾ ನದಿವಳಿಗೆ ಅರಕೆ ಕಟ್ತಾ ಇದ್ದಾರೆ. ಆರ್ ತಿಂಗ್ಳು ನಿಮ್ಮಲ್ಲಿ ಮೂರ್ ತಿಂಗ್ಳು ನಮ್ಮಲ್ಲಿ ಅಂತಾ ಪಾರ್ವತೀ ದೇವಿರಮ್ಮ ಅರಕೆ ಕಟ್ಟುವಾಗ.. ಅರಕೆ ಕಟ್ಕ್ಯಂದ್ ಮನಿಗೆ ಬಂದುಗಳಿಗೇಲಿ ಮೊದಲ್ಯೆಂಗ್ ಯಾಸ ತಾಳ್ಕಂಡು ಮನಗಿದ್ದ ಅದೇ ಅವತಾರ್ದಲ್ಲಿ ಮಲಗಿದ್ದಾನೆ. ಮೊದಲು ಯಾವ್ ಅವತಾರ್ದಲ್ಲಿ ಮಲಗಿದ್ದ ಅದೇ ಅವತಾರ್ದಲ್ಲಿ ಮಲಗಿದ್ದಾನೆ. ಚಾಮುಂಡಿದೇವಿ ಕಣಿ ಹೇಳಾಕ್ ಯಾವ ಜಾಗ್ದಲಿ ಯಾವ ಅವತಾರ್ದಲ್ಲಿ ಕೂತುದ್ಲು ಅದೇ ಅವತಾರ್ದಲ್ಲಿ ಅದೇ ಜಾಗ್ದಲ್ಲಿ ಕೂತ್ಗಂಡು.. ಮಕಾ ಅಕಡೆ ಆಕ್ಯಂಡವಳೆ. ಬಂದು ನೋಡಿದ್ರೆ ಮಡಿದೀರು ಅರಕೆ ಕಟ್ಗಂಡು ಹಿಂತಿರುಗಿ ಬಂದು ನೋಡಿದ್ರೆ ಚಾಮುಂಡಿ ರೂಪು ಚಾಮುಂಡಿ ಏರಿತ ಮಂಕು ಮರುಳಾಗ್ಯೆತೆ.

ಯಾಕ್ ತಾಯಿ ಕೊರುಮ್ತಿ .ನಮ್ಮ ಮನಿಗೆ ಕಣಿ ಹೇಳಾರ ಬಂದಾಗ ಗೆಲುವಾಗಿದ್ದೆ ನೆಗಿಮಕನಾಗಿದ್ದೆ. ಈ ಮಕ ಸಪ್ಪುಗಾಗ್ಯೆತಲ್ಲಿ ಕಾರಣವೇನು. ಅಂತ ಕೇಳುವಾಗ ಅಮ್ಮ ಅಮ್ಮುದೀರ ನೀವ್ ಅರಕೆ ಕಟ್ಟಾಕೆ ಅತ್ಲಾಗ್ ಹೋದ್ ಮೇಲೆ ನಿಮ್ಮ ಗಂಡ ನಿಸೇಲಿದ್ದೆ ಹೋಗಿದ್ರೆ ನನ್ಯಾವ್ ಗತಿಯಾಗಿವ್ನೋ ನಿಮ್ಮ ಗಂಡ ಬಾಳ ಪುಂಡುಗಾರ ಅವ್ರಿಗೆ ನಿಸೇಲಿದ್ದುದ್ರಿಂದ ನಾನು ಬದುಕ್ಕೆ ಬಾಳ್ದದ ಇಲ್ದೆ ಹೋಗಿದ್ರೆ ಅನ್ನ ಬಯ್ದಲ್ಲಿ ನನ್ನ ಮಕ ಮಂಕಾಗಿ ಬಿಟ್ಟಿತ್ತು.

(ನೀವ್ ಅರಕೆ ಕಟ್ಟಾಕೆ ಅತ್ಲಾಗ್ ಹೋದ್ ಮೇಲೆ ನಿಮ್ಮ ಗಂಡ ಪುಂಡುಗಾರ ನಿಸೇಲಿಲ್ದೆ ಹೋಗಿದ್ರೆ ನಾನ್ಯಾವ್ ಬಾಳಾಗಿವೆ. ಅದು ನನ್ನ ಆತ್ಮಕೆ ಚಿಂತೆ ಬಂದು ಮಂಕಾಗಿದಿನಿ ತಾಯಿ ಅಂತಳೆ)

ಆಗ  ಕಣಿ ಹೇಳಿದ್ದುಕ್ಕೆ ಮುತ್ತು ಮಾಣಿಕ್ಯ ತಂದು ಮುತ್ತು ಮಾಣಿಕ ತಂದು ಕೊರವಂಜಿ ಗೂಡೀಗೆ ಮಡಗಿಬಿಟ್ಟು ಕೊರುಮ್ತಿಗೆ ಶಿರಗಾರ್ತಿಯಾಗಿ, ತಾಯಿ ತಾಯಿ  ಹೋಗ ಬಾ ತಾಯಿ ಅಂಬುದಾಗಿ ಶರಣಾರ್ತಿಯಾಗಿ ಕಳಿಸಿಕೊಡುತ್ತಾರೆ.

ನಂಜಯ್ಯ ಮನೆ ಬುಟ್ಟು ನಾಕೆಜ್ಜೆ ಆಚೆ ಇಟ್ಟೂ

ಮಾಯ್ವಾಗಿ ಹೋಗಿ ಸೇರಾರೆ ಮಯಾಸೂರ ॥ತಾ॥

ಮಾಯ್ವಾಗಿ ಹೋಗಿ ಸೇರಾರೆ ಮಯಾಸೂರಾ ॥ತಾ॥

ಇನ್ನಾರ್ ತಿಂಗ್ಳು ಚಾಮುಂಡಿ ಮನಿಗೆ ಕಳ್ಸುಬೇಕಲ್ಲ ಗಂಡುನ,,.ವತ್ತಾರೆ ಗಂಡುನೇಳಿ, ಕೂರಿಸ್ಕ್ಯತ್ತಾರೆ. ಸ್ವಾಮಿ..ಸ್ವಾಮಿ ನೀವು ನಾಳೆ ಮದ್ದನುಕೆ ಸಾಯ್ತೀರಿ. ನೀವ್ ಉಳೀಬೇಕಾರೆ ನಮ್ಮ ಮುತ್ಯೆದೆ ಬಾಗ್ಯ ಉಳೀಬೇಕಾರೆ

ಹೋಗಿ ಬಾವೋಗಿ ಚಾಮುಂಡಿ ಮನಿಗೇ ॥ತಾ॥

ಹೋಗಿ ಬಾವೋಗಿ ಚಾಮುಂಡಿ ಮನಿಗೇ ॥ತಾ॥

ಅವಳ್ಮಲ್ಲಿ ಆರ್ ತಿಂಗ್ಳು ನಮ್ಮಲ್ಲಿ ಮೂರ್ ತಿಂಗ್ಳು

ಹಿಂಗೆ ನೀವೀಗ ಇರಾಬೇಕೂ ॥ತಾ॥

ಆರ್ ದೀನ ಅವುಳ್ಮಲ್ಲಿ ಮೂರ್ ದಿನ ನಮ್ಮಲ್ಲಿ

ಹಿಂಗೆ ನೀವೀಗ ಇರಾಬೇಕೂ ॥ತಾ॥

ಆರ್ ತಿಂಗ್ಳು ಚಾಮುಂಡಿ ಮಲ್ಲಿ ಮೂರ್ ತಿಂಗ್ಳು ನಮ್ಮಲ್ಲಿ  ಆರ್ ದಿನ ಚಾಮುಂಡಿ ಮಲ್ಲಿ ಮೂರ್ ದಿನ್ ನಮ್ಮಲ್ಲಿದ್ರೆ.

ನಮ್ಮ ಮುತ್ಯೆದೆತಾನ ಉಳಿಯಾತಾದೇ ॥ತಾ॥

ಹೋಗಿ ಬಾವೋಗಿ ಚಾಮುಂಡಿ ಮನಿಗೇ ॥ತಾ॥

ಮಡುದೀರ ಮಡುದೀರ ಯಾರಾರ ಕೂಡಿದ ಗಂಡುನ್ನ ಹೆಂಡ್ರು ಸೂಳೇ ಮನಿಗೋಗು ಬಾ ಅಂತಾರ.. ಉಚ್ ಬಂದ ಮಾತಾಡ್ತಿರ ಬೆಪ್ ಬಂದ್ ಮಾತಾಡ್ತಿರ ಯಾರಾರ ಗಂಡುನ್ನ ಸೂಳೆ ಮನಿಗೆ ಹೋಗು ಅಂತಾರ

ಹೋಗುವುದಾದರೆ ನನಿಗೇ ಆಗುವುದಿಲಾ ॥ತಾ॥

ಈ ಮಾತು ನಿಮಿಗೆ ತರಾವೇನ್ರೇ ॥ತಾ॥

ನೀವ್ ಚಾಮುಂಡಿ ಮಲ್ಲಿ ಆರ್ ತಿಂಗ್ಳು, ನಮ್ಮಲ್ಲಿ ಮೂರ್ ತಿಂಗ್ಳು ಇದ್ರೆ ನಮ್ಮ ಮುತ್ಯೆದೆತಾನ ಉಳಿತಾದೆ. ಇಲ್ದೆವಾದ್ರೆ ನಾಳೆ ಮದ್ದನುಕೆ ನೀವು ಸಾಯುತ್ತೀರಿ ಮುಂದೆ ನಾವು ಮುಂಡೇರಾಗುತ್ತೀವಿ. ಬಿದ್ದು ಬೇಡುತ್ತೀನಿ

ಹೋಗಿ ಬಾವೋಗಿ ಚಾಮುಂಡಿ ಮನಿಗೇ ॥ತಾ॥

ಉಸಿನಗೆ ನ್ಯೆಗಾಡಿ ಮಡದೀರ ಮಡದೀರ ನಿಮ್ಮ ಬಂದಾನ ಬಾಳ ಆತು

ಕಾಯ್ಲಾ ಬಿದ್ದು ಸೋತು ಕುತಿದೀನಲ್ರೆ

ಯಂಗೆ ಹೋಗಲಿ ಚಾಮುಂಡಿ ಮನಿಗೆ ॥ತಾ॥

ಹೋಗುದುಕ್ಕೆ ನನಿಗೇ ಆಗುವುದಿಲ್ಲಾ ॥ತಾ॥

ಹೋಗುದುಕ್ಕೆ ನನಿಗೇ ಆಗುವುದಿಲ್ಲಾ ॥ತಾ॥

ಹೋಗಾಕಾಗುವುದಿಲ್ಲ. ಕಾಯ್ಲೆ ಬಿದ್ದು ನಿಸ್ರೇಣಿಯಾಗಿದ್ದೀನಿ.

ಸ್ವಾಮಿ, ಸ್ವಾಮಿ .ನಮ್ಮ ಮುತ್ತೈದೆ ಬಾಗ್ಯ ಉಳೀಬೇಕಾರೆ ನಾವು, ನಾವೇ ಕಳಿಸಿ ಬತ್ತೀವಿ ನಡೀರಿ ಊರ್ ದೊಣ್ಣೆ ತಂದು ಕೈಯೀಗ್ ಕೊಟ್ಟು ದೊಣ್ಣೆ ಊಕ್ಕ್ಯಳಿ ಸ್ವಾಮಿ.. ಎಡಗಡೆ ದೇವೀರಿಡಕಂಡು, ಬಲಗಡೆ ಪಾರ್ವತಿಡಕಂಡು ಕಳಿಸಾಕೋಗಬೇಕಾರೆ..ಮಾಯ್ಕಾರ ನಂಜುಂಡೇಶ್ವರ

ಇವುಳ್ಮೇಲೊಂದು ಸಾರಿ ಬೀಳ್ತಾನೆ ಮಾಯ್ಕಾರ

ಕಾಲಲ್ಲಿ, ಊರ್ ಗೋಲಲ್ಲಿ

ಕಾಲಿಗೆ ಶಿವನೆ ಚುಚ್ಚುತ್ತಾನೇ ॥ತಾ॥

ಅವುಳ್ಮೇಲೊಂದು ಸಾರಿ ಬೀಳ್ತಾನೆ ಮಾಯ್ಕಾರ

ಕಾಲಲ್ಲಿ ಊರುಗೋಲಲ್ಲಿ

ಕಾಲಿಗೆ ಶಿವನೇ ಚುಚ್ಚುತ್ತಾನೇ ॥ತಾ॥

ಕಾಯ್ಲಾ ಬಿದ್ದು ಬಿದ್ದು ಸೋತೂ ಕೂತಿದೀನಲ್ರೆ

ಬದ್ರಾಗಿ ನನ್ನ ತಬ್ಬೀಕ್ಯಳಿರೇ ॥ತಾ॥

ಮೂರ್ ದಾರೀಗೋಗೋವರ್ಗ್ಗೂ ಸುಮ್ನಿದ್ದ,,, ಈಗ ಹೆಡ್ತೀರ್ಗೇನು ಹೇಳುತ್ತಾನೆ,..ಯೇನ್ ಕೇಳುತ್ತಾನೆ ಗಂಡುನ್ನಿಂಗಡ್ಕಂಡೋತಿರಲ್ಲ.. ಯಾರಾರ ಕೇಳಿದ್ರೆ ಯೇನೇಳ್ತಿರಿ ಹಾದ್ಕಾರ್ರಿಗೆ .

(ಇಂಗೆ ಗಂಡುನ್ನ ಆಕಡೆ ಒಬ್ಬು ಈಕಡೆ ಒಬ್ಬು ಇಡ್ಕಂಡು,,,ಊರ್‌ಗೋಲ ಕೊಟ್ಗಂಡು ಹೋಯ್ತಾ ಇದ್ದಿರಲ್ಲ ಎಲ್ಲಗೆ? ಅಂದ್ರೆ ಯೇನೇಳ್ತೀರಿ)

ಹಾದಿಕಾರ್ರು ಸಿಕ್ಕದ್ರೆ ಸ್ವಾಮಿ..ಚಾಮುಂಡಿ ಮನಿಗೆ ಕಳುಸಕೆ ಅಂತ ಯೇಳ್ತೀನಿ ಚಾಮುಂಡಿಗು ನಿಮಗಂಡುಗ ಯೇನಾಗಬೇಕು? ಅಂತ ಕೇಳಿದ್ರೆ ಯೇನೇಳ್ತಿರ? ಚಾಮುಂಡಿಗೆ ನಮು ಗಂಡ ಮುಂಡ ಅಂತೀವಿ.

ಮಡುದೀರಾ

ಇದುಕೆ ಹಾದೀ ಜನವೆಲ್ಲ ನಗಾದಿಲ್ಲುವೇ ॥ತಾ॥

ಹಾದೀ ಜನಾವೆಲ್ಲ ನಗಾದಿಲ್ಲುವೆ? ॥ತಾ॥

ಗಂಡುನ್ನ ಹೆಡ್ತೀರು ಸೂಳೇ ಮನಿಗೆ ಕರ್ಕೊಂಡಾಯ್ತರೆ ಅಂದ್ರೆ ಬೆಲೆ ಸಿಕ್ಕಲ್ಲ ನಿಮ್ಗೆ ಬೆಲೆ ಸಿಕ್ಕ;ಲ್ಲ. ನಾನು ಕುಂತ್ಗಂಡ್ ನಿಂತ್ಕಂಡು ಯಂಗಾರ ಹೋಯ್ತೀನಿ. ಜನುಕೆ ಪೋಗ್ರಾಂ ಸಿಕ್ಕುಬಾರ್ದು ಮಡದೀರ. ಕುಂತು ನಿಂತು ಸದಾರಿಸ್ಕಂಡು ಹೋಗುತ್ತೀನಿ

ನಡಿರಮ್ಮ ನೀವು ಮನೆಗೆ ಈಗಾ ॥ತಾ॥

ನಡಿರಮ್ಮ ನೀವು ಮನೆಗೆ ಈಗಾ ॥ತಾ॥

ಮೂಡುದಾರೀಗೆ ತಂದು ಬುಟ್ಟು ಹಿಂದುಕ್ ತಿರುಗುತ್ತಾರೆ ಮಡದೀರು. ನಮ್ಮ ಗಂಡುಗೆ ಉಸಾರಿಲ್ಲ ಎಲ್ಲಿ ಬಿದ್ರೋ ಕಾಣೆ ಅಂತ ಹಿಂದುಕ್ ನೋಡ್ತಾರೆ ಮಡದೀರು. ಹೆಡ್ತೀರ ತಲೆ ಎಸ್ಟೊತ್ತಿಗೆ ಮರೆಯಾಗ್ತದೋ ಕಾಣೆ ಅಂತ ಅವ್ನು ಹಿಂದಿರುಗುತ್ತಾನೆ. ಆಲುದ್ ಮರ ಹೆಡ್ತೀರು ಮರೆಯಾಗುತ್ತಾರೆ. ಆಗ,,,,

ಊರುದೊಣ್ಣೆ ತೆಗುದಾನೆ ಕಾಡೀಗೆ ಬಗುದಾನೇ
ಕುದಿರ್‍ಯೋಟ ಇವನು ಓಡುತಾನೇ ॥ತಾ॥
ಕುದಿರ್‍ಯೋಟ ಇವನು ಓಡುತಾನೇ ॥ತಾ॥

ಕಾಯ್ಲೆ ಬಿದ್ದವನೆ.. ಎಲ್ಲಿ ಬಿದ್ದನೋ ಕಾಣೆ ಅಂತೆವ ಇವುರು ತಿರುಗಿ ನೋಡಿದ್ರೆ

ಅಲ್ಯೋಡೆ ಅಕ್ಕ ಓಡಾದ ನೀನೂ ॥ತಾ॥
ಅಲ್ಯೋಡೇ ಅಕ್ಕ ಓಡಾದ ನೀನೂ ॥ತಾ॥

ನಾವು ಅವುನ್ನ ಕ್ಯಯ ಬುಟ್ಟುಮ್ಯಾಲೆ ಚಾಮುಂಡೇಶ್ವರಿ ಕೈ ಹಿಡಿದಿರುವುದು ಚಾಮುಂಡೇಶ್ವರಿ ಬಲುದ್ ಮ್ಯಾಲೆ, ಅಂಗೋಡ್ತಾ ಇರುಬೋದು ಬಾ ತಂಗಿ ನೀನು.. ಚಾಮುಂಡೇಶ್ವರಿ ಅಲ್ಲೀನ ಐಬೋಗ ಮಾಡ್ಯವಳೆ ಅಂದ್ರೆ ಸ್ವಾಮಿ ನಂಜುಂಡಲಿಂಗ ನಂಜುಂಡೇಶ್ವರ ನನ್ ಮ್ಯಾಲೆ ಮನಸಾಗಿ ಮನೆ ಕಡೆ ಬತ್ತವ್ರೆ.

ಬ್ಯಾಸಿಗೆ ಬಿಸುಲಲ್ಲಿ ಬತ್ತಾರಂತಾ ನೋಡು
ಇವರು ಬರುವ ದಾರಿಗೆ ನೋಡು
ಹಸುರ ಚತ್ತರಿಯ ಇಡದವರೇ ॥ತಾ॥
ಬ್ಯಾಸೀಗೆ ಬಿಸುಲಲ್ಲಿ ಬತ್ತರಂತಾ ಶಿವನೆ
ಅಮ್ಮ ಹಸುರ ಚತ್ತುರಿಯ ಇಡಾದವರೇ ॥ತಾ॥
ಒಂದೂ ರಾರಿಲಿ ದೇವಾ ಒಬ್ರೆ ಬತ್ರಾರಂತಾ
ಇವ್ರಿಗೆ ಉಣಸೂರ ಸೂಳೇರ ಕರೀಸ್ಯವರೇ ॥ತಾ॥
ಉಣಸೂರ್ ಸೂಳೇರ್ ಕರ್‍ಸಿ ಅವ್ರ ಕಾಲ್ಗೆ ಗೆಜ್ಜೆಯ ಕಟ್ಟಿ
ಸೂಳೇರ್ ಮ್ಯಾಳದಲ್ಲಿ ಕರೀಸ್ಯವರೇ ॥ತಾ॥
ಕಲ್ಲೀನ ಹಾದೀಲಿ ಬತ್ತಾರಂತಾ ಶಿವನೇ
ಸಣ್ಣ ಮಲ್ಲೀಗೆ ಹರೀಸ್ಯವರೇ ॥ತಾ॥
ಚಾಮುಂಡಿ ಸಣ್ಣ ಮಲ್ಲೀಗೇ ಹರೀಸ್ಯವರೇ ॥ತಾ॥
ಒಡ್ಡು ಒಲುಗದಲ್ಲಿ ಅಂತ ಸೂಳೇರ ಮೇಳುದಲ್ಲಿ
ನಂಜಯ್ನ ತಾಯಿ ಕರ್‌ಸ್ಯವಳಲ್ಲಾ ॥ತಾ॥
ಇಂತ ತಾಳ ತಂಬೂರಿಲ್ಲಿ ಸೂಳೇರ ಮೇಳುದಲ್ಲಿ
ನಂಜಯ್ನ ಬೆಟ್ಟುಕೆ ಕರಸ್ಯವರಲ್ಲಾ ॥ತಾ॥
ಹಾದೀಗೆ ಸಣ್ಣ ಮಲ್ಲಿಗೆ ಹರೀಸ್ಯವರೇ ॥ತಾ॥

ಬೆಟ್ಟ ಹತ್ತಿದು ಮ್ಯಾಲೆ
ನಾರೀರ್ ಮುತ್ತೈದೇರ ಕರಿಸೀ ಚಾಮುಂಡಿದೇವೀ
ಮುತ್ತೀನಾರಾತಿ ಎತ್ಯವರಲ್ಲಾ ॥ತಾ॥
ಎತ್ತೀರೆ ಆರತಿಯಾ ಸ್ವಾಮಿ ನಂಜಯ್ಗೆ
ಬೆಳಗೀರೆ ಆರತಿಯಾ
ಎತ್ತೀರೆ ಆರತಿಯಾ ನಾರೀರ್ ಮುತ್ತೈದೆರಾ
ಬೆಳಗೀರೆ ಆರತಿಯಾ
ಹಾದೀಗೆ ರಂಗಾಲೆ ಬೀದೀಗೆ ರಂಗಾಲೆ
ತಾಳ ತಂಬೂರೀಲಿ ಸೂಳೇರ ಮೇಳುದಲ್ಲಿ
ಬೆಟ್ಟಕ್ಕೆ ನಂಜಯ್ನ ಚಾಮುಂಡಿ ಕರೆಸೂತಾರೇ
ಎತ್ತೀರಾರತೀಯ
ನಂಜುಂಡ ಲಿಂಗುಗೆ ಬೆಳಗೀರಾರತಿಯಾ
ಎತ್ತೀರಾರುತಿಯಾ
ಸ್ವಾಮಿ ನಂಜಯ್ಗೆ ಬೆಳಗೀರಾರತಿಯಾ॥
ಬೆಟ್ಟುಕ್ಕೋದೂ ಮ್ಯಾಲೆ
ತಾಯಿ ಚಾಮುಂಡಿ ದೇವಿ
ಸ್ವಾಮಿ ನಂಜುಂಡು ಲಿಂಗು
ಬೀಸು ಮಡಿಯಾ ಇಬ್ರು
ಉಡುತಾ ನಿಂತವುರೆ
ಎತ್ತೀರಾರುತಿಯಾ
ಸ್ವಾಮಿ ನಂಜುಂಡುಗೆ ಬೆಳಗೀರಾರಾತಿಯಾ॥
ಇವುರು ಸಾನಾ ಮಾಡೀ ಶಿವನೆ
ತಲೆಯ ಒದರಿ ನಿಂತವರೆ
ಎತ್ತೀರಾರತಿಯಾ
ಚಾಮುಂಡಿದೇವಿಗೆ ಸ್ವಾಮಿ ನಂಜುಂಡುಗೆ
ಬೆಳಗೀರಾರುತಿಯಾ ॥

ಚಾಮುಂಡೇಶ್ವರಿ–ನಂಜುಂಡೇಶ್ವರ ಯಾರು ಅಂದ್ರೆ ಆಗ ಮೊದಲನೆಯ ಅವುತಾರ್ದಲ್ಲಿ ಶಿವ–ಪಾರ್ವತಿ. ಮೈಸಾಸುರುನ್ನ ಕೊಲ್ಲಾಕೆ ಪಾರ್ವತಿ ಚಾಮುಂಡಿ ಅವತಾರ ಎತ್ತುವಲ್ಲಿ ಕೋಣುನ ಮೇಲ್ ಬಂದು ಮೈಸಾಸುರನ್ನ

ಕೊಂದ್ಲಲ್ಲ ರಕ್ತ ನೋಡ್ಬಿಟ್ಟು ಶಿವ ಬುಟ್ಟ ಆಮೇಲೆ ಈಸ್ವುರ ನಂಜುಂಡೇಶ್ವರ ಅವತಾರ ಎತ್ತಿದ. ಮೊದಲನೆಯ ಅವತಾರದಲ್ಲಿ ಗಂಡ ಹೆಂಡ್ರು ಎರಡನೆಯ ಅವತಾರದಲ್ಲಿ ಸೂಳೆ ಪುಂಡುಗಾರ.

ತಾಯಿ ಚಾಮುಂಡೇಶ್ವರಿ ದೇವಿ ಸ್ವಾಮಿ ನಂಜುಂಡೇಶ್ವರ ದೇವ.. ದೇವಿ..ದೇವ ಮಾನ್ಯೆ ಸಕ್ತಿ ಸರಣರ ಪಾದುಕೆಲ್ಲ ಸೆರಣಪ್ಪ ಸೆರಣೋ

ಈಗ್ಲ ನಂಜುಂಡೇಶ್ವರ ಚಾಮುಂಡೇಶ್ವರಿ ದೇವಿ ಮಲ್ಲಿ ಆರ್ ತಿಂಗ್ಳು ನಂಜಲಗೂಡಿನಲ್ಲಿ ಮೂರ್ ತಿಂಗ್ಳು.

ಸಕ್ತಿ ಸೆರಣಾ ಪಾದುಕೆಲ್ಲ ಸೆರಣಪ್ಪ ಸೆರಣೇ ..

# ಎಲ್ಲಮ್ಮದೇವಿ ಕತೆ

ಅಯ್ಯ ಎದು ನಾನು ನೆನುದೇನು

ಎದ್ದು ನೆನುದೇನು ಶಿವನೆ. ಸಿದ್ದುರಾಶಿವ ಸೆರಣೇರಾ

ರುದ್ದುರಾಕ್ಷಿ ಕಂತೆ ಹಿಡೀಯುವರಾ।

ತಾನಂದನ್ನೊ ತಾನಂದಾನ್ನಾ ತಾನಂದನ್ನೊ

ರುದ್ದುರಾಕ್ಷಿ ಕಂತೇ ಹಿಡಿದಂತಾ ಮಾದೇವನಾ

ಶಿವನೆ ಎದ್ದೊಂದು ಗಳಿಗೆ ನೆನೆದೇನೊ।

ರುದ್ದುರಾಕ್ಷಿ ಕಂತೇ ಹಿಡಿಯೊ ದೇವ್‌ಮಾನ್ಯವರಾ

ಸ್ವಾಮಿ ಎದ್ದೊಂದು ಗಳಿಗೆ ನೆನೆದೇನೂ॥

ಅವ್ವಾ ಜಗುಮಾ ಎಲ್ಲಮದೇವಿರಿಗೆ ಮಂಗುಳಾರ ಸುಕ್ಕುರಾರಾ

ಎಲ್ಲಾ ದೇವಿರಿಗು ನಮುಸ್ಕಾರಾ॥

ಜಗುಮಾ ಎಲ್ಲಮುದೇವಿರಿಗೆ ಮಂಗುಳಾರ ಸುಕ್ಕುರಾರಾ

ಸ್ವಾಮಿ ಎಲ್ಲಾದೇವಿರಿಗು ನಮುಸ್ಕಾರಾ॥

ಮಂಗುಳಾರ ಆದುಮ್ಯಾಲೆ ಎಲ್ಲಮ್ಗೆ ಸುಕ್ಕುರಾರಾ

ತಾಯಿ ಮಂಡೀಗೆ ಮಲ್ಲಿಗೂವಿನಾರಾ॥

ಮಂಗಳಾರ ಆದುಮ್ಯಾಲೆ ಎಲ್ಲಮ್ಮಗೆ ಸುಕ್ಕುರಾರಾ

ತಾಯಿ ಮಂಡಿಗೆ ಮಲ್ಲಗೂವೀನಾರಾ॥

ತುಪ್ಪಾದ ದೀಪಾ ನಿಮಿಗೆ ಎಲ್ಲಮುದೇವಿ

ತುಪ್ಪಾದ ದೀಪಾ ನಿಮಿಗೆ ಎಲ್ಲಮುದೇವಿ

ನಿಮ್ಮ ದೀಪಾದ ಬೆಳಕು ನಮೀಗೆಲ್ಲಾ॥

ತುಪ್ಪಾದ ದೀಪಾ ನಿಮೀಗೆ ಎಲ್ಲಮುದೇವಿ

ನಿಮ್ಮ ದೀಪಾದ ಬೆಳಕು ನಮೀಗಲ್ಲಾ॥

ಜಗುಮಾ ಎಲ್ಲಮದೇವಿ ಜಗುಮಾ ಎಲ್ಲಮ್ಮದೇವ್ರೀಗೆ

ಅವರು ಯಡಿಗೆ ಅನ್ನುದೋರು ಗಡಿಗೆ ತುಪ್ಪಾದೋರು

ಅವ್ರೀಗೆಡೆಯಾದ ಮೇಲೆ ನಮೀಗಲ್ಲಾ॥

ಅಮ್ಗೆ ಯಡಿಯಾದ ಮೇಲೆ ನಮೀಗೆಲ್ಲಾ॥

ಜಗುಮಾ ಎಲ್ಲಮ ನೋಡು ಜಗುದೆಲ್ಲ ಮಾಯಾಲ್ಲೆ

ನಿನ್ನ ಪಾದುಕ್ಕೆ ತಾಯಿ ಸೆರಾಣಾಲ್ಲೇ ॥

ಜಗುಮಾ ಎಲ್ಲಮುನೋರು ಜಗುಕೆಲ್ಲ ಮಾಯಲ್ಲೆ

ನಿನ್ನ ಪಾದುಕ್ಕೆ ತಾಯಿ ಸೆರಾಣಾಲ್ಲೇ

* ॥ ಈ ಗುರುತು ಬರುವ ಕಡೆಯೆಲ್ಲಾ ಹಿಮ್ಮೇಳದವರು ಈ ಸೊಲ್ಲನ್ನು ಒಂದು ಬಾರಿ ಕೆಲವೊಮ್ಮೆ ಎರಡು ಬಾರಿ ಹೆಳುತ್ತಾರೆ.

ಜಗುಮಾ ಎಲ್ಲಮ್ಮದೇವೀ .

ಜಗುಮಾ ಎಲ್ಲಮ್ಮ ದೇವೀ ನನ್ನವ್ವೇ ಜಗುಕೆಲ್ಲೆ ಮಾಯ ತಾಯೇ

ಜೋಗು ಜೋಗೆನ್ನುತಾರೇ .ಎಲ್ಲಮ್ಗೆ ಬಂಡಾರ ಚಲ್ಲುತ್ತಾರೇ

ಆದಿ ಸಕ್ತಲ್ಲೇ ತಾಯಿ ಎಲ್ಲವ್ವ ಆದಿಲ್ಲಿ ಉಟ್ಟದವರೂ।

ಜಗುಮಾ ಎಲ್ಲಮುನವರೆ ನನ್ನವ್ವ ಜಗುಕೆಲ್ಲ ಮಾಯಿ ನೀವೂ।

ಆದೀ ಸಕ್ತಲ್ಲೆ ತಾಯೀ ನನ್ನವ್ವ ಆದೀಲಿ ಹುಟ್ಟಿದವರು।

ನನ್ನ ಅರುಸಿಣುದ ಮಯ್ಯೀನವರೂ ನನ್ನಪ್ಪ ಬೇವಿನ ಉಡಿಗ್ಯವರೊ।

ಅರುಸಿಣುದ ಮಯ್ಯೀನವರೂ ಎಲ್ಲವ್ವ ಬೇವಿನ ಊಡಿಗ್ಯವರೋ ।

ತಾಯಿ ಪರುಸೂ ರಾಮಾದು ತಾಯೀ..

ಪರಸೂ ರಾಮಾರ ತಾಯೀ ನನ್ನ ಜಗುಮಾ ಎಲ್ಲಮ ನೋಡೂ।

ಮಗನ ಪರುಸುರಾಮನ ಕರೆದೂ ನನ್ನವ್ವ ಏನೇನ ನುಡಿಯುತ್ತಾರೇ।

ಬಾರಪ್ಪ ನನ್ನ ಮಗುನೇ ನನ್‌ಕಂದ ಪರಸುರಾಮಾನೆ ನೀನೂ।

ಮಗುನೆ ಬಾರಪ್ಪ ನನ್ನ ಕಂದಾ. ನನ್ನ ಕಂದ ಪರಸುರಾಮಾನೆ ನೀನೂ।

ಮಗುನೆ ದೇಸುದ ಮ್ಯಾಲೆ ಹೋಗಿ ನಾನೀಗ ಬಡೂವೊರೆ ಬಕ್ತೇ ನೋಡಾಲುಬೆಕೆ

ಬಡುವುರ ಬಕ್ತೇಯ ನೋಡಿ ನನ್ ಕಂಡ ಬಾಗ್ಯೇವುನಾ ಕೋಡಬೇಕೂ

ದೊಡ್ಡಳ ಮನಿಗೆ ಹೋಗಿ ಅವರ ಸತ್ಯವ ನಾ ನೋಡಬೇಕು.

ಮಗನೆ ಪರುಸುರಾಮಾ ದೇಸುದ್ ಮ್ಯಾಲೋಗುತ್ತೀನಿ. ಯಾರ್ ಮನೆ ದುಡ. ಯಾರ್ ಮನೆ ಭಕ್ತಿ। ಯಾರಾತ್ಮ ಯಂಗೈತೆ ಅನ್ನದಾಗಿ ಪರೀಕ್ಸೆ ಮಾಡಕ್ಕೇ.. ಬಿಕ್ಸುಗಾತಿಯಾಗಿ ಹೋಗಿ ನೋಡುತ್ತೀನಿ ಪರುಸುರಾಮಾ ಬಿಕ್ಸುಗಾತಿಯಾಗಿ ಹೋಗಿ ನೋಡುತ್ತೀನಿ. ದೊಡ್ಡವರು ಸತ್ಯ, ಬಿಡುವುನು ಸತ್ಯ ದೊಡ್ಡವುನು ಭಕ್ತೆ ಬಡುವರ ಭಕ್ತಿ ಯಂಗೈತೆ ಎಂಬುದಾಗಿ ನೋಡಿ ಬತ್ತೀನಿ..

ಬಕ್ತೀಲಿದ್ದವರಿಗೆ ಮಗುನೇ ನಾನೀಗ ಬಡುತಾನೆ ಕೊಡುವತೀನಿ ।

ಬಕ್ತೀಲಿದ್ದವರಿಗೆ ಮಗುನೇ ನಾನೀಗ ಬಡುತಾನೆ ಕೊಡುವತೀನಿ ।

ಬಡುತನ ಕೊಡವತೀನಿ ಅವರೀಗೆ ಕಣ್ಣನ ಕೊಡವತೀನಿ.

ಬಕ್ತೀಲಿದ್ಯವರಿಗೆ ಎಸ್ಟು ಬಕ್ತೀಲಿರ್‍ತಾರೆ. ಅನ್ನದ ನೋಡಕೆ... ಬಕ್ತೀಲಿವರಿಗೆ ಕಸ್ಟಾ ಕೊಡುತ್ತೀನಿ. ಬಡುತನ ಕೊಡುತ್ತೀನಿ. ಕಸ್ಟಲ್ಲಿದ್ದಾಗ್ಲು ಬಡುತಾನಿದ್ದಾಗ್ಲು ಬಕ್ತೀಲಿದ್ರೆ..

ಮುಂದೆ ಆವರೀಗೆ ಮಗುನೆ ಬಾಗ್ಯೇವ್ ಕೊಡುತ್ತೀನಿ.

ಶರಣು ಶರಣಯ್ಯ ಶಿವನೆ ಶರಣು ಮಾದೇವಾ

ಮುಂದೆ ಅವರೀಗೆ ನಾನು ಬಾಗ್ಯೆವ್ ಕೊಡುತ್ತೀನಿ॥

ಬಕ್ತುವಂತರಿಗೆ ಬಡುತಾನ ಕಸ್ಟದಲ್ಲು ,,, ಬಡುತಾನದಲ್ಲು ಬಕ್ತೀಲಿದೆ ಅಂತವ್ರಿಗೆ ಮುಂದೆ ಸಿರಿತಾನ ಕೊಡುತ್ತೀನಿ. ಬಾಗ್ಯೇವು ಕೊಡುತ್ತೀನಿ, ಅದು ಅಲ್ದೇನೇ.. ಆಂಕಾರ್ದಲ್ಲಿದ್ದವರಿಗೆ ಕರ್ಮುದಲ್ಲಿದ್ದವರೀಗೆ ಆಂಕಾರದ್ದಲ್ಲಿ ಮೆರಿಯೋರ್ಗೆ ಮಗುನೆ ಪರುಸುರಾಮಾ..

*1 ಈ ಗುರುತು ಬರುವ ಕಡೆ ಈ ಸೊಲ್ಲನ್ನು ಮುಖ್ಯ ಗಾಯಕನನ್ನು ಕೂಡಿ ಹಿಮ್ಮೇಳದವರು ಹಾಡುತ್ತಾರೆ. + ॥। ಈ ಬರುವ ಕಡೆ ಹಿಮ್ಮೇಳದವರು ಈ ಸೊಲ್ಲನ್ನು ಹಾಡುತ್ತಾರೆ.

ಅವ್ರಿಗೆ ಸಿರೀತಾನ ಕೊಡುತೀನಿ ದೊರೆತಾನ ಕೊಡುತೀನಿ ॥।

ಗರ್ವ ಆಂಕಾರಿದ್ದರಿಗೆ ನಾನು ಬಾಗ್ಯೆವ್ ಕೊಡುತೀನಿ ॥।

ಬಾಗ್ಯೆವ್ ಕೊಡುತೀನಿ ಸಿರೀತಾನ ಕೊಡುತೀನಿ ॥।

ಗರ್ವ ಆಂಕಾರಿದ್ದರಿಗೆ ಬಾಗ್ಯೇವು. ಸಿರಿತಾನ ಕೊಟ್ಟು ಕುತ್ಕಂತೀನಿ ನೋಡ್ತಾ. ನಾನು ಬಾಗ್ಯೇವು ಕೊಟ್ಟ ಗಳಿಗೇಲ್ಲಿ ಆಂಕಾರ ಬುಟ್ಟು ಬುಟ್ಟು ಬಕ್ತೇಲಿದ್ರೆ ಬಾಗ್ಯೆವ್ ಉಳಿಸ್ತೀನಿ. ಬಾಗ್ಯೆವು ಕೊಟ್ಟು ಬತ್ತೀನಿ. ಗರ್ವಾಂಕಾರ್ದಲ್ಲಿದ್ದರಿಗೆ ಬಾಗ್ಯೇವು ಸಿರಿತಾನ ಕೊಟ್ಟು ನೋಡ್ತಿನಿ. ಆಂಕಾರ ತೋರ್ದು ಬಕ್ತೀಲಿದ್ರೆ ಅದೇ ಬಾಗ್ಯೇವು ಸಿರಿತಾನ ಮುಂದ್ಕು ಉಳಿಸಿ ಬತ್ತೀನಿ. ಅದೇ ಗರ್ವ ಆಂಕಾರ ತೋರಿದ್ರೆ. ಆಂಕಾರ್ದಲ್ಲೆ ಮೆರಿತಾ ಇದ್ರೆ.

ಮುಂದೆ ಅವರೀಗೆ ಮಗುನೆ ಸಿರಿಯಾ ಮುರೀತೀನಿ ॥।

ಮುಂದೆ ಅವರೀಗೆ ಮಗುನೆ ಸಿರಿಯಾ ಮುರುದೇನೂ ॥।

ಅವರ ಸಿರಿಯಾ ಮರುದೇನೂ ಅವರ ಗರ್ವಾ ಮುರುದೇನೂ ॥

ನಾನೂ ಕೊಟ್ರೂ ಬಾಗ್ಯೇವಾ ನಾಳೇ ಬಯಲಾ ಮಾಡೇನು

ಮಗುನೆ ದೇಸೂದ್ ಮ್ಯಾಲೀಗ ಹೋಗೀ ಬರುತೀನಿ

ದೊಡ್ಡೋರು ಮನಿಗೋಗಿ ಅವರ ಸತ್ಯ ನೋಡುತ್ತೀನಿ

ಮಗುನೆ ಬಡುವರ ಮನೆಗೋಗಿ ಅವರ ಭಕ್ತಿ ನೋಡುತೀನಿ.

ಮಗಾ ಪರುಸುರಾಮಾ ತಾಯಿ ಮಾತೀಗೆ ಕನಿಕಾರ ಪಟ್ಟು ಕಣ್ಣೀರು ಬುಟ್ಟಾ ಯಾಕೋ ಮಗುನೆ ಕನಿಕಾರಪಟ್ಟು ಕಣ್ಣೀರಬುಡುತ್ತೀಯಾ ಕಾರಣವೇನು?...

ತಾಯೀ ತಾಯಿ ಬಡುವೂರ ಮನಿಗೋಗಿ ಬಕ್ತ ನೋಡುತ್ತೀನಿ ಅಂತೀಯಾ ಬಡುವುರ ಮಲ್ಲಿ ಉಣಾಕನ್ನಿಲ್ಲ ಉಡಾಕೆ ಬಟ್ಟಲ್ಲಿ ತಾಯಿ ಅವರು ಒಂದೊಪ್ಪತು ಕೂಲಿ ಹೋಗುದೀರೆ ಗತಿಲ್ಲಿ ಅವರ ಜೀವನ ಆಗದಿಲ್ಲ. ಅಂತರ ಮನಿಗೆ ಹೋಗಿ ಬಕ್ತೇ ನೋಡ್ತೀನಿ ಅಂತಿದಿಯಾ ತಾಯಿ ತಾಯಿ ನೀನು ದೊಡ್ಡ ದೇವ್ತಿ ಬಡುವರ ಮನಿಗೋಗಿ ಬಕ್ತೆ ನೋಡಾಕ್ ನಿಂತಂಡ್ರೆ

ಅವ್ರಿಗೆ ಎಗೋ ಅನ್ನಿಲ್ಲ ಉಡೋಕೆ ಬಟ್ಟಲ್ಲ ॥।

ಕೂಲೀಗೋಗಬೇಕು ಅವರ ಜೀವನ ಸಾಗುಬೇಕು

ಬಡುವುರ ಮನೀಗೆ ನೀನೂ ಹೋಗಲು ಬೇಡಪ್ಪ

ಬಡುವರು ಮನೀಗೆ ನೀನೂ ಹೋಗಲು ಬೇಡವ್ವಾ

ದೊಡ್ಡೋರ್ ಮನೀಗೆ ನೀನೂ ಹೋಗು ನನ್ನವ್ವ

ದೊಡ್ಡರ ಮನೀಗೆ ನೀನು ಹೋಗೇ ನನ್ನಪ್ಪಾ

ನಿನಿಗೆ ಬಂಡೀಗಾತರ ದೊಡ್ಡ ಬಕ್ತೀ ಕೊಡುತಾರೆ.

ತಾಯಿ ಎಲ್ಲಮ್ಮ ದೇವರು ಜಗುಮಾ ಎಲ್ಲಮ್ಮನೋರಿಗೆ ಮಗ ಪರುಸುರಾಮ ಯೇಳುತ್ತಾನೆ. ಅಮ್ಮಾ ನೀನ್ ದೊಡ್ಡೋರ್ ಮನಿಗೋಗು ಬಂಡೀಗಾತ್ರ ಬಕ್ತಿ ವರುಸ್ತಾರೆ. ನೀನು ಕಣ್ಣು ಬುಟ್ರೆ ಬಿಡುವುರು ಸುಟ್ಟೋಗುತ್ತಾರೆ. ನೀನು ಬಕ್ತಿ ನೋಡುದಕ್ಕೆ ಬಡುವುರ ಮನೆ ಮುಂದೋಗಿ ನಿಂತ್ಕಂಬುಟ್ರೆ ಅವ್ರಿಗೆ ಕೂಲಿ ಹೋದ್ರೆ ಬಂತು ಇಲ್ಲಾಂದ್ರೆ ಜೀವುನಿಲ್ಲ. ಅಂತರ ಮನೆಗೆ ನೀನೋಗ್‌ಬುಟ್ಟು ಬಕ್ತೀ ನೋಡ್ತೀನಿ ಅಂದ್ರೆ ಕೊಡಾಕೆ ಅವ್ರತ್ರಿ ಯೇನು ಇರಾಕುಲ್ಲ. ಯೇನು ಕೊಡ್ಲುಲ್ಲ ಅಂತ ನೀನ್ ಕಣ್ಣು ಬುಟ್ರೆ ಅವುರು ಸುಟ್ಟೋಗ್ತಾರೆ. ಬಡುವುರು ಮನಿಗೋಗಬೇಡಾ ದೊಡ್ಡರ ಮನಿಗೋಗು ಅಂತ ಪರುಸುರಾಮೇಳುತ್ತಾರೆ.

ಆಗ ಯಲ್ಲಮ್ಮ ಹೇಳುತ್ತಾರೆ..

ಆಗ ಯಲ್ಲಮ್ಮ ಹೇಳುತ್ತಾರೆ..

ಮಗನೆ ಪರಸುರಾಮಾ ಬಡುವರ ಬಕ್ತಿ–ದೊಡ್ಡರ ಬಕ್ತಿ ನನಗೇನು ಗೊತ್ತೋ ಪರುಸುರಾಮಾ

ಮಗುನೆ ಬಡುವುರ ಮಾನೇಯ ಮಗುನೆ ಬಕತಿ ಚಂದಕಾಣೊ

ಮಗುನೆ ಬಡುವುರ ಮಾನೇಯ ಮಗುನೆ ಬಕತಿ ಚಂದಕಾಣೋ

ದೊಡ್ಡರ ಮಾನೇಯ ಮಗುನೆ ಮಾತು ಚಂದು ಕಾಣೋ

ದೊಡ್ಡರ ಮಾನೇಯ ಮಗುನೆ ಮಾತೂ ಚಂದ ಕಾಣೋ

ಬಡುವುರ ಮನೆಯಲ್ಲಿ ಅವುರ ಬಕತಿ ಚಂದ ಕಾಣೋ

ಅಂಗೇಯ ತಿಳಿಕೊ ಮಗನೆ ಪರುಸುರಾಮಾ..ಬಡುವುರ ಬಕ್ತಿ ಯಂಗ್ ಚಂದ ಅಂದ್ರೇ.. ದೊಡ್ಡೋರ್ ಬಕ್ತಿ ಯಂಗೆ ಅನ್ನಾದ್ ಹೇಳುತ್ತೀನಿ. ಬಡುವುರ ಬಕ್ತಿ ಯಂಗೆ ಚಂದ ಅಂದ್ರೆ .ದೊಡ್ಡೋರ್ ಬಕ್ತಿ ಯಂಗೇ ಚಂದ ಅಂದ್ರೇ ನಾನು ತಿಳಿದು ಯೇಳುತ್ತೀನಿ. ಪರುಸುರಾಮಾ ನನಿಗೆ ಬಡುವುರ ಬಕ್ತಿ ಅಂದ್ರೆ ನನಿಗೆ ಬಾಳ ಬಾಗ್ಯೇವಿದ್ದಂಗೆ. ಬಡುವುರು ಬಡುವುದು ದೊಡ್ಡರ ಮನಿಗೋದ್ರೆ

(ಬಡುವುರು,ದೊಡ್ಡೊರ ಮನಗೋದ್ರೆ ಹಾಸಿ ಗುಡಿಸಿ ಕೂರುಸ್ತಾರ? ಕೊಡ್ಸದಿಲ್ಲ. ಕೈಯತ್ತಿ ಸೆರಗು ಮಾಡ್ತಾರ ಬಡುವ್ರಿಗೆ? ಮಾಡದಿಲ್ಲಾ. )

ದೊಡ್ಡೋರ ಬಕ್ತೆ ಯೇನಂದ್ರೆ ಬಡುವರು ಮನೀಗೆ ಬಂದ್ರೆ ..ಮಾತಾಡುಸ್ತಾರೆ. ಬಾಯ್ತುಂಬಾವ ಮಾತಾಡ್ಸಿ ಬಾಯ್ತುಂಬುಆವ್

ಕಯ್ಯೀ ತುಂಬಾವ ಬಡುವ್ರಿಗೆ ಕೆಲ್ಸಾ ಕೂಡುವಾರೇ

ಬಡುವುರು ಬಂದಾರೆ ಹಾಸೀ ಗುಡುಸಾದಿಲ್ಲ ಕಾನೋ

ಬಿಡುವುದು ಕಂಡಾರೆ ಅವ್ರಿಗೆ ಸೆರಣು ಮಾಡಾದಿಲ್ಲಾ..

ಅದೇ ದೊಡ್ಡೋರು ಬಡುವುರ ಮನಿಗೇ ಬಂದ್ರೆ..ಬಿಡುವುದು ಯೇನು ಮಾಡುತ್ತಾರೆ. ಅಂದ್ರೆ ಪರುಸುರಾಮಾ ದೊಡ್ಡೋರು ಬಂದ್ರವೆ: ದೇವ್ರೇ ಬಂದಾಂಗಾತು ಅಂತವ ಬಡಬೇಕು ಕಯತ್ತಿ ಕಲಿಯಾಗಿ ಕೈಮುದಿದು

ಅವ್ರಿಗೆ ರಾಗೀ ಗುಡುಸೋಡ ಇವರು ದೊಡ್ಡವರಿಗೆ ಮಾತಾಡುತಾ

ಹಾಸಿ ಗುಡಸೋದು ಬಡುಪ್ರ ದೊಡ್ಡವರಿಗೆ ಮಾಡುತ್ತಾರೇ

ಬಡುವುರು ಮಾನೇಯ ಮಗನೆ ಬಗತಿ ಚಂದ ಕಾಣೋ

ದೊಡ್ಡೋರ ಮಾನೇಯ ಮಗನೆ ಬಗಿತಿ ಚಂದ ಕಾನೋ

ಆದಾದ್ ಮೇಲೆ ಮುಂದೆ ಬುಡುವುರ ಬಕ್ತಿ ಹೇಳುತ್ತಿನಿ ಪರಸರಾಮ,,,ಬಡುವುದು ಬಕ್ತಿ ಹೇಳುತ್ತೀನಿ ಪರಸುರಾಮಾ..ದೊಡೀರ ಬಕ್ತೀಯ ನೀನು ತಿಳುವಳಿಕೆ ತೆಗಳಪ್ಪಾ,

ದೊಡ್ಡೋರು ಬಡುವ್ರೂವೆ ಒಂದಾದೀಲಿ ತಿರುಗುವಾಗ ದೊಡೋರು ಬಡುವುರು ಒಂದೇ ಹಾದೀಲಿ ತಿರುಗುವಾಗ ಎದ್ರು ಬದ್ರಿಗೆ ಬಂದಾಗ ದೊಡ್ಡವರ ಕಂಡು ಬಡುವುರು ದಾರಿ ಬುಟ್ಟು ಅರುಗಾಗಿ ನಿತ್ಕಂತಾರೂ ಬಡುವಾರ ಕಂಡು ದೊಡ್ಡೋರು ದಾರಿ ಬುಟ್ ನಿತ್ಕಂತಾರೋ..

(ಮಗನೆ ಪರುಸುರಾಮಾ ದೊಡ್ಡವರು ಬಡುವುರು ಎದ್ರಿಗೆ ಬದ್ರಿಗ್ ಬಂದಾಗ ದೊಡ್ಡವರ ಕಂಡು ಬುಡುವುದು ದಾರಿ ಬಡ್ತಾರೋ .? ಬಡುವುರ ಕಂಡು ದೊಡ್ಡೋರು ದಾರಿ ಬುಡ್ತಾರೋ ಹೇಳು ದೊಡ್ಡೋರ್ ಮನಿಗೋಗು ಅಂದು ಬುಟ್ಟ್ಯಲ್ಲ?

ಆಗ ಪರುಸುರಾಮೇಳುತ್ತಾರೆ. ತಾಯಿ ತಾಯಿ  ದೊಡ್ಡೋರು ಬಡುವ್ರಿಗೆ ಬುಟ್ಟುರುಗಾಗದಿಲ್ಲ ದೊಡ್ಡೊರ ಕಂಡ್ರೆ ದೊಡ್ಡೋರ ಮತಾಕಂಡ್ರೆ ಬಡುವ್ರು ದಾರಿ ಬುಟ್ಟಿ ಅರುಗಾಗಿ ಕೈಯತ್ತಿ ಮುಗುದು ದೊಡ್ಡೊರಿಗೆ ದಾರಿ ಬುಟ್ಟಿ ನಿಂತ್ಕಂತಾರೆ. ದೊಡ್ಡರಿಗೆ ಬಡುವ್ರೆ ಕನವ್ವಾ ಕಲಿಯಾಗಿ ಕೈಮುಗಿಯಾದು  ಎಲ್ಲೂವೆ ಹಾದಿಲ್ ಬೀದೀಲುವೆ.

ಅಂತಾ ಬಡುವುನ ಬಕ್ತೀಗ ಬಾಳ ಚಂದ ಕಾಣವು

ಬಡುವೂನ ಮಾನೇಯ ಮಗುನೆ ಬಕ್ತೆ ಚಂದ ಕಾನೋ

ದೊಡ್ಡೊರ ಮಾನೇಯ ಮಗುನೆ ಮಾತೂ ಚಂದ ಕಾಣೋ

ತಾಯಿ ತಾಯಿ ನಿನ ಮಾತೇ ಸತ್ಯ. ಬಡುವುನ ಬಕ್ತಿ ಎಲ್ಲಿ ನೋಡಿದ್ರುವೆ ಬಾಳ ಚಂದ ಬಾಳ ಅಂದ ತಾಯೇ. ಇಲ್ಲಿಗ್ ಮುಂದೆ ನಿನ್ನಪ್ಪ ಬಡುವುರ ಮನಿಗೂ ಹೋಗು  ದೊಡ್ಡರ ಮನಿಗು ಹೋಗು ನನ್ ತಾಯೇ .

(ಇಲ್ಲಿಂದೀಚ್ಗೆ ತಿರುಗ್ ಮಾತಾಡಾದಿಲ್ಲ. ದೊಡ್ಡರ ಮನಿಗು ಹೋಗು ಬಡುವುರ ಮನಿಗು ಹೋಗು. ನೀನು ಕಣ್ಣು ಬುಟ್ರೆ–ಬಡುವುರ ಮಲ್ಲಿ ಯೇನು ಇಲ್ಲವಲ್ಲಾ, ಅವುರು ಯೇನು ಕೊಡ್ನುಲ್ಲ ಅನ್ನ ಸಿಟ್ಗೆ ಅವರ ಮೇಲೆ ಕಣ್ಣು ಬುಟ್ಟಿ–ಅವುರು ಸುಟ್ಪೋತರಲಲ್ಲಿ ಅನ್ನ ಕನಿಕಾರುಕ್ಕೆ ಬಡುವುರ ಮನಿಗೋಗುಬೇಡ, ದೊಡ್ಡರ ಮನಿಗೋಗು ಅಂದೆ ತಾಯಿ ನೀನಾಡಿದ್ ಮಾತು ಬಡುವುರ ಮನೆ ಬಕ್ತಿ ಚಂದಾಗಿ ಕಾಣುತ್ತದೆ. ಆತು ತಾಯಿ ದೇಸುದ್ ಮ್ಯಾಲೆ ಹೋಗಬಾ)

ಆಗೇಳುತ್ತಾಳೆ ಜನುಮಾದೇವಿ ಎಲ್ಲಮ್ಮ ಮಗನೇ ಪರುಸುರಾಮಾ ದೇಸುದ್ ಮ್ಯಾಲೇ ಬಡುವುರ ಬಕ್ತಿ ನೋಡಕೋಗುಬೇಕಾರೆ. ಈ ವೇಸುದಲ್ಲಿ ಹೋಗಾಗಕಾಗುದಿಲ್ಲ ಈ ಉಟೆ ಬಟ್ಟೆಲಿ ಹೋಗಾಕಾದಿಲ್ಲ. ನನ್ನ ಪೂಜೆಗೆ ದೊಡ್ಡರು ಬಡುವುರೆಲ್ಲ ನನ್ನ ಪೂಜೆಗೆ ಮಡಿ ಬಟ್ಟೇಲಿ ಬತ್ತಾರೆ. ಅದೇ ರೀತೀಲಿ ನಾನೂ ಹೋಗಾಬೇಕು. ಅದೇ ಲೆಕ್ಕದಲ್ಲಿ ನಾನು ಮಡೀಲಿ ಬಕ್ತಿ ನೋಡಾಕೆ ಹೋಗಬೇಕು. ಮಡಿ ಉಟ್ಕಂಡು ಯಾರ್ ಬಕ್ತಿ ಯಾರ್ ದುಡ್, ಯಾರ್ ಆತ್ಮ ಯಂಗೈತೆ ಅನ್ನದಾಗಿ ಪರೀಕ್ಸೆ ಮಾಡಾಕ್ ಹೋಗಬೇಕು. ಮುಂದೆ ಯೇನು ಮಾಡಬೇಕು ತಾಯೀ ಮುದಂದೆ ಯೇನ್ ಮಾಡುಬೇಕೂ. ಅಂದ್ರೇ ಕುಲಕೊಬ್ಬ ಕುಲಕೊಬ್ಬ ಜಾತಿಗೆ ಜಾತಿಗೊಬ್ಬ ಸೆರಣ ಅನ್ನಸ್ಕಂಡು ಬಾಳುತ್ತಾನೆ. ವಕ್ಲುಗುರ ಮುದ್ದಯ್ಯ, ಕುಂಬಾರ ಗುಂಡಯ್ಯ ಮಡಿವಾಳ ಮಾಚಯ್ಯ. ಹೊಲೇರ ಹೊನ್ನಯ್ಯ ಮಾದಿಗರ ಹರಳಯ್ಯ, ಬೇಡುರ ಕಣ್ಣಯ್ಯ, ಇವರೆಲ್ಲಿ ಜಾತಿಗೊಬ್ಬ ಜಾತಿಗೊಬ್ಬ ಸೆರಣಾ ಅನ್ನಿಸ್ಕಂಡು ಬಾಳುತ್ತಾರೆ. ಕುಲಕೊಬ್ಬ ಸೆರಣ ಅನ್ನಿಸ್ಕಂಡು ಬಾಳುತ್ತಾರೆ. ಮಡಿವಾಳ ಮಾಚಯ್ಯನ್ ಅಂತ ಸೆರಣುನ್ ಕೈಲಿ ನನ್ನ ಸೀರೆ ಮಡಿ ಮಾಡಿಸ್ಕಂಡೂ

ಮಡಿಯ ಉಟುಗಂಡು ಬಕ್ತಿ ನೋಡಾಕೋಗ್ತೀನಿ
ಮಡಿವಾಳ ಮಾಚಪ್ಪ ಹೋಗಿ ಕರಾದು ಬಾ ಹೋಗೂ
ನನ್ನಾ ಸೀರೇಯ ಅವನು ಮಡಿಯ ಮಾಡಲೀ

(ನನ್ನ ಪೂಜೆಗೆ ಮಡಿ ಮ್ಯಾಲ್ ಬತ್ತಾರಲ್ಲ ದೊಡ್ಡದು ಬಡುವುರು ಎಲ್ಲಿವ ಅವುರೆಂಗ ಬತ್ತಾರೆ ನನ್ನ ಪೂಜೆಗೆ ನಾನು ಆದೇ ಲೆಕ್ಕದ್ಲಿ ಮಡಿ ಮೈಲಿಗೇಲಿ ಹೋಗಬೇಕು. ಪರಸುರಾಮು ವಕ್ಲುಗುರು ಮುದ್ದಯ್ಯ, ಕುಂಬಾರ ಗುಂಡಯ್ಯ, ಬೇಡರ ಕಣ್ಣಯ್ಯ, ಮಡಿವಾಳ ಮಾಚಯ್ಯ, ಹೊಲೇರ ಹರಳಯ್ಯ, ಜಾತಿಗೊಬ್ಬ ಜಾತಿಗೊಬ್ಬ ಸೆರಣಾ ಅನ್ನಸ್ಕಂಡು ಬಾಳ್ತಾ ಅವ್ರೆ. ಈಗ ಮಡಿವಾಳ ಮಾಚಯ್ಯ ಸೆರಣಾ ಅವನು ಸೆರಣುನ ಕೈಲಿ ನನ್ನ ಸೀರೆ ಮಡಿ ಮಾಡಿಸ್ಕಂಡು ಬಕ್ತಿ ನೋಡಾಕೆ ಹೋಗಬೇಕು ಹೋಗಿ ಕರುದ್ ಬಾ,,,,)

ಮಡಿವಾಳ ಮಾಚಪ್ನ ಮನಿಗೆ ಹೋಗೂತವನಲ್ಲ
ಹೋಗಿ ಮಡಿವಾಳ ಮಾಚಪ್ಗೆ ಶಿವನೆ ಮಕವಾ ತೋರ್ರ್ಯಾವನೇ
ಮಡಿವಾಳ ಮಾಚಪ್ಪ ಬಂದು ಸೆರಣ ಮಾಡುತಾರೇ
ಯಾತುಕ್ ಬಂದಿರಪ್ಪ ಶಿವನೆ ಪರುಸುರಾಮಾ
ನನ್ನ ತಾಯಿ ಎಲ್ಲಮ್ಮ ನಿಮ್ಮ ಕರಿಯಾಕ್ ಕಳಿಸಾವರೆ
ನನ್ನ ಜಗುದಾ ಎಲ್ಲಮ್ಮ ನಿಮ್ಮ ಕರಿಯಾಕ್ ಕಳಿಸ್ಯಾವ್ರೆ

ಅಂವಾ ಸಕ್ತಿ ಜಗುದಾ ಎಲ್ಲಾಮ್ಮ ರೇಣುಕಾದೇವಿ ನನ್ನ ಮ್ಯಾಲೆ ದಿಟ್ಟಿಯಾಗಿ ನನ್ನ ಕರಿಯಾಕ್ ಕಳ್ಸಿದಾರೆ ನನ್ನ ಮ್ಯಾಲೆ ದಿಸ್ಟಿಯಾಗಿ ಪ್ರೀತಿಯಿಂದ ಕರೆಯಾಕ್ ಕಳ್ಸಿದಾರೆ ಅಂದ್ರೇ. ಬತ್ತೀನಿ ಪರುಸುರಾಮರೇ ಬರುತ್ತೀನಿ ಅವುರು ಮೀಸುಲು ಮಡಿ ಉಟ್ಟು

ಎಲ್ಲಮ್ಮದೇವೂರ ಬಳಿಗೆ ಓಡೀಬರುತಾರೇ
ತಾಯಿ ಎಲ್ಲಮ್ಮ ದೇವರ ಪಾದುಕೆ ಸೆರಣಾ ಮಾಡುತ್ತಾರೆ.

ಎಲ್ಲಮ್ಮ ದೇವಿರಿಗೆ ಶಿವನೆ ಸೆರಣಾ ಮಾಡುತ್ತಾರೆ

ಯಾಕೆ ಕರಿಸಿದಿರಿ ತಾಯಿ ಜನುಮಾ ಎಲ್ಲಮಾ

ಯಾಕೆ ಕರಿಸಿದಿರಿ ನನ್ನಾ ಅವೀ ಸೆಕ್ತ್ಯವರೇ

ಮಡಿವಾಳ ಮಾಚಪ್ಪನವರೇ ನೀನು ಜಾತೀಲಿ ಸೆರನ ಅನ್ನಿಸ್ಕಂಡು ಬಾಳುತ್ತಿದ್ದೀಯ. ನಿನ್ನಂತ ಸೆರಣುನ ಕೈಲಿ ನನ್ನ ಸೀರೆ ಮಡಿ ಮಾಡಿಸ್ಕಂಡು ದೇಸುದ್ ಮ್ಯಾಲೆ ಯಾರ್ ಬಕ್ತಿ ಯಾರ್ ದುಡ್ ಯಾರ್ ಆತ್ಮ ಯಂಗೈತೆ ಅನ್ನದಾಗಿ ನೋಡಾಕ್ ಹೋಯ್ತಿದ್ದೀನಿ. ನೀನು

ಅಯ್ಯ ನನ್ನಾ ಸೀರೇಯ ನೀನೂ ಮಡಿಯಾ ಮಾಡಯ್ಯ

ಅಯ್ಯ ನನ್ನಾ ಸೀರೇಯ ನೀನೂ ಮಡಿಯಾ ಮಾಡಯ್ಯ

ಮಡಿಯಾ ಉಟುಗಂಡು ದೇಸುದ್ ಮ್ಯಾಲೇ ಹೋಗುತ್ತೇವೆ

ಬಡುವುರ ಮನಿಗೋಗಿ ಅವರ ಬಕ್ತೀ ನೋಡುತೀನಿ

ದೊಡ್ಡರ ಮನಿಗೋಗಿ ಅವರ ಸತ್ಯ ನೋಡುತ್ತೀನೀ

ಬಕುತುವಂತರಿಗೆ ಹೋಗಿ ಬಾಗ್ಯೇವ್ ಕೊಟುತೀನಿ

ಆಂಕಾರ ಗರುವಾ ಇದ್ದಾರಾ ಅವುರ ಸಿರಿಯಾ ಮುರೀತೀನಿ

ನನ್ನ ಸೀರೇಯ ನೀನು ಮಡಿಯಾ ಮಾಡಯ್ಯ

ಸೀರೆ ಮಡಿ ಮಾಡು ಅಂದ್ ಗಳಿಗೇಲ್ಲಿ ಮಡಿವಾಳು ಮಾಚಯ್ಯ ಮನಸ್ಸು ಆನಂದವಾತು. ಇಂತಾ ತಾಯಿ ಸೀರೆ ಮಡಿ ಮಾಡಿದ್ರೆ ನನ್ನಲ್ಲಿರುವ ಗಾಚಾರ ಗಂಡಾಂತರ ಮಾಯವಾಗುತ್ತಾದೆ. ತಾಯಿ ತಾಯೀ ಬಕ್ತಿಯಿಂದ ಯಿಕ್ತಿಯಿಂದ ಬಾಳ ಸಂತೋಸುವಾಗಿ ಮಡೀ ಮಾಡುತ್ತೀನಿ ಕೊಡೀ ತಾಯಿ ಸೀರೇಯ ಅನ್ನದಾಗಿ ಕೇಳುತ್ತಾನೆ. ಆಗ ಮಡಿವಾಳ ಮಾಚಯ್ಯ ಬಕ್ತಿಯಿಂದ ಯಿಕ್ತಿಯಿಂದ ಆಡದ್ ಮಾತಿಗೆ ತಪ್ಪದೆ ಕೊಟ್ ಮಾತಿಗೆ ತಪುದೆ ಸತ್ಯುವಾಗಿ ಮಡಿ ಮಾಡುತ್ತೀಯೇನಯ್ಯ?

(ಆಡಿದ್ ಮಾತಿಗೆ, ಕೊಟ್ ಮಾತಿಗೆ ತಪ್ಪದೆ ಸತ್ಯುವಾಗಿ ಮಡಿ ಮಾಡ್ತೀಯೇನಯ್ಯ? ಮಾಡ್ತೀನಿ ತಾಯಿ ಮುಂದೆ ತಪ್ಪಿಬುಟ್ಟೆ ? ತಪ್ಪಾದಿಲ್ಲ ತಾಯಿ ನಾನು ನಿನ್ನ ಸೆರಣ ತಪ್ಪಾದಿಲ್ಲ ತಾಯಿ ಕೊಡಿ ತಾಯೀ )

ಈಗಾ

ಈಗ ಬೇವೀನ್ ವನಕೆ ಈಗ ಹೋಗೂತಾರಲ್ಲಿ

ಬೇವೀನ್ ತೋಪೀಗೆ ಶಿವನೆ ಹೋಗುತಾರಲ್ಲ

ಬೇವಿನ ತೋಪಿಗೋಗಿ, ಬೇವಿನ್ ಸೊಪ್ಪು ಮುರುದು ಈ ಸೊಂಟದಿಂದ ಕೆಳಿಕೆ ಎದಿಮಟ್ಟದಿಂದ ಕೈಳಗೆ ಅಯ್ಯ ಉಟ್ಕದ್ ನಿರ್ವಾಣದಲ್ಲಿ ನಿಂತಿದ್ದೀನಿ, ಸೀರೆ ಮಡಿ ಮಾಡಿ ಕೊಡಾವರ್ಗುವೆ. ಬೇವಿನ್ ಸಸ್ಯಿನಲ್ಲಿ ನನ್ನ ಮಾನ ಮುಚ್ಗಂಡ್ ನಿಂತುರ್ತೀನಿ ನೀನ್ ತಂದು ಕೊಡುವರ್ಗುವೆ. ಎಸ್ಟೊತ್ತಿಗೆ ತಂದುಕೊಡ್ತೀಯ? ತಂದು ಕೊಡ್ತೀನಿ ತಾಯಿ ಬೇವಿನ ಸಪ್ನಲ್ಲ ಕುತ್ಗಿಂದ ಕೆಳಿಕೆ ನೋಡಪ್ಪ ನೀನ್ ಮಡಿ ಮಾಡಿ ಕೂಡಾವರ್ಗು ಇಲ್ಲಿ ನಿಂತುರ್ತೀನಿ.. ಹೋಗಿ.

ಈಗ ಮಡಿವಾಳ ಮಾಚಪ್ಪ ಎಲ್ಲಿಮುನ ಸೀರೆ ತಗಂಡೋಗಿ ಮಡಿ ಮಾಡುದುಕ್ಕೆ ಮಗೆ ಮಡಿಕೆಗೆ ಹಾಕ್ಯವನೇ ಇಲ್ಲಿ ಜಗುಮಾದೇವಿ ಎಲ್ಲಮ್ಮ ಮಗ ಪರುಸುರಾಮನ ಕರೆದು ಯೇನೇಳುತ್ತಾಳೆ. ಮಗನೇ ಪರುಸುರಾಮಾ ಈಗ ಮಡಿವಾಳ ಮಾಚಯ್ಯ ಸೆರಣ ಸೆರಣ ಯಾಕೆ ಅವನ್ನ ಸರೆಣ ಸರೆಣ ಅಂತಾರೆ. ಅನ್ನದ ಪರೀಕ್ಸೆ ಮಾಡಿ ನೋಡುತ್ತೀನಿ. ಈಗ ಆ ಸೆರಣಾಂಗೆ ಕಸ್ಟ ಕೊಟ್ಟು ನೋಡುತ್ತೀನಿ. ಮಡಿವಾಳ ಮಾಚಯ್ಯಂಗೆ ಯೇನ್ ಕಸ್ಟಕೊಟ್ಟು ಅವನ ಆತ್ಮ ಅವುನ ದುಡ ಪರೀಕ್ಸೆ ಮಾಡಿ ನೋಡುತ್ತೇನೆ ನೋಡು ಮಗನೇ ಪರುಸುರಾಮಾ .

ಎಲ್ಲಮ್ಮ ದೇವರು ಇಲ್ಲಿ ಉದೊಉದೊ ಅನ್ನತಾರೆ
ಇಲ್ಲಿ ಉದೊಉದೊ ಅನ್ನುತ್ತಾರೆ ತಾಯಿ ಬಂಗಾರ ಚಲ್ಲುತ್ತಾರೆ.

ಅವನು ಸೆರಣನೊ ಅಲ್ಲವೊ ಅನ್ನದ ಪರೀಕ್ಸೆ ಮಾಡುದುಕ ತಾಯಿ ಇಲ್ಲಿ ಉದೊ ಉದೊ ಅಂದು ಬಂಡಾರ ಚಲ್ತಾರೆ ಅಲ್ಲ ಆ ಸೀರೆ ಮಗೆ ಮಡಿಕೆವಳುಗೆ ಚರ್ಮಾಗಿ ಹೋಯ್ತು ಸೀರೆ ಮಡಿ ತೆಗಿಯಿದಕ್ಕೆ ಸೀರೆ ಚರ್ಮಾಗಿ ಕುಂತಾದೆ ಮಡಿ ತೆಗೆಯುದುಕ್ಕೆ ಸೀರೆ ಎತ್ತಿ ನೋಡುತ್ತಾರೆ .

ಸೀರೆ ಚರ್ಮಾಗಿ ಹೋಗಾದೆ। ಮಾದೇವನೆ
ಸೀರೆ ಚರ್ಮ ಅಗೋಗಾದೆ
ದಟ್ಟನೆ ದರಣಿಗೆ ಬಿದ್ದಾ
ತಾಯಿ ಜನುಮಾ ಎಲ್ಲಮಾ ದೇವಿ
ಸೀರೆ ಚರ್ಮ ಆಗೋಗಾದೇ
ನಾನು ಮಡಿ ಯಂಗೆ ತೆಗಿಯಾಲಿ
ನಾನು ಮಡಿ ಯಂಗೆ ತೆಗಿಯಾಲಿ
ಅವು ಜನುಮ ಎಲ್ಲುಮದೇವಿ
ತಾಯಿ ಜನುಕೆಲ್ಲ ಮಾಯೆ ಅಲ್ಲೊ
ಆದಿ ಸಕ್ತ್ಯೆಲ್ಲಮ್ಮ ದೇವಾರು
ಗುರುವೇ ಆದಿಲ್ಲ ಹುಟ್ಟಿರೋದು
ಅವರ ಸೀರೆ ಚರ್ಮ ಆಗೋತ್ತಾದೆ
ನಾನು ಏನು ಕರ್ಮ ಮಾಡಿ
ಏನು ಕರ್ಮಾ ಮಾಡಿ
ನಾನು ಆಮ್ಮುನ ಸೀರೆಯ ಮುಟ್ಟೀದೆ
ನಾನು ಮುಟ್ಟಿದಂತ ಗಳಿಗೆಲ್ಲಿ
ಸೀರೆ ಚರ್ಮ ಆಗೋತಲ್ಲ
ನಾನು ಮುಡಿ ಯಂಗೆ ತೆಗಿಯಾಲೀ
ನಾನು ಮುಡಿ ಯಂಗೆ ತೆಗಿಯಾನಾ

ಅಯ್ಯ ಮಿಡಿಗೋಳ ಮಾಡುತಾನೆ

ಶಿವನೆ ಮಡಿಗೋಳ ಮಾಡುತಾನೆ

ಶಿವನೆ ಆಡಿಕೊಂಡು ಆಳುತಾನೆ

ಮುಂದೆ ಯೇನ್ ತಿಳಿದು ಚಿಂತುಸ್ತಾನೆ. ಹುಟ್ಟಿದ್ದು ಬೆಳುದದ್ದು ನನ್ನಲ್ಲಿ

ನನ್ನಲ್ಲಿ ಯೇನು ಕರ್ಮಿಲ್ಲ..ನನ್ನೆಡ್ತಿಲ್ಲೇನಾದ್ರು ಕರ್ಮಿದ್ರೆ .

ಅವಳ ಕರ್ಮಕ್ಕೆ ಶಿವಶಿವಾ । ಮಾದೇವನೆ

ಸೀರೆ ಚರ್ಮಾ ಆಗಿರಬಹುದು

ಆವಳಾ ಕರ್ಮಕ್ಕೆ

ಸೀರೆ ಚರ್ಮ ಆಗಿರಬೋದು

ನಾನು ಹುಟ್ಟಿದ್ಕು ಬೆಳುದುದ್ಕು ಅಲ್ಲಿಂದ ಇಲ್ಲವರ್ಗು ಏನ್ ಯಾವ್ ಜಾಗದಲ್ಲುವೆ ಕಳ್ಳತಾನ ಸುಳ್ಳು ಮೋಸ ಯೇನಾರ ಮಾಡಿದ್ರು ನನಗರಿವಿರಾದು.. ಅಂತದೇನು ನಾನು ಮಾಡಿಲ್ಲ ನನ್ನೆಡ್ತಿಲ್ಲೋನಾರ ದುಡ ಸರಿಯಿಲ್ದೆ ಕರ್ಮಿರಬೋದು ಅದ್ಕೆ ಆ ತಾಯಿ ಸೀರೆ ಚರ್ಮಾಗ್ಯದೆ ಅವುಳನ್ನ ಹೋಗಿ ತಿಳಿಬೇಕು ಅಂತಾವಾ..

ಹಡ್ತಿಯ ಬಳಿಗೆ ಬರುತ್ತಾನೆ ನನ್ ಮಡಿದಿ ಮಲ್ಲಿಗೆ ಮಹಾದೇವೀ

ನಿನಗೆ ಕೈಮುಗಿದು ಬೇಡುತ್ತೀನಿ

ನಿನಗೆ ಕೈಮುಗುದು ಬೇಡುತ್ತೀನಿ

ನಮ್ ತಂದೆಲ್ಲಿರೋ ಕರ್ಮಾ

ನಮ್ ತಾಯೀಲ್ಲಿರೋ ಕರ್ಮಾ

ಮಕ್ಳಿಗೆ ಬತ್ತಾದಂತೇ

ಗಂಡ್ಸನಲ್ಲಿರೋ ಕರ್ಮಾ

ಹೆಂಡ್ತೀಗೆ ಬತ್ತಾದಂತೇ

ಹಡ್ತಿಲ್ಲೀರೋ ಕರ್ಮಾ

ಗಂಡುಗ್ ಬತ್ತಾದಂತೇ

ನಿನಗೆ ಕೈಮುಗಿದು ಬೇಡುತೀನಿ

ನನ್ನಲ್ಲೇನು ಕರ್ಮಿಲ್ಲಿ ಅನ್ನದಾಗಿ ನನಗೆ ತಿಳಿದುಬಂದಿದೆ ಮಡಿದಿ. ನಿನ್ನಲ್ಲೇನಾರ ಇದ್ರೆ ಯೇಳು ತಿದ್ಕ್ಯಳಾನ ತಾಯಿ ಚರಣದಲ್ಲಿ ಕರ್ಮ ಬಿಚ್ಚಿಸಿಬುಟ್ಟಿ ಬೇಡ್ಕಳಾನ ಮಡಿದಿ

ಯೇನ್ ಸ್ವಾಮಿ ನನ್ನಲ್ಲಿ ಕರ್ಮಿರಾದು ನೀವೇ ಯೇಳಿ ಸ್ವಾಮಿ ಅಂತಾಳೆ

ನನ್ನಡ್ತಿ ಮಲ್ಲಿಗೆ ಮಾದೇವೀ

ಯಾರಾರ ಬಂದ್ಬಿಟ್ಟು

ಯಾರಾರ ಬಂದ್ಬಿಟ್ಟು

ನಿನ್ನ ಕಯ್ಯ ಹಿಡಿದುದ್ದುರೇಳು

ನಿನ್ನ ಕಯ್ಯ ಹಿಡಿದುದ್ದುರೇಳು

ನಿನ್ನ ಎದಿ ಮ್ಯಾಲ್ ಕುಂತುದುರೇಳು

ನಿನ್ನ ಸೆರುಗ ಹಿಡುದುದುರೇಳು

ತಾಯಿ ಎಲ್ಲಮ ದೇವೀಗೇ

ನೀನು ಮುಚ್ಚುಬ್ಯಾಡ ನನ್ನ ಮಡಿದೀ

ಮಡಿದಿ ಮಲ್ಲಿಗೆ ಬೂದೇವಿ..ನನ್ನಲ್ಲೇನು, ನನ್ನಾಮ್ಮದಲ್ಲೇನು ಕರ್ಮಿಲ್ಲ ಅನ್ನದು ನನಗೆ ಅರುವಾಗ್ಯದೆ. ನಿನ್ನಲ್ಲೇನಾರ ಕಮ್ರೀದ್ರೆ ಹೇಳು ಮಡಿದಿ. ಯೇನ್ ಸ್ವಾಮಿ ಅಂತದು..? ಯೇನು ಅಂದ್ರೆ.. ಯೇನುವಿಲ್ಲ,,,,ಯಾರಾರ ಬಂದ್ ನಿನ್ ಕೈ ಹಿಡಿದಿದ್ರೆ ಹೇಳು ಯಾರಾರು ಬಂದು ನಿನ್ ಸೆರಗ ಹಿಡಿದುದ್ರೆ ಹೇಳು ಯಾರಾರ ಬಂದು ಎದೆ ಮ್ಯಾಲ್ ಕುಂತುದ್ರೆ ಹೇಳು. ಸತ್ಯವಾಗಿ ನುಡಿ ಆ ತಾಯಿ ಎಲ್ಲಮ್ಮಗ್ಗೆ ಯೇಳಿ ಪರಿಯರಿಸಿಕೊಳ್ಳಾನ.

ಹೇಳಮ್ಮ ನನ್ನ ಮಡಿದಿ

ಹೇಳಮ್ಮ ನನ್ನ ಮಡಿದೀ

ಮಡಿದಿ ಮಲ್ಲಿಗೆ ಮಾದೇವಿಯ

ಶಿವನೆ ಕೈಮುಗಿದು ಬೇಡುತ್ತಾನೆ

ಶಿವನೆ ನಿಡುಗೋಳ ಮಾಡುತ್ತಾರೆ

ತನ್ನ ಮಡದಿಯ ಮುಂದುಗಾಡೆ

ಶಿವನೆ ಮುಡಿ ಉಳ್ಳಿ ಉಳ್ಳುತ್ತಾನೇ

ಸ್ವಾಮಿ ಸ್ವಾಮಿ ಬಕ್ತಿಯಿಂದ ಬೇಡುತ್ತೀನಿ ಸತ್ಯುವಾದ ಮಾತ ನುಡಿತ್ತೀನಿ ಕೈಯಿಡಿದ್ದೋರು ನಿಜ. ಬಂದು ಸೆರಗ ಹಿಡಿದಿದ್ದು ನಿಜ. ನನ್ ಎದೆ ಮಾಲೆ ಕುತಿರದು ನಿಜ. ಸತ್ಯವಾದ ಮಾತ ಹೇಳುತ್ತೀನಿ.

ಹೇಳ ಮಡಿದಿ ..

ಸ್ವಾಮಿ ಸ್ವಾಮಿ ಪಾಪುಕ್ಕೆ ಕರ್ಮುಕ್ಕೆ ಬಂದು ಕಯಿಡುದುದ್ ಅಲ್ಲಿ. ಸತ್ಯುಕ್ಕೆ ದರ್ಮುಕ್ಕೆ ಬಂದು ಹಿಡಿದೋಗ್ಯವರೆ. ಪಾವುಕ್ಕೆ ಕರ್ಮುಕ್ಕೆ ಬಂದು ಕಯಿಡಿದಿಲ್ಲ. ಸತ್ಯಕ್ಕೆ ದರ್ಮಕ್ಕೆ ಬಂದು ಸೆರಗ ಹಿಡಿದವರೆ. ಸತ್ಯಕ್ಕೆ ಬಂದು ನನ್ನೆದೆ ಮ್ಯಾಲೆ ಕೂತವರೆ ಯಾರಮ್ಮ

ನಿಮಿಗ್ಯಾತುಕು ಸ್ವಾಮೀ

ನಿಮಿಗ್ಯಾತುಕು ಸ್ವಾಮೀ । ಮಾದೇವನೆ

ನಿಮಿಗು ನಮಿಗು ಸ್ವಾಮಿ

ನಾವು ಮದಿವ್ಯಾಗೊ ಕಾಲದಲ್ಲಿ

ನಾವು ಮದಿವಾಗೋ ಕಾಲದಲ್ಲಿ

ಬಳೆಗಾರ ಸೆಟ್ಟೇಬಂದು

ಬಳೆಗಾರ ಸೆಟ್ಟೇಬಂದು

ನನಗೆ ಬಳೆಯ ತೊಡ್ಸಕೆ ಬಂದೂ

ನನಿಗೆ ಬಳೆಯ ತೊಡ್ಸಕೆ ಬಂದೂ

ನನಗೆ ಕಯ್ಯ ಹಿಡಿದಿದ್ದ

ನನಗೆ ಕಯ್ಯ ಹಿಡಿದಿದ್ದ

ಸ್ವಾಮಿ ಅಡ್ಲೂದಂಗೇರು ಬಂದು

ನಾವು ಮದಿವ್ಯಾಗೋ ಕಾಲದಲ್ಲಿ

ನನ್ನ ಅಡ್ಲುದಂಗೇರು ಬಂದು

ನನಗೆ ಸೀರೇ ಉಡ್ಸಾಕೆ ಬಂದೂ

ನನ್ನ ಸೆರಗ ಹಿಡಿದುದ್ರು ಸ್ವಾಮೀ

ಸ್ವಾಮಿ ನೀವು ಕಟ್ಟಿದು ತಾಳೀ

ಎದೆ ಮ್ಯಾಲೆ ಕೂತಾದೇ

ಇದು ನಿಜುದ್ ತಾಲೀ ಆದಾಗ

ಇದು ಬಗುವಂತ್ನ ಆಣೆಲ್ಲಿ

ನಿಮ್ಮ ಪಾದುದಾಗೆ ಮಾಸ್ವಾಮಿ.

(ಈಗ ಮಲ್ಲಿಗೆ ಮಾದೇವಿಯ ನೀನು ಸತ್ಯ ನುಡಿ ಸತ್ಯ ನುಡಿ. ಯಾವುದೇ ಆಚಾರ್ದಲ್ಲಿ, ಯಾವುದೇ ಕರ್ಮಿದ್ರೆ ಆ ತಾಯಿ ಎಲ್ಲಮು ದೇವ್ರು ಸೀರೆ ಚರ್ಮಸೈತಲ್ಲ ಆ ತಾಯಿ ಸೀರೆ ಮಡಿ ತೆಗಿವಾಗ ನಮ್ಮ ಕರ್ಮಿದ್ರೆ ಒಪ್ಕಾಳನ ನನ್ನಲೇನು ಕರ್ಮಿಲ್ಲ. ನಿನ್ನಲ್ಲೇನಾರ ಇದ್ರೆ ಸತ್ಯನುಡಿ ಯಾರಾರ ಮದು ಕಯಿಡಿದುದ್ರೇಳು. ಯಾರಾರ ಬಂದು ಸೆರಗಡುದುದೇಳು, ಯಾರಾರ ಬಂದು ಎದೆ ಮ್ಯಾಲೆ ಕೂತುದ್ರೇಳು..ಸತ್ಯ ನುಡಿ ನಿನ್ನ ಕರ್ಮ ನಾನು ಮುಚ್ಚುತ್ತೀನಿ. ಆ ತಾಯಿ ಮುಚ್ಚಕಳಾಕುಲ್ಲ. ಅವ್ಳಿಗೆ ತಪ್ಪೊಪ್ಪಕ್ಳಾನ. ಸತ್ಯ ನುಡಿ ಅಂದಾಗ.. ಸ್ವಾಮಿ ನಿಮಿಗೆ ನನಿಗೆ ಮದಿವ್ಯಾಗುವಾಗ ಒಬ್ನಗೆ ಕಯ್ನು ಕೊಟ್ಟಿದೀನಿ. ಒಬ್ನಗೆ ಸೆರಗ್ನು ಕೊಟ್ಟಿದ್ದೀನಿ. ಸತ್ಯವಂತ ಗಂಡ ಯಾರು ಅಂದ್ರೆ ಮುಂದೆ ಹೇಳ್ತಿನಿ. ಬಳೆಗಾರ ಸೆಟ್ಟಿ ಬಂದು ಕೆಯಿಡುದುದ್ದ ಬಳೆ ತೊಡ್ಸಕೆ ಅವ್ನಿಗೆ ಕೈಕೊಟ್ಟಿದ್ದೆ. ಅಡ್ಲುದಂಗೇರು ಬಂದು ಸೆರಗು ಹಿಡಿದುದ್ರು. ಸೀರೆ ಉಡ್ಸಾಕೆ ಅವ್ಳಿಗೆ ಸೆರಗು ಕೊಟ್ಟಿದ್ದೆ. ಸತ್ಯುವಂತ ಗಂಡ ಯಾರು ಅಂದ್ರೆ ನೀವು ಕಟ್ಟಿದ್ ತಾಲೀ )

ಎದೆ ಮ್ಯಾಲೆ ಕೂತ್ಕೈತೆ ಗುರುವೇ । ಮಾದೇವನೆ

ನನ್ನ ಸತ್ಯವಂತ ಗಂಡ ಅದೇ

ನನ್ನ ಎದೆ ಮ್ಯಾಲೆ ಕುತ್ಕೈತೆ ಸ್ವಾಮಿ

ನನ್ನ ಯಾರು ಮುಟ್ಟಿಲ್ಲ ಸ್ವಾಮಿ

ಕರ್ಮಕ್ಕೆ ನೀಡಲ್ಲ ಸ್ವಾಮೀ

ನನ್ನ ಜನುಮ ಎಲ್ಲಮದೇವಿ

ಅವುದು ಜಗುಕೆಲ್ಲ ಮಾಯವಲ್ಲ

(ಜನುಮ ಎಲ್ಲಮ್ಮದೇವೀ ಜಗುಕೆಲ್ಲ ಮಾಯೆ ನಾನಾವತಾರದ ಪುರುಸೆ. ಅಮ್ಮುನ್ನೆ ಹೋಗಿ ತಿಳೀರಿ. ನನ್ನಲ್ಲೇನಾರ ಇದ್ರೆ ಅವ್ರೆ ಹೇಳ್ತಾರೆ. ಅತುವಾ ನಿಮ್ಮಲ್ಲೇನಾರ ಇದ್ರು ಹೇಳ್ತಾರೆ. ಅಮ್ಮುನ್ನೆ ಹೋಗಿ ಕೇಳಿ ಯಂಗ್ ಮಡಿ ತೆಗೀಲಿ ತಾಯಿ ಅನ್ನದಾಗಿ ಹೋಗಿ ಬೇಡಿ. ಅಮ್ಮುನ್ನೇ ಬೇಡೋಗಿ)

ಈಗ ಮಡಿವಾಳ ಮಾಚಪ್ಪನವರು ಅಮ್ಮನವರ ಮನಿಗೆ ಹೋಗುತ್ತಾರೆ. ಅಮ್ಮನವರ ಮನಿಗೆ ಹೋಗುತ್ತಾರೆ. ಮಡಿವಾಳ ಮಾಚಪ್ಪನವರು ಎಲ್ಲಮದೇವರ ಬಳಿಗೆ ಹೋಗೀ

ಅಮ್ಮುನ ಪಾದುದ ಮ್ಯಾಲೇ । ಮಾದೇವನೆ

ಅಮ್ಮುನ ಪಾದುದ ಮ್ಯಾಲೇ

ಹೋಗಿ ಆತುಮೊರೆ ಬೀಳುತಾರೆ

ತಾಯಿ ಸೀರೆ ಚರ್ಮುಗಿ ಹೋಗ್ಯಾರೆ

ನಿನ್ನ ಸೀರೆ ಮಡಿಯಾ ತೆಗಿಯಾಕೇ

ಚರ್ಮುಗೀ ಹೋಗ್ಯಾದೇ

ನಾನು ಮಿಡಯಂಗೆ ತಗಿಲಮ್ಮ

ಅವ್ವ ಕೈಮುಗುದು ಬೇಡುತೀನಿ

ನಿನ್ನ ಮುಂದೆ ಮುಡಿ ಉಳ್ಳು ಉಳ್ಳುತ್ತೀನಿ

ಮಡಿಯ ಬಾರಾ ಮಾತಾ

ಮಡಿಯ ಬಾರ ಮಾತಾ

ಅವ್ವ ನೀನೇ ಹೇಳುಬೇಕು

ಯಾವ್ ಲೆಕ್ಕದ್ಲಲ್ಲಿ ಮಡಿ ತೆಗೀಬೇಕು ಅನ್ನದ ನೀವ್ವೆ ತಿಳುದು ಹೇಳುಬೇಕು. ನಾನು ಮಡಿ ತೆಗೀಬೇಕು. ಇಲ್ಲಿ ನನ್ನಲ್ಲಿ ಯೇನು ಕರ್ಮೈತೋ ಇಲ್ಲ ನನ್ನ ಮಡಿದಿಲೇನು ಕರ್ಮೈತೊ ನೀನೇ ಯೇಳಬೇಕು ತಾಯಿ. ನಾನು ಯಾವ್ದಾರು ಜಾಗ್ದಲ್ಲಿ ತಪ್ ಮಾಡಿದ್ರೆ ನಾನು ಮುಚ್ಚತೀನಿ. ನನ್ ಹೆಡ್ತೀ ಮುಚ್ಚತ್ತಾಳೆ. ನೀನು ಜನುಮಾದೇವಿ ಎಲ್ಲಮ್ಮ ನಿನಿಗೆ ಎಲ್ಲಾ ತಿಳಿದಿರುತ್ತದೆ. ನಾನಾವ್‌ತಾರದ್ ಪುರುಸೆ ನಿನಿಗೆಲ್ಲ ಗೊತ್ತಾತ್ತದೆ. ನೀನು ಬಿಟ್ಟೇಳು ತಾಯಿ ನೀನು ಮಡಿ ಬರಾ ಮಾತೇಳು ನಾನೆಂಗ್ ಮಡೀ ತಗೀಲಿ.

ನಿನ್ನ ಮುಂದೇ ನಾನು

ನಿನ್ನ ಮುಂದೇ ನಾನು

ಅಲ್ಲಿ ಪ್ರಾಣಾವ ಬಿಡುತೀನೀ

ಅಲ್ಲಿ ಪ್ರಾಣಾವ ಬಿಡುತೀನೀ

ಶಿವನೆ ಎಲ್ಲಮ್ಮದೇವ್ರಾ ಮಂದೆ

ಶಿವನೆ ಮುಡಿ ಉಳ್ಳ ಉಳ್ಳುತ್ತಾನೆ

ಅಯ್ಯ ನಿಡಿಗೋಳ ಮಾಡುತ್ತಾನೆ.

(ನೀನ್ ಯೇಳಬೇಕು ನಾನು ಮಡಿ ತೆಗೀಬೇಕು. ಇಲ್ಲಾಂದ್ರೆ ಪ್ರಾಣಾ ಕಳ್ಳತ್ತೀನಿ) ಈಗ ಮಡಿವಾಳ ಮಾಚಪ್ಪ ನಾನು ಹೇಳಿದ್ ತರ್ದಲ್ಲಿ ನೀನು ಮಡಿ ತೆಗಿಯಾಕೆ ಸಿದ್ದುವಿದ್ದು ಯೇನಪ್ಪಾ ? ಆಯ್ತು ತಾಯಿ ಎಲ್ಲಮ್ಮ, ನೀನ್ ಯಾವ್ ತರ್ದಲ್ಲಾರು ಹೇಳು ಯಾವ್ವಾರು ಕಸ್ಟ ಕೊಡು ಜನುಮಾ ಎಲ್ಲಮ್ಮ ನೀನೇಳಿದ್ ರೀತೀಲಿ ಮಡಿ ತೆಗೀತಿ ಕಸ್ಟನಾರು ಕೊಡು ಸುಕನಾರ ಕೊಡು. ನಿನ್ನ ಪಾದದಾಣೆ ತೆಗೀತೀನಿ.

ತಪ್ತೀಯಾ ಮಡಿವಾಲ ಮಾಚಪ್ಪ..? ತಪ್ಪಾದಿಲ್ಲಿ ತಾಯಿ ಈಗ ಜನುಮಾ ಎಲ್ಲಮದೇವಿ ಯೇನು ಕಸ್ಟ ಕೊಡುತ್ತಾರೆ. ಅವನ್ನ ಪರೀಕ್ಸೆ ಮಾಡಾದಿಕ್ಕೆ ಯೇನು ಕಸ್ಟ ಕೊಡುತ್ತಾರೇ ಮಡಿವಾಳ ಮಾಚಪ್ಪ ನಿನ್ನಡ್ತಿ ಮಲ್ಲಿಗೆ ಮಾದೇವೀ ಎಸ್ಟು ತಿಂಗುಳ ಬಿಮ್ಮನ್ಸಿ ಅಂತ ಕೇಳುತ್ತಾರೆ.

ನನ್ನ ಹೆಡ್ತಿ ಮಲ್ಲಿಗೆ ಮಾದೇವಿ, ತಾಯೀ ಏಳೂ ತಿಂಗುಳ ಬಿಮ್ಮನ್ಸಿ ಕನವ್ವ ಅಂತಾರೆ.

ನಿನ್ನೆಡ್ತಿ ಮಲ್ಲಿಗೆ ಮಾದೇವಿ, ತಾಯೀ .ಏಳೂ ತಿಂಗುಳ ಬಿಮ್ಮನ್ಸಿ ನನ್ನ ಸೀರೆ ಮಡಿ ನೀನು ಮಾಡಬೇಕಾರೇ ..

ಅವಳ ಕೊರಳಿನೀ ಕೊಯ್ಯಬೇಕು

ಅವಳ ಕೊರಳ ನೀ ಕೂಯ್ಯಬೇಕೂ । ಮಾದೇವನೆ

ನೀನು ನತ್ಲುವ ಬಿಸೀ ಬೇಕೂ

ಆ ನತುಲಾ ತಗುದೂ ನೀ

ನನ್ನ ಸೀರೇಗೆ ಬಣ್ಣ ನೀ ಕಟ್ಟುಬೇಕು

ನನ್ನ ಸೀರೇಗೆ ಬಣ್ಣ ನೀ ಕಟ್ಟುಬೇಕು

ನಿನ್ನ ಹೆಡ್ತಿ ಹೊಟ್ಟೆಯ ಬಗುದು

ಅಯ್ಯ ಏಳು ತಿಂಗ್ಳ ಮಗ ತೆಗೆದು

ಅಯ್ಯ ಬಾಳೆದೆಲೆ ಮೇಲೆ ಇಟ್ಟೂ

ನಿನ್ನ ಹೆಡ್ತಿ ಹೊಟ್ಟೆಯ ಕೂದೂ

ನೀನು ಬಾನೀಯ ಮಾಡುಬೇಕೂ

ನಿನ್ನ ಹೆಡ್ತಿ ಯದೇ ಕೂದು

ನೀನುಬಲ್ಲಕೊಪ್ಪ ಊಡಬೇಕು

ನಿನ್ನ ಹೆಡ್ತಿ ಕೈ ಕಾಲ ಕೂದು

ಒಲಿಗೆ ಸೌದೇ ಇಕ್ಕೂಬೇಕೂ

ನಿನ್ನ ಹೆಡ್ತಿ ತಲೆ ತೆಗುದು

ನಿನಗೆ ಗಂಜೀಯ ಮಾಡಬೇಕು

(ತಲೆ ಮಿದುಲೆ ತಗುದು ಗಂಜೀ ಮಾಡುಬೇಕು. ಯದೆ ಕೂದು ಒಲೆಕೊಪ್ಪು ಊಡಬೇಕು. ಹೆಡ್ತಯದಿಯ! ಮುಂದೆ ಬಲಿಕೊಪ್ಪು ಊಡಿದ ಮೇಲೆ ಸೌದೆ ಯಾವ್ದು? ನಿನ್ನೆಡ್ತಿ ಕೈಕಾಲ ಕೂದು ಸೌದೆ ಮಾಡಬೇಕು. ಮುಂದೆ ನಿನ್ನೆಡ್ತಿ ಹೊಟ್ಟೆ ಕೂದು ಹೊಟ್ಟೀಲಿದ ಏಳುತಿಂಗ್ಳು ಮಗ ತಗುದು ಬಾಳೆದೆಲೆ ಮ್ಯಾಲ್ ಮಡಗಿ. ಆ ಹೊಟ್ಟೆ ತೆಗುದು ಸೀರಿಗೆ ಬಾನಿ ಮಾಡಬೇಕು. ನೋಡಪ್ಪ ಇಸ್ಟು ಮಾಡಿದ್ರೆ ನನ್ನ ಸೀರೆ ಮಡಿ ಬತ್ತದೆ.)

ಬಕ್ತಿ ಪರೀಕ್ಸೆ ಮಾಡುದುಕೆ ಈಗ ಹೆಡ್ತಿ ಹಿಡಿದು ಕೂಯ್ ಬೇಕು. ನತ್ಲ ಬಸೀಬೇಕು. ಎಲ್ಲಮುದೇವಿ ಸೀರೆಗೆ ಬಣ್ಣ ಕಟ್ಟುಬೇಕು. ಹೆಡ್ತಿ ಯದೆ ಕೂದು ಒಲಿಕೊಪ್ಪು ಊಡಬೇಕು. ಯತ್ತಿ ಯದೆ ತಗುದು ಬಲಿಕೊಪ್ಪು ಊಡುಬೇಕು. ಹೆಡ್ತಿ ಕೈಕಾಲ ಕೂದು ಒಲಿಗೆ ಸೌದೆ ಮಾಡಬೇಕು. ಹೆಡ್ತೀ ಹೊಟ್ಟೆ ಬಗುದು ಏಳು ತಿಂಗ್ಳು ಮಗಾ ತಗುದು ಬಾಳೇದೆಲೆ ಮ್ಯಾಲ್ ಮಡಗಿ. ಹೊಟ್ಟೇಯ ಸೀರಿಗೆ ಬಾಗಿ ಮಾಡಬೇಕು. ಹೆಡ್ತಿ ಹೊಟ್ಟೆ ಒಳುಗೆ ಐತಲ್ಲ ಈಲಿ .ಈಲಿ ತೆಗೆದು ಸೀರೆಗೆ ಬಣ್ಣ ಕಟ್ಟುಬೇಕು. ಅಂಗ್ ಮಾಡಿದ್ರೆ  ಇಸ್ಟು ಮಾಡಿದ್ರೆ ಜನುಮ ಎಲ್ಲಮ ದೇವಿ ಸೀರೆ ಮಡಿ ಬತ್ತಿದ್ದಲ್ಲೊ ಶಿವನೇ .

ನೀನೇಳಿದಂತೆ ಸೀರೆ ಮಡಿ ತಗಿತೀನಿ ತಾಯೀ ನಿನ್ನು ಪಾದುದಾಣೆ ತಪ್ಪುದಿಲ್ಲ ಅಂತ ಆಣೆಯಿಟ್ಟುದಾನೆ .ಸೆರಣ ಬೂಮಡಂಡಲಕ್ಕೆ ಈಗ ಆಣೆಗೆ ತಪ್ಪೋಬೇಕೋ,,,ಮಡಿ ಮಾಡುಬೇಕೂ ಹೇಳಿರಪ್ಪ ದೇವಾ .

ತಾಯಿ..ತಾಯಿ .ಮಾಡುತ್ತೀನಿ, ಮಾಡುತ್ತೀನಿ ಆಡಿದ್ ಮಾತಿಗೆ ತಪ್ಪುದಿಲ್ಲ ಮಾಡ್ತಿನಿ ತಾಯಿ ಅಂತ ಕಣ್ಣೀರ್ ಬುಟ್ಕಂಡೂ..ಮನಿಗೆ ಬತ್ತಾನೆ. ಹೆಡ್ತಿ ಮಲ್ಲಿಗೆ ಮಾದೇವಿ ಏಳು ತಿಂಗ್ಳು ಬಿಮ್ಮನ್ಸಿ ಹೆಡ್ತಿ ಮಲ್ಲಿಗೆ ಮಾದೇವೀ  (ಪಟ್ಟಿ ಮಂಚೂದ್ ಮ್ಯಾಲೆ ಮಲಗಿದ್ದಾಳೆ ಬಂದು.

ಹೆಡ್ತಿ ಮಕವ ನೋಡೀ
ಹೆಡ್ತಿ ಮಕವ ನೋಡೀ । ಮಾದೇವನೇ
ಶಿವನೆ ಕಣ್ಣೀರ ಬುಡುತಾನೆ
ಇವಳ ಯಂಗೆ ಕುಯ್ಯಾದು ದೇವಾ
ಶಿವನೆ ಆಡಿಕಂಡು ಆಳುತಾನೇ
ಅಯ್ಯ ನಿಡಿಗೋಳ ಮಾಡುತಾನೆ
ಅಯ್ಯ ದೊರಿಗೋಳ ಮಾಡುತಾನೇ

ಹೆಡ್ತಿ ಕಣ್ಣು ಬುಟ್ಟು ನೋಡಿದ್ಲು. ಗಂಡುನ್ ಕೆನ್ನೆ ಮ್ಯಾಲೆ ಕಣ್ಣೀರು ಸುರುದು ಹರುದು ಹೋತಾ ಅವೆ.

ಸ್ವಾಮಿ ಸ್ವಾಮೀ,,,ಗಂಡುನ ಪಾದ ಮುಟ್ಟಿ ಎರಡು ಕೈಮುಗುದು ಕೇಳುತಾಳೇ ಎಲ್ಲಮ್ಮ ದೇವೀ ಅತ್ರ ಯೇನ್ ವರಾ ಸಿಕ್ತು ಸ್ವಾಮೀ  ಸೀರೇ ಮಡೀ ತೆಗೀಬೇಕಾರೆ ಯೇನೂ ವರಾ ಸಿಕ್ತು ಸ್ವಾಮೀ ಅಮ್ಮ ಯೇನ್ ಹೇಳಿದ್ರು ಸ್ವಾಮಿ ಅಂತ ಹೇಳಿ ಬೇಡುತ್ತಾಳೆ.

ಹೆಡ್ತಿ ಮಲ್ಲಿಗೆ ಮಾದೇವೀ ಎಲ್ಲಮ್ಮ ದೇವೀ ಸೀರೆ ಮಡೀ ತಗುದು ಕೊಡುತ್ತೀನಿ ಅಂದೆ. ಮಡೀ ತೆಗೆಯುದುಕ್ಕೆ ಉಪ್ಪಿನ ಮಡಿಕೆ ಬೇಯಾಕಾಕಾಗಿದ್ದೆ. ಸೀರೆ ಚರ್ಮಾ ಆಗಿ ಹೋದು ಮ್ಯಾಲೆ ಆ ಚರ್ಮಾ ಸೀರೆ ಮಾಡಬೇಕಾದ್ರೆ. ಸೀರೆ ಮಾಡ್ಕ್ಯಂಡು ಮಡಿ ಮಾಡಬೇಕಾರೆ.

ನಿನ್ನ ಕೊರಳ ನಾ ಕುಯ್ಯಬೇಕೂ। ಕಲ್ಯಾಣಾದೇವಾ
ನಿನ್ನಾ ಕೊರಳಾ ನಾ ಕುಯ್ಯಬೇಕೂ
ನಿನ್ನ ನೆತ್ಲುಲ್ಲ ತೆಗಿಯಬೇಕು
ಎಲ್ಲಮ್ಮ ದೇವಿ ಸೀರಿಗೇ
ಎಲ್ಲುಮ್ ದೇವೀ ಸೀರೀಗೆ
ಬಣ್ಣ ನಾನೂ ಕಟ್ಟಬೇಕೂ
ನಿನ್ನ ಯದಿಯಾನಾ ಕುಯ್ಯಬೇಕು
ಯಾದಿಯಾ ನಾ ಕುಯ್ಯಬೇಕೂ
ಯಾದಿಯಾ ನಾ ಕುಯ್ಯಬೇಕೂ
ಬಲಿ ಕೊಪ್ಪ ಉಡೂಬೇಕೂ
ನಿನ್ನ ಕೈಕಾಲ ಕೂದು ನಾನೂ
ನಿನ್ನ ಕೈಕಾಲ ಕೂದು ನಾನೂ
ಒಲಿಗೆ ಸೌದೆ ಮಾಡುಬೇಕು
ನೀನು ಏಳು ತಿಂಗಾಳ ಬಸಿರಿ।
ನೀನು ಏಳು ತಿಂಗಾಳ ಬಸೀರಿ।
ನಿನ್ನ ಹೊಟ್ಟೇಯ ಬಿಗಿಯಬೇಕು
ನಿನ್ನ ಹೊಟ್ಟೇಯ ಬಿಗಿಯಾಬೇಕು
ಏಳು ತಿಂಗಳ ಮಗುವ ತೆಗೆದೂ
ಬಾಳೆ ಎಲಿಯ ಮೇಲೆ ಮಡುಗಬೇಕು
ನಿನ್ನ ಹೊಟ್ಟೆಯ ತಗುದು ಮಡಿದಿ।
ಕನ್ಣೀರ್ ಬಾನೀ ಮಾಡಬೇಕು
ನಿನ್ನ ಈಲೀಯ ತಗುದು ನಾನೂ
ಸೀರೀಗೆ ನೀಲಿ ನಾನು ಮಾಡುಬೇಕೂ

ಮಡಿದಿ ಮಡಿದ ಮಲ್ಲಿಗೆ ಮಾದೇವಿ. ಮಡಿದಿ ಮಲ್ಲಿಗೆ ಮಾದೇವಿ. ನಿನ್ನ ಕೊರಳು ಕೂಡು. ನತ್ಲ ಬಸೀಬೇಕು. ಜಗುಮ ಎಲ್ಲಮ ದೇವಿಗೆ ರಕ್ತ ತಗುದು ಬಣ್ಣ ಕಟ್ಟಬೇಕು. ಎದೆ ಕೂಯ್ಯಬೇಕು ಒಲಿಕೊಪ್ಪ ಊದುಬೇಕು. ನಿನ್ನ ಕೈಕಾಲು ಕೂದು ಒಲಿಗೆ ಸೌದೆ ಮಾಡುಬೇಕು. ಮುಂದೆ. ಹೊಟ್ಟೇ ಬಗುದು ಏಳು ತಿಂಗುಳ ಮಗಾ ತಗುದು ಬಾಳೇದೆಲೆ ಮ್ಯಾಲೆ ಮಡುಗಬೇಕು. ಹೊಟ್ಟೇ ತಗುದು ಸೀರಿಗೆ ಬಾನಿ ಮಾಡಬೇಕು. ಹೊಟ್ಟೆ ಒಳುಗೀರೋ ಈಲಿ ತಗುದು ಜನುಮ ಎಲ್ಲಮ್ಮ ದೇವೀ ಸೀರಿಗೆ ನೀಲಿ ಮಾಡುದ್ರೆ. ಅಮ್ನ ಸೀರೆ ಮಡಿ ಬತ್ತದಲ್ಲೇ ನನ್ನ ಮಡಿದಿ

ಯಂಗ್ ಕುಯ್ಯಲೆ ನಿನ್ನಾ

ಯಂಗೆ ಕುಯ್ಯಲೆ ನಿನ್ನಾ। ಕಲ್ಯಾಣದೇವ

ಕಣ್ಣೀರ ಬಿಡುವತಾನೇ

ಆಡಕೊಂಡಳವನಾನೇ

ಮುಡಿ ಉಳ್ಳಿ ಉಳ್ಳುತ್ತಾನೇ

ಹೆಡ್ತೀಯ ಪಾದ ಮುಟ್ಟೀ

ಸೆರಣಾನ ಮಾಡುತಾನೇ

ಏನು ಮಾಡಾಲೆ ಮಡಿದಿ

ಆಗ ಹೆಡ್ತಿ ಮಲ್ಲಿಗೆ ಮಾದೇವಿ ಎದ್ದು ಗಂಡನ್ ಪಾದಾಮುಟ್ಟಿ ಸೆರಣಾರ್ತಿಯಾಗಿ ಸೆರಣು ಮಾಡಿ ಸ್ವಾಮೀ ಈ ಜಲ್ಮ ಯಾವತ್ತಿದ್ರು ಒಂದಿಲ್ಲ ಒಂದಿನ ಸಾಯಾದೆಯಾ ವರ್ತು ಬದುಕಾದಲ್ಲ.

(ಯಾವಾಗಿದ್ರು ಒಂದಿಲ್ಲ ಒಂದಿನ ಸಾಯಾದೆ ವರ್ತು ಇದೇನು ಬದುಕಾದಾ ಯಾವತ್ತಿದ್ರು ಸತ್ತು ಬುಡಬೇಕೇವರ್ತು ಬದಕಿದಲ್ಲಿ ಇದು)

ಅಂತದಾ ಆ ಜನುಮಾ ಎಲ್ಲಮದೇವಿ ನನ್ನನ್ನ ಬಲಿ ಕೇಳಿದ ಮ್ಯಾಲೆ,,,ಎರಡು ದುಡ ಎರಡು ಮನಸು ಮಾಡಬ್ಯಾಡಿ ಕುಯ್ಯಬೇಕೋ ಬ್ಯಾಡೋ ಯಂಗ್ ಕೊಲೆ ಮಾಡ್ಲಿ ಅನ್ನ ಮನಸು ಎರಡು ಮನಸಿದ್ರೆ ಆ ತಾಯಿ ಜನುಮಾ ಎಲ್ಲಮದೇವಿಗೆ ಒಪ್ಪಾಗುದಿಲ್ಲ ಸ್ವಾಮಿ. ಅಮ್ಮನೆ ಒಪ್ಪಗಬೇಕಾರೆ ನೀನು ಒಂದೇ ದುಡದಲ್ಲಿ ಮಾಡಪ್ಪ. ಇವತ್ತಿಲ್ಲ ನಾಳೆ ಸಾಯೋ ಜಲ್ಮ ಇದು.

ಒಂದೇ ದುಡದಲ್ಲಿ ನನ್ನ ಕುಯ್ಯೆ ನನ ಗಂಡಾ

ಶರಾಣು ಶರಣವ್ವ ತಾಯಿ ಶರಾಣು ಮಾದೇವಿ॥

ಒಂದೇ ದುಡದಲ್ಲಿ ನನ್ನ ಕುಯ್ಯೋ ನನುಗಂಡಾ

ನಾನು ಮುತ್ತೆದೆ ಮೇಲಾಗಿ ಶಿವನೆ ಮುಂದಾಗೊಗುತೀನಿ.

ಎರಡೂ ಮನಸೀಗ ಗಂಡ ಮಾಡಬೇಡಪ್ಪ

ಒಂದೇ ದುಡದಲ್ಲಿ ನನ್ನ ಕುಯ್ಯೋ ನನ್ನ ಗಂಡಾ

ಎರಡು ದುಡ ಎರಡು ಮನಸು ಮಾಡಬೇಡ. ಇಕ್ಲೋ ಬ್ಯಾಡ್ವೋ ಅಂತ ಇಕ್ಕಿದ್ರೆ ಮನಸಿಗೆ ನಿರಾಳಗಾಕುಲ್ಲ ಮನುಸ್ರುಗೆ ಹೊಟ್ಟೆ ತುಂಬಾಕುಲ್ಲ

(ಮನುಸ್ರುಗೆ ಇಕ್ಲೋ ಬ್ಯಾಡ್ವೋ ಅನ್ನದಾಗಿ ಎರಡು ಮನಸಿದ್ರೆ ಬಂಡರಿಗೆ ಹೊಟ್ಟೆ ತುಂಬಾಕುಲ್ಲ. ಒಂದೇ ಮನಸ್ನಲ್ಲಿ ದುಡವಾಗಿ ಒಂದ್ ಮುದ್ದೆ ಇಕ್ಕತಳೆ ಒಂದು ಮುರ್ಕು ಇಕ್ಕಿ ಮನುಸ ನಿರಾಳವಾಗಿ ಉಣ್ತಾನೆ. ಇಕ್ಕೋರ್ ಮನಸು ನಿರಾಳಾಗಿದ್ರೆ ಉಣ್ಣೋರ್ ಮನಸು ನಿರಾಳಾಗಿರ್ತದೆ. ಒಂದ್ ಮುರ್ಕಿಗೆ ಹೊಟ್ಟೆ ತುಂಬ್ತದೆ.

ಒಂದೇ ದುಡದಲ್ಲಿ ನನ್ನ ಕೊಲ್ಲೊ ನನುಗಂಡಾ

ಜನುಮ ಎಲ್ಲಮ್ಮೆಗ್ಗೆ ನಾನು ಬಲಿಯಾಗೋಗುತೀನಿ.

ತಾಯಿ ಸೆರಣಲ್ಲಿ ಬಲಿಯಾದ್ರೆ ಹಾಡೋ ದಾಸ್ರು ಹೊಗಳೊ ದಾಸ್ರು ಬೂಮಂಡುಲದಲ್ಲಿ ಮೆರುಸ್ತಾರೆ. ನಾವ್ ಮರೆಯಾದ್ರು ನಮ್ಮ ಸೆರಣೆ ಬೂಮಂಡುಲದಲ್ಲಿ ಮರಿತ್ತಾರೆ.

ಒಂದೆ ದುಡದಲ್ಲಿ ನನ್ನ ಕೊಲ್ಲೋ ನನಾ ಗಂಡಾ

ಅಗ ಗಂಡಾ ಹೆಡ್ತಿ ಮೀಸ್ಲು ಮಾಡಿ ಬುಡುತ್ತಾರೆ. ಎಲ್ಲಮು ದೇವಿ ಬಲಿಯಾ ಗುಡುಕ್ಕೆ ಗಂಡಾ ಹೆಡ್ತಿ ಮೀಸ್ಲು ಮಡಿ ಉಟ್ಟೂ.. ಮನೆ ಒಳುಗೆ ದೂಪು ದೀವಿಗೆ ಐಬೋಗುವಾಗಿ ಮಾಡಿ ತಾಯಿ ತಾಯಿ ನಿನುಗೆ ಸೇರಿದ್ದು ಕಸ್ಟ ನಸ್ಯೆಲ್ಲಾವ. ಮುಂದೆ ಏನಾರ ಸುಖ ಕೂಡು ತಾಯಿ. ಎಲ್ಲಾ ನಿನ್ನ ಪಾದಾ ಮುಟ್ಟಿದ್ದು ತಾಯಿ ಅಂತ ಹೇಳಿ. ಮೀಸ್ಲು ಮಡಿ ಉಟ್ಟು ದೂಪು ದೀವಿಗೆ ಮಾಡಿ ಪಟ್ಟೆ ಮಂಚುದು ಮ್ಯಾಲೆ ಕುಯ್ಯೋ ಗಂಡಾ ಎಲ್ಲಮುದೇವಿ ಸೀರೆ ಮಡಿ ತಗಿ ಗಂಡಾ ಅಂತೇಳಿ ಪಟ್ಟೆ ಮಂಚುದ್ ಮ್ಯಾಲೆ ಮಲುಗುತ್ತಾಳೆ. ಆಚಾರ್ ಮನಿಗೋಗಿ, ಅಚಾರ್‍ರೆ ಮನಿಗೋಗಿ ಹೊಸ್ ಚೂರಿ ತತ್ತಾನೆ. ಗುಂಬಾರ್‍ರು ಗುಂಡಯ್ಯನ್ ಮನಿಗೋಗಿ ನತ್ಲ ಬಿಸಿಯಾಕೆ ಹೊಸೂ ಬಾನೀ ತತ್ತಾನೆ. ದೇವಿ ಎಲ್ಲುಮ್ಗೆ ಬಲಿ ಕಡಿಯಾಕೆ ಹೊಸ ಬಾನಿ ತೆಗಂಡು ಹೊಸ ಚೂರಿ ಕೈಲಿಡಕಂಡು

ಕುಯ್ಯಕ್ಕೆ ಹೋಗುತಾನೇ
ಕುಯ್ಯಕ್ಕೆ ಹೋಗುತಾನೇ । ಕಲ್ಯಾಣದೇವಾ
ಕಯ್ಯೇ ಬರುವಾದೇ ಇಲ್ಲಾ
ಹೆಡ್ತೀಯ ಯಾದೆ ಮ್ಯಾಲೇ
ಒಡ್ಡಿಕಂಡು
ಯಂಗೆ ಕೂಯ್ಯಾಲೆ ನಿನ್ನ
ಯಂಗೆ ಕೂಯ್ಯಾಲೆ ಮಡಿದೀ
ಕಯ್ಯೇ ಬರುವಾದೇ ಇಲ್ಲಾ
ಹೆಡ್ತೀಯ ಯಾದೆ ಮ್ಯಾಲೇ
ಕಣ್ಣೀರ ಬುಡುವತಾನೇ
ಆಡಿಕೊಂಡಳುವ ತಾನೇ
ಮುಡಿ ಉಳ್ಳ ಉಳ್ಳುತ್ತಾನೇ

(ಹೆಡ್ತಿ ಮಲ್ಲಿಗೆ ಮಾದೇವಿ ಯಂಗ್ ಕುಯ್ಲಿ ನಿನ್ನ ಅನ್ನದಾಗಿ ಯೇಚ್ನೆ ಮಾಡುತ್ತಾನೆ. ಕಯ್ಯದುಕ್ಕೆ ಕಯ್ಯೇ ಬರಾದಿಲ್ಲ. ಯಂಗ್ ಕುಯ್ಲಿ ಅನ್ನದಾಗಿ ಹೆಡ್ತಿ ಎದೆ ಮ್ಯಾಲೆ ಕಣ್ಣೀರ್ ಬುಡುತ್ತಾನೆ. ಹೆಡ್ತಿ ಮುಂದುಗಡೆ ಮುಡಿ ಉಳ್ಳ ಉಳ್ತಾನೆ. ಮಡಿವಾಳ ಮಾಚಪ್ಪ ಆಗ ಹೆಡ್ತಿ ಮಲ್ಲಿಗೆ ಮಾದೇವಿ ಎದ್ದು ಗಂಡುನ ಪಾದುಕ್ಕೆ ಸೆರಣು ಮಾಡಿ ಸ್ವಾಮೀ ಒಬ್ರಿಗೆ ಇಕ್ಲೋ ಬ್ಯಾಡೋ ಅನ್ನದಾಗಿ ಇಕ್ಕಿದ್ರೆ ಹೊಟ್ಟೆ ತುಂಬಾಕುಲ್ಲ ಯಾಕೇ ಎರಡು ದುಡ ಮಾಡ್ತಾ ಇದ್ದೀರಿ. ಯಾವತ್ತಿದ್ರು ಸಾಯೋ ಜಲ್ಮ ಇದು. ಆ ತಾಯಿ ಬಲಿ ಕೇಳಿದ್ ಮ್ಯಾಲೆ ಒಂದೇ ದುಡದಲ್ಲಿ ಕೊಟ್ ಬುಡಿ ಸ್ವಾಮಿ. ಮುಂದೆ ಆ ತಾಯಿಗೇ ಸೇರ್‍ಕ್ಯಳಿ ನಮ್ಮುದೇನಿದ್ರುವೆ..)

ಇಕ್ಕುಬೇಕೂ ಬ್ಯಾಡ್ವೋ ಅನ್ನದಾಗಿ ಇಕ್ಕೋರ್ಗೆ ಎರಡು ದುಡ ಇದ್ರೆ ಉಣ್ಣೋರ್ ಮನಸು ಹೊಟ್ಟೆ ತುಂಬೋದಿಲ್ಲ. ಇಕ್ಕೋರ್ ಮನಸು ಕರೆಕರೆಲಿದ್ರೆ ಉಣ್ಣೋರ್ ಮನಸು ಕರೆಕರೆಲಿರುತ್ತಾರೆ. ಊಟ ಮಾಡವರ್ ಮನಸು ಕರೆಕರೆಲಿರುತ್ತಾರೆ. (ಮುದ್ದೆ ತಂದಿಕ್ಕರ ಮನಸು ಆದಡಿಗೆಗೆ ಬಂದವುಲ್ಲ ಅನ್ನ ಕರೆ ಕರೆಲಿದ್ರೆ ಉಣಾವರ ಮನಸು ಮೂರ್ ಮುದ್ದೆ ಇಕ್ಕಿದ್ರುವೆ ಕರೆಕರೆಲಿರುತ್ತಾರೆ. ಹೊಟ್ಟೆ ತುಂಬದಿಲ್ಲ. ಒಂದೇ ದುಡವಾಗಿ ಮುಕನ ಇಕ್ಕಿ ನೋಡಿ. ಅದೇ ಐಬೋಗ )

ಒಂದೇ ದುಡುದಲ್ಲಿ ನನ್ನ ಕೊಲ್ಲೋ ನನುಗಂಡಾ । ಶರಾಣು ಶರಣವ್ವ ತಾಯಿ
ಶರಾಣು ಮಾದೇವೀ

ಜನುಮಾ ಎಲ್ಲಮುಗೆ ನಾನು ಬಲಿಯೇ ಆಗುತೀನಿ
ಅದು ಸಕ್ತ್ಯಲ್ಲ ತಾಯೀ ಆದೀಲುಟ್ಟದೋರೂ
ಜಗುಮಾ ಎಲ್ಲಮ್ಮ ತಾಯಿ ಜನುಕೆ ಮಾಯಲ್ಲೇ
ಅವಳ ಮಾಯಾ ಬಲ್ಲೋದು ಶಿವನೆ ಯಾರು ಇಲ್ಲುವಲ್ಲೆ
ಅಮ್ಮುನ ಮಾಯಾ ಬಲ್ಲೋರು ಜಗುದಲ್ಲ್ಯಾರು ಇಲುವಲ್ಲಾ
ಒಂದೇ ದುಡದಲ್ಲಿ ನನ್ನ ಕೊಲ್ಲೋ ನನುಗಂಡಾ

ನಮ್ಮ ಜಾತಿಗೆ ನಾವು ಸೆರಣಾ ಅನ್ನಿಕ್ಕಂಡು ಬಾಳಿದು ಮ್ಯಾಲೇ
ನಮ್ಮ ಕುಲುಕ್ಕೆ ನಮ್ಮ ಜಾತಿಗೆ ಮಡಿವಾಳ ಮಾಚಪ್ಪನರು ಸೆರಣು ಸೆರಣು ಅನ್ನದಾಗಿ ಎಲ್ಲಿ ಕುಲು ಬಂದು ಸೆರಣು ಅಂತದೆ. ನಮ್ಮಲ್ಲಿರ ಬಕ್ತಿಗೆ ಯಕ್ತಿಗೆ ಸೆರಣು ಅಂತರೆ ಸ್ವಾಮಿ. ಈ ಸೆರಣೆ ತಪ್ಪೋಯ್ತದೆ ಮುಂದೆ. ಒಂದೇ ದುಡದಲ್ಲಿ ಕೂದ್ರೆ ಈ ಸೆರಣೆ ಇರ್ತದೆ ಬೂಮಂಡುಲದಲ್ಲಿ ಕುಯ್ಯಪ್ಪ ಅಂತಾಳೆ )
ಹೆಡ್ತಿ ಆಡೋ ಮಾತಿಗೆ ಮಡಿವಾಳ ಮಾಚಪ್ಪ ಕುಯ್ಯಿಕೆ ಕಯ್ಯಿ ಬರ್ತಿನ್ರುಲ್ಲಿ. ಈಗ ಹೆಡ್ತಿ ಆಡೋ ಮಾತಿಗೆ ಒಂದೆ ದುಡ ಉಂಟಾಯ್ತು.

ಒಂದೆ ದುಡದಲ್ಲಿ ನೋಡೋ । ಕಲ್ಯಾಣದೇವಾ
ಹೆಡ್ತಿ ಕೊಳ್ಳ ಕುಯ್ಯಿತಾನೆ
ಹೆಡ್ತಿ ಕೊಳ್ಳ ಕುಯ್ಯಿತಾನೇ
ರಕ್ತಾವ ಬಸಿಯುತಾನೇ
ಎಲ್ಲಮ್ ದೇವಿ ಸೀರೀಗೆ
ಜನುಮಾ ಎಲ್ಲಮದೇವೀ
ಜನುವಾ ಎಲ್ಲಮನರೀಗೆ
ಅಮ್ಮುನ ಸೀರೀಗೆ ಬಣ್ಣ ಕಟ್ಟತಾನೇ
ಹೆಡ್ತೀಯ ಎದೇಯ ಕೂದು
ಬಲಿಕೊಪ್ಪ ಊಡುತ್ತಾನೇ

ಹೆಡ್ತಿ ಕೈಕಾಲ ಕೂದು

ಹೆಡ್ತಿ ಕೈಕಾಲ ಕೂದು

ಬಲಿಗೆ ಸೌದೆ ಮಾಡುತಾನೇ

ಹೆಡ್ತಿ ಹೊಟ್ಟೆಂನೂ ಕೂದೂ

ಏಳು ತಿಂಗಳ ಮಗುವ ತಗದೂ

ಸುಳಿ ಬಾಳೆದೆಲೆ ಮ್ಯಾಲೆ ಮಡಗೀ

ಬಾಳೆದೆಲೆ ಮ್ಯಾಲೇ

ಮಗುವನ್ನು ಇಡುತಾನೇ

ಹೆಡ್ತೀ ಹೀರಿಯ ತಗೂದು

ಸೀರೇಗೆ ನೀಲಿಯ ಕಟ್ಟುತ್ತಾನೇ

ಹೆಡ್ತಿ ಹೊಟ್ಟೆಯ ಬಗುದು

ಸೀರಿಗೆ ಬಾನಿಯ ಮಾಡುತಾನೇ

ಹೆಡ್ತಿ ತಲೆಯ ಮಿದುಳಾ

ಸೀರೆ ಗಂಜಿ ಮಾಡುತ್ತಾನೇ

ಇವನಾತ್ಮ ಇವುನ್ ದುಡ ಆ ತಾಯಿಗ್ ಮೆಚ್ಚುಸ್‌ಬೇಕಾರೆ ಅವುನ್ ಹೆಡ್ತಿ ತಲೆ ಮಿದುಲೆ ತಗುದು ತಾಯಿ ಸೀರೇಗೆ ಗಂಜಿ ಮಾಡ್ತಾನೆ. ಎದೆ ಕೂದು, ಹೆಡ್ತಿ ಯದೆ ಕೂದು ಬಲಿಕೊಟ್ಟು ಊಡ್ಡ. ಹೆಡ್ತಿ ಕೈಕಾಲಕೂದು ಬಲಿಗೆ ಸೌದೆ ಮಾಡ್ದ. ಹೆಡ್ತಿ ಹೊಟ್ಟೆ ಕೂದು ಏಳು ತಿಂಗಳು ಮಗಾ ತಗುದು ಬಾಳೆದೆಲೆ ಮ್ಯಾಲೆ ಮಡಗಿ ಹೊಟ್ಟೆ ತಗುದು ಸೀರೆಗೆ ಬಾನಿ ಮಾಡ್ದ. ಹೆಡ್ತಿ ಹೊಟ್ಟೆ ಉಳುಗೆ ಈಲಿ ಇರ್ತದಲ್ಲ. ಕರಿ ಈಲಿ, ಆ ಈಲಿ ತಗುದು ಸೀರಿಗೆ ನೀಲಿ ಮಾಡ್ದ.

ಅಮ್ಮನ ಹೇಳ್ಕೆಯಂತಾತುಮ, ಇವನೇನು ಮಾಡುತ್ತಾನೆ. ಅಮ್ಮ ಯೇನು ಹೇಳಿದ್ಲೊ ಅದೇ ತರ ಆಗುತ್ತಾದೆ. ಬಲಿಗೆ ಸೌದೆ ಅನ್ನದಾಗಿ ಕೈಕಾಲ ಕೂದ್ರೆ ಸೌದೆ ಆಗುತಾದೆ. ಹೊಟ್ಟೆ ಬಗುದು ಹೊಟ್ಟೆ ತೆಗೊಂಡೋದ್ರೆ ಬಾನಿ ಆಗುತ್ತಾದೆ. ಹೆಡ್ತಿ ಈಲಿ ತಗುದು ನೀಲಿ ಮಾಡಾಕೋದ್ರೆ ಈರೇ ನೀಲಿಯಾಗುತ್ತದೆ.ಬಾಳ ಬಕ್ತಿಯಿಂದ, ಯುಕ್ತಿಯಿಂದ ಎಲ್ಲಮ ದೇವಿಗೆ ಒಪ್ಪುಸ್ತಾನೇ .

ಈಗ ಉಗಿನ ಮಡಿಕೆಲ್ಲಿ ಹೋಗಿ ನೋಡುತವನಲ್ಲಾ| ಶರಾಣು ಶರಣವ್ವ ತಾಯಿ

ಶರಣು ಮಾದೇವೀ

ಎಲ್ಲಮ್ಮ ದೇವರ ಸೀರೆ ಪೂಜು ತವರಲ್ಲಾ

ಐಬೋಗವಾಗಿ ಸೀರೆ ಮಡಿ ಬಂದೋಯ್ತು ಅವತಾರ ಪರೀಕ್ಷೆ ಮಾಡಾದುಕ್ಕೆ ಕಸ್ಟ ಕೊಟ್ಟುದಾರೇ. ಸೀರೆ ಮಡಿ ಬಂದೋಯ್ತು. ಸೀರೆ ಐಬೋಗುವಾಗಿ ಪೂಜೆ ಮಾಡಿ ಮೆರವಳಿಗೆ ಮ್ಯಾಲೆ ಅಮ್ಮುಗೆ ಒಪ್ಪುಸ್ಬೇಕು ಅಂತಾ

ಅಲ್ಲಿ ಸೀರೇ ರವಿಕೇಯ ತಗುದು ಪೂಜುತವನಲ್ಲಾ

ಸೀರೇ ರವಿಕೇಯ ಶಿವನೆ ಪೂಜುತವನಲ್ಲಾ

ಅಮ್ಮನಾ ಸೆರಣಲ್ಲಿ ದೂಪಾ ಆಕೂತವನಲ್ಲಾ

ಆ ತಾಯಿ ಸೆರಣೇ..ದೂಪು ದೀವಿಗೆ ಮಾಡುವಾಗ ಆ ದೂಪುದೊಳಗೆ ಅಮ್ಮ ನಿಂತವ್ರೆ. ನಿಜವಾಗಿ ದೂಪು ತೋರುತ್ತಾವ್ರೆ. ಮಡಿವಾಳ ಮಾಚಪ್ಪ ದೂಪುದ್ ಮ್ಯಾಲೆ ನಿಂತ್ಗಂಡು ದೂಪುದೊಳಗೆ

ನಿನ್ನಾ ದುಡುವಾ ಒಪ್ಪೀದೆ ನಿನ್ನ ನಿಜುವಾ ಒಪ್ಪೀದೆ

ನಿನ್ನ ಸತ್ಯ ಒಪ್ಪೀದೇ ನಿನ್ನ ನಿಜುವಾ ಒಪ್ಪೀದೇ

ಯಾರಾತುಮ, ಯಾರ ದುಡ ಯಂಗೈತೆ ಎಂಬುದಾಗಿ ಪರೀಕ್ಸೆ ಮಾಡುದಕ್ಕೆ ಒಂದಿಸ್ಟು ಕಸ್ಟ ಕೊಟ್ಟುದ್ದೆ ಮಡಿವಾಳ ಮಾಚಪ್ಪ ನಿನ್ನ ಸತ್ಯ, ನಿನ್ನ ದುಡ ಬೂಮಂಡಲದೊಳಗೆ..ನೀನು ಬಕ್ತಿವಂತ, ಯಕ್ತಿವಂತ ನಿನ್ನ ಸೆರಣೆ ಬೂಮಂಡಲದೊಳಗೆ ಮೆರೀಲಿ. ಸೆರಣಾರ್ತಿಯಾಗಿ ಬೆಳೀಲಿ. ಈಗ ನೀನು ನಾನೇಳಿದಾಗೆ ನಡಕಂಡಿದ್ದೀಯ ಈಗ ನಾನು ನೀನು ಕೇಳಿದ ವರಾ ಕೊಡಾಕೆ ನಾನು ತಯಾರಿದ್ದೀನಿ, ಮೂರು ವರಾ ಕೊಡ್ತೀನಿ, ಯೇನ್ ಬೇಕು ಕೇಳ್ಕೋ, ಬಾಗ್ಯೇವು ಕೇಳ್ತಿಯೊ? ಸಿರಿತಾನ ಕೇಳ್ತಿಯೋ? ಇಲ್ಲಾ ದೊರೆತಾನ ಕೇಳ್ತಿಯೋ? ಏನು ಬೇಕು ಕೇಳು ಇಲ್ಲಿಂದೀಚ್ಗೆ ಕೊಟ್ಟೋಯ್ತಿನಿ ಮಡಿವಾಳ ಮಾಚಪ್ಪ

ಇವುನಿಗೆರಿವಲ್ದು, ತಿಳಿವಲ್ದು, ಅವತ್ತಿನ ದಿನ ತಾಯಿ ಮಡಿವಾಳ ಮಾಚವ್ಗೆ ಯೇನು ಬೇಕಾದು ಕೊಡಾಕ್ ತಯಾರಿದ್ಲು ಸಿದ್ದುವಾಗಿದ್ಲು. ಇವುನೋಗಿ ಯೇನ್ ವರಾ ಕೇಳುತ್ತಾನೆ. ಮಡಿವಾಳ ಮಾಚಯ್ಯ ತಾಯಿ ತಾಯಿ ನಿನ್ನ ಹೇಳಿಕೆಯಂತೆ ನಾನು ನಡೆದಿದ್ದೀನಿ. ನನ್ನ ಹೇಳಿಕೆಯಂತೆ ನೀನು ವರಾ ಕೊಡು ತಾಯೀ ಅಂತಾ ಬೇಡಿದಾಗ ಆಯ್ತು ಕನಪ್ಪಾ ಯೇನ್ ವರಾ ಕೇಳ್ತಿಯೊ ಕೇಳು ಅಂದಾಗ .

ಸೆರಣ ಮಡಿವಾಳ ಮಾಚಪ್ಪ ಸಿರಿ ಬಾಗ್ಯೇವ್ನೆ ಕೇಳಿದ್ರು. ಕೋಡೀರೂ ಇವ್ನು ಯೇನ್ ವರಾ ಕೇಳುತ್ತಾನೆ ತಾಯಿ..ತಾಯೀ

(ತಾಯಿ ನೀನು ಸೀರೆ ಯಂಗ್ ಮಡಿ ಮಾಡು ಅನ್ನದಾಗಿ ನಂಗೆ ಕಯತ್ತಿ ಕೊಟ್ಟೆ, ಜನಮಾರಿ ಸೀರೆಯನ್ನ ಮಡಿ ಮಾಡು ಅನ್ನದಾಗಿ ಯಂಗ್ ಕೆಯತ್ತಿ ಕೊಟ್ಟೆ ಅಂಗೆ ಮೇಲುಕುಲುವೆಲ್ಲ..)

ನಿನ್ನ ಜಾತಿ ಕುಲಕ್ಕೆಲ್ಲ ಮಡಿ ಮಾಡೋಕ್ ಕೊಡುಲವ್ವ

ಜಾತಿ ಕುಲಕ್ಕೆಲ್ಲ ಮಡಿ ಮಾಡೋಕ್ ಕೊಡುಲವ್ವಾ

ಇದೊಂದು ವರವನ್ನು ನನಗೆ ನೀಡು ಮಾದೇವೀ

(ನೀನೆರಿಗೆ ಸೀರೆ ಮಡಿ ಮಾಡು ಅನ್ನದಾಗಿ ಕೊಟ್ಟೆ, ಒಬ್ರು ಮಡಿ ಮಾಡಕ್ಕೆ ಬತ್ತರೆ ಇನ್ನುಳುದರೆಲ್ಲ ಕೂಲಿ ಮಾಡಾಕೆ ಹೋಯ್ತರೆ. ಆದ್ದರಿಂದವ ಲೋಕದ್ ಕುಲವೆಲ್ಲ ನಮ್ಮ ಕುಲದ ಎಲ್ರುಗು ಮಡಿ ಮಾಡಾಕ್ ಕೊಡ್ಲಿ. ಆಯ್ತು ಕನಪ್ಪ ಮುಂದೆ ಇನ್ನೆರಡು ವರವೆ ಯೇನ್ ಕೇಳ್ಕತ್ತೀಯ ಕೇಳ್ಕೊ)

ಮುಂದೇನು ವರಾ ಕೇಳುತಾನೆ ಮಡಿವಾಳ ಮಾಚಪ್ಪ, ಜನಮಾದೇವಿ ಎಲ್ಲಮ್ಮನ್ನ ತಾಯಿ ತಾಯೀ ಮೇಲೆ ಕುಲದ ಬಟ್ಟೇನೆಲ್ಲಿ ಮಡಿ ಮಾಡುತ್ತೀನಲ್ಲ

ಅವರ್ ಮಲ್ಲಿ ಹಬ್ಬ ಆದಾರೆ ನನ್ನ ಹೆಡಿಗೇ ತುಂಬಾಲೀ

ಅವುರ್ ಮಲ್ಲಿ ಹಬ್ಬ ಆದಾರೆ ನನ್ನ ಹೆಡಿಗೇ ತುಂಬಾಲೀ

ನನ್ನ ಹೆಡಿಗೇ ತುಂಬಾಲಿ ನನ್ನ ಗಡಿಗೆ ತುಂಬಾಲಿ

ಅವುರಿಗೆ ಬಂದೀನ ಹಬ್ಬದರೆ ನನಗೆ ಮೂರ್ ದೀನಬ್ಬಾಗಲೀ

(ಏಳು ಕುಲದ ಜಾತಿ ಮೇಲು ಕುಲದ ಜಾತಿ ಮನೇಯ ಬಟ್ಟೆ ಮಡಿ ಮಾಡ್ತೀನಲ್ಲಿ ತಾಯಿ ಅವುರ ಮಲ್ಲಿ ಹಬ್ಬಾದರೆ ನಾನು ಹೆಡಿಗೆ ಹೊತ್ತೊಂಡೋದ್ರೆ ನನ್ನ ಹೆಡಿಗೆ ತುಂಬಲಿ..ಗಡಿಗೆ ತುಂಬಲಿ..)

ಅವರಿಗೆ ಬಂದೀನ ಹಬ್ಬಾದರೆ ನನಗೆ ಮೂರ್ ದೀನ ಬ್ಯಾಗಲೀ

ಇದೊಂದು ವರವನ್ನ ನನಗೆ ನೀಡು ನನ ತಾಯೀ

ಮಡಿವಾಳ ಮಾಚಪ್ಪ ಅವರ್ ಮಲ್ಲಿ ಹಬ್ಬ ಆದರೆ ನಿನ್ನ ಹೆಡಿಗೆ ತುಂಬುಬೇಕಾ..? ಆಯ್ತು ಕನಪ್ಪ ಬ್ಯಾಕಿ ಎಲ್ಲ ಜಾತಿಗು ಇಕ್ಕುವಾಗ ಕುಳುವಾಡಿದೆ ಇವುರುಗೆಲ್ಲ ಇಕ್ಕುವಾಗ ಮನಸು ಬಂದ್ತರಾ ಇದ್ದುವೆ ನಿನಿಗೆ ಇಕ್ಕುವಾಗ ಬಂದುಡವಾಗಿ ಇಕ್ಲಿ. ಈಗ ಮಡಿವಾಳ್ರಿಗೆ ನಿಮ್ಮಲ್ಲಿ ಹಬ್ಬಾದ್ರೆ..

ಇವತ್ತು ನಾನು ಚಂದಾಗಿ ಮಡಿವಾಳ್ನ ಹೆಡಿಗೆ ತುಂಗಿದ್ರೆ ನಾಳೆ ದಿನ ನನ್ನ ಸೀರೆ ಬಟ್ಟೆ ವೈನಾಗಿ ಮಡಿ ಮಾಡ್ತಾನೆ. ಅಂತವ ಬಂದ್ ದುಡದಲ್ಲಿ ಒಂದು ಮನಸ್ನಲ್ಲಿ ಹೆಡಿಗೆ ತುಂಬ್ತಾರೆ. ಅವನ್ ಮ್ಯಾಲೆ ಬಂದ್ ದಿಸ್ಟಿ ಇರ್ತದೆ. ಎಸ್ಟೊತ್ತಿಗೆ ಅವನ ಹೆಡಿಗೆ ತುಂಬ್ತದೆ ಅಂತ ಹೇಳಿ ಇದು ಎರಡನೆ ವರಾ ಆಯ್ತು.

ನಿನ್ನ ಹೆಡಿಗೆ ತುಂಬಾಲಿ ನಿನ್ನ ಗಡಿಗೇ ತುಂಬಾಲಿ

ಮೂರ್ ವರದಲ್ಲಿ ಎರಡೊರ ಆಯ್ತು. ಮೂರನೇ ವರಾ ಯೇನ್ ಕೇಳಪ್ಪ. (ಈಗ ಮೂರ್ ವಾರದಲ್ಲಿ ಎರಡೊರ ಆತು. ಬಟ್ಟೆ ಮಡಿ ಮಾಡೋದೊಂದು ಹಬ್ಬಾದ್ ದಿನ ಹೆಡಿಗೆ ತುಂಬೋದೆರಡು. ಇನ್ನು ಮೂರನೆ ವರ ಯೇನು ಕೇಳು)

ಯೇನ್ ಕೇಳುತ್ತಾನೆ ಅಂದ್ರೆ . ತಾಯಿ ತಾಯಿ ನಿಮ್ಮ ಹೇಳಿಕೆಯಂತೆ ನಾನು ನೆಡೆದ್ದಿದ್ದೀನಿ. ನನ್ನ ಹೇಳಿಕೆಯಂತೆ ವರಾ ಕೊಡಾಕೆ ನೀವ್ ನಿಂತಿದ್ದೀರಿ ಇಲ್ಲ ನನ್ನೆಡ್ತಿ ಕೊಲೆ ಮಾಡಿದ್ದೀನಲ್ಲ ಸೀರೆ ಕೊಡಾಕೆ ನಾವು ದಂಪತಿಗಳು ಎರಡಾಳೂ ಕೆಯತ್ತಿ ಕೊಡಬೇಕು

ನನ್ನಾ ಸತ್ತಾ ಮಡಿದೀಯ ನೀನು ಪಡಾದು ಕೊಡಬೇಕು

ಸತ್ತಾ ಮಡದೀಯ ನೀನು ಪಡಾದು ಕೊಡಬೇಕು

ನನ್ನ ಮಡುದೀವೆ ನಾನೂವೆ ನಿನಗೆ ಸೀರೆ ಕೊಡಬೇಕೂ

ಇದೊಂದು ವರವನ್ನ ನನಗೆ ನೀಡೂ ನಮ್ಮವ್ವಾ

ಆತು ಮಡಿವಾಳ ಮಾಚಪ್ಪ ನಿನ್ನೆಡ್ತಿ ಮರುಣುವಾಗಿಲ್ಲ ನಿನ್ನ ಪರೀಕ್ಷೆ ಮಾಡುದಕ್ಕೆ ವನವಾಸ ಕಸ್ಟ ಕೊಟ್ಟುದ್ದೀನಿ.

ಮೂಡು ಮರಾಗಿ ನೀನು ಮಕವಾ ಹಾಕಪ್ಪ

ಸೂರ್ಯ ದೇವರು ಮೂಡಿ ಬತ್ತಾರಲ್ಲಿ ಆಮಕರನಾಗಿ ಮಕಾ ಹಾಕ್ಯಂಡು,ಎರಡು ಕಯ್ನ ಮುಕ್ಕಂದು.ನಿಂತ್ಕೋ ಆಮೇಲೆ ತಿರುಗಿ ನೋಡು ಅಂದಾಗ ನೋಡು ಮಡಿವಾಳ ಮಾಚಪ್ಪ ಮೂಡು ಮಾರಾಗಿ

ಮಕಾ ಹಾಕ್ಯಂಡೂ ಬಗುವಂತುನ ಜಾನದಲ್ಲಿ ಎಲ್ಲಮುದೇವುರು ಜಾನದಲ್ಲೀ ಕಯ್ನು ಮುಕ್ಕಂದು ಕಣ್ಣು ಮುಚ್ಗಂಡು ತಾಯಿ ಬೇಡುವಾಗ

ಅಮ್ಮ ಉದೋ ಉದೋ ಅನ್ನುತ್ತಾರೆ ತಾಯಿ ಬಂಡಾರ ಚಲ್ಲುತ್ತಾರೆ

ಅಮ್ಮ ಉದೋ ಉದೋ ಅನ್ನುತ್ತಾರೆ ತಾಯಿ ಬಂಡಾರ ಚಲ್ಲುತ್ತಾರೆ

ಅಮ್ಮನ ಮಾಯ ಅಮ್ಮನ ಮಯಿವೆ ಜಗುದಲ್ಲಿ ಯಾರಿಗೂ ಅರುವಾಗುದಿಲ್ಲ.

(ಎಲ್ಲಮ ದೇವುರು ಅಂದ್ರೆ ಯಾರು? ಬೂಮಂಡ್ಲಕ್ಕೆ.. ಊರು ಮುಂದ್ಲು ಗ್ರಾಮದೇವತೆ ಅಂದ್ರೆ ಯಾರು? ಊರು ಮುಂದ್ಲು ಮಾರಿ ಅಂದ್ರೆ ಯಾರು?

ಅ ಮೈಸೂರು ಚಾಮುಂಡಿ ಅಂದ್ರೆ ಯಾರು? ನನಾವ್‌ತಾರುದ್ ಪುರುಷೆ. ಬೂಮಂಡ್ಲುದ ಮಾರಿ ಮಸಿಣಿ ಎಲ್ಲಿ ಅವುಳೆ. ಚಂಡಿ ಚಾಮುಂಡಿ ಎಲ್ಲಿ ಅವುಳೆ ಅದು ಹಿಂದ್ಕೆ ಐತೆ ಮಾರಿ ಮಸಿಗೆ ಆಗಬೇಕಾರೆ ಅಮ್ಮ ಈ ಪುರುಸುರಾಮ ಹುಟ್ಟಿದಾಗ ಈ ಎಲ್ಲನು ದೇವ್ರಿಗೆ ಗಂಡಿಲ್ಲ. ಆ ಸೆರಣೆ ಮಾಡ ಭಕ್ತಿವಂತೆ ..ಪತಿವ್ರತೆ ತಾನದಲ್ಲೇ ಅವರೆ. ಯೇನ್ ಅವತಾರ್‌ದಲ್ಲಿ ಆ ಕೃಷ್ಣ ಪರಮಾತ್ಮ ಮಾಡಿರದು ಪರುಸುರಾಮನ್ ಅವತಾರ್ದಲ್ಲಿ ಮೊದಲು ಇಲ್ಲಿ ಎಲ್ಲಮ್ಮದೇವ್ರು ಹೊಟ್ಟೆಲ್ಲಿ. ಪರಸುರಾಮ ಹುಟ್ಟುಬೇಕಾರೆ ಈ ಕೃಷ್ಣ ಪರಮಾತ್ಮ ಮಾಡಾಂತ ಅರಣ್ಯದಲ್ಲಿ ..ಈ ಕೃಷ್ಣ ಪರಮಾತ್ಮನ ಕಯ್ಯಲ್ಲಿ ಬಲಗೈಲಿ ಚಕ್ರವಾಗಿ ಎಡಗೈಲಿ ರಾಮಬಾಣ ಕ್ರಷ್ಣದೇವ್ರಗೆ ಬಲಿಗೈಲಿ ಚಕ್ರವಾಗಿ ಎಡಗೈಲಿ ರಾಮಬಾಣ ಆ ಬಾಣ ಆಕಡೇ ಈ ಕಡೇ ಇಟ್ಟು ಮಲಗಿದ್ರು ಈ ಬಾಣಗಳೆದ್ದು ನಾನು ಸೂರ, ನಾನು ಸೂರ ಅಮತ ಹೊಡೆದಾಡ್ತಾವೆ. ಆಗ ಕೃಷ್ಣ ಪರಮಾತ್ಮ ಕಣ್ಬುಟ್ಟು ನೋಡಿದ್ರಲ್ಲಿ ಈ ಬಾಣಗಳು ನಾನು ಸೂರ ನಾನು ಸೂರ ಅನ್ನದಾಗಿ ಹೊಡೆದಾಡ್ತಾವೆ. ಆವಾಗ ಎರಡು ಬಾಣನು ಎರಡು ಕಯ್ಲಿ ಇಡಕಂಡು ಮನುಸ್ರು ರೂಪ್ದಲ್ಲಿ ಹುಟ್ಟಿ ಹೊಡೆದಾಡಿ ಈ ಬಾಣುದ್ ರೂಪದಲ್ಲಿ ನೀವು ಹೊಡೆದಾಡಿದ್ರೆ ಯೇನು ಅರುವಾಕ್ಕುಲ್ಲ. ಇಲ್ಲ ರಾಮಬಾಣ ಇಲ್ಲ ಚಕ್ರುಬಾಣ ನೀವು ಒಟ್ಟಿ ಬಕ್ತುವಂತನಾಗಿ ಹುಟ್ಟಿ ಒಬ್ಬ ರಾಕ್ಷಸನಾಗಿ ಹುಟ್ಟಿ ಅನ್ನದಾಗಿ ಶಾಪ ಕೊಟ್ಟು ಮಾಯವಾದ. ಈ ಚಕ್ರಬಾಣ ನಾನು ರಾಕ್ಷಸನಾಗಿ ಹುಟ್ಟಬೇಕು ಅಂತ್. ಈ ರಾಮಬಾಣ ನಾನು ರಾಮನವರತಾರದಲ್ದೆ ಹುಟ್ಟುಬೇಕು. ಈ ರಾಮುನವತಾರದಲ್ಲಿ ಹುಟ್ಟುಬೇಕು ಅಂದ್ರೆ ಬೂಮಂಡ್ಲದಲ್ಲಿ ಮಹಾಂತ ಪತಿವ್ರತೆ ಹೊಟ್ಟೇಲಿ ಹುಟ್ಟುಬೇಕು. ಮಹಾಸೆರಣೆ ಹುಟ್ಟುಬೇಕು. ಈ ಬೂಮಂಡ್ಲುದಲ್ಲಿ ಯಾರು ಪತಿವೃತೆ, ಸತ್ಯುವಂತೆ? ಯಾರವ್ರೆ.? ಆಗ ಈ ರಾಮಬಾಣ ಜಾನ ಮಾಡ್ತದೆ. ಈ ಜನುಮ ದೇವಿ ಎಲ್ಲಮ್ಮದೇವ್ರು ಮಾ ಸತ್ಯುವಂತೆ ಮಾ ಸೆರಣೆ, ಅವಳೊಟ್ಟೇಲಿ ಹುಟ್ಟುಬೇಕು. ಅವುಗಳಿಗೆ ಗಂಡಿಲ್ಲ ಗಂಡಿಲ್ದೆ ಮಕ್ಕೆಂಗ್ ಹಡೀತಾಳೆ. ಆವಾಗ ಅವಳ ಹೊಟ್ಟೇಲಿ ಹುಟ್ಟುಬೇಕು ಅಂದ್ರೆ ಯಾವ್ ತರ್ದಲ್ಲಿ ಹೋಗಿ ಅವಳ ಹೊಟ್ಟೇ ಸೇರ್ಕಂಡು ಮಗಾಗಿ ಈಚಿಗೆ ಬರ್ಲಿ ಅನ್ನದಾಗಿ ರಾಮಬಾಣ ಯೇಚ್ನೆ ಮಾಡ್ತದೆ. ಈ ಜಮನ್ನರುಸಿ ಅವರಲ್ಲಿ ಅವುದು ಜಲದೊಳಗೆ, ಸಮುದ್ರದೊಳಗೆ, ಜಲ ಉಕ್ಕಿ ಬರೊ ಜಾನ್ದಲ್ಲಿ ಕುತ್ಗಂಡು ತಪುಸ್ಸು ಮಾಡಿದ್ರು. ಸಮುದ್ರದೊಳಗೆ ನೀರಿನೊಳಗೆ ಜನುದನ್ನ ರುಸಿ . ಅವರ ಅತ್ಮಕೋಗಿ ಎಲ್ಲಮ್ಮದೇವಿ ಹೊಟ್ಟೆ ಸೇರಬೇಕು. ಈಗ ಜಲದೊಳಗೆ ಕುತ್ಗಂಡು ಅವುರ ಮಡಾದು ಜಮದ್‌ನ ರುಸಿ ಆ ಎಲ್ಲಮ್ಮದೇವುರು ಹೋಗಿ ಅಲ್ಲಿ ಸ್ನಾನ ಮಾಡಾದು ಸಾನಮಾಡಾದು. ಸಾನ ಮಡಿ

ಮಾಡಿ ಹೋಗು ಅವುರ ಕೂತುರಾದು ಎಲ್ಲಮ್ಮದೇವ್ರಿಗೆ ಗೊತ್ತುಲ್ಲ. ಎಲ್ಲಮ್ಮ ದೇವುರು ಒಂದು ಸಾನ ಮಾಡಿ ಹೋಗಾದು.

ಹೋಗಾದು ಅವುರಿಗೆ ಗೊತ್ತಿಲ್ಲ. ಗೊತ್ತುದ್ರುವೆ ಕಣ್ ಬುಟ್ಟು ನೋಡಂಗಿಲ್ಲ. ಮುಚ್ಚಿದ್ ಕಣ್ ಬಿಚ್ಚಂಗಲ್ಲ. ಅಂಗೆ ಕೂತಿರುವಾಗ ಈ ರಾಮ ಬಾಣ ಕಾಮುದ್ ರೂಪದಲ್ಲಿ ಹೋಗಿ ಅವುರ್ ಆತ್ಮಕ್ಕೆ ಹೋಗಿ ಸೇರ್ಕತ್ತು. ಸೇರ್ಕಂಡು ರಾಮಬಾಣ ಅವುರ್ನ ಯವ್ವನ್ ಪಡುತ್ತೈತೆ. ಸಿರಯರ್ ಮೇಲೆ ಆಸೆ ಪಡುಸ್ತೈತೆ. ಸಿರಿಯರ ಮೇಲೆ ಮನ ಸೋಲುಸುವಾಗ – ಇವರ ಜಪನೆ ಕೆಡಿಸ್ಯಾಕುಸ್ತು. ರಾಮಬಾಣ ಹೋಗಿ ಸೇರ್ಕಂಡು–ಇವುರು ಎಲ್ಲಿಯ ದೇವುರು ಸಾನ ಮಾಡಾಕೆ ಬಂದಾಗ ದಡದಲ್ಲಿ ನಿಂತ್ಕಂಡು ಬಟ್ಟೆ ಬರೆಯಲ್ಲ ಬಿಚ್ಚಿ ದಡದಲ್ಲಿಟ್ಟು ಹುಟ್ಟಿದ್ ನಿರ್ವಾಣದಲ್ಲಿ ನಿಂತ್ಕಾಂಡಾಗ ಈ ರಾಮ ಬಾಣ ಹೋಗಿ ಅವುರ ಆತ್ಮದಲ್ಲಿ ಸೇರ್ಕಂಡಿತ್ತಲ್ಲ. ಅದು ಹೋಗಿ ರುಸಿ ಕಣ್ ಬುಡಿನ್‌ಬುಡ್ತು. ಕಣ್ ಬುಡಿಸಿದ್ ಗಳಿಗೆಲ್ಲಿ ಎಲ್ಲಮದೇವುರ ಮೈಮಾಣಕೆಲ್ಲ ಕಂಡುಬುಟ್ತು. ಮೈಮಾಣೆಕೆಲ್ಲ ಕಂಡ್ ಗಳಿಗೆಲ್ಲಿ ಈ ರಾಮಬಾಣವೇ ಹೋಗಿ ಸೇರ್ಕಂಡಿತ್ತಲ್ಲ ಕಾಮಬಾಗಿ ಆ ಕಾಮೆಲ್ಲಿ ಉಕ್ಕಿ ಬಂದು ಎಲ್ಲಮದೇವಿ ಮ್ಯಮಾಣೆಕೆಲ್ಲ ನೋಡಿದ್ ಗಳಿಗೇಲಿ ಆಗ ಎಲ್ಲಮ್ಮ ದೇವುರು ಮುಳುಕಿ ಏಳುವಾಗ ಎಲ್ಲಮ್ಮ ದೇವುರ ಹೊತ್ತಿಗೆ ದರ್ಸುನವಾಯ್ತು. ಯಾವ್ದು? ಈ ರಾಮಬಾಣ ಕಾಮವಾಗಿ ಆಗಂಡಿಸಿನ ಆತ್ಮದಿಂದ ಹೆಂಗುಸಿನ ಆತ್ಮುಕ್ಕೆ ಬಂದು ಮಗುವಾಯ್ತು. ಈಗ ಎಲ್ಲಮ್ಮದೇವುರನ್ನ ಜರಿತಾರೆ ಹಾದುರಗಿತ್ತಿ . ಪುಂಡುಗಾತಿ! ಅಂತಾವ ಯಾರಾರ ಬಂದು ಮುಚ್ಚಾವ್ರ ಈಗ ಹಾದುರಿಗಿತ್ತಿ ಅಂತ ಜರಿತಾರೆ ಜನ್ ಮೂರ್ ತಿಂಗ್ಳು ತುಂಬ್ತು. ಆರ್ ತಿಂಗ್ಳು ತುಂಬ್ತು. ಜಗುಮಯ ಅಂತಾರೆ ಹಾದುರಗಿತ್ತಿ ಪುಂಡುಗಾಗಿ ಅಂತ ಎಲ್ಲವ ಜರಿತಾರೆ ಬೂಮಂಡ್ಲವೆ ಜರಿತದೆ. ಈ ಹೊಟ್ಟೆ ವಳುಗೆ ಮಗ ಯೇಚ್ನೆ ಮಾಡ್ತದೆ. ನನ್ನ ತಾಯಿ ಹಾದುರುಗಿತ್ತಿ ಅಲ್ಲ. ಪುಂಡುಗಾತಿ ಅಲ್ಲ. ಈ ನನ್ನ ತಾಯಿ ಸತ್ಯವ ತೋರ್‌ಬೇಕಾರೆ ಬೂಮಂಡ್ಲುಕೆ ನಾನು ಹುಟ್ಟಿ ಬೆಳುದಾದ ಮೇಲೆ ತೋರಬೇಕು. ಅನ್ನದಾಗಿ ಪರುಸುರಾಮ ಹುಟ್ಟಿ ಬೆಳದಾದ ಮೇಲೆ ತೋರಬೇಕು ಅನ್ನದಾಗಿ ಪರಸುರಾಮ ಹುಟ್ಟಿ ಬೆಳದಾರೆ ಮೇಲೆ ನನ್ನ ತಾಯಿ ಸತ್ಯ ತೋರಬೇಕು ಅಂತವ ಹುಟ್ಟಿ ಬೆಳುದ್ ಮ್ಯಾಲೆ ಈಗ ಊರ್ ಮಕ್ಳು ಕುಟ್ಟೆ ಗೋಲಿ ಆಟುಕ್ಕೆ ಹೋಗಾದು. ಅಲ್ಲಿ ಕೀಟ್ಳೆ ತೆಗೆಯಾದು. ಕೀಟ್ಳೆ ಅಸಿಯಾದು ಯಾಕೆ? ಅವುರ್ ಕುಟ್ಟೆ ಬಯ್ಯಸ್ಕಬೇಕಲ್ಲ. ಅವ್ವಲದೆ ಹುಟ್ಟಿರೋನು ಅಂತವ  ಅಪ್ಪುನ್ ತೋರ್ಸು ಅಂತ ಅವ್ರುನ್ ತಾವಕ್ ಬರಬೇಕಿಲ್ಲ. ಈಗೆಲ್ಲ ಜನ ಮೆರೀತರಲ್ಲವ ನನ್ನಪ್ಪೆಲ್ಲ ಅಂತ ಅವ್ವುನ್ ತಾಕೆ ಬರಬೇಕಲ್ಲ. ನನ್ನಪ್ಪೆಲ್ಲ ಅಂತ ತೋರಬೇಕಲ್ಲ. ಕಂಡ್ ಕಂಡ್ ಜನದ ಮ್ಯಾಲೆಲ್ಲ ಕೀಟ್ಲೆ ಅತ್ಯಾದು ಅವುರ್ ಕಯ್ಲೆಲ್ಲವ ನೀನು ಅಪ್ಪಲ್ದೆ ಹುಟ್ಟಿರೋನು, ಅಪ್ಪಿಲ್ದೆ ಹುಟ್ಟಿರೋನು ಅವುದ್ರೆ ಬುದ್ದಿ ಕಲ್ಸಾನು ಅನ್ನದು ಈಗ ತಾಯಿ ಆತ್ರುಕೆ ಬಂದ ಇವ್ನಿಗೆ ಗೊತ್ತು ಯಾರಿಗೆ ಹುಟ್ಟಿದಿನಿ ಅಂತವ. ಆನ ತನ್ನ ತಾಯಿಯ ಪುಂಡುಕಾತಿ ಹಾದುರುಗಿತ್ತಿ ಅಂತರಲ್ಲ. .. ಅಪ್ಪಿಲ್ದೆ ಹುಟ್ಟಿದಿನಿ ಅಂತವ  ತಾಯಿ ಮುಂದುಕೆ ಬಂದು )

ಅವ್ವಾ ಗೋಲಿ ಆಟ ಆಡುತ್ತಾನೆ ಅಪ್ಪಿಲ್ದೆ ಹುಟಿದೋನು ನೀನು, ತಂದಿದ್ರೆ ಬುದ್ದಿ ಕಲ್ಸೋನು ಅಂತರಲ್ಲವ್ವ ? ಎಲ್ಲ್ಯವ್ವ ನನ್ ತಂದೆ?, ನೀನು ತಾಯಿ ಒಬ್ಬೇ ಕಾಣುತ್ತೀಯಲ್ಲಿ

ನನ್ನ ತಂದೇ ತೋರಪ್ಪ ಶಿವನೇ  ಅನ್ನತಾವನಲ್ಲ
ನಿನ್ನ ತಂದೇ ನನ ಕಂಡ ನನಿಗೆ ಗೊತ್ತೇ ಇಲ್ಲುವಲ್ಲ

ನನ್ನ ತಂದೇ ಇಲ್ದೇಯ ನನ್ನ ಯಂಗೇ ಹಡುದವ್ವಾ

ನಿನ ತಂದೇ ನನುಕಂಡ ನನುಗೆ ಅರುವೇ ಇಲುವಲ್ಲ

(ತಂದೆ ತೋರು ಅಂತ ಕೂತನ್ನಲ್ಲ ತಂದೆ ಯಾರು? ಮುಚ್ಚಿದ್ರೆ ಇಂತರೆ ಮುಚ್ಚಿದ್ರು ಇವ್ರೆ ನಿನ ತಂದೆ ಅಂತ್ ತೋರಬವುದು. ಯಾರಾರ ಮುಟ್ಟವರ ಜಗುಮಾದೇವಿ ಎಲ್ಲಮ್ಮದೇವಿಯ? ಈ ಕ್ರಿಸ್ಲ ಪರುಮಾತ್ಮನೇಯ ರಾಮ ಬಾಣವಾಗಿ ಪರುಸು ರಾಮಗಾಗಿ ಮಾಡಿರದು..)

ನನ್ನ ತಂದೆ ತೋರುಅಂತ ಅಟ ಹಿಡಿತ್ತಾನೇ ಮಗನೇ ಮಗನೇ ದೂಪಾರತಿ ಕಂದ ಪರುಸುರಾಮಾ ನಿನ ತಂದೆ ಗರುವಿಲ್ಲ ಗೊತ್ತಿಲ್ಲ ಮಗನೇ ತಂದೆ ಗೊತ್ತಿಲ್ವಾ ?

ತಂದೆ ಇಲ್ದೇಯಾ ಕಂದುನ ಯಂಗೆ ಹಡುದವ್ವಾ

ನೀನು ಹಾದರಗೀತೇನೇ ನೀನು ಪುಂಡುಗಾತೇನೇ

ತಂದೆ ಇಲದೇಯ ಕಂದುನ ಯಂಗೆ ಹಡುದವ್ವಾ

ನನ್ನ ತಂದೆ ತೋರವ್ವ ನಿನ್ನ ಹಾಲಾ ಕುಡದೇನು

ನಿನ್ನಾಲಾ ಕುಡದೇನು ನಿನ್ನ ಊಟ ಮಾಡೇನು

ನಿನ್ನ ತಂದೆ ನನು ಕಂದ ನನಿಗೆ ಗೊತ್ತೇ ಇಲುವಲ್ಲೊ

ತಂದೆ ಗೊತ್ತಿಲ್ಲ ತಂದಿಲ್ದೆ ಕಂದ ಯಂಗೆ ಬತ್ತಾನೆ. ತಂದಿಲ್ದೆ ಮಕ್ಳು ಯಂಗೆ ಹಡೀತ್ತಾರೆ

ನೀನು ಹಾದುರುಗೀತೆಲ್ಲೇ ನೀನು ಪುಂಡುಗಾತೆಲ್ಲೇ

ನೀ ಗಂಡಾನಿಲ್ಲದೆ ತಾಯಿ ಪುಂಡುಗಾತೇನೇ

ಗಂಡಾನಿಲ್ಲದೇ ನೀನು ಪುಂಡುಗಾತೇನೇ

ಮಾಳೆ ಉಯ್ದೇಯ ಬೇಳೆ ಯಿಂಗ್ ಬರುತಾದೇ

ಮಾಳೆ ಊಯ್ದೇಯ ಬೇಳೆ ಯಂಗೇ ಬರುತಾದೇ

ಬೀಜ ಹಾಕುದೇಯ ಗೀಡ ಯಂಗೇ ಹುಟ್ಟುತ್ತಾರೋ

ನನ್ ತಂದೆ ತೋರವ್ವ ಶಿವನೆ ಚಂಡಿ ಹೋದವ್ವ

ನಿನ್ ತಂದೇ ನನ ಕಂದ ನನಿಗೆ ಗೊತ್ತೇ ಇಲುವಲ್ಲಾ

ನಿನು ತಂದೆ ಗೊತ್ತಿಲ್ಲ. ಬೂಮಂಡುಲವಲ್ಲಿ ಹಾದುರುಗಿತ್ತಿ ಪುಂಡುಗಾತಿ ಅಂತಾವ..ನೀನು ಹೊಟ್ಟೇಲಿದ್ದಾಗ ಮೆರಿದಿದ್ದಾರೆ.

(ಗಂಡಿಲ್ಲ ಪುಂಡುಗಾತಿ, ಹಾದುರುಗಿತ್ತಿ ಅಂತವ ಜನುವೆಲ್ಲ ಮೆರುದ್ರಲ್ಲಾ. ಈಗ ನಿನ್ನ ಸತ್ಯ ನಾನು ಪರೀಕ್ಸೆ ಮಾಡಿ ಬೂಮಂಡ್ಲುಕ್ಕೆಲ್ಲವ ಹಂಡುಬೇಕು. ನನ್ನಪ್ಪುನ ತೋರ್ಸೇಳು) ತೋರ್ಸಿದ್ರೆ ಸರಿ ತೋರುಸ್ದೆ ಹೋದ್ರೆ

ಬೂಮಿತಾಯೀಗೆ ನಿನ್ನ ಬಲಿಯಾ ಕಡುದೇನೂ

ಬೂಮಿ ತಾಯೀಗೆ ನಿನ್ನಾ ಬಲಿಯಾ ಕಡುದೇನೂ

ತಂದೇ ತೋರವ್ವ ಮಗಾ ಚಂಡೀ ಕೂತಾರೇ

ನಿನ್ನ ತಂದೇಯು ನನಿಗೆ ಗೊತ್ತೇ ಇಲುವಲ್ಲೋ

(ತಂದೇ ತೋರು ಅಂತ ಮಗಾ ಅಟಾ ಹಿಡಿತಾದೆ ನಿನ್ನ ತಂದೆಯನ್ನ ನಾನು ತೋರಕೆ ಯಾರಾರ ನನ್ನ ಬಂದು ಮೈಮುಟ್ಟಿ ನಿನ್ನ ಹಡುದುದ್ರೆ ಇಂತವ್ನೆ ಅನ್ನದಾಗಿ ನಾನು ಮುಚ್ಚಿದ್ರೆ ಬೂಮಂಡುಲದಲ್ಲಿ ಎಲ್ಲಮದೇವರ ಸೆರಣೆ ಮುಚ್ಕೋಗ್ಲಿ ಮಗನೆ. ಯಾರಾದ್ರು ನನ್ನ ಮೈಮುಟ್ಟಿದ್ ಗಳಿಗೆಲ್ಲಿ ನಿನ್ನ ಹಡುದಿದ್ರೆ ಇಲ್ಲಿಗೆ ಎಲ್ಲುಮುದೇವ್ರ ಸೆರಣೆ ಅನ್ನೋದ್ ಮುಚ್ಕೋಗ್ಲೀ,,,ನನ್ನದೇನು ತಪ್ಪೇ ಇಲ್ದೆ ಇದ್ರೆ. ನನ್ನ ಸಿರಾ ಕಡಿ ಮುಂದೆ ಬತ್ತಿತ್ತಿ ಅತೀನಿ. ನನ್ನಲ್ಲಿ ಸಿರಾ ಕಡುದ್ರೆ ಮೂಡಿ ಬತ್ತೀನಿ. ಸತ್ಯ ಇಲ್ದೆ ಹೋದ್ರೆ ಎಲ್ಲಮುದೇವ್ರ ಸೆರಣೆ ಅನ್ನಾದು ಬೂಮಂಡ್ಲದಲ್ಲಿ ಮರೆಯಾಗಿ ಹೋಗ್ಲಿ. ನಿನ್ನಪ್ಪ ಗೊತ್ತುದ್ರೆ ಸತ್ಯ ಹೇಳುವೆ ಅಪ್ನೆ ಗೊತ್ತುಲ್ವಲ್ಲ..)

ಆಗ ಪರುಸುರಾಮ ತನ್ನ ತಾಯಿ ಎಲ್ಲಮ್ಮುನ್ನ ಹಾದುರುಗಿತ್ತಿ ಪುಂಡುಗಾತಿ ಅನ್ನದಾಗಿ ಮೆರುಸ್ತಾ ಅವ್ರಲ್ಲಾ ಈಗ ನನ್ನ ತಾಯಿ ಎಲ್ಲಮುನ್ನ ನನ್ನ ತಾಯಿ ಸತ್ಯುವಂತೆ ಸೆರಣೆ ಅನ್ನದಾಗಿ ಬೂಮಂಡ್ಲುಕೆ ತೋರಬೇಕು ಅನ್ನದಾಗಿ..

ಜೋಗು ಜೋಗುನ್ನುತ್ತಾರೇ ಎಲ್ಲಮ್ಮ ಬಂಡಾರ ಚಲ್ಲುತ್ತಾರೇ

ಜೋಗು ಜೋಗೆನ್ನುತಾರೇ ಎಲ್ಲಮ್ಮ ಬಂಡಾರ ಚಲ್ಲುತ್ತಾರೇ ॥ಪ॥

ನಿನ್ನಾ ಬಂಡಾರ ನನ್ನ ಮಗುವೇ ಈಗ ನಾತಾಳುಲಾರನೆಲ್ಲೋ।

ಕಣ್ಣೀರ ಬಿಡುವತಾರೇ ಶಿವಶಿವ ಚಿಂತೇಯ ಮಾಡುತ್ತಾರೇ।

ಕಡಿಯಪ್ಪ ನನ್ನು ಮಗನೇ ನಾನೀಗ ಬೂಮೀಗೆ ಬಲಿಯಾಗಿ ಹೋಗುತ್ತೀನೀ।

ನನ್ನಲ್ಲಿ ಸತ್ಯವಿದ್ದುರೇ ಮಗುನೇ ನಾನೀಗ ಮುಂದೆ ಮಾಡೀ ಬರುತ್ತೀನೀ.

(ನಿನ್ನ ತಂದೆ ಮುಚ್ಚಿ ಹಾಕಿದ್ರೆ ಎಲ್ಲಮ ದೇವರ ಸೆರಣೆ ಅನ್ನದ್ ಮುಚ್ಚಿ ಹೋಗ್ಲಿ. ನೀನು ಕಡಿ ನನ್ನಲ್ಲಿ ಸತ್ಯುವಿದ್ರೆ ಮುಂದೆ ಮೂಡಿ ಬತ್ತೀನಿ ಬೂಮಿ ಒಳುಗೆ.) ತಾಯಿ ಸತ್ಯ ತೋರಕೆ ಪರುಸುರಾಮಾ ಒಂದೇ ದುಡದಲ್ಲ.

ತಾಯಿ ಸಿರುವನ್ನ ಶಿವನೇ ಕಡೀಯುತಾನಲ್ಲ ॥ಶರಾಣು॥

ತಾನೇ ಕಡಿತಾನೇ ಶಿವನೇ ದೂರಾ ಎಸೀತಾನೇ

ಈಗ ಕಡೀತಾನೇ, ದೂರ ಎಸೀತಾನೇ ತಲೆ ಅತ್ಲಾಗ್ ಎಸೀತಾನೆ. ತಿರಗಾ ಮೂಡಿ ಬತ್ತಾದೆ. ತಿರಗಾ ಸಿರಾ ಕಡೀತಾನೆ. ತಿರುಗಿ ನೋಡ್ತಾನೆ ಸೀರಾ ಅತ್ಲಾಗೆ ಬಂದು ಕೂಡ್ಕ್ಯತ್ತಾದೆ. ಕಡಿದಾ ಕಡಿದಾ ಎಸ್ಟು? ಒಂದ್ ರಾಸಿ ತಲೇ ಬುರುಡೆ ಬಿದ್ದೋಯ್ತದೆ. ಒಂದು ಗುಡ್ಡೆ ಬಿದ್ದಂಗೆ ಬದ್ದೋಯ್ತವೆ. ಅಲ್ಲಿಗೆ ಜಮುದಗ್ನಿ ರುಸಿಗೆ ದೇವಿ ದೇವ ಮಾನ್ಯರಲ್ಲ ಹೇಳಾದು .ಅಪ್ಪಾ ಕ್ರಿಸ್ಣ ಪರಮಾತ್ಮ ಈ ಅವತಾರ್ದಲ್ಲಿ ನಾನು ಪರುಸು ರಾಮನಾಗಿ ಹುಟ್ಟೀನಿ. ಈ ನನ್ನವ್ವೆ ಹಾದಿ ಬೀದಿ ಜನೆಲ್ಲ ಹಾದುರುಗಿತ್ತಿ ಪುಂಡುಗಾತಿ ಅಂತ ಜರುದ್ರಲ್ಲ ಹಿಂದೆ. ನನ್ನ ತಾಯಿ ಸತ್ಯ ತೋರದುಕ್ಕೆ ಈ ತರ ಮಾಡಿದ್ದೀನಿ. ನನ್ನ ತಾಯೀಲೇನು ಹಾದರುತಾನುವಲ್ಲ .ಸತ್ಯುದಲ್ಲಿದ್ದಾರೆ. ಈಗ ಜನುಕೆಲ್ಲ ಹಂಚುಬೇಕು ಸತ್ಯವ ಅನ್ನದಾಗಿ )

ಗುಡ್ಡೆ ಬಿದ್ದಂಗೆ ತಲೆ ಬಿದ್ದವಲೆಲ ಆಗ ತಾಯಿ ಸತ್ಯವ ಮಗ ಕಾಣುತ್ತಾನೆ. ಮಾ ಸತ್ಯುವಂತೆ ಮಾ ಪತಿವ್ರತೆ ಅಂತೆಲ್ಲ ಜನ ಮೆರಿತಾದೆ ಈಗ .ಹಿಂತಿಲ್ಲ ಹಾದುರುಗಿತ್ತಿ ಅಂತಿದ್ರು. ಪುಂಡುಗಾತಿ, ಸೂಳೆ ಅಂತಿದ್ರು. ಸೂಳೆ ಅನ್ನ ಅವತಾರ ಜುನಕ್ಕೆದ ಬಾಯ್ಲು ಇಲ್ಲಿ. ಇನ್ನ ಯಾರು ಸೂಳೆ ಅನ್ನಬೇಕು.

(ಹಿಂದೆಲ್ಲ ಸೂಳೆ, ಗಂಡಿಲ್ದ ಪುಂಡುಗಾತಿ ಹಾದುರಗಿತ್ತಿ ಅಂತುದ್ರಲ್ಲ. ಈಗ ಎಲ್ಲಮ ದೇವುರು ಸೂಳೆ ಅಲ್ಲ ಅಂದ್ಮೇಲೆ ಯಾರು ಸೂಳೆ ಆಗಬೇಕು. ಎಲ್ಲಮ್ಮದೇವರಿಗೆ ಎಲ್ಲಮ ದೇವರ ವಕ್ಲು ಎಲ್ಲದ್ದಾರೆ ಎಲ್ಲಮ್ಮನ ವಕ್ಲು ಎಲ್ಲಿದ್ದಾರೆ ಸ್ವಾಮಿ ಆ ಕುಲದಲ್ಲಿ ಎಲ್ಲಮ್ಮದೇವರ ವಕ್ಲಿ .

ಒಂದು ಹೆಣ್ಣು ಮಗುವನ್ನ ಅವಳಿಗೆ ಬಸವೀ ಬುಡಬೇಕು

ಎಲ್ಲಮ್ಮ ದೇವಿರೀಗೆ ಅವುಳಿ ಬಸುವೀ ಬುಡಬೇಕು.

(ಅಲ್ಲಿಗೆ ಸೂಳೆ ಅನ್ನದು ಮರ್ತು ಹೋಯ್ತು. ಮುಂದೆ ಎಲ್ಲಮ ದೇವರ ವಕ್ಲು ಯಾರ ಆವ್ರರೆ ಅವುರ ಮನೇಲಿ ಒಂದು ಹೆಣ್ಣು ಮಗಳನ್ನಾ ಆವುಳಿಗೆ ದೀಕ್ಷೆ ಬುಟ್ಟು ತಾಳಿ ಕಟ್ಟಿ ಸೂಳೆ ಅನ್ನುಸಬೇಕು. ಎಲ್ಲಮ್ಮ ದೇವುರ ವಕ್ಲು ಅಮ್ಮುನಿಗೆ ಅಡ್ಲೀಗೆರೆ ಹೊಲ್ಗೆಬತ್ತಿರಲ್ಲ. ಅವುರು ಸೂಳೆ। ಎಲ್ಲಮ್ಮ ದೇವುರ ಬಸುವಿ ಸೂಳೆ। ಅವುರ ಯಾವ್ ಹೊಲನಾರ ಮೆಯ್ಯಬೋದು. ಈಗ ತಾಯಿ ಸತ್ಯ ಬೂಮಂಡ್ಲಕ್ಕೆ ಗೊತ್ತಾಯ್ತು. ಈಗ ಎಲ್ಲಮ್ಮ ದೇವರ ಬಸುವಿ ಅನ್ನದಾಗಿ ಮೆಂಬೇಕು ಮುಂದೆ. ಅಮ್ಮುನ ಸೆರಗೆಲ್ಲ.)

ಈಗ ಕಡುದ್ ತಲೆ ಬುಂಡೆಲ್ಲಿ ಬಿದ್ದಾವೆ ಅಲ್ಲ . ಈ ತಲೆ ಬುಂಡೆಲ್ಲ ಬಿದ್ದವೆಅಲ್ಲ ಅಂತ ದೇವಾನು ದೇವತೆಗಳು ಕೇಳ್ತಾ ಅವುರೆ. ಈ ತಲೆ ಬೂಡೆ ಬಿದ್ದಾವಲ್ಲ ಇವೆಲ್ಲನು ಯೇನು ಮಾಡ್ತೀಯ ಎಲ್ಲಮ್ಮ,,,

ಮಾಡ್ತೀನಿ, ಮುಂದೆ ಈ ತಲೆ ಬುಂಡೆಲ್ಲ ನನ್ನ ಅವತಾರದಲ್ಲಿ ಮುಡಿ ಬರಾ ಅಂಗೆ ಮಾಡ್ತೀನಿ. ಸೆರಗಾರ್ತಿಯಾಗುತ್ತೀನಿ. ಜಗುಮ ಎಲ್ಲಮ್ಮ ಊದೋ ಉದೋ ಅಂತ ಹೇಳಿ ಬಂಡಾರ ಹೂಡುತ್ತಾರೆ. ಈ ತಲೆ ಬೂಡೆ ಸಿರುದಾರಿರ ಮೇಲುಕ್ಕೆ ತಾನೇ,

(ಈಗ ಸಿರುದಿಂದ ಮೇಲುಕೆ ತಾನೆ. ಮೂಡಿ ಬರಬೇಕು. ದೇವುರು ದೇವುತೆಯಾಗಿ ಮಾಡುಬೇಕು. ಎದೆ ಮೈಕಟ್ಟು ಅಲ್ಲುವಲ್ಲ .ಈಗ ನೀವು ಮಾರಿ ಪೂಜಕೆ ಹೋಯ್ತಿರಲ್ಲ, ಊರು ಮುಂದ್ಲು ಗ್ರಾಮ ದೇವತೆ ಪೂಜೆ ಮಾಡಕ್ಕೆ ಹೋಯ್ತಿರಲ್ಲ. ಅಲ್ಲಿ ನೋಡಿ ಎಲ್ಲ ದೇವುತೆಗಳು ಮುಖಬಾವ ಮುಖಸಿರಿ ಮಾತ್ರ ಮಾಡಿಸ್ಕಂಡು ಹೋಗಿ ಪೂಜಿಸ್ತಾರೆ. ಸಿರುದಿಂದ ಮ್ಯಾಕೆ ದೇವರಾಗಿ ಬುಟ್ರು.

ಆಗ ಹುಟ್ಟಿದ್ದು ಶಿವುನೆ ಮಾರಿ ಮಸಿಗೆಲ್ಲ

ಆಗ ಹುಟ್ಟಿದ್ದು ಶಿವುನೆ ಮಾಡಿ ಮಸಿಗೆಲ್ಲ

ಜಗುಮ ಎಲ್ಲಮ್ಮ ಮಾರಿ ಮಸಿಗೆ ಆಗುತಾಳೇ

ಊರು ಮುಂದಾಲ ಮಾರೀ ಆವುಳೇ ಕಾಣವ್ವ

(ಊರು ಮುಂದ್ಲು ಮಾರಿ, ಸೀತಾಳೆ ಮಾರಿ ಕಲ್ಲೆತ್ತಿದ ಮಾರಿ ಸಿಡುಬುಲ ಮಾರಿ ಪಿಳೇಗುದ ಮಾರಿ. ಈ ಮಾರೆಲ್ಲ ತಲೆ ಎತ್ತಿದುವು. ಬೂಮಂಡ್ಲುಕ್ಕೆ ಆಗ ಹುಟ್ಟಿದ್ದು ಮಾರಿ ಮಸಿಗೆಲ್ಲಿ. ಅಲ್ಲಿ ತಲೆ ಬುಂಡಿದ್ವಲ್ಲ ಅವೆಲ್ಲ ಅಲ್ಲಲ್ಲಿ ಒಂದೊಂದು ಅವತಾರದಲ್ಲಿ ಮೂಡಿದೊ )

ಎಲ್ಲಾ ದೇವೊರೊಗೋದ್ರು ಅವ್ರೆ. ಅದಿಲಕ್ಷ್ಮಿ ಅಂದ್ರು ಅವರೆ, ಮಾರಿ ಅಂದ್ರು ಎಲ್ಲನು ದೇವ್ರೆ. ಚಾಮುಂಡಿ ಅಂದ್ರು ಮಾರೇ ಮಾ ಪಾರ್ವತಿ ಅಂದ್ರು ಮಾರೇ ಎಲ್ಲ ಎಲ್ಲಮದೇವ್ರ.ಜಗುಮ ದೇವಿ ಮಾಯೆ ಬಲ್ಲವರಿಲ. ಬೂಮಂಡ್ಲುಕೆಲ್ಲನ ಎಲ್ಲಮ್ಮುನ ಸೆರಣೆ ಮಾರಿತಾದೆ

(ಯಂಗ್ ಮೆರೀತಾರೆ ಎಲ್ಲಮ್ಮ ಅನ್ನದು ನೀವು ರಂಗುಸ್ವಾಮಿ ವಕ್ಲು ಸ್ವಾಮಿ ನೀವು ಎಲ್ಲಮ್ಮ ದೇವರ ಸೆರಣೆ ಯಂಗೆತ್ತುರಿ ಹೆಳಿ ಮನೆ ಒಳುಗೆ ನಿಮಿಗೆ ತಿಂಕ್ಯಂದು ಹೇಳ್ತೀನಿ. ಎಲ್ಲಮ್ಮುನ ಸೆರಣೆ ಯಂಗ್ ಬತ್ತಾದೆ ಮನವಳಿಗೆ ? ಅರುವಿಲ್ವಾ .ಈಗ ಅಮ್ಮ..ಇದ್ದುದು ನಿಮ್ಮಗಳ ಅಪ್ಪುನ ಕರೆದು ಬೋಗವ್ವ ಅಂತದೆ, ಅಮ್ಮ ಮಗಳಿಗೆ ಎಲ್ಲ ? ಈಗ ಅರುಬಿ ತಗಬಾ ಎಲ್ಲಿ? ಇದೇ ಎಲ್ಲಮ್ಮ, ಕುಡ್ಲು ತಗಬಾ ಎಲ್ಲಿ ಇಂಗೆ ಎಲ್ಲಿ ಅನ್ನ ಸೆರಣೆ ಬಂದ್ ಮನೆ ವಳುಗೆ ಇಲ್ಲಿ ಅನ್ನಾಂಗಿಲ್ಲ. ಬೂಮಂಡ್ಲುವೆಲ್ಲ ತುಂಬಾದೆ. ಎಲ್ಮಮ್ಮ..ಎಲ್ಲಮ್ಮ..)

ಬಕ್ತಿ ನೋಡಾಕ್ ಹೋಗುಬೇಕಾರೆ ಬಡುವುರ ಬಕ್ತಿ ದೊಡ್ಡರ ಬಕ್ತಿ ನೋಡಾಕೆ ಹೋಗಬೇಕಾರೆ ಎಲ್ಲಮ ದೇವುರು .

ಹರುದೋಗೋ ಸರುಪಾನ ಎಲ್ಲಮ್ಮ
ಹರುದೋಗೋ ಸರುಪಾನ ಎಲ್ಲಮ ಹಿಡಿದು ಸಿಂಬಿಯ ಮಾಡಿ
ಹರುದೋಗೋ ಸಾರುಪಾನಾ ಎಲ್ಲಮ್ಮ ಹಿಡಿದು ಸಿಂಬಿಯ ಮಾಡಿ
ಜೋಗು ಜೋಎನ್ನುತಾರೆ ಎಲ್ಲಮ್ಮ ಬಂಡಾರ ಚಲ್ಲುತ್ತಾರೇ ॥ಪ॥
ಸರುಪುನ ಸಿಂಬಿಯ ಮಾಡೀ ನನ್ನವ್ವ ಹೊಂತ್ತಾರು ಮುತ್ತೀನ ಹಾಡಲೀಗೆ ॥
ಸರುಪುನ ಸಿಂಬಿಯ ಮಾಡೀ ನನ್ನವ್ವ ಹೊತ್ತಾರು ಮುತ್ತೀನ ಹಾಡಲೀಗೆ
ಕಂಕುಳಲ್ಲಿ ಹಿಡಿದಾರು ನನ್ನಾವ್ವ ಚಿನ್ನಾದ ತೀವಟೀಗೇ
ಬೇವಿನ ಉಡುಗ್ಯೋರೂ ಎಲ್ಲಮ್ಮ ಅರುಸುವಾದ ಮಯ್ಯಿನವರೂ

ಸರುಪುನ ಸಿಂಬಿ ಮಾಡ್ಕಂಡು. ಮುತ್ತಿನ ಹಾಡಲಿಗೆ ಹೊತ್ಕಂಡು, ಚಿನ್ನುದ್ ತೀವಳಿಗೆ ಕಂಕುಳಲ್ಲಿರಿಕ್ಯಂಡು ಸರುಪುನ ಸಿಂಬಿ ಮಾಡಿಕ್ಯಂದು. ಮುತ್ತಿನ ಹಾಡಿಲಿಗೆ ತಲೆ ಮ್ಯಾಲೆ ಇಟುಗೊಂಡು .

ಬಡುವಾರಾ ಮನಿಗೆ ಹೋಗೀ ನನ್ನವ್ವ ಉದೋ ಉದೋ ಅನ್ನತಾರೇ

ಹೋಗಲ್ ಬೆಟ್ಟದಲ್ಲಿ ದೊಡ್ ಮಲ್ಲೇಗೌಡ ಚಿಕ್ಕಮಲ್ಲೇಗೌಡ ಈಡಿಗ್ ಗೌಡುಗೋಳು ದೊಡ್ಮಲ್ಲೇಗೌಡ ಕುಬೇರ, ಚಿಕ್ಕಮಲ್ಲೇಗೌಡುನ್ ಬಾಳ ಬಡತಾನ ಹನ್ನೆರಡು ಮಕ್ಳು

ಅಂತ ಬಡುವನಾ ಮನಿಗೇ ಹೋಗಿ ಎಲ್ಲಮ್ಮ ಉದೋ ಉದೋ ಅನ್ನುತ್ತಾರೆ.
ಬಡವನಾ ಮನಿಗೇ ಹೋಗಿ ನನ್ನವ್ವ ಉದೋ ಉದೋ ಅನ್ನುತ್ತಾರೆ
ಜಳುಕಾ ಜಳುಕಾನೆ ತಾಯೀ ನಮ್ಮವ್ವ ಚಳಿಕೇಯ ಹೊಡಿಯುತ್ತಾರೆ
ಟಿಂಕೆ ಟಿಂಕೀನೆ ನೋಡು ನಮ್ಮವ್ವ ಕುಣಿಯಾಕಾ ನಿಂತಾವರೇ

ಬಡವರ ಮೆನ ಮುಂದೆ ನಿಂತ್ಗಂಡು ಉದೋ ಉದೋ ಅಂತಾವ ಚೌಡಿಕೆ ವಡೀತಾವರೇ..

ಬಡವೆ ಸಂಗಮ್ಮ ಬಂದು ಎಲ್ಲಮ್ಮೆ ಕಯೆತ್ತಿ ಮುಗಿಯುತಾರೆ
ಬಡವೆ ಸಂಗಮ್ಮ ಬಂದೂ ಎಲ್ಲಮ್ಮ ಕಯೆತ್ತಿ ಮುಗಿಯುತವರೆ

ಆದಿ ಸಕ್ತಿ ಎಲ್ಲನು ದೇವಿ, ಜಗುಮ ಎಲ್ಲಮ ದೇವೀ

ನನ್ನ ಮನೆಗೇ ಬಂದೆಲ್ಲೆ ತಾಯೀ ನಾನೀಗ ಏನು ಕೊಡಲಿ ತಾಯೀ

ನಾನು ಬಕ್ತೀಯ ನಿನಗೇ ನನ್ನವ್ವ ನಾನೇನ ಕೋಡಲವ್ವಾ

ಉಣ್ಣಾಕನ್ನಲ್ಲ ನನ್ನೀಗೆ ನನ್ನವ್ವ ಉಡಾಕೆ ಬಟ್ಟಿಲ್ಲ ನನಿಗೇ

ಅದಿಸಕ್ತಿ ದೇವಿ ಕುಲದೇವಿ ಎಲ್ಲಮ್ಮ ನನ್ ಮಲ್ಲಿ ಉಣ್ಣಾಕೆ ಅವ್ನಲ್ಲಿ ಉಡಾಕ್ ಬಟ್ಟಿಲ್ಲ. ನಾವು ಗಂಡ ಹೆಡ್ತಿ ಒಂದ್ ಮಲ್ಲಿ ಜೀತ ಮಾಡ್ತಾ ಇದ್ದೀವಿ ನನ್ ಬಡು ಬಕ್ತಿ ನೀಡುದುಕ್ಕೆ.

ನನ್ನ ಮಾನೆಯ ವಳುಗೆ ತಾಯೀ ನನ್ನವ್ವ ಏನೂ ಇಲ್ವಲ್ಲೆ ತಾಯೀ

ಜಗುಮ ಎಲ್ಲಮ್ಮೆ ಬಡುವೆ ಸಂಗಮ್ಮ ಕಯ್ಯುಗುದ್ ಕಣ್ಣೀರ್ ಬುಡ್ತಾ ನಿಂತ್ಗತ್ತಾರೆ. ಆಗ ಎಲ್ಲಮ್ಮ ಹೇಳುತ್ತಾರೆ .ಬಡವೆ ಸಂಕಮ್ಮ .ಮನೆ ವಳುಗೆ ಇದ್ರೆ ನೀಡು ಇಲ್ಲ ಅಂದ್ರೆ ಮುಂದ್ಕೆ ಹೋಗು ಅನ್ನು ಹೋಗಿ ಬತ್ತೀನಿ. ತಾಯಿ ತಾಯಿ ಜಗುದ ಮಾಯ ಎಲ್ಲಮ ದೇವಿ ಆದಿಸಕ್ತಿ ನೀನು.

ನನ್ನ ಬಾಡು ಬಕ್ತಿಯ ನಿನಗೇ ನನ್ನವ್ವ ನಾನೀಡೇ ತೀರುಬೇಕು

ನನ್ನ ಬಾಡು ಬಕ್ತಿಯ ನಿನಗೇ ನನ್ನವ್ವ ನಾನೀಡೇ ತೀರುಬೇಕು

ಅವ್ವ ಗಂಟೆಗಳಿಗೆಲ್ಲ ತಾಯೀ ನಮ್ಮಲ್ಲಿ ನೀನು ಕುಂತಿರಬೇಕು

ನಾನು ಬಡುಬಕ್ತಿ ನೀಡೇ ತೀರಬೇಕು. ಗಳಿಗೆಲ್ಲ ಗಂಟೆಲ್ಲಿ ನಾನು ನ್ನ ಬಡುಬ್ಕತಿ ನೀಡುತ್ತೀನಿ. ಕುಂತುರು ತಾಯಿ ಮನೆ ವಳುಗೆ ನೆಲ ಸಾರಿಸಿ, ರಂಗೋಲೆ ಬುಟ್ಟು ರಂಗಾಲೆ ಮ್ಯಾಲೆ ಅಮ್ಮುನ್ ಕೂರಿಸಿಬುಟ್ಟು ಅಮ್ಮುಗೆ ಬಡಬಕ್ತಿ ಬಿಕ್ಸೆ ಕೊಡುದುಕ್ಕೆ

ಅಮ್ಮುಗೆ ದಾನಾ ಕೊಡಾಕೆ ಸಾಲುಕೆ ರಾಗೀಗೋಗುತಾಳೆ

ಅಮ್ಮುಗೆ ಬಿಕ್ಸೆ ನೀಡಾಕೆ ಅವುಳು ಸಾಲುಕೋಗುತಾಳೆ

ಅಕ್ಕ ಸಾವ್‌ಕಾರ್ ಸಂಗಮ್ಮನ ಮನಿಗೆ ಸಾಲುಕೋಗುತ್ತಾಳೆ

ಅಕ್ಕ ಸಾವ್‌ಕಾರ್ ಸಂಗಮ್ಮನ ಹೋಗಿ ಕಯ್ಯ ಮುಗಿತಾಳೆ

ಕಯ್ಯ ಮುಗಿತಾಳೆ ಮುಗಿತಾಳೆ ಶಿವನೆ ಕಣೀರ ಬುಡುತಾಳೇ

ಯಾತುಕ್ ಬಂದ್ಯಮ್ಮ ತಂಗಿ ಬಡುವೇ ಸಂಗಮ್ಮಾ

ಯಾತುಗ್ ಬಂದುದ್ದೀಯ ತಂಗಿ, ಬಂದ್ ಕೈ ಮುಗೀತಿಯಲ್ಲಾ ಕಾರುಣುವೇನು?

ಅಕ್ಕ ಸಾವುಕಾರೆ ಸಂಗಮ್ಮ ಜಗುಮಾ ಎಲ್ಲಮನವರು..

ಜಗುಮಾ ಎಲ್ಲಮು ದೇವುರು ನನ್ನಾ ಮನಿಗೇ ಬಂದವರೇ

ಅವುರಿಗೆ ಬಿಕ್ಸಾ ಕೋಡೋಕೆ ಮಲ್ಲಿ ಏನೂ ಇಲ್ಲುವಲ್ಲಾ

ಅಮ್ಮುಗೆ ಬಿಕ್ಸಾ ಕೊಡೋಕೆ ಮಲ್ಲಿ ಏನೂ ಇಲ್ಲುವಲ್ಲಾ

ಒಂದು ಪಡೀ ರಾಗೀಗೆ ಅಕ್ಕ ಸಾಲುಕೆ ಬಂದೇನು

ಒಂದು ಪಡೀ ರಾಗೀಯ ಅಕ್ಕ ಸಾಲಾ ಕೊಡಕ್ಕ

ಎಲ್ಲಮುದೇವುರು, ಜಗಮಾಯಿ ಬಂದು ನನ್ನ ಮನವಳುಗೆ ಆಸೆ ಹಾಕಿ ಕೂತದಾರೆ ಅಕ್ಕ. ಅವುರಿಗೆ ಕೊಡುದುಕ್ಕೆ ಅಕ್ಕ ಮನೆವಳುಗೆ ಏನು ಇಲ್ಲ. ಒಂದು ಪಡಿ ರಾಗಿ ಕೊಡು. ಒಂದ್ ಪಡಿ ರಾಗೀಗೆ ಸಾಲುಕೆ ಬಂದೆ ಅಂದ

ಗಳಿಗೆಲ್ಲಿ ಸಾವುಕಾರ್ ಸಂಗಮ್ಮ..ಬಡುವಿ ಸಂಗಮ್ಮನ ಮೇಲೆ ಅಲ್ಲು ಕಡಿತ್ತಾಳೆ. ಕಿಡಿಕಿಡಿನೆ ಕಣ್ಣು ಬುಡುತ್ತಾಳೆ. ಎಲಾ ಗರತಿ, ನಿನ್ನ ಮನೆ ವಳುಗೆ ಏನೂ ಇಲ್ಲ. ನಿನ್ನ ಬಡತಾನ ನೋಡಿದ್ರೆ ಉಣ್ಣಾಕನ್ನುವಿಲ್ಲ. ಉಡಾಕ್ ಬಟ್ಟಿಲ್ಲ ಏನುಕ್ಕು ಗತಿಲ್ಲ. ಒಪ್ಪತ್ತುಂಡ್ರೆ ಒಪ್ಪತ್ತಿಗೆ ಗತಿಲ್ಲ. ಯಾವಳೋ ಬಂದ್ಲು ಅಂತ ಹೇಳಿ

ಅವುಳಿಗೆ ಬಿಕ್ಸೆ ಕೋಡೂಕ ನೀನು ಸಾಲುಕೆ ಬಂದೇನೇ

ಅವುಳಿಗೆ ಬಿಕ್ಸಾ ಕೋಡಾಕೆ ನೀನು ಸಾಲುಕೆ ಬಂದೇನೇ

ಕೊಡುವುದಿಲ ಕಾಣೆ ಮುಂದ್ಕೆ ಪಯಣ ಮಾಡವ್ವ

ನಿನ್ ಮಲ್ಲಿ ನೋಡಿದ್ರೆ ತಿನ್ನಾಕ ಅನ್ನಿಲ್ಲ ಉಡಾಕೆ ಬಟ್ಟಿಲ್ಲ .ಯಾವಳೋ ಬಂದ್ಲು ಅಂತ ಹೇಳಿ ಬಿಕ್ಸಾ ಕೊಡೋಕೆ ಸಾಲುಕೆ ಬಂದೇನೆ ಗರತಿ ಅಂತ ಹೇಳಿ.

ಅಲ್ಲಾ ಕಡಿತಾಳೆ ಶಿವುನೆ ಲಟಿಕೆ ಮುರಿತಾಳೇ

ಅಲ್ಲಾ ಕಡಿತಾಳೇ ಶಿವುನೆ ಲಡಿಕೆ ಮುರಿತಾಳೇ

ಅಕ್ಕ ಕಯ್ಯಾ ಮುಗುದೇನು ನಿನ್ನ ಕಾಲಿಗೆ ಬಿದ್ದೇನು

ಅವ್ವಾ ಜನುಮಾ ಎಲ್ಲಮ್ಮ ತಾಯಿ ಜಗುಕೆ ಮಾಯೆಲ್ಲೆ

ಅದು ಸಕ್ತ್ಯಲ್ಲ ತಾಯಿ ಆದೀಲುಟ್ಟದೋರು

ಜಗುಮಾ ಎಲ್ಲಮ್ಮ ಜಗುಕೆ ಮಾಯಿ. ಆದಿಸಕ್ತಿ ಎಲ್ಲಮ್ಮ ಆದೀಲುಟ್ಟಿದೋರು ಬೂಮಂಡ್ಲುಕ್ಕೆ ದೊಡ್ಡೋರು. ಈಗ ಯಾವಳೋ ಬಂದ್ಲು ಅಂತ ಹೇಳಿ ಬಿಕ್ಸುಕೆ ಸಾಲ ಕೇಳಾಕ ಬಂದಿದ್ದೀಯ ಅಂತ ಹೇಳಿ ಜಗುಮಾ ಎಲ್ಲಮ ದೇವಿಯ ಅವುಳು, ಇವುಳು ಅಂತ ಜರಿಬ್ಯಾಡಾ

ಅಕ್ಕ ಕೈಯಾ ಮುಗುದೇನು ನಿನ್ನ ಕಾಲಿಗೆ ಬಿದ್ದೇನೂ

ಒಂದು ಪಡೀ ರಾಗೀಯ ಅಕ್ಕಿ ಸಾಲ ಕೊಡಕ್ಕಾ

ಕೊಡುವಾದಿಲ್ಲ ಕಾನೆ ಮುಂದುಕೆ ಪಯಣ ಮಾಡೋಗು.

ಅಕ್ಕಯ್ಯ ನನ್ ಗಂಡ ಬತ್ತಾರೆ. ನಿಮ್ಮ ಹಿತ್ಲಲ್ಲಿ ಯಂಡ ಬಸೀತಾರೆ  ನನ್ನ ಗಂಡ ನಿನ್ ಮಲ್ಲಿ ಜೀತ ಇದ್ದಾರೆ. ನನ್ ಗಂಡ ಬಂದು ನಿನ್ ಮಲ್ಲಿ ಜೀತ ಮಾಡ್ತಾಇದ್ದಾರೆ. ನಾನು ಬತ್ತೀನಿ. ನಾನು ಬತ್ತೀನಿ ನಿನ್ ಮನೆ ಅಟ್ಟಿ ಅಂಗಳ ಗುಡುಸ್ತೀನಿ. ನಾವು ಗಂಡ ಹೆಂಡ್ರು ನಿನ್ ಮಲ್ಲಿ ಜೀತ ಮಾಡ್ತೀವಲ್ಲ ನಿನ ಮಲ್ಲಿ ಕೇಳ್ದೆ ಯಾರ್ ಮಲ್ಲಿ ಕೇಳ್ಳಿ..

ನಿನಗೆ ಕಯ್ಯಮುಗುದೇನು ನಿನ್ನ ಕಾಲಿಗೆ ಬದ್ದೇನೂ

ಒಂದು ಪಡೀ ರಾಗೀಗಾ ಅಕ್ಕ ಸಾಲ ಕೋಡಕ್ಕಾ

ನನ್ನ ಬಾಡು ಬಕ್ತೀಯ ಅವುಳಿಗೆ ನೀಡೇ ಕಳುಸ್ತೀನಿ

ನನ್ನ ಬಾಡು ಬಕ್ತೀಯ ಅವುಳಿಗೆ ನೀಡೇ ಕಳಿಸೇನು.

(ನನ್ನ ಗಂಡ ಬಂದು ನಿಮ್ಮಿತ್ತಲ್ಲಿ ಯಂಡ ಬಸೀತಾರೆ, ನಾನು ಬಂದು ನಿನ್ನ ಅಟ್ಟಿ ಗುಡುಸ್ತೀನಲ್ಲ ಅಕ್ಕಯ್ಯ ಆ ಜಗುಮಾ ಎಲ್ಲಮುಗೆ ನನ್ನ ಬಡು ಬಕ್ತೀ ನೀಡ ಕಳುತ್ತೀನಿ. ಒಂದು ಪಡಿ ಅಕ್ಕಿ ಕೊಡಕ್ಕಯ್ಯಾ ಅಂತ ಕಾಡ್ತಾಳೆ. ಕೊಡೋದಿಲ್ಲ ಹೋಗೇ ಅಂತ ಸಾವುಕಾರ್ ಸಂಗಮ್ಮ ಆಲ್ ಕಡೀತಾಳೆ)

ನಾವ್ ಗಂಡ–ಹೆಂಡ್ರು ನಿನ್ ಮನೇಲಿ ಜೀನ ಮಾಡುವಾಗ ನೀನು ಕೊಟ್ಟೇ ತೀರ್ಬೇಕು. ಒಂದು ಪಡಿ ರಾಗೀಯ. ನಾನು ಎಲ್ಲಮ ದೇವ್ರಿಗೆ ಬಡು ಬಕ್ತೆ ನೀಡೇ ತೀರ್ಬೇಕು ಅಂದ್ ಗಳಿಗೆಲ್ಲಿ

ನನ್ ಮಾತಿಗೆ ಮಾತಿಗೆ ನೀನು ವಾದ ಕೊಡುತೀಯಾ

ನನ್ ಮಾತಿಗೆ ಮಾತೀಗೆ ನೀನು ವಾದ ಕೊಡುತೀಯಾ

ಎದ್ ಬತ್ತಾಳೆ ಸಾವುಕಾರ್ ಸಂಗಮ್ಮ ಎಂಥಾರು ಒಂದ್ ಮಾತಿಗೆ ತಿರುಗಿ ಹೋತಾರೆ. ನೀನು ಕೊಡ್ಲೇಬೇಕು ಅಂತ ಚಂಡಿ ಹಿಡುದುದ್ದೀಯಲ್ಲಿ ಅಂತ ಎದ್ ಬಂದು ಪಿಲ್ಲಿ ಕಾಲಲ್ಲಿ ಬಡವೆ ಸಂಕಮ್ಮೆಗೆ ಒದ್ದಲ್ಲೋ ದೇವಾ

(ಅಲ್ಲಿ ಬಡವೆ ಸಂಕಮ್ಮ ಎಲ್ಲಮದೇವುರ ಸೆರಣೇಲಿ ಇರುವಾಗ ಈ ಸಾವುಕಾರ್ ಸಂಗಮ್ಮ ಅಲ್ಲಿ ಬಡವೆ ಸಂಕಮ್ಮಗೆ ಒದ್ದುದ್ ಇಲ್ಲಿ

ಎಲ್ಲಮ್ಮು ದೇವೀಗೇ ಶಿವುನೆ ಬಿದ್ದಂಗಾಯ್ತಲ್ಲಾ

ಇಲ್ಲಿ ಎಲ್ಲಮ್ಮ ದೇವೀಗೇ ಶಿವುನೆ ಬಿದಂಗಾಯ್ತಲ್ಲಾ

ಅವುಳಿರಾದು ಎಲ್ಲಮು ದೇವರ ಸೆರಣೇಲಿ. ಅಲ್ಲಿ ಸಾವುಕಾರ್ ಸಂಗಮ್ಮ ಬಡುವೆ ಸಂಕಮ್ಮ ಬಿದ್ದುದ್ ಎಲ್ಲಮು ದೇವ್ರೀಗೆ ಬಿದ್ದಂಗಾಯ್ತದೆ. ಎಲ್ಲಮ್ಮುದೇವುರು

ಅಲ್ಲಾ ಕಡೀತಾರೆ ಶಿವುನೆ ಕಣ್ ಬುಡುತಾರೇ

ನಾನೇ ಹೋಗುತೀನಿ ಆವುಳ ಸಿರಿಯಾ ಮುರಿತೀನಿ.

ಪಿಲ್ಲಿ ಕಾಲಲ್ಲಿ ಬಿದ್ದುದ್ಯಾಲೆ ಬಡುವೇ ಸಂಗಮುಗೆ, ಪಿಲ್ಲಿ ಕಲ್ಲು ಹೋಗಿ ಅಣೆಗೆ ನಾಟಿಕ್ಯಂಡು

ಮೂಗಿನ ಮ್ಯಾಲೇ ನೋಡೂ । ಕಲ್ಯಾಣದೇವಾ

ಮೂಗಿನ ಮ್ಯಾಲೇ ನೋಡೂ ।

ರಕುತ ಇಳಿದೋಗುತಾದೇ

ಕೆನ್ನ ಮೇಲೆ ಕಣ್ಣೀರು ಇಳಿಯುತ್ತಾದೇ

ಆಳುತಾ ಅಳುತಾ ನೋಡೂ ।

ಅಳುತಾ ಎಲ್ಲಮ ಒಳಗೆ ಬಂದು

ಎಲ್ಲಮುನ ಕಾಲು ಮ್ಯಾಲೇ।

ಆಸುನಕೆ ಬೀಳುತಾಳೇ।

ಬಾಡು ಬಕ್ತೀಯ ತಾಯಿ ।

ನಾನೇನ ನೀಡಲವ್ವಾ

ನಿನ್ನ ಸೆರಣೆಯ ಎತ್ತಿಗಂಡು

ಸಾಲುಕ್ಕೆ ರಾಗೀನ ನಾನು ಹೋದೇ

ನಿನ್ನ ಸೆರಣೆಯ ಎತ್ತಿಗಂಡೂ

ಸಾಲುಕ್ಕೆ ರಾಗೀನೋದೋ

ನನ್ನ ಮಕ್ಕೆ ಒಡೆದಾಳುಕಾನೇ

ಮನೆ ವಳುಗೆ ಏನು ಇಲ್ಲಾವಲ್ಲೇ

ಏನು ಕೊಡಲವ್ವ ನಿನುಗೇ

ಕಣ್ಣೀರ ಬಡುವತಾಳೇ

ಕಯೆತ್ತಿ ಮುಗಿಯುತಾಳೆ

ಬಡವೆ ಸಂಕಮ್ಮ ನೀನು ಸೆರಣೆ ಎತ್ತಿಕಂಡು ರಾಗೀಗೋದೆ. ನೀನು ನನ್ನ ಸೆರಣೇಲಿರಬೇಕಾರೆ ಆ ಸಾವುಕಾರ್ ಸಂಗಮ್ಮ ಕಾಲಲ್ಲಿ ಒದ್ದವ್ಳೆ. ನನ್ನ ಸೆರಣೇಲಿರುವಾಗ ನಿನ್ನ ಒದ್ದಿರೋದು..

ಅವ್ಳು ನಿನ್ನ ಒದ್ದಿಲ್ಲ ಅವುಳು ನನ್ನ ಒದ್ದವಳೇ ॥ಶರಣು॥

ಅವ್ಳು ನಿನ್ನ ಒದ್ದಿಲ್ಲ ಅವುಳು ನನ್ನ ಒದ್ದವಳೇ

ನಾನೇ ಹೋಗುತೀನಿ ಅವುಳ ಸಿರಿಯ ಮುರುದೇನು

ಅವುಳ ಸಿರಿಯ ಮುರುದೇನೂ ಅವುಳ ಸಂಪತ್ ಮುರುದೇನೂ

ಹೋಗಿ ಬತ್ತೀನಿ. ಮನೆ ವಳುಗೆ ಏನು ಇಲ್ಲ. ಯಾತುಕ್ಕೆ ಸಂಕಟ ವಡ್ತೀಯ ಹೋಗಿ ಬಾ ಅನ್ನದಾಗಿ ಒಂದು ಸೆರಣೆ ನುಡಿ ಹೋಗಿ ಬತ್ತೀನಿ .

ತಾಯಿ ತಾಯಿ ಬಡ ಬಕ್ತಿ ನೀಡ್ತೀನಿ ಅನ್ನದಾಗಿ ನುಡುದಿದ್ದೀನಿ. ನನ್ನ ಬಡ ಬಕ್ತಿ ನೀಡೇ ತೀರಬೇಕು. ಏನು ನೀಡ್ಲಿ ಅನ್ನದಾಗಿ ಯೇಚ್ನೆ ಮಾಡುತ್ತಾಳೆ. ಚಿಂತೆ ಮಾಡುತ್ತಾಳೆ .

(ಯೇನ್ ಚಿಂತೆ ಮಾಡ್ತಾಳೆ. ಅಕ್ಕುನು ಮನೆ ಅಟ್ಟೀ ಕೊಟ್ಟಗೆ ಗುಡಿಸಿದ್ರೆ ಒಂದು ಪಡಿ ರಾಗಿ ಕೊಡೋಳು. ಅದ ತಂದು ರಾಗೀ ಕಲ್ಲಲ್ಲಿ ಬೀಸುವ್ನಳ್ಳಿ.. ರಾಗಿ ಕಲ್ಲನ್ಲೇನಾರು)

ರಾಗಿ ಕಲ್ಲಲ್ಲೇನಾರೂ.. ಅಸಿಟು ಸಿಕ್ಕುತ ನೋಡಾನ..

ಹೋಗಿ ರಾಗಿ ಕಲ್ಲತ್ತಿ ಅಮ್ಮ ಅಸಿಟ ಗುಡಸೋಳು

ರಾಗಿ ಕಲ್ಲೆತ್ತಿ ಅವ್ವ ಅಸಿಟ ಗುಡುಸೋಳು

ಒಂದು ಹಿಡಿ ಸಿಕ್ಕುರೆ ಒಂದು ಪಡೀ ಸಿಕ್ತಲ್ಲ..

ಕೊಡ್ತೀನಿ ಅಂತ, ಬಡ ಬಕ್ತಿ ನೀಡುತ್ತೀನಿ ಸೊಲ್ಲೆತ್ತಿ ನುಡುದುಬಟ್ಟಿದ್ದೀನಲ್ಲ.. ಅಮ್ಮುಗೆ ನೀಡಬೇಕು, ರಾಗಿ ಕಲ್ಲನಾರ ಎತ್ತಿ ಹಿಟ್ಟು ಗುಡಿಸಿ ಅಮ್ಮುಗೆ ಬಡ ಬಕ್ತಿ ನೀಡಕೆ ರಾಗಿ ಕಲ್ಲೆತ್ತಿ ಅಸಿಟು ಗುಡುಸ್ತಾಳೆ. ಇವುಳಿಗೆ ಇಡಿ ಸಿಕ್ಕಿದುಕೆ ಪಡಿ ಸಿಕ್ಕುತ್ತಾದೆ. ಪಡಿ ಅಸಿಟು ತಂದು ಎಲ್ಲಮುನ ಮುಂದೆ ನಿತ್ಕಂಡು.

ಅಮ್ಮುಗೆ ಬಾಡು ಬಕ್ತೀಯ ಶಿವುನೆ ನೀಡುತಾಳಲ್ಲ

ಅಮ್ಮುಗೆ ಬಾಡು ಬಕ್ತೀಯ ಬಡುವೆ ನೀಡೂತಾಳಲ್ಲ

ಈಗ ಹೋಗಿ ಬಾರವ್ವ ನನ್ನ ಜಗುನೂ ಎಲ್ಲಮ್ಮ

ಹೋಗಿ ಬಾ ಅನ್ನದಾಗಿ ಕೆಯತ್ತಿ ಮುಗುದು. ಶರಣಾರ್ತಿಯಾಗಿ ಪಾದ ಮುಟ್ಟಿ ಸೆರಣು ಮಾಡಿ ಬಡ ಬಕ್ತಿ ನೀಡಿ ಮುಂದುಕೆ ಕಳುಸ್ತಾಳೆ ಬಡವೆ ಸಂಗಮ್ಮ ಈಗ ಮುಂದುಕೆ ಎಲ್ಲಿಗೆ ಹೋಗುತ್ತಾರೇ ಎಲ್ಲಮ ದೇವರು ಜಗಮ ಎಲ್ಲಮವನರು

ಹೆಡ್ತಿ ದುಡ ನೋಡ್ದಂಗಾತು .ಇನ್ನ ಗಂಡುನ ದುಡ ಪರೀಕ್ಷೆ ಮಾಡಬೇಕು. (ಇವುಳ್ ಬಡ ಬಕ್ತಿ ಇವುಳ ದುಡ ನೋಡ್ಡಂಗಾಯ್ತು. ಇನ್ನ ಇವ್ಳ ಗಂಡುನ ದುಡ ನೋಡಬೇಕು.)

ಜಗಮಾ ಎಲ್ಲಮ ದೇವುರು.. ಇವುಳ ದುಡ ನೋಡಾಯ್ತು. ಇವಳ ಗಂಡುನ ದುಡ ಯಂಗದೆ .ಅವುನ ದುಡ ನೋಡಬೇಕು ಅಂತ ಈಗ ಇವುಳ ಗಂಡ ಚಿಕ್ಕಮಲ್ಲೇಗೌಡ ಅಣ್ಣುನ ಹಿತ್ಲಲ್ಲಿ ಯಂಡ ಬಸೀತಾ ಅವನೆ ಅಣ್ಣುನ ಮನೆ ವಳುಗೆ ಜೀತುಕ್ಕದ್ನಲ್ಲ ಅಣ್ಣುನ ಹಿತ್ಲಲ್ಲಿ ಯಂಡ ಬಸೀತಾ ಅವನೆ. ಅವುನ ದುಡು ನೋಡುದಕ್ಕೆ ಜಗುಮಾ ದೇವಿ ಎಲ್ಲಮ್ಮ .

ಈಗಾ ಈಚುಲ ನಾಸಕ್ಕೆ ಹೋಗೂತವರಲ್ಲ
ಈಚುಲ ವಾನಕ್ಕೆ ಅಮ್ಮ ಹೋಗೂತವರಲ್ಲ
ಈಚುಲ ವಾನುದಲ್ಲಿ ತಾಯಿ ಉದೋ ಉದೋ ಅನ್ನುತ್ತಾರೆ.
ಉದೊ ಊದೋ ಎನ್ನುತಾರೆ ತಾಯಿ ಬಂಡಾರ ಚಲ್ಲುತ್ತಾರೆ
ಚಿಂಕಿ ಚಿಂಕನೆ ತಾಯಿ ಚವುಡಿಕೆ ಹೊಡಿತಾರೆ

(ಹೆಡ್ತಿ ದುಡ ನೋಡಾಯ್ತು. ಗಂಡುನ್ ದುಡ್ ನೋಡಬೇಕು ಅನ್ನದಾಗಿ ತಾಯಿ ಅಣ್ಣ ದೊಡ್ಡ ಮಲ್ಲೇಗೌಡನ ಈಚುಲ ವನದಲ್ಲಿ ಹಿತ್ತಲ್ಲಿ ಯಂಡ ಬಸೀತಾ ಇದ್ನಲ್ಲಿ ಚಿಕ್ಕಮಲ್ಲೇಗೌಡ ಸೇಂದಿ ಬಸೀತಾ ಇದ್ನಲ್ಲ ಅಲ್ಲಿಗೋಗಿ ಚವುಡಿಕೆ ಹೊಡೆದು ವಸೀ ಸೇಂದಿ ಉಯ್ಯಪ್ಪ ಅಂತಾ ಬೇಡುವಾಗ ಎಲ್ಲಮು ದೇವುರು ಈಗ ಚಿಕ್ಕಮಲ್ಲೇಗೌಡಗೆ ಕನಿಕರ ಕೊಡಿ ಬಂತು. ಯೇನು ಕನಿಕಾರ )

ನಾನು ಈಗ ಬಟ್ಟುರ ರುಣದಲ್ಲದ್ದೀನಿ ಜೀತ ಮಾಡ್ತಾ ಇದ ನಾನು ಯಂಗೆ ಸಂಕುಗೆ ಸೇಂದಿ ಉಯ್ಲಿ ಅನ್ನದಾಗಿ..

ಕಣ್ಣೀರ ಬುಡುತಾನೆ ಶಿವುನೆ ಕಯ್ಯ ಮುಗಿತಾನೆ ॥ಶರಣ॥

ಎಲ್ಲಮು ದೇವುರ ಮಕ ನೋಡಿದ್ ಗಳಿಗೇಲಿ ಚಿಕ್ಕಮಲ್ಲೇಗೌಡುಗೆ ಬಾಳ ಕನಿಕಾರ ಕೂಡಿ ಬಂದು ಈಗ ಅಮ್ಮಗೆ ಶಾಕಿ ಊದು ತೀರ್ಬೇಕು. ಶಾಕಿ ಊಯ್ಯಕ್ಕೆ ನಾನು ಒಬ್ರು ಮಲ್ಲಿ ಜೀತುಕ್ಕೆ ಇದ್ದೀನಲ್ಲಿ. ಈಗ ನಮ್ಮಣ್ಣ ದೊಡ್ಡ ಮಲ್ಲೇಗೌಡ ಒಂದ್ ತೊಟ್ಟು ಯಂಡ ಕೊಟ್ರೆ ನಿನ್ನ ಬಲಿ ಹಾಕ್ತಿನಿ, ಮರುಕ್ಕೆ ಕಟ್ತೀನಿ. ಅಂಅವ್ನೆ ಯಾರಿಗು ಕೊಡಂಗಿಲ್ವಲ್ಲ. ಆದ್ರೆ ಈ ಜಗುಮಾ ಎಲ್ಲಮ್ಮೆಗೆ ನಾನು ಕಟ್ ತೀರ್ಬೇಕಲ್ಲ .

ಶಿವುನೆ ಕಯ್ಯ ಮುಗೀತಾನೆ ಶಿವುನೆ ಕಣ್ಣೀರ ಬುಡುತಾನೇ

ಆಮ್ಮುನ ಮಕವ ನೋಡು ತಾನೆ ಶಿವುನೆ ಹಾಡಿ ಆಳುತಾನೇ ಯಾಕಪ್ಪ ನಾನು ನಿನ್ನ ಶಾಕಿ ಕೇಳುಕೆ ನಾನು ಬಂದೆ. ನೀನು ನನ್ನ ನೋಡಿ ಕಣ್ಣೀರ್ ಬುಡ್ತೀಯಲ್ಲಿ ಕಾರುಣವೆನು ಅನ್ನದಾಗಿ ಎಲ್ಲಮುದೇವುರು ಚಿಕ್ಕಮಲ್ಲೇಗೌಡ್ನ ಕೇಳುವಾಗ ತಾಯಿ, ತಾಯೀ ನಾನು ಒಬ್ಬ ಜೀತುಗಾರ ಜೀತ ಮಾಡಾನ್ ತಾವ ಯಾಚಿಕುಕ್ಕೆ ಬಂದದ್ದೀರಿ ನೀವು

ಬೇಡ್ತಾ ಇದ್ದೀನಿ. ನಿಮಿಗೆ ಶಾಕಿ ಕೊಟ್ಟೇ ತೀರ್‌ಬೇಕು.  ಒಂದು ತೊಟ್ಟು ಯಂಡ ಕೊಟ್ರೆ ನಮ್ಮಣ್ಣ ನರಬಲಿ ಹಾಕುತ್ತಾನೆ.

ಯೇನ ಕೊಡುಲವ್ವ ನಾನೂ । ಕಲ್ಯಾಣದೇವಾ

ಜೀತುದ ಆಳು ನಾನೂ

ಜೀತುದ ಆಳು ನಾನೂ

ಶಾಕಿಯ ಯಂಗೆ ಉಯ್ಯಾಲಿ ನಾನು

ಲೋಕುಕು ದೊಡ್ಡೋರು ನೀವು

ಬೂಮೀನ್ ಹಿರಿಯೋರು ನೀವು

ಯೇನು ಕೊಡಲವ್ವ, ತಾಯೀ

ಕಣ್ಣೀರ ಬುಡವತಾನೇ

ಈಗ ನೀನು ಬಡುತಾನುಕ್ಕೆ ಬಂದು ನೀನು ಇಲ್ಲ ಜೀತ ಮಾಡ್ತಾ ಇದ್ದೀಯ. ಈಗ ಒಂದ್ ತೊಟ್ಟು ಯಂಡ ಕೊಟ್ರೆ ಬಲಿ ಹಾಕ್ತೀನಿ ಅಂತ ನಿಮ್ಮಣ್ಣ ನಿನಗೆ ಹೇಳ್ಯವನೆ. ನನಿಗೆ ಬಂದ್ ಶಾಕಿ ಯಂಡ ಉಯ್ಬೇಕು ಅನ್ನದು ನಿನ್ನಾಸೆ ಗಟೆ ನನಿಗೆ ಬೇಕು. ನನ್ನಿಂದ ಉಟ್ಟಿದ್ದು ಬೂಮಂಡ್ಲಕೆ. )

ನೀನು ಕೊಟ್ಟೀ ತೀರ್‌ಬೇಕು. ತಾಯಿ ತಾಯಿ ಕೊಟ್ಟೆ ಅನ್ನದು ಅಣ್ಣುಗ್ ಗೊತ್ತಾದ್ರೆ ನನ್ನ ಸೋಲುಣ್ಣಕುತಾನೆ. ನಾನು ಕಣ್ಣೀರ್ ಬುಡುವಾಗ .

(ಆತು ಚಿಕ್ಕಮಲ್ಲೇಗೌಡ ಕಣ್ಣೀರ್ ಬುಡಬ್ಯಾಡ ಒಂದ್ ಬೇವಿನ ಕಾಯಿ ಎಸ್ಟು ಗಾತ್ರ ಐತೆ ಅಸ್ಟು ಗಾತ್ರ ಬೇವಿನ್ ಕಾಯಿ ಎಸ್ಟು ಗಾತ್ರೈತೆ ಅಸ್ಟು ಗಾತ್ರ ಶಾಕಿ ಕೊಡಪ್ಪ .ಪರೀಕ್ಸೆ ಮಾಡಕ್ಕೆ ಒಂದ್ ಬೇವಿನ್ ಕಾಯಿ ಎಸ್ಟು ಗಾತ್ರ ಐತೆ ಮಾ.. ಅದ್ರಲ್ಲಿ ಕೊಟ್ಟೆ ನನ್ನಣ್ಣಿಗೆ ಗೊತ್ತಾಗಕಿಲ್ಲ. ಅಂತ ಮನಸ್ಸಿಗೆ ತಿಳ್ಕಿತಾನೆ ತಾಯಿಗೆ ತುಂಬ್ತೀನಿ. ಯೇನ್ ಬಂದ್ ಅವರೆ ಕಾಳು ಗಾತ್ರ ಐತಾ.. ಅದ್ರ ಬೀಜ ತೆಗುದ್ರೆ ಅದುರ್ ಕೊಳ್ವೆ ಅವರೆಕಾಳ ಗಾತ್ರ ಆತದೆ ಇದ ತುಂಬಿ ಮಮುಗೆ ಅಸ್ಟಾದ್ರು ಒಪ್ಪಿಬಿಡಾನೆ ಅನ್ನದಾಗಿ .)

ಆತು ತಾಯಿ, ಆತು ತಾಯೀ ಕೊಡುತ್ತೀನಿ ಅಂದ. ಕೊಟ್ಟು ಸೆರೆಣಾಗುತ್ತೀನಿ ಅಂದ. ಆಗ ಬೇವಿನ ಕಾಯಿ ತಗಂಡು ಬೀಜ ತಗುದು ಕೊಳವೆ ಮಾಡುತ್ತಾತೆ ಎಲ್ಲಮ ದೇವುರು ಬಂಡಾರುದ್ ಮ್ಯಾಲೆ ಅರುಸಿಣ ಕುಂಕುಮುದ್ ಮ್ಯಾಲೆ ಬೇವಿನ್ ಕೊಳವೆ ಇಡುತ್ತಾರೆ. ತುಂಬಪ್ಪ ಈಗ ಬೇವಿನ ಕೊಳವೆಗೆ ಅನ್ನುತ್ತಾರೆ

(ತುಂಬಪ್ಪ ಈಗ ಬೇವಿನ್ ಕೊಳುವೆ ಗೆ ಸೇಂದಿ ತಂದು..)

ಈಗ ಒಂದು ಮಗವನ್ನು ಶಿವುನೆ ಬಿಚ್ಚಿ ತರುತ್ತಾನೆ.

ಬೇವಿನ ಕೊಳುವೀಗೆ ಶಿವುನೆ ಉಯ್ಯಾತಾರಲ್ಲ

ಬೇವೀ ಕೊಳುವೀಯ ಶಿವುನೆ ತಳಾಕೆ ಸಾಲುನಿಲ್ಲಿ

(ಒಂದ್ ಮರುದ್ ಸೇಂದಿ ತಂದು ಬೇವಿನ ಕೊಳವೆ ಮಳೀಕೆ ಸುರಿತಾನೆ. ಅದ್ರ ತಳುಕೆ ಸಾಲಾದಿಲ್ಲ. ಇನ್ನೊಂದ್ ಮರುದ್ ಸೇಂದಿ ತಂದು ಉಯ್ತಾನೆ .ತುಂಬ್ತಿನಿ ಅಂತ ನುಡುದಿದ್ನಲ್ಲ ತುಂಬ ತೀರ್‌ಬೇಕು. ಅಮ್ಮುನ್ ಮಾಯೆ

ಮಹಿಮೆ; ಬಕ್ತಿ ನೋಡುದುಕೆ; ಕಿಸ್ಟ ಕೊಟ್ಟು ಬಕ್ತಿ ನೋಡುದಾಕೆ. ಈಗ ಇರೋ ವನವೆಲ್ಲನುವೆ ತಂದು ಊದ್ರುವೆ ಆ ಕೊಳವೆ ತುಂಬಾಕುಲ್ಲ. ಒಂದ್ ತೊಟ್ಟಲ್ವೆ ಕೊಟ್ರುವೆ ನಮ್ಮಣ್ಣುಗೆ ಕಾಣಕಿಲ್ಲ. ಕಂಡ್ರು ಸಿಕ್ಕಿಲ್ಲ ಅನ್ನದಾಗಿ ಒಪ್ಪ ಬುಟ್ಟವ್ನೆ ಈಗ ತುಂಬಿ ತೀರಬೇಕು )

ಹತ್ತು ಮರವನ್ನ ಶಿವುನೆ ತಂದು ಸುರೀತಾನೇ

ಬೇವಿನ್ ಕೊಳ್ವೀಗೆ ಶಿವುನೆ ತಳುಕೇ ಸಾಲುನಿಲ್ಲ

ಎಸ್ಟು ಮರುದ್ ತಂದು ಊದ್ರು ಆ ಬೇವಿನ್ ಕೊಳ್ವೆ ತುಂಬುನಿಲ್ಲ. ತುಂಬ್ತಿನಿ ಅಂತ ಮಾತ ಕೊಟ್ವನಿಗೆ ಕಸ್ಟ ಕೊಟ್ಟು ನೋಡಬೇಕು. ಅವುನ ದುಡು ಅವುನ ಬಕ್ತ ಅನ್ನದಾಗಿ ತಾಯಿ ಎಲ್ಲಮ ದೇವುರು ಊದಂಗ್ ಊದಂಗೆ ಎಲ್ಲನು ಮಾಯ ಮಾಡ್ತರೆ. ಎಸ್ಟೊದ್ರು ಬೇವಿನ ಕೊಳವೆ ತುಂಬೊಲ್ದು.

ಕಣ್ಣೀರ ಬುಡುವತಾನೇ । ಕಲ್ಯಾಣದೇವ

ಆಡಿಕೊಂಡಳುವತಾನೆ

ಇಸ್ಟೊಂದು ಮರತ ತಂದೂದರೂನೂ

ತುಂಬಾದಿಲ್ಲವಲ್ಲೋ ಶಿವನೇ

ಯೇನಾ ಮಾಡಲೊ ಶಿವನೇ

ಕಣ್ಣೀರ ಬುಡುವತಾನೇ

(ಆಳ್ತಾ ನಿಂತಿದ್ಯಾನ ಅಮ್ಮುನಾರ ಮುರಿದೆ. ಅಯ್ಯ ಈಗಾ ನೀನು ನನ್ನೊಕ್ಲು, ತುಂಬ್ತೀನಿ ಅಂತ ಅಂದ್ಮೇಲೆ ನೀನು ತುಂಬೇಕು. ತಾಯಿ ನಮ್ಮಣ್ಣ ಯೇನಾರ ಕೊಲೆ ಕೊಡ್ಲಿ ಗಾಣುಕ್ ಕಟ್ಟಿ ಹೂಡಿಲಿ  ತುಂಬ್ತಿನಿ ತಾಯಿ ತುಂಬ್ತನಿ ಅಂತ ಹೊಲಯೆಲ್ಲನು ತಂದು ಸುರಿತಾನೆ.)

ಹೊಲುದ್ ಸೇಂದಿ ಎಲ್ಲನು ತಂದು

ಪುಟ್ಟುಗೆ ಎಲ್ಲ ಸೇಂದೀವೆ ಬರೋವರ್ಗು ತಾಯಿ ಎಲ್ಲಮ್ಮ ದೇವಿ ಮಾಯ ಆ ಕೊಳ್ವೆ ತುಂಬ್ಲಿಲ್ಲ. ಈಗ ಪುಟ್ಟುಗೆ ಎಲ್ಲ ಸೇಂದಿ ಬಂದ್ ಮೇಲೆ ತುಂಬ್ತು. ಈಗ ಈಚುಲ ಮರಾ ಬಸ್ಗಂಡ್ ಬರಾದು ತುಂಬಾದು ಆ ಕಾಲಿ ಕೊಡ ಅಲ್ಗಡಾದು, ಇನ್ನೊಂದ್ ಮರುಕ್ ಹೋಗದು ಅದ್ನ ಬಿಚ್ಚಬರಾದು, ತುಂಬಾದು, ಅದ್ನ ಅಲ್ಗಿಡದು ಇಂಗೆ ಬರಿ ಕಾಲಿ ಕೊಡಗೋಳು ಎಲ್ಲ ಲೈನಾಗಿ ಕೂತವೆ.)

ಹೊಲುದ್ ಸೇಂದಿ ಎಲ್ಲಾನು ತಂದ್ ಸುರಿಯೋವರ್ಗು, ಹೊಲದು ಸೇಂದಿಯೆಲ್ಲಾನು ತಂದು ಆ ಬೇವಿನ ಕೊಳವೆ ವಳೀಕೆ ಊರು ಮ್ಯಾಲೆ

ಆಗ ತುಂಬೀ ತುಳುಕೋಯ್ತು ತಾಯಿ ಜಗುಮಾ ಎಲ್ಲಮ್ಮಾ ॥ಶರಣು॥

ಎಲ್ಲಮು ದೇವೂರು ಈಗ ಕಸ್ಟ ಕೊಟ್ಯಾರೇ

ಇವುನ ಬಕ್ತಿ ನೋಡಾಕೆ ಅಮ್ಮ ಕಸ್ಟ ಕೊಟ್ಟಾರೇ

(ಈಗ ಹೊಲುದ್‌ಲ್ಲೆಲ್ಲು ಸೇರಿದಿಲ್ವಲ್ಲ..ಈಗ ಅಣ್ಣ ಸೇಂದಿ ಯೇರ್ಕ್ಯಂಡೋಗಾಕೆ ಎತ್ತಿನ ಮ್ಯಾಲೆ ಕತ್ತೆ ಮ್ಯಾಲೆ ತೆರ್ದಿ ತಗಬತ್ತಾನೆ. ತಿರ್ಚಿ ಅಂದ್ರೆ.. ಈಗಿನ ಕಾಲ್ಬಂಗೆ ಆಗ ಉಸ್ಸು ಲಾರಿ ಇರ್ನುಲುವಲ್ಲ ಆಗಿನ ಕಾಲದಲ್ಲಿ ಎತ್ತಿನ ಮ್ಯಾಲೆ

ಕತ್ತೆ ಮ್ಯಾಲೆ ಯಂಡ ಯೇರ್ಕ್ಯಂಡೋತುದ್ರು ಈಗ ಅಣ್ಣ ಎತ್ತಿನ ಮ್ಯಾಲೆ ಕತ್ತೆ ಮ್ಯಾಲೆ ತಿರ್ಗ್ಚಿ ವತ್ತನಲ್ಲಿ ಯೇನ್ ಕೊಡ್ಲಿ ಅಂತಾ ಕಸ್ಟ ಕೊಟ್ಟುಬುಟ್ಲು ಎಲ್ಲಮ್ಮ )

ಏಳು ಕುಲದ ತಾಯಿ ನಿನ್ನವತಾರ ನಿನ್ನ ಮಹಿಮೆ .

ಅಣ್ಣ ಎತ್ತಿನ ಮ್ಯಾಲೆ ನೋಡೋ। ಕಲ್ಯಾಣದೇವಾ
ತಿರ್ಗ್ಚಿಯ ತರುವ ತಾನೇ
ಕತ್ತೆಯಮ್ಯಾಲೇ ನೋಡೂ
ತಿರ್ಗ್ಚಿಯ ತರುವ ತಾನೇ
ಯೇನು ಕೊಡಲವ್ವ ತಾಯೇ
ಕಣ್ಣೀರ ಬಿಡುವತಾನೇ
ಆಡಿಕೊಂಡಳುವತಾನೇ
ನಿಡಿಗೋಳ ಮಾಡುತಾನೇ
ಎಲ್ಲಮ್ ದೇವಾರ ಮುಂದೇ
ಕಣ್ಣೀರ್ ಬುಡುವತಾನೇ

ಯೇನ್ ಕೊಡ್ಲಿ,,, ಅಣ್ಣ ಎತ್ತಿನ್ ಮ್ಯಾಲೆ ಕತ್ತೆ ಮ್ಯಾಲೆ ತಿರ್ವಿ ತತ್ತಾನೆ. ಅನ್ನಾದು ಜನ ಕುಡೀಬೇಕು. ಅಂತ ಕಾಯ್ಕಂಡು ಅಲ್ ಕೂತವ್ರೆ. ಈ ಹೊಲ್ದಲ್ಲಿ ಸೇರಿದೆ. ಇಲ್ಲದ್ ಮೇಲೆ ಯೇನ್ ಕೊಡ್ಲಿ ತಾಯಿ ಅನ್ನದಾಗಿ )

ಯೇನ ಕೊಡುಲವ್ವ ತಾಯಿ । ಕಲ್ಯಾಣದೇವಾ
ಜನುವೆಲ್ಲ ಕಾಯ್ತಾ ಕುಂತವರಲ್ಲ
ಇಲ್ಲ ಸೇಂದಿ ಇಟ್ಟಿಲ್ವೇ ತಾಯೀ
ಅಣ್ಣನಿಗೆ ಯೇನ ಕೊಡಲವ್ವಾ ನಾನು
ಯಲ್ಲಮ್ ದೇವ್ರ ಪಾದವ ತಬ್ಬಿಕಂಡೂ
ಎಲ್ಲಮ್ ದೇವೂರ ಪಾದ ತಬ್ಬೀಕಂಡೂ
ಕಣ್ಣೀರ ಬುಡವತಾನೇ
ನಿಡಿಗೋಳ ಮಾಡುತಾನೆ
ಆಡಿಕಂಡಳುವ ತಾನೇ

ನಿನ್ ಬಡುತಾನದ ಬಕ್ತಿ ನಿನ್ನಲ್ಲಿದೆ ಕಾನಪ್ಪ ಅಣ್ಣ ಎತ್ತಿನ ಮ್ಯಾಲೆ ಕತ್ತೆ ಮ್ಯಾಲೆ ತಿರ್ಗ್ಚಿ ತತ್ತಾನೆ. ಅಲ್ಲಿ ಕುಡಿಯಕೆ ಜನೆಲ್ಲ ಕಾಯ್ತವ್ರೆ. ಇಲ್ಲಿ ಯಂಡ ಇಲ್ಲುದ್ ಮ್ಯಾಲೆ ಯೇನ್ ಕೊಡ್ಲಿ ತಾಯಿ ತಾಯಿ ನಿನ್ನ ಸೆರಣೆಲಿದ್ದು. ಇದೆಲ್ಲ ನಿನಿಗೆ ಸೇರಿದ್ದು ನಿನ್ನ ಪಾದ ಮುಟ್ಟಿ ಸೆರಣು ಮಾಡುತ್ತೀನಿ. ಎಲ್ಲಾರ್ನು ಸಂತೋಷ ಪಡ್ಸು ಅಂತಾ

(ಎಲ್ಲಾರ್ನು ಸಂತೋಷಪಡಸಮ್ಮ. ನೋಡು ಇದ್ದ ಸೇಂದಿಯಲ್ಲನುವೆ ನಿನ್ನ ಕೊಳುವಗೆ ತುಂಬಿದ್ದೀನಿ. ಅಲ್ಲಿ ಕುಡಿಯೋ ಜನ ಆಸೆಗೆ ಕಾಯ್ತಾ ಕೂತವ್ರೆ. ಅವುರ್ಗೇನು ಮಾಡ್ಲಿ ತಾಯಿ ಅಂತ ಬೇಡುವಾಗ ಆಗ ಎಲ್ಲಮ್

ದೇವುರು ಹೇಳುತ್ತಾರೆ ಅಯ್ಯಾ ನಾನು ಸಂತೋಷ ಪಟ್ಟೆ ಈಗ ಈಗ ಮಾಡುಮಾಕುಕ್ಕೆ ಮಕಾ ಅಕೆ ನಿಲ್ಲಪ್ಪ ಚಿಕ್ಕಮಲ್ಲೇಗೌಡ ನೀನು ಶಾಕಿ ಊದುದು ನನಿಗೆ ಸಮರುದ್ದುವಾಯ್ತು. ಈ ಯಂಡಾ ಇಲ್ದೆವಾದ್ರೆ. ಅಲ್ಲಿ ಕುಡಿಯೋ ಜನ ಎಸ್ಟು ನೋವು ತಿಂತಾರೆ. ಅವುರುನ್ನ ಸಂತೋಸ್ ಪಡುಸ್ಬೇಕು. ಮೂಡು ಮುಂದಾಗಿ ಮಕಾ ಆಕೆ ನಿಲ್ಲಪ್ಪ.. ಚಿಕ್ಕಮಲ್ಲೇಗೌಡ. ಈಗ ನಿನ್ನೆತ್ತಿ ದುಡ ಮಲ್ಲಿ ನೋಡ್ಕ್ಯಬಂದೆ. ಈಗ ನಿನ್ನ ದುಡ ಇಲ್ಲಿ ನೋಡ್ದಂಗಾಯ್ತು. ಒಂದೇ ದುಡುವಾಗಿ ಊದು ಕಣ್ಣೀರ್ ಬುಡ್ತಾ ಇದ್ದೀಯ. ನಾಕಾರ್ ಜನ ಸಂತೋಸ್ ಪಡುಬ್ಬೇಕು ಈ ಗಟೆಯಿಂದ )

ಈಗ ಮಲ್ಲೇಗೌಡ

ಮೂಡು ಮುಂದಾಗಿ ನೀನು ಮಾಕವನಾಕಪ್ಪ

ಸೂರಿ ದೇವುರಿಗೆ ನಿನ್ನ ಮಕವಾ ತೋರಪ್ಪ

ಸೂರಿ ದೇವುರು. ಅವುರೆ ಬಗುವಂತ  ಅವುರಿಗೆ ಕಯೆತ್ತಿ ಮುಗಿ ಶಾಲಿ ಅರಿಬಿ ತುಂಬ್ತಾವ ನೋಡನ .

(ಸೂರಿ ದೇವಿರಿಗೆ ಅವುದರು ಕಡಿಕೆ ಮಕ ಹಾಕಿ ಕೈಮುಗಿ – ಅವುರು ಮ್ಯಾಲೆ ಹೊರೆ ಬೀಳಬೇಕು– ಇಲ್ಲಿ ಅರಿಬಿ ತುಂಬ್ತಾವ ನೋಡನ. ಸೂರಿ ದೇವುರಿಗೆ ಮಕ ಹಾಕಿ ಸರಣೆ ಮಾಡ್ಕಂಡ್ ನಿಂತ್ಕ )

ಆಗ ಚಿಕ್ಕಮಲ್ಲೇಗೌಡ ದೂಪು ದೀವುಳಿಗೆ ಮಾಡಿ ಸೂರಿ ದೇವುರಿಗೆ ಕೈಮುಗಿವಾಗ .

ಇಲ್ಲಿ ಎಲ್ಲಮ್ಮ ದೇವೂರು ತಾಯಿ ಊದೋ ಊದೋ ಅನ್ನತ್ತಾರೆ ॥ಶರಣು॥

ಉದೋ ಉದೋ ಅನ್ನುತ್ತಾರೆ ಹೊಲುಕೆ ಬಂಡಾರ ಚೆಲ್ಲುತ್ತಾರೆ

ಉದೋ ಉದೋ ಅಂತ ತಾಯಿ ಬಂಡಾರ ಚಲ್ಲಿದಾಗ ತಾಯಿ ಮಹಿಮೆ

ಎಲ್ಲಾ ಕೊಡಗೋಳು ಶಿವುನೆ ತುಂಬಿ ನಿಲುತ್ತಾವೇ

ಲೆಲ್ಲಾ ಕೊಡಗೋಳು ಶಿವುನೆ ತುಂಬಿ ನಿಂತಾವೆ

(ಜಗುಮಾ ಎಲ್ಲಮ್ಮುನ ಸೆರಣೆ ಈಗ ಉದೋ ಅಂತ ಬಂಡಾರ ಇಟ್ಟೆ ಗಳಿಗೆಲ್ಲ ಈಕಾಲೆಇ ಅರಬಿ ಇದ್ವಲ್ಲ, ಬಿಟ್ಟಬಂದು ಬಿಟ್ಟಬಂದು ಕಾಲಿ ಅರಿಬಿ ಇಟ್ಟದ್ನಲ್ಲ ಹೊಲದಲ್ಲಿ ಕಾಲಿ ಆರಿಬಿ ಅವೆಲ್ಲ ತುಂಬಿ ನಿಂತವೆ)

ಈಗ ತಿರುಗಿ ನೋಡಪ್ಪ ನನ್ನ ಚಿಕ್ಕುಮಲ್ಲೇಗೌಡ

ಈಗ ತಿರುಗಿ ನೋಡಪ್ಪ ನನ್ನ ಚಿಕ್ಕುಮಲ್ಲೇಗೌಡ

(ಇಲ್ಲಿ ನೋಡಿದ್ರೆ ಎಲ್ಲಾ ತಲುವೆ ಉಕ್ಕಿ ಅರುದಾಡುತ್ತೈವೆ. ಈಗ ಇವುನಿಗೆ ಪಂಚು ಪರ್ವತವಾಯ್ತು. ಈಗ ಕರೆಕರೆ ಬತ್ತದೆ ಅವುನಿಗೆ ಎಲ್ಲಮ್ಮುಗು ಶಾಕಿ ಹಾಕ್ದ್ಯಂಗಾತು. ಅವುಗಳಿಗು ಸಂತೋಸ ಆತು. ಇವುನ್ ಮನಸು ನಿರಾಳುತು.)

ತಾಯಿ..ತಾಯಿ

ನಿನ್ನ ಮಾಯ ಬಲ್ಲಿನದು ಜಗುದಲ್ಲಿ ಯಾರೂ ಇಲ್ಲುವಲ್ಲಾ

ನಿನ್ನ ಮಹಿಮೆ ಬಲ್ಲೋರು ಶಿವುನೆ ಯಾರೂ ಇಲ್ಲುವಲ್ಲಾ

ನೀವೂ ಜಗೂಕೆಲ್ಲವಾ ನೀವೇ ಮಾಯ ತಾಯೀ

ಜಗೂಕೆಲ್ಲಾವ ನೀವೇ ಮಾಯನವ ತಾಯೇ

ನಿನು ಮಾಯ ಬಲ್ಲಿನರು ಜಗುದಲ್ಲಿ ಯಾರೂ ಇಲ್ಲುವಲ್ಲಾ

ಅಮ್ಮನ ಪಾದಾ ಮುಟ್ಟುತ್ತಾನೆ ಶಿವುನೆ ಸೆರಣು ಮಾಡುತಾನೆ.

ಅಮ್ಮನ ಅವುತಾರ ಅಮ್ಮನ ಮಹಿಮೆ ಸಪ್ಪುಗಿದ್ದ ಮಕ ಈ ನೈನಗಾಡಂಗೆ ಮಾಡಿದ್ರು

(ಈಗ ಅಣ್ಣ ಎತ್ತಿನ ಮ್ಯಾಲೆ ಕತ್ತೆ ಮ್ಯಾಲೆ ತಿರ್ಚು ತತ್ತಾನೆ. ಯೇನ್ ಕೊಡ್ಲಿ ಅನ್ನದಾಗಿ ಸಪ್ಗಿದ್ದ ಮಕಾ ಈಗ ಕಲಿಯಾತು. ಯಾರಿಂದ? ಎಲ್ಲಮು ದೇವರಿಂದ, ಅಮ್ಮನವತಾರ..)

ಅಮ್ಮನ ಅವತಾರ ಸಪ್ಪುಗು ಮಾಡ್ತಾರೆ, ಕಲೀನು ಮಾಡ್ತಾರೆ.

ಅಮ್ಮನ ಮಾಯಾ ಬಲ್ಲೋರು ಶಿವನೆ ಯಾರು ಇಲ್ಲುವಲ್ಲ

ಮಹಿಮೆ ಬಲ್ಲೋರು ಜಗುದಲ್ಲಿ ಯಾರು ಇಲ್ಲುವಲ್ಲ

ಆದು ಸಕ್ತ್ಯಲ್ಲ ಶಿವುನೆ ಆದೀಲುಟ್ಟಿದೋರೂ

ಜಗುಮಾ ಎಲ್ಲಮ ತಾಯಿ ಜಗುಕೆ ಮಾಯಲ್ಲಾ

(ಜಗುಮಾ ಎಲ್ಲವ್ವ ಜಗುಕೆ ತಾಯಿ ಕಾನವ್ವ. ನನ್ನ ಸಪುಗಿದ್ದ ಮಕಾವ ಕಲಿಮಾಡ್ದೆ ಮುಂದೆ ನಮ್ಮಣ್ಣ ಕತ್ತೆ ಮ್ಯಾಲೆ ತಿರ್ಚಿ ತತ್ತಾನೆ. ಎತ್ತಿನ ಮ್ಯಾಲೆ ತಿರ್ಚಿ ತತ್ತಾನೆ. ಯೇನ್ ಕೊಡ್ಲಿ ಅನ್ನದಾಗಿ ಸಪ್ಗತ್ತು ಮಕಾ ನಿನ್ ಮಹಿಮೆ ಮಾಯ ನನ್ನ ಕಲ್ಯಾಣವಾತು ತಾಯಿ)

ಅವ್ವ ನಿನ್ನಾಪಾದುಕ್ಕೆ ತಾಯಿ ಸೆರಣು ನನ್ನವ್ವಾ

ಆಯ್ತು ಹೋಗಿ ಬಾ ಅನ್ನಪ್ಪ ಹೋಗಿ ಬತ್ತೀನಿ.

ತಾಯಿ ತಾಯಿ ನನ್ನದೊಂದು ಮಾತು, ನನಿಗೊಂದು ಆಸೀರ್ವಾದ ನನಿಗೊಂದು ನುಡಿ ನುಡಿಬೇಕು .

ಯೇನ್ ನುಡಿಬೇಕು ಕೇಳಯ್ಯ

ನಿನ್ನಂಗೆ ಹತ್ತಾರು ಜನ ನನ್ನ ಮನೇವಳೀಕೆ ಬತ್ತಾರೆ.

(ಈಗ ಬಿಕ್ಸುಕರಾಗಿ ನನ್ನ ಮನೇ ವಳಿಕೆ ನುಗ್ಗುತ್ತಾರೆ. ನಾವು ಬಡುವರು ಅನ್ನ ವಿಚಾರ ಬಿಕ್ಸುಗಾರ್ರಿಗೇನು ಗೊತ್ತು. ನಾವು ಬುಡುವುದು ಗಂಡ ಹೆಡ್ತಿ ಜೀತ ಮಾಡ್ತಾ ಇದ್ದೀವಿ. ಈಗ ಕಾರುಣ್ಯ ಅಂದಂಗೆ ಯೇನ್ ಕೊಡಾನ..)

ತಾ ಅಂದಾರ್ಗೆ ಕೊಡೋ ಅಂತ ಯೇನ ಕೊಡವ್ವ,,,

(ಆಗ,,,ಅಮ್ಮ ಯೇಗ ಕೊಡಬೇಕಾರೆ ಯಾವ ಬಾಗ್ಯೇವ್ ಕೊಡಬೇಕು ಅವನಿಗೆ. ಈಗ ಹೆಡ್ತಿ ದುಡ ನೋಡ್ದೆ, ಇಲ್ಲಿ ಇವುನ ದುಡ ನೋಡ್ದೆ. ಇವುನು ಬೇಡ್ತಾ ಇರೋದು ಯೇನು? ಬಡುವುರ ಮನಿಗೆ ಬಿಕ್ಸುಗಾದ್ರು ಬತ್ತಾರಲ್ಲ ಅವುರಿಗೇನ್ ಕೊಡಾನ ಅನ್ನದಾಗಿ ಕೇಳ್ತಾನೆ. ಈಗ ಇವುನು ಹತ್ತಾರು ಜನುಕ್ಕೆ ಸಾಕಾರ ಮಾಡಾ ಮನಸು ಇವನಿಗೈತೆ. ಸಾಕಾರ ಮಾಡಾ ಸಕ್ತಿ ನಾನು ಇವುನಿಗೆ ಕೊಟ್ಟೋಗುಬೇಕು. )

ಆಗ ನುಡಿತಾರೆ..ನನ್ನೆಡ್ತಿ ಮಲ್ಲಿ ಬಡುವಿ ಸಂಗಮ್ಮ ನನ್ನ ಸೆರಣೆಲ್ಲಿದಾಗ ಆ ಸಾವುಕಾರ್ ಸಂಗಮ್ಮ ನಿನ್ನೆತ್ತಿ ಬದ್ಲು. ಅದು ನಿನ್ನಡ್ತಿ ಒದ್ದುದ್ದಲ್ಲೊ ನನ್ನೊದ್ದವ್ಳೆ. ಅದು ನಾನು ಕೊಟ್ಟ ಬಾಗ್ಯೇವು ಪರೀಕ್ಸೆ ಮಾಡುದುಕ್ಕೆ ನನ್ನ ಯಂಗೆ ಒದ್ಲು.

ಆದೇ ಬ್ಯಾಗ್ಯೇವು ನಿನ್ನ ಮನಿಗೆ ಬರುಲಪ್ಪ

ಆದೇ ಬಾಗ್ಯೇವು ನಿನ್ನ ಮನಿಗೆ ಬರುಲಪ್ಪ

ನಿನಗೆ ಸೆರಣು ಆಗುತೀನಿ ನಾನು ಹೋಗಿಬರುತೀನಿ

ಯಾರ್ ಅತ್ಮ, ಯಾರ್ ದುಡ, ಯಾರ್ ಬಕ್ತಿ ಯಂಗೈತೆ ಅನ್ನದಾಗಿ ಪರೀಕ್ಸೆ ಮಾಡುದುಕ್ಕೆ ಬಂದಿದ್ದೀನಿ. ಈಗ ನಿನ್ನ ದುಡ ನಿನ್ನ ಆತ್ಮ ನಿನ್ನ ಬಕ್ತಿ ನಿನ್ನೈತ್ತಿ ದುಡ, ಬಕ್ತಿ, ಆತ್ಮ ಚನ್ನಾಗೈತೆ. ಈಗ ನೀನು ಜೀತಗಾರ ಕೊಳವೆ ತುಂಬ್ತೀನಿ ಅಂತ ಮಾತು ಕೊಟ್ಟು ಸೇಂದಿ ವನಯೆಲ್ಲ ತುಂಬ್ದೆ ಈಗ ನಿನ್ನೆಡ್ತಿ ನಾನು ಬಿಡು ಬಕ್ತಿ ನೀಡ್ತೀನಿ. ಅಂತ ಮಾತುಕೊಟ್ಟು ಬ್ಯಾರೇರ ಮನಿಗೆ ಸಾಲುಕ್ಕೆ ಬಿಕ್ಸುಕ್ಕೆ ಹೋದ್ಲು. ಈಗ ನಿನ್ನ ದುಡ ನಿನ್ನೈತ್ತಿ ದುಡ ಮೆಚ್ಚಿದೀನಿ. ಮುಂದ್ಕೆ ಹೋಗಿ ಬತ್ತೀನಿ. ನನ್ನ ನೆರಣೇಲಿಗದಾಗ ನಿನ್ನ ಅಣ್ಣನ ಹೆಡ್ತಿ ಸಾವುಕಾರ ಸಂಗಮ್ಮ ಒದ್ದವ್ಳಲ್ಲ ಅವುಳು ನನ್ನ ಒದ್ದು ನೂಕಿದಂಗೆ ನಾನು ಕೊಟ್ಟೆ ಬಾಗ್ಯೇವು ನಿನ ಮನಿಗೆ ಬರ್ಲಿ. ಬದ್ ನೂಕ್ದ್ಯಂಗೆ ನಿನ್ ಮನಿಗೆ ಬರ್ಲಿ

ತಾನಾಂದನ್ನಾ ತಾನಂದನ್ನ, ತಂದೇನಾನಾ ತಾನಂದನ್ನ

ಜಗುಮ ಎಲ್ಲಮನವರ ಮಾಯನಾದುರು ಯಾರುಬಲ್ರು

ಊರು ಮುಂದ್ಲು ಬೀಗಾ ದೊಡ್ಡವರಲ್ಲಾ।

ಅವರ ಮಾಯ ಬಲ್ಲವರಿಲ್ಲ ಮಹಿಮೆ ಬಲ್ಲನರಿಲ್ಲ

ಜಗುಕೆಲ್ಲ ತಾಯಿ ಎಲ್ಲಮದೇವರೂ।

ಎಲ್ಲಮು ದೇವುರು ಅಂದ್ರೆ

ಮಾರಿ ಅಂದುರು ಅವರೆ ಮಸಿಣೆ ಅಂದರು ಅವುರೆ

ಎಲ್ಲಾ ದೇವುರು ಎಲ್ಲಮ ದೇವುರೂ।

ಎಲ್ಲಮುದೇವುರು ಎಲ್ಲಾ ದೇವುರೂ।

ಎಲ್ಲ ಅನ್ನೋ ಸೊಲ್ಲು ಎಲ್ಲಾರು ಮಲ್ಲೀಗ

ಎಲ್ಲಿ ಎಲ್ಲಿ ಸೊಲ್ಗು ಎಲ್ಲಾರು ಮಲ್ಲೀಗ

ಬೂಮಂಡುಲವೆಲ್ಲ ಅವುರೂದಲ್ಲ।

ಜಗುಮಾ ಎಲ್ಲಮ್ಮ .ಮಾತಾಯೀ ಮಲ್ಲೇಶವ್ನೋರ ಮನೆಯಲ್ಲಿ ನಿನ್ನ ಸೆರಣೆ ಎತ್ತಿದ್ದೀನಿ ತಾಯಿ.. ಇವುದರು ಯಾವ್ ಕಾರ್ಯಕ್ಕೋದ್ರು ಜಯವಗುವಂತೆ ಮಾಡು ಇವುರು ಕುಂತಾವ್ ಕಡೆ ಮಾಡು ತಾಯಿ..ನಿಂತಾವ್ ನೆರಳು ಮಾಡು ತಾಯಿ ದಾನುಕ್ಕೆ ಎತ್ತಿದ್ ಕೈಯಾತು. ನಿನಗೇ ಸೆರಣಮ್ಮ ಸೆರಣೇ ..

# ಗುಳ್ಳೇನರಿ ಕತೆ

ಇದು ಯಾವ ಕತೆ ಅಂದ್ರೆ .ಇದು ಯಾವ್ ಹಾಡು ಅಂದ್ರೆ ಹೊಳೆನರಸೀಪುರದ ಹತ್ರ ಬಾಗೊಳ್ಳುಪಿತಲ್ಲ .ಅಲ್ಲ ಗುಳ್ಳೇನರಿ—ಯಾರ್ ಬಾಗುಲು ತೆಗಿತಾರೆ ಕೋಳಿ ಹಿಡಿಯಾಕೆ ಯಾರ್ ಬಾಗುಲು ತೆಗಿತಾರೆ ಅಂತ ಕಾಯ್ತಾ ಇತ್ತು

ಬಾಗೊಳ್ಳರ ಬಾಗ್ಲಾ ತಗುದೀರೋದು
ಬಾಗೊಳ್ಳರ ಬಾಗ್ಲಾ ತಗುದೀರೋದು
ಗುಳ್ಳೇನರಿ ಅಲ್ಲೀಗ್ ಹೋಗಿರದು
ಒಳ್ಳೊಳ್ಳೆ ಕೋಳಿಯ ಹಿಡ್ಡಿರದು
ಒಳ್ಳೆ ಬರ್‍ತ್ರಾ ಬರ್‍ತ್ರಾ ಅಂತೀರದು
ಕೋಳಿ ಬರ್‍ತ್ರಾ ಬರ್‍ತ್ರಾ ಅಂತಿರುದು
ಬಾಗೊಳ್ಳೋರೆಲ್ಲಾ ಬಾಯ್ ಬಾಯ್ ಬಡ್ಕೊಂಡ್ ಬತ್ತೀರದು
ಕೆಚ್ಗಂಡು ಎದೆಯ ಬತ್ತೀರರು
ನಾನು ಕೆಚ್ಗಂಡ್ ಕಚ್ಗಂಡ್ ಹೋತಿರುವೆ  ಹೋಗ್ತುರುವೆ
ಚಂದುಳ್ಳಿ ಚಂದುಕಮ್ಮ ಕುಣಿತಿರದು
ಒಂದು ಅರ್ದಾ ಕಾಲ್ ಓಡ್ತಿರದು.. ಓಡ್ತಿರದಮ್ಮಾ ಓಡ್ತಿರದು.
ಬಾಗೊಳ್ಳೋರು ಬಾಗ್ಲಾ ತೆಗೆದಿರೋರು
ಗುಳ್ಳೇನರೀ ಬಾವ ಹೋಗಿರದು
ಒಳ್ಳೊಳ್ಳೇ ಕೋಳಿಯ ಹಿಡಿದಿರದು
ಕೋಳಿ ಕೊರ್‍ತ್ರಾ ಕೊರ್‍ತ್ರಾ ಅಂತಿರಾದು
ಬಾಗೊಳ್ಳೋರೆಲ್ಲಾ--ಬಾಯ್ ಬಾಯ್ ಬಡ್ಕೊಂಡ್ ಬತ್ತಿರರೂ
ಅವುರು ಚಚ್ಗಂಡ್ ಚಚ್ಗಂಡ್ ಬತ್ತಿರರು
ನಾನು ಕಚ್ಗಂಡ್ ಕಚ್ಗಂಡ್ ಬತ್ತೀರುವೆ
ಚಂದುಳ್ಳೆ ಚಂದುಕಮ್ಮ ಕುಣಿತಿರದು
ಒಂದು ಅರ್ದಾ ಕಾಲೆ ಓಡ್ತಿರದು.. ಓಡ್ತಿರದಮ್ಮಾ ಓಡ್ತಿರದು
ಕೋಳಿಯ ಕಚ್ಗಂಡ್ ಹೋಗಿರುವೆ
ಕೋಳಿ ಕಚ್ಗಂಡ್ ಹೋಗಿರುವೆ
ಗದ್ದೆ ಹಳ್ಳದಲ್ಲಿ ಕೂತಿರುವೆ
ಕೋಳಿ ಸಾಕಿದ್ ಮುದ್ಕಿ ಬಯ್ತಿರಳು

ಕೋಳಿ ಸಾಕಿದ್ ಮುದ್ಕಿ ಬಯ್ತಿರಳು– ಬಯ್ತಿರಳು
ಅಂದುಳ್ಳ ಕೋಳಿ––ಚಂದುಳ್ಳಿ ಕೋಳಿ––
ಚಂದುಕ್ಕೆ ಸಾಕ್ದೆ ಗುಳ್ಳೆನರಿ ಬತ್ತು
ಕಚ್ಗಂಡ್ ಕಚ್ಗಂಡ್––ಹೊಯ್ತಿರುದು
ಅವುಳು ಲಬಲಬನೆ ಬಾಯಾ ಬಡ್ಕಳಳೂ
ನಾನು ಸಿಕ್ಕೊಂಡ್ ಅಕ್ಕಂಡೆ ನಿಂತಿರುವೇ––ನಿಂತಿರುವೇ
ಚಂದುಳೆ ಚಂದುಕಮ್ಮ ಕುಣಿತಿರದು
ಒಂದು ಅರ್ದಾ ಕಾಲ್ ಓಡ್ತಿರದು—ಓಡ್ತಿರದಮ್ಮ—ಓಡ್ತಿರದು
ಮತ್ತೆ ಕೋಳಿ ಸಾಕಿದ ಮುದ್ಕಿ ಬಯ್ತರದು
ಗುಳ್ಳೇನರಿ ಕಚ್ಗಂದೊಯ್ತಲ್ಲ
ಅದ್ರ ಹೆಣ್ ತಿನ್ನಾ –ಆದ್ರಗಂಡ್ ತಿನ್ನಾ
ಮುದ್ಕಿ ದಡ್ಡಾದಡ್ಡನೆ ಎದೆಯ ಇಟ್ಟಾಕ್ಳಳು
ನಾನು ಗುಳ್ಳಾಗುಳ್ಳನೆ ನುಂಗ್ತಿರುವೆ––ನುಂಗ್ತಿರುವೆ
ಚಂದುಳ್ಳೆ ಚಂದುಕಮ್ಮ ಕುಂತಿರದಮ್ಮಾ—ಕುಂತಿರರು
ಒಂದು ಅರ್ದಾ ಕಾಲ್ ಓಡ್ತಿರದು—ಓಡ್ತಿರದಮ್ಮ—ಓಡ್ತಿರದು.
ಅಂದುಳ್ಳ ಕೋಳಿ, ಚಂದುಳ್ಳಿ ಕೋಳಿ
ಗುಳ್ಳೇನರಿ ಕಚ್ಗಂದೋಯ್ತಲ್ಲ
ಅದ್ರೆ ಹೆಣ್ತಿನ್ನ—ಅದ್ರ ಗಂಡ್ತಿನ್ನಾ—
ದಡದಡನೆ ಎದೆಯ ಇಡ್ಕಳಳು
ನಾನು ಸಿಕ್ಕಿಂದ್ ಸಿಕ್ಕಿಂದ್ ಹೋಗ್ತಿರುವೆ
ಗುಳ್ಳಾ ಗುಳ್ಳನೆ ನುಂಗ್ತಿರುವೆ ನುಂಗ್ತಿರುವೆ
ಚಂದುಳ್ಳಿ ಚಂದುಕಮ್ಮ ಕಣಿತರದಮ್ಮ ಕುಣಿತಿರದು
ಒಂದು ಅರ್ದಾ ಕಾಲ್ ಓಡ್ತಿರದು—ಓಡ್ತಿರದು
ಕೋಳಿ ಸಾಕಿದ ಮುದ್ಕೀ–––
ಕೋಳಿ ಸಾಕಿದ ಮುದ್ಕೀ–––
ಮುದುಕನ್ನ ಕರ್ಕಂಡು ಬರ್ತೀರಾಳು––ಬರ್ತೀರಾಳು
ನನ್ನೆಜ್ಜೆ ನೆಪ್ನಲ್ಲಿ—
ನನ್ನೆಜ್ಜೆ  ನೆಪ್ನಲ್ಲಿ—

ಮುದ್ಕನ್ನ ಕರ್ಕಂಡು ಬರ್ತೀರಾಳು

ಕಯ್ಯೀಗೆ ದೊಣ್ಣೇಯ ಕೊಟ್ಟೀರಳೂ

ಗದ್ದೇ ಬದ್ನಲ್ಲಿ ನೈಡಸೀರಳು

ನನ್ನಾ ಮುದ್ಕಿ ನೋಡ್ತೀರಳು

ತಗಳಪ್ಪಾ ಮುದುಕ---

ಗುಳ್ಳೇನರೀ ಕೋಳಿಯ ತಿಂತೈತೆ

ಗುಳ್ಳೇನರೀ ಕೋಳಿಯ ತಿಂತೈತೆ

ಹೊಡಿಯೊ ಮುದುಕ----

ಹಿಡಿಯೋ ಮುದುಕ---

ಓಡಿಸ್ಯಾಡೋ ಮುದುಕು---

ಬೆದ್ರಿಸ್ಯಾಡೋ ಮುದುಕ ಅಂತಿರಳೂ

ನಾನು ಮುದುಕಾನ ಕಾಲಸಂದಿ ನುಸ್ತಿರಿವೇ

ಮುದುಕ ಅತ್ತಾವ ಗದ್ದೆಗೆ ಬಿದ್ದಿರನೋ---ಬಿದ್ದಿರನೋ—

ಚಂದುಳ್ಳೆ ಚಂದುಕಮ್ಮ ಕುಣಿತಿರದು

ಒಂದು ಅರ್ದಾ ಕಾಲ್ ಓಡ್ತಿರದೂ ಓಡ್ತಿರದಮ್ಮ---ಓಡ್ತಿರದೂ

ನನ್ನಾ ಮುದುಕಿ ನೋಡಿರಳು

ಅಗಳಪ್ಪ ಮುದುಕು---

ಗುಳ್ಳೇನರಿ ಕೋಳಿಯ ಅಂತೈತೆ

ಓಡಿಸ್ಯಾಡೋ ಮುದುಕ---

ಬೆದ್ರಿಸ್ಯಾಡೋ ಮುದುಕ ಅಂತಿರಲೋ---ಅಂತಿರಳೋ

ನಾನು ಮುದುಕನಾನ ಕಾಲ್ ಸಂದಿ ನುಸ್ತಿರಿವೆ

ಮುದುಕ ಅತ್ತಾವ ಗದ್ದೇಗೆ ಬಿದ್ದಿರನೂ--ಬಿದ್ದಿರನೂ

ಚಂದುಳ್ಳೆ ಚಂದುಕ್ಕಣ್ಣ ಕುಣಿತಿರದಣ್ಣ—ಕುಣಿತಿರದು

ಒಂದು ಅರ್ದಾ ಕಾಲ್ ಓಡ್ತಿರದು—ಓಡ್ತಿರದು

ಓಡಿಬಾರೆ ಮುದುಕೀ

ಬಿದ್ನಲ್ಲೆ ಮುದುಕೀ ..

ಎತ್ತು ಬಾರೇ ಮುದುಕೀ

ಬಿದ್ನಲ್ಲೇ ಮುದುಕೀ .

ಎತ್ತುಬಾರೆ ನನ್ನ ಎಳೆ ಬಾರೆ ಮುದುಕೀ

ಅಪ್ಪಾದ ಮೆಯ್ಯ ತೊಳಿಬಾರೆ ಮುದುಕೀ

ನೆಟ್ಟಾಗೆ ನನ್ನ ನಿಲ್ಸುಬಾರೆ ಮುದುಕೀ—ಅಂತೀರನು—ಅಂತೀರನೂ

ಅಲ್ಲಿಂದ ಮುಂದ್ಕೆ ..

ಹೂವ್ನಳ್ಳಿ ಬಯ್ಲಿಗೆ ಹೋಗಿರುವೆ

ಹೂವ್ನಳ್ಳಿ ಬಯ್ಲಿಗೆ ಹೋಗಿರುವೆ

ಅತ್ತೆ ಮಾನೆ ಸೊಸೆ ವಳ್ಳಿಗೆ ಅಲ್ಲಿಗೆ ಬರ್ತಿರಾಳು

ಹೂವ್ನಳ್ಳಿ ಬಯ್ಲಿಗೆ ಹೋಗಿರುವೆ

ಅತ್ತೆ ಮಾನೆ ಸೊಸೆ ನಳ್ಳಿಗೆ ಅಮ್ಮ ಬಂದಿರಾಳು

ನಳೀಯ ಶಿವನೆ ಬಿರುಬಿರುನೆ ಗುಂಬಾಕೆ ತುಂಬಿರಾಳು

ದಡದಲ್ಲಿ ಗುಂಬಾ ಮಡಿಗಿರಾಳು

ಹಳ್ಳಾಕೆ ಶಿವನೆ ಇಳಿದಿರಾಳು

ಕೈಕಾಲ ಮಾಕವ ತೊಳಿತಿರಾಳು

ಅತ್ತೆ ಮನೆ ಸೊಸೆ––ನೆಳ್ಳಿಗೆ ಬಂದು ಹೂವ್ನಳ್ಳಿ ಬಯ್ಲಲ್ಲಿ ನಳ್ಳಿ ಹಿಡಿದು ಗಡಿಗೆಗೆ ತುಂಬಿ ದಡದಲ್ಲಿಟ್ಟು ಕೈಕಾಲ್ ತೊಳಿಯಾಕೆ ಹಳ್ಳುಕೆ ಇಳಿದರಳೂ ನಾನು ಗುಳ್ಳೇನರಿ .

ನಾನು ಹೋಗಿರುವೆ ––ನಾನು ಹೋಗಿರುವೆ

ಗಡಿಗೆ ಇಣಿಕಿ ನಳ್ಳಿ ನೋಡಿರುವೆ.. ನೋಡಿರುವೆ

ನಳ್ಳಿ ಮುಲು ಮುಲು ಮುಲು ಮೂಲಂತಿರವೂ

ನನ್ನ ಜೀವ ತಳಮಳ ತಳಮಳ ಅಂತಿರಾದು

ಗುಂಬಾವ ಕಚ್ಗಂಡ್ ಹೋಗ್ತಿರುವೆ

ಕಚ್ಗಂಡ್ ಕಚ್ಗಂಡ್ ಹೋಗ್ತಿರುವೆ

ಅವಳು ಚಚ್ಗಂಡ್ ಬಡ್ಕೊಂಡ್ ಅಳುತೀರಳೂ ಅಳುತೀರಳೂ

ಚಂದುಳ್ಳೆ ಚಂದುಕಣ್ಣ ಕಣಿತಿರದಣ್ಣಾ.. ಕುಣಿತಿರದೂ

ಒಂದು ಅರ್ದಾ ಕಾಲ್ ಓಡ್ತಿರದೂ..ಓಡ್ತಿರದೂ

ಗುಂಬಾವ ಕಚ್ಗಂಡು ಹೋಗ್ತಿರುವೆ

ಬೇಲೀಯ ಸಾಲಲ್ಲಿ ಕುಂತಿರುವೆ

ಸೊಸೆ ಬರಿಕೈಲಿ ಮನಿಗೆ ಹೋಗಿರಾಳು

ಅತ್ತೆ ಮುಂದೆಲೆ ಹಿಡಿಕಂಡೂ .

ಸೊಸೇಯ ಮುಂದೆಲೆ ಹಿಡುಕಂಡು

ನೆಳ್ಳಿಗೋಗಿದ್ದಲ್ಲಾ

ನೆಳ್ಳೀಲ್ಲೇ ರಂಡೆ .ಗುಳ್ಳೇಲ್ಲೆ
ಹಿಡ್ಲು ಮುಂಡಿಲಿ ರಬ್ಬಾ ರುಬ್ಬನೆ ಹೊಡಿತಿದಳು
ನಾನು ಕುರ್ಮ ಕುರ್ಮನೆ ತಿಂತಿರುವೆ ತಿಂತಿರುವೆ
ಚಂದುಳ್ಳಿ ಚಂದುಕಣ್ಣಾ ಕುಣಿತಿರದಣ್ಣಾ..ಕುಣಿತಿರದೂ
ಒಂದು ಅರ್ದಾ ಕಾಲ್ ಓಡ್ತಿರದೂ ಓಡ್ತಿರದ
ನೆಳ್ಳಿಗೋಗಿದ್ದಲ್ಲಾ .
ರಂಡೆ ನೆಳ್ಳಲ್ಲೇ ರಂಡೆ ಗುಳ್ಳೇಲ್ಲೇ
ಹಿಡ್ಲು ಮುಂಡೀಲಿ ಸೊಸೆಯ ಅತ್ತೆ ರಬ್ಬಾ ರುಬ್ಬನೆ ಹೊಡಿತಿದಳು
ನಾನು ಕುರ್ಮಾ ಕುರ್ಮನೆ ತಿಂತಿರುವೆ ತಿಂತಿರುವೆ
ಚಂದುಳ್ಳೆ ಚಂದುಕಣ್ಣ ಕುಣಿತಿರದೂ .ಕುಣಿತಿರದೂ
ಒಂದು ಅರ್ದಾ ಕಾಲ್ ಓಡ್ತಿರದೂ ಓಡ್ತಿರದೂ
ಹೂವ್ನಳ್ಳಿ ಬಯ್ಲು ಬುಟ್ಟು ..
ಹೂವ್ನಳ್ಳಿ ಬಯ್ಲು ಬುಟ್ಟು
ಕಬ್ಬಿನಳ್ಳಿ ಬಯ್ಲಿಗೆ ಬಂದಿರುವೆ
ಕಬ್ಬಿನಲ್ಲಿ ಬಯ್ಲಿಗೆ ಬಂದಿರುವೆ
ಕಬ್ಬಿನಳ್ಳೂರ್ ಕಟ್ಟಾ ಹಾಕಿರಾರು
ಕಬ್ಬಿನಳ್ಳೊರ್ ಕಟ್ಟಾ ಹಾಕಿರಾರು
ಕಬ್ಬೀನ ಗದ್ದೀಗೆ ಹೋಗಿರುವೆ
ಒಳ್ಳೊಳ್ಳೆ ಕಬ್ಬಾ ಮುರಿದಿರುವೆ
ಕಬ್ಬ ಮುರಿದಿರುವೆ ಬಾಯಿಗ್ ಕಚ್ಚೀರುವೆ
ಕಬ್ಬ ಮುರೀದಿರುವೆ ಬಾಯೀಲ್ ಕಚ್ಚಿರುವೆ
ಕಬ್ಬಾ ಕಬ್ಬಾ .
ಒಳ್ಳೊಳ್ಳೆ ಕಬ್ಬಾ ಮುರಿದಿರುವೆ
ಕಬ್ಬಾ ಮುರಿದಿರುವೆ ಬಾಯಿಲ್ ಕಚ್ಚೀರುವೆ
ಬಾಯಿಲ್ ಕಚ್ಚಿರುವೆ ರಸ ನುಂಗಿರುವೇ
ರಸ ನುಂಗೀರುವೆ ಈರೆ ಉಗುದಿರುವೇ
ಕಬ್ಬಾಕಿಟ್ ಗೌಡ--ಬಂದೀರನು
ಬಂದೀರನೂ ನನ್ನ ಕಂಡೀರನೂ
ನಾಯಿಯ ಕಟ್ಟಿಗಂಡು ಕೋವೀಯ ಈಡಕಂಡು

ಗೌಡ ಓಡೋಡಿ ಅಲ್ಲಿಗೆ ಬರುತೀರನೂ

ನಾಯಿ ಚೂಚೂ ಅಂತ ಅನುತೀರನು

ನಾಯಿ ಚಾ ಚಾ ಅಂತ ಬತ್ತೀರವು

ನಾಯಿ ಚೂ ಚೂ ಲಗಾಲಗಾ ಅಂತಿರನೂ

ನಾಯಿ ಚೌ ಚೌ ಅಂತ ಬತ್ತೀರವೂ

ಇತ್ತ ಕೋಳಿ ತಿಂದಿತ್ತಾ

ಅತ್ತ ನೆಳ್ಳಿ ತಿಂದಂತ್ತಾ

ಇತ್ತ ಕೋಳಿ ತಿಂದಿತ್ತ ನಳ್ಳಿ ತಿಂದಿತ್ತ

ಉಚ್ಗಂಡ್ ಉಚ್ಗಂಡ್ ಹೋಗ್ತಿರುವೆ

ನಳ್ಳಿ ತಿಂದಿತ್ತು ಕೋಳಿ ತಿಂದಿತ್ತ

ಉಚ್ಗಂಡ್ ಉಚ್ಗಂಡ್ ಹೋಗ್ತಿರುವೆ ಹೋಗ್ತಿರುವೆ

ನಳ್ಳಿ ತಿಂದಿತ್ತ ಕೋಳಿ ತಿಂದಿತ್ತ

ಉಚ್ಗಂಡ್ ಉಚ್ಗಂಡ್ ಹೋಗ್ತಿರುವೆ..ಹೋಗ್ತಿರುವೆ..

# ಹೊಗಳು ಪದ

ಅಯ್ಯ ಅಪ್ಪ ಲಕ್ಕಣಗೌಡ್ರೂ....

ಅಯ್ಯ ಅಪ್ಪ ಲಕ್ಕಣಗೌಡ್ರೂ ।ತಾರು ತನಂದೆ ನಾನಾನೇ

ಆವುರು ನಡಿಯ ತೊಡೆಯ ನೋಡೀ

ಶಿವನೆ ಕಗ್ಗಲೀನ ಕಂಬುವಲ್ಲಾ

ದೇವರಾಜಪ್ಪ ಸಾಯುವಾಗಾ

ಲಕ್ಕಣಗೌಡ್ರು ಸಾಯುವಾಗಾ

ಲಕ್ಕಣಗೌಡ್ರು ಸಾಯುವಾಗಾ

ಅವರ ಬಳಗೆಲ್ಲೇ ಬಂದಾದೇ

ಅವರ ಬಳಗೆಲ್ಲೇ ಬಂದಾದೇ

ಅವುರ ಬಾಗುಲ್ಲಿ ಕೂತಾದೇ।

ಅಲ್ಲಿ ಯಮುದೋರೂ ಬರೂವಾಗ ।

ಅಲ್ಲಿ ಯಮುದೋರೂ ಬರೂವಾಗ ।

ಇಲ್ಲಿ ಕಾಗೆಲ್ಲ ಕಾ ಅಂದೊ।

ಇಲ್ಲಿ ಗೂಬೆಲ್ಲ ಗೂ ಅಂದೂ।

ಅಯ್ಯ ಮಂಜುಗಳಿ ಗವಿಯಲ್ಲಾ।

ಅಯ್ಯ ಕೆಟ್ಟ ಸ್ವಪ್ನ ಬೀಳುತಾವೇ ।

ಅಯ್ಯ ಯಮದರು ಮಕ್ಕುಳು ನೋಡೀ।

ಅಯ್ಯ ನಾಎಲ್ಲಿ ಬಳ್ಳಾಕಿದೋ।

ನಾಯಿ ಬಳ್ಳಾಕಿ ಬಗುಳೀದೊ।

ನನ್ನ ಕೊಟ್ಟಿಗೇಯ ದನುಗೋಳು।

ಅಯ್ಯ ಜಲ್ಲಾನೆ ಬೆದುರೀದೂ।

ಆಗ ಯಮುದರು ಜವದೋರು ಬಂದೂ

ಯಮುದರ ಜವುದರು ಬಂದೂ।

ಅವರ ಮುಂದೆ ನಿಂತವರಲ್ಲಾ।

ಯಮದರ ಹಾದಿಯಂಟೆಯ ತಂದು

ಯಮದರ್ ಸುಂಟಿ ಕಾರವ ಮಾಡಿ

ಅವರ ಗಂಟ್ಲೆಗೆ ಕೊಟ್ಟಾರು

ಅವರ ನಾಲಿಗೆ ನಿಂತೋದವಲ್ಲಾ

ಅವರ ಕೈಕಾಲ ಮುರಿತಾರೇ

ಯಮುದೋರ್ ಹಿಂತ್ಕೆತಿಂಟುತಾರೇ

ಅವರ ಕೈಕಾಲು ಸಾಯುತಾವೇ

ಆಗ ಇಸುದ ಪಾಷಾಣ ಮಾಡಿ

ಯಮುದೋರ್ ಇಸುದ ಪಾಷಾಣ ಮಾಡಿ

ಅವರ ಮೈಮಾಲ್ ಸುರಿತಾರೇ

ಅವುರ ಜಾನ ತಪ್ಪೋದುರಲ್ಲ।

ಅವುರು ಜಾನ ತಪ್ಪೀದಮ್ಯಾಲೆ।

ಅವುರ ಕತ್ತೀಗಗ್ಗಾವ ಕಟ್ಟೀ।

ಯಮುದೋರ್ ಕತ್ತೀಡಿದು ಯಳೀತಾರೇ।

ಯಮುದೋರ್ ಕತ್ತಿಡುಯಳಿವಾಗಾ।

ದಾನುಗಾರ್ ದೇವರಾಜಪ್ಪಾ

ಅವುರ ತಮ್ಮ ಮಲ್ಲೇಶಪ್ಪಾ

ತಮ್ಮಾ ಮಲ್ಲೇಶಗೌಡ್ರೈ

ಅಯ್ಯ ಹಾಲು ಬಾನ ಕುಂಡೋಗಿ

ಯಾಕಪ್ಪ ನನ್ನ ತಂದೇ

ಯಾಕಪ್ಪ ನನ್ನ ತಂದೇ

ಯಾಕಪ್ಪ ನನ್ನ ಅಣ್ಣಾ।

ನೀವು ಸುಮ್ಮನೆ ಮನಗಿದಿರಲ್ಲಾ।

ಯೇಳಿ ಯೇಳಿ ನನ್ನಪ್ಪಾ

ಯೇಳಪ್ಪಾ ನನ್ನಣ್ಣ

ಯೇಳಯ್ಯ ನನ್ನಪ್ಪಾ

ಯವ್ವೆ ಹಾಲಾ ಕುಡಿಕೇಳೀ

ತಂದೆ ಜಾನನ ಉಣ್ಣೇಳೀ

ಯವ್ವೆ ಅಂದ ಮಲ್ಲೇಶಪ್ಪರೂ

ಅವುರು ಹರಿಗಣ್ಣ ಬುಡುತಾರೇ।

ಅವ್ವ ಅಂದ್ರು ಲಕ್ಕಣಗೌಡ್ರು

ಯವ್ವೆ ಮಗುನೇ ಮಲ್ಲೇಶಪ್ಪಾ

ಅಪ್ಪ ಹಾಲು ಬಾನ ತರುಬ್ಯಾಡಾ

ಮಗುನೆ ಹಾಲು ಬಾನ ತರುಬ್ಯಾಡಾ

ನಿನ್ನ ಹಾಲೆಲ್ಲ ಚಲ್ಲಾದು

ನಿನ್ನ ಬಾನೆಲ್ಲ ಬೇಳಾದೊ

ಮಗುನೆ ಕಣ್ಣಿಗೆ ಮರೆಯಾಗುತೀನಿ

ಮಗುನೆ ಮಣ್ಣಿಗೆ ಮರೆಯಾಗುತೀನಿ

ಇಂಥ ಅಡುವಿ ಆಸ್ತಿಗೋಳಾ..

ಮಗುನೆ ಅಡುವಿ ಆಸ್ತಿಗೋಳಾ।

ಮಗುವೆ ನಾವು ಸಂಪನ್ದೆ ಮಾಡಿ

ನಿನ್ನ ಕೈಗೊಟ್ಟು ಹೋಗುತೀನಿ

ಮಗುನೆ ನಾವೇ ಸತ್ತೋದುಮ್ಯಾಲೇ

ನಮ್ಮ ಮನೆ ಮಠ ಬಳುಗಾಕೇ

ನಮ್ಮ ಹೊಲಗದ್ದೆ ಬಳುಗಾಕೇ

ನಮ್ಮ ದನುಕರ ಬಳುಗಾಕೇ

ನಾವೇ ಸತ್ತೋದು ಮ್ಯಾಲೇ

ನಾವೇ ಸತ್ತೋದು ಮ್ಯಾಲೇ

ನಾವು ಮಾಡೊ ದಾನು ದರ್ಮ।

ನೀನೇ ಮಾಡೋ ಮಗುನೇ

ಹಸುವಾಗಿ ಬಂದೋರಿಗೇ

ಮಗುನೆ ಮುದ್ದ್ಯೆನ್ನ ನೀನಕ್ಕೂ

ಮಗುನೆ ಮಣೆ ನೀರ ನೀರು ಕೊಡು

ಮಗುನೆ ಸೆರೆಯಾಗು ಗುದ್ವಾನ

ನನಿಗೆ ಸೆರಯ ನೀನಿಡಿಸೂ

ಮುಂದೆ ನಾವೇ ಸತ್ತೋದು ಮ್ಯಾಲೇ

ನಾವೇ ಸತ್ತೋದು ಮ್ಯಾಲೇ

ಮಗುನೆ ವರ್ಷು ಕೊಂದು ಮಳದಬ್ಬಾ

ಅಂತಾ ಮಾಳಾ ಪಕ್ಷುದಲ್ಲಿ

ಅಂತಾ ಮಾಳಾದಬ್ಬುದಲ್ಲಿ

ನಾವು ಕಾಗೇ ರೂಪೀನಲ್ಲೀ

ನಾವು ಪಕ್ಸಾಗಿ ಬರುತೀನಿ
ನಮಿಗೆ ಯಡಿ ಅನ್ನ ಹಿಡು ಮಗುನೆ
ನಮಿಗೆ ಹಿಡಿದೂಪ ಹಾಕುಮಗನೆ
ನೀನು ತುಪ್ಪದ ದೀಪನಾ ಹಚ್ಚಿ
ನೀನು ಮನದಲ್ಲಿ ನೆನಿಯಪ್ಪ
ಅಂತಾ ಮಾಳಾ ಪಕ್ಸುದಲ್ಲೀ
ಅಂತಾ ಮಳಾ ಪಕ್ಷುದಲ್ಲಿ।
ಒಂದು ಕಾಗೇ ರೂಪಿನಲ್ಲಿ
ನಾವು ನುಡಿಯಾಗಿ ಬಂದೀಗ
ನಾವು ಮನೆ ಮ್ಯಾಲೆ ಕುತುಗಂಡು
ನಿನೂ ಇಟ್ಟಿದಂತ ಯಡೆನೋಡೀ
ನೀನು ಹಾಕೊ ದೂಪನ ನೋಡೀ
ನೀನು ಹಚ್ಚಿದಂತ ಜ್ಯೋತಿ ನೋಡಿ
ನಮ್ಮ ಮನುದಲ್ಲಿ ಆವ ಮರುಗಿ
ಯವ್ವೆ ಸಾಯುತೀನಿ ನಮ್ಮ ಮಗುನೆ
ವಾವೇ ಸತ್ತೋದು ಮ್ಯಾಲೇ
ನಿಮ್ಗೆ ನಾವೇ ಸತ್ತೋರು ಮ್ಯಾಲೇ
ನಮ್ಗೆ ಹೊಗುಳು ಬಂಟರ ಕರಸೀ
ನಮ್ಗೆ ಹಾಡೋ ದಾಸರ ಕರುಸೀ
ಅವರ್ಗೆ ಕರುದು ಕಾಂಚಾಣ ನೀಡಿ
ಅವರ್ಗೆ ಮರದ ದಾನವ ಮಾಡೀ
ಅವರ್ಗೆ ಮುದ್ದ್ಯನ್ನ ನೀನಿಕ್ಕೀ
ನಮ್ಮ ದಾನಾ ಚರಣೇಯ
ಇಲ್ಲಿ ಹಾಕಿ ಹೋಗೋದು
ಮಗುನೆ ಮಲ್ಲೇಶಪ್ಪಾ
ಮಗುನೇ ಮಲ್ಲೇಶಪ್ಪ..
ನೀನು ನಮ್ಮಾ ಚರಣೆಲ್ಲ
ನೀನು ಇಲ್ಲಿ ಮಾಡೋದಾನ ದರ್ಮ
ನಮಿಗೆ ಯಮನ ಪಟ್ಟುಣದಲ್ಲಿ

ನಿಮ್ಮ ದಾನ ದರ್ಮ ಬಂದು

ನಮಿಗೆ ಸಾಕ್ಷೀಯ ಹೇಳುವಾದೇ

ನಮಿಗೆ ಸೆರೇಯ ಬುಡುಸುತಾದೇ

ಯವ್ವೆ ಅಂದಾರು ಲಕ್ಕಣಗೌಡ್ರು

ಅವ್ವೆ ಅಂದಾರು ದೇವರಾಜಪ್ಪನರು

ಅವ್ವೆ ಅಂದಾರು ತಿಮ್ಮೇಗೌಡ್ರು

ಅವುರು ಮಾತು ಮಾತಾನಾಡುವಾಗ

ಅವುರಗೆ ಯುಮದೋರ ಬಂದಾನಾ

ಶಿವನೆ ಬಾಳಾ ಬಂದೋಗ್ಯಾಕೆ

ಅವರ ಮಾತೇ ನಿಂತೋದುತಲ್ಲಾ

ಅವುರು ಊರೀಗೆ ಒಳ್ಳೇರೋ

ಅವುರು ಕೇರೀಗೆ ಒಳ್ಳೇರೋ

ಊರಿಗೆ ಒಳ್ಳೇರು ಕೇರಿಗೆ ಒಳ್ಳೇರೂ

ಊರು ಬುಟ್ಟು ಕಾಡಾ ಸೇರುವಾಗ ತಾನಾ ತಾನ ತಂದೇನಾನಾ।

ಊರು ಬುಟ್ಟು ಕಾಡಾ ಸೇರುವಾಗ..

ಲಕ್ಕಣಗೌಡ್ರು, ದೇವರಾಜಪ್ಪ, ತಿಮ್ಮೇಗೌಡ್ರಿಗೇ

ಊರೆಲ್ಲ ಶೋಕ ಮಾಡತಾರೇ ತಾನಾ

ಅವುರು ಕಟ್ಟಿದ್ ಮನೆ ಬಿಟ್ಟು ಊಡಿದ ಬಲಿ ಬಿಟ್ಟು

ಅವುರೆತ್ತ ಮಕ್ಕಾಳ ಕಯ್ಯಬುಟ್ಟು

ಲಕ್ಕಣಗೌಡ್ರು, ತಿಮ್ಮೇಗೌಡ್ರು ದೇವರಾಜಪ್ಪ

ವಕ್ಕಲು ಹೋಗೋಲುತಾರಾ.. ತಾನಾ

ಲಕ್ಕಣಗೌಡ್ರು ತಿಮ್ಮೇಗೌಡ್ರು ದೇವರಾಜಪ್ಪರೂ

ಅವುರೆಣ್ಣು ಮಕ್ಳಿಗೆ ಬಣ್ಣಾ ಉಡಿಸಿ

ಕಣ್ಣಿಂದ ನೋಡಿ ಮರುಗೋರು  ತಾನಾ

ಕಣ್ಣಿಂದ ನೋಡಿ ಮರುಗೋರು ಮೂರು ಜನುಮ

ಮಣ್ಣ ಪಾಲು ಮಾಡಿದ ಯಮರಾಯ ತಾನಾ

ಅವುರ ತಾಳು ತಾಳಂದರೆ ಯಂಗೆ ತಾಳೂರು

ತಾಳು ಮಾಡುಲಿಲ್ಲ ಯಮುದೋರೂ ತಾನಾ

ತಾಳು ಮಾಡಲಿಲ್ಲ ಯಮದೋರು

ಲಕ್ಕಣಗೌಡ್ರು ತಿಮ್ಮೇಗೌಡ್ರು ದೇವರಾಜಪ್ಪುನ್ನಾ..

ಇಲ್ಲಿ ತಳವೂರ್ನಲ್ಲಿ ಮರೆ ಮಾಡೀ ತಾನಾ

ನಿಲ್ಲು ನಿಲ್ಲೆಂದರೆ ಯಂಗೆ ನಿಂತಾರು

ನಿಲ್ಲುಗೋಡ ನಿಲ್ಲಾ ಯಮುದೋರೂ..ತಾನಾ

ನಿಲ್ಲುಗೋಡಿನಿಲ್ಲಿ ಯಮುದೋರೋ]

ಲಕ್ಕಣಗೌಡ್ರು, ತಿಮ್ಮೇಗೌಡ್ರು ದೇವರಾಜಪುನ್ನ

ಅವುರ ಮಲ್ಲಿಗೂವಿನಲ್ಲಿ ಮರಿಮಾಡೀ.,ತಾನಾ

ಸತ್ತ ಲಕ್ಕಣಗೌಡ್ರ ಹೊತ್ತು ಎತ್ತಿರಯ್ಯ

ಮುತ್ತಿನ ಮಾಳಾ ಮಗಿ ಮಾಳಾ,,,ತಾನಾ

ಮುತ್ತಿನ ಮಾಳಾ ಮನಿಮಾಳ

ಲಕ್ಕಣಗೌಡ್ರು, ತಿಮ್ಮೇಗೌಡ್ರು ದೇವರಾಜಪ್ಪುನ

ಅವುರ ಎತ್ತಿರೋ ಬಾಳೇ ಯಮುಕ್ಕಾಗೀ ತಾನಾ

ಅವುರೀಗಾರೆ ತಕ್ಕಳಿ ಬಾರೀಗೆ ಹೋಗನ

ಬಾರೆ ಮ್ಯಾಲವರ ಅರುಮಾನೇ ತಾನಾ

ಅವುರೀಗೆತ್ತು ಬ್ಯಾರೇಮ್ಯಾಲೆ ಗುದ್ದುಲಿ ಪೂಜಾದೊ

ಗುದ್ದಿಗಾಕ್ಯವರ ಬರುವಾಗಾ..ತಾನಾ

ಗುದ್ದಿಗಾಕೀಗ ಬರುವಾಗ

ಲಕ್ಕಣಗೌಡ್ರು ತಿಮ್ಮೇಗೌಡ್ರು ದೇವರಾಜಪ್ಪನ್ನ

ಮಕ್ಕುಳೂಗೋಳು ನಿಡಿಗೋಳೂ.. ತಾನಾ

ಗುದ್ದಿಗಾಕೀಗ ಬರುವಾಗ ಮೂರು ಜನುಮ

ಅವರ ಮಕ್ಕಳೂ ಗೋಳೂ ನಿಡಿಗೋಳೂ,,,ತಾನಾ

ಅವರ ಎಣ್ಣೆ ಹೊಳೇಲಿ ಸಣ್ಣಾನೆ ಮರಳಲ್ಲಿ

ಮಣ್ಣಿಗಾಕ್ಯವರ ಬರುವಾಗ ತಾನಾ

ಮಣ್ಣಿಗಾಕ್ಯವರಾ ಬರುವಾಗ ತಾನಾ

ಮಣ್ಣಿಗಾಕ್ಯವರಾ ಬರುವಾಗ

ಲಕ್ಕಣಗೌಡ್ರ ತಿಮ್ಮೇಗೌಡ್ರ ದೇವರಾಜಪ್ಪನ್ನ

ಅವುರ ಬಳುಗುದು ಗೋಳು ನಿಡಿಗೋಳಾ,..ತಾನಾ

ಮಣ್ಣಿಗಾಕೀಗ ಬರುವಾಗ ಮೂರು ಜನನು

ಅವುರ ಬಳುಗುದು ಗೋಳೂ ನಿಡಿಗೋಳೂ ತಾನಾ

ಏರಿಯಾ ಮ್ಯಾಲೆ ಓರೆಗಣ್ಣಲಿ ಕಂಡೆ
ಆ ಇರುಗಂಡಾನ ವಲುವಾರಾ ತಾನಾ
ಇರುಗಂಡಾನ ವಲುವಾರಾ
ಲಕ್ಕಣಗೌಡ್ರು ತಿಮ್ಮೇಗೌಡ್ರು ದೇವರಾಜಪ್ಪನ್ನ
ಏರಿಯಾ ಮಣ್ಣೆಲ್ ಯಳುಕಂಡಾ ತಾನಾ
ಕಟ್ಟೇಯ ಮಣ್ಣ ರನ್ನೆ ಬಳುಗ್ ಕಂಡೆ
ಆ ಬಟ್ಟುಗಂಡಾನ ಬಡಿವಾರ..ತಾನಾ
ಬಟ್ಟುಗಂಡಾನ ಬಡಿವಾರಾ ತಾನಾ
ಲಕ್ಕಣಗೌಡ್ರು ತಿಮ್ಮೇಗೌಡ್ರು ದೇವರಾಜಪ್ಪನ್ನ
ಕಟ್ಟೆಯ ಮಣ್ಣಲ್ ಯಳುಕಂಡಾ..ತಾನಾ
ಬಟ್ಟುಗಂಡಾನ ಬಡಿವಾರ ಮೂರು ಜನನು
ಕಟ್ಟೆಯ ಮಣ್ಣಲ್ ಯಳುಕಂಡಾ..ತಾನಾ
ಈ ಬಾಳು ಬಾಳಲ್ಲಿ ಈ ಕೂಳು ಕೂಳಲ್ಲಾ
ಈ ಲೋಕ ಯಾರಿಗು ಸ್ತಿರುವಲ್ಲಾ ತಾನಾ
ಈ ಬಾಳು ಬಾಳಲ್ಲಿ ಈ ಕೂಳು ಕೂಳಲ್ಲಾ
ಈ ಲೋಕ ಯಾರಿಗು ಸ್ತಿರುವಲ್ಲಾ ತಾನಾ
ಈ ಲೋಕಾ ಯಾರಿಗೂ ಸ್ತಿರುವಲ್ಲಾ
ಅಂತಾ ತಿಮ್ಮೇಗೌಡ್ರು
ಆಳಿಯ ಮಗುಳು ಮಾಡಿರೊ ದರ್ಮುದಲ್ಲಿ
ಈ ಲೋಕಾ ಯಾರಿಗು ಸ್ತಿರುವಲ್ಲಾ
ಅಂತಾ ಲಕ್ಕಣಗೌಡ್ರು
ಮಾಗಾ ಸೋಸೆ ಮಾಡಿರೋ ದರ್ಮುದಲ್ಲಿ
ಈ ಲೋಕಾ ಯಾರಿಗು ಸ್ತಿರುವಲ್ಲ
ಅಂತಾ ದೇವರಾಜಪ್ನರು
ತಮ್ಮಾ ನಾದ್ನೀ ಮಾಡಿರೊ ದರ್ಮುದಲ್ಲಿ .
ಇವತ್ತಾ ದೇವುಲೋಕಾಗಿ ತೆರೆಯೋದೂ.. ತಾನಾ
ಇವತ್ತಾ ದೇವುಲೋಕಾಗಿ ತೆರೆಯೋದೂ ತಾನಾ
ಇವತ್ತಾ ಆಳು ಕರುಕಂಡು
ಕಾಳೇ ಇಡುಕಂಡು ಮೂರು ಜನುವೆ

ನುಗ್ಲಿ ಹೋಯ್ತುವರೆ ಸಗ್ಗಕ್ಕೆ  ತಾನಾ
ಮಲ್ಲೇಶಪ್ಪರು ಮಾಡಿರೊ ದಾನದಲ್ಲಿ
ಮನೇ ದೇವರಾ ದಟ್ಟಿನಲ್ಲಿ
ನುಗ್ಗಿ ಹೋಯ್ತುವರೆ ಸಗ್ಗಕ್ಕೇ  ತಾನಾ
ಇವತ್ತಾ ಸಗ್ಗದಾ ಬಾಗಿಲಾ
ಸಗ್ಗುದಾ ಬಾಕುಲಾ ಬಗ್ಗುನೆ ತೆಗೀರಿ
ನುಗ್ಗಿ ಬತ್ತಾರೆ ವಯ್ಕುಂಟಕ್ಕೇ .ತಾನಾ
ನುಗ್ಗಿ ಹೋದಾರು ತಿಮ್ಮೇಗೌಡ್ರು
ಮಗುಳು ಅಳಿಮಯ್ಯ ಮಾಡಿರೋ ದಾನುದಲ್ಲಿ
ನುಗ್ಗಿ ಹೋಯ್ತಾರೆ ಲಕ್ಕಣಗೌಡ್ರು
ಮಾಗಾ ಸೋಸೇ ಮಾಡಿರೋ ದಾನುದಲ್ಲಿ
ನುಗ್ಗಿ ಹೋಯ್ತಾರೆ ದೇವರಾಜಪ್ನರು
ತಮ್ಮಾ ನಾದ್ನೀ ಮಾಡಿರೋ ದಾನುದಲ್ಲಿ
ಇವತ್ತಾ ಸೇರ್ತಾರಿಂಡಾ ಬಳುಗಾಕೇ..ತಾನಾ
ಸೇರ್ತಾರಿಂಡಾ ಬಳುಗಾಕೇ ತಾನಾ
ಮಲ್ಲೇಶಪ್ಪರೇ ಸತ್ತಾರಾ ಪಾದಾ
ನೀನೆತ್ತಿ ಹಾಡಿಸಪ್ಪಾ
ಹಿಚ್ಚೊಕಲಾಗಿ ಬದುಕಪ್ಪಾ ತಾನಾ
ಮಲ್ಲೇಶಪ್ಪರೇ ನೀವು ಕೋಡೋ ದಾನ
ನಿಮ್ಮು ತಾಯಿ ತಂದೇಗಿರುಲಿ
ನಿಮ್ಮು ತಾಯಿ ತಂದೆ ಸತ್ಯ ನಿಮುಗಿರುಲೀ..ತಾನಾ
ತಾಯಿ ತಂದೆ ಸತ್ಯ ನಿಮುಗಿರಲಿ ಮಲ್ಲೇಶಪ್ಪರೆ
ನಿಮ್ಮಂಚಳಿಕೆ ಅಬ್ಬಿ ಬೆಳೆಯಾಲೀ ತಾನಾ
ತಾಯಿ ತಂದೆ ಸತ್ಯುದಲ್ಲಿ ನೀವು ಮಾಡೋ ದಾನದಲ್ಲಿ
ನಿಮಿಗನ್ನುವೆಚ್ಚಾಗಲಿ ಹೊನ್ನು ದಾನುವಾಗಲಿ
ಚನ್ನ ಮಹಾದೇವನ ವರಾವಿರಲೀ ತಾನಾ
ಚನ್ನು ಮಹಾದೇವನ ವರದಲ್ಲಿ ಮಲ್ಲೇಸಪ್ಪರೇ
ನಿಮಿಗನ್ನು ವೆಚ್ಚಾಗಲಿ ಮನಿ ತುಂಬಾ ತಾನಾ

ದಾನುಗಾರ ಲಕ್ಕಣಗೌಡ್ರೇ ನಿಮ್ಮಗಾ ಮಲ್ಲೇಶಪ್ನೋರು ಹಾಡೋ ದಾಸರ ಕರಿಸಿ ತಣ್ಣನೆ ಹೊತ್ತಿನಲ್ಲಿ..ತಂಪತ್ತಿನ ವೇಳೆಯಲ್ಲಿ ದಾನಗಾರ ಲಕ್ಕಣಗೌಡ್ರೆ..ನಿಮ್ಮ ದಾನಚರಣೆ ಓದಿಸಿದ್ದಾರೆ. ದಾನುಗಾರ ದೇವರಾಜಪ್ಪ ನಿನ್ನ ತಮ್ಮ ನಿನ್ನ ನಾದ್ನಿ ನನ್ನಣ್ಣ ಈ ಲೋಕ ಸಾಕು ಅಂತೇಳಿ ದೇವಲೋಕ ಸೇರಿದ್ರು ಅಂತೇಳಿ ತಣ್ಣನೆ ಹೊತ್ತಿನಲ್ಲಿ ನನ್ನಂತ ಹಾಡೋ ದಾಸರ ಕರುದು..ಕರುದು ಕಾಂಚಾಣಾ ಕೊಟ್ಟು ಮುದ್ದನ್ನ ಇಕ್ಕಿ ಮರುದು ತುಂಬ ದವಸ ದಾನ್ಯ ಕೊಟ್ಟು ನಿನ್ನ ಸೆರಣೆ ನುಡಿಸಿದ್ದಾರೆ. ದೇವರಾಜಪ್ಪ ದಾನಗಾರ ತಿಮ್ಮೇಗೌಡ್ರೆ ನಿನ್ನ ಮಗುಳು ಆಳೇಮಯ್ಯ ಮಲ್ಲೇಶಪ್ನರು ಕರೆದು ಕಾಂಚಣಾ ಕೊಟ್ಟು ಮುದ್ದನ್ನ ಇಕ್ಕಿ ಮರುದು ತುಂಬಾ ದವಸ ದಾನ್ಯ ನೀಡಿ ನಿಮ್ಮ ದಾನ ಸೆರಣೆ ನುಡಿಸಿದ್ದಾರೆ. ಈ ಮಲ್ಲೇಶಪ್ಪ ಮಾಡಿರೋ ದಾನುದಲ್ಲಿ ಅವುರ ಸತ್ಯ ದರ್ಮುದಲ್ಲಿ ಇವತ್ತಾ ದೇವಿ ದೇವಮಾನ್ಯರೆಲ್ಲಿ ಸೇರಿ ಬಕ್ತಿ ಮಾನ್ಯರಲ್ಲಿ ಸೇರಿ ಇವತ್ತಾ ಸೇರಿ ಹೋಗುತ್ತಾರೆ.

ಸೇರಿ ಹೋಗುತಾರಿಂಡಾ ಬಳಾಗಕ್ಕೇ
ಸಾಗಿ ಹೋದಾರಿಂಡ ಬಳುಗಾವಾ..

# ನಿಧಾನುಕತೆ

ನಿಧಾನ ಅನ್ನ ಅಕ್ಸಾರ ಬೂಮಂಡ್ಲುಕ್ಕೆ ನಾಕಾರು ಜನುಕ್ಕೆ ಯಂಗ್ ಸೇರಬೇಕು ಈಗಾ ನನ್ನಲ್ಲಿ ಸಿಟ್ಟು ಸಿಡುಕೈತೆ ಸಿಟ್ಟುಗಾರನಾನು ನನ್ನೆಡ್ತಿಲಿ ನಿದಾನೈತೆ. ಈ ಗಂಡುಸ್ರಲ್ಲಿ ಇರದು ಸಿಡುಕು. ಹೆಂಗುಸ್ರು ಮಾಲಕ್ಷ್ಮಿ ಲಿಂಗೆ ಮನೇ ಒಳುಗೆ ಮಾಲಕ್ಷ್ಮಿ ಸಮಾನ. ಈ ಗಂಡ್ಸು ನಾಯಿ ಸಮಾನ ಬೊಗಳಕೋಯ್ತದೆ ಎಲ್ಲಿಕುವೆ. ಬೊಗಳೂ ನಾಯೀನ ಸಾಂತಿ ಮಾಡಳು ಯಾರು? ಹೆಡ್ತಿ ಎಸ್ಟು ದಿನ ಸಾಂತಿ ಮಾಡ್ತಳೆ? ದಿನಾ ಬಗಳೊ ನಾಯೀನ ಹೆಂಗ್ಸು ಎಸ್ಸು ದಿನಾ ಸಾಂತಿ ಮಾಡ್ತಳೆ? ಈಗ ಇವುನು ಬೊಗಳ್ತಲೇ ಇರ್ತನೆ. ಬೊಗಳ್ತಲೇ ಇದ್ದಾಗ ಇವುನ ಇವುನಲ್ಲಿರದು ಸಿಟ್ಟು ಸಿಡುಕು. ಅಂತನೆ ಒಬ್ಬ ಇಲ್ಲವ್ನೆ. ಮಗ ಒಬ್ಬ ಅವುನ ಹೆಡ್ತಿ. ಅವುನಿಗೆ ಮಗ ಒಬ್ಬೇನೆಯ ಅಮೇಲೆ ಹೆಡ್ತಿ. ಮಗುಂಗೆ ಎಸ್ಟು ವರ್ಷ? ಆರು ವರ್ಸುದು ಮಗ. ಆರು ವರ್ಸುದ ಮಗೂನ್ ಬುಟ್ಟು ಹೆಡ್ತಿ ಬುಟ್ಟಿ ದೇಸ ಸಂಚಾರಿಯಾಗಿ ಹೋಗಿ ಬುಟ್ಟ. ಅರು ವರ್ಸುದು ಮಗುನ್ನು ಬುಟ್ಟಿ ಕೂಡಿದ ಹೆಡ್ತೀನು ಬುಟ್ಟಿ ದೇಸ ಸಂಚಾರಿಯಾಗಿ ಹೋಗಿಬುಟ್ಟ. ದೇಸ ಸಂಚಾರಿಯಾಗಿ ಹೋದು ಮ್ಯಾಲೆ ಎಸ್ಟು ವರ್ಸು ಹೋದ ? ಹನ್ನೆರಡು ವರ್ಸು ಹೋದ. ಹನ್ನೆರಡು ವರ್ಸೊದು ಮ್ಯಾಲೆ ಇವುನು ಸಂಸಾರದೊಳಗೆ ಇವ್ನು ಇದ್ದುದ್ರೇ .ಹೆಡ್ತಿ ಇವನಿಗೆ ನೀರುಯ್ಯಳಾ, ಇವುನು ನೀರುಯ್ಯಕ್ತಿದ್ದ ಅಲ್ಲಿ..ಇವುನು ದೇಸ ಸಂಚಾರಿಯಾಗಿ ಹೋದಮ್ಯಾಲೆ. ಇವುನ್ನ ನೋಡ್ಕಳ್ಳರು ಯಾರು? ನೀರುಯ್ಯರ್‍ಯಾರು? ಬಟ್ಟೆ ಕುಕ್ಕರ್‍ಯಾರು? ಹನ್ನೆರಡು ವರ್ಸುವೆ ವನವಾಸ ಬುಟ್ಟ ಯಾರು? ಗಂಡ. ಹನ್ನೆರಡು ವರ್ಸುವೆ ವನುವಾಸ ಪಟ್ಟಾ ನೀಕೆ ನೀಕಿ ಹನ್ನೆರಡು ವರ್ಸುದ್ ಮೇಲೆ..ಥೂ ನಾನು ಕಂಡಾರ ಮನೆ ಬಾಕ್ಲಲ್ಲಿ ಹೋಗಿ ಅವಾ ಅನ್ನ ಕೊಡ ಅಂತ ಕೇಳಾದು ಇದ್ಯಾಕೆ? ನನಿಗೇನು ಬೇಕು? ನನಿಗೆ ಹೆಡ್ತಿ ಅವ್ಳೆ. ನನ್ನ ಮಗ ಅವ್ನೆ. ಆ ಸಂಸಾರುಕ್ಕೋಗಿ ನಾನು ಸೋಕಿಯಾಗಿ ಇರುಬೇಕು ಅಂತ್ಕಂಡ. ಹನ್ನೆರಡು ವರ್ಸುದು ಮೇಲೆ ವನುವಾಸ ಪಟ್ಟು ಗಂಡಾಂತರ ಗಾಚಾರ ಎಲ್ಲ ಕಳ್ಕಂಡ. ಸ್ವಾಮಿಸನಿದೇವ್ರು ಹೆಗಲೇರಿದ್ದರಿಲ್ಲ ಅವುದರು ಬುಟ್ಟು ಆಮ್ಯಾಲೆ ಮನೆ ಕಡೆ ಗ್ಯಾನಾತು. ಮನೆ ಕಡೆ ಹೊಂಟ.

ಹನ್ನೆರಡು ವರ್ಸುದ್ ಹಿಂದೆ ಬುಟ್ಟು ಹೋಗದ್ನಲ್ಲ ಹೆಡ್ತಿ. ಮಗ ಆ ಮನಿಗೆ ಬತ್ತಾವ್ನೆ. ಬರುವಾಗ ಯಾವುದೋ ಹಳ್ಳಿ ಸಿಕ್ತು. ಹಳ್ಳಿ ಒಳುಗೆ ಬಂದು ಜಗ್ತಿ ಜಗ್ತಿ ಮೇಲೆ ಮಲಗಿಬುಟ್ಟ. ಜಗ್ತಿ ಮ್ಯಾಲೆ ಮಲುಗುಬೇಕಾರೆ ಆ ಮನೆ ಒಳುಗೆ ಒಬ್ನೆ ಮುದುಕ ಒಬ್ನೆ ಮಗ. ಆ ಮುದುಕ ಅವತ್ತಿ ಸಾಯುಬೇಕು. ಅವುನಿಗೆ ಹಣೆಬರಾ ಮುಗುದೋಗ್ಯತೆ. ಆಯುಸ್ಸು ಮುಗುದೋಗ್ಯತೆ, ಆ ಮುದುಕ ಅವತ್ತು ಸಾಯಬೇಕು. ಅದೇ ಜಗ್ತಿ ಮ್ಯಾಲೆ ಇವ್ನು ಮನಗಿಸಿರೋದು ಯಾರು? ದೇಸ ಸಂಚಾರಿ ಹೋಗಿದ್ನಲ್ಲ ಇವುನು. ಅವುನು ಆ ಮುದುಕ ಮದ್‌ರಾತ್ರೀ ವತ್ತು ಜೀವ ಬುಡಕೆ ವದ್ದಾಡ್ತ ಅವ್ನೆ. ಈ ಮಗಾ ಆಳ್ತಾದೆ. ಏನಂತ ಆಳ್ತದೆ? ಅಪ್ಪಾ,,,ತಂದೆ,,,ಹಿಂದು ಹುಟ್ಟಿಲ್ಲ ಮುಂದು ಹುಟ್ಟಲ್ಲ. ದಿಕ್ಕು ದೆಸೆ ಇಲ್ಲ. ನನ್ನ ಯಾರಪ್ಪ ನೋಡ್ತಾರೆ. ಯಾರಪ್ಪ ನೋಡ್ತಾರೆ. ನನ್ನ ಕಾಪಾಡರು ಯಾರಪ್ಪ. ನನ್ನ ಕಯಿಡುದು ಸಾಕಾರು ಯಾರಪ್ಪ ಸರುಕ್ಕನೆ ಹೇಳಪ್ಪ ಅಂತ ಬಾಯ್ ಬಡ್ತತ್ತದೆ. ಹಿಂದು ಹುಟ್ಟಿಲ್ಲ ಮುಂದು ಹುಟ್ಟಲ್ಲ. ನನ್ನ ನೋಡಾರು ಯಾರು ಮುಂದೆ ಸಾಯ್ತಿಯಲ್ಲಿರೋ ಅಂತ ಗೋಳಾಡುವಾಗ ಆ ಬಗುವಂತ ಆ ಮುದುಕನಿಗೆ ದಿಸ್ಟಿ ಯೇನು ಕೊಟ್ಟ ಅಂದ್ರೇ . ಇನ್ನೇನು ಜೀವ ಬುಡುಬೇಕು. ಅಸ್ಟರೊಳಗೆ ತಿಳುವಳಿಕೆ ಕೊಡಬೇಕು ಅನ್ನ ದಿಸ್ಟಿ

ಕೊಟ್ಟ. ಆಗ ಈ ಮಗಿಗೇನು ಹೇಳ್ತಾನೆ ಮುದುಕ,,,ಮಗುವೇ..? ಹಿಂದು ಹುಟ್ಟಿಲ್ಲ ಮುಂದು ಹುಟ್ಟಲ್ಲ, ಸಾಯ್ತೀಯಲ್ಲ ನನ್ನನ್ನು ಕಾಪಾಡರು ಯಾರು ಅಂತ ಕೇಳ್ತೀಯ ಅಲ್ವ? ಆಳ್ತಾ ನಿಂತಿದ್ದೀಯ ಅಲ್ವಾ? ಅಲ್ಲ ನಿನ್ನ ಹಿಂದೆ ಮುಂದೆ ಹುಟ್ಟಿದೋರು ನಿಮ್ಮನ್ನು ಸಾಕ್ತಾರೆ ಅನ್ಕಂಡಾ? ಸಾಕಾಕುಲ್ಲ. ನಿಂಗೆ ಸಾಕಾರ ಆಗಾದಿಲ್ಲ. ಮತ್ತೆ ಯಾರಾಯ್ತಿರೆ ಅಂದ್ರೇ ನೋಡು ಕೈಯತ್ತಿ ಹೊಡಯ್ನಗೆ ಕತ್ತು ಬಗ್ಗುಸು. ಕಯತ್ತಿ ಹೊಡಯನಿಗೆ ಕತ್ತು ಬಗ್ಗುಸು. ಕಯೆತ್ತಿ ಹೊಡೆಯ್ನಗೆ ಕತ್ತು ಬಗ್ಗುಸು ಮಿತಿಮೀರಿ ಮಾತಾಡಬೇಡ. ನಿದಾನು ಕುಟ್ಟು ಬಾಳು. ದಾನುದಾನುಕ್ಕೆಲ್ಲ ನಿದಾನ ದುಡ್ಡು ಮಗುವೇ  ಕಯೆತ್ತಿ ಹೊಡಿಯೋನಿಗೆ ಕತ್ತು ಬಗ್ಗಿಸಿ ಬುಡು, ನೀನು ಕಯತ್ತಬೇಡ. ಅವುನು ಮಿತಮೀರಿ ಹೊಡೆದೇ ಬುಟ್ಟೇ .ಅವುನಿಗೆ ಕಯ್ ಮುಗುದು ಕಣ್ಣೀರು ಬುಡು. ಹೊಡದವನ್ಗೆ ಕನಿಕಾರ ಕೂಡಿ ಬತ್ತದೆ. ಕಯೆತ್ತಿ ಹೊಡುದುಕೆ ನೀನು ಕಯೆತ್ತಿ ಮುಗುದು ಕಣ್ಣೀರು ಬುಡು ಈಗ

ನೀನು ಹೊಡುದೆ ಅಂತ ಇಟ್ಕೋ ನಿನಿಗೇ ಕಯತ್ತಿ ಮುಗುದು ಕಣ್ಣೀರು ಬುಟ್ರ ತಿರುಗಾ ಹೊಡೀತೀಯಾ? ಛೇ ಛೇ ಇಂತವುನಿಗೆ ಹೊಡುದು ಬುಟ್ನಲ್ಲ ಅಂತ ಹೇಳಿ ಅವುನಿಗೇ ಕನಿಕಾರ ಕೂಡಿ ಬತ್ತಾದೆ. ಮುಂದೆ ನೀನು ನೋಡು ನಿನ್ನ ಬಂದುಬಳಗ ನಿನಿಗಾಕಾದಿಲ್ಲ. ನೀನು ಹಿಂಗೆ ಮಾಡಿದ್ರೆ ಕನಿಕಾರ ಪಡ್ತರೆ, ಎಲ್ಲವ ನೀನು ಕೆಟ್ಟ ಕಾಲುಕ್ಕೆ ಅವನೇ ನಿನಿಗೆ ಸಾಕಾರ ಮಾಡ್ತನೆ. ಅಂದ್ರೆ ಕಯೆತ್ತಿ ಹೊಡೆದವರಿಗೆ ಕತ್ತು ಬಗ್ಗುಸು ಕಯ್ ಮುಗುದು ಕಣ್ಣೀರು ಬುಡು. ನೀನು ಕೆಟ್ಟು ಕಾಲುಕ್ಕೆ ಅವುನೇ ಆಯ್ತಿನೆ ಅಂದ. ಈ ಹೆಡ್ತಿ ಮಗುನ ಬುಟ್ಟು ದೇಸಾಂತರ ಹೋಗಿ ಹಿಂತಿರುಗಿ ಬಂದು ಜಗ್ತಿ ಮ್ಯಾಲೆ ಮನಿಗಿದ್ನಲ್ಲ ಅವುನಿಗೆ ನಿದ್ದಿಲ್ಲ. ಈ ಹುಡುಗ ಬಾಯ್ ಬಡುಕಳದ್ದು ಅವಯ್ಯ ಜೀವ ಬುಡುಕೆ ಒದ್ದಾಡದ್ಕು ಇವುನಿಗೆ ನಿದ್ದಿಲ್ಲ. ಈಗ ಅವಯ್ಯ ಯೇನಾಳ್ತಾವ್ನೆ..? ದಾನ ದಾನುಕೆಲ್ಲ ನಿದಾನ ದೊಡ್ಡು ಮಗಾ ಕಯೆತ್ತಿ ಹೊಡೆಯೋರ್ಗೆ ಕತ್ತು ಬಗ್ಗುಸೂ ವಡುದ್ರು ಕಯತ್ತಿ ಮುಗುದು ಕಣ್ಣೀರು ಬುಡು ನಿದಾನ ಅನ್ನದೇ ನಿನ್ನ ಕಾಪಾಡ್ತದೆ. ಅಂತ ಹೇಳಿ ಜೀವ ಬುಟ್ಟ. ಇವುನು ಯೇಚ್ನೆ ಮಾಡ್ತಾನೆ. ನನ್ನಲ್ಲಿ ಸಿಟ್ಟಿತ್ತು, ಸಿಡುಕಿತ್ತು. ಹೆಡ್ತಿ ಬುಟ್ಟೆ ಮಕ್ಳು ಬುಟ್ಟೆ ದೇಸಾಂತರ ಹೋದೆ. ಆಗ ನನಿಗೂ ಈ ನಿದಾನ ಅನ್ನ ಅಕ್ಸಾರ ತಿಳೀನಿಲ್ಲ. ಇನ್ನ ಇಲ್ಲಿಂದೀಚಿಗೆ ಸಿಟ್ಟು ಬ್ಯಾಡ ಶಾಂತಿಯಾಗಿ ಬಾಳುಬೇಕು. ಶಾಂತಿಯಾಗಿ ಬಾಳುದ್ರೆ ಮನೆ ಸಂಸಾರ ಉಳೀತಾದೆ. ನನಿಗೆ ಸಿಟ್ಟು ಸಿಡುಕು ಜಾಸ್ತಿ. ಈವಾಗ ನಿದಾನ ಅನ್ನ ಅಕ್ಸಾರ ದೊಡ್ಡ ದೇವುರು. ನನಿಗೆ ಈ ನಿದಾನ ಅನ್ನ ಅಕ್ಸಾರ ಬರಕ ಬೇಕು ನಾನು. ಯ್ಯಾಗೆ ಬರ್ಕಲ್ಲಿ ಅಂತ ಯೇಚ್ನೆ ಮಾಡ್ತನೆ. ಇವುನಿಗೆ ಈಗ ಅವಯ್ನ ಮಾತು ಎದಿಗೆ ಹೊಡೆದು ತಿಳುವಳಿಕೆ ಕೊಡ್ತಾಐತೆ ಜ್ಞಾನ.. ಆ ಮುದುಕನ ಮಾತು ಅವುನ ಮಗುನ್ನು ಸಾಕಾರಾತು. ಇವನ್ನು ಸಾಕಾರಾತು. ನಿದಾನ ಅನ್ನಾದು ಪ್ರದಾನ. ಈಗ ಸಿಟ್ಟು ಬತ್ತಾದೆ. ಏಕದೂ ಚಾಕು ಇಡ್ಕತ್ತೀನಿ, ಒಂದ್ ದೊಣ್ಣೆ ಹಿಡ್ಕತ್ತೀನಿ. ಒಂದ್ ಕೊಡ್ಲಿ ಹಿಡ್ಕತ್ತೀನಿ ಸಿಟ್ನಲ್ಲಿ .ನಿದಾನ ಅನ್ನ ಅಕ್ಸರ ಇದ್ರೆ.. ಸಿಟ್ನಲ್ಲಿ ಚಾಕು ಇರ್ತದೆ. ಆವಾಗ ನಾನು ಆ ಚಾಕಿಗೆ ಬರ್ಕಬೇಕು. ಈ ಅಕ್ಸಾರನ ಅವುನತ್ರ ಒಂದ್ ಚಾಕಿತ್ತು. ಆ ಚಾಕಿಗೇನಂತ ಬರೀತಾನೆ ಗೊತ್ತಾ ? ನಿದಾನ, ನನಿಗೆ ದೇವ್ರು ನಿದಾನ ನನಿಗೆ ದೊಡ್ಡು ದೇವ್ರು ಅನ್ನ ಅಕ್ಸಾರ ಬರ್ಕಾತಾನೆ ಚಾಕಿನ್ ಮೇಕೆ. ಎಲ್ಲಿ ನನಿಗೆ ಮುಂಗೋಪ ಬತ್ತಿರೋ ಅಲ್ಲಿ ನನಿಗೆ ಶಾಂತಿ ಮಾಡು. ನನಿಗೆ ಕೋಪ ಬಂದಾಗ ನಿನ್ನ ಹಿಡ್ಕತ್ತೀನಿ. ನೀನು ಅಗ ಶಾಂತಿ ಮಾಡು ನಿದಾನ ನನಿಗೆ ದೇವ್ರು– ನಿದಾನ ನಿದಾನ ನಿಧಾನ ಅನ್ನ ಅಕ್ಸಾರ ಚಾಕಿನ್ ಮ್ಯಾಲೆ ಇರ್ಲಿ ಅಂತ ಬರ್ಕ್ಯಾತ್ತಾನೆ.

ನಿದಾನ ಅನ್ನ ಅಕ್ಸಾರ ಅದುರ್ ಮ್ಯಾಲೆ ಬರ್ಕಂಡು ಅದುಕ್ಕೆ ಚಂದಾಗಿ ಪೂಜೆ ಮಾಡಿ ಜೇಬಿಗೆ ಮಡಿಕ್ಯತ್ತಾನೆ. ಆ ಮುದುಕ ಅಲ್ಲಿ ಸತ್ತೋದ. ಈಗ ಮನಿಗೆ ಬತ್ತಾವ್ನೆ ಇವ್ನು. ಮನೀಗೆ ಬರೋವಾಗ ತಿರುಗಾ ಬಂದು ಕೀಟ್ಲೆ ಮಾಡ್ತಾವ್ನೆ. ಈಗ ಮನೆ ಬಟ್ಟು ಹೋದನು. ಎಸ್ಟೊರ್ಸೋದ? ಹನ್ನೆರಡು ವರ್ಸ ಎಸ್ಟೊರ್ಸುದ ಮಗುನ ಬುಟ್ಟೋಗಿದ್ದ? ಆರು ವರ್ಸುದ ಮಗುನ ಬುಟ್ಟೋಗಿದ್ದ. ಹೋಗಿದ್ದು ಎಸ್ಟೋರ್ಸ? ಹನ್ನೆರಡೊರ್ಸ. ಅಲ್ಲಿಗೆ ಮಗುನಿಗೆ ಈಗ ಎಸ್ಟೊರ್ಸ? ಹದಿನೆಂಟೊರ್ಸ. ಆರೊರ್ಸುದು ಮಗುನ ನೋಡಿದ್ದೋನು ಹದಿನೆಂಟು ವರ್ಸುದು ಮಗುನ್ನ ಗೊತ್ತು ಮಾಡಕಾಯ್ತದ. ಆಗಾಕುಲ್ಲ, ಮಗಾ ಅನ್ನ ಗುರ್ತು ಸಿಕ್ತದ.? ಇಲ್ಲ ಇಲ್ಲ ಇವುನು ಮನಿಗೆ ಬರೋವಾಗ ಮತ್ತೊಂದ ಜ್ಯಾನ ಮಾಡ್ತನೆ. ಯೇನ ಜ್ಯಾನ ಮಾಡ್ತನೆ? ಈಗ ನಾನು ಮನೆ ಬುಟ್ಟು ಹನ್ನೆರಡು ವರ್ಸ ಆಯ್ತು. ನನ್ನೆಡ್ತಿ ಈ ಹನ್ನೆರಡು ವರ್ಸುದಿಂದ್ಲು ಪತಿವರ್ತೆ ತಾನದಲ್ಲೇ ಇದಾಳೋ ಇಲ್ಲಾ ಯಾವನ್ನಾರ ಇಟ್ಟುಕಂಡವಳೋ ಅನ್ನದಾಗಿ ಜ್ಯಾನ ಮಾಡ್ತನೆ. ನನ್ನೆತ್ತಿ ಸತ್ಯ ಸೆರಣೆಯಾಗೇ ಅವುಳೋ ಇಲ್ಲಾ ಪುಂಡುತಾನದಲ್ಲಿವಳೋ ಅನ್ನದ ಪರೀಕ್ಸೆ ಮಾಡಿ ನೋಡಬೇಕು. ಆನ್ನದಾಗಿ ಯೇಚ್ನೆ ಮಾಡ್ತನೆ. ಯಂಗ್ ಮಾಡ್ಲಿ? ಇವುನ್ ಯೇಚ್ನೆ, ಮನೇಗೆ ಬರುವಾಗ ಅವುಳ ಸತ್ಯ ದರ್ಮ ಪರೀಕ್ಸೆ ಮಾಡಬೇಕು. ಆವುಳ ಬಕ್ತಿ ಯಿಕ್ತಿ ನೋಡಬೇಕಾರೆ ಯೇನ್ ಮಾಡುಬೇಕು. ಆವುಳು ಹಾದರಗಿತ್ತಿ ಅದ್ರೆ ಅವುಳು ಕಯ್ಯಿಗೆ ಸಿಕ್ತಾಳೆ. ಪುಂಡ ಸಿಕ್ತಾನ? ಯಾವೊತನಲ್ಲಿ ಹೋಗುಬೇಕು ಅಂತ ಚಿಂತೆ ಮಾಡ್ತನೆ. ಬರುವಾಗ ಈಗ ಈವೊತ್ನಲ್ಲಿ ಹೋಗದು ನನಿಗೆ ತರುವಲ್ಲ ಅವುಳನ ಪರೀಕ್ಸೆ ಮಾಡಬೇಕಾರೆ ಮದ್‌ರಾತ್ರಿ ವತ್ನಲ್ಲಿ ಹೋಗಿ ಕದ ತಟ್ಟಿದುರೆ ಅವಳಲ್ಲಿ ಪುಂಡುತಾನ ಇದ್ರೆ. ಸುಮ್ನೆ ಬಂದು ಕದ ತೆಗೀತಾಳೆ. ಅವುಳಲ್ಲಿ ಸತ್ಯ ದರ್ಮ ಇದ್ರೆ ಯಾವನ್ಲ ಅವುನು ಅಂತ ಕೇಳ್ತಾಳೆ. ಇವುಳು ಸೆರಣೆಯಾದ್ರೆ ಯಾವನು ಕದಾ ತಟ್ಟನು ಅಂತ ಅದ್ಲುಸ್ತಾಳೆ. ಅವಳಲ್ಲಿ ಪುಂಡುತನವಿದ್ರೆ ಯಾವನೋ ಬಂದ ಅಂತ ಸುಮ್ಮನೆ ಬಂದು ಕದ ತೆಗೀತಾಳೆ, ಈಗ ಸುಮ್ನೆ ಬಂದು ಕದ ತೆಗುದ್ರೆ ಅವಳಲ್ಲ ಪುಂಡುತನ ಐತೆ ಅಂತ. ಇಲ್ಲಾ ಯವನ್ಲ ಅಂತ ಅದ್ಲುಸಿದ್ರೆ ಅವಳಲ್ಲಿ ಪುಂಡುತಾನ ಇಲ್ಲ ಅಂತ. ನಿಜುವೋ? ಸುಳ್ಳೋ? ಅವಳಲ್ಲ ಪುಂಡುತಾನ ಇದ್ರೆ. ಯಾವ ಟೇಮಿನಲ್ಲವೆ ಯಾವನೂ ಬಂದ ಅಂತ ಸುಮ್ನೆ ಬಾಗುಲು ತೆಗೀತಾಳೊ ಇಲ್ವೋ? ತೆಗಿತಾಳ ಪುಂಡುತಾನ ಇಲ್ದೆ ಇದ್ರೆ ಇಂಗೆ ರಾತೋರಾತ್ರಿ ಯಾವನೊ ಬಂದು ಕದ ತಟ್ಟಿದ್ರೆ ಸುಮ್ನೆ ಕದ ತೆಗೀತಾಳೆ? ತಗಿಯಕುಲ್ಲ. ಅದುಕ್ಕೆ ಈ ವತ್ನಲ್ಲಿ ಹೋಗಿ ಕದ ತಟ್ಟಬೇಕು ಅನ್ನದಾಗಿ ಬತ್ತನೆ. ಮದ್ ರಾತ್ರೀ ವತ್ನಲ್ಲಿ ಮನಗಿಎ ಬಂದ ಸುಮ್ನೆ ಕದ ದಡ್ಡಾದಡ್ಡನೆ ಇಡಿತಾವ್ನೆ. ದಡ್ಡಾ ದಡ್ಡಾನೆ ಇಡೀವಾಗ.. ಇವಳಿಲಿ ಸತ್ಯ ದರ್ಮ ಐತೆ. ಇವುಳೇನು ತಿಳ್ಕಂದವ್ಳೆ, ನನ್ ಗಂಡ ಬುಟ್ಟೋಗಿ ಹನ್ನೆರಡು ವರ್ಸುತು ಇನ್ನು ಬರುನಿಲ್ಲ ಅಂದ್ರೆ ಅವುನೆಲ್ಲೊ ಸತ್ತೋಗ್ ಬುಟ್ಟ. ನನ್ ಮುತ್ಯೆದೆ ತಾನ ಮುಗಿದೋಯ್ತು. ನನಿಗೆ ಮುತ್ಯೆದೆ ತಾನವಿಲ್ಲ ಅಂತ ನಿಚ್ಚೈಸಿಕಂಡವ್ಳೆ. ಇವತ್ತಿನ ದಿನಾ ಗಂಡಾ ಬಂದು ಕದಾ ತಟ್ಟಿದ್ರೆ. ಗಂಡ ಅನ್ನಾದು ಅರಿವಾತದಾ ಅವುಳಿಗೆ? ಇಲ್ಲಿ ಇಲ್ಲಿ ಗಂಡ ಅನ್ನಾದು ಕಂಡುಬುತ್ತುದಬರಾಕಿಲ್ಲ. ಒಳುಗೆ ಮನಗಿದ್ದಳು ಕದ ತಟ್ಟಿದಾಗ ಅಂಗೇ ಕಣ್ಣಬುಟ್ಟು ಯಾರಯ್ಯ ಕದಾ ತಟ್ಟಿದು? ಅಂದ್ಲು ನಾನು ಕದ ತೆಗಿಯೇ, ಅಂದ ಅಯ್ಯೋ ನಿನ್ ಮನೆ ಹಾಳುಬಿದೋಗ ಪಾಪುರ ನನ್ ಮಗನೆ ನಾನ್ ಕನ್ ತಗಿಯೇ ಅಂತೀಯಲ್ಲಿ ಯಾವನ್ಲಾ? ಯಾವರ ಸೂಳೇ ಮಗುನ್ಲಾ? ಯಾವಾ ಬೋಳಿ ಮಗುನ್ಲಾ? ಏಯ್ ನಾನ ಕನ್ ತೆಗಿಯೇ ಸೂಳೇ ಮಗ ಬೋಳೀ ಮಗ ಅನ್ನಬ್ಯಾಡಾ. ನಾನ್ ಕನ್ ತೆಗೀ ಅಂದ. ಅವುಳ್ನ

ಪರೀಕ್ಸೆ ಮಾಡಿದುಕ್ಕೆ ಲೇ ನಾನ್ ಕನ್ ತೆಗಿಯೇ ಅಂದ. ಅವುಳು ಕೆಟ್ ಬೊಗುಳ ಬೋದ್ರು ಅವುಳು ಅಳತೆ ತಿಳ್ಕಳದುಕ್ಕೆ ನಾನು ಕನ್ ತೆಗಿಯೇ ನಾನ ಕನ್ ತೆಗಿಯೋ ಅಂತವೇ ವರ್ತು ಇನ್ನೇನುವಿಲ್ಲ. ನಾನ್ ಕನ್ ತೆಗೀಯೇ ಅಂತೀಯಲ್ಲಿ ಯಾವನೋ ನೀನು ಅಂತಾ ಮಗನೇ ಇಂತಾ ಮಗುನೇ ಆಟುಕೊಳೆ ಅಂತ ಬಯ್ಯಕೆ ತೊಡಗಿದ್ಲು ಈಗಾ ನಿನ್ನ ದುಡ ಕಂಡು ಬಂತು ನೀನು ಬಾಗ್ಲು ತಗಿಯೇಳಲ್ಲಿ ಈಗ ನಾನು ಯಾರು ಅನ್ನದಾಗಿ ಪರೀಕ್ಸೆ ಮಾಡದಾದುರೆ ಈ ಕಿಟಕಿ ಬಾಗುಲು ತಕ್ಕ ದೀಪ ತಗಂಬಾ ಕಿಟಕಿಂದ ಈಚಿಗೆ ನಾನು ನಿಂತ್ಕತ್ತೀನಿ. ಕಿಟಕಿಂದ ಇಚ್ಗೆ ನೀನು ನಿಂತ್ಕಾ ನನ್ನ ಮಕಾ ನೋಡಿ ಯಾರು ಅನ್ನದಾಗಿ ನೀನು ತಿಳ್ಕಿ. ಈಗ ಅದು ಒಳ್ಳೆದೇಯ. ಈಗ ಪುಂಡುಗಾರ ಕಿಟಕಿಂದ ಒಳಿಕೆ ಬತ್ತನ. ಕಳ್ಳ ಬಂದು ನುಸ್ತನ? ಇಲ್ಲಿ ಇವುನು ಯಾರು ಅನ್ನದು ಪರೀಕ್ಸೆ ಮಾಡಕೆ ಕಿಟಕಿ ಪಕ್ಕೆ ದೀಪ ಇಡ್ಕಂಡು ಬಂದ್ಲು, ಎಲ್ಲ ಈಗ ಮಕ ತೋರು ಅಂದ್ಲು. ಆಗ ಗಂಡ ಹೆಡ್ತಿ ಎದುರು ಬದುರಾದ್ರು. ಕಿಟಕಿಂದ ಅಚ್ಗೆ ಅವುನಾದ ಕಿಟಕಿಂದ ಇಚ್ಗೆ ಇವುಳಾದ್ಲು. ನೊಡ್ತಳೆ ! ಗಂಡಾ! (ಕತೆಗಾರ ಬಹಳ ಉನ್ಮಾದದಿಂದ ಎರಡೂ ಕೈ ಚಪ್ಪಾಳೆ ತಟ್ಟುತ್ತಾನೆ) ಇವುಳಾತ್ಮಾ ಇವುಳಾತ್ಮಾ ಅಯ್ಯೋ ಸತ್ತೋಗ್ಯನೆ ಅಂತ ಕಂಡ್ನಲಪ್ಪ. ನನ್ನ ಮುತ್ಯೆದೆ ಬಾಗ್ಯ ಉಳೀತು. ಅಂತ ಇವುಳಿಗೆ ಸಿರಿ ಬಂದೋಗಿ ಬುಡ್ತು. ಇವುತ್ತು ಗಂಡುನ ಜೊತೆ ಸರಿಸಮ ಕೂತು ಸುಖ ಪಡಬೇಕು. ಅನ್ನದಾಗಿ ಮನಸ್ಸಿನಲ್ಲಿ ನಿಚ್ಚೈಯ್ಸಿಕಂಡು. ಇವತ್ತು ಗಂಡುನ ಕಾಲು ಪೂಜೆ ಮಾಡಿ ಸಂತೋಸ ಪಡುಬೇಕು. ಅವುರ ಪಾದಸೇವೆ ಮಾಡಬೇಕು. ಅವುರ ಜೊತೇಲಿ ಕೂತು ಸಂತೋಸ್ ಪಡುಬೇಕು. ಅನ್ನ ದುಡ ಇವುಳಿಗೆ ಬಂತು. ಈಗ ಇವುಳು ಬಾಗುಲು ತೆಗೀನಿಲ್ಲ, ಗಂಡುನ ಬಳೀಕೆ ಕರ್ಕಬೇಕಾರೆ ಕಾಲು ತೋಳೀಬೇಕು. ಕಾಲು ತೊಳೆದು ಪಾದ ಪೂಜೆ ಮಾಡಿ, ಅರುಸುಣ ಕುಂಕುಮ ಇಕ್ಕಿ ದೂಪು ದೀವುಳಿಗೆ ಮಾಡಿ ಒಳೀಕೆ ಕರ್ಕಬೇಕು. ಅನ್ನದು ಅವುಳ ಆತ್ಮದಲ್ಲಿ ಹುಟ್ಟಿ ಅರುಸುಣ ಕುಂಕುಮ ನೀರು, ಗಂದುದ ಕಟ್ಟಿ ತರಕೆ ಕ್ವಾಣಿಗೆ ಓಡಿಹೋದ್ಲು. ಇವುನೇನು ತಿಳ್ಕಿತ್ತನೆ. ಎಲಾ ಮುಂಡೆ ಗಂಡ ಬಂದವ್ನೆ ಅನ್ನದು ಗೊತ್ತಾಗಿ ಬಾಗ್ಲು ತೆಗಿದೆಯ ಕ್ವಾಣಿಗೆ ಓಡಿ ಹೋಯ್ತಳಲ್ಲ. ಯಾವನ್ನೊ ಇಟ್ಗಂಡು ಮಲಗ್ಯವಳೆ ಅನ್ನದ ನಿಗಿರಿ ನೋಡ್ದ. ನಿಗುರಿ ನೋಡ್ದಗ ಎಸ್ಟು ವರ್ಸುದ್ ಮಗನ ಬುಟ್ಟೋಗಿದ್ದು ಇವುನು. ಆರು ವರ್ಸುದು ಮಗನ್ನು ಈಗ ಮಗುನೆ ಎಸ್ಟೊರ್ಸ? ಹದಿನೆಂಟು, ತಾಯಿ ಮಗ ಸಮಚಾಪಿಲಿ ಮಲಗಿದ್ರೆ ತಪ್ಪೇನು? ಮಗ ಇವುನಿಗೆ ತಿಳೀನಿಲ್ಲ. ಪುಂಡುಗಾರುನ ಕಚ್ಗಂಡು ಮಲಗಿರುವನಲ್ಲೆ ಈ ಮುಂಡೆ ಕ್ವಾಣೀಗೋಡಿದ್ಲು, ಅಂತ್ಕಂತಾನೆ. ಅವುಳೋಗಿರದು ಅರುಸುಣ ಕುಂಕುಮ ನೀರು ತಾರಕೆ, ಗಂಡುನ ಪಾದ ಪೂಜೆ ಮಾಡಕೆ. ಈ ಇವುನು ಈ ಯೇನು ತಿಳ್ಕಂಡ? ಪುಂಡುಗಾರನ ಕಟ್ಗಂಡು ಮಲಗಿರೊವತ್ಗೆ ನನ್ ಮಕ ನೋಡ್ದೇಟಿಗೆ ಕ್ವಾಣಿಗೋಡಿರದು ಈ ಮುಂಡೆ. ಎಸೊತ್ತಿಗೆ ಇವುನ್ನ ಕೊಲೆ ಮಾಡ್ಲಿ ಇವುಳ್ನ ಕೊಲೆ ಮಾಡ್ಲಿ. ಇಟ್ಗಂಡಿರೋ ಇವುಳ್ನು ಕೊಲೆ ಮಾಡಬೇಕು. ಮಲಗಿರೋ ಅವುನ್ನು ಕೊಲೆ ಮಾಡಬೇಕು. ತಿರುಗಾ ಮದ್ಲು ಯಂಗ್ ಹೋಗಿದ್ದೆ ಅಂಗೆ ದೇಸ್ ಸಂಚಾರಿಯಾಗಿ ಹೋಗಿಬುಡುಬೇಕು, ಅದ್ಕಂಡ ಅವುನಾರು ಮಲಗಿರಾನು? ಒಳುಗೆ ಇವುನುಗೇನಾಗಬೇಕು? ಮಗ ಇವುನುಗೇನು ಗೊತ್ತು ಮಗ ಅನ್ನದು. ನನ್ನೆಡ್ತಿ ಪುಂಡುಗಾರ ಅನ್ಕಂಡ, ಇವುರಳೋನಿರದ ಕ್ವಾಣಿಗೆ ಅರುಸುಣ ಕುಂಕುಮ ಗಂದುದಕಡ್ಡಿ ತಗಬಂದು ಗಂಡುನ ಪಾದು ಪೂಜೆ ಮಾಕೆ ಅದು ತಿಳೀಲಿಲ್ಲ ಇವುನಿಗೆ. ತಿರುಗಾ ರಾವು ಬಂದು ಕಾಲ. ರಾವು ರವುಸು ಬಂತು ಇವುನಿಗೆ. ಈಗ ಅರುಸುಣ ಕುಂಕುಮ, ಗಂದುದಕಡ್ಡಿ, ನೀರು ಎಲ್ಲಾನು

ನಂಚಿಕಂಡು. ಈಚಿಗೆ ಬತ್ತಳೆ. ಈಚಿಗೆ ಬಂದ್ ಗಳಿಗೆಲ್ಲಿ ಏನು ಯೇಚನೆ ಮಾಡ್ತನೆ. ಈಗ ನಾನು ಕೂಗಿ ಮಾತಾಡಿದ್ರೆ ಅಕ್ಕ ಪಕ್ಕದವರಿಗೆಲ್ಲ ಎಚ್ಚರಿಕ್ಯಯ್ತದೆ. ಅವುಳ ಕೊಲೆ ಮಾಡಕೆ ಆಗದಿಲ್ಲ. ಬೊಬ್ಬೆ ಹೊಡುದ್ರೆ ಎಲ್ಲ ಬಂದು ಬುಟ್ರೆ ಇವುಳ್ನು ಕೊಲೆ ಮಾಡಕೆ ಆಗಾಕಿಲ್ಲ. ಅವುನ್ನು ಕೊಲೆ ಮಾಡಕಾಗಲ್ಲ. ಏನಾರ ಮಾಡಿ ಇವುಳ್ನು ಕೊಲೆ ಮಾಡಬೇಕು. ತಿರುತಾ ರಾತ್ರಿ ರವುಸು ಬಂತು. ಅವುಂತಾವ ನಿದಾನ್ಯೆತ? ಇಲ್ಲಿ ಎಸ್ಪತ್ತಿಗೆ ಇವುಳು ಬಾಗುಲು ತಗುದು ನನಿಗೆ ಮಕಾ ತೋರ್‍ಯಳೋ? ನಾನು ಚಾಕು ಹಾಕಿ ಬುಡಬೇಕು ಅಂತ ಅದೇ ಚಾಕ ಇಡ್ಕಂಡು ನಿಂತವ್ನೆ. ಅವುನ್ನು ಕೊಲೆ ಮಾಡಿ ಇವುಳ್ನು ಕೊಲೆ ಮಾಡಿ ಮತ್ತೆ ದೇಸಾಂತರ ಹೋಗಿ ಬುಡಬೇಕು ಅನ್ನದಾಗಿ ರಾವು ರವುಸಲ್ಲಿ ಬಾಗಲಲ್ಲಿ ಕಾಯ್ಕಂಡು ನಿಂತವ್ನೆ. ಈಗ ಇವನಲ್ಲಿ ಮುಂಗೋಪ ಮುಂದಲಿದ್ಯೆತೆ. ಶಾಂತಿ ಸಮಾಧಾನ ಐತಾ? ಮುಂಗೋಪ ಮುಂದರಿದ್ಯೆತೆ. ಮುಂಗೋಪ ಮುಂದೆರಿದ್ಯೆತಾ? ಅವುಳು ಬಂದು ಗಳಿಗೆಲ್ಲಿ ಗಂಡುನ ಪಾದ ತೊಳೆದು ಒಳಿಕೆ ಕರ್ಕಳ್ಳಾಕೆ ಚಾಪೆ ಹಾಕಿದ್ಲು. ಬಾಗುಲು ತೆಗುದ್ಲು. ಇನ್ನ ಆ ಮನೆ ವಳುಗೆ ಉಸುರಾಡದು ಯಾರು ಇಲ್ಲವಲ್ಲ. ಇರನೊಬ್ಬ ಮಗ ಮನಿಗ್ಯವನೇ ಇವುಳು ಬಂದಳೇಯ ಗಂಡುನ ಪಾದ ತೊಳೆಯಾಕ್ಕೆ ಅರುಸುಣ ಕುಂಕುಮ, ಗಂದುದಕಡ್ಡಿ, ನೀರು ಎಲ್ಲಾನು ಮಡಿಕ್ಯಂಡು ಗಂಡುನು ಮುಂದೆ ಬಗ್ಗದ್ಲು. ಗಲಾಟೆಮಾಡುಬಾರ್ದು. ಕೂಗಿ ಮಾತಾಡುಬಾರ್ದು., ಸುಮ್ಮನೆ ನನ್ನೆಡ್ತಿ ಮಕಾ ತೋರಿದ್ರೆ ಚುಕಾಶಿತಾನ ಅಂತ ಇವುನು ನಿಂತವ್ಗೆ. ಅದೇನಾರ ಅವುಳಿಗೆ ಗೊತ್ತೈತಾ? ಇಲ್ಲ ಇವುಳು ಬಂದಳೇಯ ಗಂಡುನ ಕಾಲು ಮುಂದ್ಕೆ ಬಗ್ಗಿದ್ಲು. ಚಾಕೆತ್ತಿದ! ಚಾಕೆತ್ತಿದ ಮೇಲ ಈ ಚಾಕೀನ ಮ್ಯಾಲೇನ್ಯೆತೆ. ಏನು ಬರ್ಕಂಡಿದ್ದ ಚಾಕಿನ ಮೇಲೆ ನಿಧಾನ! ಎಲ್ಲಿ ಹುಟ್ಟಿದ್ದು ಈ ನಿದಾನ ಅನ್ನ ಅಕ್ಸರ? ಉರಾದಾರೀಲೀ ಒಂದು ಮನೇ ಜಗ್ತಿ ಮೇಲೆ ಮನಗಿದ್ನಲ್ಲ ಅಲ್ಲಿ ಮುದುಕ ಮಗನಿಗೇಳಿ ಸತ್ನಾಲ್ಲ.. ಅಲ್ಲಿ ಆ ಮುದುಕನ ಅಕ್ಸಾರ ಇವುನು ಚಾಕಿನ ಮೇಲೆ ಬರ್ಕಂಡಿದ್ದ. ನಿದಾನ ಅನ್ನದು ನನಿಗೆ ದೇವ್ರು. ನನಿಗೆ ಮುಂಗೋಪ ಬಂದಾಗ ನನ್ನ ಸಾಂತಿಮಾಡು ಅಂತಾವ. ಆ ಅಕ್ಸಾರ ಬರ್ಕಂಡು ಪೂಜೆ ಮಾಡಿ ಮಡಿಕ್ಕರಿಡಿದ್ನಲ್ಲ ಅದು ಈವಾಗ ನಿದಾನ ಅವ್ನ ಅಕ್ಸರ ಅವುನು ಎತ್ತಿದ ಚಾಕ ಇಳಿಸಾಕೆ ಕೊಲೊಲ್ಲು ಅಂಗೆ ಕಯ್ಯ ಹಿಡ್ಕಂಡಂಗಾಗ್ಯೆತೆ. ಚಾಕು ಎತ್ತಿದ, ಎತ್ತಿದ ಗಳಿಗೆಲ್ಲಿ ಏನೋ ಒಂದರ ಮಬ್ಬು ಬಂದಂಗಾತು. ಅವುಳು ಬಂದಳೆಯ ಗಂಡುನ ಮುಂದೆ ಬಗ್ಗಿ ಗಂಡುನ ಕಾಲು ತೊಳೆಯಾಕೆ ಕಾಲು ಹಿಡಕಳ್ಳಕೋದ್ಲು. ಮುಟ್ಟಬ್ಯಾಡ ಮುಂಡೆ! ಅಂದ ಮುಟ್ಟಿಬ್ಯಾಡಾ ಮುಂಡೆ. ಯಾಕ್ ಸ್ವಾಮಿ ಮುಟ್ಟಿಬ್ಯಾಡಾ ಅಂತಿರಾ? ನನ್ನಲ್ಲೇನು ತಪ್ಪೈತೆ? ಯೇನ್ ತಪ್ಪದೆ ತೋರ್‍ಲಾ? ತೋರಿ ಸ್ವಾಮಿ ತೋರ್‍ತೀನಿ. ಆತುತೋರಿಸ್ವಾಮಿ. ಈಗ ನಾನು ಹೋಗಿದ್ದು ಎಸ್ಟು ವರ್ಸ ಮನೆ ಬುಟ್ಟು. ಹನ್ನೆರಡು ವರ್ಸಾತು. ಹನ್ನೆರಡು ವರ್ಸ ಮನೆ ಬುಟ್ಟೋಗಿದ್ದೀನಿ. ನನ ಗಂಡಾ ದೇಸಾಂತರ ಹೋದ ಮೇಲೆ ನನಿಗೆ ಗಂಡಿಲ್ಲ ಅಂತ ಪುಂಡುಗಾರುನ ಕಟ್ಟಗಂಡು. ಮನ ನಿದ್ದೀಯಲ್ಲಿ ಎಲ್ಲಿ ಸ್ವಾಮಿ? ಅಲ್ಲಾರು ಮನಿಗಿರಾನು? ಗಂಡ ವಾದ ಅನ್ನದು ಕಂಡು ಪುಂಡುಗಾರುನ ಕಟ್ಗಂಡು ಜೋಡೀಲಿ ಮನಗಿರದು ಅಲ್ವೆಯಾ ನನ್ನ ಕಾಲು ಮುಟ್ಟಿ ತೊಳಿಯಾಕೆ ಬಂದಿದೀಯಲ್ಲಿ, ಮಲಗಿದನ್ಯಾವನು? ಇವುಳಿಗೆ ಬರುಬಾರದ್ ಸಂಕುಟ ಬಂದುಬುಡ್ತು. ಕಿಚ್ಚು ಹತ್ತು. ನಾನು ಹೆತ್ತ ಮಗುನ್ನ ನನ್ನ ಗಂಡ ನನ್ನ ಪುಂಡುಗಾರ ಅಂತ ಕರೀತಾನಲ್ಲ. ಇದ್ಕೇನು ಹೇಳಬೇಕು.? ಸ್ವಾಮಿ ಮಲಗಿರನ್ಯಾವನು ಅಂತ ಕೇಳ್ತಿರಲ್ಲ. ನಾನೊಂದು ಮಾತ ನಿದಾನವಾಗಿ ಹೇಳ್ತೀನಿ. ನೀವು ನಿದಾನವಾಗಿ ಕೇಳ್ತಿರಾ? ನೋಡು, ನಿದಾನ ಅನ್ನ ಅಕ್ಸರ

ಇಲ್ಲಿರವತ್ಗೇಯ ನೀನಿಸ್ಟು ಹೊತ್ತು ಉಳ್ಕಂಡಿದ್ದೀಯ, ಬಾಳಿದ್ದೀಯ. ನಿದಾನ ಅನ್ನ ಅಕ್ಸರ ಈ ಚಾಕಿನ ಮ್ಯಾಲಿರವತ್ಗೆ ಆ ನಿದಾನ ನನ್ನ ತಡ್ದೈತೆ. ತಡುದು ತಾಳೈತೆ. ನಿದಾನ ಅನ್ನ ಅಕ್ಸಾರ ಇಲ್ಲಿದ್ದೆ ಹೋಗಿದ್ರೆ ಇಸ್ಟೊತ್ತಿಗೆ ನೀನು ಕೊಲೆಯಾಗಿ ಹೋಗಿರುವೆ. ಅವುನು ಕೊಲೆಯಾಗಿ ಹೋಗಿರನು. ನಾನು ದೇಸಾಂತರ ಹೋಗಿರುವೆ. ಅವುನ್ಯಾವನು ಅಲ್ಲಿ ಮಲಗಿರನು? ಪುಂಡಗಾರುನ ಕಟ್ಟಿಗಂಡು ಮಲಗಿದ್ದೀಯಲ್ಲ ಅಂತನೆ. ಆವಾಗ ಕೈಮುಗಿದು ಕಣ್ಣೀರು ಬುಟ್ಟು, ಸ್ವಾಮೀ ನೀವು ಮನೆ ಬುಟ್ಟೋಗಿದ್ದು ಯಾವಾಗ? ಎಸ್ಟೋರ್ಸದಲ್ಲಿ ಹನ್ನೆರಡೊರ್ಸದಲ್ಲಿ. ನೀವು ಮನೆ ಬುಟ್ಟು ಹೋಗುವಾಗ ಮನೇವಳುಗೆ ಎಸ್ಟೋರ್ಸದು ಮಗಿದ್ದ? ಆರು ವರ್ಸದು ಮಗಿದ್ದ. ಆರು ವರ್ಸದ ಮಗಿದ್ದಾ? ಆರು ಹನ್ನೆರಡು ಎಸ್ಟಾತು. ಹದಿನೆಂಟು ವರ್ಸಾತು. ಹದಿನೆಂಟು ವರ್ಸದು ಮಗ ನಾನು ಸಮ ಜೋಡಿಲಿ ಮನಗಿರುವಾಗ ಅವುನ್ನ ನನ್ನ ಪುಂಡುಗಾರುನ್ನ ಮಾಡಿದ್ರಲ್ಲ. ಇದು ಯಾವ ನ್ಯಾಯ? ಸ್ವಾಮಿ ಈಗ ಅವುನು ಮಲಗಿರಾನು ನನ್ನ ಮಗನೋ ಪುಂಡುಗಾರನೋ ಅನ್ನದಾ ಅವುನ್ನ ತಟ್ಟಿ ಏಳಿಸಿಬುಟ್ಟು ತಂದು ನಿಮ್ಮುಂದೆ ನಿಲ್ಲುಸ್ತುನ್ತಿ ನೋಡಿ ಅವುನ್ನು ಕೊಲೆ ಮಾಡಿ ನನ್ನು ಕೊಲೆ ಮಾಡಿ ಅಂತ ಅವುನ್ನ ಏಳಿಸ್ಕಂಬಂದು ಗಂಡುನ ಮುಂದ್ಕೆ ನಿಲ್ಲುಸ್ತಾಳೆ. ನೋಡ್ತನೆ ದಿಟ್ಟಿಸಿ ಮಗಾ ! ಯವ್ವೇ ಅವುನಾತ್ಮ ಯಂಗಾತು? ಈಗ ನಾನೆತ್ತಿ ಮಗುನ್ನ ನನ್ನೆಡ್ತಿಗೆ ಪುಂಡುಗಾರನ ಮಾಡಿಬುಟ್ನಲ್ಲ ಇದು ಕರ್ಮ. ಈ ನಿದಾನ ಅನ್ನ ಅಕ್ಸರ ನನ್ನತ್ರ ಇಲ್ದೆ ಹೋಗಿದ್ರೇ .ಹೆಡ್ತಿ ಕೊಲೆ. ಮಗುನು ಕೊಲೆ, ಮನೆ ಮಸಾಣ ಆಗದು. ನಿದಾನ ಅಲ್ನ ಅಕ್ಸಾರ ಚಾಕಿನ ಮ್ಯಾಲೆ ಇದ್ದುದ್ಕೆ ನನ್ನೆಡ್ತಿ ಬಾಳಿದ್ಲು ಮಗನು ಬಾಳಿದೆ. ಅರಿದೆ ತಪ್ಪು ಮಾಡಿ ಬುಟ್ಟಿ ಮಡಿದೆ. ನಿದಾನ ಅನ್ನದು ನನ್ನಲ್ಲಿ ಇರುನಿಲ್ಲ. ಚಾಕಿನ ಮ್ಯಾಲೆ ಇರವತ್ಗೆ ನೀನು ಬಾಳಿದೆ ನಾನೂ ಬಾಳಿದೆ. ಈಗ ನೀನು ನನ್ನ ಕಾಲು ಮುಟ್ಟಿ ಪೂಜೆ ಮಾಡಬ್ಯಾಡಾ. ನಾನೇ ನಿನ್ನ ಕಾಲು ಮುಟ್ಟಿ ಪೂಜೆ ಮಾಡಿ ಸೇವೆ ಮಾಡ್ತಿನಿ. ಕಾಲುಮುಟ್ಟಿ ಸೆರಣು ಮಾಡ್ತನೆ. ಈಗ ಈಸುವಾರ ಉಳಿತಾ? ಯಾರಿಂದ ಉಳೀತು. 'ನಿಧಾನ'!

# ದೇವತಾ ಸ್ತುತಿ

ಅಯ್ಯ ಎದ್ದು ನಾನು ನೆನುದೇನು .

ಎದ್ದು ನಾನು ನೆನುದೇನು ಸಿದ್ದುರಾ ಶಿವ ಸೆರಣೇರಾ

ರುದ್ದುರಾಕ್ಷಿ ಕಂತೇ ಹಿಡೀದಾವರಾ॥

ಉಯ್ಯಲೆಯಲ್ಲಿರೋ ರಂಗ ಉಯ್ಯಲೆಯಲ್ಲಿರೋ

ಏಳು ಸರೀ ರಂಗ ಉಯ್ಯಲೆಯಲ್ಲಿರೋ ॥ಎ॥

ಎದ್ದು ನಾನು ನೆನುದೇನು, ಸಿದ್ದುರಾಶಿವ್ ಸೆರುಣೇರಾ

ರುದ್ದುರಾಕ್ಷಿ ಕಂತೇ ಹಿಡೀದಾವರಾ ॥ಎ॥

ರುದ್ದುರಾಕ್ಷಿ ಕಂತೇ ಹಿಡಿಯೋ ದೇವ್ ಮಾನ್ಯವರಾ

ಶಿವನೆ ಎದ್ದೊಂದು ಗಳಿಗೆ ನೆನಾದೇನೂ ॥ಎ॥

ರುದ್ದುರಾಕ್ಷಿ ಕಂತೇ ಹಿಡಿಯೋ ದೇವ್ ಮಾನ್ಯವರಾ

ಶಿವುನೆ ಎದ್ದೊಂದು ಗಳಿಗೆ ನೆನಾದೇನೂ ॥ಎ॥

ಇವತ್ತ ಸನಿವಾರ ಸನಿವಾರ ದೇವ್ ಮಾನ್ಯವರ ಸೆರಣೆ ಹೇಳುತ್ತಾ ಇದ್ದೀನಿ

ಸ್ವಾಮಿ ಸನಿದೇವರಿಗೆ ಸನಿವಾರ ಬುದುವಾರ

ಸ್ವಾಮಿ ಸನಿದೇವಪ್ಪಗೆ ಸನಿವಾರ ಬುದುವಾರ

ಎಲ್ಲ ದೇವ್ರಿಗೆ ನಮುಸ್ಕಾರಾ ॥ಎ॥

ಸನಿವಾರ ಆದು ಮೇಲೆ ಸನಿದೇವ್ರಗೆ ಬುದುವಾರ

ಸ್ವಾಮಿ ಕೊರಳೀಗೆ ತುಳಿಸೀನಾರಾ ॥ಎ॥

ತುಪ್ಪಾದ ದೀಪಾ ನಿಮಿಗೇ ಸನಿದೇವಾ

ತುಪ್ಪಾದ ದೀಪಾ ನಿಮಗೇ ಸನಿದೇವಾ

ನಿಮ್ಮ ದೀಪಾದ ಬೆಳಕು ನಮೀಗಲ್ಲಾ ॥ಎ॥

ತುಪ್ಪಾದ ದೀಪಾ ನಿಮಿಗೆ ಸನಿದೇವಾ

ನಿಮ್ಮ ದೀಪಾದ ಬೆಳಕು ನಮೀಗಲ್ಲಾ ॥ಎ॥

ಸನಿದೇವಾ .ಯಡಿಗೆ ಹಣ್ಣಿನು ದೇವಾ ನೀವ್ ಗಡಿಗೆ ತುಪ್ಪುದುದೇವಾ

ನಿಮಿಗೆ ಯಡಿಯಾರ ಮೇಲೆ ನಮಿಸಪ್ಪಾ ॥ಎ॥

ಅಮ್ಮ ತಾಳದ ಮರುದಡಿಯ ಮ್ಯಾಳಾದ ಮನಿಕಟ್ಟಿ

ಮ್ಯಾಳಾದ ಗತಿಗೆ ಕುಣಿಯಾವರೇ ॥ಎ॥

ತಾಳಾದ ಮರುದಡಿಯ ಮ್ಯಾಳಾದ ಮನಿಕಟ್ಟಿ

ಮ್ಯಾಳಾದ ಗತಿಗೆ ಕುಣೀಯವಳೇ ॥ಎ॥
ಮ್ಯಾಳಾದ ಗತಿಗೇ ಕುಣಿಯೋ ಶ್ಯಾರದೇ ದೇವಿ
ಮ್ಯಾಳಾದ ಗತಿಗೇ ಕುಣಿಯೋ ಶ್ಯಾರದೇ ದೇವಿ
ನನ್ನ ನ್ಯಾಲಿಗೇ ತೊಡರಾ ಬಿಡೀಸವ್ವಾ ॥ಎ॥
ಮ್ಯಾಳಾದ ಗತೀ ಕುಣಿಯೋ ಶ್ಯಾರದೇ ದೇವಿ
ನನ್ನ ನ್ಯಾಲಿಗೇ ಮತೀಯ ಕೊಡಾ ಬಲ್ಲೀ ॥ಎ॥
ಎಂಟು ಗಂಟೆ ಮ್ಯಾಲೀನ ದಂಟಿನಲ್ಲಿ ಮನಿಕಟ್ಟೀ
ಗಂಟೀಯ ಗತೀಗೆ ಕುಣಿಯಾವರೇ ॥ಎ॥
ಎಂಟು ಗಂಟೆ ಮ್ಯಾಲೀನ ದಂಟಿನಲ್ಲಿ ಮನಿ ಕಟ್ಟಿ
ಗಂಟೀಯ ಗತೀಗೆ ಕುಣಿಯಾವರೇ ॥ಎ॥
ಗಂಟೀಯ ಗತಿಗೇ ಕುಣಿಯೋ ಶಾರ್ದೇದೇವೀ
ನನ್ನ ಗಂಟಲಾ ತೊಡಾರ ಬಿಡಿಸವ್ವಾ ॥ಎ॥
ಗಂಡೀಯ ಗತಿಗೇ ಕುಣಿಯೇ ಶಾರ್ದೇದೇವೀ
ನನ್ನ ಗಂಟಲಾ ತೋಡರಾ ಬಿಡಿಸವ್ವಾ ॥ಎ॥
ಅವ್ವಾ ನಿನ್ನೊಂದು ಗಳಿಗೇ ನೆನೆದೇನು ॥ಎ॥
ರಾಯನಾ ರಂಗಯ್ಯ ದೇವಾ ಎನ್ನಿ
ದೇವನಾ ಮನಿಗಾರ ರಾಜಾ ಎನ್ನಿ ॥ಪ॥
ಗಂಡೀಗೆ ಗತಿಗೆ ಕುಣಿಯೋ ಶಾರ್ದೋ ದೇವೀ
ನನ್ನ ಗಂಟಾಲ ತೊಡರಾ ಬಿಡಾಸವ್ವಾ ॥ರಾ॥
ತಾಳಾದ ಮರುದಡಿಯ ಮ್ಯಾಳಾದ ಮನಿಕಟ್ಟಿ
ಅವ್ವ ಮ್ಯಾಳಾದ ಗತಿಗೆ ಕುಣೀಯೋಳೇ ॥ರಾ॥
ಮ್ಯಾಳಾದ ಗತಿಗೆ ಕುಣಿಯೋ ಶಾರ್ದೋದೇವೀ
ನನ್ನ ನ್ಯಾಲೀಗೆ ಮತಿಯಾ ಕೋಡು ಬಲ್ಲೀ ॥ರಾ॥
ನ್ಯಾಲಿಗೇ ಮತಿಯ ಕೊಡುಬಲ್ ಶಾರ್ದೋದೇವೀ
ತಾಯಿ ನಿನ್ನೊಂದು ಗಳಿಗೇ ನೆನಾದೇನೂ ॥ರಾ॥
ತಾಳು ತಂಬೂರಿ ಹಿಡಿದು..
ತಾಳಾ ತಂಬೂರಿ ಹಿಡಿದು ಭಕ್ತರಾ ನೆನುದೇನೂ
ಬಗುವಂತೂನ ನಾವು ನೆನುದೇವೂ ॥ರಾ॥
ತಾಳಾ ತಂಬೂರಿ ಹಿಡಿದು ಮಸ್ತಾರ ನೆನುದೇವು

ಶಿವುನೇ ಬೂಮಿತಾಯೀಯ ನೆನುದೇನೂ ॥ರಾ॥

ನಾವೆದ್ದು ಸ್ವಾಮಿ ಭೂಮಿ ತಾಯಿ ನೆನುದಾರೇ

ನಮ್ಮ ಬಡುತಾನವೆಲ್ಲು ಬಯೂಲಿಲ್ಲಾ ॥ರಾ॥

ಎಲ್ಲಮ್ಮಾ ದೇವ್ರಿಗೇ ಮಂಗಳಾರ ಸುಕ್ಕುದ್ವಾರ

ಜಗುದಾ ಎಲ್ಲಮ್ಗೆ ಮಂಗುಳಾರ ಸುಕ್ಕುರಾರಾ

ಎಲ್ಲಾ ದೇವಿರುಗೂ ನಮಸ್ಕಾರಾ ॥ರಾ॥

ಮಂಗುಳಾರ ಆಡುಮೇಲೆ ಎಲ್ಲಮ್ಗೆ ಸುಕ್ಕದಾರ

ತಾಯೀ ಮಂಡೀಗೆ ಮಲ್ಲಿ ಹೂವ್ನಾರ ॥ರಾ॥

ಇವತ್ತ ಸನಿವಾರ ಸ್ವಾಮಿ ಸನಿದೇವ ನಿನ್ನ ಪಾದುಕ್ ಸೆರಣಪ್ಪಾ ಒಂಚತ್ತು

ಗ್ರಾಹಗೊಳೊಡಯಾ – ರಾವು ಕೇತುಗಳೊಡಯ ನಿಮ್ಮ ಪಾದುಕ್ಕೆಲ್ಲ ಸೆರಣಪ್ಪಾ

ಮಂಗಾಳವೋ ಮಂಗಾಳವೇ

ಸ್ವಾಮಿ ಸನಿದೇವ್ರಿಗೆ ಮಂಗಾಳವೋ ॥ಪ॥

ಸ್ವಾಮಿ ಸನಿದೇವ್ರಿಗೋ ಮಂಗಾಳವೋ

ರಾವೂ ಕೇತೂಗಳಿಗೆ ಮಂಗಾಳವೋ

ಮಂಗಾಳವೋ ಮಂಗಾಳವೋ ರಾವೂ ಕೇತುಗಳಿಗೇ ಮಂಗಾಳವೋ ॥ಮಂ॥

ರಾವೂ ಕೇತೂಗಳಿಗೆ ಮಂಗಾಳವೋ

ಮಂಗಾಳವೋ ಮಂಗಾಳವೋ

ನವಗ್ರಾಹಗಳಿಗೆ ಮಂಗಾಳಾವೋ

ಮಂಗಾಳಾವೋ ಮಂಗಾಳಾವೋ ನವಗ್ರಾಹಗಳಿಗೇ ಮಂಗಾಳಾವೋ ॥ಮಂ॥

ನವಗ್ರಾಹಗಳಿಗೆ ಮಂಗಾಳವೋ

ಮಂಗಾಳವೋ ಮಂಗಳಾವೋ ನಮ್ಮ ಮೂಡುಗೀರಿ ತಿಮ್ಮವ್ಗೆ ಮಂಗಾಳವೋ ॥ಮಂ॥

ಮೂಡ್ಲುಗೀರಿ ತಿಮ್ಮವ್ಗೆ ಮಂಗಾಳವೋ

ನಮ್ಮ ಅಣ್ಣೀ ಸ್ವಾಮೀಗೆ ಮಂಗಳವೋ

ಮಂಗಾಳವೋ ಮಂಗಾಳವೋ ನಮ್ಮ ಆಣ್ಣೀ ಗೋವಿಂದುಗೆ ಮಂಗಾಳವೋ ॥ಮಂ॥

ಅಣ್ಣಯ್ಯ ಗೋವಿಂದುಗೇ ಮಂಗಾಳವೋ

ಸ್ವಾಮಿ ಅಂಜನಾ ದೇವೀರಿಗೆ ಮಂಗಾಳವೋ

ಮಂಗಳಾವೋ ಮಂಗಾಳವೋ ದೇವಿರಿಗೇ ಮಂಗಳವೋ ॥ಮ॥

ಮಂಜುನಾಥ್ ಸ್ವಾಮೀಗೆ ಮಂಗಾಳವೋ

ನನ್ನ ಅಣ್ಣಪ್ಪು ದೇವೀರಿಗೆ ಮಂಗಾಳವೋ

ಮಂಗಾಳವೋ ಮಂಗಾಳವೋ

ನನ್ನ ಅಣ್ಣಪ್ಪ ಸ್ವಾಮಿಗೇ ಮಂಗಾಳವೋ ॥ಮ॥

ಯಂಕ್ವೇಸುವುರುಗೆ ಮಂಗಾಳವೋ

ನಮ್ಮ ಗೊಮ್ವೇಸುವುರುಗೇ ಮಂಗಾಳವೋ

ಮಂಗಾಳವೋ ಮಂಗಾಳವೋ

ನಮ್ಮ ಗೊಮ್ವೇಸುವುರುಗೇ ಮಂಗಾಳವೋ ॥ಮಂ॥

ಗೊಮ್ವೇಸುಪುರುಗೇ ಮಂಗಳವೋ

ನಮ್ಮ ನಂಜುಂಡೇಸ್ಪುರುಗೇ ಮಂಗಳವೋ

ಮಂಗಳವೋ ಮಂಗಳವೋ

ನಮ್ಮ ನಂಜುಂಡೇಸ್ಪುರುಗೇ ಮಂಗಳವೋ ॥ಮಂ॥

ನಂಜುಂಡೇಸ್ಪುರುಗೇ ಮಂಗಳವೋ

ಚಾಮುಂಡಿ ದೇವೀಗೆ ಮಂಗಳವೋ

ಮಂಗಳವೋ ಮಂಗಳವೋ

ನಮ್ಮ ಚಾಮುಂಡಿ ದೇವೀಗೇ ಮಂಗಳಾವೋ ॥ಮಂ॥

ಯಂಕ್ವೇಸುಪುರುಗೇ ಮಂಗಾಳವೋ

ನಮ್ಮ ಗೊಮ್ವೇಸುಪುರುಗೇ ಮಂಗಾಳವೋ

ಮಂಗಾಳವೋ ಮಂಗಾಳವೋ

ನಮ್ಮ ಗೊಮ್ವೇಸುಪುರುಗೇ ಮಂಗಾಳವೋ ॥ಮ॥

ಸ್ವಾಮಿ ಬಗುವಂತುನೇ ಮಂಗಾಳವೋ

ತಾಯಿ ಭೂಮಿದೇವೀಗೆ ಮಂಗಾಳವೋ

ಮಂಗಾಳವೋ ಮಂಗಾಳವೋ

ತಾಯಿ ಭೂಮಿ ದೇವೀಗೆ ಮಂಗಾಳವೋ ॥ಮಂ॥

ಭೂಮಿ ತಾಯೀಗೆ ಮಂಗಾಳವೋ

ನಮ್ಮ ಸರುಸ್ವತಿ ತಾಯೀಗೆ ಮಂಗಾಳವೋ

ಮಂಗಾಳವೋ ಮಂಗಾಳವೋ

ನಮ್ಮ ಸರುಸ್ವತಿ ತಾಯಿಗೇ ಮಂಗಾಳವೋ ॥ಮಂ॥

ಶಾರ್ದೇ ದೇವೀಗೇ ಮಂಗಾಳವೋ

ಆದೂ ಲಕ್ಷ್ಮೀಗೇ ಮಂಗಾಳವೋ

ಮಂಗಾಳವೋ ಮಂಗಾಳವೋ

ಆದೂ ಲಕ್ಷ್ಮೀಗೆ ಮಂಗಾಳವೋ ॥ಮಂ॥

ಜಗುದಾ ಎಲ್ಲಮ್ಮೆಗ ಮಂಗಾಳವೋ

ಆದುಶಕ್ತಿ ಎಲ್ಲಮ್ಮೆಗ ಮಂಗಾಳವೋ

ಮಂಗಾಳವೋ ಮಂಗಾಳವೋ

ಆದು ಶಕ್ತಿ ಎಲ್ಲಮ್ಮೆಗ ಮಂಗಾಳವೋ ॥ಮಂ॥

ಸಕ್ತಿ ಸರಣುರುಗೆಲ್ಲ ಮಂಗಾಳವೋ

ಇವುರ ದುನಿಯಾ ದೇವುರಿಗೇ ಮಂಗಾಳವೋ

ಮಂಗಾಳವೋ ಮಂಗಾಳವೋ

ಇವುರ ದುನಿಯಾ ದೇವುರಿಗೇ ಮಂಗಾಳವೋ ॥ಮಂ॥

ಎಲ್ಲ ದೇವಿರ್ಗೆಲ್ಲ ಮಂಗಾಳ ಸಕ್ತಿ ಸರಣುರುಗೆಲ್ಲ ಮಂಗಾಳ ಸ್ವಾಮೀ . ಬೆಟ್ಟುದ್ ಮಲ್ಲೇಸ್ಪುರಾ, ನಂಜುಂಡೇಸ್ಪರಾ, ಚಾಮುಂಡೇಸ್ಪುರಿ, ಗೊಮ್ಮೇಸ್ಪುರಾ ..

ಯೇಕ್ವೇಸ್ಪುರಾ ಮಾದೇಸ್ಪುರಾ .ನಿಮ್ಮ ಪಾದಕ್ಕೆಲ್ಲ ಸೆರುಣಾಪ್ಪ .

ಬೆಟ್ಟುದ್ ರಂಗುಸ್ವಾಮೀ .ಬೆಟ್ಟದ್ ರಂಗುಸಾಮಿ .ಗುಡ್ಡುದ್ ರಂಗುಸಾಮಿ

ಅರ್ದೂರ್ ರಂಗುಸಾಮಿ .ಬರ್ತೂರು ರಂಗುಸಾಮೀ .ಯಣ್ಣೇವಳೇ ರಂಗುಸಾಮೀ

ಸಕ್ರೆಪಟ್ಣುದು ಸಗುನಿ ರಂಗುಸ್ವಾಮಿ ಸಿರೀ ರಂಗುಪಟ್ಣುದು

ಸಿರೀ ರಂಗುಸ್ವಾಮೀ ಗವೀ ರಂಗುಸ್ವಾಮಿ ನಿನ್ನು ಪಾದುಕೆಲ್ಲ ಸೆರಣಪ್ಪ

ಸೆರಣೋ .ಸನಿದೇವಾ .ಒಂಬತ್ತು ನವಗ್ರಹಳಿರಾ .ರಾವು ಕೇತುಗಳೇ

ನಿಮ್ಮ ಪಾದುಕೆಲ್ಲ ಸೆರಣಪ್ಪ ಸೆರಣು ಆದಿ ಲಕ್ಷುದೇವಿ

ಬಾಗ್ಯೇವು ಲಕ್ಷ್ಮಿದೇವಿ ನಿನ್ನ ಪಾದುಕ್ಕೆ ಸೆರಣಾಪ್ಪ ಮೂಡ್ಲುಗಿರಿ ತಿಮ್ಮಪ್ಪ

ಮುವತ್ತು ಗಾವೂದೊಡೆಯ ಮೂಡ್ಲುಗಿರೀ ತಿಮ್ಮಪ್ಪಾ ..ಮೂವತ್ತು

ಗಾವುದೊಡೆಯ ನಿನ್ನ ಪಾದುಕ್ಕೆ ಸೆರಣಪ್ಪಾ ಅಣ್ಣಯ್ಯ ಗೋವಿಂದಾ

ನಿಮ್ಮ ಪಾದುಕೆಲ್ಲ ಸೆರಣಪ್ಪ ಮೂಡ್ಲು ಬಾಗ್ಲು ದೇವು ಆಂಜುನೇಯ ನಿನಿಗೆ

ಸೆರಣಪ್ಪ ಆದು ಲಕುಸುಮ ದೇವಿ ಸರಸ್ಪತಿ ತಾಯಿ

ಆತೀ ಕೋಲ್ಲು ಮತೀ ಕೊಳ್ಳು ತಾಯಿ ನಿನ್ನ ಪಾದ್ಕುಕೆಲ್ಲ ಸೆರಣವ್ವಾ

ಸರಸ್ವತಿ ಶಾರದೆ ದೇವಿನ ನಿನ್ನ ಪಾದುಕ್ಕೆ ಸೆರಣಮ್ಮ ಬೆಟ್ಟುದು ರಂಗುಸಾಮಿ

ಹರದೂರು ರಂಗುಸಾಮಿ ನಿನಗೆ ನಿನ್ನ ಪಾದುಕ್ಕೆ ಸೆರಣಪ್ಪಾ .

ಸ್ವಾಮಿ ಹರದೂರು ರಂಗ್ನ ಪಾದ ಏನು ಮಾಡೋದು

ಏಳು ಗುಡ್ಡಾದ ನಡಾವಲ್ಲೀ ॥ಎ॥

ಏಳು ಗುಡ್ಡಾದ ನಡುವೇ ರಂಗಾಸ್ವಾಮೀ

ಸಾನ ಮಾಡಿ ತಲಿಯಾ ವದಾರವರೇ ॥ಎ॥

ಸ್ವಾಮಿ ಹೊಳಿಗೇ ಹೋಗುವಾಕ ಹೊಂಬಾಳೆ ಜಲ್ಲೆಂತು

ಹೊಳಿಗೋಗಿ ಗುಡಿಗೇ ಬರುವಾಗಾ ॥ಎ॥

ಹೊಳಿಗೋಗಿ ಗುಡಿಗೇ ಬರುವಾಗ್ ರಂಗೊಸ್ವಾಮೀ

ಸ್ವಾಮಿ ಹೊಂಬಾಳೆ ಚಲ್ಲೀ ಹೋಳೇದಾವೋ ॥ಎ॥

ಹೊಳಿಗೋಗಿ ಗುಡಿಗೇ ಬರುವಾಗ್ ರಂಗೂಸ್ವಾಮೀ

ನಿನ್ನ ಹೊಂಬಾಳೆ ಚಲ್ಲಿ ಹೋಳೇದಾವೋ ॥ಎ॥

ಸ್ವಾಮಿ ದೂಪುದೋರು ಬಂದು ನಿನ್ ತೋಪಿನಲ್ಲೀ ನಿಂತವರೇ

ದೂಪುದೋರು ಬಂದೂ ನಿನ್ ತೋಪಿನಲ್ಲೀ ನಿಂತವರೇ

ಏಟೊತ್ತು ನಿನಾ ಒಲಾಸೋದೂ ॥ಎ॥

ಏಟೊತ್ತು ನಿಮ್ಮಾ ಒಲಿಸೋದ್ ರಂಗಾಸ್ವಾಮೀ

ನನಿಗೆ ಮುರುದು ಮೂರ್ವಾತಾ ಹೇಳಾ ಬನ್ನಿ ॥ಎ॥

ಏರಿ ಮ್ಯಾಲ್ ನಿಂತುಗಂಡು ಯಾರಾರ್ ನೋಡ್ತೀಯೋ ದೇವಾ

ದೂರ ಹೋಗೈವು ನಿನಾ ವಕ್ಕಾಲೂ ॥ಎ॥

ಏರಿಮಾಲ್ ನಿಂತುಗಂಡು ಯಾರಾರ್ ನೋಡ್ತೀಯೊ ದೇವಾ

ಸ್ವಾಮಿ ದೂರಾ ಹೋಗ್ಯವು ನಿನ್ನೊಕ್ಕಾಲೂ ॥ಎ॥

ದೂರ ಹೋಗ್ಯವರೇ ನಿನ್ನೊಕ್ಲು ಮಲ್ಲೇಸಣ್ಣಾ

ನಿಮ್ಮ ಪೂಜಿಗೊಂಬಾಳೆ ತರಾವಕ್ಕೊ ॥ಎ॥

ಗದ್ದೀಗೆ ಮೇಲಿಂದ ಎದ್ದು ಬನ್ನಿ ರಂಗುಸ್ವಾಮೀ

ಮಲ್ಲೇಸಪ್ಪ ಮೊಗ್ಗು ತಂದಾವು ಮಡೀ ಬನ್ನೀ ॥ಎ॥

ಗದ್ದೀಗೇ ಮ್ಯಾಗ್ಳಿಂದಾ ಎದ್ದು ಬಲ್ಲೀ ರಂಗುಸ್ವಾಮಿ

ಮಲ್ಲೇಸಪ್ಪ ಮೊಗ್ಗು ತಂದವ್ರೇ ಮಡೀ ಬಲ್ಲೀ ॥ಎ॥

ಮಲ್ಲೇಸಪ್ಪರಾ .ಅವರೂರು ನಿಮದಲ್ವ ಅವರೊಕ್ಕಾಲು ನಿಮದಲ್ವಾ

ಅವರಿಡೋ ಯಾಡೇ ನಿಮಾದಲ್ಲವಾ ॥ಎ॥

ಮಲ್ಲೇಸಣ್ಣಾರ ವಕ್ಕಾಲು ನಿಮದಲ್ವ ಊರು ನಿಮದಲ್ವಾ

ಮಕ್ಕಾಲಗೇರಿ ಯಡೇ ನಿಮ್ಮದೂ ॥ಎ॥

ಅವರ ವಕ್ಕಾಲಗೇರಿ ಯಡೆ ನಿಮ್ದು ರಂಗುಸ್ವಾಮೀ

ಮಲ್ಲೇಸಣ್ಣ ಲೆಕ್ಕು ಬಿದ್ದಾರೆ ಗೆಲ್ಲಾ ಬನ್ನೀ ॥ಎ॥

ಮಲ್ಲೇಸಣ್ಣಾ ಲೆಕ್ಕಾ ಬಿದ್ದಾದೇ ಗೆಲ್ಲಾ ಬಲ್ಲೀ ॥ಎ॥

ಯಾರೋ ರಂಗುದು ಸ್ವಾಮಿ ಮಕುವೆಲ್ಲಿ ಸಮ
ನಿನ್ನ ನೋಡೋಕ್ ಬಂದಾರು ನೆಗುತಾರ ರಂಗುದುಸ್ವಾಮಿ
ಮಲ್ಲೇಸಪ್ನ ಕಾಯ್‌ಗಡುಬು ಮ್ಯಾಲೇ ಕಲೀಯಾಗೀ ॥ಎ॥
ನೋಡೋಕ್ ಬಂದಾರು ನೆಗುತಾರ ರಂಗುದುಸ್ವಾಮಿ
ಮಲ್ಲೇಸಣ್ನ ಕಾಯ್ಗಡುಬ ಮ್ಯಾಲೇ ಕಲೀಯಾಗಿ ॥ಎ॥
ಕಾಯ್ಗಡುಬ ಮ್ಯಾಲೇ ಕಲಿಯಾಗ್ ರಂಗುದುಸ್ವಾಮಿ
ನಿನಿಗೆ ಉಸುಲಾಕಿದ್ ಮ್ಯಾಲೆ ಕಲೀಯಾಗೂ ॥ಎ॥
ಸ್ವಾಮಿ ಕಣ್ಣಾ ಬುಡುಬ್ಯಾಡಿ ನಿಮ್ ಕಣ್ಣುಬ್ಬ ಬುಡಾಬ್ಯಾಡೀ
ರಂಗುಸ್ವಾಮಿ ಕಣ್ಣೀನೆಲ್ಲವರೇ ಗುರಿಯೀಡೂ ॥ಉ॥
ಕಣ್ಣೀನಲ್ಲಾವರೇ ದುರುಗೀದ್ ರಂಗುದ್‌ಸಾಮೀ
ನಿಮ್ಮ ಕಣ್ಣ ನಮ್ಮೇಲೆ ಬುಡಾಬೇಡೀ ॥ಎ॥
ಕಣ್ಣೀನಲ್ಲಿವರೇ ದುರುಗೀದ್ ರಂಗೂಸ್ವಾಮೀ
ನಿಮ್ಮ ಕಣ್ಣಾ ನಮ್ಮೇಲ್ ಬುಡಾಬೇಡೀ ॥ಎ॥
ದೇವಾ ಸುತುಲಾ ಮುತ್ತುಲು ಗಾಳೀ ಉದ್ದಕ್ಕೆ ತುಂಬಿಕಂಡು
ರಂಗುಸ್ವಾಮೀಗೋತ್ತೀಗುಟ್ಟಚಾಗಿ ಕುಣೀತಾವರೇ ॥ಎ॥
ರಚ್ಚು ಎಚ್ಚಾಗೀ ಕುಣೀತಾರ್ ರಂಗುಸ್ವಾಮಿ
ಗಾಳಿ ಹೊಂಟಾರೆ ಅಯ್ಯಾ ನೋಡೂ ॥ಉ॥
ರಚ್ಚು ಎಚ್ಚಾಗೀ ಕುಣಿವಾಗ್ ರಂಗೂಸ್ವಾಮಿ
ಆಗಾ ಗಾಳಿ ಹೊಂಟವಲ್ಲೊ ಅಯ್ಯಾ ನೋಡೂ ॥ಎ॥
ಆ ಗಾಳೀ ಗಂಟಾಕೀ ನೀರು ಮಟ್ಟೆಯ ಕಟ್ಟಿ
ಸ್ವಾಮಿ ಸೂಲದಾ ಮರವ ತೆರೇ ಮಾಡಿ ॥
ಸೂಲಾದ ಮರವಾ ತೆರಿ ಮಾಡಿ ರಂಗೂಸಾಮಿ
ಗಾಳೀ ಮೆಟ್ಟೀ ಹುಲಿಯಾ ಹೊಡೀತವರೇ ॥ಎ॥
ದೇವಾ ಅರಸೂಣ ಬರುಕಂಡು ತುಂಬಿ ಕಂಡು
ಸ್ವಾಮಿ ವರುಸಾದ ಮಕ್ಳಳಾ ಎತ್ತೀಗಂಡೂ ॥ಎ॥
ವರುಸಾದ ಮಕ್ಕಳಾ ಎತ್ತೀಗಂಡ್ ರಂಗುಸ್ವಾಮಿ
ನಿನ್ನ ಪರುಪಾದಾ ಜಾತ್ರೀಗ್ ಬಂದಾವರಲ್ಲಾ ॥ಎ॥
ನಿನ್ನಾ ಪರಸು ಜಾತುರುಗೇ ಬಂದು ನಿಂತವರಪ್ಪಾ
ನಿನ್ನ ಪರುಸೇ ಬಂದುವರೇ ನೋಡಾಬಲ್ಲೀ ॥ಎ॥

ಮರಿಯಾ ಕುರಿಯಾ ಕಡಿಸಿ ರಗುತಾ  ನೊಡಾತವರೇ

ರಗುತಾದ ಕೋಡಿ ಹರಾದದೇ ॥ಎ॥

ರಗುತಾದ ಕೋಡಿ ಹರಸೋ ರಂಗೂಸ್ವಾಮೀ

ನಿಮ್ಮ ಪರುಸೇ ಬಂದಾದ್ ನೋಡಾಬನ್ನೀ ॥ಎ॥

ಮಲ್ಲೇಸಪ್ಪಾ ತುಪ್ಪುದು ದೀಪಾ ಹಚ್ಚಿದಾವೇ

ಅವುರ ಅಚ್ಚಿದಂತಾ ದೀಪಾ ನಿನೀಗಪ್ಪಾ

ದೀಪಾದ ಬೆಳಕೂ ನಮಿಗಪ್ಪಾ ॥ಎ॥

ಮಲ್ಲೇಸಣ್ಣ ಅಚ್ಚಿದಂತಾ ದೀಪಾ ನಿನಗೇ ರಂಗುದ ಸ್ವಾಮಿ

ನಿನ್ನಾ ದೀಪಾದ ಬೆಳಕೂ ನಮ್ಮೀಗೆಲ್ಲಾ ॥ಎ॥

ಮಲ್ಲೇ ಸಣ್ಣವರು ಹಣ್ಣು ತುಪ್ಪುದು ಯಾಕೇ ಇಟ್ಟವರೇ..

ಅವುರು ಇಟ್ಟಂತಾ ಯಾಡೇ ನಿಮಿಗಪ್ಪಾ

ನಿನಿಗೆ ಯಡಿಯಾದು ಮೇಲೇ ನಮಿಗಪ್ಪಾ ॥ಎ॥

ಹಣ್ಣು ತುಪ್ಪುದೆಡೆ ನಿನಿಗಪ್ಪಾ

ನಿನಿಗೆ ಯಡಿಯಾದು ಮೇಲೇ ನಮೀಗಪ್ಪಾ ॥ಎ॥

ಸ್ವಾಮಿ ರಂಗುಸ್ವಾಮೀ ಗೋವಿಂದೂ ಅಂದ್ರು ಮೂಡ್ಲುಗಿರಿ ತಿಮ್ಮಪ್ಪ  ತಿರುಪತಿ ವೆಂಕಟ್ರಮಣ ಸ್ವಾಮೀ ಸ್ವಾಮೀ ಆಂಜನೇಯ..ರಂಗ ಅಂದ್ರು ರಾಮ ಅಂದ್ರು ನೀನೇ ಕೃಷ್ಣ ಅಂದ್ರು ನೀನೇ ಮೂಡ್ಲುಗಿರಿ ತಿಮ್ಮಪ್ಪ ಅಂದ್ರು ನೀನೇ ರಂಗುಸ್ವಾಮೀ .ಗೋವಿಂದಾ ಅಂದ್ರು ವೈಕುಂಟವಾಸ ಅಂದ್ರು ನೀನೇ ಮೂಡ್ಲುಗಿರಿ ತಿಮ್ಮಪ್ಪ ಅಂದ್ರು ನೀನೇ ನಾನಾವತಾರ ಕೃಷ್ಣಪರುಮಾತ್ಮಾ ಕೃಷ್ಣಪರುಮಾತ್ಮನ ಅವತಾರಾ ಗೋವಿಂದ ಅಂದ್ರು ಅವರೇ ನಾರಾಯಣ ಅಂದ್ರು ಅವರೇ..ರಂಗ ಅಂದ್ರು ಅವರೇ ರಾಮ ಅಂದ್ರೂ ಅವರೇ ನಾನಾವತಾರುದ್ ಕೃಷ್ಣ ಪರುಮಾತ್ಮ ನಿನ್ನ ಮಾಯಾ ನಿನ್ನ ಮಯಿದು ಆರುತವರಿಲ್ಲ ಗೋವಿಂದ ಭೂಮಂಡುಲುವೆಲ್ಲ ನಿಂದಲ್ಲೋ ಗೋವಿಂದಾ ಗೋವಿಂದಾ ದೇವಿ ದೇವ ಮಾನ್ಯರು ಸಕ್ತಿ ಸೆರಣರಿಗೆಲ್ಲ ಸೆರಣಪ್ಪ ಸೆರಣೇ .

# ಹೊನ್ನಾಲದೇವಿ ಕತೆ

ಸೋ ಎನ್ನೋ ಆಲೂರು ಸುಯ್ಯೋ

ಬಂದು! ಸೋವನ್ನೋ ಬೇಲೂರು ಸುಯ್ಯೋ

ಆ ಮದಿಗಿರಿ ಮಲ್ಲೇಗೌಡ್ಗೆ । ಸುಯ್ಯೋ

ಏಳೆಕ್ರೆ ಗದ್ದೆ ಇರುವೋದು।

ಆ ಏಳೆಕ್ರೆ ಗದ್ದೀಗೆ ।

ಒಂದು ನೀರೇ ಇಲ್ಲವಲ್ಲೇ।

ಆ ಸಪ್ಪಣ ಸರ್ ರಾತ್ರಿನಲ್ಲಿ

ಒಳ್ಳೆ ಆಲುದುಂಬುರಾತುರಲ್ಲಿ

ಅಲುದುಂಬೋರಾತುರಲ್ಲಿ

ಅವ್ನು ಮದುಗಿರಿ ಮಲ್ಲೇಗೌಡ

ಅವ್ನು ಮದುಗಿರಿ ಮಲ್ಲೇಗೌಡ

ಅವ್ನು ಮನಿಗೀರೋ ಕಾಲುದಲ್ಲಿ

ಅವ್ನು ಮನಿಗೀರೋ ಕಾಲುದಲ್ಲಿ

ಒಂದು ಸಪುಣ ಬೀಳೂತಾರೇ

ಆ ಆ ಬೀಳೋಬಾರೊದಂದು

ಒಂದು ಕನಸು ಬೀಳೂತಾದೇ

ಒಳ್ಳೆ ಕಲ್ಲು ನೀರ್ ಕರುಣೋ ಹೊತ್ನಲ್ಲಿ

ಒಂದು ಕನಸು ಬೀಳೂತಾದೇ

ಆ ಆ ಬೀಳೋ ಬಾರೋದೊಂದು

ಒಂದು ಕನಸು ಬೀಳೋತಾದೇ

ಅಯ್ಯ ಕೇಳ ಮದಿಗಿರಿ ಮಲ್ಲೇಗೌಡ

ನೀನು ಕೆರಿಯ ಕಟ್ಟುಸುಬೇಕ

ನೀನು ಕೆರಿಯಾನ ಕಟ್ಟುಸಿದರುಎ

ಒಂದು ಜಲುವೇಯ ಬರುರಾದೇ

ಅವುನು ಮದಿಗಿರಿ ಮಲ್ಲೇಗೌಡಾಗ

ಒಂದು ಕನುಸು ಬೀಳೂತಾದೇ

ಆ ಆ ಕನಸು ಬಿದ್ದಾಗಾ

ಅವುನು ಆತುರಿಸಿ ಎದ್ದುನಲ್ಲ

ಅವುನು ಆತುರಿಸಿ ಎದ್ದು

ಅವುನು ಮಡದೀಯ ಎಳಿಸ್ಯಾನ

ಆ ಆ ಏಳಾಲೇ ನನು ಮಡದಿ

ನನಗೆ ಕನಸು ಬೀಳುತಾದೇ

ನನಿಗೆ ಬೀಳೂಬಾರದೊಂದು

ಒಂದು ಸಪುನ ಬಿದ್ದಿತಲ್ಲೇ

ನಾನು ಕೆರಿಯಾನ ಕಟ್ಟುಸುಬೇಕು

ಒಡ್ಡಾರ್ ಎಲ್ಲಿ ಇರುವೋರು ಕಾಣೆ

ಆ ಒಡ್ಡಾ ಎಲ್ಲಿ ಇರುವೋರು ಕಾಣೆ

ನನಿಗೆ ಕನಸು ಬೀಳೋತಲ್ಲ

ಅವ್ವ ಒಡ್ಡಾರು ನಂಬೋರು

ಅವುರು ಗಣುಸೀಯ ಹೋಬುಳಲ್ಲಿ

ಆ ಆ ಗಣುಸೀಯ ಹೋಬಳಲ್ಲಿ

ಒಂದು ಒಡ್ಡಾರು ಇರುವಾರು

ಆ ಆ ಆರುಸಾವ್ರ ಮಣ್ಣೊಡ್ರು

ಆ ಆ ಮೂರುಸಾವ್ರ ಕಲ್ಲೊಡ್ರು

ಅವುರು ಗಣಸೀಯ ಹೋಬುಳಲ್ಲಿ

ಅವುರು ಒಡ್ಡಾರು ಇರುವಾರು

ಅವುರು ಮದಿಗಿರಿ ಮಲ್ಲೇಗೌಡ

ಅವುನು ಗಣುಸೀಯ ಹೋಬುಳೀಗೆ

ಅವುನು ಗಣುಸೀಯ ಹೋಬುಳೀಗೆ

ಒಂದು ವಾಲೇಯ ಬರುದಾನು

ಅವ್ವು ಮದಿಗಿರಿ ಮಲ್ಲೇಗೌಡ

ಒಂದು ವಾಲೇಯ ನೆಂಬೋದು

ಅದು ಗಣುಸೀಯ ಹೋಬುಳೀಗೆ

ವಾಲೇ ತಲುಪುತಾದೇ

ವಾಲೇ ನೆಂಬಾದು

ಗಣುಸೀಯ ತಲುಪ್ಯಾದೇ

ಆ ಆ ಗಣುಸೀಯ ಹೋಬುಳೀಯ

ವಡ್ಡಾರ ಗುಂಪೀಗೆ ತಲುಪ್ಯಾದೆ

ಆ ಆ ಬುದ್ದಿವಂತ ವಡ್ಡಾಳಿ

ವಡ್ಡಾಳಿ ತಿಂಬಾಯಿ

ಅವ್ನು ವಡ್ಡಾಳಿ ತಿಂಬಾಯಿ

ಅವುಂಗೆ ವಡ್ಡಾಗೆ ತಲುಪ್ಯಾದೆ

ಆಗ ಬುದ್ದಿವಂತ ವಡ್ಡಾಳಿ

ವಾಲೆ ಓದಿ ನೋಡಿಕಂತ

ವಾಲೆ ನೋಡಿಕಂತ

ಅವ್ನು ಗುಂಪಾನೇ ಕಿಳುಸ್ತಾನೆ

ಅವ್ನು ಗುಂಪಾನೆ ಕೀಳ್ಸಿಗ್ಯಂಡು

ಅವ್ನು ಮದಿಗಿರಿಗೆ ಬರುತಾನೆ

ಆ ಆ ಮದಿಗಿರಿಗೆ ಬರುತಾರೆ

ಮದಿಗಿರಿಗೆ ಮಲ್ಲೇಗೌಡ

ಅವುರು ಮದಿಗಿರಿ ಮಲ್ಲೇಗೌಡ್ನ

ಗದ್ದೆತಾಕೆ ಬಂದುರಲ್ಲ

ಅವ್ರು ಮದಿಗಿರಿ ಮಲ್ಲೇಗೌಡ್ನ

ಗದ್ದೇ ತಾಕೆ ಬೀಡಾನ ಬಿಟ್ಬುರಲ್ಲ

ಆ ಆ ಈಡಾನ ಬಿಟ್ರಲ್ಲ

ಅವ್ರು ಮಲ್ಲೇಗೌಡ್ನ ಕರ್ಸುತಾರೆ

ಅಯ್ಯ ಏನಯ್ಯ ಮಲ್ಲೇಗೌಡ

ನಮು ಕರಿಸಿದು ಕಾರಣವೇನು

ಯಲಾ ಕೇಳಲಾ ವಡ್ಡಾಳಿ

ನೀವು ಕೆರಿಯಾ ಕಟ್ಟುಬೇಕು

ನೀವು ಕೆರಿಯಾ ಕಟ್ಟುಬೇಕು

ಅದುಕೆ ಬೇಲಿಯೇನು ಆಗುತಾದೇ

ನಾನು ಎರಡ್ಪೂರ ಕೊಡುತೀನಿ

ನೀವು ಕೆರಿಯನ್ನ ವಡ್ಡಾಳಿ

ನಿಮ್ಮ ಎರಡ್ಪೂರ ನೆಂಬೋದು

ನಮ್ಮ ಸಿಂದೀಯ ಬೆಲಿಯಿಲ್ಲ

ನಾನು ಮೂರ್ರ್ವೊರ ಕೊಡುತೀನಿ

ನೀನು ಕೆರೆ ಕಟ್ಟು ವಡ್ಡಾಳಿ

ನಮ್ಮ ಹೆಣ್ಣಾಳಿನ ಬೆಲಿಯಿಲ್ಲ

ನಾನು ನಾಕ್ವೊರ ನೆಂಬೂದು

ನಮ್ಮ ನಾಕು ಗುದುಲೀಗೆ ಬೆಲಿ ಇಲ್ಲ

ನಾನು ಐದ್ವೊರ ಕೊಡುತೀನಿ

ನೀನು ಕೆರೆ ಕಟ್ಟು ವಡ್ಡಾಳಿ

ನಿಮ್ಮ ಐದ್ವೊರ ನೆಂಬುದು

ನಮ್ಮ ಗುದುಲೀಗೆ ಬೆಲೆಯಿಲ್ಲ

ನಾನು ಆರ್ವೋರ ಕೊಡುತೀನಿ

ನೀನು ಕೆರೆಕಟ್ಟು ವಡ್ಡಾಳಿ

ನಿನ್ನ ಆರ್ವೋರ ನೆಂಬೂದು

ನಮ್ಮ ಆರ್ವೊಗೆ ಸಮುನಿಲ್ಲ

ನಾನು ಎಂಟ್ವೊರ ಕೊಡುತೀನಿ

ನೀನು ಕೆರೆ ಕಟ್ವೋ ವಡ್ಡಾಳಿ

ನಿಮ್ಮ ಎಂಟ್ವೊರ ನೆಂಬುದು

ನನ್ನ ಯಜಮನಿಕೆಗೆ ಬೆಲೆಯಿಲ್ಲ

ಅವ್ನು ಹನ್ನೆರಡು ವರುಕೆಲ್ಲ

ಒಂದು ಒಪ್ಪಂದ ಕೊಟ್ಟುನಲ್ಲ

ಆಗ ಬುದಿವಂತ ವಡ್ಡಾಳಿ

ಅವ್ನು  ಮದಿಗಿರಿ ಮಲ್ಲೇಗೌಡ್ಗೆ

ಅಯ್ಯ ಕೇಳಯ್ಯ ಮದಿಗಿರಿ ಮಲ್ಲೇಗೌಡ

ಬೆಳಿಗೀಗೆ  ಒಂಬತ್ತು ಗಂಟೆಗೆ

ಅಯ್ಯ ಒಂಬತ್ತು ಗಂಟಿಗೆ

ನಾವು ಗುದ್ಲಿ ಪೂಜೆ ಮಾಡುಬೇಕು

ಅಯ್ಯ ಗುದ್ಲಿ ಪೂಜೆ ಮಾಡುಬೇಕು

ಮುಂದೋಗು ಕೊಂಬೀನ ತಗುರಾಗಬೇಕು

ಮಂದೋಗು ಕೊಂಬೀನ ತಗುರಾಗಬೇಕು

ಒಂದು ಕೂಗೋ ಹಂಜಾಗುಬೇಕು

ಅಯ್ಯ ಕೊಂಬೀನ ತಗುರು

ರಗುತದ ಬಲಿಯ ಕೊಡುಬೇಕು

ಅಯ್ಯ ಕೇಳೋ ಮಲ್ಲೇಗೌಡ

ಒಂದು ಮೂಟೆ ಕಾಯಗಬೇಕು

ಒಂದು ಮೂಟೆ ಕಾಯಗಬೇಕು

ಗೊನೆ ಬಾಳೆ ಹಣ್ಣಾಗಬೇಕು

ನಾವು ಬೆಳಿಗೆ ಒಂಬತ್ತು ಗಂಟೀಗೆ

ನಾವು ರಕುತಾದ ಬಲಿಯ ಕೊಡುಬೇಕು

ಅವ್ವ ರಕುತಾದ ಬಲಿಯ ಕೊಟ್ಟು

ಗುದ್ಲಿ ಪೂಜೆ ಮಾಡಬೇಕು

ಅಪ್ಪ ಮದಿಗಿರಿ ಮಲ್ಲೇಗೌಡ

ಸಾಮಾನ ಜೋಡ್ಸಿ ಕೊಟ್ಟುನಲ್ಲ

ಅವ್ರು ಒಂಬತ್ತು ಗಂಟೀಗೆ

ವಡ್ರು ಗುದ್ಲಿ ಪೂಜೆ ಮಾಡುತಾರೆ

ಅವುರು ಗುದ್ಲಿ ಪೂಜೆ ಮಾಡಿ

ಅವುರು ಕೆಲಸ ಹಿಡಿಯುತಾರೆ

ಕೆಸಾವ ಹಿಡುದು

ಅವ್ರು ಕೆರಿಯ ಕಟ್ಟುತಾರೆ

ಅವ್ರು ಹನ್ನೆರಡು ಆಳುದ್ದ

ಅವ್ರು ಕೆರಿಯ ಕಟ್ಟುತಾರೇ

ಕೆರೆಯಾನ ಕಟಿದು ಮ್ಯಾಲೆ

ಒಂದು ಜಲುವೇನೆ ಬರುನಿಲ್ಲ

ಆರು ಸಾವ್ರ ಮಣ್ಣೊಡ್ರಿಗೆ

ಮೂರು ಸಾವು ಕಲ್ಲೊಡ್ರಿಗೆ

ವಡ್ಡಾರಿಗೆಲ್ಲ ಅವ್ರಿಗೆ

ಲಾಸು ಅಯಿತಾ ಬಂತು

ಲಾಸು ಆಯಿತಾ ಬಂದಾಗ

ವಡ್ಡಾರ ದೇವೂರು

ಅವ್ವು ಕೊಲ್ಲೇ ಪುರುದಮ್ಮ

ಅವ್ರು ವಡ್ಡಾರ ದೇವರಲ್ಲ
ಮೈಸುಂಬಿ ಏನಂತ ಹೇಳೂತಾಳೇ
ಕೇಳಯ್ಯ ಮದಿಗಿರಿ ಮಲ್ಲೇಗ್ಭಡ
ನೀನು ಕೆರೆಯಾ ಕಟ್ಟಿಸ್ದ್ಯಲ್ಲೊ
ನೀನು ಕೆರಿಯಾನ ಕಟ್ಟಿಸ್ದ್ಯಲ್ಲೊ
ನಿನ್ನ ಮನಿಯೇ ಹಾಳಾಗುತಾದೆ
ನಿನ್ನ ಅವುತಿಯ ಕೇಳುತಾದೆ
ನೀನು ಏನು ಹೇಳ್ತಿ ಮಲ್ಲೇಗೌಡ
ನನ್ನ ಅವುತೀಯ ಕೇಳಿದುರೆ
ಮನಿ ಯಜಮಾನಿಕೆ ಮಾಡುರ್‍ರ್ಯಾರು
ಕೇಳಾಲ ಮಲ್ಲೇಗೌಡ
ನಿನ್ನ ಹೆಡ್ತೀಯ ಕೇಳುತಾದೆ
ನನ್ನ ಹೆಂಡ್ರು ಸತ್ತ್ತೋನನುತಾರೇ
ಕೇಳಯ್ಯ ಮಲ್ಲೇಗೌಡ
ನಿನ್ನ ಹಿರೇ ಮಗುನ ಕೇಳುತಾದೇ
ನನ್ನ ಹಿರೇ ಮಗುನ ಕೇಳಿದುರೆ
ಗಟ್ಟುಕ್ಕೋಗೋರಿಲ್ಲಾ
ಆಗ ಕೇಳೋ ಮಲ್ಲೇಗೌಡ
ನಿನ್ನ ನಡುಕ್ಲ ಮಗುನ ಕೇಳುತಾದೆ
ನನ್ನ ನಡುಕ್ಲ ಮಗುನ ಕೇಳಿದುರೆ
ಆರಂಬ ಮಾಡೊರೆ ಇಲ್ಲುವಲ್ಲ
ಕೇಳಾಲ ಮಲ್ಲೇಗೌಡ ನಿನ್ನ
ಕಿರಿ ಮಗುನ ಕೇಳುತಾದೇ
ನನ್ನ ಕಿರಿ ಮಗುನ ಕೇಳಿದುರೆ
ಇಸುಗೂಲಿಗೆ ಹೋಗರೆ ಇಲುವಲ್ಲೊ
ಕೇಳಲಾ ಮಲ್ಲೇಗೌಡ ನಿನ್ನ
ಮಗುಳ್ನೇಯ ಕೇಳುತಾದೇ
ನನ್ನ ಮಗುಳ ಕೇಳಿದುರೆ
ಕೊಟ್ಟು ಬಾಳ ಹೆಣ್ಣು ಮಗುಳು

ಕೊಟ್ಟು ಬಾಳ ಹೆಣ್ಣು ಮಗಳು
ನಾನೆಂಗೆ ಕೊಡಲವ್ವ
ಕೇಳಾಲ ಮಲ್ಲೇಗೌಡ
ನಿನ್ನ ಮನೀಯೆ ಹಾಳಾಗುತಾದೆ
ನೀನು ಕೆರಿಯಾ ಕಟ್ಟಿಸಿದ್ದಲ್ಲ
ನಿನ್ನ ಮನೀಯೇ ಹಾಳಾಗುತಾದೇ
ನಿನ್ನ ಹಿರಿ ಸ್ವಸೆ ಕೇಳುತಾದೆ
ನೀನು ಏನು ಹೇಳ್ತೀಯೇ ಮಲ್ಲೇಗೌಡ
ನಿನ್ನ ಹಿರಿ ಸ್ವಸಿ ದೊಡ್ಡೋನ್ನಿ
ಕೆರಿ ಕೋಳ ಹೋಗುಬೇಕು
ಆಗ ಜಲುವೆ ಬರುತಾದೇ
ಕೆರಿಯೇ ತುಂಬಾತಾದೇ
ಆಗ ಮದಿಗಿರಿ ಮಲ್ಲೇಗೌಡ
ಆವ್ನು ಯೋಚನೆ ಮಾಡುತಾನೇ
ನನ್ನ ಹಿರಿ ಸ್ವಸಿ ದೊಡ್ಡೋನ್ನಿ
ಅವ್ರು ಕಂಡೋರ ಮಗುಳಲ್ವೆ
ಅವ್ರು ವಾದ್ರೆ ಏನೂ ಅಂದು
ಆಗ ಹಿರಿ ಸ್ವಸಿ ದೊಡ್ಡೋನ್ಗೆ
ಅವ್ರು ಒಪ್ಪಂದ ಕೊಟ್ಟುನಲ್ಲ
ಒಪ್ಪಂದ ಕೊಟ್ಟು ಮ್ಯಾಲೆ
ಅವ್ರು ಮೈದುಂಬಿ ಗುಡಿಯದುಂಬೀ
ಮದಿಗಿರಿ ಮಲ್ಲೇಗೌಡ
ಅವ್ರು ಮನೀಗೇ ಬಂದಾನಲ್ಲ
ಪಟ್ಟೆ  ಮಂಚುದ್ ಮ್ಯಾಲೆ
ಅವ್ರು ಮಕ್ಕಾಡೆ ಮಲಿಗ್ಯವೆನೆ
ಅವ್ರು ಹಿರಿಸೊಸಿ ದೊಡ್ಡೋನ್ಗೆ
ಅವ್ರು ಮಾವ್ನ ಎಣ್ಣಾ ಕೇಳುಸ್ತಾಳೆ
ಮಾವ ಏಳೀರಿ ಮಾವಯ್ಯ
ಊಟಾವ ಮಾಡುಬನ್ನಿ

ಮಾವ ಸಪ್ಪುಗೆ ಮನಿಗಿದಿರಿ

ನಿಮಿಗೆ ಬಂದ ಕಸ್ಟುವೇನು

ನಿಮಿಗೆ ಬಂದ ಕಸ್ಟುವನ್ನು

ಮಾವ ಹೇಳಿರಿ ಮಾವಯ್ಯ

ಅವ್ವಾ ಕೇಳವ್ವ ದೊಡ್ಡೋಗ್ನ

ನಾನು ಊಟಾವ ಮಾಡುವುದಿಲ್ಲ

ನಾನು ಕೆರಿಯಾ ಕಟ್ಟಿಸಿದೆನಲ್ಲೆ

ನನ್ನ ಮನೆಯೇ ಹಾಳಾಗುತಾದೇ

ನಾನು ಹಾಳಾದ ಕೆರೆ ಕಟ್ಟಿಸಿ

ನನ್ನ ಮನಿಯೇ ಹಾಳಾಗುತಾದೇ

ಅವ್ವ ಹಾಳಾದ ಕೆರೇ

ನಮುನಾರ ಬೇಡಲಿಲ್ಲ

ನನ್ನುನಾರ ಕೇಳಿದುರೆ

ನಾನಾವುತಿ ಆಗುತಿದ್ದೆ

ನನ್ನ ಹೆಂಡತಿಯ ಕೇಳಿದುರೆ

ಅವುಳ ಅವುತಿ ಕೊಡುತಿದ್ದೆ

ನನ್ನ ಹಿರೇ ಮಗುನ ಕೇಳಿದುರೆ

ಅವುತೀನಾರ ಕೊಡುವ್ನಲ್ಲೇ

ನನ್ನ ನಡುಕುಲ್ ಮಗುನ್ ಕೇಳಿದುರೆ

ಕೊಡುವ್ನಲ್ಲೆ ನನ್ನಪ್ಪನೇ

ನನ್ನ ಕಿರೇ ಮಗುನ್ನ ಕೇಳಿದುರೆ

ಕಿರೇ ಮಗುನ್ನೆ ಕೊಡುತಿದ್ದೆ

ನನ್ನ ಮಗುಳ್ನೆಯ ಕೇಳಿದುರೆ

ಅವುತಿ ಕೊಡುತಿದ್ದೆ

ಅವ್ವ ಹಾಳಾದ ಕೆರೇ

ಸ್ವಸಿ ನಿನ್ನೇಯ ಬೇಡಿತಲ್ಲೇ

ನಿನ್ನಂನೇಯ ಬೇಡಿತಲ್ಲೆ

ಏನು ಮಾಡುಲೆ ನಾನೊ

ಆಗಾಲೇ ದೊಡ್ಡೋಗ್ನಿ – ಆಮೇಲೆ

ಕಿವಿ–ಕರ್ನದಲ್ಲಿ ಕೇಳುದುಳು

ಎರಡು ಕಣ್ಣನೊವೆ ಮುಚಿಗಂಡ್ಲು

ಕಿವಿನೊವೆ ಮುಚ್ಚಿಗಂಡ್ಲು

ಅವ್ವ ನಡುಮೋನೆ ಒಳುಗೇ

ದರುಣೀಗೆ ಕಂಡೆ ಬಿದುಳಲ್ಲ

ಅವುಳ್ಗೆ ಗಾದುರಿಪ್ಲು ಬಂದೋತು

ಕಣ್ಣು ಕಾಡುಗತ್ಲೆ ಹಿಡುದೇಯ

ಮಾವ ಏಳೀರಿ ಮಾವಯ್ಯ

ನೀವು ಯೋಚ್ನೆ ಮಾಡುಬೇಡಿ

ನಾನು ಸ್ವಾಮವಾರು ದಿವ್ಸ

ಬೆಳಿಗ್ಗೆ ಒಂಬತ್ತು ಗಂಟೀಗೆ

ಬೆಳಿಗ್ಗೆ ಒಂಬತ್ತು ಗಂಟೀಗೆ

ಕೆರೆ ಕೊಳ ಹೋಗುತೀನಿ

ಅಯ್ಯ ಮದಿಗಿರಿ ಮಲ್ಲೇಗೌಡ – ಸುಯ್ಯೋ

ಮದಿಗಿರಿ ಮಲ್ಲೇಗೌಡ

ದಡುಬಡುನೆ ಎದ್ದುನಲ್ಲ

ದಡುಬಡುನೆ ಎದ್ದುನಲ್ಲ

ಅಯ್ಯ ಮೀಸೇಯ ತಿರುವುತಾನೇ

ಮೀಸೇಯ ತಿರುವಿಕಂಡು

ಊಡಾ ಮಾಡುತಾನೇ

ಊಟಾ ಮಾಡಿದುಮ್ಯಲೆ

ಏಳು ದಿವಸ ಕಳುದುಬಂತಲ್ಲ

ಏಳೂ ದಿವುಸುದು ಮ್ಯಾಲೇ

ಅವುಳು ದೊಡ್ಡೋನ್ನಿ ನೆಂಬೋಳು

ಕೇಳೀರಿ ಮಾವಯ್ಯ

ನಮಗೆ ಈವೊತ್ತು ಅವುದೀಯ ಕೊಡುಬೇಕು

ನಮ್ಮ ಬಂದು ಬಳಗ ನೋಡಬೇಕು

ನಮಿಗೆ ಈವೊತ್ತು ಅವುದೀಯ ಕೊಡುಬೇಕು

ನಮ್ಮ ಬಂದು ಬಳಗ ನೋಡಬೇಕು

ನನ್ನ ತಾಯಿ ತಂದೆ ನೋಡುಬೇಕು

ಅಣ್ಣ ತಮ್ಮದೀರ ನೋಡುಬೇಕು

ಮದಿಗಿರಿ ಮಲ್ಲೇಗೌಡ

ಒಂದು ಅವುದೀಯ ಕೊಟ್ಟುನಲ್ಲ

ಬಂದು ಬಳಗ ನೋಡಿ ಕಂಡು

ದೊಡ್ಡನ್ನಿ ನೆಂಬೋಳೂ

ದೊಡ್ಡೋನ್ನಿ ನೆಂಬೋಳೂ

ಸ್ವಾಮುವಾರ ದಿವುಸಾ

ಸ್ವಾಮುವಾರ ದಿವುಸಾ

ಬೆಳಿಗೆ ಆರು ಗಂಟೇಗೆ

ಬೆಳಿಗೆ ಆರೂ ಗಂಟೇಗೆ

ಮನೀಯ ಸೇರೂತಾಳೇ

ಮನೀ ಮಟ ಸೇರಿಕಂಡು

ಮನೀಯ ದೇವೂರ

ಮನೀಯ ದೇವೂರ

ಪೂಜೇಯ ಮಾಡುತಾಳೆ

ಮನಿದೇವರ ಪೂಜೆ ಮಾಡಿಕಂಡು

ಬೆಳಿಗೆ ಆರು ಗಂಟೇ ಆಯ್ತು

ಮನೀಯ ದೇವೂರು

ಲಕ್ಷಮಿ ದೇವೂರು

ಹೊನ್ನಮ್ಮನ ಕಳುಸಾವ

ತಲೆಮ್ಯಾಲೆ ಹೊತುಗಂಡು

ಏಳೂ ವರುಸುದ ಮಗ

ಕಯಲ್ಲಿ ಹಿಡಿಕಂಡು

ಮದಿನಿ ನೆಂಬೋದು

ತಗುರು ಸಾಕಿದ್ಲು

ತಗುರಾ ವಡುಕಂಡು

ಹೊನ್ನ ಕಳುಸಾನ ಹೊತುಗಂಡು

ಹನ್ನೆರಡು ಜಾಪತ್ರೆ

ವಾದ್ಯೋರು ಹೊರ್ಡುತಾರೆ

ನೆಡು ಮುಡಿ ಮ್ಯಾಲೆ

ಹೋಗುತಾಳೆ ಹೊನ್ನಮ್ಮ

ಅಜ್ಜಜ್ಜಿಗೆಲ್ಲಾವ

ಈಡುಗಾಯ ಹಿಡ್ಸಿಗಂಡು

ಕೀಲು ಕುದುರೆ ಮೆರಿವಣಿಗೆ

ನವುಲು ಗೀಜುಗನ ಕಾಳಗ

ಕಲ್ಲಿ ಜಟ್ಟಿ ಮಲ್ಲಿ ಜಟ್ಟಿ

ಜಟ್ಟೀಯ ವಡುಕಂಡು

ಅಜ್ಜಜ್ಜಿಗೆಲ್ಲಾವ

ಇಡುಗಾಯಿ ಹಾಕ್ಸಿಗಂಡು

ದೊಡ್ಡೋನ್ನಿ ನೆಂಬೋಳು

ಬಿರುಸು ಬಾಣ ಐಬೋಗದಿಂದಾವ

ಬಿರುಸು ಬಾಣ ಐಬೋಗಾದಿಂದಾ

ದೊಡ್ಡೋನ್ನಿ ಹೋಗುತಾಳೇ

ಹೋಗುತಾಳೇ ದೊಡ್ಡೊನ್ನಿ

ಅವುಳೀಗೆ ಏಳೋಜಾನ ಅಣುದೀರು

ಏಳೂಜನ ಅಣುದೀರುವೆ

ಅವ್ರು ಕಂಪಿಣೀಯ ದೊರೆಗೋಳು

ಏಳುಜಾನ ಅಣ್ಣುದಿರಿಗೆ

ಅವ್ರು ಹೋಗಿ ಹೇಳುತಾಳೆ

ಕೇಳಿರಣ್ಣ ಅಣುದೀರ

ನಾವು ಸ್ವಾಮುವಾರು ದಿವ್ವಾಸ

ಸ್ವಾಮುವಾರು ದಿವಸ

ನಾವು ಹಬ್ಬಾವ ಮಾಡುತೀವಿ

ನೀವು ಊಟಾಕೆ ಬರುಬೇಕು

ಏಳು ಜಾನ ಅಣುದೀರು

ಅವುರು ಕಂಪಿಣಿ ದೊರೆಗೋಳು

ಏಳು ಕುದುರೆ ಏರಿಕಂಡು

ಅವುರು ಊಟಾಕೆ ಬರುತಾರೇ

ದೊಡ್ಡೊಗ್ನಿ ನೆಂಬೋಳು

ಅವುಳು ಕೆರಿ ಕೋಳ ಹೋಗುತಾಳೆ

ನೆಡು ಮುಡಿ ಮ್ಯಾಲೆ

ಅವ್ವು ಕೆರಿ ಕೋಳ ಹೋಗುತಾಳೆ

ಕೆರೆಯ ಹತುರಾಕೆ ಹೋಗಿ

ಕೆರೆಯ ಪೂಜೆಯ ಮಾಡುತಾಳೇ

ಅವುಳ ಮಗುನಾ ನೋಡಿ

ಗೆಜ್ಜೆ ಕಾಲಾ ಮಗನಾ

ಗೆಜೇ ಕಾಲಾ ಮಗುನ

ಅವುಳು ಕೈಯಲ್ಲಿ ಹಿಡುಕಂಡು

ಹೊನ್ನಾನ ಕಳಸಾವ

ತಲೆ ಮ್ಯಾಲೆ ಹೊತುಕಂಡು

ದೊಡ್ಡೊನ್ನಿ ನೆಂಬೋಳು

ಬಲದಾ ಪಾದ ತೆಗೆದು

ಬಲದಾ ಪಾದಾವ ತೆಗೆದು

ಒಂದು ಮೆಟುಲೀಗೆ ಮಡುಗಿದಳು

ಅಜ್ಜಜ್ಜಿಗೆಲ್ಲಾವ

ನೀರು ಬಂದೇ ಹೋಯಿತಲ್ಲಾ

ಎರಡೆಜ್ಜೆ ತಗುದಾಳು

ಮಂಡೀಗೆ ನೀರೆ ಬಂದು ಹೋಯ್ತಲ್ಲಾ

ಮೂರನೆ ಮೆಟುಲೀಗೆ ಇಳಿದಾಳು

ಅವುಳ ಸೊಂಟಾಕೆ ನೀರೆ ಬಂತು

ನಾಕೆಜ್ಜೆ ಇಳುದಾಳೂ

ಅವುಳ ಮಲಿಕಟ್ಟಿಗೆ ನೀರೆ ಬಂತು

ಆರೆಜ್ಜೆ ತೆಗುದಾಳ

ಬುಜದಲ್ಲಿ ನೀರು ಸೋಕ್ಯಾಡುತಾರೆ

ಎಂಟೆಜ್ಜೆ ಇಳುದಾಳು

ಗದ್ದುದಲ್ಲಿ ನೀರು ಸೋಕ್ಯಾಡುತಾರೆ

ಒಂಬತ್ತೆಜ್ಜೆ ಇಳುದಾಳು
ಅವುಳ ಕುತುಗೀಗ ನೀರು ಬಂತು
ಹತ್ತೆಜ್ಜೆ ಇಳುದಾಳು
ಅವುಳ ನೀರೇ ಮುತಿಕಂತು
ಅಷ್ಟೋ ವತ್ತೀಗೇ
ಅವುಳ ಏಳುಜಾನ ಆಣುದೀರು
ಏಳುಜಾನ ಅಣುದೀರು
ಕಂಪಿಣಿ ದೊರೆಗೋಳು
ತಂಗೇಯ ಮನಿಗೇ
ಹಬ್ಬಾಕೆ ಬರುತಾರೇ
ಕುದುರೇಯ ಏರಿಕಂಡು
ಊಟಕೆ ಬರುತಾರೇ
ಕುದುರೇಯ ಬರುವಾಗ
ಕೆಂದೂಳು ಕೆದರಿ ಬಂತು
ಕೆಂದೂಳು ಕೆದರಿ ಬರುವಾಗ
ದನಿನ ಬಾರೆ ಹುಡುಗಾರು
ಏನ್ರಯ್ಯ ಕಂಪಿಣಿ ದೊರೆಗಳಿರಾ
ಕೆಂದೂಳು ಕೆದರಿ ಹೋಗುತೀರಿ
ಕೇಳಿರಯ್ಯ ಹುಡುಗಾರೇ ನೀವೂ
ಹಬ್ಬಾಕೆ ಹೋಗುತೀವಿ ನಾವೂ
ಕೇಳಿರಯ್ಯ ಕಂಪಿಣಿ ದೊರೆಗೋಳಾ
ನಿಮ್ಮ ತಂಗಿ ದೊಡ್ಡಗ್ನಿ ನೆಂಬೋಳು
ದೊಡ್ಡೊನ್ನಿ ನೆಂಬೋಳು
ನಿಮ್ಮ ಕಯಿಗೆ ಸಿಗುದಿಲ್ಲ
ನಿಮ್ಮ ತಂಗೀ ಮಕಾ
ನಿಮಿಗೆ ಸಿಕ್ಕೋದಿಲ್ಲಾ
ನಿಮ್ಮ ತಂಗಿ ಇಸ್ಟೊತ್ತಿಗೆ
ಕೈರಿ ಕೋಳ ಹೋಗ್ಯವಳೆ
ಅವ್ರು ಏಳು ಜಾನ ದೊರಿಗೋಳು

ಅವ್ರ ತಲೇಯೇ ಕೆಟ್ಟು ಹೋಯ್ತು

ಅವುರು ಏಳು ಕುದುರೀಗೂ

ಏಳು ಏಟಾ ಹೊಡಿತಾರೆ

ನಮ್ಮ ತಂಗಿ ಮಕವ ನೋಡಬೇಕು

ಕೆಂದೂಳು ಕೆದರಿ ಹೊಂಡುತಾರೆ

ಕೆಂದೂಳು ಕೆದರಿ ಬರುತಾರೆ

ಕುದರೆ ದಡುಗ ಕೇಳಿದರು

ಏರಿಯಾ ಮ್ಯಾಲೆ

ಬಂದು ಪರುಸೆ ಸೇರ್ರೋಯ್ತು

ಕೇಳಿರಯ್ಯ ಸಬಿಗೋಲಾ

ನಮ್ಮ ಅಣುದೀರು ಬರುತಾರೆ

ಏಳು ಜಾನ ಅಣುದೀರುಗೂ

ಏಳ ಸಟ್ಟೇ ಹಗ್ಗ ತಂದು

ಅವುರ ಮುಂದಾಕೆ ಬಿಡುಬ್ಯಾಡೀ

ಆಚೇ ಕೋಡಿಯಲ್ಲೇ

ಅವರು ಪಟ್ಟೇ ಹಗ್ಗುದಲ್ಲಿ

ಅವುರ ಮರುಕೇ ಬಿಗಿರಯ್ಯ

ಆಗ ಏರಿ ಮ್ಯಾಗಳ ಸಬೆಯಲ್ಲಿ

ಕಂಪೂಣಿ ದೊರೆಗೋಳ

ಕೆರಿಯೊ ಕೋಡಿ ವಳುಗೆ

ಅವುರ ಮರುಕ ಬಿಗುದಾರು

ದೊಡ್ಡೊಗ್ನಿ ನೆಂಬೋಳು

ಅವುಳು ಕೆರಿ ಕೋಳ ಹೋದುಳಲ್ಲ

ಅವುಳ ತಲಿಯಾ ಮ್ಯಾಲೇ

ನೀರೇ ಒಡ್ಡಾಡುತಾರೇ

ನೀರೂ ಒಡ್ಡಾಡುವಾಗ

ಅವಳ ಗಂಡಾ ಮಾರ್ತಂಡುರಾಯ

ಗಂಡಾ ಮಾರ್ತಂಡುರಾಯ

ಅವ್ನು ಗಟ್ಟಕ್ಕೆ ಹೋಗಿದ್ದ

ಅವುನೋವೆ ಬಂದುನಲ್ಲ

ಮನಿತಾವ ನೋಡುತಾನೆ

ಮದಿಗಿರಿ ಮಲ್ಲೇಗೌಡ

ಅರುಮಾನೇ ಮ್ಯಾಲೆ

ಅರುಮಾನೇ ಮ್ಯಾಲೆ

ಏಳು ಬಂಗಾರುದ ಕಳುಸಾ

ಬಡುಗ್ ಮುಂದಾಗಿ ವ್ಯಾಲ್ಯಾವೆ

ಗಂಡಾ ಮಾರ್ತಂಡುರಾಯಾ

ಬಾಯ್ ಬಾಯ್ ಬಡುಕಂಡು

ಬಾಯ್ ಬಾಯ್ ಬಡುಕಂಡು

ಅವುನು ಕೆರೆತಾಕೆ ಹೋದುನಲ್ಲ

ಅವುಳಾ ಗಂಢಾಗೆ

ಕರೆ ಒಳುಗೆ ಹೇಳುತಾಳೆ

ಕೇಳಪ್ಪ ಗಂಡ ಮಾರ್ತಾಂಡುರಾಯ

ನಾನು ಕೆರೆ ಕೋಳ ಹೋಗುತೀನಿ

ನೀನು ಕೆರಿಯಾ ಕೋಡೀಲಿ

ಈಸ್ಪುರ ದೇವುರಾಗು

ಈಸ್ಪುರ ದೇವುರಾಗಿ

ನೀನು ಪಡುದು ಮೂಡಪ್ಪ

ಕೋಡಿ ಈಸ್ಪುರ ದೇವುರಿಗೆ

ಮೊದಲ ಪೂಜೆ ಆಗುಲಪ್ಪ

ಕಡಿಯಾ ಪೂಜೇ

ನನಿಗೆ ಆಗುಲಪ್ಪ

ಅವಳ ಗಂಡಾ ಮಾರ್ತಂಡುರಾಯ

ಕೆರೆಯ ಕೋಡೀಲಿ ವಡುದು ಮೂಡಿದುನಲ್ಲೆ

# ಮೂಡ್ಲುಗಿರಿ ತಿಮ್ಮಪ್ಪ

ಮೂಡ್ಲುಗಿರಿ ತಿಮ್ಮಪ್ಪಾ ಅಣ್ಣಯ್ಯ  ಗೋವಿಂದಾ ನಿನ್ನ ಬರಣರೆ ಆಡಿಸ್ತಿರೋದು ಯಾರು ಅಂದ್ರೆ ಹನುಮನಹಳ್ಳಿ ಮಲ್ಲೇಸಪ್ನೋರು ಹಾಸನ್ದಲ್ಲಿ ನನ್ನ ಕೂರಿಸ್ಕಂಡು – ಹೊಳೆನರಸೀಪುರದ ತಂಬೂರಿ ಮರಿಯಪ್ಪನವರ ಕರಿಸಿ ಹಾಡುತ್ತಾ ಇದಾರೇ ಸ್ವಾಮಿ ಮೂಡ್ಲುಗಿರಿ ತಿಮ್ಮಪ್ಪ ನಿಮ್ಮ ಚರಣೆ ಹಾಡ್ಯವರು ಹನುಮನಹಳ್ಳಿ ಮಲ್ಲೇಸ್‌ಗೌಡ್ರು ಭಕ್ತಿಯಿಂದಾ. ಶನಿವಾರ ನಿನ್ನ ಚರಣೆ ಎತ್ತಿಸ್ತಾ ಇದ್ದಾರೆ. ದೂಪು ದೀಪ ಮಾಡಿದ್ದಾರೆ. ನಿಮಿಗೆ ಮಂಗಳ ಮಾಡಿದ್ದಾರೆ. ಮೂಡ್ಲಗಿರಿ ತಿಮ್ಮಪ್ಪ  ಅವುರೆಲ್ಲಾರು ತಪ್ಪಿದ್ರು ನೀನು ಅವರ್ನ ಕ್ಷಮೆ ಮಾಡಿ, ಅವರ್ಬಾದ್ ಕಡೆ, ಬಂದ್ ಕಡೆ ಜಯಕಾರ ಮಾಡಿ ಅವುರು ಕುಂತಾವ್ ಕೆಡೆ ಮಾಡು. ನಿಂತಾವ್ ಕೆಡೆ ಮಾಡು ಗೋವಿಂದಾ ಭಕ್ತಿಯಿಂದ ನಿಮ್ಮ ಕರಣೆ ಆಡುಸ್ತಾ ಇದ್ದಾರೆ. ಕುಂತಾವರ ಕೆಡೆ ಮಾಡಿ ನಿಂತಾವ್ ನೆರಳು ಮಾಡಿ ಯಾವ್ ಕಡೆ ಹೋದ್ರು ಜಯಕಾರ ಉಂಟು ಮಾಡಿ ಸ್ರೇಯಸ್ಸು ಉಂಟು ಮಾಡಿ, ನಿನ್ ಭಕ್ತೀಲಿ ನಿನ್ ಕರಣೇ

ಸ್ವಾಮಿ ಮೂಡ್ಲುಗಿರಿ ತಿಮ್ಮಪ್ಪ ಮುತ್ತನೇ ಮಾರುತಬಂದ
ಮೂಡ್ಲುಗಿರಿ ತಿಮ್ಮಪ್ಪ ಮುತ್ತಾ ಮಾರುತ ಬಂದಾ
ಬೇಲೂರ್ ಚನ್ನೀಗಾ ಬೆಲೆತಾರೋ * ತಾನಂದನ್ನಾ ತಾನಂದೇನಾ ತಾನಂದನ್ನ *
ಮೂಡುಗೀರಿ ತಿಮ್ಮಪ್ಪ ಮುತ್ತ ಮಾರುತ ಬಂದಾ
ಬೇಲೂರ ಚನ್ನೀಗಾ ಬೆಲೆತಾರಾ॥
ಬೇಲೂರ್ ಚನ್ನೀಗರಾಯ ಬೆಲೆ ಮಾಡೋ ನನ್ನೊಡೆಯಾ
ನಿಮ್ಮ ಚಲುವೆ ಗಿಡ್ಡಮ್ಮ ಕೊರಳೀಗೀ ॥
ಸ್ವಾಮಿ ತಿಮ್ಮಪುಟ್ಟಿದ್ದು ತಿರುಪಾತಿನಾದುರೇ
ಸ್ವಾಮಿ ನಾಮ ಉಟ್ಟಿದ್ದು ಮೇಲಾಕೋಟೇ ॥
ತಿಮ್ಮಪ್ಪುಟ್ಟಿದ್ದು ತಿರುಪಾತಿನಾದುರೇ
ಸ್ವಾಮಿನಾಮಾ ಉಟ್ಟಿದ್ದು ಮೇಲಾಕೋಟೇ ॥
ಸ್ವಾಮಿ ನಾಮಾ ಉಟ್ಟಿದ್ದು ಮೇಲುಕೋಟೆನಾದುರೇ
ಸ್ವಾಮಿ ಸಂಕು ಉಟ್ಟಿದ್ದು ಶಿವಾಸಮುದ್ರಾ॥

ಆದಿಲುಟ್ಟುವಾಗ ಕಿಸ್ಣ ಪರಮಾತ್ಮ ತಿಮ್ಮಪ್ಪನವತಾರ ಎತ್ತಿ ನೆಲಸಿದ್ದು ತಿರುಪತೀಲಿ ನಾಮಾ ಉಟ್ಟಿದ್ದು ಮೇಲುಕೋಟೆ  ಸ್ವಾಮಿ ಸಂಕುಟ್ಟಿದ್ದು ಶಿವಸಮುದ್ರ

* * ಪ್ರತಿ ಎರಡು ಸಾಲಿನ ಒಂದು ಚರಣದ ಮುಂದೆಯೋ ಇದನ್ನ ಹಿಮ್ಮೇಳದವರು ಪುನರುಚ್ಚಿಸುತ್ತಾರೆ ಅಥವಾ ಹೀಗೆ ಗೆರೆಯಿರುವ ಜಾಗದಲ್ಲಿ ಈ ಸೊಲ್ಲನ್ನು ಉಚ್ಚರಿಸಬೇಕು.

ನಾಮಾ ಉಟ್ಟಿದ್ದು ಮೇಲುಕೋಟೇನಾದರೇ

ಸ್ವಾಮಿ ಸಂಕು ಉಟ್ಟಿದ್ದು ಶಿವಾ ಸಮುದ್ರಾ"

ಸಂಕು ನುಡಿಯೂತಾವೇ ತೆಂಕಾಲ ಬಾಗಕ್ಕೆ

ಸ್ವಾಮಿ ಅರುವತ್ ಗಾವಾದ ಹೊಡೆಯುತಾವೇ ॥

ಆರುವತ್ ಗಾವುದ್ದ ಹೊಡೆಯೊ ತಿಮ್ಮಪ್ಪನವರಿಗೆ

ಮುಕುದ್ ಗಾತ್ರ ಸಂಕೂ ಹುಡಿಕ್ಯಾನೇ ॥

ಅಪ್ಪ ತಿಮ್ಮಪ್ಪನೋರು

ಅಪ್ಪ ತಿಮ್ಮಪ್ಪನೋರು ತೆಪ್ಪಕ್ಕೆ ಹೋಗುವಾಗ

ಸ್ವಾಮಿ ಎಪ್ಪತ್ತು ಪಂಜು ಹಿಡುದವುರೇ ॥

ಎಪ್ಪತ್ತು ಪಂಜು ಹಿಡುದಿಲುವೆ ತಿಮ್ಮಪಾ

ಅಪ್ಪ ತೈಪ್ಪ ಮಾಡೋದೂ ಬ್ಯಾಡ ಕಾಣೋ

ಅಪ್ಪ ಗಿರಿಯತ್ತೂತ ಕುರಿಬೆವರು ಬೆವರೂತ

ಅಜ್ಜೆ ಅಜ್ಜೆಗೆ ಸಂಕ ನುಡಿಸೂತಾ ॥

ತಿಮ್ಮಪ್ಪ ಗಿರಿಯನತ್ತೂತ ಕುರಿಬೆವರು ಬೆವರೂತ

ಅಜ್ಜೆ ಅಜ್ಜೆಗೆ ಸಂಕ ನುಡಿಸೂತಾ ॥

ಅಜ್ಜೆ ಅಜ್ಜೆಗೆ ಸಂಕು ನುಡಿಸೂತ ತಿಮ್ಮಪ್ಪ

ಸ್ವಾಮಿ ಗಿರಿಯಾನತ್ತಾದು ಬೆಳಗಾದೋ॥

ಸ್ವಾಮಿ ಗಿರಿಯಾನತ್ತಾದು ಬೆಳಗಾದೊ ॥

ಸಣ್ಣ ಸಣ್ಣಾ ನಾಮ ಬಣ್ಣ ನೀಲಿಯನಾಮಾ

ತಿಮ್ಮಪ್ನ ಅಣೆಯ ಮ್ಯಾಲೆಲ್ಲಾ ಹರಿನಾಮಾ॥

ಪಟ್ಟೆ ಪಟ್ಟೆಯ ನಾಮಾ ಪಚ್ಚ ನೀಲಿಯ ನಾಮಾ

ತಿಮ್ಮಪ್ನ ಹೊಟೆ ಮ್ಯಾಲೆಲ್ಲಾ ಹರಿನಾಮಾ॥

ಸ್ವಾಮಿ ಹೊಟ್ಟೆ ಮ್ಯಾಲೆಲ್ಲಾ ಹರಿನಾಮಾ ॥

ಸ್ವಾಮಿಗೆ ಮೂರಾಳು ನಾಮಾ ಮೂರಾ ನಾಮಾ ॥

ಮೂರು ನಾಮ ಯಾರಪ್ಪ ತಿರುಪತಿ ವೆಂಕಟರಮಣ ಸ್ವಾಮಿಗೆ, ದಾಸಯ್ಕೋಳಿಗೆ ಮೂರುನಾಮ, ಅಣ್ಣಯ್ಯ ಗೋವಿಂದುಗ ಮೂರು ನಾಮಾ, ರಂಗನಾಥಗೂ ಮೂರು ನಾಮಾ ಮೂರು ನಾಮಾ ಯಾಕೆ ಅನ್ನೋರು ಅರಿವಾಗುಲಿಲ್ವೆ, ಮೂರು ನಾಮ ಯಾರು ಅಂದ್ರೆ ಇಸ್ಲು, ಈಸ್ಪುರ ಬ್ರಹ್ಮ ದೇವರು

(* ಇಸ್ಟು ದೇವರು ಈಸ್ಪುರ ದೇವರು , ಬ್ರಹ ದೇವರು ಒಟ್ಟಾಗಿ ಮೂಡಿಬಂದವುರು. ಈಗ ಈಸ್ಪುರಗೆ ಮೂರು ಈಬತ್ತಿ. ಅದು ಇಸ್ಲು ಈಸ್ಪುರ ಬಹ್ಮ ಬ್ರಹ್ಮ ದೇವರಿಗೆ ಮೂರು ಮಕ ಅವೂರೂ ಮೂರು ಜನ ಇನ್ನು ಮೂರು ನಾಮ ಯಾರು ? ಇಸ್ಲು, ಬ್ರಮ್ಮ, ಈಸ್ಪುರ )

* ಅವರಣದೊಳಗೆ ಕೊಟ್ಟಿರು ಭಾಗವನ್ನು ಗಾಯಕ ತಾನು ಗದ್ಯದಲ್ಲಿ ಹೇಳಿದ್ದರ ಸಾರಂಶವನ್ನು ಮತ್ತೊಮ್ಮೆ ತಿಳಿಕನ್ನಡದಲ್ಲಿ ವಿವರಿಸಿ ಖಾಸಗಿಯಾಗಿ ಹೇಳತ್ತಾನೆ.

ನಡುವೆ ನಾಮಾ ಯಿಸ್ಲು ಬಲಗಡೆ ನಾಮ ಬ್ರಮ್ಮ
ಎಡುಗಡೆ ನಾಮಾ ಕಾಸೂಪೂರಾ ॥
ಸ್ವಾಮಿಗೆ ಮೂರಾರಳು ನಾಮಾ ಮೂರೂ ನಾಮಾ॥
ಮೂರಾಳು ನಾಮಾಮ ಮೂರೂ ನಾಮಾ ॥
ನಾಮಾ ನಾಮಾ ಅಂದ್ರೆ ನೇಮುದಲ್ಲಿ ತಿಮ್ಮಪ್ಪ
ಅವರ ನಾಮಾ ಬಲ್ಲವರು ಯಾರೂ ಇಲ್ಲಾ॥
ತಿಮ್ಮಪ್ನ ಹೆಡ್ತಿ ಚಂದುಕಾತಿ ಮಾಲಕ್ಷ್ಮೀ
ಆಮ್ಮೆಗ್ಗೆ ತಿಲುಕಾದಾ ಬಟ್ಟೂ ಅಣೇ ಮ್ಯಾಲೇ ॥
ತಿಮ್ಮಪ್ನ ಮಡದಿ ಚಂದುಕಾತಿ ಮಾಲಕ್ಷ್ಮೀ
ಆಮ್ಮೆಗ್ಗೆ ತಿಲುಕಾದಾ ಬಟ್ಟೂ ಅಣೇ ಮ್ಯಾಲೇ ॥
ತಿಲುಕಾದ ಬಟ್ಟು ಅಣೇ ಮ್ಯಾಲಿಟ್ಟು ಕಂಡು
ಅಮ್ಮ ಅರಸ್ಯಾವೆ ಎತ್ತಿ ಕಳುಸ್ಯಾವಳೇ ॥
ಅರಿಸ್ಯಾವೇ ಎತ್ತಿ ಕಳಿಸ್ಯವರೇ ॥
ತಿಮ್ಮಪ್ನ ಬರೋವೇಳಿ ಅಣ್ಣಯ್ನ ಬರೋವೇಳಿ
ಗೋವಿಂದ ರಾಯನ ಬರೋವೇಳೀ ॥
ಸ್ವಾಮಿ ಚಲುವರಾಯ್ನ ಬರೋವೇಳಿ ಚನ್ನರಾಯ ಬರೋವೇಳೀ
ಇಲ್ಲಿ ತಿಮ್ಮಪ್ನ ಮೆರಿಸ್ಯಾರೆ ॥
ಹರಿಯೋ ಗಂಗೇವಳಿಗೆ ಮನೆಬಾಳೇದೆಲೆಮ್ಯಾಲೇ
ಸ್ವಾಮೀಗ್ ಹಣ್ಣೂ ತುಪ್ಪಾದ ಎಡಿಯಲ್ಲಾ॥
ಹಣ್ಣೂ ತುಪ್ಪಾದ ಎಡೆಯಾ ಇಟುಗಂಡೂ
ಸ್ವಾಮಿ ಗೋವಿಂದ್ನ ಸೆರಣೆತ್ಯವರಲ್ಲಾ ॥
ಗೋವಿಂದ್ನ ಸೆರಣೆಲ್ಲಿ ತಿಮ್ಮಪ್ನ ಸೆರಣೆಲ್ಲೀ
ಅಲ್ಲಿ ತಿಮ್ಮಪ್ನ ಅರಿಸ್ಯಾವೇ ॥
ಅಲ್ಲಿ ತಿಮ್ಮಪ್ನ ಅರಿಸ್ಯಾವೇ ॥
ಗೋವಿಂದ ಗೋವಿಂದ ಅನ್ನುವಾಗಾ ಜನುವೆಲ್ಲಾ
ಅಣ್ಣ ಬೀಳುತಾವೇ ॥
ಅಲ್ಲೀ ತಿಮ್ಮಪ್ನ ಅರಿಸ್ಯಾವೇ

ಗೋವಿಂದ ಅಂದ್ರೆ, ಗೋವಿಂದ ಅಂದ್ರೆ ಬೂಮಂಡಲಕ್ಕೆ ಅವುರೂ ಸಾಲ ಯಾರು ಕೆಯತ್ತಿ ಕೊಡ್ತಾರೆ...ಯಾರು ಇಸ್ಕಂದು ತಿಂದುಕಂದು ಕದ್ದು ಹೋಯ್ತಾರೆ ಆಗ ಈ ಸರಣೆ ಎತ್ತಾರೆ.

(ಯಂಗ್ ಬತ್ತದೆ. ಈಗಾ ನಾನೂ ಕಳ್ಳಿ ಅನ್ನಾದು ನಿಮ್ಗರಿವಿಲ್ಲ ನಿಮ್ಮತ್ರ ಕೈಯಾತು ನಾನು ದುಡ್ಡು ಕಾಸು ಇಸ್ಕಂಬುಟ್ಟು ನಾನು ಕದ್ದು ತಿರುಗೋದು ಅನ್ನೊಂದು ನಿಮಗೆ ಗೊತ್ತಿಲ್ಲ. ಒಳ್ಳೆ ಜನ ಅಂತ ನೀವ್ ನಂಬ್ಕತೀರಿ. ನಾನು ಈಸ್ಕಂಡು ಕದ್ದೋಗಿ ಬುಡ್ತೀನಿ. ನಿಮ್ಮ ಕೈಗೆ ನಾನು ಸಿಕ್ನಲ್ಲ. ಆಗ ಸಿಕ್ದರಿಗೆ ನೀವೇ ಹೇಳ್ತಿರಿ ಏನಂತ ಹೇಳ್ತಿರಿ. ಈಗಾ ಒಳ್ಳೆ ಜನಾ ಅಂತ ಕೊಟ್ಟೆ ಕೊಡ್ನಿಲ್ಲವಲ್ಲ ಅಂತೀರಿ. ಆಗ ಪಕ್ಕುದ್ ಜನ ಏನಂತಾರೆ "ಅವ್ವಿಗೆ ಕೊಟ್ಟಮ್ಯಾಲೆ ನಿಮಗೆ ಗೋವಿಂದ್ನೆ ಗತಿ ಅಂತಾರೆ ಅಲ್ಲಿ ಸ್ವಾಮಿ ಕೈಯಾತು ಕೊಟ್ಟವರ ಪಾಲಿಗೆ ಇರ್ತರೆ ಅಂದಾಂಗಾತು. ಅಷ್ಟೇಅಲ್ಲ ಮುಂದುಕು ನೀವ್ ಕೇಳಿದ್ರೆ ಜನ ಹೇಳ್ತಾರೆ. 'ಅಕ್ತಾನೆ ನಿನಗೆ ದೋಕ ನಿನಗೆ ಮೂರ್ ನಾಮವೇ ಗತಿ, ಆ ನನ್ ಅಪ್ನೆ ನಿನಗೆ ಗತಿ' ಅಂತಾರೆ ಇದು ಕೊಟ್ಟನಿಗೆ ಹೊರ್ತು ಈಸ್ಕಂಡನಿಗೆ ಅಲ್ಲ ಅಂದ್ರೆ ಕೆಯತ್ತಿ ಕೊಡೋಗೇ ಆ ನನ್ನಪ್ಪ ಅವುರ ಪಾಲಿಗಿರ್ತಾನೆ ಅಂತ )

ಸ್ವಾಮಿ ಮೂಡ್ಲುಗಿರಿ ತಿಮ್ಮಪ್ಪ ಮೂವತ್ತು ಗಾವುದ್ದೊಡೆಯಾ ಯಾರ ದುಡ್ ಯಾರ ಭಕ್ತಿ ಯಾರ ಆತ್ಮ ಯಾಗೈತೆ ಅನ್ನೊಂದ ಪರೀಕ್ಷೆ ಮಾಡಾದುಕ್ಕೆ ಸಂಕು ಜಾಗಟೆ ಇಡ್ಕಂಡು ಬನವಾಸೆ ಬಿಲ್ಲು ಬಾಣ ಇಡ್ಕಂಡು.

ಮೂನಾಮ ಮುದ್ದು ನಾಮುದ್ ಬಡ ಬಡ ದಾಸನಾದ
ಬಗುತಿ ನೋಡುವುದಕೆ ಹೋಗುತಾನೇ ॥
ಬಡಗಾ ದೇಸಾಕೋಗಿ ಸೋಲಿಗರ ಮನಿ ಮುಂದೆ
ಇವುನ ಜಳುಜಳುನೆ ಜಾಗ್ಟೆ ವಡೀತಾನೇ ॥
ಜಳುಜಳುನೆ ಜಾಗ್ಟೆ ವಡೀತಾನೇ ॥
ಜಾಗ್ಟೇ ವಡೀಯುತಾರೆ ಮೂಡ್ಲುಗಿರಿ ತಿಮ್ಮಪ್ಪ
ಬವ್ ಬವುನೆ ಸಂಕಾ ಊದಾತಾರೇ ॥
ಸಂಕಾ ಉದಾತಾರೆ ಕಾಳೆ ಹಿಡಿಯುತಾರೆ
ಅಲ್ಲಲ್ಲಿ ಶಿವುನೆ ನಿಂತೇ ಅವುನೇ ॥

ಪರೀಕ್ಷೆ ಮಾಡುದುರೆ, ಭಕ್ತಿ ನೋಡುದುಕೆ ಅವರಿಕ್ತಿ ನೋಡುದಾಕೆ ಮೂನಾಮದ ಮುದುಕಿನಾಗಿದ್ದಾರೆ ತಿಮ್ಮಪ್ಪ. ಬಡ ಬಡ ದಾಸನಾಗಿದ್ದಾರೆ. ಮೂರು ನಾಮ ಅಣೇ ಮ್ಯಾಲಿಟ್ಟಿದ್ದಾರೆ. ಜಾಗಟೆ ಕೈಲಿಡ್ಡಿದ್ದಾರೆ. ಸ್ವಾಲಿಗರ ಮನೆ ಮುಂದೆ ಸಂಕು ಜಾಗಟೆ ಸಬುದ ಮಾಡುವಾಗ...

ಸ್ವಾಲಿಗರ ಹೆಣ್ಣುಮಕ್ಳು ಬಿಕ್ಸ ನೀಡಾಕೆ ಬಂದು
ಇವ್ನ ಆಡಿಕೊಂಡು ನಗುತಾರೇ ॥
ಬಿಕ್ಸ ನೀಡಾಕ ಬಂದ ಸ್ವಾಲಿಗರ ಹೆಣ್ಣು ಮಕ್ಳೂ
ಇವನ ಆಡಿಕೊಂಡವರೆ ನಗಾತಾರೇ ॥

ಅಕ್ಕಯ್ಯ...ಅಕ್ಕಯ್ಯ....

ಅಟ್ಟೀಲಿ ನಿಂತವರೆ ರೊಟ್ಟಿ ಆಗಲಾ ಐತೆ

ಜಣ್ಣಾ ಜಣ್ಣಾನೆ ಬಡಿಯುತಾನೇ ॥

ಅಟ್ಟೀಲಿ ನಿಂತವನೆ ರೊಟ್ಟಿ ಅಗಲಾ ಐತೆ

ಅವ್ನನ ಜಣ್ಣಾ ಜಣ್ಣಾನೆ ಬಡಿಯೂತಾನೇ ॥

ಅಕ್ಕಯ್ಯ....ನೋಡಿದ್ರೆ ಮೂಲಂಗಿ ಅಂಗೆ ನನ ಕಣ್ಗೆ ಕಾಣುತಾದೇ

ಬಳೆ ಬವ್‌ಬವುನೆ ಅಲ್ಲೆ ಊದುತಾನೇ ॥

ಮೂಲಂಗಿ ಅಂಗೆ ನನ್ನ ಕಣ್ಗೇಗೆ ಕಾಣುತಾದೇ

ಬವ್ವಾ ಬವ್ವಾನೆ ಊದು ತಾನೇ ॥

ಅಕ್ಕಾ.............ಪಟ್ಟೇ ಪಟ್ಟೇ ಅಂಗೆ ಹೊಟ್ಟೆ ಮ್ಯಾಲೆಲ್ಲಾವ

ಮೂರು ಮೂರು ನಾಮಾ ಬರಾದವನೇ ॥

ಅಕ್ಕ ಮೂರು ಮೂರು ನಾಮ ಬರದವನೇ ॥

ನುಲಿಗೆ ನುಲಿಗೆ ಅಂಗೆ ಚೊಳ್ಳೆ ಅಣ್ಣಿನಂಗೈತೆ

ಬಾಯ್ಲಿ ಕಾರ್ ಕಾರ್ನೆ ಇವ್ನು ಊದುತಾನೇ ॥

ಕಾರ್ ಕಾರ್ನೆ ಇವ್ನು ಊದುತಾನೇ ॥

ಬಕ್ತಿಯಿಂದ ಇವ್ರು ಬಿಕ್ಸೆ ಕೊಟ್ಟಿಲ್ಲ. ಯಿಕ್ತಿಯಿಂದ ಕೊಡ್ನಿಲ್ಲ. ಇವ್ನ ಆಡಿ ಕಂಡು ನಗಾಡಕಾತು. ಸ್ವಾಲಿಗರ ಹೆಣ್ಣು ಮಕ್ಳು. ರೊಟ್ಟಿ ಅಗಲ ಐತೆ. ಅಟ್ಟೀಲಿ ನಿಂತ್ಕಂಡು ಜಣಾಜಣಾನೆ ಬಡೀತಾನೆ ಅಂತಾವ ನ್ಯೆಗಾಡತಾರೆ. ಮೂಲಂಗಿ ಅಂಗೆ ನಮ್ಮ ಕಣ್ಣಿಗೆ ಕಾಣುತ್ತಾದೆ. ಬಾಯಲ್ಲಿಟ್ಗಂದು ಬವ್ ಬವ್ ಅಂತ ಊದ್ತಾನೆ ಅಂತ ನ್ಯೆಗಾಡುತ್ತಾರೆ. ಹೊಟ್ಟೆಮೇಲೆಲ್ಲಾವ ...ಪಟ್ಟಿ ಪಟ್ಟೆಯಂಗೆ ಹೊಟ್ಟೆ ಮ್ಯಾಲೆಲ್ಲಾವ ಮೂರು ನಾಮ ಬರದಾನೆ ಅಂತ ನ್ಯೆಗಾಡುತ್ತಾರೆ. ಮುಂದೆ ಅವುರು ಯೇನಂತೆ ಕ್ಯೆರುತ್ತಾರೆ.....

ದಾಸಯ್ಯ ...ಅಟ್ಟೀಲಿ ನಿಂತ್ಕಂದು ರೊಟ್ಟಿ ಅಗಲಾ ಐತೆ

ನೀನು ಜಣ್ಣಾಜಣ್ಣಾನೆ ಬಡೀತೀಯಾ ॥

ಜಣ್ಣಾ ಜಣ್ಣಾನೆ ಬಡಿಯೋದು ದಾಸಯ್ಯ

ಅದು ಯಂತಾದೀಗ ಹೇಳೋ ನನಿಗೇ ॥

ಅಟ್ಟೀಲಿ ನಿಂತ್ಕಂದು ರೊಟ್ಟಿ ಅಗಲ ಐತೇ..ಜಣ್ಣಾ ಜಣ್ಣಾನೊಡಿತೀಯ...

ದಾಸಯ್ಯ ಅದು ಯಂತಾದು ನಮಿಗೆ ತಿಳಿಹೇಳೂ...

ಕೇಳೇ ಸ್ವಾಲಿಗರೆಣ್ಣೆ ಕೇಳೇಲೇ ಎಲಾ ಬಾಲೇ

ಇದು ನಮ್ಮಾ ಸೀಮೆದು ಜಾಗುಟೆಕಾಣೇ ॥

ಇದು ನಮ್ಮ ಸೀಮೆಯ ಜಾಗುಟೆ ಕಾಣೇ ॥

ದಾಸಯ್ಯ ......ಮೂಲಂಗಿ ಅಂಗೆ ನಮ್ಮ ಕಣ್ಗೆ ಕಾಣುತಾದೇ

ಬಾಯ್ಲಿ ಬವ್ವ ಬವ್ವನೆ ನೀನೂ ಊದುತೀಯಾ ॥

ಬಾಯಿ ಬವ್ವ ಬವ್ವನೆ ನೀನು ಊದುತೀಯಾ ॥

ಬವ್ವ ಬವ್ವಾನೆ ಊದುತೀಯ ದಾಸಯ್ಯ

ಅಯ್ಯ. ಅದು ಯಂತಾದೀಗ ಹೇಳೋ ನಮಿಗೇ ॥

ಕೇಳೇ ಸ್ವಾಲಿಗುರೆಣ್ಣೆ ಕೇಳಾಲಾ ಎಲುಬಾಲೇ

ನೀರಲ್ಲುಟ್ಟೀದು ಸಂಕು ಕಾಣೇ ॥

ಇದು ನೀರಲ್ಲುಟ್ಟೀದಾ ಸಂಕೂ ಕಾಣೇ ॥

ಪಟ್ಟೆ ಪಟ್ಟೇ ಅಂಗೆ ಹೊಟ್ಟೆ ಮ್ಯಾಲೆಲ್ಲಾವ

ಮೂರು ಮೂರು ನಾಮ ಬರಾದಿದ್ದೀಯಾ ॥

ಅಯ್ಯ ಮೂರು ಮೂರು ನಾಮ ಬರದಿದ್ದೀಯಾ ॥

ಯಾಕೋ ದಾಸಯ್ಯ ಮೂರು ನಾಮ ಹರಿನಾಮಾ

ಒಂದು ನಾಮಾ ನಿನಗೆ ಸಾಲುದಿಲುವೇ ॥

ನಿನಗೆ ಬಂದೂ ನಾಮಾ ನಿನಗೆ ಸಾಲುದಿಲುವೇ ॥

ಯಾಕೋ ದಾಸಯ್ಯ ಮೂರು ನಾಮ ನಿನಗೆ...ಒಂದು ನಾಮ ನಿನಗೆ ಸಾಲುದಿಲುವೇ. ಅಮ್ಮಾ ಸ್ವಾಲಿಗರೆಣ್ಣು ಮಕ್ಕೇ...ಬಾಲಕೀರಾ ...ನಾವು ಯಿಸ್ಲು ಈಸ್ಪುರ ಬ್ರಮ್ಮ ದೇವುರು ಒಟ್ಟಿಗೆ ಮೂಡಿ ಬಂದವ್ರು.

ನನಿಗೆ ಮೂರಾಳು ನಾಮಾ ಮೂರು ನಾಮಾ॥

ನನಿಗೆ ಮೂರಾಳು ನಾಮಾ ಮೂರು ನಾಮಾ ॥

ನಡುವೇ ನಾಮಾ ಯಿಸ್ಲು ಬಲಗಡೆ ನಾಮಾ ಬ್ರಮ್ಮ

ನನಿಗೆ ಎಡಗಾಡೆ ನಾಮಾ ಈಸೂಪೂರಾ ॥

ನನಿಗೆ ಮೂರಾಳು ನಾಮಾ ಮೂರಾ ನಾಮಾ ॥

ಎಲ್ಲಾ ಇಚಾರಣೆ ಮಾಡಕೆ ನಿಂತ್ಕಂಡ್ರು. ಹತ್ತಾರು ಮನೆ ಭಕ್ತಿ ನೋಡೋಕೋಗೋ ದಾಸಯ್ನ ಕಟ್ಟಿಲಾದೀಲಿ ನಿಲ್ಸಿ ಇಚಾರಣೆ ಮಾಡಾಕೆ ನಿಂತ್ಕಂಡ್ರು. ಮುಂದುಕ್ ದಾಟಕೆ ಕೊಡ್ನುಲ್ಲ...(ರೊಟ್ಟೀ ಅಗಲೈತೆ ಅಟ್ಟೀಲಿ ನಿಂತ್ಕಂದ್ ಜಣ್ಣಾ ಜಣ್ಣಾನೊಡಿತೀಯ ಅದೆಂತದು? ಅದು ನಮ್ಮ ಸೀಮೆ ಜಾಗಟೆ. ಮೂಲಂಗಿ ಅಂಗೆ ನಮ್ಮ ಕಣ್ಣಿಗೆ ಕಾಣ್ತದೆ ಬಾಯ್ಲಿಟ್ಕಂಡು ಬವ್ ಬವುಸೂದ್ತಿಯ ಅದೆಂತದು? ಅದು ನೀರಲ್ಲುಟ್ಟಿದ್ ಸಂಕು. ಪಟ್ಟೆ ಪಟ್ಟೆಯಂಗೆ ಹೊಟ್ಟೇ ಮ್ಯಾಲೆಲ್ಲಾವ ಮೂರ್ ನಾಮ ಬರ್ಕೊಂಡಿದೀಯ, ನಿನಗೆ ಒಂದು ನಾಮ ಸಾಲುದಿಲುವೆ? ಅಮ್ಮಾ...ನಾವು ಬ್ರಮ್ಮ ಎಡಗಡೆ ನಾಮ ಈಸ್ಪುರ, ನಡುವೆ ನಾಮಾ ಯಿಸ್ಲು ಎಲ್ಲಾನು ಚಕ್ ಮಾಡಿ ಗಂಟ್ಯೆಲ್ಲಿ ನಿಲ್ಸಿ ) ಈಗಾ....

ಬಿಕ್ಸಾವ ನೀಡಿ ಕಳ್ಫಾತವರೇ ॥

ಈಗ ಬಿಕ್ಸಾವ ನೀಡಿ ಕಳ್ಫಾತವರೇ ॥

ಅವರ ಮನೆ ಬುಟ್ಟು ಸ್ವಾಮಿ ಅರೆಜ್ಜೆ ಮುಂದೆ ಹೋಗೀ

ಅಲ್ಲೇನು ಗ್ಯಾನಾ ಮಾಡಾತವರೇ ॥

ಸ್ವಾಮಿ ಅಲ್ಲೇನು ಗ್ಯಾನಾ ಮಾಡಾತವರೇ ॥

ಗಂಟೈಲ್ಲ ಅಲ್ಲೇ ನಿಲ್ಲಿಸ್ಕಂಡಿದ್ರಲ್ಲ... ಆ ಮನೆ ಬುಟ್ಟು ಮುಂದ್ಕೆ ಆರೆಜ್ಜೆ ಹೋಗಿ ಅಲ್ಲೇನು ಗ್ಯಾನಾ ಮಾಡುತ್ತ ಅವರೆ ಅಂದ್ರೆ

(ಭಕ್ತಿ ನೋಡಾಕೆ ಯಿಕ್ತಿ ನೋಡಾಕೆ...ಯಾರ್ ದುಡ ಎಂಗೈತೆ ಅಂತ ನೋಡಾಕೆ ಆಂತ ನಾನು ಬಂದ್ರೆ..ನನ್ನ ನೋಡಿ ನೈನಾಡಿದ್ರು. ಜ್ಯಾಗಟೆ ಯಾವುದು? ಸಂಕು ಯಾವುದು? ಬನವಾಸೆ ಯಾವುದು? ಅನ್ನಾದ ಎಲ್ಲಾನು ಇವು ಇಚಾರಿಸಿ ಅಡಿಕ್ಯಂಡವರೆ. ನನ್ನ ಅವತಾರ ಇವ್ರಿಗೆ ಗೊತ್ತುಲ್ಲ)

ನನ್ನ ಅವತಾರ..ಇವ್ರಿಗೆ ಗೊತ್ತಾಗಬೇಕು ಅಂದ್ರೆ....

ನನ್ನೊಕ್ಲ ಇವ್ರಾ ಮಾಡಾಬೇಕೂ ॥

ಇವ್ರ ನನ್ನೊಕ್ಲ ನಾನಾಉ ಮಾಡಾಬೇಕೂ ॥

ನನ್ನೊಕ್ಲ ಮಾಡಿದ್ರೆ ನನ್ನ ಮುದ್ರಿಕೆಲ್ಲ ಇವ್ರಿಗೆ ಅರಿವಾಗುತ್ತಾದೆ.

(ಇವ್ರನ ನನ್ನೊಕ್ಲ ಮಾಡಿದ್ರೆ ಸಂಕ್ಯಾವ್ದು ? ಜಾಗ್ಟ್ಯಾವ್ದು? ಬನವಾಸ್ಯಾವುದು? ನಾಮ್ಯಾವ್ದು? ಅನ್ನಾದು ಅವ್ರಿಗೆ ಗೊತ್ತಾತದೆ. ಈಗ ಇವುರಿಗೆ ಅರುವಿಲ್ಲ ಈಗ ನನ್ನೊಕ್ಲ ಮಾಡ್ಕ್ಯಾಬೇಕು. ಅನ್ನಾ ದಿಸ್ಟಿ ಬಿದ್ದಮ್ಯಾಲೇ....

ಬಿಕ್ಸ ಕೊಟ್ಟು ಕಳಿಸಿಬುಟ್ಟುವರೆ ಈಗಾ...ನನ್ನೊಕ್ಲ ಮಾಡ್ಕ್ಯಬೇಕು ಅಂತ ತಿರುಗಿ ನಾವೋದ್ರೆ...ಈಗ ಬಿಕ್ಸ ಕೊಟ್ಟು ಕಳಿಸಿದ್ವಿವಲ್ಲಾ....ದಾಸಯ್ಯ ಮತ್ಯಾಕ್ ಬಂದೆ ಅಂತ ಕೇಳ್ತಾರೆ. ಮುಂದೇನು ಮಾಡ್ಬೇಕು)

ಮುಂದೇನ್ ಮಾಡ್ಬೇಕು ಅಂದ್ರೆ...ಈ ಸ್ವಾಲಿಗ್ರ ಹೆಣ್ಣು ಮಕ್ಳು ಕೈಲೇ ನನ್ನೊಳಿಕೆ ಕರಿಯಂಗ್ ಮಾಡಬೇಕು. ಇವ್ರಿಂದಲೇ ನನ್ನೊಳೀಕ್ ಕರಿಸ್ಕ್ಯಂದು...ಬಳೀಕ್ ಕರುದ್ ಮ್ಯಾಲೇ...

ಹೋಗಿ ಜಾಗ್ವೀಗೆ ಜಾಗಾ ಕೇಳಾಬೇಕೂ ॥

ನಾನು ಹೋಗಿ ಜಾಗ್ವೀಗೆ ಜಾಗಾ ಕೇಳಾಬೇಕೂ ॥

ಜಾಗ್ವೀಗೆ ಜಾಗಾ ಕೇಳಿಕ್ಯಂದು ಶಿವಶಿವಾ

ಹೋಗಿ ಎಲ್ಲಾನು ಊರಿ ಕೂರಾಬೇಕೂ ॥

ನಾನು ಎಲ್ಲಾನು ಊರಿ ಕೂರಾಬೇಕು ॥

(ಜಾಗ್ವಿಗೆ ಜಾಗ ಒಂದ್ ಕೊಟ್ರೆ ಸಾಕು. ಊರಿ ಕೂತು ನನ್ನೊಕ್ಲ ಮಾಡ್ಕ್ಯಂಡು ಮುಂದ್ಕೋಗ್ತಿನಿ. ಈಗ ಹಿಂತಿರುಗಿ ಹೋದ್ರೆ.... ಈಗ ಕೊಟ್ ಕಳಿಸಿದ್ವಲ್ಲಾ ಮತ್ಯಾಕ್ ಬಂದೆ ದಾಸಯ್ಯ ಅಂತಾರೆ ಏನು ಮಾಡಾದು?)

ಇವರ ಕೈಲೇ ಬಳೀಕ್ ಕರೀಸ್ಕಾಬೇಕಾದರೆ ಯೇನವತಾರ ಮಾಡುತ್ತಾರೆ. ಮೂಡ್ಲುಗಿರಿ ತಿಮ್ಮಪ್ಪ ಸ್ವಾಲಿಗ್ರ ಹೆಣ್ಣು ಮಕ್ಳು ಕೈಲೇ ಬಳೀಕ ಕರಿಸ್ಕಾಬೇಕಾದ್ರೆ ಯೇನು ಮಾಡುತ್ತಾರೆ....

ನಿಂತಂಗ್ ನಿಂತಂಗೇ ನೋಡು

ನಿಂತಂಗ್ ನಿಂತಂಗೇ ನೋಡೂ

ಬರುಬಾರ್ದಾ ಮಳಿಯೇ ಸ್ವಾಮಿ

ಬಾರುಬಾರ್ದ ಮಳಿಯೇ ಸ್ವಾಮಿ

ಬರುಮಾಡು ತಾವನೆ ಅಲ್ಲಿ

ಬಾರುಮಾಡತವನೇ ಅಲ್ಲಿ

ಮಳೆ ಗಾಳೀ ಯಾಂದುಕೆ

ಮಳೇ ಗಾಳೀ ಅಂದೂರೆ

ಯಂತಾ ಮಳೇ ಗಾಳೀ

ಮರ್ ಮರವೇ ತಿರುಗೂತಾದೆ

ಗಗನಕ್ಕೆ ಹಾರುತಾವೇ

ಮಳೆಗಾಳೀ ಅಂದೂರೇ

ಮುಂಗಾರು ಗುಡುಗೂತಾದೇ

ಮುಂಗಾರು ಗುಡುಗೂತಾದೇ

ಸಿಡ್ಲೆಲ್ಲ ಯರಗೂ ತಾವೇ

ಸಿಡ್ಲೆಲ್ಲ ಯರಗಾತೈತೇ

ಬೂಮೆಲ್ಲ ನಡಗಾತೈತೆ । ತಂದನು ತಂದೇ ನಾನ

ತಂದನು ತಂದೇ ನಾನ

ತಾನೇ ತಂದೇನಾನ.

ಮಳೆಗಾಳಿ ಅಂದ್ರೆ ಬಿರುಗಾಳಿ ! ಅಸ್ಟು ಮಳೆಗಾಳಿ ಬರಮಾಡ್ಕ್ಯಂಡ್ರು. ಸಿಡ್ಲೆರುಗ್ತದೆ ಸ್ವಾಮಿ ದಯದಲ್ಲಿ. ಬೂಮ್ಯೆಲಲ್ಲ ನಡುಗ್ತಾದೆ ! ಅಟ್ಟೀಲಿ ನಿಂತವ್ರೆ ..ಮಳೆಗಾಳೆಇ ಬಡುತುಕ್ಕೆ. ಆ ಸ್ವಾಲಿಗ್ರ ಹೆಣ್ಣು ಮಕ್ಳು ಬಾಗ್ಲು ಮುಚ್ಚಾಕೆ ಬಂದವ್ರು ನೋಡ್ತರೇ...ನೆನಿತಾವ್ನೆ.

ಅಕ್ಕಯ್ಯ ಅಕ್ಕಯ್ಯ ಈ ದಾಸಯ್ಯ ಅಟ್ಟೀಲೇ ನಿಂತವ್ನಲ್ಲಿ ಮಳೆ ಗಾಳೀಲಿ ನೆನಿತಾವ....

ಯಾಕೋ ದಾಸಯ್ಯ ಮಳೆಯಲ್ಲಿ ನೆನಯತೀಯ

ಚಂದುಕ್ ನಮ್ಮನೆಲಿ ಕೂರು ಬಾರೊ ॥

ಯಾಕೋ ದಾಸಪ್ಪ ಮಳೆಯಲ್ಲಿ ನೆಸಿತೀಯಾ

ಬಂದು ನಮ್ಮನೆಲ್ಲಿ ಕೂರಾಬಾರೋ॥

(ಈಗಾ ಯಾರ್ ಕರ್ದಾರು. ಯೇನ್ ಅವುತಾರ ಸ್ವಾಮೀದು)

ನಡಿಕ್ಯಂಡು ಬಳೀಕೆ ಹೋಗಿ

ಸ್ವಾಮೀ ಜಾಗ್ವೀಗೆ ಜಾಗಾ ಕೇಳಾತಾರೇ ॥

ದೇವಾ ಜಾಗ್ವೀಗೆ ಜಾಗಾ ಕೇಳಾತವರೇ

ಸಂಕು ಜಾಗೂಟೆ ಮಡುಗಕ್ಕೆ ಬಾಲೇರಾ

ಒಂದಿಷ್ಟು ಜಾಗಾ ಕೋಡೀರಮ್ಮಾ ॥

ಜಾಗ್ವೇಗೆ ಜಾಗಾ ಕೇಳಾತವರೇ ॥

ಸ್ವಾಮೀ ಜಾಗ್ವೇಗೆ ಜಾಗಾ ಕೇಳಾತವರೇ ॥

ಇಸ್ಲೊಂದು ದೊಡ್ಡ ಮನೆಯಲ್ಲೀ ದಾಸಯ್ಯಾ

ನಿನ್ನ ಜಾಗ್ವೇ ಮಡಗಾಕೆ ಜಾಗಾ ಇಲ್ಲುವೇ ॥

ಸ್ವಾಮಿ ಜಾಗ್ವೀಗೆ ಜಾಗ ಕೇಳಿದ್ರು. ಇಸ್ಟು ದೊಡ್ ಮನೇಲಿ ಜಾಗಟೇಗೆ ಜಾಗ ಇಲ್ವೆ ಇಟ್ಕೋ ಅಂದ್ರೂ ಜಾಗ್ವೀಗೆ ಜಾಗ ಸಕ್ದ್ಯಿಂಗಾತೂ....

ಜಾಗ್ವೇಯ ಮಡಗಾತವರೇ

ಬನವಾಸೆ ಮಡುಗೂತವರೇ

ಬೆತ್ತೂದಾ ಕೋಲಾ ತೆಗೆದು

ಬೆತ್ತೂದು ಕೋಲಾ ತ್ಯೆಗೆದು

ಮನೆ ತುಂಆ ಅಂತಾತವರೆ

ಬಿಲ್ಲು ಬಾಣಾ ಮಡಗಾತವರೇ

ಬಿಲ್ಲು ಬಾಣಾ ಮಡಗಾತವರೇ

ನಾಮದೇವರಾ ಈಡೂತವರೇ

ಹೊತ್ತೀರೋ ಮೂಚ್ಚಳಿಕೇ

ಹೊತ್ತೀರೋ ಮೂಚ್ಚಿಳಿಕೇ

ಮನೆ ತುಂಬಾ ಅಂಡಾತವರೆ

ಕುಂತಲ್ ಕುಂತಂಗೇ ದೇವಾ

ಮನೆ ತುಂಬಾ ಬಳುಕೊಂಡಾ...ತಾನು ತಂದೇನಾನ

ತಂದಲ್ಲ ತಂದೇನಾನ

ತಂದನು ತಂದೇನಾನ

ತಂದನ್ನ ತಾನಾನ

ತಾನು ತಂದೇನಾನಾ

(ಸಂಕು ಜಾಗ್ಟೆ, ಬನವಾಸೆ, ನಾಮದೇವ್ರ, ಬಿಲ್ಲು ಬಾಣ, ಇಸ್ಟು ಗಾತ್ರಾ ಇದ್ದವು ವೋಸ್ಟು ಗಾತ್ರ ಆಗೋದೊ. ಜಾಗ್ಟೆ ಇಸ್ಟಗಲ ಇದ್ದುದ್ ವೋಸ್ಟಗಲ ಆಗೋತು. ಕಣದಗಲ ಆಸ್ವಾಮಿ ಲೀಲೆ  ಆ ಸ್ವಾಮಿ ಮೈಮೆ ಆ ಮುಚ್ಚಿರೋ ಮುದ್ರಿಕೆ ತ್ಯೆಗುದು ಮನೆ ತುಂಬ ಹರಡಿಬುಟ್ಟ ಇವ್ರಿಗೆ ತಿರುಗಾಕೆ ಜಾಗಿಲ್ಲ)

ಅಕ್ಕಯ್ಯ ಅಕ್ಕಯ್ಯ ಹೋಗ್ತಿದ್ದಾಸಯ್ನ ಬಳೀಕ್ ಕರ್ದೊ ಬಳೀಕ್ ಬಂದು ಜಾಗಟೆ ಇಡಾಕೆ ಜಾಗಾ ಕೇಳ್ಕಂಡ ಈ ದಾಸಯ್ಯ...

ಜಾಗ್ವೀಗೆ ಜಾಗಾ ಕೇಳಿಕ್ಯಂಡ ದಾಸಯ್ಯಾ

ಅಕ್ಕ ಎಲ್ಲಾನು ಊರಿ ಕೂತೇ ಅವುನೇ ॥

ಎಲ್ಲಾನು ಊರಿ ಕೂತೇವುನೆ ಅಕ್ಕಯ್ಯ

ಇಲ್ಲೋಡು ಬಾರೇ ದಾಸಪನನ್ನಾ ॥

ಅಕ್ಕ ಇಲ್ಲೋಡು ಬಾಕಿ ದಾಸಪನನ್ನ ॥

(ಅವತ್ತಿಂದಿನ ಜಾಗ್ಟಿಗೆ ಜಾಗ ಕೇಳಿದ್ರು, ಅವುರು ಕೊಟ್ರು, ಇವುರು ಎಲ್ಲಾನು ಊರ್ಕ್ಯಂಡು ಕುಂತ್ರಲ್ಲ...ಇವತ್ತಿಗೂ ಅಂತಾರೆ ನೋಡಿ .."ಅವವುನೇನು ಜಾಗ್ವೀಗೆ ಜಾಗ ಕೊಟ್ರೆ ಎಲ್ಲಾನು ಊರ್ಕ್ಯಂತಾನೆ" ಅನ್ನಾಕುಲವೇ ಅದೇ ಮಾತು ಅವತಿಂದಿನುದು. ಆ ಸ್ವಾಮಿ ಕತೆ )

ಜಾಗ್ವೀಗೆ ಜಾಗಾ ಕೇಳಿಕ್ಯಂಡ ದಾಸಯ್ಯಾ

ಅಕ್ಕ ಎಲ್ಲಾನು ಊರಿ ಕೂತೇ ಅವುನೇ ॥

ಅಕ್ಕ ಇಲ್ಲೋಡು ಬಾರೆ ದಾಸಪ್ಪನನ್ನಾ ॥

ಈಗ ಮತ್ತೇನು ಗ್ಯಾನ ಮಾಡುತ್ತಾರೆ, ಮತ್ತೇನು ಗ್ಯಾನ ಮಾಡುತ್ತಾರೆ. ಮೂಡ್ಲುಗಿರಿವಾಸ. ಜಾಗ್ವೀಗೆ ಜಾಗ ಕೊಟ್ರೆ ಎಲ್ಲಾನು ಊರ್ಕ್ಯಂಡು ಕೂತಿದ್ದೀಯ ಅಂತ ಮುಂದೆದ್ದೋಗು ಅನ್ನುತ್ತಾರೆ. ಮುಂದೆದೋಗು ಅಂದು ಬಿಡುತ್ತಾರೆ.

ಅದ್ಕೆ ಬಿರ್‌ಬಿರುನೆ ಸಂದೆ ಮಾಡಾಬೇಕೂ ॥

ಬಿರುಬಿರುನೆ ಸಂದೆ ಮಾಡಾಬೇಕೂ ॥

ಕಡ್ಲೆ ಸಂದೆ ಮಾಡಬೇಕಾದರೆ ಯೇನ್ ಮಾಡುತ್ತಾರೆ. ಮೂಡ್ಲುಗಿರಿವಾಸ ರಾಮುನಾ ಬಲಗೈಲಿ ಚಕ್ರಬಾಣುವಿತ್ತಲ್ಲ.

ಚಕ್ರಾ ಬಾಣಾ ತೆಗದು ಸೂರನೀಗೆ ಮರೆಮಾಡ್ತಾ

ಜಗುವೆಲ್ಲಾ ಶೀವಾ ಕತ್ತೇಲಾಯಿತೋ ॥

ಶಿವುನೆ ಜಗುವೆಲ್ಲ ಈಗ ಕತ್ತಾಲಾಯಿತೊ ॥

ಕಡ್ಲೆ ಮಾಡ್ಕ್ಯಂಡು ಕೂತ್ಕಂದ. ಈಗ ಸ್ವಾಲಿಗ್ರೇಣುಮಕ್ಳು ಬಂದು ದಾಸಯ್ಯ ದಾಸಯ್ಯ

ಜಾಗ್ವೀಗೆ ಜಾಗಾ ಕೇಳಿಕ್ಯಂಡೆ ದಾಸಯ್ಯ

ಎಲ್ಲಾನು ಊರಿ ಕೂತಾಕಂಡೇ ॥

ಎಲ್ಲಾನು ಊರಿ ಕೂತುಕಂಡೇ ದಾಸಯ್ಯ

ಮುಂದುಕೆ ಎದ್ದು ಹೋಗಾಬಾರದೇ ॥

ನಮಗೆ ತಿರುಗಾಕೆ ಶಿವುನೆ ಜಾಗಾ ಇಲ್ಲಾ ॥

ಜಾಗ್ವೀಗೆ ಜಾಗ ಕೇಳಿಕ್ಯಂತೆ ದಾಸಯ್ಯ

ಈಗ ಎಲ್ಲಾನು ಊರಿ ಕೂತುಗಾದೇ ॥

ಮುಂದುಕೆ ಎದ್ದು ಹೋಗಬಾರದೇ ॥

ಮುಂದು ಕದ್ದೋಗು ಅಂತಾರೆ

ಅಮ್ಮದೀರ ಅಮ್ಮದೀರ ನಾಕ್ ಮನೆ ಯಾಚಿಕಕ್ ನಾನು ಬಂದೆ, ಹೊಗ್ತಾ ಇದ್ದೆ ಬರುಬಾರ್ದ ಮಳೀ ಬಂತು, ನೆನೀತ ನಿಂತಿದ್ದಾಗ ನೀವ್ ಕರಿದ್ರಿ. ಜಾಗ್ವೀಗೆ ಜಾಗ ನೀವೇ ಕೊಟ್ರಿ. ಜಾಗ್ವೀಗೆ ಜಾಗ ನೀವ್ ಕೊಟ್ಟ ಈಗ....

ಹೊತ್ತು ಮುಳುಕೀ ಶಿವನೆ ಹೊರಗೆ ಕತ್ಲಾಗ್ಯಾದೇ

ಮತ್ತಾರ ಮನಿಗೆ ಹೋಗಾಲಮ್ಮಾ ॥

ಹೊತ್ತು ಮುಳುಗ್ಯಾಗಾದೆ ಹೊರಗೆ ಕತ್ಲಾಗ್ಯಾದೇ

ನಾನು ಮತ್ತಾರ ಮನಿಗೆ ಹೋಗಾಲಮ್ಮ ॥

(ಆಗ್ಲೇ ಹೋತಾ ಇದ್ದೆ, ನೀವಾಗೆ ಒಳುಕ್ ಕರುದು ಜಾಗ್ವೀಗೆ ಜಾಗಾ ಕೊಟ್ರಿ ಈಗ ಹೊತ್ ಮುಳುಗಿ ಹೊರುಗೆ ಕತ್ಲಾದ್ಮೇಲೆ ಎದ್ಹೋಗು ಅಂತಿದ್ದೀರಲ್ಲ ಈಗ ಯಾರ್ ಮನಿಗೋಗ್ಲಿ)

ಅಮ್ಮ ಇಲ್ಲೊಂದು ರಾತ್ರಿ ಉಳೀತೀನೀ ॥

ಮುಂದುಕ್ಕೋಗುವುದಕ್ಕಾಗುವುದಿಲ್ಲಾ ॥

ಆಗ ಸ್ವಾಲಿಗ್ರ ಹೆಣ್ಣು ಮಕ್ಳು ಊಟುಕ್ಕೆ ನೀಡುತ್ತಾರೆ. ಊಟುಕ್ಕೆ ನೀಡಿ ಈ ಸ್ವಾಮಿ ಅಜಾರ್ದಲ್ಲಿ ಮಲಗುತ್ತಾರೆ. ಈ ಹೆಣ್ಣು ಮಕ್ಳು ಒಳಗೋಗಿ ಮಲಗುತ್ತಾರೆ.

ಸಪ್ಪುಟ ಸರ್ವೋತ್ನಲ್ಲಿ ಮದ್ದುರಾತುರೆ ವಳುಗೆ

ಯೇನೇನವತಾರ ಎತ್ತೂತವರೇ ॥

ಮದ್ದುರಾತುತೇ ವತ್ನಲ್ಲಿ ಸ್ವಾಮಿ ಯೇನೇನು ಅವತಾರ ಎತ್ತುತಾರೆ....

ಆತೇ ಉಳುವಾಗಿ ಹರುದಾನೇ...॥

ಸ್ವಾಮಿ ಆತೇ ಉಳುವಾಗೀ ಹರೂದಾನೇ ॥

ಆತೇ ಉಳುವಾಗಿ ಮೂಡ್ಲುಗೀರಿ ತಿಮ್ಮಪ್ಪಾ

ಅವುರ ಮೈಮ್ಯಾಲೆ ಸ್ವಾಮಿ ಹರುದಾಡೀದಾ ॥

(ಆತೇ ಉಳುವಾಗಿ ಹೋಗಿ ಹರುದಾ, ಅವುರ ಮೈಮಾಲೆಲ್ಲ ಹರುದಾಡಿದಾ)

ಈ ಸ್ವಾಮಿ ಮುಟ್ಟಿದಂಗಾತು ಅವುನ್ನ....

ಈಗೆ ನೆರಿಗೆ ಮಾಸೀ ಶಿವುನೆ ಹೊರಗೇ ಆಗಾನಿಲ್ಲ

ದಾಸಯ್ಗೆ  ನೀರಾ ನಿಲ್ಲಾತಾವೇ ॥

ಸ್ವಾಮೀಗೆ ನೀರೂ ನಿಲ್ಲಾತಾವೇ ॥

ಸ್ವಾಮಿ ದಾಸಯ್ಗೆ ನೀರು ನಿಂತೋ...ಮಲಗಿದ್ದ ಮಗ್ಗುಲಲ್ಲೇ...

ಗಂಟಿಗೊಂದು ತಿಂಗ್ಳು ತುಂಬಾತಾವೇ ॥

ಆವ್ರಿಗೆ ಗಂಟಿಗೊಂದು ತಿಂಗ್ಳು ತುಂಬುತಾದೇ ॥

ಸ್ವಾಮಿ ಗಂಟಿಗೊಂದು ತಿಂಗ್ಳು ತುಂಬ್ತು. ಬೆಳಗಿನಾರು ಗಂಟ್ಯಾತು.

ಆರ್ ತಿಂಗಳು ತುಂಬೈತೆ. ನಿದ್ದೇಲಿ ಮಲಗಿದ್ದಾರೆ.

ಸ್ವಾಮಿ ಸಂಕು ಜಾಗಟೆ ಹೊತುಕಂಡು ಬನವಾಸೆ ಹೊತುಕಂಡಾ

ಮಾಯ್ಯಾಗಿ ಶಿವುನೇ ಹೋಗಾತವರೇ ॥

ಮಾಯ್ವಾಗಿ ಶಿವನೇ ಹೋಗಾತವರೇ ॥

ಏಳು ಗಂಟಿಗೆ ಎಚ್ರಾತು. ಎಚ್ಚಿರಿತಾಗಿ ಮೈ ಕೈ ನೋಡ್ಕಂಡ್ರೆ

ಏಳೇಳು ತಿಂಗೂಳು ಮಾದೇವನೇ *

ನಮಗೆ ಏಳೇಳು ತಿಂಗೂಳು

ತುಂಬೆ ಬುಟ್ಟೈತಲ್ಲಾ

ಕಣ್ಣೀರಾ ಬುಡುತಾರೇ

ಆಕ್ಕ ಈ ಬಾಳಲ್ಲಿವಲ್ಲಾ

ನಮಗೆ ಏಳೇಳು ತಿಂಗಳು

ಅಕ್ಕ ತುಂಬೇ ಬಂದೈತಲ್ಲಾ

ನಮ್ಮ ಮದುವೇ ಆಗೋರ್ರ್ಯಾರು

ನಮ್ಮ ಇಟ್ಕಂಡು ಬಾಳೊರ್ರ್ಯಾರು

ಮುಂದೆ ಯಾರ್ ಕಂಡು ಬದುಕಾನ

ಮುಂದೆ ಯಾರ್ ಕಂಡು ಬಾಳಾನ

ನಮಗೆ ಏಳೇಳು ತಿಂಗಾಳು

ಅಕ್ಕ ತಂಬು ಬಂದೈತಲ್ಲಾ

ನಾವು ಯಾರ್ ಮ್ಯಾಲೆ ಯೇಳಾನ

(ನಮಗೀಗ ಏಳು ತಿಂಗ್ಳು ತುಂಬಿ ಬಂದೈತಲ್ಲ. ನಾವ್ ಮುಂದೆ ಯಾರ್ ಮ್ಯಾಲೇಳಾನ. ಯಾರ್ ಕಂಡು ಬದುಕಾನ, ಯಾರ್ ಕಂಡು ಬಾಳಾನ, ಯಾರಿಂದ ಅನ್ನ ತಿನ್ನಾನ, ಯಾರ್ ಮ್ಯಾಲೆ ಯೇಳುಬೇಕು ಈಗಾ...)

ನೆನ್ನೆ ಬಂದ ದಾಸಯ್ಯ ..ಅವ್ನು ಜಾಗ್ಟೀಗೆ ಜಾಗಾ ಕೇಳಿದ್ನಲ್ಲವ ಅವ್ನು ಎಲ್ಲಾನು ಊರಿ ಕೂತ್ಮೇಲೆ ಈ ಬಾಳಂಗಿದ್ದೀವಿ.

ಆ ದಾಸಯ್ಯನಿಂದ ಅನ್ನ ಬಟ್ಟೆ ತಿನ್ನಬೇಕೂ ॥

ಮುಂದೆ ಅವ್ನ ಕಂಡು ನಾವು ಬಾಳಾಬೇಕೂ ॥

ಮುಂದೆ ಅವ್ನ ಕಂಡು ನಾವು ಬದುಕಬೇಕೂ ॥

ನಡಿಯೇ ಅವ್ನಾ ಇಡಿಯನಾ ನಾವೇ ॥

ಅವುನು ಬಂದು ಜಾಗ್ಟೀಗೆ ಜಾಗಾ ಕೇಳಿ ಊರಿ ಕುಂತ್ಮೇಲೆ ತಾನೆ ನಮಿಗೆ ಈ ಬಾಳಾಗಿರೋದು. ಅವ್ನ ಕಂಡೇ ಬಾಳಬೇಕು. ಅವುನ್ನ ಕಂಡೇ ಬದುಕುಬೇಕು ಅವುನಿಂದಲೇ ಜೀವನ ಪೂರ ಅನ್ನ ತಿನ್ನಬೇಕು.

ನಡಿಯಪ್ಪ ಅವುನ ಉಡುಕನ ನಾವೂ ॥

ಊರು ಊರಲ್ಲಿ ಕೇರಿ ಕೇರಿಯ ಮ್ಯಾಲೆ

ಇವುನ ಶರಣೇಲಿ  ಅವುನ ಹುಡುಕಾತವರೇ ॥

ಇವುನ ಜಾನೂದಲ್ಲಿ ಶಿವನೇ ಹುಡುಕಾತವರೇ ॥

ಇವುನ ಜಾನಾದ ಅವುರು ಮಾತಿಲ್ಲಾ ॥

ಇವುನ್ನ ಮ್ಯಾಲೆ ದಿಸ್ಟಿ. ಇವುನ್ನ ಮ್ಯಾಲೆ ಜಾನ. ಎಲ್ಲಾ ಕತೆ ಹುಡುಕುತ್ತಾರೆ. ಎಲ್ಲಿ ಸಿಕ್ತಾನೆ ? ಆ ಸ್ವಾಮಿ ಮಾಯ್ಕಾರ...ನಾನಾವತಾರ...

* ಮಾದೇವನೆ ಎಂಬ ಸೊಲ್ಲನ್ನು ಪತ್ರಿ ಸಾಲಿನ ಕೊನೆಯಲ್ಲಿ ಹಿಮ್ಮೇಳದವರು ಹೇಳುತ್ತಾರೆ.

ಉಡುಕ್ಲಿ ಉಡುಕ್ಲಿ. ನನ್ನ ಆಡ್ಕ್ಯಂದ್ ನೈಗಾಡವರೆ ಅಂಡ್ಕಂಡು ...ಎಸ್ಲೋ ಟೈಮ್ ಮ್ಯಾಲೆ ಇವುನ ಗ್ಯಾನದಲ್ಲದ್ರಲ್ಲ ಅವುರಿಗೆ ಕಾಣಿಸ್ಕತ್ತಾನೆ....ಮಾಯ್ವಾಗಿ

ಓಡೋಡಿ ಹೋಗೂತಾರೆ ಮುಂಗೈಯ ಹಿಡಿದವರೆ

ಇವನ ಸೆರಗ ಶಾತೀಯ ಹಿಡಾದವರೇ ॥

ಯಾಕಮ್ಮ ಬಂದಿಡಿತೀರಿ ?

ದಾಸಯ್ಯ ನೆನ್ನೆ ಬಂದು ಜಾಗ್ಟೀಗೆ ಜಾಗ ಕೇಳಿ ಊರಿ ಕುಂತ್ಕಲ್ಲ. ಜಾಗ್ಟೀಗೆ ಜಾಗ ಕೊಟ್ಮೇಲೆ. ನೀಮಾರಿ ಕುಂತ್ಮೇಲೆ ಈ ಬಾಳಾಗಿದ್ದೀವಿ.

ನಿನ್ನ ಕಂಡು ನಾವು ಮುಂದೆ ಬಾಳಾಬೇಕೂ ॥

ನಿನ್ನ ಕಂಡು ಮುಂದೆ ಬದ್ಕಾಬೇಕೂ ॥

ನಿನ್ನಂದ ಅನ್ನ ಬಟ್ಟೆಯ ತಿನ್ನಾಬೇಕೂ ॥

ನೀನು ಬಂದೋದ್ ಮ್ಯಾಲೆ ಈ ಬಾಳಾಗಿದ್ದೀವಿ. ನಮಗೆ ಏಳೇಳು ತಿಂಗುಳು ತುಂಬೈತೆ ಬಸುರಾಗಿದ್ದೀವಿ.

ಇನ್ನ ಇಡಿದ ಸೆರಗ ಅವರು ಬಿಡಾಲಿಲ್ಲ ॥

(ತಗಾವೋದ್ರು ಮನಿಗೆ. ಈಗ ಮಾಯ್ವಾಗಿ ಕದ್ದೋದ್ರೆ ಕಳ್ಳಿ ಅಂತಾರೆ. ಇವರ ಕೈಲೇ ಅಟ್ಟಿಂದಾಚೆಗೆ ನೂಕಿಸ್ಕಬೇಕು. ಮಾಯ್ವಾದ್ರೆ ಕದ್ದೊಂಟೋದ್ರೆ ಕಳ್ಳಿ ಅಂತರೆ ಇವುರ ಕೈಲೇ ಅಟ್ಟಿಂದಾಚೆಗೆ ನೂಕಿಸ್ಕಬೇಕು. ಈಗ ನಿನ್ನಿಂದ ಅನ್ನ ಬಟ್ಟೆ ತಿನ್ನಬೇಕು ನಿನ್ನ ಕಂಡು ಬಾಳಬೇಕು ನಿನ್ನ ಕಂಡು ಬದುಕಬೇಕು. ನೀನ್ ಬಂದ್ಮೇಲೆ ಈ ಬಾಳಾಗಿದ್ದೀವಿ ಅನ್ನದಾಗಿ ಹೇಳ್ತಾ ಇದ್ದಾರಲ್ಲ...ಇವ್ರು ಇನ್ನು ಮುಂದೆ ನನ್ನೊಕ್ಲು  ಮಾಡ್ಕೋ ಬೇಕು ಅಂತಾನೆ)

ಇವ್ರ ಕೈಲೇ ಅಟ್ಟಿಂದಾಚೆಗೆ ನೂಕಿಸ್ಕಬೇಕು ಅಂತಾವ ಯೇನವತಾರ ಎತ್ತವನೆ ನೋಡೂ..

ಕಂತಂಗ್ ಕುಂತಂಗೇ ನೋಡು

ಕುಂತಂಗ್ ಕೂತಂಗೇ ನೋಡು

ಬರುಬುರನೆ ಊದಾತವನೇ

ದರಣೀಗುಳ್ಕೊಂಡು ಬಿದ್ದಾ

ಬುಲ್ ಬಾಯ್ ಬುಟ್ಟಂಗೆ ಬುಟ್ಟ

ಬುಟ್ ಬಾಯ್ ಬುಟ್ಟಂಗೆ ಬುಟ್ಟಿ

ನೆಟಗಣ್ಣ ತಿರುಗೂತವನೆ

ಬುರ್ ಬುರನೆ ಊದಾತವನೆ

ಊದೀ ನೋಡಪ್ಪಾ ಶಿವನೇ

ಸತ್ತಾಂಗೆ ಬಿದ್ದವುರಲ್ಲಾ...ತಾನು ತಂದೇನಾನು

ತಂದಲ್ಲ ತಾನೇನಾ

ತಂದನ್ನ ತಾನಾನಾ

ತಾನು ತಂದೇನಾನ

ಬಂದು ನೋಡ್ತಾರೆ ಅಜಾರ್ದಲ್ಲಿ ಇವ್ನು ಸತ್ತು ಬಿದ್ದವನೇ

ಅಕ್ಕಯ್ಯ ಅಕ್ಕಯ್ಯ ಹೋತುದ್ ದಾಸಯ್ಯ ಅವ್ನಿಂದ ಬಾಳಬೇಕು ಅಂತ ಹಿಡಿದ್ ತಂದೋ...

ದಾಸಯ್ಯ ಸಾತ್ತು ಬಿದ್ದವನೆ ಅಕ್ಕಯ್ಯಾ

ಕಟ್ಟಾಕ್ಕ ಇವ್ನುಗೆ ಚಟ್ಟಾಗಾಳಾ ॥

ನೀನು ಕಟ್ಟಾಕ್ಕೆ ಇವ್ನುಗೆ ಚಟಾಗಳಾ ॥

ಇವನ ಮುಚ್ಚುಮಾರೆ ನಾವೂ ಮಾಡಿ ಬರಾನಾ ॥

ಚಟ್ಟ ಬಿಗಿಯೂತಾರೆ ಹೆಣ ಯತ್ತಾಕೋದುರೂ

ರಟ್ಟೆ ಯತ್ತುದುಕೆ ಆಗುವುದಿಲ್ಲಾ ॥

ಅವ್ನ ಬಂದ್ರಟ್ಟಿ ಯತ್ತಾಕಾಗುವುದಿಲ್ಲಾ ॥

(ಬಂದ್ ರಟ್ಟೆ ಯತ್ತಾಕಾಗಾಕಿಲ್ಲ. ಈಗ ಆ ಕಡೆ ಒಬ್ರು ಈ ಕಡೆ ಒಬ್ರು ಕುಂತ್ಕಂಡು ಆಳಾಕಾದ್ರು )

ಕಣ್ಣೀರಿಡುತ್ತಾರೆ....

ಅಕ್ಕ ಹೆಣವೇ ಬಿದ್ದೈತಲ್ಲಾ...ಮಾದೇವನೇ

ಅಕ್ಕ ಹೆಣವೇ ಬಿದ್ದೈತಲ್ಲಾ

ನನಿಗೆ ಯತ್ತಾಕಾಗುವುದಿಲ್ಲಾ

ಶಿವನೆ ಕಣೀರ ಬಿಡುತ್ತಾರೆ

ಶಿವನೆ ಆಡಿಕಂಡು ಆಳುತ್ತಾರೆ

ಅವ್ವ ಮಿಡಗೋ ಮಾಡುತ್ತಾರೆ

(ಇಲ್ಲ ಮಿಡಿಗೋಳ್ ಮಾಡ್ತಾವರಲ್ಲ. ಮಾಯ್ದಲ್ಲಿ ಅಟ್ಟುದ್ ಮ್ಯಾಲೆ ಕೂತ್ಕಂಡು ಅಲ್ಲಿಂದ ಮಾತಾಡ್ತಾನೆ)

ಸ್ವಾಲಿಗ್ರೇಣುಮಕ್ಕ ಬಾಲಕೀರಾ...ಯಾರ್ ದುಡಾ, ಯಾರ್ ಆತ್ಮ, ಯಾರ್ ಮನೆ ಭಕ್ತಿ ಯಂಗೈತೆ ಅಂತ ನಾನು ಪರೀಕ್ಷೆ ಮಾಡಾಕೆ ಬಂದ್ರೆ...ಆಡ್ಕ್ಯಂಡು ನ್ಯೆಗಾಡ್ತೀರಾ.. ರೊಟ್ಟಿ ಆಗಲ ಐತೆ ಅಟ್ಟೀಲಿ ನಿತ್ಕಂದು ಜಣಾ ಜಣ್ಣಾನೆ ಏಡೀತಾನೆ ಅಂತಾ ನ್ಯೆಗಾಡ್ತೀರಾ ? ಮೂಲಂಗಿ ಅಂಗೆ ನಮ್ಮ ಕಣ್ಣಿಗೆ ಕಾಣ್ತಾದೆ ಬಾಯ್ಲಿಟ್ಕಂದು ಬವ್‌ಬವುನೆ

ಊದ್ತಾನೆ ಅಂದ್ರಲ್ಲಾ....ಗಂಟ್ಯಲ್ಲ ನಿಲ್ಲಿಸ್ಕಂದು ಇಚಾರಣೆ ಮಾಡಿದ್ರಲ್ಲಾ...ನನ್ನ ಮಾಯಾ ನನ್ನ ಮಯಿಮೆ ನಿಮಗೆ ಅರಿವಾಗ್ಲುಲ್ಲ. ಇಲ್ಲಿಂದೀಚ್ಗೆ ನನ್ನ ಮಾಯಾ ನನ್ನ ಮಯಿಮೆ ನಿಮಗೆ ಅರಿವಾಯ್ತದೆ.

ನೀವು ನನ್ನೊಕ್ಲು ಮುಂದೆ ಆಗಾಬೇಕಣ ॥

ನನ್ನೊಕ್ಲು ಮುಂದೆ ಆಗಾಬೇಕೂ ॥

ನನ್ನೊಕ್ಲಾಗಬೇಕು ಮುಂದೆ.

ನಿಮೊಟ್ಟೇಲುಟ್ಟೀದು ಮಕ್ಳ ನನಿಗೇ ದಾಸುನ ಬುಟ್ಟು

ಸಂಕು ಜಾಗಾಟೆ ಹೊರ್‍ಯಾಬೇಕೂ ॥

ಹೊಟ್ಟೇಲುಟ್ಟಿದು ಮಕ್ಳ ನನಿಗೇ ದಾಸುನ ಬುಟ್ಟು

ಅವರಿಗೆ ಸಂಕು ಜಾಗಟೆ ಹೊಡ್ಯಾಬೇಕೂ ॥

ಮುಂದೆ ನನ್ನೊಕ್ಲು ನೀವು ಆಗಾಬೇಕೂ ॥

ಮೂರ್ ನಾಮ ನೀವೂ ಇಡಾಬೇಕೂ ॥

ಮುಂದೆ ನೀವು ನಿನ್ನೊಕ್ಲಾದ್ರೆ ನಿಮ್ಮೊಟ್ಟೆಲುಟ್ಟಿದ ಮಕ್ಳ ನನಿಗೆ ದಾಸನ ಬುಟ್ರೆ. ಸಂಕು ಜಾಗಟೆ ಹೊರ್‍ಸಿ ನನ್ನಂಗೆ ಮೂರು ನಾಮ ನಿಮ್ಮ ಮನೆತಾನದಲ್ಲಿ ಧರಿಸಿದರೆ

ಮಲ್ಲೀಗೇ ಹೂವೀನ ತೂಕಾನಾ ಆಗುತೀನೀ

ನನ್ನ ಕುಂಡೋಗಿ ಏಳಿಗೆ ಬಿಡೀರಮ್ಮಾ ॥

ಮಲ್ಲಿಗೆ ಹೂವೀನ ತೂಕಾ ನಾ ಆಗುತೀನಿ

ನ್ನ ಏಳಿಗೋಗೀ ನೀವೂ ಬಿಡೀರಮ್ಮಾ ॥

ಮುಂದೆ ನನ್ನೊಕ್ಲು ನೀವು ಆಗಾಬೇಕೂ ॥

ನನ್ನಂಗೆ ಮೂರು ನಾಮ ನೀವು ಇಡಾಬೇಕಣ ॥

ನನ್ನಂಗೆ ಸಂಕು ಜಾಗಟೆ ಹೊರಾಬೇಕೂ ॥

ನನ್ನೊಕ್ಲು ನನ್ನೋರಾದ್ರೆ ನನ್ನಂಗೆ ಮೂರ ನಾಮ ಇಟ್ಟು, ನಿಮ್ಮೊಟ್ಟೇಲುಟ್ಟಿದ ಮಕ್ಳ ನನಿಗೆ ದಾಸನ ಬುಟ್ಟು ನನ್ನಂಗೆ ಅವರು ಸಂಕು ಜಾಗಟೆ ಹೊತ್ರೆ ಮಲ್ಲಿಗೆ ಹೂವಿನ ತೂಕ ನಾ ಆಗ್ತೀನಿ. ಕುಂಡೋಗಿ ಏಳೀಗೆ ಬುಟ್ಟು ಬನ್ನಿ. ನನ್ನ ಆಡ್ಕ್ಯಂಡು ನ್ಯೆಯಾಡಿದ್ಕೆ ಇಲ್ಲಿಂದ ಮುಂದ್ಕೆ ನನ್ನ ಮಯಿಮೆ ನಿಮಿಗೆ ಗೊತ್ತಾಗುತ್ತಾದೆ.

ಆಗ ಚಿಂತೆ ಮಾಡುತ್ತಾರೆ. ಸ್ವಾಮಿ ಆಡ್ಕ್ಯಂಡು ನ್ಯೆಗಾಡಿದ್ದು ಸವೂನ ತಪ್ಪಾತು. ಮುಂದೆ ನಿನ್ನೊಕ್ಲು ಆಗದೆ ಹೋದ್ರೆ ನಮ್ಮಗತಿ ಏನಾಗ್ತದೋ ಕಾಣೇ...ಈಗ ನಿಮ್ಮ ಲೀಲೆ ನಿಮ್ಮ ಮಯಿಮೆ ನಮಿಗೆ ಕಂಡು ಬಂತು ಸ್ವಾಮಿ

ಮುಂದೆ ನಿನ್ನೊಕ್ಲು ನವು ಆಗಾತೀವೀ ॥

ನಾವು ಮುಂದೆ ನಿನ್ನೊಕ್ಲು ಆಗಾತೀವೀ ॥

ನಮ್ಮ ಹೊಟ್ಟೇಲಿ ಶಿವನೆ ಹುಟ್ಟಿದಂತ ಮಕ್ಕಾಳ

ನಿಮಗೇ ದಾಸಾನಾ ಬುಡಾತೀವೀ ।\

ದೇವ ನಿಮಗೆ ದಾಸಾರ ಬುಡಾತೀವೀ ॥

ನಿಮಗೇ ದಾಸರ ಬುಟ್ಟು ಸಂಕೂ ಜಾಗಟೇಯ

ಅವರ ಮೈಮಾಲೆ ನಾವು ವರ್ಯಾತೀವೀ ॥

ನೀನು ನಾಕ್ ಮನೆ ಯಾಡಿಕುಕ್ ಬಂದಿದ್ದಲ್ಲ ಸ್ವಾಮಿ...ಮುಂದೆ ನಮ್ಮಕ್ಳ ಇದೇ ರೀತಿ ಸಂಕು ಜಾಗಟೆ ಹೊತ್ಕಂದು ನಾಕು ಮನೆ ಮುಂದೆ ನಿಂತ್ಕಂಡು ಯಾಡಿಕೆ ಮಾಡೋ ಅಂಗೆ ಮಾಡ್ತೀವಿ...

ನಿನ್ನ ಗ್ಯಾನ ನಾವೂ ಮಾಡಾತೀವೀ ॥

ನಿನ್ನ ಗ್ಯಾನಾ ನಾವು ಮಾಡಾತೀವೀ ॥

ಹಾಡಾಡಿ ಅರಕೆ ಕಟ್ಯವರಲ್ಲಾ ॥

ಸ್ವಾಮೀ ವಕ್ಕಾಲು ಆಗುತಾರೇ ॥

ಸ್ವಾಮಿ ವಕ್ಕಾಲು ಆಗಾತಾರೇ ॥

ಆಲ್ಲೆ ಅವನೊಕ್ಲು ಆದಾರಲ್ಲ ॥

ಹಾಡಾಡಿ ಅರಕೆ ಕಟ್ಟಿದುರು. ನಿನ್ನೊಕ್ಲು ಆಗುತೀನಿ. ನಮ್ಮ ಮಕ್ಳ ದಾಸರ ಬುಡ್ತೀನಿ. ಸಂಕು ಜಾಗಟೆ ಹೊರುಸ್ತೀವಿ. ನಾಕಟ್ಟಿ ಮನೆ ಮುಂದೆ ನಿಮ್ಮ ಶರಣೆಲ್ಲಿ ಯಾತಕ ಮಾಡಿಸ್ತೀವಿ...ಅಂದಮೇಲೇ...

ಸರಸರನೆ ಮಾಯ್ಕಾರ ಮಲ್ಲೀಗೂನ್ನ ತೂಕವಾದ

ಆಗ ಕುಂಡೋಗ ಏಳೆಗೆ ಬಿಡಾತಾರೇ ॥

ಕುಂಡೋಗಿ ಏಳೆಗೆ ಬಿಡಾತಾರೇ ॥

ಅವನ ನಾಮುಕ್ಕೆ ರಾಮಘಟ್ಟ ಜಾಗುಟೇನೆ ತ್ಯಾಗುಟೂದು

ಅವನ ಬನವಾಸ್ಗೆ ನೋಡೊ ಬನಾವಾಸೇ ॥

ನಾಮದೋರು ಅಂದ್ರೆ...

ಈ ಸ್ವಾಮೀ ವಕ್ಲೀದುಗಾದ ಮುಚ್ಚಳಿಕಲ್ಲಾ ॥

ಅವ್ನ ಮಯಿಮೇ ಬಲ್ಲೋರು ಯಾರೂ ಇಲ್ಲಾ ॥

ಕಿಸ್ಣ ಅಂದುರು ಅವ್ರೆ ರಾಮಾ ಅಂದುರು ಅವ್ರೆ

ನಾರಾಯಣ ಅಂದುರು ಅವರೇ ದೇವಾ ॥

ರಂಗ ಅಂದುಕು ಅವರೆ ರಾಮಾ ಅಂದುರು ಅವರೆ

ಅವರ ಮಾಯಾ ಬಲ್ಲವರು ಯಾರೂ ಇಲ್ಲಾ

ಬೂಮಂಡ್ಲುಕೆ ಕೈ ಚಾಚಿದುರೆ

ಬೂಮಂಡುಲುವೆಲ್ಲ ಅವೂರುದಾತೂ ॥

ಸ್ವಾಮಿ ಜಗುವೆಲ್ಲ ನೋಡು ಅವುರುದಲ್ಲಾ ॥

(ಗೋವಿಂದ ಅವ್ನ ಶರಣೆ ಯಾವೂರಲಿಲ್ಲ. ಗೋವಿಂದಾ ಅನ್ನೋ ಶರಣೆ ಯಾವೂರಲ್ಲಿಲ್ವಪ್ಪ...ದಾಸಯ್ಗೋಳು ಯಾವೂರಲಿಲ್ಲ... ಯಾವ್ ದೇಸ್ದಲಿಲ್ಲ... ಬೂಮಂಡುಲುವೆಲ್ಲ ಅವರೆ. ಈಗಾ... ನಿಮ್ಮನಿಗೆ ಒಂದು ಕಳಸ ತರುವಾಗ ಗೋವಿಂನ ಶರಣೆ ಮಾಡ್ತಾರೆ. ಜಗುವೆಲ್ಲ ಅವುಂದು)

ಗೋವಿಂದಾ ಅನ್ನೋ ಶರಣೆ ಬೂಮಂಡುಲುದಲ್ಲೆಲಲಾ ಮರಿತಾದೆ. ಜಗುವೆಲ್ಲ ಅವುಂದೆ ಆನನ್ನಪ್ಪುಂಗೆ ಗೋವಿಂದಾ ಗೋವಿಂದಾ ನಿನ್ನ ಮಾಯ ನಿನ್ನ ಮಯಿಮೆ ಮೂಡ್ಲಗಿರಿ ತಿಮ್ಮಪ್ಪ...ನಿನ್ನ ಮಾಯಾ ನಿನ್ನ ಮಯಿಮೆ...ತಿರುಪತಿ ವೆಂಕಟರಮಣ ಸ್ವಾಮಿ ಬೆಟ್ಟುದು ರಂಗುಸ್ವಾಮಿ,,,ಎಲ್ಲ ಅವುತಾರು ನಿಂದೆ ಎಲ್ಲ ಅವತಾರ ನಿಂದೆ ಸ್ವಾಮಿ ಅಜ್ಜಿಗೊಂದ್ತಾವ ಅಜ್ಜಿಗೊಂದ್ತಾವ ಅವತಾರ ಎತ್ತಿಕಂಡೋಗಿ ಸ್ವಾಮಿ ಬೂಮಂಡಲೆಲ್ಲಾವ ಅವುಚಿಕಂಡಿದ್ದೀಯ...ನಿನ್ನ ಪಾದುಕೆ ಶರಣಪ್ಪಾ ದೇವ ಮಾನ್ಯ ಭಕ್ತಿ ಶರಣ್ರಿಗೆಲ್ಲಾ ಶರಣಪ್ಪಾ ಶರಣೇ....

# ಜೇನಾವತಿ

ರಾಮಬೋ ರಾಮ ರಾಮಾನೊ ರಾಮಾ

ರಾಮನೋ ಚಂದುರಾಮ ರಾಮಾನೊ ರಘುರಾಮ

ದರುಮತಿಯ ಪಟ್ಟ ರಾಮಾನೊ ರಘುರಾಮ

ದರುಮಾವತಿಯ ಪಟುಣದಲ್ಲಿ ದಂಡು ದಳಪತಿಯಿರುವಾದೂ

ಮಂತ್ರಿ ಮಾರ್ಬಾಲವೇ ಇರುವಾದು

ದರುಮಾವತಿ ರಾಜೂಗೆ ಸಕಲ ಸಂಪತ್ತೆ ಇರುವೋದು

ದರುಮಾವತಿ ರಾಜೂಗೆ ಅನೇಯ ಸಾಲು ಒಂಟೇಯ ಸಾಲು

ಕುದುರೆಯ ಸಾಲಲ್ಲಿ ದಂಡು ದಳಪತಿಯ ಇರುವೋದು

ಏಳಾನೆ ಕೊಪ್ಪರಿಕೆ ವಿರ್‍ಯಾವು ಇರುವೋದು

ಚಿನ್ನುದು ದೀಪಾಲೆ ಕಂಬ ರನ್ನದು ದೀಪಾಲೆ ಕಂಬ

ಸಕಲಾ ಸಂಪೊತ್ತಿರುಮೋದು ಹಿರಿಯ ಭಾಗ್ಯವೆ ಇರುವೋದು

ದರುಮಾವತಿಯ ಹೊರಗೆ ಮದುವೇಯ ಮಾಡುವೋಕೆ

ಮದುವೇಯ ಮಾಡೋಕೆ ಪಟ್ಟಣದೊಳಗೆ ಹೊಡಿಸ್ಯಾನ

ದರುಮಾವತಿಯ ರಾಜೂಗೆ ಹೆಣ್ಣೀಗೆ ಹೊರಟಾರು

ಹೆಣ್ಣೀಗೆ ಎಲ್ಲೀಗೇ ಹೊರಟಾರು

ಬೂಜಿನ ಗಿರಿಯ ಪಟ್ಟುಣಕೆ ಹೊರಟಾರು

ಬೂಜಿನ ಗಿರಿಯ ಪಟ್ಟುಣದಲ್ಲಿ ಕರಿಯ ರಾಜ ಇರುವೋದು

ಕರಿಯಾನೆ ರಾಜುರಿಗೆ ದಂಡು ದಳಪತಿಯೇ ಇರುವೋದು

ಕರಿಯಾನೆ ರಾಜುರಿಗೆ ಹಿರಿಯ ಭ್ಯಾಗೇವು ಇರುವೋದು

ಬೂಜಿನ ಗಿರಿ ಪಟ್ಟುಣದ ವಳಗೆ ಕರಿಯಾನೆ ರಾಜರೀಗೇ

ಕರಿಯಾನೆ ರಾಜುರೀಗೆ ಮೂರು ಜಾನ ಮಾಕ್ಕುಳಿಲ್ಲಾ

ಮೂರು ಜಾನ ಮಕ್ಕುಳಲ್ಲ ಹಿರಿಯಾನ ಮಗುನಲ್ಲಾ

ಹಿರಿಯಾನ ಮಾಗುನಲ್ಲಿ ಬೋಜಾ ರಾಯಾ

ಎರುಡಾನೆ ಮಕ್ಕುಳಲ್ಲೋ ಹೆಣ್ಣಾನ ಮಕ್ಕುಳಿಲ್ಲ

ಹಿರಿಯಾನ ಗಂಡು ಮಾಗ ಎರಡಾನೆ ಹೆಣ್ಣು ಮಕ್ಕು

ಬೋಜುರಾಯನ ತಂಗೆ ಕಿರಿಯಾನೆ ತಂಗೇ

ನಡುಕಾಲಾ ತಂಗಿ ಜೀನಾವತೀ

ಜೀನಾ....ವತಿಯೆಂಬ ಹೆಸ್ರಾನೆ ಕಟ್ಟುತ್ತಾರೆ

ಜೀನಾವತಿಯ ತಂಗೆ ಕಿರಿಯಾನ ಮಗಳಲ್ಲೋ

ರತ್ನಾಕಾಂತೆ ಅಂತ ಜೀನಾವತಿಯ ತಂಗೆ

ರತ್ನಾಕಾಂತ ಕಿರಯಾನೆ ಮಾಗುಳಲ್ಲೋ

ಹಿರಿಯಾನ ಜೀನಾವತಿಯ ದರುಮಾವತಿಯ ರಾಜ್ಗೆ

ದರುಮಾವತಿಯ ರಾಜೂಗೆ ಜೀನವಾತಿಯನ್ನೊ

ಜೀನಾವತಿಯನ್ನ ಮಾವನಾ ಮಾಡುತಾರೇ

ದರುಮಾವತಿಯ ರಾಜನೀಗೆ ಜೀನಾವತಿಯ

ದರುಮಾಕೆ ದಾರೇಯ ಎರುದಾರೋ

ರಾಜನಿಗೆ ಮದಿಗಾಗಿ ದೀರ ಹನ್ನೆರಡು ವರುಷಾ

ಹನ್ನೆರಡು ವರುಷಾದೊರಿಗೂ ಮಕ್ಕಳಾ ಫಲವಿಲ್ಲ

ಎಲ್ಲಾ ಮಕ್ಕಾಳ ಫಲವಿಲ್ಲ ಪುತ್ರನ ಸಂತಾನವಿಲ್ಲ

ಹನ್ನೆರಡು ವರುಷಾದೊರಿಗೂ ಮಕ್ಕಾಳಾ ಫಲವಿಲ್ಲ

ಎಲ್ಲಾ ಮಕ್ಕಾಳ ಫಲವಿಲ್ಲ ಪುತ್ರುನ ಸಂತಾನವಿಲ್ಲ

ಹನ್ನೆರಡು ವರುಷದೊರಿಗು ಮಕ್ಕಳಾ ಫಲವಿಲ್ಲ

ದಾಸರುಬಂದರೂ

ಬಿಗುಸಾ ನೀಡಕೆ ಹೋಗುತಾಳೆ ತಾನ ಎನ್ನಲಿ ದೇವಾ

ಜೀನಾವತಿ ನೋಡೊ ಶಿವನೇ ತಾನ ಎನ್ನಲಿ ದೇವಾ

ಮುತ್ತು ರತ್ನಾ ಮೊರ ತುಂಬಾ

ಮೊರ ತುಂಬ ತುಂಬು ಕೊಂಡು

ಬಿಗುಸಾ ನೀಡಾಕೆ ಬಂದುಳಲ್ಲಿ

(ದಾನಪಡೆಯಿಲಿ)

ಕೇಳೆ ಕೇಳೆ ಜೀನಾವತೀ

ನಿನಗೆ ಸತಿ ಪತಿ ಉಂಟೇನಮ್ಮಾ

ಕೇಳೆ ಕೇಳೆ ಜೀನಾವತೀ

ಸತಿ ಪತಿ ಅಂದರೆ ನಿನಗೆ

ಗಂಡಾ ಗಂಡು ಮಕ್ಕಳು ನಿನಗೆ

ಉಂಟೇನಮ್ಮ ದೊರೆಸಾನೀ

ಕೇಳೆ ಕೇಳೆ ದೊರೆಸಾನೀ

ಮಕ್ಕಾಳಿಲ್ಲದ ಬಂಜೆ ನೀನು

ನೀರಾ ಬಂಜೇ ನೀನೇ

ನಿನ್ನ ಬಂಜೇ ಕೈಯಾಗ ಬಿಗೂಪಾದ

ನಾನು ಮುಟ್ಟುಹೋದೆ ಇಲ್ಲಿ ಕಾಣೇ

ಬಂಗಾಮಾರು

ಕೊಟ್ಟಾ ದಾನಾವ

ಬಿಟ್ಟು ಬಿಟ್ಟು ಹೋಗುತಾರೇ

ಬಂಜೇ ಕೈಯಾಗ ಬಿಗುಸಾವಾ

ನಾವು ಮುಟ್ಟುವುದಿಲ್ಲ

ಜೀನಾವತೀಗೆ ಶಿವನೇ

ಬಾಳ ಕೊರ್ತ್ನೆ ಹುಟ್ಟುಲುತಾದೇ

ಆರಾಮನಿಗೇ ಹೋಗುತಾಳೇ

ಮಕ್ಕಾಳಿಲ್ಲದಾ ಮ್ಯಾಲೇ

ನಾನು ಬಂಜೇ ಆಗೀದೀನೀ

ಸಂಜೆ ಮಂಚದ ಮ್ಯಾಲೇ ನೋಡೂ

ಹೋಗಿ ಮಕ್ಕಡೇ ಮನಗತಾಳೆ

ಊಟಾವ ತೊರದೂ

ಅನ್ನ ಆರಾವ ತೊರದೂ

ಅವಳ ಹವತಾರ ತೊಟುಗಂಡು

ಕೆಂಪು ರಂತೀನ ತೂಟಿಗೋಳು

ಅವಳ ಮುದ್ದಿನ ಮಾಕಗೋಳು

ಒತ್ತೀನಾದರೆ ಬಾಡುತಾದೇ

ಮಕ್ಕಾಡೆ ಮನಿಗ್ಯವಳಲ್ಲಿ

ದರುಮವತಿ ರಾಜ ಇವರು ದರುಮವತಿ ರಾಜ

ಶರಣು ಶರಣಯ್ಯ ಶಿವನೇ ಶರಣು ಮಾದೇವ

ಪ್ಯಾಟೆ ಬೀದಿ ವಳಗೆ ಇವರು ಪ್ಯಾಟೆ ಬೀದಿವಳಿಗೆ

ಪಟ್ಟಣದ ಬೀದಿವಳುಗೆ ನೋಡೋ

ಗಾಳಿ ಸಾವರಿ ಇವರು ಹೋಗಿ ಇದ್ದರಲ್ಲಾ

ಅವರು ಮನೆಗೆ ಬಂದುರಲ್ಲ

ಅವರು ಮಡದೀಯ ಇವರು ಜೀನಾವತಿಯಲ್ಲಾ

ಜೀನಾವತಿಯು ಮಕಾಡೆ ಮನಿಗ್ಯವಳೆ

ಜೀನಾವತಿಯ ಬಂದು ಯೇಳುಸ್ತಾನೆ ರಾಜಾ

ಹೇಳೇ ಹೇಳೇ ನೀನು ಎಲಾ ಜೀನಾವತಿ ಹೇಳೇ

ಸಜ್ಜೆ ಮಂಚುದ ಮ್ಯಾಲೆ ಮಾಕಾಡೆ ಮನಿಗಿದಿಯಲ್ಲಿ

ನಿನ್ನ ಮಕವೆ ಎಲ್ಲಾ ಬತ್ತಿ ಬಾಡಿ ಈರುವೊಂದು

ನಿಂಗೆ ಬಂದ ಕಷ್ಟವೇನೇ ಹೇಳೇ ಜೀನಾವತಿ

ಜೀನಾವತಿ ದಡುಕುನೆ ಮ್ಯಾಕೆ ಹೇಳುತಾಳೆ

ಯಾಕೆ ಜೀನಾವತಿ ಊಟ ಮಾಡೊದಿಲ್ಲ

ಆಗ ರಾಜುನ ಕುಟ್ಟೆ ಇವಳು ಕಣ್ಣೀರಿಡುತಾನಾ

ಇವಳ ಕೆನ್ನೆ ಮ್ಯಾಲೆ ಕಣ್ಣೀರು ಸುರುದು ಹೋಗುತಾವೆ

ಕೇಳಿ ಕೇಳಿ ಸ್ವಾಮಿ ದರುಮಾವತಿ ರಾಜಾ

ಯಾರೋ ಕಾಣೆ ಒಬ್ರು ದಾಸುರು ಬಂದಿದ್ರು

ಭಕ್ತುಗಾರ್ರು ಬಂದು ಬಿಗುಸ ಕೇಳಿದಾರು

ಬಿನುಸಾವ ನಾನು ನೀಡ ಕೋದೆ ಸ್ವಾಮಿ

ಅವರು ಗಂಡಾನ ಗಂಡು ಮಕುಳ ಕೇಳಿದರು

ಮಕ್ಕಳಿಲ್ಲ ಅಂತಾವ ಹೇಳೀದೆ ಮಾಸ್ವಾಮಿ

ಗಂಡ ಉಂಟು ನನಗೆ ಗಂಡು ಮಕ್ಕಳಿಲ್ಲ ಅಂದೇ

ಮಕ್ಕಳ ಫಲ ನನಗೆ ಪುತ್ರ ಸಂತಾನ

ಆಗ ಜಾಂಗುಮರು ಇವುಳ ಮಕ್ಕಳಿಲ್ದ ಬಂಜೆ

ಬಂಜೇ ಕೈಯಾಳ ಬಿಗುಸ ಮುಟ್ಟಬಾರದು

ಅಂತ ಜಂಗಮರು ಬಿಗುಸ ಬುಟ್ಟೆ ವೋದಾರು

ನಾನು ಪಟ್ಟುಣದ ವಳುಗೆ ನಾನು ಇರುಬಾರ್ದು

ಬಂಜೆ ಅನಸ್ಕಂಡು ನಾನು ಇರುಬಾರ್ದು

ನಾನು ಪಟ್ಟೆ ಮಂಚುದು ಮ್ಯಾಲೆ....

ಕೇಳಿ ಕೇಳಿ ಜೀನಾವತೀ...ಶಿವರಾಯ ಎನ್ನಲಿದೇವ

ಮಕ್ಕಳಿಲ್ಲದ ಬಂಜೆ ನಾವು ...ಶರಣು ಶರಣಯ್ಯ ಶಿವನೆ ಶರಣು ಮಾದೇವ

ಅವರು ಬಾವಾನ ಇವುರು ಬೋಜುರಾಯನ ಶರಣು ಶರಣಯ್ಯ ಶಿವನೆ ಶರಣು ಮಾದೇವ

ಬಾವ ಬೋಜುರಾಜನ ಬೇಗ ಕರೆದಾರೋ

ಎಲ ಬಾರೋ ಬಾರೋ ಬಾವ ಮಂತ್ರಿ ಬ್ಯಾಗ ಬಾರೋ ನೀನು

ಕೇಳೊ ಕೇಳೊ ಮಂತ್ರಿ ಕೇಳೊ ಬೋಜರಾಯ

ಕೇಳೋ ಕೇಳೋ ಬಾವನೀನೂ...ಶಿವರಾಯ ಎನ್ನಲಿದೇವ

ನಿನ್ನ ತಂಗೇಯ ಜೀನಾವತಿಯಾ

ನಿನ್ನ ತಂಗೆ ಜೀನಾವತಯ

ನಾನು ಮದುವ್ಯಾಗಿ ಹನ್ನೆರಡು ವರುಸಾಯ್ತು

ಕೇಳೋ ಕೇಳೊ ಬಾವ ನಾನು

ನಿನ್ನ ತಂಗೇಯ ತಂದು ನಾನು

ನನ್ನ ಮನೆಯೇ ಹಾಳಾಗಕಾಯ್ತು

ನನ್ನ ಪಟ್ಟಣ ಬರದಾಗಕಾಯ್ತು

ಬಾವ ಬೋಜರಾಯನ ಕುಟ್ಟೇ

ರಾಜ ಕಿಡಿ ಕಿಡಿ ಕ್ವಾಪಾವ

ಕ್ವಾಪಾವ ತಾಳುತಾನೇ

ನನ್ನ ತಂಗೇಯ ತಂದು ಮನೆಯಾಕಾಳಾಗಬೇಕು...ಶರಣು ಶರಣರು

ನನ್ನ ಕಿರಿಯ ತಂಗಿ ರತುನಂಗಿ ಇರುವೋಳು ...ಶರಣು ಶರಣರು

ಬೇಡ ಬ್ಯಾಡ ಬಾವ ...ಶಿವರಾಯ

ಬೇಡ ಬ್ಯಾಡ ಮಂತ್ರಿ

ನಿನ್ನ ತಂಗಿ ರತುನಂಗೀಯಾ

ನಾನು ಒಬ್ಬ ತಾಯೀ ಮಕ್ಕೂಳಾ

ನನುಮದುವೆ ಆಗೋದಿಲ್ಲಾ

ಕೇಳೋ ಕೇಳೋ ಬಾವಾ

ಒಬ್ಬ ತಾಯಿ ಮಕ್ಕುಳು ತಂದ್ರೇ

ಅವ್ರು ಅಕ್ಕಕ್ಕ ತಂಗೇರು

ಅವ್ರು ಹೊಂದಿಕೋಳೋದಿಲ್ಲಾ

ಅವ್ರು ಹೊಡೆದಾಡಿ ಕಡಿದಾಡುತಾರೇ

ಕೇಳೋ ಕೇಳೋ ಭಾವ ನೀನೂ ..ತಾನಾ ಎನ್ನಲಿ ದೇವಾ

ಹೊಡೆದಾಡಿ ಕೆಡುವಾಡುವಾಗಾ

ನಾನು ಕಣ್ಣಿಂದಾವ ಹ್ಯಾಗ ನೋಡ್ಲೋ

ನಾನು ಮದುವೆ ಆಗುವುದಿಲ್ಲಾ

ಕೇಳೋ ಕೇಳೊ ಬಾವ ನೀನೂ

ನೀವು ಮದುವೆ ಮಾಡುಬೇಕಾದರೇ
ಮದುವೆಯ ಮಾಡಿರಯ್ಯ
ಕೇಳಿರಯ್ಯ  ಬಾವ ನೀವೂ
ಕೇಳೋ ಕೇಳೋ ಬಾವ ನೀನೂ
ದರುಮಾವತಿ ದೊರೆ ರಾಜಾ
ಬ್ಯಾರೇ ಕಾಡೇ ಹೆಣ್ಣ ತಂದ್ರೇ
ಅವ್ರು ಹೊಂದೋದಿಲ್ಲ ವರಿಯೇದಿಲ್ಲಾ
ನನ್ನ ತಂಗಿ ರತುನಾಂಗಿ ತಂದೂ
ನಾನು ಮದುವೆನಾದುರೆ ಮಾಡುತೀನಿ
ಇವ್ರು ಅಕ್ಕಕ್ಕ ತಂಗೇರೂ
ವೊಂದಿ ಕಂಡು ವೋಗುತಾರೇ
ಅಂತಾ ಮಂತ್ರಿ ಬೋಜುರಾಜ
ಬಾವ ದರುಮಾವತೀಯ ದೊರೆಗೇ
ಕಿರಿಯೋಳಾ ರತುನಾಂಗಿಯಾ
ನಿನ್ನೊಂದ್ಸಲಿಯ ಕೊಟ್ಟು ನೋಡೊ
ಮದುವೆನಾದರೆ ಮಾಡುತಾರೇ
ದರುಮಾವತಿಯ ದ್ವಾರಿಗಲ್ಲೊ
ದರುಮಾವತೀ ರಾಜ್ಗೆ ಇಬ್ರಾಳು ಮಡದೀರು ..ಶರಣು..ಶರಣಯ್ಯ
ಕಿರಿಯೋಳ ಮದಿವಾಗಿ ದೀರ ಹನ್ನೆರಡು ವರಸ್ವಾಯ್ತೋ
ಹನ್ನೆರಡು ವರುಸ್ದೂರಿಗೂ ಮಕ್ಕುಳಿಲ್ಲುವಲ್ಲಾ
ಮಕ್ಕಳಿಲ್ಲುವಲ್ಲ ಪುತ್ರ ಕಂದಾನಿಲ್ಲುವಲ್ಲ
ತಾನಂದಾನಾತಾನ ತಾನಂದಾನಾತಾನ ॥
ಶಿವುನೆ ಮುಂದೆ ಜಗುವೆ ಹಿಂದೆ ನಾವೆಲ್ಲ ಶಿವನಿಂದೆ
ಶಿವುನೆ ಮುಂದೆ ಜಗುವೆ ಹಿಂದೆ ನಾವೆಲ್ಲ ಶಿವನಿಂದೆ
ರಾಮಾನೇ ರಾಮ ರಾಮನೋ ರಾಮ
ರಾಮಾನೂ ಚಂದುರಾಮ ರಾಮಾನೆ ರಘು ರಾಮ ॥
ದರುವಮಾವತಿಯ ರಾಜ ದರುಆವತೀಯ ದ್ವಾರೆ
ಮಂತೀರಿ ಮಂತೀರಿ ಕರೆದಾರೊ
ದರುಮಾವತಿಯ ದ್ವಾರೆ ದರುಮಾವತಿಯ ರಾಜ

ಬಾರಪ್ಪ ನನು ಮಂತ್ರೀ ಹರುದಾನೇ

ಮಕ್ಕಾಳು ಪುತ್ರಾನ ಸಂತಾನಾ

ಪುತ್ರನು ಸಂತಾನ ಇಲ್ಲುದು ಮ್ಯಾಲೆ ಇರುಬಾರುದು ದರೆವಳುಗೆ

ನನ್ನ ರಾಜ ಪಟ್ಟಾವ ಯಾರಿಗೆ ಕಟ್ಟುಲಯ್ಯ

ನನ್ನ ಪಟ್ಟುಣದೊಳಗೆ ಹೆಣ್ಣು ಗಂಡೀಗೆಲ್ಲಾ

ಹೆಣ್ಣು ಗಂಡಿಗೆ ಎಲ್ಲ ಆಡಿಕೆ ಆದುನಲ್ಲಾ

ಒಬ್ಬೂಳು ಅಂತಲ್ಲ ಇಬ್ರಾಳು ಮಡದೀರ ತಂದುನಲ್ಲ

ಇಬ್ರಾಳು ಮಡಿದಿರಿಗೆ ಮಕ್ಕಳು ಇಲ್ಲವಲ್ಲಾ

ಬಂಜೇ ನಾನಾದಿವಲ್ಲ ಗಂಡ್ಡೀರು ನಾವಧೀನಲ್ಲ

ನಾವು ಅಡವಿ ಅರಣ್ಯಕೋಗಿ ಪ್ರಾಣಾವ ಬಿಡುತೀನಿ

ನನ್ನ ರಾಜ್ಯದು ದರುಬಾರ ಯಾರೀಗೆ ಕೊಡಲಪ್ಪ

ಕೇಳಪ್ಪ ನನ್ನ ಮಂತ್ರಿ ದೇವುತನ ಪರುದಾನಿ

ನೀರು ಬಂಜೆ ಆದಿನಲ್ಲೊ ಪಾಪಿಷ್ಟ ಆದುನಲ್ಲೊ

ಮಕ್ಕಾಳಿಲ್ಲುದು ಮ್ಯಾಲೆ ಇರಬಾರದು ದರೆಯೊಳಗೆ

ಅಡವಿ ಅರಣ್ಯಕೋಗಿ ಪ್ರಾಣವ ಬಿಡುತೀನಿ

ನಮ್ಮ ರಾಜ್ಯದ ಪಟ್ಟಾವ ಮಂತ್ರಿ ನೀವೇಯ ಕಟ್ಟಿಕೊಳ್ಳೊ

ನಮ್ಮಾ ಪಟ್ಟಾಣಾವ ಮಂತ್ರಿ ನೀನೇಯ ಆಳಿಕೊಳ್ಳೋ

ದಂಡು ದಳಪತಿಯೂ ಆರುಮಾನೇಯೂ

ನನ್ನಾವ ರಾಜಾನ ನೀನೇಯ ಆಳಿಕೊಳ್ಳೋ

ಅಡವಿಯಾ ರಣ್ಯಾಕೆ ಹೋಗುತೀನಿ ನಾನು ಮಂತ್ರಿ

ದರುಮಾವತಿಯ ದ್ವಾರೆ ಅವರ ರಾಜಾ ಪಟ್ಟಾವ

ಅವುನಾ ಮಂತ್ರೀಗೆ ದೇಸವಾ ಬಿಟ್ಟುಕೊಟ್ಟ

ಅವುಳ ರಾಜ್ಯಾವ ಬಿಟ್ಟುಕೊಟ್ಟು ಅರುಮನಿಗೆ ವಾದುರಲ್ಲ

ಅರುಮನಿಗೆ ಹೋಗಿ ಮಡುದೀರ ಕರುದಾರು

ಸಜ್ಜೆ ಮಂಚುದು ಮ್ಯಾಲೆ ಕುತುಗಂಡು ಮಡದೀರ ಕರುದಾನೂ

ಬಲ್ಲಿರೆಲೆ ಮಡದೀರ ಜೀನಾವತೀ ಆರೆ

ಜೀನಾವತೀ ಬಾರೇ ಚಂದುರ ಕಾಂತಿ ಬಾರೇ

ಮಕ್ಕಾಳು ಇಲ್ದು ಮ್ಯಾಲೆ ನಾವು ಇರಬಾರ್ದು ದರೆವಳುಗೆ

ನಾವು ಅಡವಿ ಅರಣ್ಯಕೋಗಿ ಪ್ರಾಣಾವ ಬಿಡಬೇಕು

ಕೇಳಿರೆಲೆ ಮೊಡದೀರ ನಿಮ್ಮ ಮನಸೀನ ಇಷ್ಟಾವು
ಇನ್ನೂವೆ ದೇಸುದ ಮ್ಯಾಲೆ ಇರಬೇಕು ಅಂತೀರಾ
ಕೇಳಿರೆಲೆ ಮೊಡದೀರ ಅಡವಿ ಅರಣ್ಯಕೆ ಹೋಗುವಾನಾ
ನಡೀರೆ ಮೊಡದೀರ ಅಡವಿ ಅರಣ್ಯಕೆ ಹೋಗುವಾನಾ
ಆಗಲೆ ಜೀನಾವತಿ ಏನಂತ ಹೇಳಿದಾಳೋ
ಕೇಳಿರಿ ಮಾಸ್ವಾಮಿ ಮಕ್ಕಳಿಲ್ಲುದು ಮ್ಯಾಲೆ
ಇರುಬಾರದು ದರೆಯೊಳಗೆ ನಾವು ಹೆಣ್ಣು ಗಂಡಿಗೆ ಎಲ್ಲಾ
ಪಟ್ಟಣದೊಳಗೆ ಆಡೀಕೆ ಆದಿವಲ್ಲಾ
ನಾವು ಅಡವಿ ಅರಣ್ಯಕೋಗಿ ಪ್ರಾಣಾವ ಬಿಡುವೋನ
ನಡೀರಿ ಮಾಸ್ವಾಮಿ ಕಾಡೀಗೆ ಹೋಗುವಾನ
ಕಾಡಿನಲಿ ಪ್ರಾಣಾವ ಬಿಡಾನ ನಡೀರಿ
ಕೇಳೀರಿ ಮಾಸ್ವಾಮಿ ಎಂಟೊಂದು ಎಂಟು ದಿವ್ಸಾ
ಎಂಟೊಂದು ಎಂಟು ದಿವ್ಸ ನಮಗೆ ಅವುದೀಯ ಕೊಡಬೇಕು
ನಮ್ಮ ಬಂದು ಬಳಗಾವ ನೋಡಬೇಕು ನಮ್ಮ ತಾಯಿ ತಂದೇಯ
ಅಣ್ಣ ತಮ್ಮುದೀರ ನೋಡಬೇಕು ಅಕ್ಕ ತಂಗೀರ ನೋಡಬೇಕು
ನಮ್ಮ ಬಂದು ಬಳಗ ನೋಡಿಕೊಂಡು ಬತ್ತೀವಿ ಮಾಸ್ವಾಮಿ
ಎಂಟೂ ದಿವ್ಸಾ ಅವುದೀಯ ತಾಕ್ಕಂಡೂ...
ಜೀನಾವತೀಯ ಅವುಳ ತಮಗೆ ರತುನಂಗೀಯೂ
ಮಂತ್ರೀಯ ಕರಕೊಂಡು ಅವುಳ ತವುರೀಗೆ ಹೋಗುತಾನೆ
ಅವುರ ಬಂದು ಬಳಗ ನೋಡಿಕಂಡು ತಾಯಿ ತಂದೇಯ ನೋಡಿ
ಎಂಟು ದಿನುದು ಮ್ಯಾಲೆ ಪಟ್ಟಣಕೆ ಬಂದುಳಲ್ಲ
ಆಗ ದರುಮಾವತೀಯ ದ್ವಾರೆ ಮಡದೀರ ಕರುದಾನು
ಹೇಳಿರಲೆ ಮಡುದೀರ ಇವತ್ತಿನ ರಾತುರೇಯ
ಇವತ್ತಿನ ರಾತುತೇಯ ನಾವು ಪ್ರಾಣಾವ ಬಿಡಬೇಕು
ನಮ್ಮ ಪಟ್ಣಾವ ನೋಡಿಕಂಡು ಬರುವಾನ ನಡೀರವ್ವ
ದರುಮಾವತಿಯ ದ್ವಾರೆ ಮಡುದೀರ ಕರುಕೊಂಡು
ಅರುಮನೆಯ ನೋಡುತಾರೆ ಪಟ್ಟಣಾವ ನೋಡುತಾರೇ
ನೋಡಿಕಂಡು ಬಂದುರಲ್ಲಾ ಸಾಯಂಕಾಲೂಕೇ
ಕೇಳಿರೆಲೆ ಮಡುದೀರ ಇವತ್ತಿನ ರಾತುರೇಯ

ನಮ್ಮ ಮಾನೆ ವಳುಗೆ ಅಡಿಗೆ ಊಟ ಮಾಡಿಕಂಡು

ಅಡಿಗೆ ಊಡಾವ ಮಾಡಿಕಂಡು ಇವತ್ತು ನಮ್ಮ

ಬೇಕ್ ಬೇಕಾದ ಬಗೆ ಬಗೆ ಊಟಾವ

ಊಟಾವ ಮಾಡಿಕಂಡ್ರು ಹನ್ನೆರಡು ಗಂಟೆಯ ರಾತ್ರೀ

ಹನ್ನೆರಡು ಗಂಟೆ ರಾತ್ರೀಯ ಮ್ಯಾಲೆ ಅವುರ ಸಜ್ಜೆ ಮಂಚುದು ಮ್ಯಾಲೆ

ಸಜ್ಜೆ ಮಂಚುದು ಮ್ಯಾಲೆ ಹಾಸೀಗೆ ಹಾಕುತಾರೆ

ಹಾಸಿಗೆಯ ಮ್ಯಾಲೆ ರಾಜುರು ಮನಿಗ್ಯವರೇ

ಬಲಗಡೆಯ ಜೀನಾವತಿ ಎಡುಗಡೆಯ ರತುನಂಗೀ

ನಟ್ಟ ನಡುವೇಯೇ ದರುಮಾವತಿಯ ದ್ವಾರೇ

ಗೂಟುದಿಂದಾವ ಚಂದ್ರಾಯ ಈರುಕಂದು

ಚಂದ್ರಯ ಈರುಕಂದು ತಲೆದಸಿಗೆ ಮಡಿಕಂದು

ಇಟ್ಟಾಳು ಮಡಿದೀರ ನಿದ್ರೆ ಮ್ಯಾಲೆ ಮಲಿಗ್ಯವೆರ

ಪಟ್ಣವೆಲ್ಲ ದಂಡು ದಳಪತಿಯೆಲ್ಲಾ

ಸದ್ದಡಗಿದ ವತ್ತಿನಲ್ಲಿ ಪ್ರಾಣಾವ ಬಿಡಬೇಕು

ಗ್ಯಾನಾವ ಮಾಡಿಕಂಡು ಚಂದ್ರಾಯ ಈರುಕಂದು

ಮೂರು ಜನ ದಂಪತಿಗಳೋ ಶಿರುದು ಮ್ಯಾಲೇ

ಚಂದ್ರಾಯ ಮಡಿಕಂದು ಮಲಿಗ್ಯವರೆ ದ್ವಾರಿಗೋಳು

ಸದ್ದಡಗಿದ ವತ್ತಿನಲ್ಲಿ ಕಲ್ಲೂ ನೀರು ಕರಗೋ ವತ್ತು

ಕಲ್ಲು ನೀರು ಕರಗೋ ವತ್ತಿನಲ್ಲಿ ದರುಮಾವತೀಯ ದ್ವಾರೆ

ತಲದಸಿಂದಾವ ಚಂದ್ರಾಯ ಈರುಕಂಡು

ಇಟ್ಟಾಳು ಮಡದೀರು ನಿದ್ರೆ ಮ್ಯಾಲೆ ಮಲಿಗ್ಯವರೆ

ಚಂದ್ರಾಯ ತಕ್ಕಂಡು ಪ್ರಾಣಾವ ಬಿಡಬೇಕೂ

ಇಬ್ರಾಳ ಮಡದೀರ ರಾಜ ಒಂದೇ ಸಲೀಯ

ಚಂದ್ರಾಯ ತಕ್ಕಂಡು ಪ್ರಾಣ ಬಿಡುವಾಗ

ಪ್ರಾಣ ಬಿಡುವಂತ ಕಾಲುದಲ್ಲಿ ಅರ್ಧ ರಾತ್ರಿ ವತ್ತಿನಲ್ಲೇ

ಅರ್ಧ ರಾತ್ರಿ ವೊತ್ತಿನಲ್ಲಿ ಏಳುಸಮುದ್ರದಾಚೆ

ಏಳು ಸಮುದ್ರದಾಚೆ ಕೀಳಾ ಸಮುದ್ರ

ಕೀಳಾ ಸಮುದ್ರದಲ್ಲಿ ತಾವುರೇಯ ಕಮಲಾವು

ತಾವ್ರೆ ಕಮುಲುದೊಳಗೆ ಅರೀ ಜಾಂಬೈನೋರು

ಆದೀ ಜಾಂಬೈನೋರು ತಬುಸಾನ ಮಾಡುತಾರೆ
ತಬುಸಾನ ಮಾಡುವಾಗ ಸಮ ಸಮ ರಾತುರಲ್ಲೊ
ಒಂದಾನ ರಾತ್ರೀಗೆ ಏಳು ಸಾರಾನ ಸಾರೂತಾರೆ
ಮಕ್ಕಾಳ ಇಲ್ಲುದೊರಿಗೆ ಮಕ್ಳ ಫಲವಾನ ಕೊಡುತೀನಿ
ಲಗ್ನಾವು ಇಲ್ಲುದೊರಿಗೆ ಲಗ್ನಾ ಮಾಡಿ ಕೊಡುತೀನಿ
ಒಂದಾನ ರಾತ್ರೀಗೆ ಏಳ್ ಸಾರು ಸಾರುತಾರೇ
ಈವಾಗ ಸಾರನ್ನ ಹಿರಿಯೋಳು ಜೀನಾವತಿ
ಹಿರಿಯೋಳು ಜೀನಾವತಿ ಲಾಲೀಸಿ ಕೇಳುತಾಳೆ
ಲಾಲಿಸಿ ಕೇಳಿ ಆತುರಿಸಿ ಎದ್ದುಳಲ್ಲ
ಆತುರಿಸಿ ಎದ್ದು ರಾಜೂರ ಹೇಳಿಸ್ಯಾಳೆ
ಏಳೀರಿ ಮಾಸ್ವಾಮಿ ಮ್ಯಾಲಾಕೆ ನೀವು
ಯಾರೋ ಕಾಣೆ ಏಳಾ ಸಮುದ್ರಾದ ಆಚೆ
ಏಳಾ ಸಾರಾನ ಸಾರುತಾರೇ
ಮಕ್ಕಾಳು ಇಲ್ಲುದೊರಿಗೆ ಮಕ್ಳ ಫಲವಾನ ಕೊಡುತಾರೆ
ಲಿಗ್ನಾವು ಇಲ್ಲದೊರಿಗೆ ಲಗ್ನಾವ ಕೊಡುತಾರೆ
ಅಂತಾವ ಸಾರ ಸಾರುತಾರೆ ಮಾಸ್ವಾಮಿ
ನನ್ನ ಕೆಟ್ ಕರ್ನದಲ್ಲಿ ಕೇಳಿದೆ ನೀವೂ ಲಾಲಿಸಿ ಕೇಳಿರಯ್ಯ
ಆಗ ದರಮಾವತಿ ದ್ವಾರೆ ಕಡಿ ಕಡಿ ಕ್ವಾಪಾವ ತಾಳುತಾರೆ
ಏನಾಲೆ ಜೀನಾವತಿ ನಾವು ಪ್ರಾಣಾವ ಬಿಡುವಾಗ
ಪ್ರಾಣಾವ ಬಿಡುವಾಗ ಏನು ಮಾತಾಡುತೀಯ
ಸಮ್ಮಾನೆ ಈರಾಲೆ ಜೀನಾವತಿ ನೀನು
ಇಲ್ಲಾ ಇಲ್ಲಾ ಸ್ವಾಮಿ ನೀವು ಲಾಲಿಸಿ ಕೇಳಿ ಸ್ವಾಮಿ
ದರುಮಾವತಿಯ ರಾಜಅವುರು ಲಾಲಿಸಿ ಕೇಳುತಾರೆ
ಮತ್ತೆ ರುಸಿಗೋಳು ಏಳಾ ಸಾರಾನೆ ಸಾರುತಾರೆ
ಮಕ್ಕಳು ಇಲ್ಲದೊರಿಗೆ ಮಕ್ಳ ಪಲವಾನ ಕೊಡುತೀನಿ
ಲಗ್ನವು ಕಾಲದೊರಿಗೆ ಲಗ್ನಾವ ಮಾಡುತೀನಿ
ಈ ಸಾರಾ ರಾಜರು ಕಿವಿಗೊಟ್ಟು ಕೇಳಿದಾರು
ದರುಮಾವತಿಯ ರಾಜ ಆಗ ದರುಮಾವತಿಯ ದ್ವಾರೇ
ಮೂರು ಜನುದಾ ಶಿರೂದೂ ಮ್ಯಾಲೆ

ಚಂದ್ರಾಯ ಮಡಿಸಿದುರಲ್ಲ ಚಂದ್ರಾಯ ಇರುಕಂದ್ರು

ಚಂದ್ರಾಯ ಇರುಕಂಡು ಗೂಟುಕು ನ್ಯಾತಾಕುತಾರೆ

ಅಷ್ಟಾನ ಹೊತ್ತೀನಿ ಮುಂಗೋಳಿ ಕೂಗುತಾದೆ

ಮುಂಗೋಳಿ ಕೂಗುತಾದೆ ಮೂಡು ಕೆಂಪೇರುತಾದೆ

ಬೆಳಿಗೆ ಆರು ಗಂಟೆ ಆಯೀತಾ ಬಂತೂ

ಆರು ಗಂಟೆಯ ಮ್ಯಾಲೆ ದರುಮಾವತಿಯ ದ್ವಾರೆ

ಇಬ್ರಾಳು ಮಡಿದಿರಿಗೆ ಇದ್ದಬುದ್ದೀಯ ಹೇಳುತಾರೆ

ಕೇಳೆರೆಲೆ ಮಡಿದೀರ ನಾನು ಮಕ್ಳ ಪಲವ ಬೇಡಾಕೆ ಹೋಗುತೀನಿ

ನೀವು ಹಸಿದು ಹಣ್ಣನು ಸುಲಿರಮ್ಮ ಮೀದು ಮಡಿಯನ್ನ ಉಡಿರಮ್ಮ

ಇಬ್ರಾಳು ಮಡಿದೀರು ಮೀದು ಮಡಿಯನ್ನು ಉಡುತಾರೆ

ಮೀದ್ ಮಡಿಯನ್ನ ಉಡಗಂಡು ಬಂಗಾರುದ್ ತಟ್ಟೀಗೆ

ಬಂಗಾರದ್ ತಟ್ಟೀಗೆ ಹಣ್ಣ ಕಾಯ ತುಂಬುತಾರೆ

ಚಿಕ್ಕ ತಂಗಿನು ಕಾಯಿ ಚಿಗಣಿ ತಮುಟಾದುಂಡೇ

ಗೊನಿಯಾ ಬಾಳೇಹಣ್ಣು

ಪೂಜೇಗೆ ಇಟ್ಟುತ್ತಾರೆ

ದರುಮಾವತಿಯ ದ್ವಾರೆ ಹಣ್ಣು ಕಾಯಿ ತಕ್ಕಂಡಾ

ಹಣ್ಣು ಕಾಯ ತಕ್ಕಂಡು ತಲೆ ಮ್ಯಾಲೆ ಇಟುಗಂಡು

ಇಬ್ರಾಳು ಮಡಿದೀರ ರಾಜಾ ಕರೆದಾನೋ

ಕೇಳೀರೆ ಮಡದೀರ ಮಕ್ಕಳ ಫಲವ ಕೇಳಿ ಬರುವರುಗು

ನಾನು ಪುತ್ರನ ಸಂತಾನದ ಪಡುಕಂಡು ಬರುವರುಗೂವೆ

ಅರುಮಾನೆ ಜ್ವಾಪಾನ ಪಟ್ಟಿ ಜ್ವಾಪಾನ

ನೀವು ಅಕ್ಕಕ್ಕ ತಂಗೇರು ಜಗಳ ತಂಟೇಯ ಮಾಡಬೇಡಿ

ಜ್ವಾಪಾನ ಆಗೀ ಇರಬೇಕು ಮಡದೀರ

ಇಬ್ರಾಳ್ ಮಡದಿರಿಗು ಇದ್ದ ಬುದ್ದಿಯ ಹೇಳಿ

ದರುಮಾವತೀಯ ದ್ವಾರೆ ಸಮುದಾರಾಕೆ ಹೋಗುತ ಅವುರಲ್ಲ

ಸಮುದ್ರತ್ತಕಾ ಹೋಗಿ ಏಲಾ ಸಮುದ್ರಾವೋ

ಏಳುಸಮುದ್ರ ಬಿಟ್ಟು ಕೀಳು ಸಮುದ್ರಕೋದ್ರು

ನಡುವೆ ಸಮುದ್ರಾ ಆಚೆ ದಿಡುಕೂ ಈಚೆಯ ದಿಡುಕು

ಗಂಗಮ್ಮ ತಾಯಿ ತುಂಬಿ ತುಳುಕಿ ಹರಿತಾಳೇ

ಆಗ ಸಮುದ್ರದ ದಾಡುದಲ್ಲಿ ದ್ವಾರಿಗೋಳು ನಿಂತು ಗಂಡೂ
ಗಂಗಮ್ಮ ತಾಯೀಗೆ ಹರಿಕೇಯ ಕಟ್ಟುತ್ತಾರೇ
ಹರಿಕೇಯ ಕಟ್ಟುತ್ತಾರೇ ದರುಮಾವತೀಯ ದ್ವಾರೇ
ಕೇಳವ್ವ ಗಂಗಮ್ಮ ಆಚೇ ದಾಡುಕೆ ನನ್ನ
ಅಚೇ ದಡುಕೆ ನನ್ನ ಐರೋಡ ಮಾಡಿಕೋರೇ
ವರುಸಾಕೆ ಬಂದು ಸರಿಯಾ ಹೆಣ್ಣಾನೆ ಮಕ್ಕಳಿಂದ
ಹೆಣ್ಣಾನೆ ಮಕ್ಕಳಿಂದಾ ಕಾಯಾನೆ ವಡುಸುತೀನಿ
ತಿಂಗೂ ತಿಂಗುಳಿಗೇ ಒಂದು ಬಲಿಯಾನ ಬುಡುಸುತೀನಿ
ಹಾಡಾಡಿಕಂಡೂ ಗಂಗಮ್ಗೆ ಹರಿಕೇಯ ಕಟ್ಟುತಾರೇ
ಹರಿಕೇಯ ಕಟ್ಟಿದಾಗ ಗಂಗಮ್ಮ ತಾಯಲ್ಲೊ
ಗಂಗಮ್ಮ ತಾಯಿ ಬಂದ ಕಾಯಾನ ಬುಂಡೀಗೆ
ಬಂದ ಕಾಯಾನ ಬುಂಡೀಗೆ ಆಸೇ ಬಿದ್ದುಳಲ್ಲ
ತಿಂಗಾ ತಿಂಗಳಿಗೊಂದಾ ಎಲಿಗೆ ಆಸಿ ಬಿದ್ದುಳಲ್ಲಿ
ತುಂಬಿ ತುಳಿಕಿ ಹರಿತಿದ್ದ ಗಂಗಮ್ಮಾ
ಎರಡಾ ಬಾಗಾವು ಆದುಳಿಲ್ಲ
ಆಚೆ ದಿಡೂಕೂ ಈಚೇ ದಿಡುಕು ಐರೋಡ ಮಾಡಿದಾಳು
ದರುಮಾವತೀಯ ದ್ವಾರೆ ಸಮುದ್ರಾದೊಳಗೇ
ಸಾಮುದರದ ವಳುಗೆ ಹೋದುರಲ್ಲಾ ದೊರೆ
ದರುಮಾವತಿಯ ದ್ವಾರಿಯಲ್ಲಾ ...ತಾನಾ ಎನ್ನಲ್ಲ
ಸಮುದ್ರಾವ ದಾಟಿ ಕಂಡೂ
ರುಸಿಗೋಳ ಬಳಿಗೆ ವಾದುರಲ್ಲಾ
ಆಗಾ ಆದೀ ಜಾಂಬೈನೋರೂ
ಮುಚ್ಚಿದು ಕಣ್ಣ ಮೂಗುಲು ಬಾಯೀ
ತಬಸಾ ಮಾಡುತಿದ್ರು
ಅವರ ಜಾಡೇನೆಂಬುವಾರದೂ
ಸಮುದ್ರಾದೊಳಗೆ ನೋಡೋ
ಜಲದಾ ಕಣಾಗೆ ಬೆಳಾದಾವಲ್ಲಾ
ಜಾಡೇಯನೆಂಬೂವಾದೂ
ಮೀನಾ ಮೆಸ್ಟೇಗಾಳು

ಲಕ್ಷೀಯ ಗುಳ್ಳೇಗೋಳೂ
ಕಚ್ಚಿಗಂಡು ಅವೆ ಶಿವನೇ
ಮುಚ್ಚಿದು ಕಣ್ಣ ಮೂಗುಲು ಬಾಯಿ
ತಬೂಸ ಮಾಡುತಾರೇ
ದರುಮಾವತೀ ದ್ವಾರೇ
ರುಸಿಗೋಳಾ ಬಳಿಗೆ ಹೋಗಿ
ಅವರ ಎರಡ ಪಾದಾವ ಹಿಡಕಂಡೂ
ಬಿದ್ದು ಬೇಡೂತಾರೆ
ಕೇಳೀರಿ ಮಾಸ್ವಾಮಿ
ನಾನು ದರುಮಾವತೀಯ ರಾಜ
ರಾಜ್ಯ ಆಳುವ ದ್ವಾರೆ ನಾನೂ
ಆಂತಾ ದ್ವಾರೀಗೆ ಮಾಸ್ವಾಮೀ
ಪುತ್ರನಾ ಸಾಂತಾನುವಿಲ್ಲಾ
ಮಕ್ಕಳಾ ಬೋಗುವಿಲ್ಲಾ
ಒಬ್ಬುಳಲ್ಲಿ ಅಂತ ಹೇಳೀ
ಇಬ್ಬುರಾಳ ಮಡದೀರ ತಂದೆ
ಇಬ್ಬುರಾಳ ತಂದುರು ಮಾಸ್ವಾಮಿ
ಅವರ ಮದಿವ್ಯಾಗೀ ನಾನು
ಹದಿನಾರು ವರ್ಸವಾದ್ರು
ಕೇಳೀರಿ ಮಾಸ್ವಾಮೀ
ನನ್ನ ರಾಜಾ ಪಟ್ಟವನ್ನು
ಕಟ್ಟುದೋರು ಇಲ್ಲವಲ್ಲ
ನಾನು ಹೆಣ್ಣು ಗಂಡಿಗೆಲ್ಲ ಸ್ವಾಮಿ
ಆಡೀಕೆ ಆದೆನಲ್ಲಾ
ನೀರ ಬಂಜೆ ಆದೆ ಸ್ವಾಮಿ
ನನಗೆ ಪುತ್ರಾನ ಸಂತಾನಾವ
ನನಗೆ ಕೊಡಬೇಕೂ ಮಾಸ್ವಾಮಿ
ಅಂತಾ ಬಿದ್ದೂ ಬೇಡುಆತನೇ
ಬಿದ್ದೂ ಬೇಡಿದಾಗಾ

ಅವರ ಎರಡಾ ತಾರಾ ಹಿಡಕಂಡೂ
ರುಸಿಗೋಳು ಪಾದುದು ಮ್ಯಾಲೇ
ಹಣ್ಣು ಕಾಯಾ ಪೂಜೆಯ ಮಾಡೀ
ಅವುರಾನ ಪಾದುಕೆಲ್ಲಾ
ಹೂವಿನಾರ ದರಿಸುತಾರೇ
ದೂಪ ಮಂಗಳಾರೀತಿ ಮಾಡುತಾತೇ
ಮಂಗಳಾರಿತಿ ಮಾಡಿದು ಮ್ಯಾಲೇ
ಬಿದ್ದು ಬೇಡೂವಾಗ
ಆಗ ಸ್ವಾಮಿ ರುಸಿಗೋಳೂ
ಪಳಿಕ್ಕಾನೆ ಕಣ್ಣ ಬುಟ್ಟುರಲ್ಲಾ
ಕಣ್ಣಾ ಬುಟ್ಟು ನೋಡುತಾರೇ
ಯಾರಪ್ಪ ನಾರು ಮನುಸಾ
ಇಲ್ಲಿಗ್ಯಾಕೆ ಬಂದೇನೀನೂ
ಸ್ವಾಮಿಗೋಳು ಕೇಳುತಾರೇ
ಆಗ ದೋರೇ ನೋಡೋ
ಮಕ್ಕುಳು ಪಲ ಕೊಡುಬೇಕು ಸ್ವಾಮೀ
ರುಸಿಗೋಳ ಬಿದ್ದು ಬೇಡೂತಾನೇ
ಆಗ ಸ್ವಾಮೀಯು ರುಸಿಗೋಳೂ
ಕಿಲಕಿಲನೆ ನಗಾಡುತಾರೇ
ಕೀಲಿ ಕಿಲನೆ ನೆಗಾಡಿ ಕಂಡೂ
ಮೂರಾ ಅಕ್ಕಿ ಕಾಳ ತೀಕ್ಕಂಡುರಲ್ಲಿ
ರುಸಿಗೋಳು ಮಂತಿರೀಸಿ
ಮಂತೂರಿಸಿಗಂಡೂ
ಸಮುದ್ರಕೆ ವಗೆಯುತಾರೋ
ಸಮುದ್ರಾದೊಳಗೆ ನೋಡೋ
ಗಿಣೀ ಮಾವಿನ ಮಾರುವಲ್ಲಾ
ಮಾವಿನ ಮಾರ ಉಟ್ಟಲುತಾದೇ
ಮಾವಿನ ಮಾರ ಆಗಲುತಾದೇ
ಗೀಣೀ ಮಾವಿನ ಮರ ನೋಡೋ

ಕೊಂಬಿ ಕೊಂಬಿಗೆ ನೋಡೋ ಶಿವನೆ

ಕುಲಕು ಚಿತ್ತಾರಾದಾ

ಹಣ್ಣಾನೂ ಬಿಡೂತಾದೇ

ನಾವು ನಾಟಾಕಾದಲ್ಲೀ

ಹಣ್ಣುವಾದುರೆ ಬಿಡುತಾದೇ

ಹಣ್ಣು ಬಿಟ್ಟು ಮ್ಯಾಲೇ

ಸ್ವಾಮಿಗೋಳೂ

ಜೋಳೀಗೇಯ ಮಾಡುತಾರೇ

ದರುಮಾವತಿಯ ದ್ವಾರಿಗಲ್ಲಾ

ಜೋಳಿಗೇಯ ಕೊಟ್ಟುರಲ್ಲ

ಹೋಗಿ ಹೋಗೋ ಹೋಗೊ ರಾಜಾ

ಆವಾ ಮಾವೀನ ಮರದಲ್ಲೀ

ಜೋಳಿಗೇ ತುಂಬಾ ನೀನೂ

ಹಣ್ಣಾ ನೀನು ಕಿತುಕೊ ಬಾ ಅಂದುರಲ್ಲಾ

ದರುಮಾವತೀ ದ್ವಾರೇ

ಜೋಳಿಗೇಯ ತಕ್ಕಂಡಲ್ಲ

ಮಾವೀನ ಮರದ ಬಾಳಿಗೆ ಹೊಂದ್ರು

ಮಾವೀನ ಮಾರಾ ಹತ್ತಾಲುತಾರೇ

ಅವ್ವಾ ಜೋಳೀಗೇ ತುಂಬಾವಾ

ಮಾವಿನನ್ನ ಕುಯ್ಯಿಲುತಾರೇ

ರುಸಿಗೋಳ ಬಾಳಿಗೆ ಬಂದೂ

ಹಣ್ಣಾನಾದರೆ ಸುರಿಯುತಾರೇ

ಹಣ್ಣಾ ಸುರುದು ಮ್ಯಾಲೇ

ಜೋಳಿಗೆ ತುಂಬ ಇದ್ದ ಹಣ್ಣು

ಎಲ್ಲಾ ಮಾಯ ಆದುವಲ್ಲಾ

ಎರಡೇ ಎರಡು ಬಾಳಿಕಂಡೋ

ಬಾಕಿ ಹಣ್ಣು ಮಾಯವಾದೋ

ಆಗ ಸ್ವಾಮಿಯೂ ರುಸಿಗೋಳು

ರಾಜ ಹಣ್ಣ ಕುಯ್ಕಂಡು ಬಂದೇನೋ ನೀನು

ಕೇಳ ಕೇಳಿ ಮಾಸ್ವಾಮಿ

ಜೋಳಿಗೆ ತುಂಬ ಹಣ್ಣ ತಂದೆ

ನಿಮ್ಮ ಪಾದುಕೆ ಸುರಿಯೊವತಿಗೇ

ಹಣ್ಣೆಲ್ಲಾ ಮಾಯವಾದೋ

ಎರಡೇ ಎರಡು ಉಳಕೊಂಡೋ ಸ್ವಾಮೀ

ಆಗಲಾರದೆ ರುಸಿಗೋಳೂ

ಕೇಳೊ ಕೇಳೊ ರಾಜನೀನೂ

ನೂರಾ ಎರಡು ಹಣ್ಣು ನಿನಗೇ

ಆದುರೆ ಮಕ್ಕಾಳು ಆಗೊದುಂಟೇ

ಎರಡಾ ಮಕ್ಕಾಳೂ

ಪುತ್ರಾನ ಸಂತಾನ ಅಗೂತಾದೆ ಕೇಳೋ ರಾಜಾ

ಎರಡು ಮಕ್ಕುಳು ಪಾಲ ನಿನಗೆ

ಉಂಟು ಕಾನೋ ರಾಜ ನಿನಗೆ

ಆಗ ರುಸಿಗೋಳೂ

ಮಾವಿನಣ್ಣ ತಕ್ಕುಂಡುರಲ್ಲಾ

ಮಾವೀನ ಹಣ್ಣೀಗೇ

ಮಂತ್ರಾವ ಜಪ್ಪುತಾರೇ

ಮಂತ್ರವನ್ನು ಜಪ್ಪೀಸಲ್ಲಾ

ಪಿಂಡಾನ ತಿದ್ದುದಾರೋ

ಎರಡು ಮಾವೀನ ಹಣ್ಣೀಗೂವೆ

ಇವರು ಪೂಜೇಯ ಮಾಡುತಾರೇ

ಪೂಜೇಯ ಮಾಡಿದು ಮ್ಯಾಲೇ

ಆಹಾ ರುಸಿಗೋಳೂ

ದರುಮಾವತಿ ದ್ವೆರಿಗಲ್ಲಾ

ಕೈಯಾ ಎತ್ತಿ ಕೊಡುತ್ತಾರೇ

ದರುಮಾವತಿ ದೊರೆ ನೋಡೋ

ಅವನಾ ಬಗುಸೆ ಬಡ್ಡಿ ಇಸುಗಂಡಾ

ಹೋಗಪ್ಪ ರಾಜನೀನೂ

ಈವಾ ಹಣ್ಣಾನು ತಕ್ಕಂಡೂ

ನಿನ್ನ ಇಬ್ಬುರಾಳ ಮಡದಿಂಗೆ
ಆಳಿಗೊಂದೊಂದ್ ಹಣ್ಣ ಕೋಡೋ
ಅವುರು ಮೀದು ಮಡಿಯ ಉಟ್ಟು
ಮಾನೇ ವಳುಗೇ ಕೂತಗಂಡೂ
ಆಳಿಗೊನ್ನೊನ್ನೊಂದ್ ಹಣ್ಣ ಊಡ ಮಾಡಲಯ್ಯ
ಗುರು ಕೊಟ್ಟೆ ಪಾರುಸಾದ
ಆಲಂಕಾರ ಮಾಡುತೀಯ
ಅವುರ ಆತುಮ ಸಂತೋಷದಿಂದ
ಗುರುವಿನ ಹೆಸೂರು ಹೇಳಿಕೊಂಡು
ದೇವೂರು ಗ್ಯಾನ ಮಾಡಿಕೊಂಡು
ಒಂದೊಂದ್ ಹಣ್ಣಾ ಊಟಾವ ಮಾಡೀ
ಇಬ್ಬುರಾಳು ಮಡದಿರಿಗೂ
ಆಳೀಗೇ ಒಬ್ಬೊಬ್ಬಳೂ
ಇಬ್ಬುರಾಳು ಮಡಾದಿರಿಗೂ
ಒಂದೊಂದು ಗಂಡು ಮಗಿನ ಸಂತಾನ
ಸಂತಾನ ಆಗೂತಾವೆ
ಹೋಗಪ್ಪ ರಾಜನೀನೂ
ರುಸಿಗೋಳು ಆಸೀರ್ವಾದ ಕೊಟ್ಟುರಲ್ಲ
ಆಗ ದರುಮಾವತಿ ದೊರೆ ನೋಡೋ
ಮಕ್ಕಾಳ ಸಾಲ ಪಡುಕಂಡೂ
ಸಮುದ್ರಾವ ದಾಟಿದಾರೂ
ಸಮುದ್ರದಾಟಿ ಬರುತಾರೇ
ಬಾಳಾ ಕಷ್ಟಾದಿಂದಾವಾ
ದೊರಿಗೋಳೂ ಬಾರುತಾರೇ
ಇವುರು ಅಕ್ಕಕ್ಕ ತಂಗೇರು
ಆರುಮನೆ ಒಳುಗೆ ನೋಡೋ
ಜಗಾಳಾ ಮಾಡುತಾರೇ
ಒಬ್ಬುಳಿಗೊಬ್ಬಳು ನೋಡೋ ಶಿವನೇ
ಒಡೆದಾಡೀ ಕೆಡುವಾಡುತಾರೇ

ರಾಮಾನೆ ರಾಮ। ರಾಮಾನೋ ರಾಮ ॥

ವಡದಾಡಿ ಕೆಡುವಾಡಿಕೊಂಡು ರಕುತದ ಕೊಡಿ ಹರಿಯುತಾದೇ

ಮಯ್ಯೀ ಕೆಯೆಲ್ಲಾವ ರಕುತ ಹರಿಯುತಾದೇ

ಮುಂದು ಮುಂದಾಲೆ ಇಡುಕಂಡು ಉಡಾದಾಡುತವರಲ್ಲ

ಹಿರಿಯೋಳು ಜೀನಾವತಿಗೆ ಬಾರಿ ವಡುತಾ ಬಿದ್ದಾವೇ

ಕಿರಿಯೋಳು ರತುನಂಗಿ ವಡುತಾನ ವಡುದಾಳೊ

ಹೊಡೆದಾಡಿ ಕೆಡೂಡಿಕಂಡು ಅಕ್ಕಕ್ಕ ತಂಗೇರೂ

ಕಿರಿಯೋಳು ರತುನಂಗಿ  ನಿಮ್ಮ ಮನೆ ವಳುಗೆ ಇರೋದಿಲ್ಲಾ

ದರುಮಾವತಿಯ ದೊರೇ ದರುಮಾವತಿಯ ರಾಜಾ

ದರುಮಾವತಿಯ ದ್ವಾರಿಗೆ ಬರುಗಾಲ ರಾಜದಲ್ಲಿ

ಬರುಗಾಲ ರಾಜ್ಯದಲ್ಲಿ  ಅರ್ಥ ದೇಶಾವು ಇತ್ತೂ

ಅಲ್ಲೊಂದು ಅರುಮಾನೆ ಇರುವೋದು

ಕಿರಿಯೋಳು ರತುನಂಗಿ ಕಿರಿಯೋಳು ರತುನಂಗೀ

ಅವ್ರ ಅಕ್ಕ ಜೀನಾವತೀ ಕುಟ್ಟೇ

ನ್ಯಾಯೂವ ಮಾಡಿಕಂಡು ನನ್ನ ಗಂಡುನತಾವ ನೀನೊಬ್ಬಳೆ ಈರೇ

ನಾನು ಬೇರೆಯೇ ಈರುತೀನಿ ಬಡಗಾಲ ದೇಸುಕೆ ಹೋಗಿ

ಬಡಗಾಲ ರಾಜ್ಯಕ್ಕೆ ಕಿರಿಯೋಳು ಹೋಗುತಾಳೆ

ಬಡಗಾಲ ರಾಜ್ಯದಲ್ಲಿ ಅರುಮಾನೆ ಸೇರಿಕಂಡ್ಲು

ದರುಮಾವತಿ ರಾಜುರು ಪಟ್ಟುಣದಲ್ಲಿ ಹಿರಿಯೋಳು ಜೀನಾವತಿ ।

ಒಬ್ಬುಳೇ ಅವುಳಲ್ಲ ಹಿರಿಯೋಳು ಜೀನಾವತೀ

ಅಷ್ಟೊತ್ತಿಗೆ  ದರುಮಾವತಿಯ ದ್ವಾರೇ

ಮಕ್ಕಳ ತಲ ಬೇಡಿಕಂಡೂ ಅರುಮನೆಗೆ ಬರುತಾರೇ

ಎಲ್ಲಾಲೆ ಜೀನಾವತಿ ನಿನ್ನ ತಂಗಿ ರತುನಂಗೀ

ಅರುಮಾನೆ ವಳುಗೆ ರಕುತ ಚೆಲ್ಲಾಡಿರುವೋದೂ

ನಿನ್ನ ತಂಗೀಯ ರತುನಂಗಿ ಎಲ್ಲೀಗೆ ವಾದಾಳೇ

ಜೀನಾವತಿಯು ರಾಜುರು ಕುಟ್ಟೆ ಆಳುತಾವ ಹೇಳುತಾಳೇ

ಕೇಳೀರಿ ಮಾಸ್ವಾಮಿ ನನ್ನ ಕುಟ್ಟೆ ವಡದಾಡಿ ಕೆಡುವಾಡಿಕಂಡು

ನಾನು ಬ್ಯಾರೇಯ ಹೋಗುತಿನಿ ಅಂತ ಬಡಗಾಲ ರಾಜ್ಯಕೆ ವಾದುಳಿಲ್ಲ

ಆಗ ದರುಮಾವತಿ ರಾಜ ಕಡಿ ಕಡಿ ಕ್ವಾಪವ ತಾಳುತಾನೇ

ಕೇಳಾಲೆ ನನು ಮಡದೀ ಈವತ್ತೀನ ರಾತುರೇಯ

ಹಸುದು ಹಣಾಸುಲುವ ಮೀದು ಮಡಿಯಾ ಉಟ್ಟು

ಇದು ಗುರು ಕೊಟ್ಟ ಪಾರುಸಾದ ಅಲಂಕಾರ ಮಾಡಬ್ಯಾಡಾಕಾನೆ

ಈವಾಗ ಹಣ್ಣನ್ನು ಊಟಾವ ಮಾಡೇ ಹೆಣ್ಣೆ

ನಿನಗೆ ಒಂದೂ ಗಂಡೂ ಮಗಿನ ಪಲವೇಯ ಆಗುತಾದೆ

ಇನ್ನೊಂದು ಹಣ್ಣ ಆವಾ ತಾಗಂಡೂ ನೀನೂ

ನಿನ್ನಾವ ತಂಗೀಗೆ ಒಂದು ಹಣ್ಣಾನ ಕೊಡುವೋಗೇ

ಆಗಾಲೇ ಜೀನಾವತಿ ಹಸುದು ಹಣ್ಣಸುಲುದು ಮೀದು ಮಡಿಯ ಉಟ್ಟು

ಗುರುವೀನ ಹೆಸರ ಹೇಳಿ ದೇವುರು ಭಕ್ತಿಯ ಮಾಡಿ

ಒಂದಾ ಮಾವಿನ ಹಣ್ಣ ಊಟಾವ ಮಾಡುತಾಳೆ

ನನ್ನಾನ ತಂಗೀಗೆ ಒಂದು ಸಂತಾನ ಆದುರೆ ಸಾಕು

ಅಂತ ಹೇಳಿ ಒಂದು ಹಣ್ಣಾನ ತಕ್ಕಂಡು

ಬಡುಗಾಲ ರಾಜ್ಯಕ್ಕೆ ಹೋಗುತಾಳೆ ಜೀನಾವತಿ

ಬಡುಗಾಲ ರಾಜ್ಯುದಲ್ಲಿ ಅರುಮಾನೆ ಬಾಗುಲಲ್ಲಿ

ಅರುಮಾನೆ ಬಾಗುಲಲ್ಲಿ ಏಳು ಜನ ಸಕಿಯಾರು

ಏಳು ಜನ ಸಕಿಯೋರು ಪಾರಾವ ಅವುರಲ್ಲಿ

ಅರುಮಾನೆಯ ಮುಂದೆ ಆರಾಮು ಕುರ್ಚಿಯ ಮ್ಯಾಲೇ

ಆರಾಮು ಕುರ್ಚಿಯ ಮ್ಯಾಲೆ ಕುತುಗಂಡು ಗಾಳಿ ಹಾಡ ತಾಗುತಾಳೆ

ಅಸ್ಟೊತ್ತಿಗೆ ಜೀನಾವತಿ ಅರುಮನೆ ಬಾಗುಲಿಗೆ ವಾದುಳಲ್ಲಾ

ಅವುರ ಅಕ್ಕ ಹೋಗಾದ ನೋಡಿದಳು ರತುನಂಗೀ

ನನ್ನಾನ ಸವುತಿ ಮತ್ತಾಕೆ ಬಂದುಳೊ ಕಾಣೇ

ಅವುಳು ಮಾರೆಯ ತಿರುವಿಕಂಡು ಅರುಮನೆಗೆ ವಾದುಳಲ್ಲಾ

ರತುನಂಗಿ ಅರುಮನಿಗೆ ಹೋದಾಳು ಹಿರಿಯೋಳು ಜೀನಾವತಿ

ಅವುಳ ಅರಮನಿಗೆ ಹೋಗಿ ಕ್ವಾಣೆ ಬಾಗುಲಲ್ಲಿ ನಿಂತುಗಂಡು

ಕೊಳ್ಳಾಲೆ ನನು ತಂಗಿ ಗುರು ಕೊಟ್ಟ ಪಾರುಸಾದ

ನೀನೊಂದ ಹಣ್ಣಾ ಊಟಾವ ಮಾಡಿಕೇಳೇ

ನಾನೊಂದು ಹಣ್ಣಾ ಊಟಾವ ಮಾಡೀದೇ

ನೀನೊಂದ ಹಣ್ಣಾ ಊಟಾವ ಮಾಡಿಕೊಳ್ಳೋ

ನಿನ್ನ ಹೊಟ್ಟೇಲಿ ಒಂದು ಸಂತಾನಾದುರು ಸಾಕು

ಗುರುಕೊಟ್ಟ ಪಾರುಸಾದ ಅಹಂಕಾರ ಮಾಡುಬೇಡ

ಹಿರಿಯೋಳು ಜೀನಾವತಿ ಹಣ್ಣಾನ ಕೊಡುತಾಳೇ

ಆಗ ಕಿರಿಯೋಳು ರತುನಂಗಿ ಹಣ್ಣಾನ ನೋಡಿ

ಯಾರು ಕೊಟ್ಟರು ನಿನಗೆ ನಾಡಾ ಮಾವಿನ ಕಾಯಾ

ನಾಡಾ ಮಾವೀನ ಕಾಯಲ್ಲಿ ಮಕ್ಕಾಳಾಗಾದು ಉಂಟೇ

ಯಾವ ಗುರುವು ಕೊಟ್ಟೆನೆ ನಿನಗೆ ಯಾವ ಗುಡ್ಡಾ ಕೊಟ್ಟೆನೆ ನಿನಗೆ

ಕೇಳಕ್ಕ ಹಿರಿಯಕ್ಕ ನಾಡಾ ಮಾವೀನ ಕಾಯಿಗೆ

ನಾಡಾ ಮಾವಿನ ಕಾಯಿಗೆ ಇಸುವಾನ ತುಂಬಿಕಂಡು

ಇಸುವಾನ ತುಂಬಿಕಂಡು ಇಲ್ಲಿ ಬಂದಿದೀಯ

ನನ್ನಾನ ಗಂಡುಂತಾವ ನೀನ ಬಟ್ಟಾಳೆ ಈರುವಾಕೆ

ಬಂದೀದಿಯೇನೇ ಹಿರೀಯಕ್ಕಾ ನೀನೂ

ಆದ ತುಂಡುಗೋಡೆಯ ಮೇಲೆ ಬಡಿದೋಗೆ ಅಂದಾಳು

ಮಾವಿನಹಣ್ಣ ತುಂಡು ಗೋಡೆಯ ಮ್ಯಾಲೆ ಮಡಗಿದಳು

ಹಿರಿಯೇಳು ಜೀನಾವತಿ ಅವುಳ ಪಟ್ಟುಣಕೆ ಬಂದಳಲ್ಲಾ

ಕಿರಿಯೇಳು ರತುನಂಗಿ ಮಾವೀನ ಹಣ್ಣನ್ನು

ಅವುಳ ಕೆಯಾನ ತೊಳಿಲಿಲ್ಲ ಅವುಳ ಬಾಯಾನ ತೊಳಿಲಿಲ್ಲ

ಮಾವಿನಣ್ಣ ತಗುದು ತುದಿಯ ಅಲ್ಲಲ್ಲಿ ಕುಕ್ಕುತಾಳೇ

ತುದಲ್ಲಲ್ಲಿ ಕುಕ್ಕಿದಾಗ ಬಾಯೊಂದು ಬಾಯೆಲ್ಲ

ಬಾಯೊಂದು ಬಾಯೆಲ್ಲ ಇಸುದು ಪಾಶಾಣ ಆಗುತಾದೆ

ಅಹಂರಾ ಮಾಡಿಕಂಡು ಮಾವಿನಹಣ್ಣ ಇದ ಅಂದುಳಲ್ಲಾ

ಅಂಗೇಯ ಅವುಳೀಗೆ ಇಸುದು ಪಾಶಾಣ ಆಗುತಾದೆ

ಮಾವೀನ ಹಣ್ಣ ತಗುದು ಬೀದೀಗೆ ವಗುದಾಳೂ

ತಂದುನಾನು ತಾನಂದಾನಾನ ॥

ಬೀದಿಗೆ ವಗುದ ಮಾವೀನ ಹಣ್ಣಲ್ಲೋ

ಬೀದೀಗೆ ಬೀಳುಲಿಲ್ಲ ಗಗುನದ ಮ್ಯಾಕೆ ಆರುತಾದೆ

ಗಗುನುಕ್ಕೆ ಮ್ಯಾಕೆ ಆರಿ ಅವುಳ ಅರುಮಾನೆ ಮ್ಯಾಲೇ

ಅವುಳ ಅರುಮನೆ ಮ್ಯಾಲೆ ಮೂರು ಸುತ್ತಿ ಸುತ್ತುತಾದೆ

ಗಿರಿಗಿರಿನೆ ಮೂರು ಸುತ್ತ ತಿರುಗೆಲ್ಲೋ

ಮೂರು ಸುತ ತಿರುಗೆಲ್ಲೋ ಜೀನಾವತಿ ಅರುಮನಿಗೇ

ಜೀನಾವತಿ ಅರುಮನೆ ಕಡಿಕೆ ಹಣ್ಣು ಮಕಾನಾಯ್ತಲ್ಲಾ

ಮೇಗುದಲ್ಲಿ ಮೋಗುತಾದೆ ಜೊಯ್ಯ ಜೊಯ್ಯನೆ ಮೋಗುತಾದೇ

ಜೀನಾವತಿ ಅರುಮನಿಗೆ ಹಣ್ಣುನಾದುರೆ ಹೋಗುತಾದೆ

ಅವುಳ ಮನುಗುವಂತಾಹ ಪಟ್ಟೆ ಮಂಚುದು ಮ್ಯಾಕ್

ಪಟ್ಟಿ ಮಂಚುದು ಮ್ಯಾಕೆ ಹಣ್ಣೊ ಹೋಗಿ ಬೀಳುತಾದೇ

ಜೀನಾವತಿ ಮಂಚುದು ಮ್ಯಾಲೆ ನೋಡುತಾಳೇ

ಹಣ್ಣಾ ನೋಡೋ ಮಂಚುದು ಮ್ಯಾಲೆ ಬಿದ್ವಾದೆ

ಹಣ್ಣು ತಗುದು ನೋಡುತಾಳೇ ಕುರಿಹಲ್ಲಲ್ಲಿ ಕುರಿಕ್ಯಾಳೇ

ನನ ತಂಗಿ ರತುನಂಗಿ ಅಹಂಕಾರ ಮಾಡಿದ್ಲು

ಎಲ ಗುರು ಕೊಟ್ಟ ಪಾರುಸಾದ ಅಹಂಕಾರ ಮಾಡ್ಯವಳೇ

ಹಣ್ಣು ಬಂದು ಇಲ್ಲಿ ಬಿದ್ವಾದೆ ಬಗುವಂತ

ಅದುನೂವೆ ತಕ್ಕಂದು ಕಣ್ಣಿನ್ ಮೂಗ್ಗೆ ವತಿಗಂಡ್ಲು

ಹಣ್ಣಾನ ತಕ್ಕಂಡು ಪೂಜೇಯ ಮಾಡುತಾಳೇ

ಅದುನೂವೆ ಹಣ್ಣಾ ಊಟಾವ ಮಾಡುತಾಳೇ

ಎರಡೂನೂ ಹಣ್ಣಾನಾ ಊಟಾವ ಮಾಡಿದುಳು

ಊಟಾವ ಮಾಡಿ ತಿಂಗೂಳು ತುಂಬಿತಲ್ಲ

ರಾಮಾನೇ ರಾಮ ರಾಮನೋ ರಾಮ ॥

ಜೀನಾವತಿಗೆ ನೋಡೋ ಶಿವನೆ – ತಾನ ಎನ್ನಲಿ

ತಿಂಗಾಳು ತುಂಬಿದು ಮ್ಯಾಲೇ

ಹಿರಿಯೋಳು ಜೀನಾವತ್ಗೀ

ನೀರೂ ನಿಲ್ಲೂತಾವೇ

ನೀರೇ ನಿಂತಾವಲ್ಲಾ

ತಿಂಗಳೂ ತುಂಬಿ ಬಂತೂ

ಎರಡು ತಿಂಗಳಾಯಿತಲ್ಲಾ

ಮೂರಾ ತಿಂಗಾಳಾದುವಲ್ಲಾ

ನಾನು ತಿಂಗುಳು ತುಂಬಿಬಂತಲ್ಲ

ಐದು ತಿಂಗಳಾನಿವಾರಾ

ಆರು ತಿಂಗಳ ಗರ್ಭ ನಿಂತೂ

ಏಳು ತಿಂಗಳು ತುಂಬೇ ಬಂತೂ

ಎಂಟು ತಿಂಗಳು ಬಿಮ್ಮನಿಸಾದ್ಲೂ

ಎಂಟಾ ತಿಂಗಳಾನಿವಾರಾ

ತುಂಬಾ ಬಿಮ್ಮನಿಸಾದುಳಲ್ಲಾ

ಎಂಟಾ ತಿಂಗಳು ತುಂಬಿದುಮ್ಯಾಲೇ

ತುಂಬಾ ಅನಿವಾರ ಆಗ್ಯಾರೇ

ಒಂಬತ್ತು ತಿಂಗಳು ಅನಿವಾರುವಲ್ಲೋ

ತುಂಬಾ ಅನಿವಾರಾ

ಆಗಲಾದರೇ ಜೀನಾವತೀ

ದರುಮಾವತೀ ದ್ವಾರೇ

ಬಾಳ ಇದಿಲಿ ಎಚ್ಚಲಗಾಣುತಾನೆ

ಅವುಳಿಗೆ ಏಳು ಜನ ಸರೆಯೋರು

ಅವಳಿಗೆ ಪಾಠ ಮಾಡಗಾಕಾರೇ

ಆಗಲಾದರೆ ದೊರೆಸಾನೀ

ಅವ್ವ ಬಲ್ಲಿರವ್ವ ಗವಡೀರ

ಬಲ್ಲೀರಮ್ಮ ಸಕಯೋರ

ಕೇಳಿರಮ್ಮ ಗವಾಡೀರ

ಇದು ಪಾಪೀಯ ಹೆಣ್ಣು ಜಲುಮಾ

ಏನೇನಾ ಬಾಗಿಸಾದೋ

ಬಲ್ಲೀರಮ್ಮ ಗವುಡೀರ ಏಳು ಜನ ಸಕಿಯೋರ

ಹಾಲಿನ ಅನ್ನ ಕೆನಿಮಸರ ಬಗಿಸಿದಿನಿ

ಬ್ಯಾಗಾನೆ ನನಿಗೆ ವದಗಿಸಿ ಕೊಡಿರವ್ವ

ನನ್ನ ಬಾವುಗೆ ತೀರೀಸಿ ಕೊಳ್ಳುತೀನಿ।

ಕೇಳಿರಮ್ಮ ಸಕಿಯೋರಾ ಕೇಳಿರಮ್ಮ ಗೌಡೀರಾ

ಇದು ಹಾಳಾದ ಹೆಣ್ಣು ಜಲುಮ ಮತ್ತೇನ ಬಗಿಸ್ಯಾದೇ

ಎಳ್ಳು ಸೂಸಲು ಗಡುಬ ಬಗಿಸಿದೀನಿ ಸಕಿಯೋರಾ

ಏಳುಜನಾ ಸಕಿಯೋರು ಏಳ್ಳುಸೂಸಲು ಗಡುಬ

ದೊರೆಸಾನಿಗೆ ಬಾವುಣಿಕೆ ತೀರಿಸಿ ಕೊಡುತಾರೇ

ಮತ್ತೇ ಜೀನಾವತೀ ಮತ್ತೇನ ಬಗಿಸ್ಯಾಳು

ಕೊರುಳೀಗೆ ಕಂಠೀಯ ಹಾರಾವ ಬಗಿಸ್ಯಾಳೇ

ಕಂಠೀಯ ಹಾರಾವ ಅವಳ ಕೊರಳೀಗೆ ದರಿಸ್ಯಾರೋ
ಜೀನಾವತೀ ಬಾವುಣಿಕೆ ತೀರಿ ಬಂತಲ್ಲಾ
ನವನಾರು ಒಂಬತ್ತು ತಿಂಗುಳೀಯ ತುಂಬಿತಲ್ಲ
ತಾನು ಎನುದೇವಾ ರಾಮುರು ಮನುದೇವಾ ॥
ಜೀನಾವತಿಗೆಲ್ಲಾ ಒಂಬತ್ತು ತಿಂಗ್ಳೂ
ಒಂಬತ್ತು ತಿಂಗ್ಳೂ ತುಂಬೂತ ಬಂತಲ್ಲ
ಜೀನಾವತಿಗೆಲ್ಲಾ । ಕಲ್ಯಾಣದೇವಾ ॥
ಕಷ್ಟವೇ ಆಗುತಾದೇ । ಕಲ್ಯಾಣದೇವಾ ॥
ಅಮ್ಮ ಬಲ್ಲಿರಮ್ಮ ಸಕಿಯೋರಾ
ನನ್ಗೆ ಜೀವ್ಕೆ ಚಂದಾಗಿಲ್ಲಾ
ನನ್ಗೆ ಗಳಿಗಳಿಗೆ ಜಗ್ಗುಜಗ್ಗಾನೆ
ಕುರಿ ಬೆವುರು ಬೆವುರೀತೀನಿ
ಅಮ್ಮ ಬಲ್ಲೀರೇ ಗೌಡೀರಾ
ನನ್ಗೆ ಸೊಂಟಾದ ವಡುಕಲ್ಲಿರೇ
ನನಿಗೆ ಬೆನ್ನೀನ ಚಳುಕಲ್ಲೀರೇ
ಗಳಿಗೆ ಜಣುಕು ಜಣ್ಣಾಕೇ
ಕತ್ತೀಲಿ ಕಡುದಂಗೆ ಆಗುತಾದೇ
ಕೊಡ್ಲೀಲಿ ವಡುದಂಗೆ ಆಗುತಾದೇ
ನಾನು ತಡೀಲಾರೆ ತಾಳುಲಾರೇ
ಅಮ್ಮ ಸೂಲಿಗಿತ್ತಿ ಕರೀರವ್ವ
ಆಗ ಏಳು ಜನ ಸಕಿಯೋರು
ಅವುರು ದರುಮಾವತೀ ರಾಜೂಗೇ
ದೂರಾ ಹೇಳೂತಾರೇ
ಆವ ಕೇಳೀರಿ ಮಾಸ್ವಾಮೀ
ಮಾರಾಣೇ ಯಾರಿಗೇ
ಅವ್ರುಗೆ ಕಸ್ಟಾವೇ ಆಗ್ಯಾದೇ
ಬ್ಯಾಗನೆ ಸೂಲಿಗಿತ್ತೀಯಾ
ಸ್ವಾಮಿ ಕಳಿಸಿ ಕೊಡುಬೇಕು
ಆಗ ರಾಜಾ ರಾಜಾನೂ

ಬಾಳ ಇದಿಲಿ ಎಟ್ಟಾಲುಗೊಂಡೂ

ಮಂತ್ರೀಯ ಕರಸೀದನೂ

ಅಪ್ಪ ಬಾರಪ್ಪ ನನು ಮಂತ್ರೀ

ಸೂಲಿಗಿತ್ತಿ ಕರದುಕೊಂಡೂ

ಅರಮನಿಗೆ ಕಳ್ಳಿಬಾರೋ

ಮಂತ್ರಿ ಸೂಲಿಗಿತ್ತಿ ಕರಿಯಾಕೇ

ಮೂಡಲಾ ರಾಶ್ಯಕ್ಕೆ ಹೋಗುತಾನೇ

ಅವುಳು ಸೂಲುಗಿತ್ತೀಯಾ

ಅವುಳು ಗಾಣಿಗುರು ಗಂಗಮ್ಮಾ

ಅವುಳು ಎಲ್ಲಮ್ಮ ದೇವುರ ಸೂಳೇ

ಅವುಳು ಹಣ್ಣನ್ನು ಮುದಿಕ್ಯೆಲ್ಲೋ

ಹಲ್ಲು ಬಿದ್ದು ಬೆನ್ನು ಬಾಗ್ಯಾದೋ

ಅವ್ವು ಸೂಲಿಗಿತ್ತಿ  ಗಂಗಮ್ಮ

ಅರುಮಾನಿಗೆ ಕಾರುಕಂಡೂ

ಕಳಸೀದಾ ಮಂತ್ರೀ

ಆಗ ಸೂಲಗಿತ್ತಿರುಮನಿಗೋಗೊ

ಮಾರಾಣಿಯೋರಾ

ಮನಿಗೀರೋ ರೂಮಿಗೆ ಹೋಗುತಾಳೇ

ಮಾರಾಣೀಯ ನೋಡುತಾಳೇ

ಆಗಲೇಯ ಮಾರಾಣೀ

ಸೂಲಗಿತ್ತೀಗೇ

ಅವ್ವ ಕೇಳವ್ವ ಸೂಲಿಗಿತ್ತೀ

ನನಿಗೆ ನೀನೇ ತಾಯೀ ತಾನೇ

ನನ್ನ ಕಸ್ಟಾ ನಿವಾರ್ಣೆಗೆ ಮಾಡೇ

ಕಸ್ಟಾ ನಿವಾರ್ಣೆ ಮಾಡಿದಾರೇ

ಉಣ್ಣೋ ಗಂಗ್ಳಾವ ಕೊಡುತೀನಿ

ವದೀಯೋ ಜಾಡೀಯ ಕೊಡುತೀನಿ

ನನ್ನ ಕೈಯಲ್ಲಿ ಏಳಿಸಿ ಹೊನ್ನಾ ಕೊಡುತೀನಿ

ಸೂಲಿಗಿತ್ತಿಗೆ ಒಪ್ಪಂದ ಮಾಡಿದಾಳೋ

ಆಗಲೇ ಸೂಲಿಗಿತ್ತೀ

ಮಾರಾಣೀಯರಿಗೇ

ಅವುಳು ಎಷ್ಟೇ ವತ್ತುತಾಳೇ

ಬುಜುವಾ ನೀವುತಾಳೇ

ಸೂಲೀಗಿತ್ತಾಳೋ

ಮಾರಾಣಿಯರಿಗೋ

ಇನ್ನು ಐದು ನಿಮಿಷಾವು

ಅಯ್ಯ ಜರಣಾಗೂ ಸಮಯಾತು

ಜರುಣಾವೆ ಆಗುತಾದೇ

ಯವ್ವ ಗಂಡು ಮೊಗ ಉಟ್ಟುತಾದೇ

ಕೇಳಿರೇ ಸರೆಯೋರಾ

ಗಂಡು ಮೊಗ ಅಂತಾವಾ

ಗಂಗ್ಗಾವ ಬಾರಿಸಿದುರೇ

ಸಕೀಯೋರೇ

ಮಗುವ ತಗಂಡು ವೋಗಿ ।

ಬೆಚ್ಚ ನೀರಾ ಹಾಕುತಾರೇ

ಬಂದು ಮರಕೆ ಮನುಗುಸುತಾರೇ

ಮತ್ತೇ ಜೀನಾವತೀಗೇ

ಮತ್ತೊಂದು ಗಂಡು ಮೊಗಾ

ಆಹಾ ಜರಣ ಅಯಿತಲ್ಲಾ

ಅವುಳಿ ಜವಳಿ ಎರಡೂ

ಗಂಡೂ ಮಕ್ಕಳು ಆದುವಲ್ಲಾ

ದರಮಾವತಿ ರಾಜುಗೆಲ್ಲಾ – ತಾನ ಎನ್ನಲಿದೇವಾ

ದೂರಾ ಕಳುವಲುತಾರೇ

ಸ್ವಾಮಿ ಎರಡು ಮಕ್ಕಳು ಉಟ್ಟಿದುವಂತಾ

ರಾಜುಗೆ ದೂರಾ ಹೇಳಿದಾರೂ

ದರುಮಾವತಿ ದೊರೆ ನೋಡೋ

ಎರಡು ಗಂಡು ಮಕ್ಕಾದುವಂತಾ

ಬಾಳಾ ಇದಿಲಿ ಎಚ್ಚಾಲುಗಾಗುತಾನೇ

ಮಂತ್ರೀಯ ಕಾರುದಾನೂ

ಕೇಳೇ ಕೇಳೋ ಮಂತ್ರಿ ನೀನೂ

ನಿನ್ನ ತಂಗೇಯ ವಟ್ಟೇ ವಳೂಗೇ

ಎರಡು ಗಂಡು ಮಕ್ಕಳು ಉಟ್ಟಿದುರಂತೆ

ಮಗುವಾ ಬಾಣುತೀಯಾ

ಸೋಡಿಕಂಡೂ ಬರೂವೋನಾ

ರಾಜಭೂತಿ ಮಂತಿರೀವೇ

ಅರುಮನೆಗೇ ವೋಗುತಾರೇ

ಮೋಗಾ ಬಾಣತಿ ನೋಡುತಾರೇ

ಬಾಳ ಇದಿಲಿ ಎಚ್ಚಲುಗೊಂಡರಲ್ಲಾ

ಆಗ ಆ ಸೂಲಿಗೀತ್ತೀಗೆ

ತಕ್ಕಾದ ಬಹುಮಾನ ಕೊಟ್ಟೂ

ಅವುಳಾ ಆರೂಮನಿಗೆ ಕಳಿಸಿದುರು

ಏಳುಜನ ಗವಡೀರೂ

ಮಾರಾಣೀ ಯಾರೀಗೇ

ಸೌಕಾರ್ಯವ ಮಾಡುತಾವರೇ

ರಾಮನೋ ರಾಮ ರಾಮಾನೇ ರಾಮಾ ॥

ಮಕ್ಕಳು ಬಿಟ್ಟಿದು ಮ್ಯಾಲೇ ದರುಮಾತೀಯ ದ್ವಾರೇ

ಬಾರಾಪ್ಪ ಮಂತ್ರಿ ನ್ನ ದೇವುತನ ಪಾರುದಾನೀ

ಮಕ್ಕಳು ಹುಟ್ಟೀರೋ ನಗುಚಿತ್ರ ಕೇಳಬೇಕು

ನಗುಚಿತ್ರ ಕೇಳಬೇಕೂ ದೋಸುರ ಕರ್ಕಂಡು ಬಾರೋ

ನಮ್ಮ ಅರುಮಲ್ಲಿ ಇರುವಂತ ಪೂರೈತ್ರ ಕರ್ರು ಬಾರೋ

ಮಂತೀರಿ ಹೋಗಿ ದೋಸುರ ಕರ್ಕಂದು ಬಂದ

ಜಂಗುಮೂರು ಬಂದರಲ್ಲ ಪೂರೈತುರು ಬಂದುರಲ್ಲಾ

ಬಂದಂತ ಐನೋರ ಪಂಚಾಂಗ ಪೂಜೇಯ ಮಾಡೀ

ಪಂಚಾಂಗ ಪೂಜೇಯ ಮಾಡಿ ಮಕ್ಕಾಳು ಹುಟ್ಟಿರುದೋ

ಮಕ್ಕಳು ಹುಟ್ಟಿರುದೋ ನಗುಚತ್ರ ಹೇಳುತಾರೇ

ಕೇಳಯ್ಯ ಎಲೆ ರಾಜಾ ದುರುಮಾವತಿಯ ದೊರೇ

ಮಕ್ಕಳು ಹುಟ್ಟೀರೋ ನಗು ಚತ್ರಾವ

ಚಂದಾಕಿಲ್ಲ ಕಾನೋ ಮೂಲೇ ನಗುಚತ್ರದೊಳಗೇ
ಮೂಲೆ ನಕ್ಷತ್ರುದಲ್ಲಿ ಮಕ್ಕಳೊ ಹುಟ್ಯಾವೇ
ಎರಡೂವೆ ಮಕ್ಕಳೀಗೂ ಮುಂದೆ ಬಾಳ ಕಷ್ಟ ದೊರ್ಕುತಾದೇ
ಕೇಳೀರಿ ಮಾಸ್ವಾಮಿ ಕೇಳೀರಿ ಐನೋರೇ
ಮಕ್ಕಳಿಗೆ ಕಸ್ಟ ದೊರಕಿದರು ದೊರಕಾಲೇ ಪ್ರಾಣ ಹಾನೀ ನೋಡೀ ।
ಕೇಳಿಯ್ಯ ಮರಾಜಾ ಮಕ್ಕಳು ಮುಂದೆ ಸುಕುವಾಗಿ ಬಾಳುತಾರೇ
ಮಕ್ಕಳಿಗೆ ನಾಮಕರಣ ಯಾವತ್ತಿಟಬೇಕು ನೋಡಿಸ್ವಾಮೀ
ಸ್ವಾಮಾವಾರಾ ದಿವ್ಯಾ ಒಂಬತ್ತು ಗಂಟೇಗೇ
ಒಂಬತ್ತು ಗಂಟೆ ರಾತ್ರೀಗೆ ಮಕ್ಕಳೀಗೆ ಹೆಸ್ರಾನ ಕಟ್ಟಬೇಕು
ದೋಸುರು ಪಂಚಾಂಗದಲ್ಲೇಳುತಾರೇ
ಬಂದಂತ ಐನೋರಿಗೇ ಖೋಮಾನಾ ಕೊಟ್ಟು
ದಾನ ದಕ್ಷಾಣೆ ಕೊಟ್ಟು ಅವುರ ಅರಮನಿಗೆ ಕಳಿಸ್ಯಾರೇ
ಆಗ ದರುಮಾವತಿಯ ರಾಜಾ ಮಕ್ಕಳಿಗೆ ನಾಮಕರಣ ಇಡುತಾನೇ
ಅವ್ವ ಗಾಣೀಯ ತುದೀಗೆ ಹೊನ್ನಾವ ಕಟಿಗಂಡಾ
ಪಟ್ಟುಗಾರ ಬೀದಿಲೆಲ್ಲಾ ಸಾರಾನ ಕೊಡುತಾನೇ
ತಂದನಾನು ತಂದೆ ॥
ಮಂತೀರಿ ನೋಡೀಯ ಪಟ್ಟುಣದ ಬೀದಿವಳುಗೇ
ಪಟ್ಟುಣಾದ ಬೀದಿವಳುಗೆ ಸಾರಿ ಕೊಂಡೋಗುತಾನೇ
ಹಾರುವರ ಕೇರೀಲಿ ಸಾಕುತಾನೆ ಜೇನುರು ಬೀದೀಲಿ ಸಾರುತಾನೆ
ಮೈಸೂರು ಕೇರೀಲಿ ಸಾರುತಾನೇ ಉತುಮಾ ಕೇರೀಲಿ ಸಾರುತಾನೆ
ವಕ್ಕಲಿ ಬೀದೀಲಿ ಸಾರುತಾನೇ ಸಾಬುರು ಕೇರೀಲಿ ಸಾರುತಾನೆ
ಸ್ವಾಮುವಾರ ದಿವ್ಸಾ ಒಂಬತ್ತು ಗಂಟೆ ರಾತುರೇಗೆ
ರಾಜೂರ ಅರಮನೆ ಒಳಗೆ ಮಕ್ಕಳಿಗೆ ನಾಮಕರಣ ಇಡುತಾರೇ
ಕುಲ ಹದಿನೆಂಟು ಜಾತೋರು ಎಲ್ಲಾವಾ ಬರಬೋದೂ
ಚೇರ್ ಬೇಕಾದಂತವ ದಾನಾವಾ ದಕ್ಷಾಣೆ ಕೊಡುತಾರೇ
ತಿರುಕರಿಗೆ ಅರುಕರಿಗೆ ಅನ್ನುದಾನಾ ಮಾಡುತ್ತಾರೇ
ಪಟ್ಟುಣಾದ ಬೀದಿವಳುಗೆ ಸಾರಿಕೊಂಡು ಹೋಗುತಾನೆ
ಒಬ್ಬತ್ತು ಗಂಟೆ ರಾತುರೇಗೆ ಮಕ್ಕಳಿಗೆಸರ ಕಟ್ಟುತಾರೇ
ಬಂದಂತ ಜನುಕೆಲ್ಲ ದಾನ ದಕ್ಷಿಣೆ ಮಾಡುತಾರೇ

ತಿರುಕಾರಿಗರು ಗಾರಿಗನ್ನದಾನ ಮಾಡುತಾರೆ
ಬಂದಾಂತ ಜನುಕೆಲ್ಲಾ ಸಕ್ರೆ ಪನಿವಾರ
ಸಕ್ರೇಯ ಪನಿವಾರ ಮಾಡುತಾರೆ ರಾಜೂರು
ರಾಮಾನೋ ರಾಮ ॥
ದಾನ ದಕ್ಷಿಣೆ ಕೊಟ್ಟು ರಾಜರಾ ಎರಡು ಮಕ್ಳಿಗೆ
ರಾಜೂರು ಮಕ್ಕಳೀಗೆ ಹೆಸ್ರುನ ಇಡುತಾರೇ
ಹಿರಿಯಾನ ಮಗುನಲ್ಲೋ ಬಸೂವೂ ರಾಜಾ ದ್ವಾರೆ
ಗುಮಾರ್ ದ್ವಾರೆ ಅಂತ ಹೆಸ್ರಾನ ಕಟುತಾರೆ
ಕಿರಿಯಾನ್ ಮಗುನಲ್ಲೇ
ಕಿರಿಯಾನ ಮಗನ ಹೆಸ್ರು ಅಡವಿ ಕುಮಾರ್
ಅಡವಿಕುಮಾರ್ ಅಂತ ಹೆಸ್ರುನ್ನು ಕಟ್ಟುತಾರೇ
ಹೆಸ್ರ ಕಟ್ಟಿದು ಮ್ಯಾಲೆ ಅವುರ ತಾಯೀ ಜೀನಾವತಿಗೆ
ಅವ್ರ ತಾಯಿ ಜೀನಾವತಿ ಮಕ್ಕಳ ಸ್ವಾಕುತಾಳೇ
ಸಾರಲೋ ಡಂಗೂರವ ಓ ಮಾಲಿಂಗ ಉಯ್ಯಾಲೇ ಡಂಗೂರವ ॥
ಕಲಿಕಲಿ ಕಾಳಿಂಗಸ್ವಾಮಿ ನಿರುವಾಗೆ ಸಿದ್ದಾವ
ಸರೆಗೀನ ಮರೆಯ ನಗುವೋನ
ಸೆರಗೀನ ಮರೆಯ ನಗುವ ನಿರುವಾಣೆ ಸಿದ್ದಾನ
ಕರೀರೀ ಇಂಥಾ ಸಬಿಗೆಲ್ಲಾ
ದೊಡ್ಡ ಹಾದಿಯ ವಳುಗೆ ದೊಣೆ ಸಿದ್ದಪ್ಪಗೌಡರು
ಅಹಾ ಚಿಕ್ಕ ಹಾದೀಯ ವಳುಗೆ ತಮ್ಮ ಗುರಿ ಚನ್ನೇಗೌಡ
ದೊಣ್ಣ ಸಿದ್ದೇಗೌಡಾಗೆ ಅವನ ಮಡದಿನಂಬೋಳು
ಸಿದ್ದಾಲುದೇವಿ
ಜೀನಾವತಿ ಮಕ್ಕಳು ಸಾಕುತಾಳೇ ॥ ಶರಣ ಶರಣು ಶಿವನೆ ಪೌಂಟು ಮುಖದ ಮಾದೇಶ
ಆಹಾ ಮೈಸೂರಿನ ಮಾರಾಜ್ರು ವಾಲೆ ಬರೆಯುತಾರೇ
ಅವ್ರು ದರುಮಾವತಿ ದೊರೆಗೆ ವಾಲೆ ಬರೆಯುತಾರೇ
ಅವ್ರು ಹದಿನೆಂಟು ದಿಕ್ಕೀನ ರಾಜಾದ್ರು ರಾಜಾರು
ಅವ್ರು ದರಮಾವತಿ ದೊರೆಗೆ ಇವುರು ವಾಲೆ ಬರೆಯುತಾರೇ
ಕೇಳೀ ದರುಮಾವತಿ ರಾಜ ನೀನು ಕಾಡೀಗೆ ಹೋಗಬೇಕು
ನೀವು ಹನ್ನೆರಡು ವರುಸಾ ಕಾಡೀಗೆ ಸೀಕಾರಿ ವರುಡಬೇಕು

ದಂಡು ದಳಪತಿ ಕರುಕಂಡು ಮಂತ್ರಿ ಮಾರ್ಬಾಲ ಕರುಕಂಡು
ಕಾಡೀಗೆ ಸೀಕಾರಿ ಹೋಗದೆ ಹೋದ್ರೆ ನೀವು ಜೈಲಿಗೆ ಹೋಗಬೇಕು
ಅವ್ರು ಮೈಸೂರ ರಾಜಾರು ದರುಮಾವತಿ ದ್ಯಾರಿಗೆ ವಾಲೆ ಬರುದಾರಲ್ಲಾ
ದರುಮಾವತಿ ರಾಜೂರ ಪಟ್ಟಣಕ್ಕೆ ಇವ್ರ ವಾಲೆ ಹೋಗುತಾದೇ
ಅವರು ವಾಲೆ ಓದೀ ಅವುರು ಓದಿ ನೋಡಿಕಂಡ್ರು
ಅವರು ಮಡದೀಯ ಜೀನಾವತಿ ಕೇಳುತಾರೇ
ಎಲೆ ಕೇಳಾರ ಜೀನಾವತಿ ನಾನು ಕಾಡೀಗೆ ಸೀಕಾರಿ ಹೋಗುತೀನಿ
ಮೈಸೂರಿಂದಾ ಮಡದಿ ನನಗೆ ವಾಲೆ ಬಂದಾದೆ ಕಾಣೆ
ನಾನು ಕಾಡೀಗೆ ಸೀಕಾರಿ ಹೋಗುದೆ ವಾದ್ರೆ ಜೈಲಿಗಾಂಡ್ರು ಮಾಡುತಾರೇ
ಕೇಳಾಲೆ ಜೀನಾವತಿ ನಾನು ಕಾಡಿಂದ ಬರುವರಿಗೂ
ಆ ನಾನು ಕಾಡಿಂದ ಬರಾವರಿಗು ಮಡಿದಿ ಮಕ್ಕಾಳು ಜ್ವಾಪಾನ
ಆಹಾ ಅರುಮಾನೆ ಜ್ವಾಪಾನ ಪಟ್ಣ ಪಾಳ್ಯಾವು ಜ್ವಾಪಾನ
ನಾನು ಹೋಗೋದು ಆರು ವರುಸ ಕಾಡಿಂದ ಬರಾದು ಆರು ವರುಸ
ನಾನು ಹನ್ನೆರಡು ವರಸಾ ಕಾಡೀಗೆ ಸೀಕಾರಿ ಹೋಗುತೀನಿ
ಮಕ್ಕಾಳಾ ನೀನೂ ಚಂದಾಗಿ ಸಾಕೂ
ಅವ ಇಸುಗೋಲೀಗೆ ಕಳಿಸಿ ಮಕ್ಕಳ ಚಂದಾಗಿ ಓದೀಸೇ
ದರುಮಾವತಿ ದ್ವಾರೆ ಮಡಿದಿಗೆ ಇದ್ದಿ ಬುದ್ದೀ ಹೇಳೀ
ಎರಡ ಮಕ್ಕುನೂವೆ ಎತಿಕಂಡು ರಾಜ ಕಾಳಗದ್ದ ಕಡುದು
ಅಹಾ ಮುತ್ತಾ ಕೊಡುತಾನೆ ಮಕ್ಕ ಮುದ್ದ ಆಡ್ಸುತಾನೆ
ಅಹಾ ರಾಜೂರು ಕಣ್ಣಲಿ ನೀರಾ ತರುತಾರೇ
ಮಕ್ಕಳ ಮುದ್ದೀಸಿ ಮಡಿದಿ ಕೈಲಿ ಕೊಡುತಾರೇ
ಅವುರ ಮಂತ್ರೀಯ ಕರುದಾರೂ ಮಂತ್ರಿ ಕರಿಸ್ಯಾರು
ಬಾರೋ ಬಾರೋ ಮಂತ್ರಿ ನಾನು ಕಾಡೀಗೆ ಹೋಗುತೀನಿ
ಪಟ್ಣಾ ಪಾಳ್ಯಾವೆಲ್ಲ ಅರುಮಾನೆ ಮಂತ್ರೀ ವೋಸುತಾತೇ
ಅಗ ದರುಮಾವತೀ ರಾಜ ಅವರ ಸ್ಯೇನಾ ಕರುಕಂಡೂ
ಆನೇ ವಂಟೇ ಮ್ಯಲೇ ಹನ್ನೆಡು ವರುಸ ದಿನುಕಾಗಿ
ಹನ್ನೆರಡು ವರುಸಾಗೊ ದಿನುಕಾಗಿ ಏರಿಕಂಡು
ಆನೇಯ ಮ್ಯಾಲೆ ರಾಜ್ರು ಅಂಬಾರಿ ಆಗ್ಸಿಕಂಡು
ಅವ್ರ ದಂಡಾ ಕರುಕಂಡೂ ಅವ್ರ ದಳಪಾತಿ ಕರಕಂಡೂ

ಕಾಡೀಗೆ ರಾಜ್ರು ಸೀಕಾರಿ ಹೋಗುತಾರೇ

ಶರಣ ಶರಣಯ್ಯ ಶಿವನೆ ಶರಣು ಮಾದೇವ ॥

ಸೀಕಾರಿ ಹೋದುವಮ್ಯಾಲೆ ರಾಜ್ರು ಹನ್ನೆರಡು ವರುಸಾಯ್ತು ಪಾಂಚು ಮುಖದಲ್ಲಿ ಮಾದೇವ

ದರುಮಾವತಿ ರಾಜ್ರ ಆದಾ ಪಟ್ಟಾಣದಲ್ಲಿ

ಅಪ್ಪ ಪಟ್ಟಾಣುದಲ್ಲಿ ಒಬ್ಬ ಮುದುಕಿ ಇದ್ದಾಳು

ಅಪ್ಪ ಬಡಗಾಲ ರಾಜ್ಯಕೆ ಅವಳ ಮಗಳ ಮದುವೆ ಮಾಡಿತ್ತು

ಅವುಳ ಮಗುಳ ನೋಡಾಕೆ ಇವುಳು ಮುದುಕಿ ಹೋಗುತಾಳೆ

ಅವ್ವ ಬಡಗಾಲ ರಾಜ್ಯಕೆ ಮಗಳ ನೋಡಕೆ ಹೋದಾಳು ಮುದುಕೀ

ಇವುಳ ಕಿರಿಯಾನ ರತುನಂಗಿ ಅರುಮಾನೆ ಬೀದೀಲೋಗಾಬೇಕು

ಕಿರಿಯಾಳು ರತುನಂಗಿ ಅರುಮನೆ ಬಾಗುಲಲ್ಲಿ ಕುಂತವಳೆ

ಅವಳಿಗೆ ಏಳು ಜಾನ ಸಕಿಯೋರು ಸೆಕೆಯ ವಡೆಯುತಾರೆ

ಇವುಳು ಕಿರಿಯೋಳು ರತುನಂಗಿ ಈವಾ ಮುದುಕೀಯ ನೋಡಿದುಳು

ಮುದುಕೀಯ ನೋಡಿ ರತುನಂಗಿ ಕೈಬೀಸಿ ಕರೆಯುತಾಳೇ

ಅವ್ವಾ ಏನಮ್ಮ ಮುದುಕಮ್ಮ ಊರುಕಡೆ ಚಂದಾಗಾವರೇನೇ

ನಮ್ಮ ಅಕ್ಕ ಜೀನಾವತೀ ಕ್ಷೇಮದಿಂದಿರುವೋಳೇ

ಕೇಳುತಾಳೆ ಮುದುಕೀಯ ಇವುಳು ರತುನಂಗಿ

ಚಂದಾಗವುರು ಕಾಣೆ ದೊರೆಸಾನಿ ನಿಮ್ಮ ಅಕ್ಕ ಜೀನಾವತೀ

ಏನವ್ವ ದೊರೆಸಾನಿ ನಿಮಗೆ ಗೊತ್ತೆ ಇಲ್ಲುವೇನೇ

ನಿಮ್ಮ ಅಕ್ಕ ಜೀನಾವತಿಗೆ ಇಬ್ಬುರಾಳು ಗಂಡು ಮಕ್ಳು ಹುಟ್ಯವರೇ

ಯವ್ವ ಅವುಳಿ ಜವುಳಿ ಎರಡು ರಾಜು ಮಕ್ಕುಳು ಹುಟ್ಟಾವೇ

ಅವ್ವ ಏನಮ್ಮ ಮುದುಕಮ್ಮ ಚಂದಾಗಿ ಎಳ ನಮ್ಮಕ್ಕಾನ

ನಮ್ಮ ಅಕ್ಕಾನ ಸುದ್ದೀ ಮುದುಕಮ್ಮ ಚಂದಾಗಿ ಹೇಳೇ

ಅವ್ವ ಏನವ್ವ ದೊರೆಸಾನಿ ನಿನಗೆ ಗೊತ್ತೇ ಇಲ್ಲುವೇನೇ

ಎರಡು ಗಂಡು ಮಕ್ಕಳು ಇಲ್ಲಿಗೆ ಹದಿನೈದು ದಿವುಸಾತು

ಯವ್ವ ಎನಮ್ಮ ಮುದುಕಮ್ಮ ನಮ್ಮ ಅಕ್ಕ ಜೀನಾವತಿಗೆ

ಇಬ್ಬುರಾಳು ಗಂಡು ಮಕ್ಕುಳು ಇರುವೋದು ದಿಟವೇನೇ

ಆ ಸುಳ್ಳೂ ಆಡುಬ್ಯಾಡಾ ಮುದಕಮ್ಮ ನಿಜವಾಗು ಹೇಳೇ

ಅಲವ್ವ ಇಲ್ಲವ್ವ ದೊರೆಸಾನಿ ಮಕ್ಕುಳುಟ್ಟಿ ಹದಿನೈದು ದಿವುಸಾತು

ಅವ್ವ ಹೋಗವ್ವ ಮುದುಕಮ್ಮ ನೀನು ಮಾಗಾಳ ಮನಿಗೆ

ರತುನಂಗಿ ಮುಂಡೆ ಅರಾಮು ಕುರ್ಚಿ ಮ್ಯಾಲೆ ಕುತಿದ್ದಳೂ
ಯವ್ವಾ ದಾಡುಬಡುನೆ ಮುಂಡೆ ಮ್ಯಾಕೆ ಎದ್ದೂಳಲ್ಲಾ
ಅವುಳು ಅರೂಮಾನಿಗೋಗಿ ತುಂಡೂ ಗೋಡೆ ವಾರಿಕಂಡ್ಳು
ಅವುರ ಅಕ್ಕ ಜೀನಾವತಿಗೆ ನರಿನರಿನೆ ಹಲ್ಲ ಕಡಿಯುತಾಳೇ
ಎಲ್ಲಾ ಬಲ್ಲೀರಮ್ಮ ಏಳು ಜಾನ ಸಕೀಯೋರಾ ನೀವೂ
ನಮ್ಮ ಅಕ್ಕ ಮುಂಡೀಗೆ ಮಕ್ಕಳಾದೊ ಗೌಡೀರ ನನುಗೆ ಇಲುವಲ್ಲೋ
ನನ್ನ ಗೊಡ್ಡೀ ಅನ್ನುತಾರೇ ನನ್ನ ಬಂಜೆ ಅನುತಾರೇ
ಅವ್ವ ನಮ್ಮ ರಾಜ್ರು ನನ್ನ ಕಡೆಗಣ್ಣಲಿ ಕಾಣುತಾರೇ
ನಮ್ಮ ಅಕ್ಕುಗೆ ಮಕ್ಕುಳಾದ ಮ್ಯಾಲೆ ಅಕ್ಕುನ ಮ್ಯಾಲೆ ಗ್ಯಾನ ಬೀಳುತಾದೇ
ನಮ್ಮ ಅಕ್ಕುಗೆ ಮಕ್ಕುಳಾದ ಮ್ಯಾಲೆ ರಾಜ ಗ್ಯಾನ ಬೀಳೂತಾರೇ
ಅವ್ವ ಅಕ್ಕ ಮುಂಡಿಗೆ ಮಕ್ಕುಳಾದೊ ಶಿವನೆ ನನಿಗೆ ಇಲುವಲ್ಲಾ
ಅವ್ವ ಕೇಳಿರವ್ವ ಸಕಿಯೋರೇ ನಮ್ಮ ಅಕ್ಕ ಮುಂಡೆ ಮಕುಳಿವ್ನಾ
ನಮ್ಮ ಅಕುಮುಂಡೆ ಮಕುಳನ್ನೊ ಶಿವನೆ ಯ್ಯಾಕೆ ಕೊಲ್ಲಲಿ ನಾನು
ಅಕ್ಕನ ಮಕ್ಕಳ ಕೊಂದು ನನ್ನಂಗೆ ನಿರುಬಂಜೆ ಮಾಡಬೇಕು
ಅಂತಾ ಚಿಕ್ಕವ್ವು ಮುಂಡೆ ಅಕ್ಕನಾ ಮಕ್ಕಳಾ ಮ್ಯಾಲೇ
ಯವ್ವ ಅಕ್ಕುನಾ ಮಕ್ಕುಳು ಮ್ಯಾಲೇ ಮುಂಡೇ ಹಟುವಾ ಕಟ್ಟೂತಾಳೇ
ಅವುಳ ಅರುಮಾನೆ ವಳುಗೆ ಒಂದು ಗಾಜೀನ ಕಂಬಾ ಇರುವೋದೂ
ಗಾಜೀನ ಕಂಬುದಲ್ಲೀ ಮುಂಡೆ ಏಳಡೆ ಸರುಪಾನ ಸಾಕಿದ್ದಳು
ಏಳೆಡೆ ಸರುಪಾನ ಮುಂಡೆ ಮನೆ ವಳುಗೆ ಸಾಕಿದ್ದಳು
ಆ ಬಟ್ಟಾಲ ತುಂಬ ಮುಂಡೆ ಹಾಲಾ ಬಿಟ್ಟೂಗಂಡೂ
ಗಾಜೀನ ಕಂಬುದ ಮುಂದೂಕೆ ಮುಂಡೆ ಹಾಲಾ ಮಡಗೂತಾಳೇ
ಏಳೆಡೆ ಸರುಪಾ ಅದು ಹಾಲಾ ಕುಡಿಯಾಕೆ ಬಂತೂ
ಬಟ್ಟಾಲಲ್ಲಿ ಸರುಪಾ ಹಾಲಾ ಕುಡಿಯುತಾದೇ
ಹಾಲಾ ಕುಡಿವಾಗ ಮುಂಡೆ ಗೂಟದಿಂದ ಚಂದುರಾಯ ಈರಕಂಡ್ಳು
ಚಂದುರಾಯ ಇರುಕಂಡು ಎರಡಾ ತುಂಡೀಗೆ ಕಡುದಾಳೇ
ಹಾಲೀನ ವಳಿಕೆ ಇಸವಾ ಕಕ್ಕೂತಾದೇ
ಹಾಲು ಹಾಲೆಲ್ಲಾವ ಕನ್ನೆ ಹಸುರೂ ಆಗುತಾದೆ
ಅವ್ವ ಇಸುವ ತಕ್ಕಂಡು ಮುಂಡೆ ಕಣುಕಪಿನ ಬರಣೀಗೆ ತುಂಬುತಾಳೇ
ಹಾವೀನ ಇಸವ ತಗುದು ಮುಂಡೆ ಕಣುಕಪಿನ ಬರಣೀಗೆ ತುಂಬಿಕಂಡ್ಳೂ

ಅವಳ ಬಾಳೇ ಕಾಯೋಳೀಕೆ ಬರಣೀಯ ಮುಚ್ಚಿ ಮಡಿಕಂಡ್ಲೂ

ಮುಚ್ಚಿ ಮಡಿಕಾಂಡೂ ಅವಳ ಸಕಿಯೋರಾ ಕಾರುದ್ಲು

ಕೇಳಿರಮ್ಮ ಸಕಿಯೋರೇ ಅರುಮಲ್ಲಿ ಜ್ವಾಪಾನ ಈರೀರೇ

ತಂದುನಾನು ತಾನಂದನಾನಾ ॥

ಈಗೋಗಿ ಈಗ ಬರೂತೀನೀ ಗೌಡೀರಾ

ಅರುಮಾನೆ ಕಾಡೇಯ ಜ್ವಾಪಾನಗೀಡಿರವ್ವಾ

ಮುಂಡೆ ಅಂಗಂತ ಹೇಳೀ ಅಲ್ಲೀಗೇ ವರಟಾಳು

ಅವುರಕ್ಕಿರುವ ಅರುಮನಿಗೆ ಹೋಗುತಾಳೇ ರತುನಂಗೀ

ರಾಮನೋ ರಾಮ ರಾಮಾನೇ ರಾಮಾ ॥

ಅವುರಕ್ಕ ಜೀನಾವತೀ ಹದುನೇದು ದಿನುದು ಬಾಣ್ತೆ

ಹದುನೇದು ದಿನುದು ಬಾಣ್ತೆ ಅವರಾಕ್ಕ ಜೀನಾವತೀ

ಎರಡೂವೆ ಮಕ್ಕಳೀಗೆ ನೀರಾನ ಊದೂ

ಚೆನ್ನಾದ ಕಾವಡಿಲ್ಲಿ ಹಿರಿಯಾನ ಮಗುವನ್ನ

ಚಿನ್ನಾದ ಕಾವಡಿ ವಳುಗೆ ಹಿರಿಯಾನ ಮಗುವನ್ನೂ

ಬೆಳ್ಳೀಯ ಕಾವಡಿಲ್ಲಿ ಕಿರಿಮೋಗ ಮನಗ್ಸಿವಳೆ

ಅರುಮನೆ ವಳುಗೆ ಮಕ್ಕಾಳು ಆಡುತಾನೇ

ಜೀನಾವತಿ ಬಟ್ಟುಲಲ್ಲಿ ನೀರಾನ ಮೀಯುತಾಳೇ

ಜೀನಾವತೀ ನೀರೂ ಮೀಯೋ ಟೇಮೀಗೆ

ನೀರು ಮೀಯೋ ಟೇಮೀಗೆ ತಂಗಿ ರತುನಂಗೀ

ಅದೇಯ ಸಾಮಿಯಾಕೆ ರತುನಂಗೀ ಹೋದಾಳು

ಅವ್ರಾನ ಅಕ್ಕನ ಮುಂಡೆ ಕಾಣುದಳಂಗೆ ಕೇಳುತಾಳೇ

ಅಕ್ಕ ಎಲ್ಲಕ್ಕ ಹಿರಿಯಕ್ಕ ನಿಂಗೆ ಎರಡು ಗಂಡು ಮಕ್ಳು ಹುಟ್ಟಾವೇ

ಎರಡು ಗಂಡು ಮಕ್ಳು ಹುಟ್ಟವೆ ಅಂತಾವ ನನಗೆ ಸುದ್ದೀನೇ ಆಯ್ತಲ್ಲೇ

ತಂದನಾನು ತಾನಂದನಾನಾ ॥

ಎಲ್ಲಕ್ಕ ಹಿರಿಯಕ್ಕ ನಿನ್ನ ಮಕ್ಕಾಳ ನೋಡಬೇಕು

ಎರಡು ಮಕ್ಳು ಹುಟ್ಟಿದಂತಾವ ನನಗೆ ದೂರೂ ಬಂತಲ್ಲೇ

ಅಕ್ಕ ನನೀಗೆ ನೀನು ಸುದ್ದೀಯ ಹೇಳುಬಾರ್ದೊ

ನಿನು ಮಕ್ಕುಳು ಹುಟಿದಂತಾವ ಕೇಳಿಕಂಡು ಬಂದೇನೇ

ನಿನ್ನ ಮಕ್ಕಾಳ ನೋಡಬೇಕು ನಡಿಯಕ್ಕ ಹಿರಿಯಕ್ಕ

ನಿನಗೆ ಮಕ್ಕಳಾದುದ್ದು ನನಿಗೆ ಸಂತೋಷಾ ಆಯೀತು

ಅಕ್ಕಾ ನಿನ್ನಾ ಹೊಟ್ಟೇಲಿ ಆರು ತಿಂಗುಳು ಕಾನಕ್ಕಾ

ನನ್ನಾವ ಹೊಟ್ಟೇಲಿ ಮೂರು ತಿಂಗುಳು ಕಾನಕ್ಕಾ

ಅಕ್ಕ ಯಾರೀಗಾದರೇನಕ್ಕ ನನ್ನ ಸಂತಾನ ಬೆಳುದುರು ಸಾಕೂ

ನಡಿಯಾಕ್ಕ ಹಿರಿಯಾಕ್ಕ ನಿನ ಮಕ್ಕಾಳ ನೋಡುಬೇಕು

ಚಿಕ್ಕವ್ವಾ ಮುಂಡೇ ನಂಬೀಸಿ ಕರೆದಾಳೂ

ಅಕ್ಕ ಅವುಳ ಜೀನಾವತೀ

ನನ್ನಾ ತಂಗೇ ನನಗೆ ಮಕ್ಕೂಳೂ ಆಗಿದುಕೇ

ಎಷ್ಟೋ ಸಿರಿಗಂಡು ಬಂದವುಳೇ ನೋಡಾಕೇ

ಅಂತಾವ ಅವರಕ್ಕ ಜೀನಾವತೀ

ನಡಿಯವ್ವ  ನನು ತಂಗೆ ಎರುಡಾಳೂ ಮಕ್ಕೂಳಿಗೂ

ನೀರಾ ಊದೂ ಮನಿಗೀಸಿ ಬಂದಿದ್ದೀನಿ

ಹಿರಿಯಾ ಮಗುವಲ್ಲೋ ಅದು ಚಿನ್ನಾದ ಕಾಗಿಡೀಲ್ಲಿ

ಚಿನ್ನಾದ ಕಾಗಿಡಿವಳಿಗೆ ಹಿರಿಯಾನ ಮನಿಗ್ಯವನೆ

ಬೆಳ್ಳಿಯ ಕಾಗ್ಡಿಲ್ಲಿ ಕಿರಿ ಮೊಗಾ ಮನಿಗ್ಯವನೆ

ನಾನು ನೀರ ಮಾಕಂಡು ಬರುತೀನಿ ಎತ್ತಿ ಕಂಡು ಮುತ್ತಾ ಕೊಡುನಡೆಇಯೆ

ಮಕ್ಕಾಳ ಎತಿಗಂಡು ಮುದ್ದ ಮುದ್ದ ಆಡುನಡಿಯೇ

ಅಕ್ಕ ಜೀನಾವತೀಗೇ ಹೇಳುದಾಳು ತಂಗೇ ರತುನಂಗೀ

ತಂಗೇಯೂ ಮುಂಡೆ ರತುನಂಗೀ

ಅತ್ತಲಿಕೆ ಬಾಂಟೋತ್ ಇದೇ ಒಂದು ಸಮಯ ಅಂದ್ಲೂ

ಇದೇ ಒಂದು ಸಮಯ ಅಂದು ಹೋಡೋಡಿ ಹೋಗುತಾಳೇ

ಓಡೋಡಿ ಹೋಗುತಾಳೆ ಅರುಮನಿಗೆ ವಾದುಳಲ್ಲಾ

ಸುತ್ತ ಮುತ್ತಾವ ಚಿಟಿಕೇಯ ಬಾಗೂಲ

ಚಿಟಿಕೇಯ ಬಾಗೂಲ ಬಂದಾ ಮಾಡಿಕಂಡೂ

ಮಕ್ಕಾಳು ಇರುವೋ ಉಪ್ಪರಿಗೆ ಅತ್ತುತಾಳೇ

ಉಪ್ಪರಿಕೆ ಮ್ಯಾಕೆ ಹೋಗಿ ಹಿರಿಯೋನ ಎತ್ತುತಾಳೆ

ಹಿರಿಮೊಗಾ ಎತ್ತಿಕಂಡು ತೊಡೆ ಮ್ಯಾಲೆ ಮಲಗೀಸೀ

ಬಾಳೇಯ ಕಾಯಿಂದ ಬರಣೀಯ ತೆಗೆದಾಳೊ

ಬರಣೀಯ ತೆಗೆದು ಇಸುವಾಗ ತೆಗುದಾಳೋ

ನಮ್ಮ ಅಕ್ಕು ಮುಂಡೆ ಬರೋವತಿಗೆ ಪ್ರಾಣಾವ ತೆಗಿಬೇಖೂ
ಅಂತಾವ ಮುಂಡೆ ಅವಳು ಇಸುವಾನ ತೆಗುದಾಳೋ
ಇಸುವಾನಾ ತೆಗುದಲ್ಲೊ ಮಗಿನ ಬಾಯ್ಗೆ ನೆಕಿಸ್ಯಾಳೊ
ಮಗೀನ ಬಾಯ್ಗೆ ನೈಕಿಸಲ್ಲೊ ಅವುಳು ಬಲದೇಯ ಎದೆಯನ್ನು
ಬಲದೇಯ ಎದೆಯ ತೆಗುದು ಮಗಿನ ಬಾಯ್ಗೆ ಕೊಡುತಾಳೇ
ಮಗಿನ ವಚ್ಚೆ ವಳಕೆ ಇಸುವೇಯ ಹೋಗುತಾದೇ
ಇಸುವೇಯ ಎದೆಯಾ ಕೊಟ್ಟುಳಲ್ಲೋ
ರಾಜಕುಮಾರ ದ್ವಾರಿಯಲ್ಲೋ ಅವುರು ಬಸವಕುಮಾರ ದ್ವಾರಿಯಲ್ಲೋ
ಚಿಕ್ಕವ್ವನ ಎದಿಯ ಕಚಿಗಂಡು ಮೋಗಾ
ಬಸವಕುಮಾರ ದ್ವಾರಿಯಲ್ಲಾ
ಮಕ್ಕುಳಾಡುದಾಳಾಗಿದ್ರೆ ಎದೆಯಾಲೂ ಇಳಿಯಾವು
ಮಕ್ಕುಳಿಡುದವಳಲುವಲ್ಲಾ ಬರಿಯಾ ಮಲೆಯಲ್ಲೋ
ಮಗೀಗೆ ಮಯೀ ಕೈಗೆಲ್ಲಾವಾ
ಮ್ಯಯೀ ಕೈಯೆಲ್ಲಾವ ಅಸುರು ಬಂದೀತಲ್ಲಾ
ಇಸುವೆಲ್ಲ ಮೈಯೀಗೆ ಅರುವೀಕಂಡು
ಮಗೀಗೆ ಕಣ್ಣೇಲಿ ಮ್ಯಾಕಾಡುತಾವ
ಮೊಗ ಯಾಲೇ ಗ್ಯಾನದಪ್ಪಿ ದರಿಣೀಗರುಕಂಡು ಬಿದ್ದಾದೆ
ತಂದನಾನು ತಾನಂದಾನಾನಾ ॥
ಅಷ್ಟೊತ್ತಿಗೆ ನೋಡಯ್ಯ ಮೇಘದಲ್ಲಿ ಶಿವ್ವನೇಯ
ಶಿವುನೇಯ ಬಂದು ಮಗೀನ ಇಸುವ ಈರಿಕಂಡಾ
ರಾಜಕುಮಾರ ದ್ವಾರಿಯಲ್ಲೊ ನೆಕ್ಕಿಸ್ದಂತಾ ಇಸುವನ್ನಾ
ನೆಕ್ಕಿಸ್ದಂತಾ ಇಸುವಾ ಬರುಬರನಾ ಕಕ್ಕುತಾದೇ
ಮಗುವಾನ ತಗುದಾಳು ಚಿಕ್ಕವ್ವ ಮುಂಡ್ಯಲ್ಲೋ
ಮಗುವಾನನ ತಕ್ಕಂಡಾಳು ಕಡಿಕೆ ಎತ್ತಾಕುತಾಳೇ
ಕಿರಿಮೋಗ ಎತ್ತಿಕಂಡು ಅವುಳ ತೊಡೆ ಮ್ಯಾಲೆ ಮಲಿಗಿಸ್ಕಂಡು
ಬಾಳೇ ಕಾಯಿಂದಾವ ಅವುಳು ಬರಣೀಯ ತೆಗುದಾಳು
ಮೊಗಿನ ಬಾಯೀಗೆ ಇಸುವಾ ಉಣಿಸ್ಯಾಳೋ
ಅವುಳು ಎಡದೇಯ ಎದೆ ತೆಗೆದು ಮಗಿನ ಬಾಯಿಗೆ ಇಡುತಾಳೆ
ಕಿರಯಾ ಮಗುವಲ್ಲೊ ಚಿಕ್ಕೌವನ್ಯಾದೆ ಕಡಿಕಂಡು

ಚಿಕ್ಕವನ್ಯಾದೆ ಕಡಿಕಂಡು ಬಂದೀಪಾಟಾ ಈಪುತಾದೇ
ಮಕ್ಕಳ ಹದಿಯೋಳ ಎದಿಯೋಳಗೆ ಎದಿಯಾಲು ಬರಲಿಲ್ಲ
ಬಂದೀಪಾಟ್ ಈಪಿದಾಗ ಅವುಳ ಸಂದು ಸಂದಿನಲ್ಲಿದ್ದಂತಾ
ಅವುಳ ಕೀಲಿ ಕೀಲಿನಲ್ಲಿದ್ದಂತಾ ರಕುತಾನೆಲ್ಲಾ ಈರುತಾದೇ
ಚಿಕ್ಕವ್ವ ಮುಂಡೀಗೆ ರಗುತ ಕಮ್ಮಿ ಆಯ್ತುಲ್ಲೋ
ಬರಿಯಬೆಂಡು ಆದುಳಲ್ಲೊ ಚಿಕ್ಕವ್ವ ಮುಂಡೆ
ಹಿರಗಾಗಕೇ ಗ್ಯಾನುತಪ್ಪೀ ಹಿರಿದಾಕೇ ಬಿದ್ದುಳಲ್ಲ
ಅಸ್ಟೊತ್ತಿಗೆ ನೋಡೋ ಅವುರಕ್ಕ ಜೀನಾವತೀ
ನೀರ ಮೀಕಂಡು ಅರುಮನಿಗೆ ಬಂದುಳಲ್ಲ
ಎರಡೂವೆ ಮಕ್ಕೂಳು ಬಿದ್ದೂ ವದ್ದಾಡುತಾವೇ
ಚಿದುರಂಗೀ ಮುಂಡೇ ಗ್ಯಾನದಪ್ಪಿ ಬಿದ್ದವಳೇ
ಜೀನಾವತೀ ಬಂದು ತಂಗೇಯ ನೋಡುತಾಳೇ
ನನ್ನ ತಂಗೀಗೆ ನನ್ನ ಮಕ್ಕಾಳ ನೋಡೀ
ನನು ಮಕ್ಕಾಳ ನೋಡಿ ಮೋರ್ಚು ಆಗ್ಯವಳೆ
ಅವರ ಅಕ್ಕಾ ಜೀನಾವತೀ
ತಂಗೀಯ ಎತಿಗಂಡು ಎದೀಗೆ ವರಿಗಿಸಿಕೊಂಡು
ಸೆಯಾನ ವಡಿಯತಾಳೇ ಅವರಕ್ಕ ಜೀನಾವತೀ
ತಂಗೇ ಮುಂಡೀಗೆ ರಗುತಿಗೆ ರಗುತಾ ಕೂಡುತಾದೇ
ಪುಷ್ಟಿ ಪುಷ್ಟಿ ಕೊಡುತಾದೇ ರಗುತಕೆ ರಗುತಾ ಕೊಡುತಾದೇ
ಒಂದು ಗಂಟೆಯ ಮ್ಯಾಲೆ ಪಳುಪಳುನೆ ಕಣ್ಣಾ ಬುಡುತಾಳೇ
ಕಣ್ಣಾನ ಬುಟ್ಟು ಮಕ್ಕಾಳ ನೋಡುತಾಳೇ
ಎರಡು ಮಕ್ಕಳು ಮ್ಯಾಲೆ ನರಿನರಿನಲ್ಲಾ ಕಡಿತಾಳೇ
ನರಿನರಿನಲ್ಲಿ ಕಡಿತಾಳೇ ಕಣ್ಣಾ ಮೆಟ್ರಿಸ್ಸಿ ಬುಡುತಾಳೇ
ಆ ವಾಲಾ ನನ್ನ ಸವತೀಯ ಮಕ್ಕಳೀರಾ
ಹದಿನೈದು ದಿನುದು ಮಕ್ಕಾಳೇ ಈ ಪದಕರುವ ತೋರಿದಿರಿ
ನಿಮ್ಮ ಬಾಳುಗೊಡಿಸೀವೇ ನಿಮ್ಮ ಬದುಕುಗೊಡಿಸೀನೇ
ಕೇಳೀರಲಾ ನನ ಸವುತೀಯ ಮಕ್ಕಳೀರಾ
ನಿಮ್ಮೆರಡಾಳ ಮಕ್ಕಳೂವುನೆ ಅಡವಿ ಅರಣ್ಯಕೆ
ಅಡವೀಯ ಅರಣ್ಯಾಕೆ ಕರಕಂಡು ಹೋಗುತೀನಿ

ಅಡವಿ ಅರಣ್ಯಕೆ ನಿಮ್ಮ ಕರಕಂಡು ಹೋಗಿ ನಾನು
ನಿಮ್ಮ ಬಲಿಯಾ ಊಸಿ ಬರುತೀನೀ
ಹದಿನೈದು ದಿನದ ಮಕ್ಕಳ ಮ್ಯಾಲೆ ಹಟುವೆ ಕಟ್ಟುತಾಳೇ ಚಿಕ್ಕವ್ವ
ಒಂದಾನಾ ಹಟಾವ ಕಟ್ಟಿದುಳು ಚಿಕ್ಕವ್ವಾ
ನಿನ್ನೊಂದ ಹಟಾವ ಕಟ್ಟಿದುಳು ಚಿಕ್ಕವ್ವಾ
ನಿಮ್ಮ ಅಡಿವಿ ಅರಣ್ಯದಲ್ಲಿ ತಲಿಯನ್ನಾ ಹೊಸ್ತೀನಿ
ತಲಿಯಾನ ಊಸಿ ನಿಮ್ಮ ತಲೆಯಾಬರುಡೇಯ
ತಲಿಯಾ ಬುರುಡೆ ತಂದು ಬಟ್ಟಲೀಗೆ ಊಣಿಸೂವೆ
ನಿಮ್ಮೆರಡು ತಲೆಯಾ ಮ್ಯಾಲೆ ನನ್ನೆರಡು ಕಾಲಾವ ಇಟುಗಂಡು
ಬಟಲಲ್ಲಿ ಊಣಿಸಿ ಕಂಡು ಈರಾ ನಾನು ಮೀತೀನಿ
ನಾನು ನೀರ ಮೀದೇ ವಾದರೆ ನಾನು ಹೆಂಗಸಲ್ಲಾ ಅಂದಾಳು
ನಿನ್ನೊಂದ ಹಾಟುವಾ ಕಟುತಾಳೇ ಚಿಕ್ಕವ್ವ
ನಿಮ್ಮ ಕಡುದಂತಾ ರಕುತಾವ ತಕ್ಕಂದೂ ಬಂದು
ನಾನು ಅಣೆಯಾ ಮ್ಯಾಕೆ ಬಟ್ಟುನಾಮಾ ಇಕ್ಕುತೀನಿ
ಬಟುನಾಮಾ ಅಂತಾವ ನಾ ಇಕ್ಕುದಾವಾದೂರೆ
ನನ್ನೆದೆಯಾ ಮೇಲೆ ಈರೋವೆರಡು ಎಕ್ಕುಆಕಾಯಲ್ಲಿ
ನಾನೊತ್ತಿರೋವೆರಡು ಎಕ್ಕುದಾ ಕಾಯಲ್ಲಾ
ಹಟುವಾ ಕಟ್ಟುತಾಳೇ ಹದುನೈದು ದಿವ್ಸದ್ ಮಕ್ಕುಳೀಗೆ
ಹಟುವಾಗ ಕಟಿಗಂಡು ಎದೆಯಾನ ತೊಟಿಗಂಡು
ಹೋಗುತಾಳೇ ರತುನಂಗಿ ಬಡಗಾಲ ರಾಜ್ಯಾಕೇ
ರಾಮಾನೇ ರಾಮಾ ರಾಮನೋ ರಾಮಾ ॥
ಅವ್ವ ಚಿಕ್ಕವ್ವ ಮುಂಡೆ ಹಟುವಾ ಕಟಿಗಂಡು ವಾದುಳಲ್ಲಾ
ಅವರಕ್ಕ ಜೀನಾವತೀ ಮಕ್ಕಾಳಾ ಸಾಕುತಾಳೇ
ಎರಡಾಳ ಮಕುಳೂವೇ ರಾಜಾ ಮಾಕ್ಕಾಳೂ
ಹದಿನೈದ್ ದಿನುದ್ ಮಕ್ಕಳು ವರುಸುದ್ ಮಕ್ಕಳಾದೋ
ವತ್ತೀಗೆ ಬಾ ಅಂದ್ರೆ ಜವುಜವುಕೆ ಬರುತಾವೇ
ಅವು ವರುಸಾದ ಮಕ್ಕಳೋಗಿ ಎರೆಡೊರುಸಾದ ಮಕ್ಕಳಾದೋ
ವತ್ತೀಗೆಬಾ ಂದ್ರೆ ಜವಜವನೆ ಬೇಳಿತಾವೇ
ಅಷ್ಟೊತ್ತಿಗೆ ಮಕ್ಕಳೇಲೇ ಎಂಟೊರ್ಸುದಾ ಮಕ್ಕುಳಾದೋ

ಎಂಟೊರ್ಸದ್ ಮಕ್ಕಳಾ ಅವುರಾನ ತಾಯರ್ಲ್ಲೋ
ಅವುರು ತಾಯೀ ಜೀನಾವತೀ ಇಸಗೂಲಿಗೆ ಕಳಿಸ್ತಾಳೆ
ಇಸ್ಕೋಲಲಿ ಮಕ್ಕಳು ಓದುತಾವೇ
ಓದೀ ಓದೀ ಗರುಡಿ ಪಾಸಾ ಆದುವಲ್ಲಾ
ಆವ್ವ ಬಾರವ್ವ ನಮ್ಮ ತಾಯಿ ನಾವು ಗರುಡೀಯ ಕಲಿತೇನೂ
ನಾವು ಬಿಲ್ಲೂ ಬಾಣಾದ ಇದ್ಯಾವ ಕಲಿಬೇಕು
ಬಿಲ್ಲಾನ ಮಾಡಿಕೊಡೇ ನಮ್ಮಾ ತಾಯೀ
ಅವುರಾನ ತಾಯಿ ಹಂಚೀ ಕಡ್ಡಿಯ ಬಿಲ್ಲಾನ ಮಾಡುತಾಳೇ
ತಲೆಯ ಕೂದಲ ಕಿತ್ತುಗಂಡು ಬಿಲ್ಲಾನ ಬಗ್ಸುತಾಳೇ
ಎರಡಾಳ್ ಮಕ್ಳ ಕೈಲು ಬಿಲ್ಲಾನ ಕೊಟ್ಟಳಲ್ಲ
ಎರಡೂವೆ ಮಕ್ಕಳೂವೆ ಬಾಣಾವ ತೊಟ್ಟಾವೆ
ಆಳ್ಳೀಯ ಮರುಕಲ್ಲೋ ಬಾಣಾವ ವಡೀತಾವೆ
ವಡದಂತ ಬಾಣೆಲ್ಲಾ ಮುಂಗಾರ ಸಿಡ್ಲು ವಡುದಾಂಗೆ ವಡಿತಾವೆ
ತಂದನಾನು ತಂದದುನಾನ ॥
ಎರಡಾಳು ಮಕ್ಕಳೂವೆ ಬಿಲ್ಲು ಬಾಣದ ಇದ್ಯಾವ
ಬಿಲ್ಲು ಬಾಣದ ಇದ್ಯಾವ ಚನ್ನಾಗಿ ಕಲಿತಾವೇ
ಕೇಳವ್ವ ನಮುತಾಯಿ ಕೇಳವ್ವ ನಮುತಾಯೀ
ನಾವು ಗರಡೀಯ ಮನೆಯಲ್ಲಿ ಗರಡಿ ಸಾದನೆ ಕಲೀಬೇಕೂ
ಎರಡಾಳುನೆ ಮಕ್ಕಾಳು ಗರಡಿ ಮನೆಯಲ್ಲಿ  ಸಾದನೆ ಕಲಿತಾವೆ
ಮುಂಪಟ್ಟಿಯ ವಡುದಾರೆ ಮೂರು ಮೈಲೀಲಿ ನಿಲುತಾವೆ
ಹಿಂಪಟ್ಟಿಯ ವಡುದಾರೆ ಆರುಮೈಲೀಲಿ ನಿಲುತಾವೆ
ಗರುಡೀಯ ಮಾನೇವಳುಗೆ ಗರುಡಿ ಸಾಧನೆ ಕಲಿತಾವೆ
ಇದ್ಯಾಭ್ಯಾಸದ ಕಲಿತಾವೂ ಮಕ್ಕಾಳು
ಬಾರವ್ವ ನಮುತಾಯೀ ತಾಯೀ ಜೀನಾವತೀ
ನಾವು ಇಸುಗೋಲೀಗೇ ಹೋಗಿ ಲೆಕ್ಕಾವ ಬರಿಸೀ
ಇಸಗೋಲಲ್ಲಿ ಹೋಗಿ ಮೇಸ್ಟ್ರಾ ಕೂಟೇ
ನಮ್ಮ ಲೆಕ್ಕಾವ ವಡಿಸೀ ಬರುತೀವಿ ತಾಯೀ
ಎರಡಾಳೂವೆ ಮಕ್ಕಾಳು ಇಸುಗೋಲೀಗೆ ಹೋಗುತಾವೇ
ಇಸುಗೋಲ ಮೇಸ್ಟ್ರು ಕುಟ್ಟಿ ಅವ್ರ ಲೆಕ್ಕಾವ ವಡಿಸಿದುವು

ಮನಿಗೆ ಬರೂವಾಗ ಬೀದೀಯ ವಳುಗೇ

ಸಣ್ಣ ಸಣ್ಣ ಮಕ್ಕಾಳು ಪುಟ್ಟ ಪುಟ್ಟ ಮಕ್ಕಾಳು

ಇಸುಗೋಲ ಮುಂದೆ ಮೇಷ್ಟ್ರ ಆಟಕ್ಕೆ ಬುಟ್ಟವರೆ

ಇಸುಗೋಲ ಮುಂದೆ ಮಕ್ಕುಳಾಟಾವ ಆಡುಸ್ತಾರೇ

ರೈತಾರ ಮಕ್ಕಳಿಗೆ ಅರಬೇಯ ಚಂಡಲ್ಲೊ

ಕಲ್ಲೀನ ಲಗ್ಗೆ ಅರುಬೇಯ ಚಂಡಲ್ಲೊ

ಇಸುಗೋಲಿ ಮುಂದೆ ಮಕ್ಕಳ ಆಟವಾ ಆಡುಸ್ತಾರೆ

ನೀವೆರಡಳೂವೆ ರಾಜಾಮಕ್ಕಾಳು ಮಕ್ಕಳಾಡೋ ಚಂದ

ನೋಡ್ತಾ ನಿಂತವರೆ

ಏನಿರಪ್ಪ ಮಕ್ಕಳೀರ ನಾವು ಚಂಡೀವಾಟುಕೆ

ಚಂಡಿನಾಟಕೆ ಬರುತೀವೆ ನಮ್ಮನೂವೆ ಕರುಕತೀರ

ರಜಾರ ಮಕ್ಕಾಳು ಕೇಳುತಾವ ನಿಂತಾವೆ

ರೈತಾರ ಮಕ್ಕಳೆಲ್ಲಿ ರಾಜೂರ ಮಕ್ಕಳೀಗೆ

ಬ್ಯಾಡಿರಪ್ಪ ದೊರೆಗಳೇ ನೀವು ದೊರಿಗೋಳಾ ಮಕ್ಕಾಳು

ನಿಮಗರುಬೇಯ ಚಂಡು ಕಲ್ಲೀನ ಲಗ್ಗೇಯು

ನೀನುಗ್ಯೊಗ್ಯವಾದುದಲ್ಲಿ ಕೇಳಿರಪ್ಪಾ ಮಕುಳೀರಾ

ನಿಮ್ಮಾ ಅರುಮಲ್ಲಿ ನೀಲಾ ಮುತ್ತಿನ ಚಂಡಾ

ನೀಲ ಮುತ್ತಿನ ಚಂಡು ರನ್ನದಾ ಲಗ್ಗೇಯು

ರನ್ನಾದ ಲಗ್ಗೇಯು ಮುತ್ತೀನ ಬಲಿಯಲ್ಲೊ

ನಿಮ್ಮ ಅರುಮಲ್ಲಿ ಇರುವೋದು ನಿಮ್ಮ ರಾಜಾರ ಮಕ್ಕಳಿಗೇ

ನಿಮ್ಮ ರಾಜೂರ ಮಕ್ಕಳಿಗೆ ಆ ಚಂಡೂ ಲಗ್ಯಾತು

ರೈತಾರ ಮಕ್ಕಾಳಲ್ಲಿ ಚಾಡೀಯ ಏಳುತಾವೇ

ಕೇಳಿರಪ್ಪ ಉಡುಗಾರ ನಮ್ಮ ಅರುಮನೀಯಲ್ಲಿ

ನಿಮ್ಮ ಅರುಮಲ್ಲೀ ಇರುವೋದು ದೊರಿಗೋಳೇ

ನಿಮ ತಂದೇರೂ ಆಡೂವ್ರೋ ನೀಲ ಮುತ್ತಿನ ಚಂಡು

ದೊಡ್ಡ ದೊಡ್ಡ ಸಾವಕಾರ್ರು ಅಡಂತ ಚಂಡು

ಹೋಗಿರಪ್ಪಾ ರಾಜೂರೆ ನಿಮ್ಮ ಅರುಮನೀಗೇ

ರಾಜುರಾ ಮಕ್ಕುಳೀಗೆ ರೈತಾರ ಮಕ್ಕಾಳು

ಆಗುಲೇಯ ದೊರಿಗೋಳಾ ಮಕ್ಕಾಳು

ಅರುಮಾನಿಗೆ ಹೋಗೀ ಅರುಮನಿಗೇ ಹೋಗುತಾವೆ।
ಅವುರ ತಾಯೀ ಜೀನಾವತಿ ಬಾಗುಲ್ಲೇ ನಿಂತುಕಂಡು
ಮಕ್ಕಾಳು ಬರುವಂತ ಬೀದೀಯ ನೋಡುತಾಳೆ
ಇವರೆಡಾಳೂವೆ ಮಕ್ಕಾಳು ಅಲ್ಲೀಗೆ ಬಂದುವಲ್ಲ
ಅವುರ ತಾಯೀ ಕೇಳುತಾಳೆ ಏನಿರಪ್ಪ ಮಕ್ಕಳೀರಾ
ಇಷ್ಟೊತ್ತು ತಂಕಾಟ ಬರುವೋದು ತಡವಾಯ್ತೋ
ಬಲ್ಲಿರಪ್ಪ ಮಕ್ಕಳೀರಾ ಊಟಾವಾ ಮಾಡಬಲ್ಲಿ
ಕೈಯಾ ಆಲೀಗೂ ನೀರು ಕೊಳಿ ನನುಕಂದ
ನೀರು ಕೊಡಕೆ ಹೋಗುತಾಳೆ ಅವರ ತಾಯೀ ಜೀನಾವತಿ
ಕೇಳವ್ವ ನಮ್ಮ ತಾಯೀ ನಮ್ಮರು ಮನೇವಳುಗೆ
ನೀಲ ಮುತ್ತಿನ ಚಂಡೂ ರನ್ನದಾ ಲಗ್ಗೇಯೂ
ಮುತ್ತೀನಾ ಬಲೇಯೂ ನಮ್ಮದು ಮನೇಲಿ ಇರುವುದಂತೇ
ಕೊಡು ಕೋಡೇ ಹಡುದವ್ವ ನೀಲ ಮುತ್ತಿನ ಚಂಡು ಕೋಡೇ
ನಾವು ಕ್ವಾಟೆಯ ಬಾಗುಲಲ್ಲಿ ಚಂಡಿನಾಟ ಆಡುತೀನಿ
ಅವುರಾ ತಾಯೀ ಜೀನಾವತೀಯೂ
ಯಾರಿರಪ್ಪ ಮಕ್ಕೂಳಾ ಚಂಡು ಐತಂತ
ಚಂಡು ಐತಂತ ಹೇಳಿದೋರು ಯಾರಿರಪ್ಪ
ಕಾಣಾದ ಮಕ್ಕಳಿಗೇ ಹೇಳಿದೋರ್‍ಯಾರು
ಹೇಳಿದವರ ಮಾನೆ ಹಾಳಾಗಿ ಹೋಗುತಾದೇ
ಕೇಳಿರಪ್ಪ ಮಕ್ಕಳೀರಾ ಕಲ್ಲೀನ ಲಗ್ಗೇಯೂ
ಆರುಬೆ ಚಂಡು ಮಾಡೀ ನಾನು ಕೊಡುತೀನಿ ನನುಕಂದಾ
ನಮ್ಮರು ಮನೇಯ ಮುಂದೆ ಆಟಾವ ಆಡಿರಪ್ಪ
ಬಲ್ಲೀರೊ ನಮ ಮಕ್ಳೇ ಊಟಾವ ಮಾಡುಬಲ್ಲೀ
ಕೇಳು ಕೇಳೆ ಹಡುದವ್ವ ಕೇಳವ್ವ ನಮ್ಮು ತಾಯೀ
ನಮ್ಮ ರಾಜಾರ ಮಕ್ಕುಳೀಗೆ ಆ ಚಂಡು ಯೋಗ್ಯವಾದುನಲ್ಲ
ಮುತ್ತೀನ ಬಾಲೇ ದ್ವೊರೆಗೋಳ ಮಕ್ಕುಳೀಗೇ
ದ್ವೊರೆಗೋಳ ಮಕ್ಕುಳಿಗೆ ಆದು ಯೋಗ್ಯವಾದುದ್ದು
ಕೊಡು ಕೋಡೇ ಹಡುದವ್ವ ನೀಲ ಮುತ್ತಿನ ಚಂಡ ಕೋಡೇ
ಆವಾ ಚಂಡಿನಿಂದ ನಿಮ್ಮ ತಂದೇರು ಆಡುವಂತಾ

ನಿಮ್ಮ ತಂದೇರು ಆಡುವಂತಾ ನೀಲ ಮುತ್ತಿನ ಚಂಡೂ
ಚಂಡೀನ ಆಟದಿಂದ ದೊಡ್ ದೊಡ್ ಸಾವುಕಾರ್ರೆಲ್ಲಾ
ದೊಡ್ ದೊಡ್ ಸಾವುಕಾರ್ರೆಲ್ಲಾ ಮಡಿದುಬಿಟ್ಟು ಹೋಗ್ಯವರೇ
ಅನೇಕ ಜಾನುವೆಲ್ಲಾ ಕಟ್ಟಾಡಿ ಹೋಗ್ಯವರೆ
ಬ್ಯಾಡಿ ಕಾನೊ ನನು ಕಂದಾ ಚಂಡಿನಾಡ ನಿಮ್ಮೀಗೇ
ಕೇಳವ್ವ ಹಡುದವ್ವ ಕೇಳವ್ವ ನಮ್ಮ ತಾಯೀ
ನೀಲಿ ಮುತ್ತಿನ ಚಂಡಾ ನೀನು ಕೊಡದೇಯ ವಾದೂಕೆ
ನಿನು ಪಾದೂದು ಮ್ಯಾಲೇ ನಾವು ಪ್ರಾಣಾವ ಬಿಡುತೀವಿ
ನಿನ್ನೂ ತಾನೆಂಬೂದು ಇಸುದು ಪಾಶಾಣ್ಣಾ
ಎರಡೂವೆ ಮಕ್ಕಾಳು ತಾಯೀ ಜೀನಾವತೀಯಾ
ಎರಡು ಕಾಲುನೂವೆ ಬಾಚಿ ತಬ್ಬಿಕಂಡೂ
ಅವುರ ತಾಯೀಗೆ ಕಳ್ಳು ಮರುಕ ಆಯಿತಲ್ಲಾ
ಕಣ್ಣಲ್ಲಿ ಕಣ್ಣೀರು ತರುತಾಳೇ ಅವುರವ್ವ
ಎಳ್ರಪ್ಪ ಮಕ್ಕಳೀರಾ ನನ ಪಾದುವ ಬಿಡಿರಪ್ಪ
ಊಟಾವ ಮಾಡುಬಲ್ಲಿ  ಚಂಡಾ ಕೊಡುತೀನೀ
ಹೇಳಿವ್ವ ನಮ್ಮ ತಾಯೀ ನೀನು ಚಂಡಾ ಕೊಡುತೀನಂತಾವ
ಚಂಡಾ ಕೊಡುತೀನಂತಾವ ಬಾಸೇಯ ಕೊಡಬೇಕು
ಅವುರ ತಾಯಲ್ಲೊ ಮಕ್ಕೀಗೆ ಬಾಸೇಯ ಕೊಡುತಾಳೇ
ಬಾಸೇಯ ಬಾಡಿದು ಮ್ಯಾಲೇ ಮಕ್ಕು ಪಾದಾವ ಬುಟ್ಟವಲ್ಲಾ
ಊಟುಕಾದರೆ ಹೋಗುತಾವೇ ಊಟನಾದುರೆ ಮಾಡುತಾವೇ
ನಡಿಯವ್ವ ನಮ್ಮ ತಾಯೀ ಚಂಡಾ ಕೊಡು ನಡಿಯವ್ವಾ
ಅವುರ ತಾಯಲ್ಲೋ ಹಣು ಕಾಯಾ ತಕ್ಕಂಡೂ
ಹಣ್ಣು ಕಾಯಾ ತಕ್ಕೊಂಡು ಚಂಡೀರೋ ಕ್ವಾಣೇಗೇ
ಚಂಡೀರೋ ಕ್ವಾಣೀಗೆ ಹೋಗುತಾಳೇ ಅವುರವ್ವ
ತಂದಾನು ತಾನಂದದುನಾನಾ ॥
ಅವುರ ತಾಯೀ ಜೀನಾವತೀ ಚಂಡಿರುವ ಕ್ವಾಣೀಗೇ
ಚಂಡಿರುವ ಕ್ವಾಣೇಯಾ ಬೀಗಾವಾ ತೆಗಿತಾಳೇ
ಅವ್ವ ನೀಲಿ ಮುತ್ತಿನ ಚಂಡಲ್ಲೊ ರನ್ನಾದ ಲಗ್ಗೆಲ್ಲೊ
ರನ್ನಾದ ಲಗ್ಗೇ ಮುತ್ತೀನ ಬಲಿಯಲ್ಲೋ

ಮುತ್ತೀನ ಬಲೇಯ ಪೂಜೇಯ ಮಾಡುತಾಳೇ
ಪೂಜೇಯ ಮಾಡುತಾಳೇ ಮಂಗಳಾರ್ತಿ ಎತ್ತುತಾಳೆ
ಮಂಗ್ಳಾರ್ತಿ ಮಾಡೀ ಚಂಡಿಗೆ ಶರಣ ಮಾಡುತಾಳೇ
ಕೇಳಿರಪ್ಪ ಮಕ್ಕುಳೀರಾ ಕೇಳಿರಪ್ಪ ನನು ಕಂದಾ
ಮಕ್ಕಾಳು ಚಂಡಾ ಎರಡು ಕೈಲಿ ಇಸುಗಂಡೂ
ನೀಲ ಮುತ್ತಿನ ಚಂಡ ರನ್ನಾದ ಲಗ್ಗೇಯ
ಎರಡೂವೆ ಮಕ್ಕಾಳ ಕವುಳ ಗದ್ದ ಇಡುಕಂಡೂ
ಕವುಳ ಗದ್ದ ಹಿಡುಕಂಡು ಮುದ್ದ ಮುದ್ದ ಆಡುತಾಳೇ
ಕೇಳಿರಪ್ಪ ಮಕ್ಕಳೀರಾ ಕೇಳಿರೋ ನನು ಕಂದು ಗೋಳಾ
ಈವಾ ಚಂಡಿನಿಂದಾ ದೊಡ್ಡ ದೊಡ್ಡ ಸಾವುಕಾರೆಲ್ಲಾ
ಈವಾ ಚಂಡಿನಿಂದಾ ಕಟ್ಟೋಡಿ ಹೋಗ್ಯವರೇ
ಅವುರ ತಾಯೀ ಜೇನಾವತೀ ಆಳುತಾವ ಹೇಳುತಾಳೇ
ಕೇಳಿರಪ್ಪ ನನು ಮಕ್ಳಾ ಕೇಳಿರಪ್ಪ ಕಂದುಗೋಳಾ
ಚಂಡೀನಾ ಆಟಾವ ಎಲ್ಲಿ ನೀವು ಆಡುತೀರಿ
ಮೂಡಾಲ ಬೀದೀಲಿ ಚಂಡೀನಾ ಆಟಾವಾ
ಗುಡಿಯ ಕ್ವಾಟೀ ಬಾಗುಲಲ್ಲಿ ಚಂಡಿನಾಟ ಆಡಿರಪ್ಪ
ಮೂಡಾಲ ಬೀದೀಲಿ ಚಂಡಿನಾಟ ಆಡಿರಪ್ಪ
ಪಡುವಾಲ ಬೀದೀಲಿ ಚಂಡಿನಾಟ ಆಡಿರಪ್ಪ
ತ್ಯೆಂಕಾಲ ಬೀದೀಲಿ ಚಂಡಿನಾಟ ಆಡಿರಪ್ಪ
ಬಡಗಾಲ ಬೀದೀಗೆ ಹೋಗುಬ್ಯಾಡಿ ನನು ಕಂದಾ
ಕೇಳವ್ವಾ ನಮ್ಮ ತಾಯೀ ತಾಯೀ ಹಾಡುರವ್ವಾ
ಬಡಗಾಲ ಬೀದೀಲಿ ಏನೂ ಇರುವೋದು ತಾಯೀ
ಕೇಳಿರಪ್ಪ ಮಕ್ಕುಳೀರಾ ಬಡಗಾಲ ಬೀದೀಲೀ
ಬಡುಗಾಲ ಬೀದೀಲಿ ನಿಮ್ಮ ಚಿಕ್ಕನ್ನ ಅರುಮಾನೇ
ನಿಮ್ಮ ಹದಿನೈದು ದಿನುದ ಮಕ್ಕುಳಾ ಮ್ಯಾಲೇ
ಆವಾ ಬೀದೀಲಿ ಹೋಗುಬ್ಯಾಡೀ ನಮ್ಮ ಮಕ್ಳೇ
ಎರಡಾಳುವ ಮಕ್ಕಾಳೂ ಚಂಡುನಾದುರೆ ತಕ್ಕೊಂಡೊ
ಆ ಪಟ್ಟುಣದಾ ಬೀದಿ ವಳುಗೆ ಹೋಗುತಾವೆ ಮಕ್ಕಾಳು
ಮೂಡಾಲ ಬೀದೀಗೋದೋ ಮೂಡಾಲ ಬೀದಿ ನೊಡುತಾವೇ

ಮೂಡಾಲ ಬೀದಲ್ಲೋ ಬಾಳ ಚಕ್ಕದು ಆಗ್ಯಾದೇ
ಬಲೆಯ ಬೀಸಕಾಗದಿಲ್ಲ ಚಂಡ ಆಡಕಾಗದಿಲ್ಲ
ಅಲ್ಲಿಂದ ಮಕ್ಕಾಳು ಪಡುವಲ ಬೀದೀಗೋಗು ತಾವೇ
ಪಡುವಾಲ ಬೀದೀ ಅದು ಬಾಳ ಚಿಕ್ಕಾದೂ
ಗುಡ್ಡಾ ಗ್ವಾರಂಡ್ಲಾ ಮಾರಮಂಡೀ ಇರುವೋದು
ಅಲ್ಲಿಂದ ಮಕ್ಕಾಳು ತೆಂಕಾಲ ಬೀದಿಗೋಗುತಾವೇ
ತೆಂಕಾಲ ಬೀದೂವೆ ಆಅದು ಬಾಳ ಚಿಕ್ಕುದಲ್ಲೋ
ಅಲ್ಲಿಂದ ಮಕ್ಕಾಳು ಬಡಗಾಲ ಬೀದಿಗೋಗುತಾವೇ
ಬಡುಗಾಲ ಬೀದೀ ಬಾಳ ದೊಡ್ಡಾದೂ
ಅವುರು ಚಿಕ್ಕವ್ವ ಅರುಮಾನೆ ಬೀದೀ ಬಾಳ ದೊಡ್ಡಾದು
ಅಜ್ಜಿ ಅಜ್ಜಿ ಗೆಲ್ಲುವ ಕುಲುಕು ಚಿತ್ತಾರದ ದೀಪ ಬುಡಿಸ್ಯವಳೇ
ರಸ್ತೆಯ ಬೀದಿವಳುಗೆ ಹೂವಿನಾ ಚಾಮಾಲಾ
ನೋಡು ಬಾರೋ ಅಣ್ಣಾ ಎಸ್ಟೂ ಸುಂದರವಾದ ಬೀದೀ
ಈದೇಯ ಬೀದಿವಳುಗೆ ನಾವು ಚಂಡಿ ನಾಟ ಆಡುಬೇಕು
ನಮ್ಮ ತಾಯೀಯ ಮಾತ ನಾವು ಕೇಳಾಕಾಗದು ಕಾಣಯ್ಯ
ಎರಡಾಳೂವೆ ಮಕ್ಕಾಳು ಬರಗಾಲ ಬೀದಿ ವಳುಗೇ
ಬಡಗಾಲ ಬೀದಿವಳುಗೆ ಬಲೆಯಾನ ಬೀಸುತಾನೇ
ಬಲಿಯಾ ಮ್ಯಾಗೆ
ಎರಡೂವೆ ಮಕ್ಕಾಳು ಲಗ್ಗೆವಾದುರೆ ವಡ್ಡುತಾವೇ
ಪಟ್ಟುಣುಕೆಲ್ಲಾವ ಬಾಪ್ಪಾನೆಂಬೋದು
ಪಟ್ಟುಣುಕೆಲ್ಲಾವ ಕಾಣುತಾದೆ ಬಾಪ್ಯಾವೂ
ತಾನಂದನು ತಂದಾನ ॥
ಎತ್ತೂತಾರೇ
ಎರಡಾಳುವೆ ಮಕ್ಕಾಳೂ
ರನ್ನಾದ ಲಗ್ಗೇಯ ಒಡ್ಡುತಾರೇ ರಾಜೂರೂ
ನೋಡಿ ಆ ಪಟ್ಟುಣುದ ಜನುವೆಲ್ಲಾ
ಹಾರ್ರ್ಯಾರು, ಜೀನಿಗರು, ಶ್ವಾಮಿಗರು, ಒಕ್ಕಲಿಗರು
ಸಾಬೂರು ಬೀದಾರು, ತಿರುಕಾರು ಹರುಕಾರು
ಸೆಟ್ಟಿ ಸಾವ್ಕಾರ್ರು ದೊಡ್ಡ ದೊಡ್ಡ ಮಾನ್ಯವರು

ಯಾವ ದೇಸಾದ ಮಾನ್ಯವರು ಬಂದುವರೇ
ಚಾಡೀನಾಟನಾಡಾಕೆ ನೋಡಾನ ನಡಿರಯ್ಯ
ಪಟ್ಟಗೊಂದು ಪಟ್ಣೆಲ್ಲಿ ಜೀಯಾನೆ ಬರುತಾದೆ
ಎರಡಾಳು ಮಕ್ಕಾಳು ಲಗ್ಗೇಯ ವಡ್ಕ್ಯವರೆ
ರಾಜೂರ ಮಕ್ಕಳೀಗೆ ಯಾರಾರು ಗೆಣೆಕಾರ್‍ರು
ಒಕ್ಕಲಿಗರುಡುಗಾರು ಸಾಬುರುಡುಗಾರು ಗೆಣೆಕಾರ್‍ರು
ಗಡ್ಡಾ ಸೋಕಿದ ಮುದುಕಾರು ಗೆಣೆಕಾರ್‍ರು
ಸತ್ತಾ ಸೊಪ್ಪ ವತ್ತೂ ಮಾರೂವಾ
ಉಪ್ಪಾರುಡುಗಾರು ಗೆಣೆಕಾರ್‍ರು
ರಾಜೂರ ಮಕ್ಕಳೀಗೆ ಗೆಣೆಕಾರ್‍ರು ಎಲ್ಲಾವಾ
ಚಂಡೀನಾ ಆಟಾವ ನೋಡಾಕೆ ಬಂದವುರಲ್ಲ
ರಾಜೂರಾ ಮಕ್ಕಾಳು ಲಗ್ಗೇಯ ವಡ್ಡವರೆ
ಕಿರಿಯಾ ಮಗುನಲ್ಲೋ ಅಡವೀಯ ಕುಮಾರ
ಅವುರಾನ ಅಣ್ಣಾಗೆ ಏನಾಂತ ಹೇಳುತಾನೆ
ಅಣ್ಣ ಬಾರಣ್ಣ ಹಿರಿಯಣ್ಣ ನೀ ತಂದೀಗೆ ತಲೀಮೊಗಾ
ನೀನು ತಂದೀಗೆ ತಲಿ ಮೊಗಾ ಮೊದಲು ದೇವ್ರಾಟ
ಮೊದಲು ದೇವ್ರಾಟಾವಾ ನೀನೇಯ ಆಡಣ್ಣಾ
ನಾನು ಲಗ್ಗೇಯ ಹಿಂದುಗಾಡೇ ಚಂಡನ್ನು ಆನುತೀನಿ
ಮೊದಲಾಟ ದೇವುರಾಟ ಹಿರಿಅಣ್ಣಾಗೆ ಕೊಡುತಾನೇ
ಸಾವ್ರಾರಾ ಹುಡುಗಾರು ನಮ್ಮ ಗೆಣೆಗಾರ್‍ರು ಎಲ್ಲಾವಾ
ಬಲ್ಲಿರೋ ಹುಡುಗಾರಾ ನಮ್ಮ ಗೆಣೆಕಾರ್‍ರು ನೀವೂನೇ
ಚಂಡಿನಾಟವ ಆಡಾಕೆ ಗೆಣೆಕಾರ್‍ರ ಕರುದವರೇ
ಅಣ್ಣಾಗೆ ಅರ್ಧ ಹುಡುಗರು ತಮ್ಮಗದ್ದಾಗ ಹುಡುಗಾರೂ
ಅಂಟೀಗಂಡು ಕಿರಿಯೋನೂ ತಮ್ಮಾನೂ
ಲಗ್ಗೇಯ ಹಿಂದುಗಾಡೆ ಚಂಡು ಆಗಕೆ ಬಂದನಲ್ಲಾ
ಹಿರಯಾನೆ ಅಣ್ಣೆನಲ್ಲೊ ದೇವುರಾಟಾವಾ ಆಡುತಾನೇ
ನೀಲ ಮುತ್ತಿನ ಚಂಡ ಕೈಯಲ್ಲೆ ಹಿಡುಕಂಡೂ
ಅರ್ಧ ಹುಡಗ್ರ ಕರ್‍ಕಂಡು ಚಂಡ ವಡಿಯಾಕೋಗುತಾನೇ
ಚಂಡುನಾ ಹಿಡಿಕಂಡು ಲಗ್ಗೆಗೆ ಗುರಿಯಾ ಮಾಡುತಾನೇ

ಬೀಸೀ ಬೀಸೀ ಚಂಡುವಾದರೇ ವಡುದಾನೂ

ಲಗ್ಗಿಗೇ ತಗುಲಲಿಲ್ಲ ಮ್ಯಾಕೆ ಬಿಸಿಯೂ ಆಡುತಾದೆ

ವಡುದಂತ ಚಂಡು ಅವುನ ಕಿರಿಯ ತಮ್ಮ

ಕಿರಿಯ ತಮ್ಮನೂ ಅವುನ ಎಡದ ಕೈಲ್ ಆತುಕಂಡ

ಬಾರಣ್ಣಾ ಹಿರಿಯಣ್ಣಾ ನಿನ್ನ ದೇವುರಾಜ ಮುಗಿಯೀತೋ

ಲಗ್ಗೇಯಾ ಕಾಯ್ವಾರೋ ಚಂಡಾನು ವಡಿತೀನೀ

ಕಿರಿಯ ತಮ್ಮನಲ್ಲೋ ಚಂಡ ಗುರಿಯಾ ಮಾಡುತಾನೇ

ಚಂಡಾ ತಕ್ಕಂಡು ಲಗ್ಗೇಗೆ ಗುರಿಯಾ ಮಾಡುತಾನೇ

ಲಗ್ಗೇಗೆ ಗುರಿಯ ಮಾಡುವಾಗ ಅವುನ ಚಿಕ್ವವ್ವ ಮುಂಡ್ಯಲ್ಲೋ

ಅವುರ ಚಿಕ್ಕಪ್ಪ ಮುಂಡ್ಯಲ್ಲೋ ಮಾಡಿ ಮ್ಯಾಲೆ ನಿಂತುಕಂಡು

ಮಾಡಿ ಮ್ಯಾಲೆ ನಿಂತುಗಂಡು ಇವುರ ಚಂಡಿನಾಟ ನೋಡುತಾಳೇ

ನನು ಕೈಗೆ ಸಿಕ್ಕಿದುರು ನನ್ನ ಸವುತೀಯ ಮಕ್ಕಾಳು

ನಾನು ಬಗುಸಿದ್ದು ಹಾಲು ಅನ್ನ ನನಿಗೆ ಸಿಕ್ಕಿದ್ದು ಹಾಲು ಅನ್ನ

ಮಾಡೀ ಮ್ಯಾಲೆ ನಿಂತುಕಂಡು ಸುತ್ತುಲಾ ದೇವೂರೀಗೇ

ಸುತ್ತುಲಾ ದೇವುರಿಗೆ ಹಾಡಿ ಹರಕೆ ಕಟ್ಟುತಾಳೇ

ಮೂಡಲಾಗಿ ಇರುವೂ ಮೂಡ್ಲು ಗಿರಿಯ ತಿಮ್ಮಪ್ಪ

ಮಕ್ಕಾಳಾಡೋ ಚಂಡೂ ನನ ಪಟ್ಟು ಮಂಚುದ್ ಬಂದಾರೇ

ನಿನಗೆ ಯಾಲಕೀಯಾ ಮುಡುಪಾ ಕಳುವೇನು ತಿಮ್ಮಪ್ಪಾ

ಕ್ವಾಟೆ ಬಾಗುಲಲ್ಲಿ ಇರುವೊ ಮಾರಮ್ಮಾ

ಮಕ್ಕುಳಾಡೋ ಚಂಡೂ ನನ್ ಪಟ್ಟು ಮಂಚುದ್ ಬಂದಾರೇ

ನಾ ಕುರಿಯಾನ ಕಡಿಸ್ವಾನೂ ಕಾಣುನೂ ನಾ ಕಡಿಸೇನೂ

ಕುರಿಯಾ ಕ್ವಾಣುವ ಕಡಿಸೀ ನಿನ್ನ ದೇವ್ರುಸ್ತಾನುದು ಮುಂದೇ

ರಕುತಾದ ಕೋಡಿ ಹರಿಸೇನೂ

ಮಾರಮ್ಮ ಆಗೆ ಹಾಡಾಡಿ ಹರಿಕೆ ಕಟ್ಟುತ್ತಾಳೇ

ಊರು ಮುಂದೆ ಇರುವೋ ದೀರ ಅಂಜುನೇಯಾ

ಮಕ್ಕುಲಾಡೋ ಚಂಡು ನನ್ನ ಪಟ್ಟುದ್ ಮಂಚಕೆ ಬಂದಾರೇ

ನಿನ್ನ ಬಾಲಾದಾಲಾಕೆಲ್ಲಿ ನಾನು ಮುತ್ತಾ ನಾ ಬುಡುಸ್ತೀನಿ

ನಾ ಮುತಾ ನಾನು ಬುಡಸೀ ಕಂಟ್ಲೀ ಪೂಜೇ ಕಟಿಸೀ

ಕಂಟ್ಲೀ ಪೂಜೇ ಕಟ್ಟಿಸಿ ಜೋಡಾ ಕಾಯಾ ವಡಸೀ

ಊರು ಮುಂದ್ಲೆ ಅಂಜುನೇಯ್ಗೆ ಹಾಡಾಡ್ಯರಿಕೆ ಕಟ್ಟುತಾಳೇ
ಕೇಳೋ ಕೇಳೋ ಸ್ವಾಮೀ ನೀನ ಚುಂಚನಗಿರಿಯ ಬೈರೂವಾ
ಮಕ್ಕುಳಾಡೋ ಚಂಡು ನ್ನ ಪಟ್ಟು ಮಂಚಾಕ್ ಬಂದಾರೇ
ಸೊಂಕ್ರಾಂತಿ ಹಬ್ಬುದ್ದೀನ ನಾನ ಕಂಚಿನ ತೇರ ಹರಿಸೇನೂ
ನಾನು ಕಂಚಿನ ತೇರಾ ಹರಿಸಿ ಒಂದು ದಿನ ಒಪ್ಪೊತ್ತೂ
ಒಂದು ದಿನ ಒಪ್ಪತ್ತು ನಿನ್ನ ಜಾತ್ರೇಯ ನಡಿಸೋನೂ
ಎಲ ಚುಂಚನಗಿರಿಲಿ ಇರುವ ಬೈರುವಗೆ ಹಾಡಾಡರಿಕೆ ಕಟ್ಯಾಳೊ
ಸುಬ್ಬುರೇ ಮಣೇದಲ್ಲಿ ಇರುವೋ ಹೆಬ್ಬೀಣಾ ಸುಬ್ಬಪ್ಪಾ
ಮಕ್ಕುಳಾಡೋ ಚಂಡು ನನ್ ಪಟುದ್ ಮಂಚುಕೆ ಬಂದಾರೇ
ನಿನಗೆ ಚಿನ್ನಾದ ಎಡೆಯಾ ನಾನು ಮಾಡಿಸುವೆ ಸುಬ್ಬಪ್ಪಾ
ಉತುದಲ್ಲಿ ತನಿಯಾ ಎರಿಸೂವೆ ಸುಬ್ಬಪ್ಪಾ
ಸುಬ್ಬರೇ ಮಣೇದ ಸಬ್ಬಪ್ಪಗೆ ಹಾಡಾಡರಿಕೆ ಕಟ್ಟುತಾಳೇ
ಸುತ್ತಿಲಾ ದೇವುರಿಗೆಲ್ಲ ಹಾಡಾಡರಿಕೆ ಕಟ್ಟುತಾಳೇ
ಹಾಡಾಡರಿಕೆ ಕಟಿಕಂಡು ಅರುಮಲ್ಲಿ ಅವುಳಲ್ಲೋ
ಇವುರು ರಾಜುಕುಮಾರ ದೊರಿಗೋಳು ಅಡವೀಯಕುಮಾರ
ಲಗ್ಗೆಗೆ ಗುರಿಯ ಮಾಡುತಾನಎ ಚಂಡ ಬೀಸಿ ವಡುದಾನೇ
ವಡುದಂತ ಚಂಡು ಲಗ್ಗೀಗೆ ತಗುಳೈತೋ
ಲಗ್ಗೇಗೆ ತಗುಳಿ ಲಗ್ಗೆ ಮುರದು ಮೂಕಾ ಚೂರಾಯ್ತೂ
ಮೂರು ಚೂರುಆದಾಗಾ ಮೇಕೆ ಗಗನಕಾರುತಾದೇ
ಮ್ಯಾಕೆ ಗಗನಾಕಾರುತಾದೆ ನೀಲ ಮುತ್ತಿನ ಚಂಡಲ್ಲೊ
ಸುತ್ತಲಾ ದೇವುರೆಲ್ಲಾ ಚಂಡೀಗೆ ದಿಸ್ಟಿ ಆಗುತಲ್ಲೋ
ಗಗನಾಕೇ ಮ್ಯಾಕೇ ಹುಸಿಯೂ ಆಗುತಾದೇ
ರಾಜೂರ ಮಕ್ಕಾಳಾ ತಲೆಯಾ ಮ್ಯಾಲೇ
ಮೂರಾ ಸುತ್ತು ಗರಿಗರಿನೆ ತಿರುಗುತಾದೇ
ಗರಿಗರಿನೆ ತಿರುಗಿ ಗಗುನಾಕೆ ಹಾರೀ
ಗಗುನಾಕೆ ಹಾರೀ ಚಂಡು ಕಣ್ಣಿಗೆ ಕಾಣಲಿಲ್ಲ
ಚಿಕ್ಕವ್ವೂನ ಅರುಮಾನಿಗೇ ಚಂಡು ಮೊಕವಾಯ್ತಲ್ಲಾ
ವೇಗುದಲ್ಲಿ ವೋಗುತಾದೇ ಜೊಯ್ಯ ಜೊಯ್ಯ ಅನ್ನುತಾದೇ
ಮೇಗುದಲ್ಲಿ ಹಾರೀ ಚಂಡು ಗಗನದಲ್ಲಿ ಹೋಗುತಾದೇ

ಚಿಕ್ಕವ್ವ ಮನುಗೋ ಪಟ್ಟೆ ಮಂಚುದು ಮ್ಯಾಲೇ
ಪಟ್ಟೆ ಮಂಚುಕೋಗಿ ಚಂಡುನಾದರೆ ಬೀಳುತಾದೇ
ಚಿಕ್ಕವ್ವ ಮುಂಡೆ ಬಂದು ಚಂಡಾ ನೋಡುತಾಳೇ
ನನ ಕೈಗೇ ಸಿಕ್ಕಿದಾರು ನನ ಸವುತಿ ಮಕ್ಕಾಳೂ
ಚಂಡನಾ ತಕ್ಕಂಡು ಕೆನ್ನಗೆ ಮೂಗ್ಗೆ ವತಿಗಂಡ್ಳೂ
ಚಂಡು ತಗುಳಾಕೆ ಬರುತಾರೆ ನನ ಸವುತೀಯ ಮಕ್ಕಳೂ
ಅರುಮಲ್ಲಿ ಇಟಿದಾರೆ ತಕ್ಕಂಡು ಹೋತಾರೇ
ಒಬ್ಬುರಿಗೂ ಪತ್ತೇ ಇಲುದಂಗೆ ಚಂಡಾ
ಅವುಳ ರವಿಕೇಯಾ ಬಿಚ್ಚುತಾಳೆ ಅವುಳ ಎರಡು ಕುಷಾಯುಗದಾ
ಎರಡು ಕುಚಾಯದ ನಡುವಿಗೆ ಚಂಡನಾದ್ರೆ ಮಡಿಕಂಡ್ಲು
ಎಲಾ ಬದುರಾಇ ಜಾಯಿಕಟ್ಟಾ ಮೈಯೀಗೆ ಇಕ್ಕುತಾಳೇ
ಬದುರಾಗಿ ಬಿಕ್ಕಂಡ್ಲು ಮೈಯೀಗೆ ಜಾಯಿಕಟ್ಟಾ
ಬದುರಾಗಿ ಬಿಕ್ಕಂಡು ಅರುಮಾನೆ ವಳುಗವಳಲ್ಲಾ
ರಾಜೂರು ಮಕ್ಕುಳು ಚಂಡುನಾದರೆ ನೋಡುತಾರೇ
ಕಣ್ಣೀಗೆ ಕಾಣದಲ್ಲೋ ನೀಲ ಮುತ್ತಿನ ಚಂಡೂ
ಬಂದೀರೋ ಕೂತೀರೋ ಸಟಗೋಳ ಆಳುತಾವ ಕೇಳುತಾರೇ
ಎನಿರವ್ವಾ ಕೊಡಿರಪ್ಪ ಕೊಡಿರಯ್ಯ ನಮ್ಮಾಡ ಮಕ್ಕಳಾ ಚಂಡಾ
ನೀವೂ ಕೊಡಿರವಾ ನೀವು ಕೊಡೀರಣ್ಣಾ
ಬಂದೂರೊ ಜನುವೆಲ್ಲ ನಿಮ್ಮ ಚಂಡ ನಮ್ ಕಣ್ಣಲ್ಲಿ ಕಾಣೇನಲ್ಲಾ
ಎದ್ದೆದ್ದು ಎಲ್ಲಾವಾ ಹೋಗುತಾ ಅವುರೆಲ್ಲೋ
ರಾಜೂರ ಮಕ್ಕಾಳೂ ಎನಾಂತ ಮಾಡುತಾರೇ
ಕೇಳಣ್ಣಾ ಹಿರಿಯಣ್ಣ ನಮ್ ತಾಯೀಯ ಮಾತನ್ನಾ
ನಮು ತಾಯೀ ಮಾತ ಕೇಳಿದುದ್ದು ನಮ್ಮದು ತಪ್ಪಾಯ್ತು
ಮದುಲಾಗೇ ಹೇಳಿಲಿಲ್ವೆ ಬಡುಗುಲ ಬೀದಿಲಾಡುಬ್ಯಾಡೀ
ನೀಲ ಮುತ್ತಿನ ಚಂಡು ಎಲ್ಲೂವೆ ಹೋಗಿಲ್ಲಾ
ನಮ್ಮ ಚಿಕ್ಕಪ್ಪನ ಅರುಮನಿಗೆ ಚಂಡೂ ಹೋಗ್ಯಾದೇ
ಹೋಗಣ್ಣ ಹಿರಿಯಣ್ಣ ನಮ್ಮ ಚಿಕ್ಕವ್ವನ ಬಿದ್ದು ಬೇಡೋ
ನೀನು ತಂದೀಗೇ ತಲೀ ಮೊಗಾ ಹಿರಿಮಗನೀಗೇ ಕೂಡುತಾನೇ
ಹಿರಿಯಾ ಮಾಗಾನೂ ಅವುರ ಚಿಕ್ಕವ್ನ ಅರುಮನೀಗೇ

ಚಿಕ್ಕವ್ವ ಅರುಮಾನೇ ಬಾಗುಲಲ್ಲೋಗಿ ನಿತುಕಂಡಾ

ಯಾರವ್ವಾ ನಮು ತಾಯೀ ಯಾರವ್ವಾ ಚಿಕ್ಕವ್ವಾ

ನಿನ್ನ ಅರುಮನಿಗೇ ನನ್ನ ಚಂಡೂ ಬಂದೈತಲ್ಲೇ

ಕೊಡೇ ಕೊಡೇ ನನ್ನುಡುದವ್ವಾ ನೀಲ ಮುತ್ತಿನ ಚಂಡು ಕೋಡೇ

ನಮು ತಾಯೀಯ ವಟ್ಟೇಲಿ ಮೂರ್ ತಿಂಗ್ಳು ಕಾಣಾವ್ವಾ

ನಿನ್ನ ವಟ್ಟೇಲಿ ಆರು ತಿಂಗ್ಳು ಕಾಣಾವ್ವಾ

ಆಡೋ ಮಕ್ಕುಳು ಚಂಡು ಕೊಡೆ ಕೋಡೋ ನನ್ನಡುದವ್ವಾ

ರಾಜಕುಮಾರ ದೊರಿಯಲ್ಲೋ ತಾಯೀನ್ ಬಿದ್ದು ಬೇಡೂತಾನೇ

ಅವುರ ಚಿಕ್ಕವ್ವ ಮುಂಡ್ಯಲ್ಲೋ ವಳುಗಲಿಂದ ಬಂದುಳಲ್ಲೋ

ಹೋಗೋ ನನ್ನ ಸವುತೀ ಮಗೂನೇ ನೀನೂ

ಚಂಡೂ ಬಂದೈತೆಂತಾವ ನಿನಿಗೆ ಹೇಳಿದೋರೂ ಯಾರೋ

ನಿನ ಕೈಲಿ ನಾನು ಚಂಡಾ ಕೋಡೋದಿಲ್ಲಾ

ಕಿರಿಯಾ ತಮ್ಮನ ಕಳುಸೋಗೋ ಎಲು ರಾಜಾ

ಕಿರಿಯಾ ತಮ್ಮನ ಕೈಲಿ ಚಂಡಾ ನಾನು ಕೊಡುತೀನೀ

ನಿನ್ನ ಕೈಲಿ ಕೊಡೊದಿಲ್ಲ ಅಂತ ಹೇಳಿದ್ಲು ಮುಂಡೇ

ಆಗಾಲೇಯ ನೋಡೂ ಹಿರಿಯಾ ಮಾಗಾನೂ

ಅವುರು ವಜ್ಜುರುದಾ ಮಾಕಾವ ಸಪ್ಪಗೇ ಮಾಡೀಕಂಡೂ

ಲಗ್ಗೇ ತಾಕೇ ಆಳುತಾ ಬಂದಾ ರಾಜಾ

ಹೋಗಪ್ಪ ನನು ತಮ್ಮ ಚಂಡಾ ಕೋಡೋದಿಲ್ಲಾ

ಚಿಕ್ಕವ್ವ ನಿನ ಕೈಲಿ ಚಂಡಾ ಕೊಡುತಾಳಂತೇ

ಚಂಡಾ ನನಿಗು ತೋರ್ಸಿದುಳು ಹೋಗಪ್ಪಾ ಕೊಡುತಾಳೇ

ರಾಮಾನೋ ರಾಮಾ ರಾಮನೇ ರಾಮಾ॥

ಎರಡಾಳೂವೆ ಮಕ್ಕಳೂವೆ ಲಗ್ಗಾಯ ತಕ್ಕಂಡೂ

ಬಲಿಯಾನ ಎತಿಕಂಡು ಅರುಮನಿಗೆ ಹೋಗುತಾವೇ

ಅವುರ ತಾಯೀಗೆ ಪತ್ತೆಯಿಲ್ಲದಾಂಗೆ ಲಗ್ಗೇಯ ಮಡುಗುತಾರೇ

ಕಿರಿಯ ಕುಮಾರನಲ್ಲೋ ಅಡವೀಯ ಕುಮಾರಾ – ತಂದನಾನು

ಅರುಮನಿಗೇ ಹೋಗೀ ಚಿಕ್ಕಮಾನೆ ಬೀಗಾವ ತೆಗಿತಾನೆ – ರಾಮಾನೋ

ಅಯ್ಯ ಬಟ್ಟೆಯು ಇರುವಂತ ಕ್ವಾಣೀಗೆ ಹೋಗುತಾನೇ

ಬಟ್ಟೆ ಇರುವ ಕ್ವಾಣೀಗೇ ಹೋಗುತಾನೇ ಕಿರಿಮೊಗಾ – ತಂದನಾನು

ಪೀಟೂದು ಮ್ಯಾಲೆ ಹೋಗಿ ಕುತುಗಂಡು ಕಿರಿಮೋಗಾ
ಬೂತ್ಕಲ್ಲೀಯ ಮಂದೆ ಮಡಿಕಂಡೂ
ಬೂತ್ಕಲ್ದೀಲಿ ನೋಡಿಕಂಡು ಮಕಚೌರ ಮಾಡುತಾನೆ
ಮಕಚೌರಾವ ಮಾಡಿಕಂಡಿಕಂಡ ಚಿಕ್ಕವ್ವುನ ಅರುಮನಿಗೆ
ಚಂಡಾ ತರುವೋಕೆ ಸುಂಗಾರ ಆಗುತಾನೇ
ಸಣ್ಣ ಅಂಚಿನ ಪಂಚೇಯ ತಿರುವಿ ಕಾಸೇಯ ಹಾಕುತಾನೇ
ವಜ್ಜುರುದಾ ಅಂಗೀಯ ಮೈಯೀಗೆ ದರಿಸ್ಯಾನೇ
ಕಲಪಾತ್ತೀನ ಪೇಟಾವ ಮುಂದು ಕೋರ ಕಟ್ಟುತ್ತಾನೇ
ಬಲದಾ ಕಯಲ್ಲಿ ಭೂ ಚತ್ತಾದ ಕೊಡೆಯಲ್ಲೊ
ಎಡುದೇಯ ಕೈಯಲ್ಲಿ ಮುತ್ತೀನ ಚಾಕಾವೋ
ಕಾಲೀಗೆ ಮೆಟ್ಟುತಾನೆ ಚಿನ್ನಾದ ಮೇಜಾವ
ಎರಡು ಕೆಯ್ಯೀಗೂ ಎರಡು ಗರುಡೀಯ ಸರುಪಾಣಿ
ಅವುರು ಚಿಕ್ಕವ್ವ ಅರುಮನಿಗೆ ಹೋಗೋಕೆ ಸುಂಗಾರ ಆಗುತಾನೇ
ಅರುಮನೆಯ ಚಂದೂಕೆ ರಾಜಾನ ಕಳೇವೀಗೇ
ರಾಜಾನು ಸುಂಗಾರ ಆಗಿರುವ ಚಂದಾಕೇ
ಅರುಮಾನರುಮಾನೆಲ್ಲಾವ ಕತ್ತಿ ದಗ್ಗಾನೆ ಉರುದಾದೆ
ರಾಜಕುಮಾರ ದೊರಿಯಲ್ಲೊ ಅವುರ ಚಿಕ್ಕವ್ವ ಅರುಮಾನೇ
ಬೀದೀವಳುಗೇ ಹೋಗುತಾನೇ
ಬೀದೀಯ ಚಂದಾಕು ರಾಜಾನ ರೂಪೀಗು
ಬೀದೊಂದು ಬೀದೆಲ್ಲಾ ದಿಗು ಬೆಳಕೂ ಆಗುತಾದೇ
ಅವುರ ಚಿಕ್ಕವ್ವ ಮೂಡ್ಯಲ್ಲೋ ಮಾಡಿ ಮ್ಯಾಲೆ ನಿತುಗಂಡು
ಮ್ಯೆಯಿ ಕೆಯ್ಯೀಗೆಲ್ಲಾವ ಗಂದಾದ ಎಣ್ಣೀಯ
ಸಂಪೀಗೆಯ ಎಣ್ಣೆ ಎಣ್ಣೇಯ ಹಚ್ಚಾರೇ
ಅವುಳ ಮೆಯಲ್ಲಾ ಗಮಗೂಡಾಕೆ ಎಣ್ಣೇಯ ಎರಿಚಾರೇ
ಮಾರಾಣೀಯ ಸಂಗಾರ ಮಾಡೀ ನಿಲ್ಲಿಸ್ಯಾರೇ
ಅರುಮಾನೇಯ ಚಂದಾಕೆ ಇವುಳಾ ರೂಪೀಗೇ
ಅರುಮಾನೆಉಮಾನ್ಲೊವ ದಿಗ್ಗುನೆ ಕತ್ತಿ ಉರಿತಾದೇ
ಬೂತು ಕಟ್ಟೀಯ ಇಸುಗಂಡ ಮುಕವನಾದರೆ ನೋಡಿಕಂಡ್ಲು
ಕೇಳಿರಮ್ಮ ಗೌಡೀರಾ ಬಳಿ ಚಂದಾಗಿ ಸುಂಗಾರ ಮಾಡಿದೀರಿ

ನಾನು ಮನಗೂವ ಮಂಚಾವ ಸುಂಗಾರ ಮಾಡೋಗೀರಿ

ಅವುರೇಳ ಜಾನ ಸಕಿಯೋರು ಅವುರು ಮನಗೂವ ಮಂಚಾವ

ಮನಗೂವ ಮಂಚಾವ ಸುಂಗಾರ ಮಾಡುತಾರೇ

ನಾಕೂ ಮೂಲಿಗು ನಾಕು ಬಾಳೆಕಂ ನೆಡುತಾರೇ

ನಾಕೂ ಮೂಲಿಗು ನಾಕು ಊವಿನ ತೋರಣ ಹಾಕುತಾರೇ

ಊವೀನ ಹಾರಾವ ತ್ವಾರುಣಕೆಲ್ಲ ಧರಿಸ್ಯವರೇ

ನಾಕೂ ಮೂಲಿಗು ನಾಕು ನಂದಾ ದೀವೀಗೆ

ಮಾರಾಣಿ ಮನಗೋ ಮಂಚುದುಮ್ಯಾಲೇ

ಆಳೇ ಊವೀನ ಹಾಸೀಗೆ ತಾಳೆ ಹೂವೀನ ತಲೆದಿಂಬು

ಮಾಡಿ ಮ್ಯಾಲೆ ನಿತುಕಂಡು ರಾಜುರು ಬಾರೋದ ನೋಡುತಾಳೆ

ರಾಜುರು ಬರೋದು ನೋಡಿ ಅವುಳ ಜೀವಾನ

ರಾಜೂರಾ ರೂಪ ರಾವುಣೇಕೆ ನೋಡೀ

ಅವುಳ ಜೀವಾವ ಅವುಳೇಯ ಅವುಳೇಯ ಇಸಿಗಳುತಾಳೇ

ಈವತ್ತು ನನಿಗೆ ಲಗು ನಾದಾವರ

ನಾನು ಬಗಿಸಿದ್ದು ಹಾಲು ಅನ್ನ ಸಿಕ್ಕಿದ್ದು ಹಾಲು ಅನ್ನ

ನನಿಗೆ ಲಗುನಾದಾವಾರ ನನ ಗಂಡಾ ಬರುತಾರೇ

ಮಾಡೀಯ ಮ್ಯಾಗಾಳಿಂದ ದಡಿದಡಿನೇ ಇಳಿದಾಳೋ

ದಡಿದಡಿನೇ ಇಳಿದು ಅರುಮನಗೇ ಹೋಗುತಾಳೇ

ಬಲ್ಲಿರಮ್ಮ ಗೌಡೀರ ನೀವೇಳು ಜಾನ ಸಕಿಯೋರಾ

ನನ ಗಂಡಾನು ಬರೊವರೆಗೆ ನನ್ನ ಸುಂಗಾರ ಮಾಡಿರಮ್ಮ

ನನಿಗೇ ತಗುಲಾದ ವರವೇ ಬರುತಾದೇ

ಏಳುಜಾನ ಸಕಿಯೋರು ಒಬ್ಬಳಿಗೊಬ್ಬಳೂ

ಮಾರಾಣೀಯೋರ ಸುಂಗಾರ ಮಾಡಕೆ

ನೀರಾನ ಉಯ್ತಾರೆ ಮಯ್ಯಾ ತೊಳಿತಾರೇ

ಅವುರಾರುಮಾನೆವಳುಗೇ ಬಂಗಾರುದಾ

ಬಂಗಾರೂದಾ ತೀವುಟಿಗೇಯ ಮಾಣೇ

ತೀವುಟಿಗೆಯ ಮ್ಯಾಲೆ ನಿಲಿಸ್ಯವರೆ ದೊರೆಸಾನೀಯಾ

ಇವುರೇಳು ಜಾನ ಸಕಿಯೋರು ಸುಂಗಾರ ಮಾಡುತಾರೆ

ಜರತಾರೀ ಕುಚ್ಚೀನ ಸೀರೇಯ ಉಡುತಾಳೇ

ತಂದಾನಾನು ತಾನಾನಾ ತಾನಂದನಾ॥

ಸೀರೆಯ ಉಡಿಸಿದರು ರವುಕೇಯ ತೊಡಿಸಿದರು

ಮಾರಾಣಿಗೆ ಕಾಲಕಡಗಾವೂ

ಕಾಲಕಡಗಾದ ಮ್ಯಾಲೆ ವಂಕೀಯ ಬಾಪೂರೆ

ಅವೂಳು ತಲೆಯೇನ ಬಾಚುತಾರೆ ಎಣೆಗಂಟ ಮಾಡುತಾರೇ

ಮಾರಾಣೀಯ ತುರುಬೀಗೇ

ಮರು ಮಲ್ಲೀಗೇಯ ಹೂವು ಸುರುಗೀಯ ಸ್ವಾವಂತೀಗೇ

ಕೆಂಡ ನಾಗ ಸಂಪಿಗೇಯ ಮೊಗ್ಗು

ಕೆಂಡ ಸಂಪಿಗೇಯ ಮೊಗ್ಗ ಅವಳ ತುರಬೀಗೆ ಮಡಿಯುತಾರೇ

ಮರುಗಾ ಮಲ್ಲೀಗೆ ಸುರುಗಿ ಸ್ಯಾವಂತೀಗೇ

ಪಚ್ಚತಾನೇ ಪಾರಿಜಾತ ಹೂವಾ ಕುಚಾಯಾವ

ಮಾರಾಣೀಯ ತುರಬೀಗೆ ದರಿಸ್ಯಾರೇ

ಕಣ್ಣೀಗೆ ಕಣುಸ್ವಾಗೇ ಹಲ್ಲಿಗೆ ಹಲುಕಟ್ಟು

ಅವುಳ ಅಣೆ ಮ್ಯಾಲೆ ಇಡುತಾರೆ ಸಾಧಿನ ಬೊಟ್ಟು

ಸುಂಗಾರನ ಮಾಡ್ಯವರೆ ಏಳು ಜಾನ ಸಕಿಯೋರು

ಒಂದು ಮಂಡಿದ್ವಾವ ಹಾಸಿಗೆಯ ಹಾಸ್ಯವರೆ ದೊರೆಸಾನೀಗೆ

ಹಾಸಿಗೇಯ ಮ್ಯಾಲೆ ಸಣ್ಣ ಮಲ್ಲಿಗೇಯ ಹೂವಾ

ಸಣ್ಣ ಮಲ್ಲೀಗೇಯ ಹೂವಾ ಹಾಸಿಗೆ ಮ್ಯಾಲೆ ಎರಿಚವರೆ

ಹಾಸಿಗೇಯ ಮ್ಯಾಲೆ ಗಮಲಾವ ಎರಿಚವರೆ

ಮಂಚೊಂದು ಮಂಚೆಲ್ಲ ದಗಧಗನೆ ಉರಿಯುತಾದೇ

ಅವುಳು ಮನಗೋ ಮಂಚ ಕತಿಗಂಡು ಉರಿತಾದೇ

ಕೇಳಿರವ್ವ ಗವುದೀರ ಕೇಳಿರಮ್ಮ ಸಕಿಯೋರೇ

ಮಂಚ ಸುಂಗಾರ ಆದುಮ್ಯಾಲೇ

ಬಂಗಾರುದ್ ಪಟ್ಟೀಗೆ ತಿಂಡಿ ಸ್ವಾಮಾನ

ತಿಂಡೀಯ ಸ್ವಾಮಾನ ತಂದು ನೀವು ಇಡಿರಮ್ಮ

ಉತ್ತುತ್ತಿ ಬಾದಾಮಿ ದ್ರಾಕ್ಷಿಯ ಮಡಿಗ್ಯವರೇ

ಜಾಲಕ್ಷಿ ಅಚ್ಚಿನ ಬೆಲ್ಲ ಗೊನಿಯಾ ಬಾಳೇ ಹಣ್ಣು

ಮಡಿಸ್ಯವರೆ ಮಡಿಗ್ಯವರೆ ದೊರೆಸಾನೀರೂ

ಅಲ್ಲಿಂದಾವಾ ನೋಡಯ್ಯ ಕತ್ತರಿಸಿರ ಕಳಿಯಡಿಕೇ

ಕತ್ತರಿಸಿದ ಕಳಿಯಡಿಕೆ ಉತ್ತುರಿಸಿದಾ ಬಳಿಯಾಲೇ

ಸೋಸಿದಾ ಸುಣ್ಣಾ ಲಾವಂಗ ಜಾಯಿಕಾಯಿಪತ್ರೇ

ಜಯಿಕಾಯೀ ಪತ್ರೇಯ ಮಡಿಗ್ಯವರೆ ದೊರೆಸಾನೀರು

ಬಂಗಾರು ಪಟ್ಟೇಗೆ ತುಂಬಿನಾದುರೆ ಮಡಿಗ್ಯವರೆ

ಮಂಚಾದು ಮ್ಯಾಕೆ ಮಡಿಗ್ಯವರೆ ದೊರೆಸಾನೀರು

ಅಷ್ಟೊತ್ತಿಗೆ ನೋಡಯ್ಯ ರಾಜ್ರು ಹತುರ ಸೇರಿ ಬರುತಾರೇ

ಹೋಗರಮ್ಮ ಗವುಡೀರ ಹೋಗಿರಮ್ಮ ಸಕಿಯೋರೇ

ರಾಜೂರು ಬರುವೋ ಸಮಯಾ ಆಗೋಯ್ತು

ನೀವು ಏಳುಜಾನ ಸಕಿಯೋರು ಮನೆ ಬಿಟ್ಟು ಹೋಗಿರಮ್ಮ

ಸುತ್ತ ಮುತ್ತ ಚಿಟಿಗೆ ಬಾಗುಲು ಬಂದು ಮಾಡಿರಮ್ಮ

ಚಿಟಿಗೇಯ ಬಾಗೂಲ ಬಂದಾ ಮಾಡಿಕಂಡು

ಇವುರೇಳುಜಾನ ಸಕಿಯೋದು ಮನೆಬಿಟ್ಟು ಹೋಗುತಾರೇ

ಮನೆಬಿಟ್ಟು ವಾದು ಮ್ಯಾಲೆ ರಾಜೂರು ಬಂದು

ರಾಜೂರು ಬಾಗಿಲಿಗೇ ಬಂದೇ ವಾದ್ರೂ

ಯಾರವ್ವ ಚಿಕ್ಕವ್ವ ನನ್ನಡುದೋಳೆ ತಾಯೀ

ಚಂಡೂ ಬಂದ್ಯೆತಂತೆ ನೋಡವ್ವ ನನ್ನಡುದವ್ವ

ನಮು ತಾಯಿ ಬ್ಯಾರೇ ನೀನು ಬ್ಯಾರೇನವ್ವಾ

ಅಕ್ಕನು ಹೊಟ್ಟೇಲಿ ಆರ್ತಿಂಗ್ಳು ನಿನ್ನ ಹೊಟ್ಟೆಲಿ ಮೂರ್ ತಿಂಗ್ಳುಉ

ನಿನ್ನ ಹೊಟ್ಟೇಲಿ ಹುಟ್ಟೀದ್ ಮಕ್ಕಾಳು ಅಲುವೇನೇ

ಕೊಡೆ ಕೋಡೆ ನನ್ನಡುದವ್ವ ನೀಲ ಮುತ್ತಿನ ಚಂಡು ಕೋಡೇ

ರಾಜೂರು ಮಾಗ ಕೇಳುವಾಗ ಚಿಕ್ಕವ್ವ ರತುನಂಗಿ।

ಯಾರಪ್ಪ ಎಲುರಾಜಾ ನನ್ನ ಅವ್ವ ಅಂತ ಕರಿಬ್ಯಾಡಾ

ನನ್ನ ಅವ್ವ ಅಂತ ಕರುದಾರೆ ಬಿಡುತೀಯ

ಬಾರಾಪ್ಪ ಎಲುರಾಜ ನೀನೂವೆ ನಾನೂವೆ

ನೀನೂವೆ ನಾನೂವೆ ಪಟ್ಟಿ ಮಂಚುದು ಮ್ಯಾಲೇ

ಪಟ್ಟೇಯ ಮಂಚುದು ಮ್ಯಾಲೆ ಪಗಡೇಯ ಆಡೋಣ

ಪಗಡೇಯ ಆಡಿಕಂಡು ನಮ್ಮ ಅಕ್ಕೆ ಪ್ರೀತಿ ಕಳ್ಕಳನಾ

ಎಲೆ ಬೇಡೀ ಆಡುವವ್ವ ನೀನು ಕೆಟ್ಟು ಮಾತೂ ಆಡಬೇಡ

ಚಂಡು ಕೋಡೆ ಆಡುದವ್ವ ಕೆಟ್ಟಮಾತಾ ಆಡಬೇಡ

ಕೇಳಪ್ಪಾ ಎಲೆ ರಾಜಾ ರಾಜಕುಮಾರ ದೊರೆಯೇ

ಕೇಳಪ್ಪ ಎಲೆ ರಾಜಾ ರಾಜಕುಮಾರ ದ್ವಾರೇ

ನಿನೀಗೆ ನಾನು ಸ್ವಾದುರದ್ ಮಾವುನ್ ಮಗಳೂ

ಸ್ವಾದುರದು ಮಾವುನ್ ಮನಗ ನೀನು ಅಗಬೇಕು

ಮಟ್ಟಿನಾ ಮದಲಾಗಿ ನನ್ನ ನಿನಗೇ ಕೇಳಿತ್ತು

ನನ್ನ ಚಂದಾವ ನೋಡುಲಾರದೆ ನಿಮ್ಮಪ್ಪನೇಯ ತಂದುಕಂಡ್ರು

ಬಾರಾಪ್ಪ ನನು ರಾಜ ನನ್ನಾನ ನಿರಾಸೇಯ ಮಾಡುಬ್ಯಾಡ

ಮಂಚಾದ ಮ್ಯಾಕೆ ಬಾರೋ ರಾಜಾ

ಲೇ ಬಿಡೆ ಬೀಡೆ ನನ್ನಡುದವ್ವ ನೀನು ಕೆಟ್ಟುಮಾತ ಆಡಬ್ಯಾಡ

ಅಪ್ಪಾನೆ ಬಂದ ಮ್ಯಾಲೆ ತಾಯಿ ನೀನು ಆಗಿಹೋದೆ

ತಿಪ್ಪೀಗೆ ವಾದು ಮ್ಯಾಲೆ ಅದು ಕಸುವೇ ಆಗುತಾದೇ

ಕೆಟ್ಟಮಾತ ಆಡಬ್ಯಾಡ ಚಂಡು ಕೊಡೆ ನನ್ನಡುದವ್ವ

ಎಲು ಎಷ್ಟೂವೇ ವಗ್ಗಿಸಿದುರೂವೇ ಬಗ್ಗಲ್ಲಾ ಬಗುವಂತಾ

ನನ್ನ ಚಂದಾವ ನೋಡಲರುದೆ ಇಂಗರ ಗ್ಯಾನ ಬೀಳುಬರುದೆ

ಇಂಗರು ಗ್ಯಾನ ಬೀಳಲಿ ಅಂತ ಚಿಕ್ಕವ್ವಾ

ನನು ಮೈಮಣಿಕೆ ತೋರಿದುರೆ ಗ್ಯಾನ ಇಂಗೇಯ ಬೀಳುತಾನೇ

ಗ್ಯಾನ ಬೀಳುತಾನೆ ಅಂತ ಚಿಕ್ಕವ್ವ ಮುಂಡ್ಯಲ್ಲೋ

ಅವಳ ಸೀರೇಯ ಬುಳುಬುಳುನೆ ಅಸಿಯುತಾಳೇ

ಸೀರೇಯ ಬಿಚ್ಚಿದುಳು ಅವುಳು ರವಿಕೇಯ ಬಿಚ್ಚುದುಳು

ರಾಜೂರ ಮುಂದುಗಾಡೆ ಬರಿ ಬೆತ್ತಲ್ಲೇ ನಿಂತವಳೆಲ್ಲಾ

ಅವುನ ಅವುಳ ರೂಪಾವ ನೋಡಿ ಮೈ ಮಣಿಕೇಯ ನೋಡಿ

ಆಗ ರಾಜ ಅಡ್ಡು ಮಾರೇಯ ತಕ್ಕಂಡಾ

ಆಡ್ಡು ಮಾರೇಯ ತಕ್ಕಂಡು ನಿಂತವನೇ ರಾಜಾ

ಏನಯ್ಯ ನನು ರಾಜಾ ನನು ಮ್ಯಾಲೆ ಗ್ಯಾನ ಇಲುವೇನೋ

ನೀನೇಯ ಆದೂರೆ ನೀನು ಗಂಡುಸೇಯ ಅಲುವೇನೋ

ನಿನು ಕಾಸೇ ನಿನುಗಿಲುವೇನು ನಿನ ಮೀಸೆ ನಿನುಗಿಲುವೇನು

ನಿನುಗೆದೆಯಾ ಮ್ಯಾಲೆ ಕ್ವಾಮ ಮೊದಲೇ ನಿನಗಿಲುವೇನೋ

ನೀನೇಯ ಗಂಡುಸೇ ನೀನಲುವೇನೋ

ನನು ಮ್ಯಾಲೆ ಗ್ಯಾನ ನನಗಿಲುವೆನೋ ನನು ರಾಜಾ

ಎಷ್ಟೊವೇ ಬಗ್ಗಿದುರವೆ ಬಗ್ಗುಲಿಲ್ಲ ಹುಡುಗಾ
ಇರಲಿ ನನ್ನ ಸವುತಿ ಮಾಗ ನನಿಗೇ ಬಗ್ಗುಲಿಲ್ಲಾ
ಮಂಚುದಾ ಮ್ಯಾಕೋಗಿ ಹುಟ್ಟಿದಾ ನಿರ್ವಾಣುಕೇ
ಹುಟ್ಟಿದಾ ನಿರ್ವಾಣಕೆ ಹೋಗಿ ತಾನು ಮನಿಗಿದಳೂ
ಚಂಡಾನ ತಗಿದು ನನ್ನ ಎದಿಮ್ಯಾಲೆ ಮಡಿಕಂಡು
ಹೋಗುತಾಲೆ ಮಂಚಾಕೆ ಅಂತರಾಯ ಮನಿಕಂಡ್ಳು
ಹುಟ್ಟಿದ ನಿರುವಣಕೆ ಅಂತರೇಯ ಮನಿಗ್ಯವಳೆ
ಎಲಿ ಚಂಡಾನ ತೆಗುದಾಳು ಅವುಳ ಎರಡು ಕುಚಾಯ
ಎರಡು ಕುಚಾಯದೊಳಗೆ ಚಂಡಾನ ಇಡುತಾಳೆ
ಇಂಗ್ಯಾರ ಗ್ಯಾನ ಬೀಳುತಾನೆ ಅಂತ ಮನಿಕಂಡ್ಲು
ರಾಜೂರ ಮಗನಲ್ಲೋ ಇವುಣು ಅಡವೀಯ ಕುಮಾರ
ಈ ಮುಂಡೆ ತಾವ ನಾನು ಚಂಡು ಬಿಟ್ಟು ವಾದರೇ
ನಾನೆಂಗಸೀಗೆ ಕಾರೇ ಆಗುತೀನಿ ಅಂತಾನೇ
ಅಡವೀಯ ಕೂಮಾರ ಅವುರ ಚಿಕ್ಕವುನ ಅವುಮಾನ
ಅವುಮಾನ ನೋಡಿದುರೆ ನಾನು ದೋಷಕೊಳಪಡುತೀನಿ
ಚಂಡಾ ಬಿಟ್ಟು ವಾದಾರೆ ನಾನು ಹೆಂಗೂಸು ಆಗುತೀನಿ
ಅಡ್ಡು ಮಾರೇಯ ತಕ್ಕಂಡು ಮುತ್ತೀನ ಚೌಕಾವೂ
ಮುತ್ತಿನ ಚಾಕಾವ ತಕ್ಕಂಡು ರಾಜಾ
ಎರಡೂ ಕಣ್ಣೀಗೂ ಕಟಿಗಂಡಾ
ಮಂಚಾಕೆ ಬರುತಾನೆ ಮಂಚಾವ ಹಿಡುಕಂಡಾ
ಅವುರ ಚಿಕ್ಕವ್ವ ಮನಗೂವ ಮಂಚಾಕೆ ಹೋಗುತಾನೆ
ಮಂಚುದು ಮ್ಯಾಲೆ ವಾದಾ ರಾಜಾ
ಅವುಳೆದೆ ಮ್ಯಾಲಿನ ಚಂಡು ಇವುನು ಬಾಯೀಲಿ ಕಚಿಕಂಡ
ನಮ್ಮ ತಾಯೀಯ ಎದೆ ಹಾಲ ಕುಡಿದಂಗೆ ಆಯೀತು
ಅಂತಾ ರಾಜಾ ಹಿಮದೂ ಮಾರೇಲಿ ತಿರುಗೀದಾ
ಹಿಂದುಮಾರೆ ತಿರುಗಿದಾಗ ಅವುನ ಚಿಕ್ಕವ್ವ ಮುಂಡ್ಯಲ್ಲೋ
ನನ್ನ ಸವುತೀಯ ಮೊಗ ನನ್ನಾಸೆಯ ನೀರಾಸೆಯಾ
ಮಾಡಿದ ಅಂತ ಹೇಳಿ ದಡುಕುನೆ ಮ್ಯಾಕೆ ಎದುಳಲ್ಲ
ಅವುನ ತಲೆ ಮ್ಯಾಲಿದ್ದ ಮುತ್ತೀನ ಚೌಕಾವ

ಮುತ್ತೀನ ಚೌಕಾವಾ ಕಿತುಗಂಡ್ಲು ಚಿಕ್ಕವ್ವಾ
ಕಿತುಗಂಡು ಮಂಚಾಕೆ ಮಡುಗಿದುಳೂ
ಇವುನು ಅಡವಿಕುಮಾರ ದ್ವಾರೆ ಚಂಡನ್ನು ತಕ್ಕಂಡೂ
ಹಾರಿ ಮನಿಯಾ ಬಿದ್ದಾ ರಾಜಕುಮಾರು ದ್ವಾರೇ
ಅವುರ ಚಿಕ್ಕವ್ವ ರತುನಂಗೀಗೆ ಆಡಿನಾಚಿಕೆ ಆಯಿತು ಬಗುವಂತಾ
ಬಲ್ಲಿರಮ್ಮ ಗೌಡೀರಾ ಬಲ್ಲಿರಮ್ಮ ಸಕಿಯೋರೇ
ಎಷ್ಟೇ ಗುಗುಸಿದು ಬಗ್ಗುಲಲ್ಲಿ ನನ್ನ ಸವುತಿ ಮಾಗಾ
ನನ್ನ ಮುಂದಾಲೆಯ ತರಿರಮ್ಮ ಮುಂದೆ ಗುಡ್ಡೆ ಉಯ್ಯಿಸಮ್ಮ
ನನ್ನ ಸೀರೇಯ ಹರಿರಮ್ಮ ರವುಕೇಯ ಗೀಳಿರಮ್ಮ
ಏಳುಜಾನ ಸಕಿಯೋರು ಅವುಳ ಮುಂದಾಲೇಯ ತರಿತಾರೇ
ಅವುಳ ಮುಂದಾಲೇಯ ತರಿದು ಮುಂದೆ ಗುಡ್ಡೆ ಉಯ್ತಾರೆ
ಅವುಳ ಸೀರೇಯ ಹರಿತಾರೆ ರವುಕೇಯ ಗೀಳುತಾರೆ
ರತುನಂಗೀಯ ಮುಂದೆ ಗುಡ್ಡೇಯ ಉಯುತ್ತಾರೆ
ಕೇಳೀ ಕೇಳಿರಮ್ಮ ನೀವೇಳು ಜಾನ ಗೌಡೀರು
ನನ್ನ ಬಣ್ಣದಾ ಬಳಿಯಾ ನೀವು ಬಾಗುಲಲ್ಲಿ ವಡಿರಮ್ಮ
ನನ ನೀಲೀಯ ಬಳೆಯಾ ನೀರಲ್ಲಿ ವಡಿರಮ್ಮ
ನಾನು ನೆನ್ನೇಯ ತೊಟುದುನಲ್ಲಿ ರೇಕೂರ ಗಾಜಿನ ಬಳೆಯ
ಸಣ್ಣಾ ಸಣ್ಣಾಗಿ ಹಾಲಲ್ಲಿ ವಡಿರಮ್ಮ
ನನ್ನ ಪಟ್ಟೇಯ ಬಳೆಯ ನೀವು ಪಟ್ಪಾನೆ ವಡಿರಮ್ಮ
ಅವುಳ ಬಳೆಯನಾನ ವಡೆದು ಮುಂದೆ ಗುಡ್ಡೆ ಉಯುತ್ತಾರೆ
ಮುಂದೆ ರಾಸೀ ವಡುದಾರೂ ಅವುರೇಳು ಜಾನ ಸಕಿಯೋರು
ಏಳು ಜಾನ ಗೌಡೀರ ನೀವು ಬಳಿಯಾ ಗಾಜಾ ತಕ್ಕಂಡು
ನನ ಮೈಯ ಕೈಯ ಎಲ್ಲಾನು ನೀವು ಸಣ್ಣಾಗಿ ಗೀಳಿರಮ್ಮ
ಅವುರೇಳು ಜಾನ ಸಕಿಯೋರು ಬಳಿಯಾ ಗಾಜಿನಲ್ಲೀ
ದೊರೆಸಾನೀಯ ಮೈಯಾ ಗೀಳುತಾರೇ
ಅಡ್ಡು ಕುಯ್ತಾವ ಕುಯ್ಯತ್ತಾರೆ ಉದ್ದು ಕುಯ್ತಾವ ಕುಯ್ಯುತ್ತಾರೆ
ಅವಳ ಮಯ ಕಯ್ಯ ಗೀರಿ ರಾಮು ರಕುತ ಹರಿತಾದೇ
ಕೊರುಗ್ರಾವ ನಳ್ಳುತ್ತಾವ ಪಟ್ಟೆ ಮಂಚುದು ಮ್ಯಾಲೇ
ಪಟ್ಟೇ ಮಂಚುದು ಮ್ಯಾಲೆ ಮಕ್ಕಾಡೆ ಮನಿಗ್ಯವಳೆ

ಗಳಿಗೆ ಚಣಕಾ ಚಣಾಕೇ ಮಯಿ ಕೈಯಿ ಊದುತಾದೇ

ಆಗಲೇ ದೊರೆಸಾನಿ ಅವುರೇಳು ಜಾನ ಗೌಡೀರ್ಗೆ

ಹೋಗಿರಮ್ಮಾ ಗೌಡೀರ ನೀವು ಸಂಬ್ಯಾವ ತಕ್ಕಂಡೂ

ನಾಳಿಂದಾವ ನೀವು ಕೆಲುಸಾಕೆ ಬರಬೇಡೀ

ದರುಮಾವತೀಯ ರಾಜೂರಿಗೆ ಅಡುವಿ ಅರಣ್ಯದಲ್ಲಿ

ಅಡುವೀಯ ಅರುಣ್ಯದಲ್ಲಿ ಹನ್ನೆರಡೊರುಸ ತುಂಬಿತಲ್ಲಾ

ಅವುರು ದಂಡು ದಳಪತಿ ಕಂಡು ಮಂತ್ರೀ ಮಾರ್ಬಾಲ ಕರುಕಂಡು

ಅವುರ ಪಟ್ಟುಣಾದ ಕಡಿಕೇ ಮಕುವಾದ್ರು ರಾಜೂರು

ಎರಡು ಪಾಯಾಣ ಬಂದಾರು ಮೂರು ಪಾಯಣ ಬಂದರೂ

ಐದಾ ಪಯಾಣಾವ ಬಂದಾರು ದೊರೆಗೋಳು

ಕಿದ ಪಾಯಾಣವಾವ ಬಂದೂ ಕಾಡಿನಲ್ಲಿ ಗ್ಯಾನಾವ ಮಾಡುತಾರೇ

ಬಡಗಾಲಾ ರಾಜ್ಯಕ್ಕೆ ಈವೊತ್ತು ನಾನೂ

ಕರಿಯೋಳು ಮಾನೀಗೆ ಈ ವೊತ್ತು ಹೋಗುಬೇಕೂ

ಗ್ಯಾನಾವಾ ಮಾಡಿಕಂಡು ದೊರಿಗೋಳು ಬರುತಾರೇ

ಕಿರಿಯೋಳು ಅರುಮಾನೆ ರಾಡಾ ಬಾಗುಲಿಗೆ ಬಂದು

ರಾಡು ಬಾಗುಲಿಗ್ ಬಂದ್ರೂವೇ ಕಿರಿಯೋಳೂ

ಅವುತ್ತಿನಾ ದಿವಸ ಆರ್ತಿ ತಗುಂದೇ ಹೋಗುದಿಲ್ಲಾ

ರಾಡು ಬಾಗುಲಲ್ಲಿ ನಿಂತುಗಂಡು ಕಡಿ ಕಡಿ ಕೋಪ ತಾಳುತಾರೇ

ಆರ್ತೀಯಾ ತರುಲಿಲ್ಲ ಈ ಮುಂಡೆ ಇವುಳು ಯಾರ್ನೋ ಕಾಣೇ

ಮಿಂಡುಗಾರುನ ಜೊತೀಯ ಆಕ್ಯಂಡವಳೆ ಈ ಮುಂಡೇ

ಆದಕಾರ್ತಿ ತಂದಿಲ್ಲ ಕಡಿ ಕಡಿ ಕ್ವಾಪ ತಾಳುತಾರೇ

ಆನೇಯ ಮ್ಯಾಗುಳಿಂದಾ ನೈಗುದಾ ರಾಜಾ

ಏಕಾ ಏಕೀ ಹೋಗುತಾರೆ ಕಾಲಿನ ಮೆಟ್ಟಿ ಅಸೀಲಿಲ್ಲಾ

ಅರುಮನಿಗೇ ನುಗ್ಗೀ ವಾದುರಲ್ಲೋ

ಅರುಮಾನರುಮಾನೆಲ್ಲಾವ ಗಬ್ಬಾ ವಾಸ್ನೆ ವಡೀತಾದೇ

ಮೈಕೆಯಲ್ಲಾ ಕೀವು ರಗುತಾ ಸುರಿತಾದೆ

ಕೊರಗ್ತಾವ ನೆಳುತ್ತಾವ ಮನಿಗ್ಯವಳೆ ದೊರೆಸಾನೀ

ಗಬ್ಬೂ ಗಬ್ಬೂ ವಡೀತಾಳೇ ವಲಸೂ ವಲಸೂ ವಡೀತಾಳೇ

ರಾಜುರೂ ನೋಡೂ ವಾಸುನೇಯ ತಡೀನಾರುದೇ

ಮಂಚುದು ಮ್ಯಾಲೆ ಹೋಗಿ ಅವುಳನೂ ನೋಡುತಾರೇ
ಮೂಗಾ ಮುಚಿಗಂಡ್ ಮಲಗುವ ಮಂಚದಲ್ಲಿ ಕುತುಗಂಡ್ರು
ಎಲೆ ಇದು ಏನೇ ರತುನೀ ನಿನ್ನ ಹಾಳಾ ಹಗುರಾಣಾ
ಕೇಳುತಾರೇ ರಾಜಾ ಅವುರಾನಾ ಮಡುದೀಯಾ
ಅಗ ದೊರಿಸಾನಿ ಕೊರುಗ್ತಾ ನೆಳ್ಳತ್ತಾ ಹೇಳುತಾಳೇ
ಮ್ಯಾಲಕೇ ಎದ್ದು ಅವುಳು ಕಣ್ಣೀರಾ ಬುಡುತಾಳೇ
ಕೇಳಪ್ಪಾ ಎಲೆ ರಾಜಾ ನಿನ್ನೇಯ ರಾತ್ರೇಯಾ
ನಿನ್ನೇಯಾ ರಾತ್ರೇಯ ನಿನ್ನೆರಡಾಳೂ ಮಕ್ಕಳು ಬಂದೂ
ನಿನ್ನೆರಡಾಳು ಮಕ್ಕುಳು ಬಂದು ನನ ಮೈಯ ಕೈಯ ಕೆಡಿಸಿದುರೂ
ನನ್ನ ಮೈಯ ಕೈಯ ಕೆಡಿಸಿ ನನ್ನ ಮಾನುಬಂಗಾ ಮಾಡಿದುರೂ
ಅವರೆಷ್ಟು ಬಗ್ಗಿದುರೂ ನಾನೂ ಬಗ್ಗುಲಿಲ್ಲಾ ಮಾಸ್ವಾಮೀ
ನಿನ್ನಿಬುರಾಳು ಮಕ್ಕಳೀಗೆ ನಾನು ಒಬ್ಬು ಹೆಂಗ್ಸು ಅಡುವೇ
ನನ್ನ ಮುಂದಾಲೆಯ ತರುದೂ ನನ್ನ ಸೀರೆ ರವಿಕೆ ಹರುದೂರು
ನನ್ನ ಬಳೆಯ ಬಂಗಾರಾವಾ ವಡುದು ವಾದ್ರೂ ಸ್ವಾಮೀ
ನಾನು ನಿಮಗಿಗೂ ನಾನೂ ಹೆಡತಿ ನಿಮ್ಮಕ್ಕಳಿಗೂ ನಾನು ಹೆತ್ತೀ
ನೀವು ಆಳೋದಿದ್ರೆ ಆಳುಬೇಕು ನೀವು ಆಳುದೇಯ ವಾದೂರೇ
ನನ್ನಾ ನೀವು ನಿಮ್ಮ ಮಕ್ಕಳ ಕುಟ್ಟೆ ಕಳುಸಯ್ಯ
ನೀವೇನೂ ಗಂಡುಸಲುವೆ ತುಟಿ ಮ್ಯಾಲೆ ಮೀಸಿಲುವೇ
ತುಟಿ ಮ್ಯಾಲೆ ಮೀಸಿಲುವೆ ಎದಿ ಮ್ಯಾಲೆ ರ್‍ವಾಮಿಲುವೇ
ಬಂದಾಕೆ ನೂರು ಸುಳ್ಳಾದುರೆ ಹೇಳುತಾಳೇ
ದರುಮಾವತಿಯ ರಾಜುರು ಅವುರಿಗೆ ಗಾರುದಿಪ್ಲು ಬಂದೇವೋತೊ
ನನ್ನಾ ಮಕ್ಕಳು ಹುಟ್ಟಿ ನನಿಗೆ ಮಿರ್‍ತು ಆದಾರೂ
ತಲೆ ಮ್ಯಾಲೆ ಕೈಯಾಕ್ಕಂಡು ಯೇಚ್ನೆ ಮಾಡ್ತಾ ಕುಂತವರೇ
ಯಾಕಾವೆ ರತುನಗಿ ನನ್ನ ಮಕ್ಕಳಾ ಮ್ಯಾಲೇ
ನನ್ನ ಮಕ್ಕ:ಳ ಮ್ಯಾಲೇ ನೀನನ್ನಾಯಾವ ಹೇಳುಬ್ಯಾಡಾ
ನನ್ನ ಮಕ್ಕಾಳು ಅಂತೋರಲ್ಲಾ ಕಾಣೇ
ನನ್ನು ಮಕ್ಕಾಳೂ ಬಂದಿದ್ದುರೋ ಇನ್ನಾರಾವಾ ಬಂದಿದೇರೇ
ಕೇಳೀರಿ ಮಾಸ್ವಾಮಿ ಸುಳ್ಳಾ ನಾನು ಹೇಳೋದಿಲ್ಲಾ
ನಿಮ್ಮಕ್ಕುಳುದು ಗುರುತಾ ತೋರ್‍ತಿನಿ ಮಾಸ್ವಾಮೀ

ಅಡವೀಯ ಕುಮಾರಾನ ಮುತ್ತೀನಾ ಚೌಕಾವಾ
ಮುತ್ತೀನ ಚೌಕಾವಾ ತಂದು ಮುಂದಾಕೆ ಎಸೀತಾಳೇ
ನೋಡೀರಿ ಮಾಸ್ವಾಮಿ ಈ ಚೌಕಾ ಯಾರಾದೂ
ಇವುರು ದರುಮಾವತೀ ದೊರೇ ಚೌಕಾ ತಗುದು ನೋಡುತಾರೇ
ಕಿರಿಯಾ ಮಗುನುದು ಚೌಕದಲಿ ಹೆಸರು ಇರುವೋದು
ಆಗುಲೇಯ ರಾಜ ಬೂಮಿಗರುಕಂಡು ಬಿದ್ದುನಲ್ಲೋ
ಕೇಳೋಲೆ ಎಲೆ ರತುನಂಗಿ ನನ ಮಕ್ಕಾಳು ಹುಟ್ಟೀ
ಈವತ್ತು ನನಿಗೆ ಮಿರ್ತ್ತಾರು ಆದುರಲ್ಲೇ
ಎರಡಾಳೂನಾ ಮಕ್ಕಳಾ ಏನು ಮಾಡುಲೇ ಎಲೆ ರತುನೀ
ಕೇಳೀರೀ ಮಾಸ್ವಾಮಿ ಮಕ್ಕಳು ಮ್ಯಾಲೆ ಆಸೆ ನಿಮಗೇ
ಮಕ್ಕಳು ಮ್ಯಾಲೆ ಆಸೇ ನಿಮಗೇ ನನು ಮ್ಯಾಲೆ ಆಸೋ ನಿಮಗೇ
ಕೇಳಾಲೇ ಎಲೆ ರತುನೀ ನನ್ನ ಮಕ್ಕುಳು ಮ್ಯಾಲೆ ಆಸಿಲ್ಲಾ
ನಿನು ಮ್ಯಾಲೇ ಆಸೇ ವರತು ಮಕ್ಕುಳ ಮ್ಯಾಲೆ ಆಸಿಲ್ಲಾ
ಮಕ್ಕುಳು ಮ್ಯಾಲೆ ಅಸಿಲ್ಲಾಂತ ನನಿಗೆ ಬಾಸೇಯ ಮಾಡಿಕೊಡೀ
ಬಲಗೈ ಬಾಸೇ ಮಾಡೀದಾ ಕಿರಿಯಾನಾ ಮಡುದೀಗೇ
ಬಾಸೇಯಾ ಮಾಡಿಸಿಕಂಡು ಮ್ಯಾಲೆ ಅವುರ ಚಿಕ್ಕವ್ವ ಮುಂಡೇ
ಕೇಳೀರಿ ಮಾಸ್ವಾಮಿ ನಿಮ್ಮೆರಡಾಳೂ ಮಕ್ಕಾಳೂನೂವೆ
ಅಡುವೀ ಅರಣ್ಯಾಕೆ ಕರುಕಂಡು ಹೋಗಬೇಕೂ
ನೀರು ನೆರಳೂ ಇಲ್ಲುತ್ತಾವ ನಿಮ್ಮೆರಡಾಳು ಮಕ್ಕುಳುನೊ
ಎರಡಾಳು ಮಕ್ಕೂಳಾ ತಾಲೇಯ ಊತುಬೇಕ
ನಿಮ್ಮೆರಡಾಳು ಮಕ್ಕಾಳ ತಲೆಯ ಬುರುಡೇಯ ತಂದೂ
ಬಚ್ಚಲೀಗೆ ಊಣೀಸಿ ಅದ್ರು ಮ್ಯಾಲೆ ಕುತುಗಂಡು
ನೀರಾನ ಮೀಬೇಕು ಅಂತಾವ ಹೇಳುತಾಳೆ
ನಿಮ್ಮೆರಡಾಳೂ ಮಕ್ಕೂಳ ಕಣ್ಣ ಬಳೆಯ ಕತುಗಂಡೂ
ನನು ಕನುಡೀ ಅಂತಾವಾ ಮಾಕಾವ ನೋಡಬೇಕೂ
ನಿನ್ನೆರಡಾಳೂ ಮಕ್ಕಾಳಾ ಕಡುದಂತ ರಗುತಾವಾ
ನನ್ನಣೆಯಾ ಮ್ಯಾಲೇ ನಾನು ಬಟ್ಟುನಾಮ ಇಕ್ಕುಬೇಕೂ
ನಿನ್ನೆರಡಾಳಾ ಮಕ್ಕಳಾ ತಲೆಯಾ ಮಿದ್ಲೆ ತರುಬೇಕೂ
ತಲೆಯ ಮಿದ್ಲೇ ತಂದು ನನ್ನ ಮೈಕೈಗೆಲ್ಲಾ ಸರುವ ಬೇಕೂ

ಮೈಕೈಗೆಲ್ಲಾ ಸರುವಿಕೊಂಡು ನೀರಾ ನಾನು ಮೀಬೇಕೂ

ನೀರಾ ನಾನು ಮೀದಾರೆ ಮದ್ಲಿಗಿಂತ ಹೆಚ್ಚೀನಾ

ರೂಪಾ ಹೆಣ್ಣೂ ನಾನೂ ಆಗುತೀನೀ

ಆಗಾ ನಾವು ಬಾಳಿಕಂಡು ಹೋಗಾನಾ

ಒಂದಕೆ ನೂರಾ ದೂರ ಹೇಳಿದ್ಲು ಮುಂಡೆ

ದರುಮಾವತೀ ದೊರೆ ಅವರ ಕಿರಿಯಾ ಹೆಡತೀಯಾ

ಕಿರಿಯೇಡ್ತಿಯಾ ಮಾತೂ ಬಾಳಾ ನೊಟ್ಟಾಗಾಯ್ತಲ್ಲಾ

ಅವುಳ ಮಾತ್ನೇಯ ಕೇಳಿಕಂಡು ದರುಮಾವತಿ ಪಟ್ಟುಣಾಕೇ

ದರುಮಾವತೀ ಪಟ್ಟಾಣಾಕೆ ದಂಡ ಕರುಕಂಡೂ

ಆನೇಯ ಮ್ಯಾಲೇ ಅಂಬಾರೀ ಆಕಿಸ್ಕಂಡೂ

ಅವುರಾನ ಪಟ್ಟುಣಾಕೆ ಹೋಗುತಾರೇ ದೊರೆಗೋಳೂ

ಅವುರಾ ಪಟ್ಟುಣುದಾ ರಾಡು ಬಾಗುಲಲಿ ಹೋಗುತಾರೇ

ಅವುರಾನ ಮಡುದೀ ಹಿರಿಯೋಳು ಜೀನಾವತೀ

ರಾಜುರೂ ಬಂದಾರು ಅಂತ ಆರುತೀಯಾ ಮಾಡಿಕಂಡೂ

ಸಕಿಯೋರಾ ಕರಕಂಡು ವಾದ್ಯ ಸಮೇತವಾಗೀ

ರಾಡು ಬಾಗಿಲೀಗೆ ಹೋಗುತಾಳೇ ಜೀನಾವತೀ

ಜೀನಾವತೀ ಬರೂವೂದ ನೋಡಿದುರೂ ರಾಜೂರೂ

ಅವುರಾನೇಯ ಮ್ಯಾಗುಳಿಂದಾ ಕ್ಯಾಳಿಕೇ ನ್ಯಗುದಾರೂ

ಆರ್ತೀಯ ಮಾಡೋಕೋದ್ರೆ ಇವುರಡ್ಡು ಮೋರೆ ತಕ್ಕಂಡ್ರೂ

ಇದುವೇನೋ ಮಾಸ್ವಾಮೀ ನಾನು ಮಾಡಿರ್ ಅನ್ಯಾಯಾ

ಹಿರಿಯೋಳು ಜೀನಾವತೀ ರಾಜೂರು ಪಾದಾವಾ

ಬಾಚೀ ತಬ್ಬೋಕೆ ಹೋಗುತಾಳೇ ಜೀನಾವತೀ

ಎಷ್ಟು ಬಿದ್ದು ಬೇಡಿದುರೂ ಜೀನಾವತೀ ಕಡಿಗೇ

ಮಕುನಾಕೀ ನೋಡುನಿಲ್ಲ ಅವುರು ದರುಮಾವತೀ ದ್ವಾರೇ

ಕಡೀ ಕಡೀ ಕ್ವಾಪಾನ ತಾಳಿಕಂಡು ಹೋಗುತಾರೇ

ಅವುರಾನ ಅರೂಮನಿಗೆ ಅವುರು ಏಕಾಏಕಿ ಹೋಗುತಾರೇ

ಅರುಮನಿಗೆ ಹೋಗಿ ನಿಂತುಕಂಡ್ರು ರಾಜೂರು

ಎಲ್ಲಾಲೆ ಜೀನಾವತೀ ನಿನ್ನೆರಡಾಳು ಮಕ್ಕಾಳೂ

ಕೇಳೀರಿ ಮಾಸ್ವಾಮಿ ಈಗ ಎರಡಾಳು ಮಕ್ಕೂ

ಪೇಟೇಯ ಬೀದೀಗೆ ಗಾಳಿ ಸವಾರಿ ಹೋಗ್ಯವರೇ

ಏನೇಲೆ ಎಲೆ ಮಲ್ಲೀ ನಿನ್ನೆರಡಾಳು ಮಕ್ಕಾಳೂ

ನಿನ್ನೆರಡಾಳೂವೆ ಮಕ್ಳು ನಿನ್ನೇಯ ರಾತ್ರೀಯಾ

ನಿನ್ನೇಯ ರಾತ್ರೀಯ ಮಲ್ಲೇಯ ಮಲುಗಿದ್ದುರೇ

ಎಲ್ಲಾರೂ ಹೋಗಿದ್ರೋ

ಇಲ್ಲ ಇಲ್ಲ ಮಾಸ್ವಾಮಿ ಮಲ್ಲೇಯ ಮಲುಗಿದ್ರು

ಎರಡಾಳೂ ಮಕ್ಕುಳಾ ಮಲ್ಲೇಯ ಮಲಗಿಸಿದ್ದೇ

ಬಿಡೆ ಬೀಡೇ ಎಲೆ ನೀನು ಸುಳ್ಳು ಮಾತಾ ಆಡು ಬ್ಯಾಡಾ

ನಿನ್ನೇಯ ರಾತ್ರೀಯ ಬಡಗಾಲ ರಾಜ್ಯಕೋಗೀ

ನಿನ್ನಾಯ ತಂಗೀಯ ನಿನ್ನೆರಡಾಳೂ ಮಕ್ಕಾಳೂ

ಮೈಕೈಯಾ ಕೆಡಿಸಿ ಬಂದಿಲುವೇನೇ ಮುಂಡೇ

ರಾಜೂರು ಈ ಮಾತ ಕೇಳಿದುಳು ಜೀನಾವತೀ

ಎರಡು ಕಣ್ಣುನೂವೆ ಮುಚಿಗಂಡು ಕಿವಿನೂವೇ

ಭೂಮೀಗೆ ಮಕಾಡೇಯ ಮನಿಕಂಡ್ಲೂ

ಅಳುತಾನ ಹೇಳುತಾಳೇ ಗಂಡಾನ ಕುಟ್ಟೆ

ಇಲ್ಲ ಇಲ್ಲ ಮಾಸ್ವಾಮಿ ನನು ಮಕ್ಳು ಮೇಲನಾಯ ಹೇಳಬ್ಯಾಡೀ

ನನು ಮಕ್ಳು ಅಂತೋರಲ್ಲ ನೀವನ್ಯಾಯವಾ ಆಡುಬ್ಯಾಡೀ

ಕೇಳೇ ಕೇಳೇ ಜೀನಾವತೀ

ನಿನ ತಂಗೇಯ ಮನಿಗೋಗಿಲ್ಲಂತ ಸುಳ್ಳ ನೀನು ಹೇಳುತೀಯಾ

ನೋಡಾಲೆ ಜೀನಾವತಿ ನಿನ್ನ ಮಕ್ಕುಳುದ್ ಚೌಕಾವಾ

ನಿನ್ನ ತಂಗಿ ಮಲ್ಲೆ ಇತ್ತಲ್ಲೆ ನಿನ್ನ ಮಕ್ಳೂದು ಈ ಚೌಕಾ

ಆಗ್ಲೇಯ ಇಬ್ರಾಳುವೇ ಮಕ್ಕಾಳು ಬಂದಾರೂ

ಮಂತ್ರಿಯ ಕರೆದಾರೂ ಬಾರಪ್ಪ ಎಲ ಮಂತ್ರೀ

ನಿನ್ನ ತಂಗೇಯ ಹೊಟ್ಟೇಳಿ ಎರಡಾಳು ಮಕ್ಕಳುಟ್ಟಿ

ನನಗೇಯ ಮಿತ್ರಾದ್ರು ನನ್ನೆರಡಾಳೂವೆ ಮಕ್ಕಾಳೂ

ಇವೆರಡಳೂ ಮಕ್ಕಾಳಾ ಮೊಕವ ನಾನು ನೋಡದಿಲ್ಲ

ಅಡವಿಯ ಅರಣ್ಯಕೆ ಇವರನ್ನು ಕರಕಂಡೋಗೀ

ನೀರು ನೆಳ್ಳು ಇಲ್ಲುತ್ತಾವ ತಲೆಯಾ ಊದು ಬಾರಾಲೋ

ಕಡುದು ತಾಲೆ ಬುರುಡೇಯ ಗುರುತ ನೀನು ತರುಬೇಕೂ

ರಗುತಾವ ತರುಬೇಕು ತಲೆಮಿದ್ಲೆ ತರಬೇಕೂ

ಮಂತ್ರಿಗೆ ಅಂಡ್ರೂ ಮಾಡಿದುದು ದೊರಿಗೋಳೂ

ಗೂಟಾದಿಂದಾವ ಚಂದ್ರಾಯ ಇರುದೂ ಕೊಟ್ರು

ರಾಮಾನೇ ರಾಮಾ ರಾಮನೋ ರಾಮಾ ॥

ಆಗುಲೇಯ ಮಂತೀರಿ ಬೋಜುರಾಯಾ

ಚಂದ್ರಾಯ ಕೈಲಿಡುಕಂಡು ಕಣ್ಣೀರ ಸುರ್ಸುತ್ತಾನೇ

ನನ್ನ ತಂಗೇಯಾ ಮಕ್ಕಾಳ ಯಾಗೆ ಪ್ರಾಣ ಕಳೆಯಾಲಿ ನಾನು

ಪ್ರಾಣ ಕಳೆಯಲಿ ನಾನು ಅಂತ ಕಣ್ಣೀರ ಸುರ್ಸುತ್ತಾನೇ

ಈವಾ ಮಾತಾ ಎರಡಾಳು ಮಕ್ಕಾಳು ಕೇಳಿಕಂಡೋ

ತಂದೇಯಾ ಮ್ಯಾಲೆ ಆಸೆಯಿಲ್ಲ ಮಕ್ಕುಳಿಗೇ

ನಮ್ಮ ಎರಡಾಳು ಮ್ಯಾಲೆ ಅನ್ಯಾಯ ಹೇಳಿದುರೂ

ಎರಡಾಳು ಮಕ್ಕುಳು ಅವುರ ತಾಯಿ ಜೀನಾವತಿಯಾ

ಹೇಳವ್ವಾ ನಮ್ಮು ತಾಯೀ ಹೇಳಾವ್ವ ಹಡುದವ್ವ

ನಾವು ಕಾಡೀಗೆ ಹೋಗುತೀವಿ ನಿನ್ನ ಎದೆ ಹಾಲೀನ ರೂಣಾ

ನಿನ್ನ ಎದೆ ಹಾಲೀನ ರೂಣ ಈವೊತ್ತು ತೀರಿತವ್ವ

ನಾವು ಸತ್ಯವಂತ ಮಕ್ಕಾಳು ಆದಾರೆ ಅಡವಿ ಅರಣ್ಯದಲ್ಲಿ

ಅಡುವೀಯ ಅರಣ್ಯದಲ್ಲಿ ಗೆದ್ದು ಬತ್ತೀವಿ ತಾಯೀ

ಚಿಕ್ಕಾವುನ ಮ್ಯಾಲೆ ನಾವು ಅನ್ನಾಯ ಮಾಡಿದ್ದುರೇ

ಅಡವಿ ಅರಣ್ಯದೊಳಗೆ ನಮ್ಮ ಪ್ರಾಣಾವ ಕಳಿಲೀ

ತಾಯಿ ಎದ್ರು ಬೇಡ ನಮುತಾಯಿ ಯೇಚ್ನೆ ಮಾಡುಬ್ಯಾಡಾ

ಎರಡಾಳು ಮಕ್ಕಲುವೇ ತಾಯಿಗೆ ಇದ್ದಿ ಬುದ್ದಿ ಹೇಳುತಾವೆ

ಅವುರ ತಾಯಿ ಜೀನಾವತಿಗೆ ನೋಡೋ ಎರಡಾಳು ಮಕ್ಕುಳೂವೇ

ಕಾಲಾನ ಈಡಕಂಡು ಶರಣಾನ ಮಾಡುತಾವೇ

ನಡಿಯಾಪ್ಪ ನನುಮಾವ ಕಾಡೀಗೆ ಹೋಗುವಾನ

ಮಂತ್ರಿ ಎರಡಾಳು ಮಕ್ಕಳೊಂದಿಗೆ ಕಾಡೀಗೆ ಹೋಗುತಾನೇ

ಅರಮನೆಯಾ ಬಿಟ್ಟರೂ ಎರಡಾಳು ಮಕ್ಕಾಳೂವೇ

ಮಕ್ಕುಳು ಈಚಿಗೆ ಬಂದುಮ್ಯಾಲೆ ಅವುರು ತಾಯೀ ಜೀನಾವತೀ

ಮಕ್ಕಾಳೂ ವಾದೂ ಮ್ಯಾಲೆ ನಾನ್ಯೇಕ ಇರುಬೇಕೂ

ನನು ಮಕ್ಕುಳು ಕುಟ್ಟೆ ನಾನು ಪ್ರಾಣಾ ಕಳ್ಕಳುಬೇಕೂ

ಬಾಗುಲೀಗೆ ಬಂದು ತಲೆಯಾನ ಹಾಕಿಕಂಡೂ

ತಲೆಯಾನ ಕೆಚ್ಚಿಗಂಡು ಅವುರ ತಾಯೀ ಜೀನಾವತೀ

ಬಾಗುಲು ಉತ್ರಾಸದಲ್ಲಿ ಪಟ್ಟನೆ ಪ್ರಾಣ ಬಿಟ್ಟಳಲ್ಲೊ

ಆವುರ ತಾಯೀ ಜೀನಾವತೀ ಸತ್ತೇ ವಾದುಳಲ್ಲೊ

ಎರಡಾಳು ಮಕ್ಕಳೂವೆ ಕಾಡೀಗೆ ಹೋಗುತಾವೇ

ಮಂತ್ರೀಯ ಹಿಂದುಗುಟ್ಟೆ ಕಾಡೀಗೆ ಹೋಗುತಾರೇ

ಆವಾ ಪಟ್ಟಣುದೋರು ಹೆಣ್ಣು ಗಂಡೆಲ್ಲಾವ

ಬೀದೀಯ ವಳುಗೆ ತಟ್ಟೇಸಿ ನಿಂತವರೆ

ಮಕ್ಕಾಳ ನೋಡುತಾವೇ ಮಾಡಿ ಮ್ಯಾಲೆ ನಿಂತುಕಂಡು

ಆಳುತಾವ ನೋಡುತಾರೆ ಪಟ್ಟಣುದ ಜಾನುಗೋಳು

ಅಯ್ಯೋ ಪಾಪ ಎಂತಾ ರಾಜೂರ ಮಕ್ಕಳಪ್ಪಾ

ಇಂಥ ರಾಜೂರ ಮಕ್ಕುಳನ್ನು ಹ್ಯಾಗೆ ಪ್ರಾಣಾವ ಕಳಿತಾರೇ

ಅಲ್ಲಿಂದ ಹೋಗುವಾಗ ಗೊಲ್ಲರ ಕೇರ್ಯಲ್ಲಾ

ಗೊಲ್ಲಾರ ಬೀದಿವಳುಗೆ ಹೋಗುತಾವೆ ಮಕ್ಕಾಳೂ

ಗೊಲ್ಲಾರ ಬೀದಿವಳುಗೆ ಗೊಲ್ಲಾರ ಮಗುಳಲ್ಲೊ

ಅವುಳೀಗೆ ಒಂದೇಯ ಗಂಡು ಮೋಗ ಇರುವೋದು

ಆರಾನ ತಿಂಗಾಳ ಗಂಡು ಮೋಗ ಇರುವೋದು

ಗೊಲ್ಲಾರ ಹುಡಿಗ್ಯಲ್ಲೊ ಜಗುಲೀಯಾ ಮ್ಯಾಲೇ

ಕುಂಬುಳ ಕಾಯಾ ತಕ್ಕಂಡು ಕತ್ತೀಯಾ ಮೆಟಿಗಂಡೂ

ತೊಡೆಯಾ ಮ್ಯಾಲೆ ಮಗುವಾನ ಮನಿಸ್ಕಂಡೂ

ಸಾರೀಗೇ ಕುಂಬಳಕಾಯಾ ಉತ್ತುರುಸ್ತಾ ಕುಂತವಳೇ

ಇದೇ ಬೀದೀವಳುಗೆ ರಾಜುರ ಮಕ್ಕಳು ವಾದುರಲ್ಲ

ಮಕ್ಕಳು ಹೋಗುವಾಗ ಗೊಲ್ಲರ ಹುಡಿಗ್ಯಲ್ಲೊ

ಮಕ್ಕಳ ಕಡಿಕೆ ದಿಟ್ಟೀಯ ಆದುಳಲ್ಲಾ

ಮಕ್ಕುಳ ಮ್ಯಾಲೆ ಗ್ಯಾನಾ ಬಿದ್ದಾಗ ತೊಡಿಯಾ ಕುಂಬುಳಕಾಯಾ

ಮಗುವಾ ತೊಡಿಯಾ ಮ್ಯಾಲಿದ್ದಾ ಮಗುವಾ

ತೊಡೆಮ್ಯಾಲಿದ್ದ ಮಗುವಾ ಎರಡಾ ತುಂಡೀಗೇ ಕೂದಳಲ್ಲೊ

ಎರಡಾ ತುಂಡಾಯೀತು ಗಂಡಾನ ಮಗುವಲ್ಲೊ

ಬಗ್ಗಿ ನೋಡುತಾಳೇ ಮಗ ಎರಡು ತುಂಡಾಗ್ಯಾದೇ

ಅಯ್ಯಯೇ ಬಗುವಂತಾ ಅಯ್ಯಯ್ಯೋ ಶಿವಶಿವಾ

ನನ್ನ ಸವುತೀಯ ಮಕ್ಕುಳು ನೋಡುತಾ ನನ್ನ ಮಗಾನೆ ಕೂದುನಲ್ಲಾ

ಇಂಗಾಗ ವೊತಿಗೆ ನನ ಸವತೀಯ ಮಕ್ಕಾಳೂ

ಚಿಕ್ಕವ್ವ ಅನುದಾಲೇ ಚಿಕ್ಕವ್ವನ ಹೊಟ್ಟಿಗೆ

ಕಾಲಾನಾ ನೀಡಿದುರು

ಚಿಕ್ಕವ್ವುನ ಮೈಕೈಯ್ಯ ಕೆಡಿಸಿದುದು

ಅದುಕಾಗೆ ಅಡವೀಲಿ ಇವುರ ಪ್ರಾಣಾವ ತೆಗಿತಾರೇ

ಗೊಲ್ಲಾರ ಬೀದಿಯಿಂದಾ ಬೀದಿವಳುಗೆ ಹೋಗುತಾರೇ

ಗೊಲ್ಲಾರ ಹುಡುಗೀ ಬೋದಂತಾ ಬೋಗುಳಾವೂ

ಕಿರಿಯಾನ ಮಗನೀಗೆ ಅಡವಿ ಕುಮಾರನೀಗೇ

ಕಿರಿಯಾನ ಹುಡುಗಾ ಲಾಲೀಸಿ ಕೇಳುತಾನೇ

ಅಲ್ಲಿಂದಾ ನೋಡಯ್ಯ ಕಿರಿಯಾನ ಹುಡುಗಾನೂ

ಹಿಂದಾಕೆ ತಿರುಗಿ ಗೊಲ್ಲರ ಮನಿತಾಕೆ ಬಂದುನಲ್ಲ

ಏನಾಮ್ಮಾ ನಮ್ಮುನ ಬಯ್ಯುತೀಯಾ

ನಿಮ್ಮ ಮಗಾವ ನಾವು ಜೀವ ಕಾಳೆ ಮಾಡುತೀವೀ

ಏಳು ತೆರೆಯಾನ ಬಿಟ್ಟು ಏಳು ತೆರೆಯಾ ವಳುಗೇ

ಕೂದಾ ಗಂಡಾನ ಮಗುವಾ ಮುಂಡಾಕೆ ರುಂಡಾವ ಕೂಡ್ಸೀ

ಶಿವುನಾ ಪಾರ್ವತಿಯ ಗ್ಯಾನಾದ ಮಾಡುತಾರೇ

ಎರಡಾಳು ಮಕ್ಕಾಳ ಸತ್ಯಾವ ನೋಡೀ

ಶಿವುನೇಯ ಪಾರುವತೀ ಪ್ರತೇಕ್ಷ ಆದುರಲ್ಲಾ

ಏಳು ತೆರೆಯ ವಳುಗೆ ನಿಂತುಕಂಡು ಮಗುವ ಜೀವ ಕಾಳೇ ಮಾಡುತಾರೇ

ಶಿವುನೂ ಪಾರುವತೀವೇ ಮಗೂಗೆ ಜೀವಕಾಳೇ ಕೊಡುತಾರೇ

ಅವುರು ಇಡಿದಿರುವ ತಿರುಸೂಲದಲ್ಲಿ ಮಂತ್ರಾವ ಜಪ್ಪುತಾರೇ

ಗೊಲ್ಲಾರ ಮಗುವಲ್ಲೋ ಜೀವ್ಕೆ ಜೀವಾ ಕೂಡೀ

ಗಾರುಗಾರನೆ ಆಳುತಾದೇ ಗೊಲ್ಲಾರ ಮಗುವಲ್ಲೋ

ಶಿವುನೂವೆ ಪಾರುವತೀವೆ ಮಾಯ್ವಾಗಿ ವಾದುರಲ್ಲಾ

ತಕ್ಕಳಮ್ಮ ನಿನ್ನ ಮಗಾವ ಜೀವ ಕಾಳೆ ಮಾಡಿದ್ದೀವಿ

ಗೊಲ್ಲಾರ ಹುಡಿಗ್ಯಲ್ಲೋ ಮಗುವಾನ ಎತ್ತಿಕಂಡೂ

ರಾಜಾ ಮಕ್ಕಳ ತಾಲಿ ಮ್ಯಾಲೆ ಕೈಯಾನ ಇಟ್ಟಗಂಡೂ

ಎರಡಾಳು ಮಕ್ಕಳೀಗೂವೆ ಅಸುರ್ವಾದ ಕೊಡುತ್ತಾಳೇ

ಯಾವ ತಾಯಡುದ ಮಕ್ಕುಳಪ್ಪ ನೀವು ಸತ್ಯುವಂತ ಮಕ್ಕಾಳೂ

ಯಾವ ಕಾಡೀಗೆ ವಾದ್ರೂವೆ ನಿಮ್ಮ ಪ್ರಾಣಾವು ಉಳಿಲಪ್ಪ

ದೇಸಕ್ಕೆ ದೊಡ್ಡೋರು ಆಗಿ ಸಂತೋಸ್ದಲ್ಲಿ ಬಲ್ಲಿರಪ್ಪ

ಹೋಗಿ ಬಲ್ಲಿ ಅಂತಾವಾ ಆಸುರ್ವಾದ ಕೊಟ್ಟುಳಲ್ಲಾ

ಗೊಲ್ಲಾರ ಬೀದಿಯಿಂದ ಮಕ್ಕಳು ಕಾಡೀಗೆ ಹೋಗುತಾವೇ

ಅಡುವಿ ಅರಣ್ಯದೊಳಗೆ ನಡೆದು ನ್ಯಾಡದು ನೆಡುದೂ

ಎರಡಾನ ಕಾಲೂ ಕಿತ್ತು ರಾಮು ರಗುತ ಹರಿತಾದೇ

ಎರಡು ಪಾಯಾಣ ವಾದುವೆಲ್ಲೊ ಮೂರು ಪಯ್ಣ ವಾದುವೆಲ್ಲೋ

ಆವಾ ಕಾಡೀನವಳುಗೆ ಮಕ್ಳೀಗೆ ಉಣ್ಣಾಕೆ ಅನ್ನಿಲ್ಲಾ

ಕುಡಿಯಾಕೆ ನೀರಿಲ್ಲಾ ಹಲ್ಲಿರಿಕೆ ಬಾಯಾರಿಕೆ

ದೊಡ್ಡಾನ ಹಳ್ಳಕೇ ಇಳೀದೂ ಹೋಗುತ್ತಾರೇ

ಕೇಳಾಪ್ಪ ನಮ್ಮು ಮಾವ ಕಾಲಲಿ ರಗುತಾ ಹರಿತಾದೇ

ಇಲ್ಲೇಯ ನಮ್ಮ ಪ್ರಾಣಾವ ಕಳಿಯಪ್ಪಾ

ದೊಡ್ಡಾ ಹಳುದಲ್ಲೀ ಮಕ್ಕಳೂ ಮಕ್ಕಾಡೇ ಮನಿಕ್ಯಂಡೋ

ಮಂತೀರಿ ನೋಡೋ ಕೇಳಿರಪ್ಪ ಮಕ್ಕುಳೀರಾ

ಇಲ್ಲಿ ನಿಮ್ಮ ಪ್ರಾಣಾವ ಕಳುದಾರೇ ಮನುಸೂರ ಮಕ್ಕಾಳು

ಮನುಸೂರು ಮಕ್ಕಾಳು ತಿರುಗಾಡೋ ದಾರೀ

ಈವಾ ದಾರಿಲ್ಲಿ ಪ್ರಾಣಾ ಕಳಿಯೋಕಾಗುದಿಲ್ಲಾ

ಮುಂದಾಕೆ ಹೋಗಬೇಕು ಮಕ್ಕಳೀರಾ

ಎರಡಾಳು ಮಕ್ಕಳೂವೆ ನೆಳ್ಳುತಾವ ನೆಸ್ರುತಾವಾ

ಆವಾ ಕಾಡೀನೊಳಗೆ ಆಳುತಾವ ಹೋಗುತಾವೇ

ದೊಡ್ಡಾ ಬೆಟ್ಟುದಾ ಬಳೀಲಿ ಹೋಗುತಾವೇ

ಮಾವಾ ಇಲ್ಲೀಯಾ ಕಾಳಿಯಪ್ಪ ನಮ್ಮನ ಪ್ರಾಣಾವ

ಕೇಳಿರಪ್ಪ ಮಕ್ಕುಳೀರಾ ಇಲ್ಲಿ ದಾನ ಕರುವೆಲ್ಲಾ

ದಾನಾ ಕರುವೆಲ್ಲಾ ನೀರ್ ಕುಡಿಯೋ ಜಾಗಾ

ಇಲ್ಲಿ ನಿಮ್ಮ ಪ್ರಾಣ ಕಳಿಯೋಕೆ ಆಗೋದಿಲ್ಲ ಮಕ್ಕೇ

ಕಾ ಅನ್ನೋ ಕಾಗೇ ಗೂ ಅನ್ನೋ ಗೂಬೇ

ನರಮನುಸ್ರು ಸುಳಿವೂ ಇಲ್ಲಾದ ಜಾಗಾಕೆ ಹೋಗುಬೇಕು

ದೊಡ್ಡಾನ ಕಾಡೀಗೆ ಕಾರುಕಂಡು ವಾದುರಲ್ಲಾ
ಅವಾ ಕಾಡಿನಲ್ಲಿ ಹೋಗುವಾಗ ಎಂಟು ಗಂಟೆ ರಾತುರಾಯ್ತೊ
ಎಂಟು ಗಂಟೆ ರಾತ್ರೀಲಿ ಆವಾ ಕಾಡಿನಲ್ಲಿ ಹೋಗುತಾರೇ
ಅವಾ ಕಾಡೀನ ವಳುಗೆ ಏಳೂರ ಅಡ್ಡಗಲಾ
ಏಳೂರ ಅಡ್ಡಗಲ ಆಲಾದ ಮಾರುವಲ್ಲೋ
ಆಲೂದ ಮರದ ಬಳಿಗೆ ಹೋಗುವರಗೇ
ಹನ್ನೆರಡು ಗಂಟೆ ರಾತ್ರೇ ಆಗೇ ಹೋತೂ
ಆವಾ ಕಾಡೀನ ವಳುಗೆ ಕಾಡೆಂಬ ಕತುಲಿಲ್ಲೋ
ಗೋರಾ ಅರಣ್ಯಾದೊಳುಗೇ ಕಾಡಾ ಮಿಗಗಳೋ ಇರುವಾವೂ
ಕಾಡಾನೆ ಹುಲಿಯೇ ಕರಡೀಯೇ ಇರುವೋದೂ
ಕೇಳಿರಪ್ಪಾ ಹುಡುಗಾರೇ ಕಾಡೆಂಬ ಕತುಲಲ್ಲೀ
ಮುಂದಕ್ಕೆ ಹೋಗೋ ಕಾಣಾದಿಲ್ಲ ಈ ಆಲಾದ ಮರದಡಿಯಾ
ಈವತ್ತು ಒಂದಾ ರಾತರೇಯ ಕಾಲಾರಣೆ ಮಾಡುವೋನಾ
ಹನ್ನೆರಡು ಗಂಟೆ ರಾತ್ರಲ್ಲಿ ಆಲದ ಮರದಾ ಬಳಿಯಲ್ಲಿ ಕೂತಗಂಡ್ರು
ಎರಡಾಳು ಮಕ್ಕಳೀಗೂ ಹೊಂದಿಯಾಕೆ ಬಟ್ಟಿಲ್ಲಾ
ತರಗೆಲೆಯ ಗುಡ್ಡಿಕಂಡು ತರಗ್ಯಾಲೇ ವಳುಗೇ ಮಲಗ್ಯಾವೇ ಮಕ್ಕಾಳೂ
ಮಧ್ಯದಲ್ಲೀ ಮಂತೀರಿ ಮಲಗ್ಯವನೇ
ಎಡಗಾಡೇ ಬಲಗಾಡೇ ಎರಡು ಮಕ್ಕಳೂವೆ ಮಲಿಗ್ಯಾವೇ
ಅವುರ ಸ್ವಾದರದ ಮಾವೂನ ತಬಿಕಂಡು ಮಲಿಗ್ಯಾವೇ
ಗೊರ್ರಾ ಗೊರ್ರನೆ ನೋಡೋ ಮಕ್ಕಳು ಗುರಿಕೇಯ ವಡಿತಾವೇ
ಅವರಾ ಮಾವಾಗ ನಿದ್ದೇಯ ಬರೋದಿಲ್ಲಾ
ನನ್ನ ತಂಗೇಯ ಮಕ್ಕಲನ್ನು ಹ್ಯಾಗೆ ಪ್ರಾಣಾವ ಕಳಿಯಾಲೀ
ಈವಾ ಆಲಾದ ಮರದಾ ಕೊಂಬೇಗೇ ಹತ್ತೀ
ಅಲುದು ಮರಾದ ಬಳ್ಳಿಗೆ ಮಕ್ಕಳ ಜುಟ್ಟ ಗಂಡಾಕಬೇಕೂ
ಗ್ಯಾನಾವ ಮಾಡಿಕಂಡು ಮನಗೀರೋ ಕಾಲದಲ್ಲಿ
ಮೆಲ್ಲಾಕೆ ಎದ್ದಲ್ಲೋ ಎರಡಾಳು ಮಕ್ಕಳನೂವೇ
ಕಂಕುಳಿಗೆ ಅವುಚಿಗಂಡು ಮರವಾನೆ ಹತ್ತುತಾನೇ
ಮೇಕೆ ತಟ್ಟನೆ ತುದಿಗೋಗಿ ಮಾರಾದ ಬಳ್ಳೀಗೇ
ಎರಡಾ ಮಕ್ಕಾಳ ಜುಟ್ಟಿ ಗಂಟಾಕು ತಾನೇ

ಜುಟ್ಟಿನ ಗಂಟಾಕಿ ನ್ಯಾತಾ ಬುಟ್ಟಿನಲ್ಲೋ

ಆಲಾದ ಮರವಾ ಇಳಿದು ಬರುತಾನೆ ಮಂತ್ರೀಯೂ

ಅರದಾ ಪಾಯಣ ಬಂದ ಮೂರು ಯೇಜನಬಮದಾ

ಆವಾ ಕಾಡೀನ ವಳುಗೆ ಬಂದು ಒಂದು ಗಂಟೆ ರಾತ್ರೆಯ್ತೋ

ಮುಂದಾಕೆ ಹೋಗಾಕೆ ಕಾಡ ಮಿಗುಗಳ ಕಾಟಾ

ಮೆಳೆಯಾ ಸಂದೀಯ ಮನಿಕಂಡ ಮಂತ್ರಿ

ಸಪ್ಪದು ಸರುವೊತ್ತಿನಲ್ಲಿ ಅರ್ಧ ರಾತ್ರೀ ವತ್ತಿನಲ್ಲೀ

ತಂಗೀ ಜೀನಾವತೀ ಸಪುಣಾಕೆ ಎರಿಗಿದ್ಲೂ

ಸಪ್ಪಣಾಕೆ ಎರುಗ್ಯಲ್ಲೋ ವಡುದು ಮಾತಾಡುತಾಳೇ

ಕೇಳಿಣ್ಣ ನಮ್ಮಣ್ಣ ನನ್ನಾವ ಮಕ್ಕುಳಿನ್ನೂ

ಜೀವಾನ ಉಳ್ಸಿದಲ್ಲೊ ಪ್ರಾಣಾವ ಉಳ್ಸಿದಲ್ಲೋ

ನಮ್ಮ ರಾಜೂರುಗೇ ಗುರತೇನ ತಗಂದೋಗೀ

ತೋರಾಲಿ ಅಂತಾವ ಯೋಚಾನೆ ಮಾಡುಬ್ಯಾಡಾ

ಮೂಡಲಿಂದವ ನೋಡೋ ಮುಂಗೋಳಿ ಕೂಗುತಾದೆ

ಮುಂಗೋಳಿ ಕೂಗುತಾದೇ ಮೂಡು ಕೆಂಪೇರುತಾದೇ

ಎರಡು ತೆಕ್ಕೇಯಾ ಕುರಿಗೋಳು ಬರುತಾವೇ

ತೆಕ್ಕೇಯ ಕುರಿಯಿಡಿದು ಎರಡು ತುಂಡೀಗೆ ಕಡಿಯಣ್ಣಾ

ಕುರಿಯಾ ತಲಿಲಿ ನನ್ನ ಮಕ್ಕಳ ತಲೆ ಆಗುತಾದೇ

ಆವಾ ತಲಿಯ ತಂದು ರಾಜುರಿಗೇ ಗುರುತಾನ ತೋರಯ್ಯ

ಸಪ್ಪುಟು ಸರುವೋತಿನಲ್ಲೀ ಜೀನಾವತೀ

ಮುಂಗೋಳಿ ಕೂಗುತಾದೇ ಮೂಡು ಕೆಂಪು ವರುತಾದೇ

ಮೂಡುಲಿಂದವ ಎರಡು ತೆಕ್ಕೆಂದು ಕುರಿಗೋಳು ಬಂದುವಲ್ಲಾ

ಕುರಿಯಾ ತಲಿಯನ್ನ ಕಡುದು ಮಡಗೀದಾ ಮಂತ್ರೀ

ಅವುರ ತಂಗೇ ಜೀನಾವತಿಯ ಗ್ಯಾನಾವ ಮಾಡುತಾನೇ

ಕುರಿಯಾ ತಲೆ ಹೋಗಿ ರಾಜುರ ಮಕ್ಕಾಳ ತಲಿಯಾರೋ

ನನ್ನಾನ ತಂಗೇ ಸತ್ತಿವಂತೆ ಅಂತಾ

ಹಾಲು ಬೋರೋ ಹೊನ್ನೇ ಮರುಕೇ ಚಂದ್ರಾಯ ಬೀಡುತಾನೇ

ಹಾಲು ಬೋರೋ ಹೊನ್ನೇ ದೂರ ರಗುತಾವ ಕರಿಯುತಾದೇ

ಮಕ್ಕಾಳ ತಲಿಯಾನ ತಕ್ಕಂಡು ರಗುತಾವ ತಕ್ಕಂಡೂ

ದರುಮಾವತೀ ರಾಜ್ರಾ ಪಟ್ಟುಣಾಕೆ ಬಂದುನಲ್ಲಾ
ಅಲ್ಲಿಂದ ನೋಡಯ್ಯ ಬಡುಗಾಲ ದೇಸೂರೇ
ಕಿರಿಯೋಳಾ ಮನಿಗೆ ಹೋಗುತಾನೇ ಮಂತ್ರಿ
ಕಿರಿಯೋಳು ರತುನಂಗಿ ಮಕ್ಕಳ ತಾಲೇಯ ನೋಡೀ
ನನ್ನ ಸವುತಿ ಮಕ್ಕಳೀರಾ ನನ್ನಾಟ ದೇಸೂತು
ನಾನು ಹೆಂಗೂಸು ಆಗುವರೆಗೆ ಅಡವಿ ಅರಣ್ಯಲದಲೀ
ನಿಮ್ಮ ತಲೆಯಾನ ಹೂತಿ ಹದ್ದು ಕಾಗೇ ಪಾಲು ಮಾಡ್ರೇ
ಅಂತಾವ ಹೇಳಿ ಕಿರಿಯೋಳು ರತುನಂಗೀ
ಕಿಲಿಕಿಲಿನೆ ನಾಗುತಾಳೇ ಅರುಮಾನೆ ವಳುಗೇ
ಎರಡಾ ಮಕ್ಕಳ ತಲಿಯ ತಂದು ಬಟ್ಟಲಿಗೆ ಹೂಣ್ಣುತಾಳೇ
ಮಕ್ಕುಳ ತಲೇ ಬುಲ್ಡೆ ಮೇಲೆ ನೀರಾನ ಮೀತಾಳೇ
ಅಲ್ಲಿಂದ ನೋಡಯಾ ಕಡುದಂತಾ ರಗುತಾವಾ
ಕಡುದಂತಾ ರಗುತಾವ ಆಣೆಗೆ ಬಟ್ಟುನಾಮಾ ಇಕ್ಕುತಾಳೇ
ಆನೆಗಜ್ಜಿ ಹೇಳುತಾವೇ ಕುದುರೆಗಜ್ಜಿ ಹೇಳುತಾವೇ
ಊರುಳೂತ ಬೀಳುತಾವೇ ಕೊಳುಕೊಳತೆ ಬೀಳುತಾಳೇ
ಇವುಳಿಗೆ ಹುಚ್ಚು ಹಿಡೀತಾದೇ ಗ್ಯಾನಾವೇ ತಪ್ಪುತಾದೇ
ತಲಿಯೇನೇ ಕೆಟ್ಟೂ ಹುಚ್ಚೂ ಹಿಡಿಯುತಾದೇ
ಪ್ಯಾಟೇಯ ಬೀದಿವಳುಗೆ ಚಿಪ್ಪಾನಾ ಹಿಡುಕಂಡು
ತಿರುಕಂಡು ಹರುಕಂಡು ತಿನುತಾಳೇ ರತುನಂಗೀ
ಆಲಾದ ಮರದಡಿಯ ಮಕ್ಕಾಳು ನ್ಯಾತಾಡುತಾವೇ
ಮೂಡಾಲ ಸಾಲೆಯ ಮಾಳೆ ಜೋರಾಗಿ ಹಿಡುತಾದೇ
ಮಾಳೇಲಿ ನೆನಿತಾವೇ ಬಿಸ್ಲಲ್ಲಿ ವದುಗುತಾವೇ
ಆರಾನ ತಿಂಗಳಲ್ಲೋ ಮಾಳೇಲಿ ನೆನಿತಾವೇ
ನೆಂದು ನೆಂದೂ ಮೈಯೆಲ್ಲಾ ಅವುಚಿ ಬೆಳೆಯುತಾದೇ
ಆರಾನ ತಿಂಗ್ಳೂ ತುಂಬೇಯ ಬಂತಲ್ಲಾ
ಆರು ತಿಂಗ್ಳೂ ವರಿಗೂ ಮಕ್ಳು ಪ್ರಾಣಾನೇ ಹೋಗನಿಲ್ಲಾ
ಆರು ತಿಂಗ್ಳು ಮ್ಯಾಲೇ ಮುಂಗೋಳಿ ಕೂಗುತಾದೇ
ಮುಂಗೋಳಿ ಕೂಗುವಾಗ ಮೂಡು ಕೆಂಪು ಏರುವಾಗ
ಅಲ್ಲಿಗೆ ನೋಡಯ್ಯ ಮೂಡಾಲ ಇಂದಾವ

ಒಂದು ಗಂಡು ಬೇರುಂಡ ಹಕ್ಕಿ ಆರಿ ಬಂದುವಲ್ಲಾ
ಮಾರಾದ ಕೊಂಬೀಯ ಮ್ಯಾಲೇ ಕುತುಗಂಡು
ಹೆಣ್ಣಾ ಬೇರುಂಡ ಹಕ್ಕಿ ಅದುರ ಗಂಡನೀಗೇ
ಕೇಳೀರಿ ಸ್ವಾಮಿ ನಾನೊಂದು ಕಾತೇಯ ಹೇಳುತೀನೀ
ಗಂಡಾ ಬೇರುಂಡ ಹಕ್ಕಿ ಸುಮಾನೆ ಈರೇ
ನಿದ್ದೇ ಬತ್ತದೆ ನಂಗೆ ಸುಮ್ಮಾನೆ ಈರಾಣೇ
ಇಲ್ಲ ಇಲ್ಲ ಸ್ವಾಮಿ ಚಂದಾದ ಕತೆಯ ಹೇಳುತೀನೀ
ಹೆಣ್ಣಾ ಬೇರುಂಡ ಹಕ್ಕಿ ಕಾಥೆಯಾ ಹೇಳುತಾದೇ
ಆದರ ಗಂಡಾ ಬೇರುಂಡ ಹಕ್ಕಿ ಹೂಕೊಳುತದಲ್ಲಾ
ಕೇಳೀರಿ ಮಾಸ್ವಾಮಿ ಜೀನಾವತಿಯ ಮಕ್ಕಳಂತೇ
ಇಬ್ರಾಳು ಗಂಡಾನ ಮಕ್ಕಳಂತೆ
ಕೇಳೀರಿ ಸ್ವಾಮಿ ಅವುರ ಚಿಕ್ಕವ್ವ ಮುಂಡೆ
ದರುಮಾವತಿ ದ್ವಾರೆ ಹನ್ನೆರಡು ವರ್ಸ ಕಾಡೀಗೆ ವಾದುರಂತೇ
ಮಕ್ಕಳು ಹುಟ್ಟಿದು ಮ್ಯಾಲೆ ಕಾಡೀಗೆ ಸೀಕಾರಿ ಹೋದುರಂತೆ
ಅವುರ ಚಿಕ್ಕವ್ವ ಮಾನೀಗೆ ಹೋಗೀ
ಮೈಕೈ ಕಡಿಸಿದುರಂತ ಎರಡಾಳು ಮಕ್ಕಳುನೂವೆ
ರಾಜೂರು ಬಂದಾಗ ದೂರಾ ಹೇಳಿದುಳಂತೆ
ದರುಮಾವತಿಯ ದ್ವಾರೆ ಪಾಪ ಪುಣ್ಯವ ಕಾಣುದೇಯಾ
ಎರಡಾಳೂನೂವೆ ಮಕ್ಕೂಳುನೂವೆ ಅಡವಿ ಅರಣ್ಯ ಕಟ್ಟಿದುನಂತೇ
ಅಡವಿ ಅರಣ್ಯದೊಳಗೆ ಏಳೂರ ಅಡ್ಡಗಲಾ
ಇದೆಯಾ ಸ್ವಾಮೀ ಯಾಲೂರು ಮಾರಾ
ಮಂತ್ರೀರಿ ಆಲುದು ಮರದಾ ಬಳ್ಳೀಗೇ
ಜುಟ್ಟುನ ಕಟ್ಟಾಕಿ ನ್ಯಾತ ಕಟ್ಟೋದುನಂತೇ
ಆರಾನೇ ತಿಂಗೂಳು ಮಾಳೇಲಿ ನೆಂದಾವೇ
ಮೈಯಿ ಕೆಯಲ್ಲಾ ಸ್ವಾಮೀ ಅವುಚೀ ಬೆಳುದಾದೇ
ಮಕ್ಕಾಳ ಪ್ರಾಣಾ ಇನ್ನೂವೆ ಹೋಗಿಲ್ಲಾ
ಇವತ್ತೀನ ರಾತುರೇಯ ಅವ್ವೆ ಕಂಟಾಕ ಕಳಿತಾದೇ
ಮರುದಿಂದ ಕಸುಗಂಡು ಯಾಳೀಕೆ ಬೀಳೂತಾಲೇ
ಕೌಳಿಕೆ ಬಿದ್ದುರೂವೇ ಮಕ್ಕುಳು ಪ್ರಾಣಾ ಹೋಗಾದಿಲ್ಲ

ನಾವು ಸತ್ತೂ ಕಾಳೀಕೆ ಬೀಳುತೀವೀ

ಮಕ್ಕಳಾ ಮುಂದೂಕೆ ಬೀಳೂತೀನಿ ನಾವೂ

ನಮ್ಮ ತಲೆಯ ಕೂದೂಲು ತಾಲೇಯ ನಂಗಿದರಿಗೇ

ನಾಳೆ ಹನ್ನೆರಡು ಗಂಟೀಗೆ ನೀಲವತಿಯ ಪಟ್ಟುಣದಲ್ಲೀ

ನೀಲವತಿ ರಾಜುನ ಮಗಳು ಪದ್ಮಾವತೀ

ಪದ್ಮಾವತೀರುವೋಳು ರುತುವಾಗಿ ಹನ್ನೆರಡು ವರುಸಾ

ನಮ್ಮ ತಾಲೇಯ ನುಂಗಿದರಿಗೆ ನಾಳೆ ಹನ್ನೆರಡು ಗಂಟೆಗೆ

ನೀಲವತಿ ಪಟ್ಟುಣದ ರಾಜ ಪಟ್ಟುವ ಕಟ್ಟುತ್ತಾರೇ

ದೊರಿತಾನ ಆಗುತಾದೇ ಬಸವಕುಮಾರ ದೊರಿಗೇ

ರಾಜೂನ ಮಗುಳ ದರುಮಕೆ ದಾರೇಯ ಎರಿತಾರೇ

ಕಿರಿಮಾಗಾ ಅವುನೂ ಅಡುವಿಕುಮಾರಾ

ಅವುನೀಗೆ ಮುಂದಾ ಇನ್ನೂವೆ ಹನ್ನೆರಡೂ ವರುಸಾ

ಹನ್ನೆರಡು ವರುಸಾ ವನವಾಸ ಬರುತಾದೇ

ಅಂತಾವಾ ಹಕ್ಕೀ ಸಪುನಾವ ಹೇಳುತಾದೇ

ಈ ಮಾತತಾ ಕಿರಿ ಮಾಗಾ ಲಾಲೀಸಿ ಕೇಳುತಾನೇ

ಜೀನಾವತಿಯ ಮಕ್ಳು ಅಂದ್ರೆ ನಾವೇಯಾ ಅಲ್ಲವೇ

ಆಲೀದ ಮರದಿಂದ ಕಸಗಂಡು ಕ್ಯಾಳೀಕೆ ಬಿದ್ದುವಲ್ಲೋ

ಅಣ್ಣಾ ನಿದ್ರೇ ಮ್ಯಾಲೇ ಮನಿಗ್ಯವನೋ

ತಮ್ಮಾನು ಹಕ್ಕೀಯ ಕತೆಯ ಲಾಲೀಸಿ ಕೇಳುತಾನೇ

ಎರಡೂವೆ ಹಕ್ಕಿ ಸತ್ತೂ ಮಕ್ಕಾಳ ಮುಂದೆ ಬಿದ್ದವಲ್ಲೋ

ಆಗ ಕಿರಿಯಾನ ಹುಡುಗಾನೂ

ಹಕ್ಕೀಯ ಈಡುಕಂಡು ಅದರ ತಾಲೇಯ ಕುಯ್ಯುತಾನೇ

ನಮ್ಮಣ್ಣ ಮನಿಗ್ಯವನೆ ನಾನು ಮೋಸಾವ ಮಾಡಬಾರದೂ

ನನೀಗೆ ವನುವಾಸ ಬಂದುರೂ ಬರಲೀ

ತಲೇಯ ತಗುದು ಅಣ್ಣಾಗೆ ನುಂಗ್ಸುತಾನೇ

ಹಕ್ಕೀಯ ಮುಂಡಾವ ತಮ್ಮೂನೆ ನುಂಗುತಾನೇ

ಅಲ್ಲೀಗೆ ಮುಂಗೋಳಿ ಕೂಗುತಾದೇ ಮೂಡು ಕೆಂಪೇರುತಾದೇ

ಸೂರ್‍ಯಾನು ಮೂಡಿ ಏಳು ಗಂಟೆ ಆಯ್ತು ಬಂತೂ

ನಡಿಯಣ್ಣ ಹೋಗಾನ ಯಾವ ಊರಾರ ಸೇರಾನಾ

ಆವ ಕಾಡಿನಿಂದಾವಾ ಹೋಗುತಾವೇ ಮಕ್ಕಾಳೂ

ರಾಮಾನೇ ರಾಮಾ ರಾಮನೋ ರಾಮಾ ॥

ಎರಡಾಳು ಮಕ್ಕಳೂವೆ ಕಾಡಿನಿಂದ ಹೋಗುತಾವೇ

ನಡಿಯಣ್ಣ ಹಿರಿಯಣ್ಣ ಊರು ಕೇರಿ ಸಿಕ್ಕೀತೂ

ಮಕ್ಕಳೆತ್ತ ತಾಯೀರು ಮಕ್ಕುಳೆತ್ತ ತಂದೇರೂ

ಅನ್ನಾವ ಕೊಟ್ಟಾರೆ ತಿದುಕೊಂಡು ತಿನ್ನಾನಾ

ಅಂತಾವಾ ಮಕ್ಕಾಳು ಕಾಡಿನಿಂದಾ ಹೋಗುತಾವೇ

ಅಣಾ ಮುಂದೇ ಹೋಗುತಾನೇ

ತಮ್ಮ ಹಿಂದ್ಗಾಡೆ ಹೋಗುತಾನೇ

ಆವ ಕಾಡಿನಲಿ ಹೋಗುವಾಗ ನೀಲವತಿಯ ಪಟ್ಟುಣಾಕೇ

ನೀಲವತಿಯ ಪಟ್ಟುಣಾಕೆ ಕಾಲ್ದಾರಿ ಹೋಗುತಾದೇ

ಕಾಲ್ದಾರಿಯ ವಳುಗೇ ನೆಟ್ಟಾಗ ಹೋಗುತಾರೇ

ಅರ್ಧ ದಾರಿಗೇ ವಾದು ಮ್ಯಾಲೆ ತಮ್ಮ ಹುಚ್ಚೂ ಬೆದ್ದೂಬಂತು

ಹುಚ್ಚು ಬೇಪ್ಪೂ ಬಂದೂ ಮತ್ತೆ ಕಾಡೀಗೆ ವಾದುನಲ್ಲ

ಅವರಣ್ಣಾ ಬಸವಾ ಕುಮಾರಾ ದ್ವಾರೇ

ಹಿಂದಾಕೆ ತಿರುಗಿ ಅವುನ ತಮ್ಮಾನ ನೋಡಾಲಿಲ್ಲಾ

ಹಿಂದುಗಡೆ ಬತ್ತಾನೆ ಅಂತಾ ನೆಟ್ಟಾಗೆ ಹೋಗುತಾನೆ

ಅವಾನ ಕಾಲುದಾರೀ ನೀಲವತಿ ಪಟ್ಟುಣಾಕೇ

ನೀಲವಾತಿ ಪಟ್ಟುಣುದಾಕೆ ಕರುಕಂಡು ಹೋಗುತಾದೇ

ನೀಲವಾತಿ ಪಟ್ಟುಣಾದ ನೀಲವತಿ ದೊರಿಯಲ್ಲೋ

ಸುತ್ತಾಲಾ ದೇಸೂರೆ ವಾಲೇಯ ಬರೆದವರೇ

ಮೈಸೂರು ಬೆಂಗಳೂರು ಎಲ್ಲಾ ಕಾಡೀಕೂ

ದೊಡ್ಡ ದೊಡ್ಡ ರಾಜರೀಗೂ ವಾಲೇಯಾ ಬರೆದವರೇ

ನನ್ನಾವ ಮಗಳೂ ಪದ್ಮಾವಾತೀರೂವೋಳೂ

ಯಾವ ಗಂಡು ನೋಡಿದುರೂ ಒಪ್ಪಿಲ್ಲ ನನ ಮಗಳೂ

ದೊಡ್ಡ ದೊಡ್ಡ ದೇಸೂದ ಸೆಟ್ಟಿ ಸಾವ್‌ಕಾರ್ರ ಮಕ್ಕಾಳೂ

ಮದಿವ್ಯಾಗೋ ಹುಡುಗಾರು ಎಲ್ಲಾವ ಬಾರುಬೈದೂ

ನನ್ನಾನ ಮಗಳು ಯಾರ್ನ ಒಪ್ಪುತ್ತಾಳೋ

ಅವರೀಗೆ ಕೊಟ್ಟು ನಾನು ದಾರೇಯ ಎರಿತೀನೀ

ಅಂತಾವ ವಾಲೇಯ ದೇಸುಕೆಲ್ಲ ಬರದವರೇ

ದೇಸುದಾ ಅಲ್ಲಿ ಸೆಟ್ಟಿ ಸಾವ್‌ಕಾರ್ರ್ ಮಕ್ಕುಳಲ್ಲೋ

ಮದಿವಾಗೋ ಹುಡುಗಾರೂ ಎಲ್ಲಾವಾ ಬಾರುತಾರೇ

ನೀಲವತಿಯ ಪಟ್ಟುಣುದ ಅರುಮಾನೆ ಮುಂದೇ ಬಂದು ಮ್ಯಾಳಾವು ಈರುವೋರು ಅಲ್ಲೀಗೆ

ಬರುತಾರೇ

ರಾಜಾರ ಅರುಮಾನೆ ಮುಂದೆ ಪರುಸೇ ಸೇರ್ರ್ಯಾದೋ

ಸುತ್ತಾವ ನಿಂತವರೆ ಎಲ್ಲಾರೂ ನಿಂತವರೇ

ನೀಲಾವತಿಯ ರಾಜಾ ಅರುಮಲ್ಲಿ ಇರುವಂತಾ

ಆನೇಯಾ ಈಡುಕಾಂದೂ ಬಂದುರಲ್ಲಾ

ಅನೇಯಾ ಸೊಂಡ್ಲಾಕೆ ಹೂವಿನ ಹಾರಾವಾ ಹಾಕುತಾನೇ

ಈವಾನಾ ಆಸೇ ಯಾರಾನ ಕೊಳ್ಳೀಗೇ

ಹೂವೀನ ಹಾರಾವ ಹಾಕುತಾದೇ ಅವರೀಗೆ ನನ್ನು ಮಗುಳಾ

ಕೊಟ್ಟು ದಾರೇ ಎರಿತೀನಿ ಅಂತಾ ರಾಜಾ ಹೇಳುತಾರೇ

ಮದ್ಯಾಕೇ ತಂದು ಆನೇಯ ನಿಲ್ಲ್ಯವರೇ

ಈವಾ ಕಾಡೀನಿಂದಾ ಈವಾ ಹುಡುಗಾನೂ ವಾದುನಲ್ಲಾ

ಆವಾ ಪರುಸೇಯ ಹಿಂದುಗಾಡೇ ನಿಂತವನೇ

ಆನೇಯ ನೆಂಬೂದು ಸುತ್ತುಲೂವೆ ತಿರುಗುತಾದೇ

ಮದಿವ್ಯಾಗೋ ಹುಡುಗಾರು ಎಲ್ಲಾ ಕತ್ತು ಉಗಿಸಿಕೊಂಡು ನಿಂತವರೇ

ನನ್ನ ಕೊಳ್ಳೀಗೆ ಹೂವೀನ ಹಾರ ಹಾಕಲಿ ನಾನು ಮದುವೇಯ ಆಗುತೀನೀ

ನಿಂತವರೇ ಹುಡುಗಾರು ಆನೇಯ ನೆಂಬೋದು

ಮೂರಾನ ಸುತ್ತಾ ತಿರುಗುತಾದೇ

ಯಾರೂ ಕೊಳ್ಳೀಗೂ ಹೂವಿನಾರ ಹಾಕನಿಲ್ಲಾ

ಅವ ದಂಡೀನ ವಳುಗೆ ಆನೆ ಕತ್ತೆತ್ತಿ ನೋಡುತಾದೇ

ಬಾಜೂ ಮಾಡಿಕಂಡು ಬಂದು ಈವ ನೊಗಾಮುತ್ತ ಹುಡುಗಾನೇ

ಹಾರಾವಾ ಹಾಕುತಾದೇ

ಮದಿವ್ಯಾಗೋ ಹುಡುಗಾರೂ ಆನೆ ಮ್ಯಾಲೆ ಕ್ವಾಪವ ತಾಳುತಾರೇ

ಯವ್ವೆ ಇದುರ ದೊಕ್ರೋಗ ತಗುಳೋಗೋ ನಮ್ಮಿಗೆ ಹೂವಿನಾರ ಹಾಕಲಿಲ್ಲ

ಹಿಂದಾಗಾಡೆಯ ನೊಗಾಮುತ್ತನೀಗೆ ಹಾರಾವ ಹಾಕಾದೇ

ಇಂತ ರಾಜೂರ ಮಕ್ಕುಳ ಬುಟ್ಟು ಈವ ಹುಡುಗನಿಗೆ ಹಾಕುತಂತೇ

ವಡಿರಯ್ಯ ಆನೇಯ ಇದುಕೆ ಹುಲ್ಲು ಮೇವೆಚ್ಚಾಯ್ತು
ಆನೇಯಾ ಲಾಯಾಕೆ ಆನೇಯ ಓಡ್ಸುತಾರೇ
ಅರುಮಲ್ಲಿ ಇರುವಂತಾ ಪಟ್ಟಾದ ಕುದುರೇಯಾ
ಕುದುರೇಯ ಕಿವೀಗೆ ಹೂವಿನಾರಾ ಹಾಕುತಾರೇ
ಸುತ್ತಲೂವೆ ತಿರುಗುತಾದೇ ಒಬ್ಬುರೀಗೂ ಹಾಕಲಿಲ್ಲ
ಹುಡಗಾಗೇ ಹಾಕುತಾದೇ
ಕುದರೇಯ ಲಾಯಾಕೆ ಓಡ್ಸುತಾರೇ
ನೆನ್ನೇಯ ದಿವುಸಾ ಆನೆ ಮಾರೀಯ ಹಾಕಿತ್ತು
ಮರಿಯ ಹಿಡುಕಂಡು ಬಂದು ಸಾಬೀಗೆ ಬಿಡಿರಯ್ಯ
ಆವಾ ಮಾರಿ ಯಾರ ಕೊಳ್ಳೀಗೆ ಹಾಕುತಾದೇ
ಬಂದಂತ ಜನುವೆಲ್ಲ ಹುಡುಗೂನ ನೋಡುತಾರೇ
ಹಣುವಿದ್ದರೇನಯ್ಯ ರುಣುವಿದ್ಯಾರೀಗಾಯ್ತೂ
ರಾಜೂನ ಮಗಳಾ ಹುಡುಗಾಗೆ ಮದುವೇಯ ಮಾಡಿರಯ್ಯ
ಆಗ ನೀಲಾವತಿಯ ದ್ವಾರೇ ಹುಡುಗನ ಕರುಕಂಡು ಹೋಗೀ
ಮಾಗಾಳ ಪದ್ಮಾವತಿಯ ಕರಿಸಿದುರು ದ್ವಾರೀಗೋಳೋ
ಏನಾವ್ವ ನನು ಮಗುಳ್ಳೇ ಈವಾನ ಹುಡುಗಾನ ಮದಿವ್ಯಾಗೇ
ಒಪ್ಪೇನೇ ನನುಮಗಳೇ ಮಗುಳಾನಾ ಕೇಳುತಾನೇ
ಹಣುವಿದ್ದುರೇನೂ ತಂದೆ ರುಣವಿದ್ದಾರಿಸಿಗಾಯೀತೂ
ಈವಾನ ಹುಡುಗನಿಗೆ ಮದುವೇಯ ಮಾಡುನನ್ನಾ
ಆಗ ಕೊಟ್ಲಾವ ಕುಟ್ಟುತಾರೆ ಪಟ್ಟಾವಾ ಸಾರ್ರುಸ್ತಾಉುಎ
ಚಪ್ರಾ ಮೇಲಿಟ್ಟು ಮಾಡಿ ಈವಾನ ಹುಡುಗಾಗೇ
ಬೆಳೀಗೊಂಬತ್ತು ಗಂಟಿಗೆ ಪದ್ಮಾವತಿಯನ್ನಾ
ಬಸವಾ ಕುಮಾರ ದ್ವರಿಗೆ ದರುಮಾಕೆ ದಾರೇಯ ಎರುದಾರೂ
ನೀಲವಾತಿಯ ರಾಜರ ಪಟ್ಟಾವ ಈವಾ ಹುಡಗಾಗೇ ಕಟ್ಟುತಾರೇ
ರಾಮಾನೆ ಚಂದುರುರಾಮಾ ॥
ನೀಲವಾತಿಯ ಪಟ್ಟುಣದಲ್ಲಿ ಬಸುವರಾಜೂರ ದಾರುಬಾರೂ
ಸುತ್ತಾಲು ಕೋಟೇಯ ಬಾಗುಲಲ್ಲೀ
ಕ್ವಾಟೇಯ ಬಾಗುಲಲ್ಲಿ ಸೇವುಕರ ಪಾರಾವೂ
ಹತ್ತು ಗಂಟೆಯ ಆಮ್ಯಾಕೆ ಪಟ್ಟುಣಾಕೆ ಜುನಾವಾನ ಕೊಡಬ್ಯಾಡಿ

ಅವ್ರ ತಕ್ಕಂದು ಹೋಗಿ ಜೇಲೀಗೆ ಕೂಡಿರಯ್ಯಾ

ಜೈಲೀಗೆ ಕೂಡಿ ಕಟ್ಟೀನ ಶಿಕ್ಸೇಯ ಕೊಡಿರಯ್ಯ

ಅವರಿಗೆ ಉಪ್ಪು ಅನ್ನಾವ ಕೊಡಿರಯ್ಯ

ಬಸವಕುಮಾರ ದ್ವಾರೇ ಸೇವುಕರಿಗೇ ಎಚ್ಚರಿಕೆ ನೀಡುತಾನೇ

ಪಟ್ಟುಣಾದ ರಾಡಾನಾ ಬಾಗುಲಲ್ಲೀ

ಸೇವುಕರ ಪಾರಾ ಮಡಿಗ್ಯವರೇ ದೊರಿಗೋಳೂ

ಕಾಡೀನಲ್ಲಿದ್ದ ಕಿರಿಯೋನು ಅಡವಿಕುಮಾರ

ಹನ್ನೆರಡು ವರುಸಾ ವನವಾಸ ತೀರಿ ಬಂತೂ

ಅವರು ಅಣ್ಣಾನ ಪಟ್ಟುಣಾಕೆ ಬರುತೈತಿ  ಆ ಹುಡುಗಾ

ಹನ್ನೆರಡು ಗಂಟೇಯ ರಾತ್ರೀಲಿ ಬಂತಲ್ಲೋ

ರಾಡಾನ ಬಾಗುಲೀಗೆ ಬಂದು ನಿಂತೈತಲ್ಲೋ

ಸೇವುಕಾರು ಹೋಗಿ ಹುಡುಗಾನ ಕೇಳುತಾರೇ

ಯಾರಾಲಾ ಎಲೆ ಹುಡುಗ ಇಲ್ಯಾಕೆ ಬಂದೆಲ್ಲಾ

ಪಟ್ಟುಣೂಕೆ ನಾವೂ ಬಿಟ್ಟು ಕೊಡುವುದಿಲ್ಲಾ

ಕಳುತಾನ ಮಾಡುತೀರಿ ಅಂತ ಬಿಡೋದಿಲ್ಲಾ ನಾವೂ

ಸೇವುಕರು ಹೋಗಿ ದೊರೆಗೆ ದೂರಾನು ಹೇಳುತಾರೇ

ಆವಾನ ಹುಡುಗಾನ ಪಟ್ಟುಣಾಕೆ ಬೀಡುಬ್ಯಾಡೀ

ಆ ಹುಡುಗಾನ ಜೈಲೀಗೆ ಕೂಡಿರಯ್ಯ

ಆ ಹುಡುಗಾನ ಕರಕಂದು ಹೋಗಿ ಜೈಲೀಗೆ ಕೂಡುತಾರೇ

ಜೈಲೀಗೆ ಕೂಡುತಾರೇ ಕಟಿಣ ಶಿಕ್ಷೇಯ ಕೊಡುತಾರೇ

ಅಣ್ಣಾ ಬಸುವಕುಮಾರ ದೊರೆ ಜೈಲೀಗೆ ಕೂಡಿಸೀದ

ಅವಾನ ಪಟ್ಟುಣಾದ ಮುತ್ತೀನ ಸೆಟ್ಟುರಲ್ಲೋ

ಮೂರಾನ ಜಾನವಲ್ಲೋ ಮುತ್ತೀನ ಸೆಟ್ಟುರಲ್ಲೋ

ಹಡಗೀನಿಂದಾವಾ ಆಚೆ ದೇಸುಕೆ ಮುತ್ತಾವ ಮಾರಾಕೇ

ಮುತ್ತಾ ಮಾರಕೆ ಹೋಗಿ ವಸ ದೋರೆ ಕೇಳುತಾರೇ

ಕೇಳೀರಿ ಮಾಸ್ವಾಮಿ ಅಡಿಗಿನಲ್ಲಿ ಬೇರೆ ದೇಸೂಕೆ ಹೋಗಬೇಕೂ

ಸಮುದ್ರಾದಿಂದಾ ಆಚೇಗೆ ಹೋಗಬೇಕೂ

ನಮೀಗೆ ಒಂದಾ ಹಾಡಾಗ ಕೊಡಬೇಕೂ

ಮುತ್ತಿನ ಸೆಟ್ಟರುಗೊಂದು ಹಡಗಾನಾ ಕೊಡುತಾರೇ

ಆವಾನ ದೇಸುದಲ್ಲಿ ಮೂರು ವಜ್ರಾದ ಹಳ್ಳಾ ತರಬೇಕೂ

ನಮ್ಮ ಅರುಮಾನೆ ಕಳುಸಾಕೆ ವಜ್ರುದ ಹರುಳಾನ ಈಡುಬೇಕೂ

ತಂದೂ ಕೊಡಿರಯ್ಯ ಮುತ್ತಿನ ಸೆಟ್ಟುದೇ

ಸಮುದ್ರದಲ್ಲಿ ಹಡಗೂ ನಿಂತೈತೆ ಹೋಗೀ

ಮೂಡು ಜಾನ ಮುತ್ತಿನ ಸೆಟ್ಟುರಲ್ಲೋ

ಮುತ್ತುರತ್ನವ ತುಂಬುಕಂಡು ಹಡಗೀಗೇ ಹೋಗುತಾರೇ

ಹಡಗೀನ ಮ್ಯಾಕೋಗಿ ಮೂರು ಜನೂವೆ ಕೂತುಗಂಡ್ರೂ

ಹಡಗು ಮುಂದಾಕೆ ಹರೀಲೇ ವಲುದಲ್ಲೋ

ಕೇಳೀರಿ ಮಾಸ್ವಾಮಿ ಹಡುಗು ಮುಂದಕೆ ಹರಿವಲ್ಲೊ

ಅದು ಹೊಸಡುಗು ಸ್ವಾಮೀ ರಗುತಾದ ಬಲಿಯ ಕೊಡಬೇಕೂ

ಮುತ್ತಿನ ಸೆಟ್ಟುರು ರಾಜೂನ ಕೇಳುತಾರೇ

ರಾಜಾ ನೋಡಯ್ಯ ಹನ್ನೆರಡು ಗಂಟೆ ರಾತ್ರೇಲ್ಲಿ

ಯಾವುದೇಯ ಒಂದು ತಿರುಪೇಯ ಹುಡುಗ ಬಂದಿತ್ತಲ್ಲಾ

ಆ ಹುಡುಗಾನ ತಕ್ಕೊಂಡೋಗಿ ಹಡಗೀಗೆ ಕಡೀರಯ್ಯ

ಮುತ್ತಿನ ಸೆಟ್ಟುರೋಗಿ ಹೋಗಿ ಹುಡುಗಾನ ಬುಡುಸ್ತಾರೆ

ಹಡಗೀಗೆ ಪೂಜೇಯ ಮಾಡಾಕೆ ಹಣ್ಣು ಕಾಯಾ ತಕ್ಕಂಡ್ಲು

ಕಂದ್ಲೀಯ ತಾಕ್ಕಂಡು ಹುಡುಗಾನ ಕಾರ್ಕಂಡು

ಸಮುದ್ರಕೆ ಕರಕಂಡು ವಾದುರಲ್ಲ

ಹುಡುಗಾನ ಪೂಜೇಯ ಪೂಜೇಯ ಮಾಡುತಾತೇ

ಹುಡುಗಾನ ಕೊಳ್ಳೀಗೆ ಹೂಮಾಲೆ ಹಾಕುತಾರೇ

ಹಡಗೀಗೆ ಕರಕಂಡೋಗಿ ಹುಡುಗಾನ ಕಡೀಯಾಕೆ

ಮುತ್ತಿನ ಸೆಟ್ಟುರಲ್ಲೋ ಮುತ್ತಿನ ಸೆಟ್ಟೋರಲ್ಲೋ

ಹಡಗೀಗೆ ಹುಡುಗಾ ಎಳಕಂದ ಮ್ಯಾಲೇ

ಹಡುಗೂನೆಂಬೋದು ಜೊಯ್ಯಂತ ಹರೀತಾದೇ

ಸಾಮುದ್ರದೊಳಗೆ ಆರಾನ ತಿಂಗಾಳಾಉ

ಆಚೇಯ ದಿಡುಕೇ ಹೋಗೀ ನಿಲ್ಲುತ್ತಾದೇ

ಈವಾನ ಹುಡುಗಾನ ಹಡಗೀಗೆ ಕಟ್ಟಿರುತಾರೇ

ಮುತ್ತಿನ ಮಾರಾಕೆ ವಜ್ರಗಿರಿಯ ಪಟ್ಟುಣಾಕೆ ಹೋಗುತಾರೇ

ವಜ್ರುಗಿರಿಯ ಪಟ್ಟುಣದಲ್ಲಿ ವಜ್ರಗಿರಿಯ ರಾಜುರ ಮಾಗುಳಲ್ಲೋ

ರಾಜೂನ ಮಗಳಲ್ಲೋ ನೀಲಾವತೀ ಈರುಮೋಳು
ಅವುಳು ರುತುವಾಗನ್ನೆರಡು ವರುಸಾ
ವಜ್ರುಗಿರಿ ರಾಜ್ನಾ ಹೋಗಿರಿ ಕೇಳುತಾರೇ
ವಜ್ರುಗಿರಿ ರಾಜಾ ನನ್ನ ಮಗಳಾನ ಕೊಡುತ್ತೀನಿ
ಕಲ್ಲೀಗೆ ದಾರಾವ ದಾರಾವ ಪೋಣುಸುತಿರೇನೋ
ಮುತ್ತಿನ ಸೆಟ್ಟೇರು ಕಲ್ಲಿಂತ ಹೋಗಿ ನೋಡುತಾರೇ
ದಾರ ಪೋಣುಸ್ತೀನಿ ಅಂತ ಹೋದರನ್ನಲ್ಲಾ ಕಡುದು ಹಾಕ್ಯವರೇ
ಮುತ್ತೀನ ಸೆಟ್ಟುರೂ ಹೇದೀರಿ ಅವುರೆಲ್ಲೋ
ನಾವಲ್ಲ ಸ್ವಾಮಿ ಹಡಗಿನಲ್ಲಿ ಒಂದು ಹುಡುಗಾ ಅವನೇ
ಆ ಹುಡುಗಾನ ಕಳುಸ್ತೀನಿ ಅಂತ ಹಡಗಿಂತಾ ಹೋಗುತಾದೇ
ಹುಡುಗಾನ ಕಲ್ಲೀಗೆ ದಾರಾವ ಪೋಣುಸಾಕೇ
ಮುತ್ತೀನ ಸೆಟ್ರು ಕಳುಸೀ ಕಳುವೂತಾರೇ
ಹುಡುಗಾನು ಹೋಗುವಾಗ ಅಂಗ್ಡೀಯ ಮನೆವಳುಗೇ
ಒಂದಾನ ಅಚ್ಚ ಬೆಲ್ಲಾನಾ ತಕ್ಕಂಡಾ
ಹೋಗೋ ದಾರಿವಳುಗೆ ಒಂದು ಇರುವೇಯ ಈಡ್ಕಂಡಾ
ಕಲ್ಲಿಂತಾಕೆ ಹೋಗಿ ಕಲ್ಲಿಗೆ ಬೆಲ್ಲವ ಸರುವುತಾನೇ
ಇರುವೇಯ ಸೊಂಟಾಕೆ ನೂಲನಾ ಕಟ್ಟುತಾನೇ
ಇರುವೇಯ ಬುಟ್ಟುಬುಟ್ಟಾ ಬೆಲ್ಲಾವ ಸೀಯೀಗೇ
ಕಲ್ಲಾ ಕೊರುದ್ಯೆತೆ ದಾರವಾ ಪೋಣಿಸ್ಯೆತೇ
ದಾರಾವಾ ಪೋಣೀಸಿ ಅದೇ ಕಲ್ಲಿನ ಮ್ಯಾಲೆ ಕುಂತ್ಯೆತೆ
ಆ ಹುಡುಗಾನ ಕರ್‍ಕೊಂಡೋಗಿ ಚಪ್ರಾ ಮೇಲ್ಕಟ್ಟು ಮಾಡುತಾರೇ
ಆವಾ ರಾಜಾನ ಮಗಳಾ ದರುಮಾಕೆ ದಾರೇಯ ಎರಿತಾರೇ
ಆವ ರಾಜೂರು ಹೇಳುತಾತೇ ದೊರೆಸಾನೀರು ಹೇಳುತಾರೇ
ತಾನೂ ಎನುಲಿದೇವಾ ರಾಮರುದೇವಾ ॥
ಮುತ್ತಿನ ಸೆಟ್ಟೂರೂ ಹುಡುಗೂನ ಕರಿತಾರೇ
ಬಾರೋ ಬಾರೋ ಹುಡುಗ ಈವೊತ್ತಿನ ರಾತುರೇಯಾ
ನಿನ್ನ ಹೆಡಿತಿ ಹಾಸ್ಗೇಯಾ ಮುಟ್ಟುದಿಲ್ಲಾ ಅಂತಾವಾ
ನಮ್ಮಿಗೇ ನೀನು ಬಾಸೇ ಮಾಡೀಕೊಡೋ
ಆಗಾ ನೋಡೋ ಸಾಯಂಕಾಲ ಆಯ್ತೊ

ಊರ ಎಲ್ಲಾವ ತೇರೇ ಬಂತಲ್ಲಾ
ಮಗುಳುನ್ನೂವೆ ಆಳೆಮಯಿನ್ನೂವೇ
ಮನಿಗೇ ಬುಟ್ಟು ಇವುರು ಬ್ಯಾರೇ ಹೋಗುತಾರೇ
ಇವುರು ಬ್ಯಾರೆ ಮನಿಗೆ ಮನನಗೋಗುತಾರೇ
ಈ ಹುಡುಗಾ ನೋಡಯ್ಯ ಮಂಚುದು ಮ್ಯಾಲೆ ಕುಂತಾದೇ
ಈ ಹುಡುಗಿ ನೋಡಯ್ಯ ಮಂಚುದು ಮಲಗಾಕೆ ಬಂದುಳಲ್ಲಾ
ಮಂಚಾಕೆ ಮ್ಯಾಕೆ ಹತ್ತೀದಾಳೋ
ಇವುಳು ಮ್ಯಾಕೆ ಹತ್ತಿದು ಮ್ಯಾಲೆ ಹುಡುಗ ಕೈಳಿಕೆ ಇಳುದಾನೂ
ಬೆಳ್ಳೊಂದು ಬೆಳುಗೆಲ್ಲಾ ಹತ್ತೋದಿಳಿಯೋದೇ ಆಗೋಯ್ತೂ
ರಘು ರಾಮಾ ॥
ರವುರತ್ನಾದ ಪಟ್ಟುಣಾಕೆ ಹೋಗುತಾನೇ
ರವುರತ್ನಾದ ಹಳ್ಳ ತರುವೋಕೆ ಹೋಗುತಾರೇ
ಆವ ರಾಜುನ ಮಗಳು ರುತವಾಗನ್ನೆರಡು ವರುಸಾ
ಅಲ್ಲೊಂದು ನೋಡೂ ಕುದುರೇ ಈರುವೋದೂ
ಈವಾನ ಹುಡುಗಾನ ಮುತ್ತಿನ ಸೆಟ್ಟು ಕುಳ್ಸುತಾರೇ
ಹೋಗೋ ದಾರೀಯವಳುಗೆ ಕಬ್ಬೀನ ಗದ್ದೈಲ್ಲೋ
ತೊಂಡೇಯ ಜಾಡುಕಂಡಾ ಕಂಕ್ಕಲ್ಲಿ ಈರಿಕಂಡಾ
ಪಟ್ಟುಣಾಕೆ ಹೋಗುತಾನೇ ಕುದರೇಯ ನೋಡುತಾನೇ
ನೆಲಬಾವಾರುದಲ್ಲಿ ಕುದುರೇಯ ಈರುವೋದೂ
ಕುದುರೆ ನೆಗೆದು ಬಂದಾಗ ಕಬ್ಬಿನ ತೊಂಡೆಯ ಕೊಡುತಾನೇ
ಕಬ್ಬೀನ ತೊಂಡೇಯ ಕಡಿವಾಣ ಹಾಕಿಕೊಂಡಾ
ಕುದುರೇಯ ಮ್ಯಾಲೆ ನ್ಯಗುದೂ ಕೂತುಗಂಡಡಾ
ಬೆಳ್ಳೊಂದು ಬೆಳುಗೆಲ್ಲ ಕುದುರೇಯಾ ಬಾರೀಯ ವಡೀತಾನೇ
ಕುದುರೇಯ ನೆಂಬೋದು ನೊಡ್ಲೇಯ ಕಕ್ಕುತಾದೇ
ನೊಡ್ಲೇಯ ಕಕ್ಕ್ಯಲ್ಲೋ ಪಟ್ಟನೆ ಪ್ರಾಣಾವ ಬೀಡುತಲ್ಲೋ।
ಬಾರುದೂರು ಬಾರುತಾರೆ ಹುಡುಗಾನ ನೋಡುತಾಳೇ
ಕುದುರೇ ಸತ್ತೋಗೈತಂತಾ ದೂರಾ ಹೇಳುತಾರೇ
ಆಗಾಲೆ ಹುಡುಗಾನ ಕರ್ಕಂಡು ಹೋಗುತಾರೇ
ರವುರತ್ನದ ರಾಜಾನ ಮಗಳ ಮದಿವೇಯ ಮಾಡುತಾರೇ

ಅಸ್ತಮಾನ ಆದುಮ್ಯಾಲೆ ಮುತ್ತೀನ ಸೆಟ್ಟು ಬಂದುರಲ್ಲೋ
ಏನ್ರೇಯ ದೊರಿಗೋಳೇ ನಮ್ಮ ಹುಡುಗಾನ ಕಳ್ಸಿಕೋಡೀ
ಕೇಳಿರಯ್ಯ ಮುತ್ತಿನ ಸೆಟ್ರ ನಮು ದೇಸಾದ ವಾಡಿಕೇಯಾ
ಆಗ ಮುತ್ತಿನ ಸೆಟ್ಟಿ ಈಚೀಗೆ ಕಾರುದಾರೋ
ಏನಾಲ ಎಲೆ ಹುಡುಗ ಈವತ್ತಿನ ರಾತುರಲ್ಲೇ
ಈವತ್ತಿನ ರಾತುರೇಯ ನಿನ್ನ ಹೆಡಿತೀಯ ಹಾಸಿಗೇಯಾ
ಮುಟ್ಟೋದಿಲ್ಲ ಅಂತವಾ ಬಾಸೇಯಾ ಮಾಡೀ ಕೋಡೋ
ಮುತ್ತಿನ ಸೆಟ್ಟಿಗೆ ಬಾಸೇಯ ಮಾಡಿ ಕೊಟ್ಟಾ
ಅವುರ ಮಾನೆಯ ಎಲ್ಲಾವ ಊಟಾವು ತೀರಿ ಬಂತೂ
ಬ್ಯಾರೇಯ ಮಿಗೆ ಮನಗಾಕೆ ಹೋಗುತಾಳೇ
ಈವಾಗ ಹುಡುಗಾನು ಮಂಚುದು ಮ್ಯಾಲೆ ಕುಂತವನ್ನಲಾ
ರಾಜೂನ ಮಗೂಲಲ್ಲೊ ಮಂಚುಕೆ ಮನಗಾಕೆ ಹೋಗುತಾಳೇ
ಇವುಳು ಮಂಚಾನ ಹತ್ತಿದುಳು ಹುಡುಗ ಕ್ಯೇಳೀಕೆ ನೈಗುದೂ
ಬೆಳ್ಳೊಂದು ಬೆಳುಗೂ ಹತ್ತೋದು ಇಳಿಯೋದೇ ಆಗೋಯ್ತಾ
ರಾಮಾನೇ ರಾಮಾ ರಾಮನೋ ರಾಮಾ ॥
ರವುತುತನುದು ಪಟ್ಟುಣಾಕೆ ಮುತ್ತಿನ ಸೆಟ್ಟುದೂ ಹೋಗುತಾರೇ
ರವುರತುನ ರಾಜುನ ಮಗಳಾ ಮದಿವೇಯ ಮಾಡುತಾರೇ
ಅಡವೀ ಕುಮಾರ ದೊರಿಗೆ ಮೂರು ಜಾನ ಹೆಂಡುರಲ್ಲೊ
ಮುತ್ತಿನ ಸೆಟ್ಟುರೂ ನೋಡೋ ಹಡಗೀಗೆ ಬಾರುತಾರೇ
ಈವಾಗಾ ಹುಡುಗಾನೂ ಮೂರು ಜನಾನು ಕರುಕಂಡೂ
ಅಡವಿನಿಂದಾವಾ ನೋಡೋ ಅವುರ ಅಣ್ಣಾನ ಪಟ್ಟುಣಾಕೇ
ಅವುರ ಅಣ್ಣಾನ ಪಟ್ಟುಣಾಕೆ ಬಂದೇಯ ವಾದುನಲ್ಲಾ
ಉಳ್ಳಿಗೆಂಡೆ ನಿಂಗವ್ವಾನಾ ಮಾನೇಯ ಸೇರವರೇ
ಉಳ್ಳಿಗೆಂಡೇ ನಿಂಗಣ್ಣ ನೋಡೋ ಮಕ್ಕಾಳ ಕೇಳುತಾನೇ
ಅವುರಾನ ಆಣ್ಣಾನ ಹೋಗೀ ಕೇಳುತಾನೇ
ಜೀನಾವತಿಯ ಮಕ್ಳುನಾವೂ ಅಲುವೇನೋ ನಮ್ಮಣ್ಣ
ಕಿರಿಯಾನು ತಮ್ಮಾ ಹೋಗೀ ಕೇಳೀದಾ
ಆಗಾಲೇ ಅವುರಣ್ಣ ತಮ್ಮುನ ಬಾಚೀನೇ ತೆಬ್ಬಿಕಂಡೇ
ಕೇಳಾಪ್ಪ ನನು ತಮ್ಮ ನಿನ್ನ ಜೈಲೀಗೇ ಕೂಡಿದುನಲ್ಲೋ

ನಂದೂ ತಮ್ಮ ಅನ್ನಾಯಾ ತಪ್ಪಾಯ್ತು

ನಡಿಯಾಪ್ಪ ನನು ತಮ್ಮ ನಾವು ಪಟ್ಟುಣಾಕೆ ಹೋಗುವಾನ

ನಮ್ಮ ಅರಣ್ಯ ವಾಸಾ ಇಲ್ಲೀಗೇ ತೀರಿಬಂತೂ

ನಮ್ಮ ತಾಯೀಯಾ ನೋಡಾನ ನಡಿಯಾಪ್ಪ ನನು ತಮ್ಮಾ

ಆಗ ಬಸವಕುಮಾರು ದ್ವಾರೇ ನೀಲಾವತಿಯ ರಾಜೂನು

ನೀಲವತಿಯ ರಾಜೂನು ಪಟ್ಟವ ಬಿಟ್ಟು ಅವುರ ಪಟ್ಟುಣಾಕೆ ಹೋಗುತಾನೇ

ಅವುರ ಪಟ್ಟುಣಾದ ಮುಂದೆ ಮೂಡುಲು ಬಾರೇಯ ಮ್ಯಾಲೇ

ಮೂಡುಲು ಬಾರೇಲಿ ಬೀಡಿಕೆಯ ಬೂಡುತಾರೇ

ಗುಂಪಾನ ಹಾಕುತಾರೆ ಬೀಡೀಕೆಯ ಬೀಡುತಾರೇ

ಅವುರ ಪಟ್ಟುಣಾಕೆ ವಾಲೇಯ ಬರೀತಾರೇ

ಕಾಡೀಗೋದಾ ಮಕ್ಳು ಊರೀಗೆ ಬರುತೀವೀ

ನಮ್ಮ ತಾಯೀಯ ಆರ್ತೀಯ ತಾರುವೇಳೀ

ತಾಯೀಯ ಹೋಗಿ ಮಕ್ಳು ಬಾಚೀ ತಬ್ಬಿಕಂಡೋ

ಏಳವ್ವ ನಮ್ಮ ತಾಯೀ ನಿಮ್ಮಕ್ಕಳು ನಾವು ಬಂದಿದ್ದೀವಿ

ಆಳುತಾನವೇ ಮಕ್ಕಾಳು ಸ್ವಾಸೇರು ಅಳುತಾರೇ

ಎಂಡಾಳು ಮಕ್ಕಳೂವೇ ಶಿವುನ ಗ್ಯಾನಾ ಮಾಡುತಾವೇ

ರಾಮನೇ ರಾಮಾ ರಾಮಾನೂ ಚಂದುರಾಮಾ ॥

ಶಿವುನೇ ಪಾರುವತಿ ನೋಡು ಪ್ರೇತಕ್ಷ ಆದುರಲ್ಲಾ

ಏಳಾ ತೇರೇಯ ಬುಟ್ಟಿ ಜೀನಾವತಿಯನ್ನು

ಏಳಾ ತೆರೆಯ ವಳುಗೆ ಜೀವ ಕಾಳೇ ಕೊಡುತಾರೇ

ಶಿವುನೂವೆ ಪಾರುವತೀವೆ ಜೀವ ಕಾಳೇ ಕೊಡುತಾರೇ

ತಂದಾನಾನಾ ತಂದನುನಾನಾ

ದಾನಾವಾ ನೀಡಿರೋ ದರುಮಾತಾ ಕೋಟಿರೋ

ಜೀನಾವತಿಯನ್ನು ಜೀವುಕಾಳೇ ಕೊಡುತಾರೇ

ಎರಡಾಳು ಮಕ್ಕುಳೂವೇ ತಾಯೀನ ಬಾಚೀ ತಬ್ಬಿಕಂಡೋ

ನಡಿಯವ್ವ ನಮ್ಮ ತಾಯೀ ಬಡಗಾಲ ರಾಜ್ಯಕೇ

ಚಿಕ್ಕವ್ವ ಮುಂಡೇಯ ಸಿಗುದು ತ್ವಾರಣಾವ ಕಟ್ಟಬೇಕು

ಆಗ ಅವುರ ತಾಯಿ ಹೇಳುತಾಳೇ ಇಬ್ರಾಳೂ ಮಕ್ಕುಳೀಗೂ

ಬ್ಯಾಡು ಕನ್ರೋ ನನು ಮಕ್ಕೇ ನೀವು ನಿಜವಾಗಿರೋ ವೊತ್ತಿಗೆ

ಅಡುವಿ ಅರಣ್ಯದೊಳಗೆ ಗೆದ್ ಬಂದ್ರೀ ನನ್ನ ಮಕ್ಕೇ
ನನು ತಂಗೀಯ ಪ್ರಾಣಾವ ಕೇಳಿಬ್ಯಾಡೀ
ಎರಡಾಳೂವೆ ಮಕ್ಕುಳೂ ನೀಲವತಿಯ ಪಟ್ಟುಣದಲ್ಲೀ
ಮತ್ತಿ ತಿರಗಾ ನೋಡೀ ಅವರ ತಾಯೀ ತಂದೂವೇ
ಅವುರ ಸ್ವಾದುರದ ಮಾವೂನ ಮದುವೇಯ ಮಾಡಿದುರೂ
ಹಾಲುದಾರೆ ಎರುದಾರು ನೀರುದಾರೇ ಎರುದಾರೊ
ಬಸವಾ ಕುಮಾರ ದೊರಿಗೇ ಒಬ್ಬಳಾ ಮಡುದೀಯಾ
ಕಿರಿಯ ಮೊಗ ಅಡುವೀಯ ಕುಮಾರುಗೆ ಮೂರ್ ಜಾನ ಹೆಂಡಾರು
ಮತ್ತೆ ತಿರುಗಾಲ ಮದುವೆಯ ಮಾಡಿದುರು
ರಾಜಾರ ಮಕ್ಕಾಳ ಪಟ್ಟಾವ ಕಟ್ಟುತ್ತಾರೇ
ದರುಮರಾಜುರ ಪಟ್ಟ ಬಸುವರಾಜುಗೆ ಕಟ್ಟುತಾರೇ
ಜೀನಾವತಿಯ ಕತೆ ಇಲ್ಲೀಗೆ ತೀರಿಬಂತೂ
ಇಲ್ಲೀಗೆ ಹರಹರಾ ಇಲ್ಲೀಗೆ ಶಿವಶಿವಾ

~ * * * * ~

# ಉಪಕತೆಗಳು

## 1. ಮೈಸೂರು ಚಾಮುಂಡಿ ಕತೆ:–

ಏನಂದರೇನೆಳಾಲೀ ಚಾಮುಂಡಿಬೆಟ್ಟ ಮೈಸೂರು ಬೀದೀಲೀ ನಂಜೂನುಗೂಡೀಗೆ ನಾಕೈದು ಬಾಗೂಲು ನಂದಿಕೋಲೈದು ಪಾಳೇವೈದೂ ನಂದಿಕೋಲೈದು ಪಟ್ಟವೈದು ನಂಜಪ್ಪಗೇ ಮಂಗಳಾರತಿಗಳದಿನ್ನೈದೂ ಮೂಡು ಮುಂದಾಗೀ ಕೆಟ್ಟಕೆ ಮೈಸೂರಾ ಬೆಟ್ಟುದ್ ಚಾಮುಂಡಿ ದಾಯದಿಂದಆ ಬೆಟ್ಟುದ ಚಾಮುಂಡಿ ದಯದಿಂದ ಮೈಸೂರ ಕಟ್ಟಾದೆ ಮೂಡ ಮಕನಾಗೀ ಎಲ್ಲಾ ಬಂದೂರು ನಂಜುಂಡ ಬರಲಿಲ್ಲ ಬ್ಯಾಗುನ ನಂಜಯ್ಯನ ಬರಹೇಳೀ ಬ್ಯಾಗೂನ ನಂಜಯ್ನ ಬರೂವೇಳೀ

ಬ್ಯಾಗೂನ ನಂಜಯ್ನ ಬರಹೇಳಂತಾಗಿ ಅವುಳು ಹೂವಿನ ಅಂದ್ಲಾವ ಕಳಿವ್ಯಾಳೇ ಹೂವಿನ ಅಂದಲಾವಾ ಕಳುಹಿದಳು ಚಾಮಾಯಿ ಅದು ನಂಜುನ ಗೂಡೀಗೆ ಹೋಗುತಾದೆ. ನಂಜುನಗೂಡೀಗೆ ಹೋಗುತಾದೇ ನಂಜಪ್ಪಸ್ವಾಮೀ ಮನಿಸ್ವಾಮೀ ನಂಜಪ್ಪಸ್ವಾಮಿ ಮನಿಸ್ವಾಮೀ ಅವುನು ಕಾಲಆಳ ಕರಾಕಂಡಾ ಕಾಲಾಳ ಕರುಕಂಡು ಕೈಪಂಜು ಹಿಡುಕಂಡು ಅವುರು ಚಾಮುಂಡಿ ಅರುಮನಿಗೇ ಹೊರಟನು ಚಾಮುಂಡಿ ಮನಿಗೆ ನಂಜಪ್ಪ ಬಾಗುಲಲ್ಲೀ ನಿತುಗಂತಾ ಬಾಗುಲಲಿ ಹೋಗಿ ನಿತುಗಂಡು ನಂಜಪ್ಪ ತೆಗಿಯೇ ಚಾಮುಂಡೀ ಕದಗೋಳು ಕದುವ ತೆಗೆಯಾಕೆ ಯರುಂತು ಎಲರಾಯಾ ನಿನಗೆ ಮಡದೀರುಲುವೆನೋ ಮನಿವಳುಗೇ ನಿನುಗೆ ಮಡದೀರುಲವೇನೋ ವಸಿವಳುಗೆ ನಂಜಯ್ಯ ಎರಗಿನ ಸೂಳೇ ನಿವವೇನೋ.

ತಂದನಾನು ತಾನಾಂದನ್ನ
ತಾನಂದಾನಾ ತಾನ....”

ಎಲ್ಲಿ ಉತ್ತುನಳ್ಳಿ ಬಾರೆಮ್ಯಾಲೆ ಸಿಕ್ಕಿದ್ನಲ್ಲೆ ಸಿಕ್ಕಿದ್ನಲೆ ಕಳುನಂಜ
ಅವುನು ಬತ್ತಿನಂತ ಬಾಸೆ ಮಾಡೋರ
ಅವುನು ಬಲಗೈ ಬಾಸೆ ಮಾಡಿ ಎಡಗೈ ನಂಬಿಕೆ ಕೊಟು
ಅವುನು ನೀರು ಮುಟ್ಟಿ ಸತ್ಯ ಮಾಡಿ ಹೋಗಿ
ನೀರು ಮುಟ್ಟಿ ಸತ್ಯಾವ ಮಾಡೋದ ಕಿಳುನಂಜ
ಅವುನು ಇನ್ನು ಬರನಿಲ್ಲ ಮೈಸೂರಿಗೆ
ಇನ್ನು ಬರನಿಲ್ಲ ಮೈಸೂರಿಗೆ ಕಳುನಂಜ
ಅವುನು ಯಾನನ್ನ ಸವುತಿ ಮನಗೋದುನೇ
ಅವುನು ಯಾವನ್ನ ಸವುತಿ ಮನಿಗೋದುನೆ ಕಾಣುನಲ್ಲಾ
ಇನ್ನು ಬರಲಿಲ್ಲ ಮೈಸೂರಗೇ
ನಾನು ಹಾಳಾದ ನಂಜಯ್ಯನ ಗ್ಯಾನ ಎಲ್ಲೆಲ್ಲಿ ಮಾಡಿಕಂಡೆ
ಹಾಳು ಕಣಿಗೆ ನಿದುರೆ ಬರೂವಲ್ಲೊ
ನನಿಗೆ ಹಾಳು ಕಣಿಗೆ ನಿದುರೆ ಬರವೊಲ್ಲೊ ನನ ತಂಗೇ

ಯಾ ನನ್ನ ಸವುತಿ ಮನಿಗೋದುನೊ ಕಾಣುನಲ್ಲೇ
ನಿನ್ನು ಬರಲಿಲ್ಲ ಮೈಸೂರಿಗೇ
ಅವುನು ಇಟ್ಟಾಳ ಯಂತ್ರ ಐಬೋಗದಲ್ಲೇ
ನನು ಮ್ಯಾಗಳ ಗ್ಯಾನ ಮರೆತಾನೇ
ನನು ಮ್ಯಾಗಳ ಗ್ಯಾನಾವ ಮರುತಾನೆ ಕಳುನಂಜ
ಅವನ ಹೆಂಡ್ರ ಅವುನು ತಿನುಕೋಳಿ
ಅವುನು ದವಡೆ ಸೊಕ್ಕೇದ ಆಡೀರ ಮಕವಾ
ಇನ್ನು ನೋಡಿಕಂದು ಅವುನಲ್ಲೇ
ಇನ್ನು ಬರಲಿಲ್ಲ ಮೈಸೂರಿಗೇ
ನಾನು ಕರೆದ ಮಾತೀಗೆ ಅವುನು ಬರುದೆ ವಾದೂರೇ
ಇಲ್ಲೀಗೆ ಮೈಸೂರ ದಾರಿ ಎರೂವಲ್ಲೂವೇ
ಇಲ್ಲಿಗೆ ಮೈಸೂರ ದಾರಿ ಎರುವಲವೆ ಕಳುನಂಜಗೆ
ಅವನ ದಂಡೀಗೆ ಜಡವ ಕಳಿವೇನೂ
ಅವನ ದಂಡೀಗೆ ಜಡವ ಕಳಿಸಿ ನಾನೂ
ನಾನು ಬಂಡಿ ಮ್ಯಾಲೆ ಹೆಣವ ಏರುಸೂವೇ
ಎಲ್ಲಾ ಹಾಳಾದ ನಂಜಯ್ಯನ ಗ್ಯಾನ ಎಲ್ಲೆಲ್ಲೆ ಮಾಡಿಕಂಡೆ
ನನಗೆ ಉಂಡು ಬಾಯಿಗೀಟು ಎಲಿಯಿಲ್ಲಾ
ಅವುನು ಮುಂದಲಿಗೆ ನೆರಿಬಂದ ಮುದಿನ ನನ್ನ ಸವುತಿರಿಗೆ
ಅವುನು ಒಲುದು ಮನಿಗ್ಯವನೆ ಮುದಿರಾಯ
ನಾನು ನಿನ್ನೆ ತೊಟುದನಲ್ಲೆ ರೇಕು ಗಾಜಿನ ಬಳಿಯಾ
ನಾನು ಯಾವತ್ತೊಡಿಲವನ ಎದಿಮ್ಯಾಲೇ
ಅವುನು ವಾದ ಹಾಡವಳುಗೆ ಅವನ ಹಾವಾರ ಕಡಿಬಾರದೇ
ಆಹಾ ಚೇಳಾರ ಕಡಿಬಾರುದೂ
ಅವುನಿಗೆ ಮಜ್ಜಿಗೆಲ್ಲಿ ಮದ್ದ ಕೊಡೋಲೇಳೇ
ಅವುನಿಗೆ ಮಜ್ಜಿಗೆಲ್ಲಿ ಮದ್ದ ಕೊಡೋಲೇಳೇ ನನುತಂಗೀ
ಅವುನ ಎಜ್ಜೂರ ಹೊಳಿಗೆ ಎಳೀಲೇಳೇ
ಬೆಟ್ಟುದ್ ಚಾಮುಂಡಿ ಬೆಟ್ಟುದು ಮ್ಯಾಲೆ ನಿತುಕಂಡು
ನಂಜಯ್ಯಗೆ ಸಾಪುಳ ಹಾಕುತಾಳೇ
ಅವುಳು ನಂಜಯ್ಯಗೆ ಸಾಪೂಳ ಹಾಕುತಾಳೇ.

# 2.ಮದುವೆ ಹಾಡು

ಮದುವೇ ವಾಗುತ್ತೈತೆ  ಅತ್ಯಮುಗೇ ಮದುವೇನಾಗುತ್ತೈತೆ ॥

ಮದುವೇ ಆಗುತಾದೇ ಅತ್ತ್ಯಮ್ಮುಗೇ ಮದುವೇ ಆಗುತಾದೇ

ಆಲೂರೋರ್ ಅಕ್ಕತಂದ್ರು ಬೇಲೂರೋರ್ ಬೆಲ್ಲ ತಂದ್ರು ॥

ಸೀರ್ ನಳ್ಳೋರ್ ಸೀರೆ ತಂದ್ರೂ

ಸೀರ್ ನಳ್ಳೋರ್ ಸೀರೆ ತಂದ್ರೂ ರಾಜ್ನಳ್ಳೋರ್ ರವುಕ ತಂದ್ರೂ ॥

ರಾಜನಳ್ಳೋರ್ ರವುಕೆ ತಂದ್ರು ಕಡಗದೋರು ಕಡಗ ತಂದ್ರು ॥

ಕಡಗುದೋರು ಕಡಗ ತಂದ್ರು ಚಪ್ಪರದಳ್ಳೋರ ಬಂದು ಚಪ್ರ ಹಾಕುತಾರೇ ॥

ಚಪ್ಪರದಳ್ಳೋರ್ ಚಪ್ರ ಹಾಕುತ್ತಾರೆ ಹಾಸನ್ದೋರು ಬಂದು ಹಾಸೆ ಬರಿತಾರೇ ॥

ಹಾಸಂದೋರ್ ಹಾಸೆ ಬರುದ್ರೆ ಉದ್ದೊರೋರ್ ಬಂದು ಉದ್ಯೋಗ ಮಾಡುತಾರೆ ॥

ಉದ್ದೂರೊರ್ ವಾದ್ಯುದಲ್ಲಿ ದ್ವಾರ್ನಳ್ಳಿಯೋರ್ ಬಂದು ದಾರೆ ಉಯ್ತುರ್ ಕನ್ಲಪ್ಪಯ್ಯ ॥

ದ್ವಾರ್ನಳ್ಳಿಯೋರ್ ದಾರೆ ವಾದ್ರೆ ಆಲ್ದಳ್ಳಿಯೇರ್ ಬಂದು ಹಾಲ್ ಬುಡ್ತರ್ ಕನ್ಲಪ್ಪಯ್ಯ

ಕೆಂಚಿಕೊಪ್ಲೋರ್ ಬಂದು ಕೆಂಚಿ ಕಟ್ಟಾರ್ ಕನ್ಲಪ್ಪಯಾ ॥

ಮುದ್ದನಳ್ಳೋರ್ ಬಂದು ಮುದ್ದುಸ್ತಾರೆ ಕನ್ಲಪ್ಪಯ್ಯ ॥

ಕಳ್ಳಿ ಕೊಪ್ಲೋರ್ ಬಂದು ಕಳಿಸಿಕೊಡ್ತಾರೆ ಕನ್ಲಪ್ಪಯ್ಯಾ ॥

ಕಾರೇಕರೇರು ಬಂದು ಕರ್ಕಂಬರ್ತಾರೇ ಕನ್ಲಪ್ಪಯ್ಯ ॥

ಮದುವೇ ನಾಗುತ್ತೈತೆ ಅತ್ಯಮುಗೆ ಮದುವೇ ನಾಗುತ್ತೈತೆ.

# 3.ಅಂಬಿಗರ ಮಗಳು

ರಾಮಾನೋ ರಾಮಾ ರಾಮಾನೇ ರಾಮಾ ॥

ಅಂಬಿಗರ ಮಗುಳಿಲ್ಲೋ ಅಂಬಿಗಾರ ಹುಡುಗೈಲ್ಲೋ

ಅಂಬಿಗಾರ ಮಗುಳನ್ನು ಹೊಳಿಂದಾಚಿಗೆ ಕೊಡುತಾರೇ

ಹೊಳಿಂದಚೆಗೆ ಕೊಟ್ಟು ಮದುವೆಯ ಮಾಡುತಾರೇ

ಗಂಡಾನ ಮನೆಯಿಂದ ತಾರಮನಿಗೆ ಬಂದುಳಲ್ಲಾ

ಎಂಬೊಂದು ಎಂಟು ದೀನಾ ತಾರಲ್ಲ ಈರುತಾಳೇ

ಎಂಟು ದಿನುದ ಮ್ಯಾಲೆ ಅವುರ ಹಡೆದವ್ನ ಕೇಳುತಾಳೇ

ಕೇಳವ್ವಾ ನಮುತಾಯೀ ನಾನು ಗಂಡುನ ಮಾನೀಗೋಗುತೀನಿ

ಗಂಡುನ ಮನೀಗೋಗುತೀನಿ ನನ್ನ ಕಳುಸವ್ವ ಹಡುದವ್ವಾ

ನಾನು ತಿರುಪತಿಗೆ ಹೋಗಬೇಕೂ ನಾನು ತಿಮ್ಮಪ್ಪನ ನೋಡುಬೇಕೂ

ನಾನು ಹರಿಸ್ವಾವೆಯ ಮಾಡಬೇಕೂ ಗುರುಸ್ಯಾವಯ ಮಾಡಬೇಕೂ

ಕಳುಸವ್ವಾ ನನ್ನ ಗಂಡುನ ಮನಿಗೋಗೂತೀನೀ

ಆಗುಲೇಯ ಅವುರವ್ವ ಮಗುಳ ಸಂಸಾರ ಮಾಡುತಾಳೇ

ಮಗಳ ತಾಲೆಯನ ಬಾಚುತಾಳೇ ಎಣೆಗಂಟ ಮಾಡುತಾಳೇ

ಸೀರೆಯ ಉಡಿಸ್ಯವಳೆ ರವಿಕೇಯ ತೊಡಿಸ್ಯವಳೆ

ವಡುಬೆ ಬಂಗಾರ ಇಕ್ಕಿ ಸುಂಗಾರ ಮಾಡುತಾಳೇ

ನೆತ್ತೀಗೆ ತುಪ್ಪಾವ ಊದು ತಾಲಿಗೆಣ್ಣೆಯ ಹಾಕೀ

ಮಗಳ ಹಣೆ ಮ್ಯಾಕೆ ಈಡುತಾಳೇ ಕಪ್ಪೀನ ಸಾದೀನ ಬಟ್ಟಾ

ಸಣ್ಣಾ ಮಲ್ಲಿಗೇ ಹೂವಾ ನಾಗಾ ಸಂಪಿಗೆ ಮೊಗೂ

ಸುರಗೀ ಸಾವಂತಿಗೆ ಹೂವ ತುರುಬೀಗೆ ಮುಡಿತಾಳೇ

ಗಂಧಾವ ಕಸ್ತೂರಿಯ ಕೆನ್ನೀಗೆ ಏರಿಸ್ಯವಳೇ

ಎದೂರು ಗ್ವಾಡಿಗೆ ಕೂರಿಸಿ ಮಡಲಕ್ಕಿಯ ಉಯ್ಯುತ್ತಾಳೇ

ಹಾಲು ಅನ್ನಾವ ಉಣ್ಣಾಕೆ ಇಕ್ಕುತಾಲೇ

ನಡಿಯವ್ವಾ ನನುಮಗಳೇ ಹೊರಡವ್ವಾ ನನುಮಗಳೇ

ನಿಮ್ಮಣ್ಣ ಅಂಬೀಗ ಹೊಳೇಲಿ ಅರುಗಾಲ ಮಡುತಾವನೆ

ಅರುಗಾಲ ಮ್ಯಾಲೆ ಕುತುಗಂಡೂ ಆಚೆ ದಡುಕೆ ಹೋಗವ್ವ ನನು ಮಗುಳೇ

ಕೊಳ್ಳವ್ವ ನನು ಮಗುಳೇ ಅರುಗ್ಲಾಕೆ ದುಡ್ಡು ಕೋಳ್ಳೆ

ನಡಿಯಾವ ನನು ಮಗುಳೇ ಗಂಡಾನ ಮಾನೀಗೇ

ಆಗಾಲೇ ಅಂಬಿಗಾರ ಹುಡಗ್ಯಲ್ಲೋ
ತತಾರಾನಮಾನಿಯಿಂದ ಗಂಡಾನ ಮಾನಿಗೊರುಡುತಾಳೇ
ಅರ್ದಾವ ದಾರಿ ಮುಟ್ಟಿ ಅವರುರಾನ ಅವ್ವಾ
ಆಉತಾವ ಕಳಸಿದುಳು ಅವರವ್ವಾ
ಹೊಳೇಯ ದಿಡುಕೇ ವಾದಳಲ್ಲೋ ತಂಗ್ಯಮ್ಮಾ
ಅವುರಣ್ಣಾ ಅಂಬೀಗಾ ಅರುಗ್ಲಾವಾ ಬೀಡುತಿದ್ದಾ
ಅರುಗ್ಲಾದಾ ಕಡೆಈಕೆ ವಾದುಳಲ್ಲಿ ತಂಗ್ಯಮ್ಮ
ಅಣ್ಣಾ ಕೇಳಣ್ಣಾ ಹಿರಿಯಣ್ಣ ಅರುಗ್ಲಾಕೆ ದುಡ್ಡ ಕೋಳ್ಳೋ
ಆಚೇಯ ದಿಡುಕೆ ನನ್ನ ಕಳುಸಾಣ್ಣ ಹಿರಿಯಣ್ಣಾ
ಗಂಡಾನ ಮನಿಗೆ ಹೋಗುತೀನಿ ಹಿರಿಯಣ್ಣಾ
ಆಗಲೇಯ ಅವುರಣ್ಣಾ ದುಡ್ಡಾನ ಈಸಗಂಡಾ
ಅರುಗ್ಲಾಕೇ ಶರುಣಾ ಮಾಡ್ತಾಳೆ ತಂಗ್ಯಮ್ಮ
ಗಂಗೀಗೆ ಶರಣಾ ಮಾಡ್ತಾಳೆ ತಂಗ್ಯಮ್ಮ
ಅರುಗ್ಲಾದ ಮ್ಯಾಕೆ ನೈಗುದು ಕೂತವಳಲ್ಲೋ
ಅವುರಣ್ಣಾ ಅಂಬೀಗಾ ಅರುಗ್ಲಾವ ಬೀಡುತಾನೇ
ಅರ್ವಾವಳೇ ಏಳುಗೆ ಅರುಗ್ಲಾ ಹೋಗೂತಾದೇ
ಅರುಗ್ಲಾವು ಹೋಗುವಾಗ ಅವರಣ ಅಂಬೀಗಾ
ತಂಗೀಯ ಚಂದಾವ ನೋಡುಲಾರುದೇ
ತಂಗೀಯ ಮ್ಯಾಲೆ ಗ್ಯಾನ ಬಿದ್ದ ಅವುರಣ್ಣ
ತಂಗೀಯ ಮ್ಯಾಲೆ ಕಣಿಟ್ಟ ಅವುರಣ್ಣ
ಅರ್ದಾವ ಹೊಳವಳುಗೆ ಅರುಗ್ಲಾ ಹೋಗುತಾದೇ
ಅರುಗ್ಲಾವು ಹೋಗುವಾಗ ಅವರಣ್ಣ ಅಂಬೀಗಾ
ತಂಗೇಯ ಎದೆ ಮ್ಯಾಲೆ ಕೈಯಾನ ಮಡುಗುತಾನೇ
ಅಣ್ಣಾ ಇದುವೇನೋ ನಮ್ಮಣ್ಣ ನಿನ್ನ ವಂದೀಗೆ ಹುಟ್ಟೀದಾ
ನಿನ್ನ ವಂದೀಗೆ ಹುಟ್ಟೀದಾ ತಂಗೇ ನಾನಲ್ಲವೇನೋ
ಅಯ್ಯಾ ತಂಗೇಯ ಮೈಮ್ಯಾಲೆ ಕೆಯ್ಯಾನ ಇಡಬಹುದಾ
ಕೇಳೇಲೆ ಎಲೆ ಹೆಣ್ಣೇ ಅಣ್ಣಾ ಅಂತವ ನೀನೂ
ಅಣ್ಣಾ ಅಂತವ ಕರೀಬ್ಯಾಡಾ ಎಲ ಹೆಣ್ಣೇ
ನೀನೂ ನನಿಗೆ ಸ್ವಾದುರ ಮಾವನ ಮಗಳು

ಸ್ವಾದೂರಾ ಮಾವಾನ ಮಗುಳೂ ನೀನಾಗಬೇಕೂ

ಮಚ್ಚಾನಾ ಮೊದಲಾಗೆ ನಿನ್ನ ನನಿಗೇಯಾ ಕೇಳಿತ್ತು

ಅಣ್ಣ ಅಂತಾವ ನನ್ನ ಕರಿಬ್ಯಾಡ ಎಲೆ ಹೆಣ್ಣೆ

ಅರುಗ್ಲಾದಾ ಮ್ಯಾಲೆ ತಂಗಿ ಕಾಳುಗದ್ದಾವ ಕಡೀತಾನೇ

ಅರುಗ್ಲಾದಾ ಮ್ಯಾಲೆ ತಂಗೀನ ಬಾಚೀ ತಬಿಕಂಡಾ

ಅಣ್ಣ ದಮ್ಮಯ್ಯ ಬೂಡಣ್ಣ ನಿನ್ನ ಕಾಲೀಗೆ ಬೀಳುತೀನಿ

ಎಷ್ಟು ಬಿದ್ದು ಬೇಡಿದುರುವೆ ಬಿಡಲಿಲ್ಲ ಅವುರಣ್ಣಾ

ಅಣ್ಣಾ ಅಣ್ಣಾ ಅನ್ನುತಾಳೇ ಹಿಂದಾಕೇ ಬಗ್ಗುತ್ತಾಳೇ

ಎಷ್ಟು ಬಿದ್ದು ಬೇಡಿದುರೂವೆ ಬಿಡಲಿಲ್ಲ ಅವುರಣ್ಣ

ತಂಗೇಯ ಮೈಕೈಯ್ಯಾ ಕೆಡಿಸಾಕೆ ಹೋಗುತಾನೇ

ಅರ್ದಾವ ಹೊಳವಳುಗೆ ಅರುಗ್ಲಾವು ಹೋಗುತಾನೇ

ತಂಗೇಯ ಮೈಕಯ್ಯ ಕೆಡಿಸುವಾಗ ಅರುಗ್ಲಾನೆಂಬೋದೂ

ನಡಾಹೊಳಿವಳುಗೆ ಗರಿಗರಿನೆ ತಿರುಗುತಾದೇ

ಮೂರಾ ಸುತ್ತು ಗರಿಗರಿನೆ ತಿರುಗುತಾದೇ

ಗರಿಗರಿನೆ ತಿರುಗ್ಯಲ್ಲಾ ಅರುಗ್ಲಾನೆಂಬಾದೂ

ನಾಡಾ ಹೊಳಿವಳುಗೆ ಮಕಾಡೇಯ ಮಗುಚಿಗಂಡೂ

ಮಕಡೇಯ ಮಗುಚಿಕಂಡು ಮ್ಯಾಲೆ ಅವುರಣ್ಣ ಅಂಬೀಗಾ

ನಾಡಾ ಹೊಳಿವಳುಗೆ ತೇಲಿಕಂಡೂ ಹೋಗುತಾನೇ

ಇಲ್ಲಿ ಮಗುಳ್ತಾವೇ ಅಲ್ಲೀ ಯೇಳುತಾನೇ

ನಾಡಾ ಹೊಳವಳುಗೆ ತೇಲಿಕಂಡು ಹೋಗುತಾನೇ

ಅಂಬಿಗರ ಮಗುಳಲ್ಲೊ ಅರುಗ್ಲಾವ ತಬ್ಬಿಕಂಡೂ

ಅರುಗ್ಲಾವ ತೆಬ್ಬಿಕಂಡು ಆಚೆ ದಿಡುಕ ನೆಗುದಾಳೂ

ಅಣ್ಣಾ ತೇಲಿಕಂಡು ಹೋಗಾದ ನೋಡ್ತಾಳೆ ತಂಗೀ

ಇಲ್ಲೀನೆ ಮುಗಳುತಾನೆ ಅಲ್ಲೀನೆ ಏಳುತಾನೇ

ಅವ್ವಾ ಬಾಯಲ್ಲಿ ನೀರ ಮುಕೆ ಮುಕುಳಿಸಿ ಉಗಿತಾನೇ

ತೇಲಿಕಂಡು ಹೋಗುವಾಗ ಅವುರಣ್ಣ ಅಂಬೀಗಾ

ದಮ್ಮೆ ಕಾನವ್ವ ತಂಗಿ ನಿನ್ನ ಕಾಲೀಗೆ ಬೀಳುತೀನಿ

ನಾನು ಮಾಡಿದ ಅನ್ನಾಯ ತಪ್ಪಾಯ್ತು ತಂಗೀ

ನನ್ನ ಜೀವಾವ ಉಳುಸಪ್ಪ ನ್ನ ಪ್ರಾಣಾವ ಉಳುಸವ್ವ

ವಾಳೇಲಿ ತೇಲಿಕಂಡು ಹೋಗುವಾಗ ಕೈಕಯ್ಯ ಮುಗೀತಾನೇ
ತಂಗೀಗೆ ಮತ್ತು ಹೊಟ್ಟೇಯು ಉರಿತಲ್ಲೋ
ವಾಳೇಯ ದಡುದಲ್ಲಿ ಓಡೋಡಿ ಹೋಗುತಾಳೇ
ಅಣ್ಣ ಅಣ್ಣ ಅನ್ನುತ್ತಾಳೆ  ಬಾಯ್ ಬಾಯ್ ಬಡ್ಕಾತಾಳೇ ತಂಗೆ ತಂಗೆ ಅನುತಾನೆ ಕೈಯ ಕೈಯ ಮುಗಿತಾನೇ
ಕನ್ನಂಬಾಡಿ ಕಟ್ಟೆ ತಕ್ಕೆ ತೇಲಿಕಂಡು ವಾದೂನಲ್ಲಾ
ಆಗಲೇಯ ತಂಗ್ಯಮ್ಮ ಉಟ್ಟಾನ ಸೀರೇಯಾ
ಉಟ್ಟಾನ ಸೀರೆಯಾ ಬುಳುಬುಳನೆ ಅಸುದಾಳೂ
ಸೀರೆಯ ತೆಗೆದು ವಾಳೇಗೆ ಎಸಿಯುತಾಳೇ
ಇಡುಕೋಳೋ ಹಿರಿಯಣ್ಣ ಸೀರೇಯ ಸ್ಯಾರಗಾನಾ ಹಿಡುಕಂಡಾ
ಈಚೇಯ ದಡುದಲ್ಲಿ ತಂಗಿ ಜಾಡೀಸೀ ಎಳೆಯುತಾಳೇ
ಎಳೂದು ದೀಡೂಕೆ ಹಾಕುತಾಳೇ
ಒಂದೂ ಗಂಟೆಯ ಮ್ಯಾಲೆ ಆಣ್ಣ ಗ್ಯಾನ ಆದುನಲ್ಲಾ
ಆಗಾಲೇ ತೆಂಗ್ಯಮ್ಮ ನೆಂದಾನ ಸೀರೇಯಾ
ನೆಂದಾನ ಸೀರೇಯ ಹಿಂಡಿ ಉಟುಗಂಡ್ಲೂ
ತಂಗೇಯ ಮಾಕಾವ ನೋಡ್ತಾನೆ ಅವುರಣ್ಣ
ಅಸ್ತ ಸೀರೆ ತಂಗೀಯ ಕಾಲಾನ ಕಡಿಗಂಡಾ
ದಮ್ಮೆ ಕಾನವ್ವ ತಂಗಿ ಅಣ್ಣ ಹಿಂಗೆ ಮಾಡಿದ ಅಂತಾ
ತಂಗೇ ಕಾಲೂ ಕಡಿಗಂಡು ಬಿದ್ದಾನೆ ಬೇಡುತಾನೇ
ಕೇಳವ್ವ ನನು ತಂಗಿ ಅಣ್ಣ ಹಿಂಗೆ ಮಾಡಿದ ಅಂತಾ
ನಿನ್ನ ಗಂಡಾನು ಕೂಟೆ ಹೇಳುಬ್ಯಾಡಾ
ನಿನ್ನ ಅತ್ತೆ ಮಾವ್‌ದೀರು ಕೂಟೆ ಹೇಳುಬ್ಯಾಡಾ
ನನ್ನ ಮಾನಾ ಹೋಗುತಾದೇ ನನ್ನ ಮರ್ಯಾದಿ ಹೋಗುತಾದೇ
ನೆಂಟುಸ್ತಾನ ತಂಗಿ ತೊರೆದು ಹೋಗುತಾದೇ
ತಂಗೇಯ ಬಿದ್ದೂ ಬೇಡೂತಾನೇ
ಆಗಾಲೇ ತಂಗ್ಯಮ್ಮ ಅಯ್ಯೋ ಪಾಪಿ ಮುಂಡೆ ಮಗನೇ
ನೀನು ಮಾಡಿದು ಕರ್ಮ ನೀನೇಯ ಹೊತುಗೋಳೋ
ನಡಿಯಣ್ಣ ಹೋಗಾನ ಗಂಡಾನ ಮನಿಗೇ
ಆಗಲೇಯ ತಂಗ್ಯಮ್ಮ ಅಂಬಿಗರ ಹುಡುಗ್ಯಲ್ಲೊ

ಅಣ್ಣಾನ ಕಾರುಕಂಡು ಗಂಡುನ ಮಾನಿಗೋಗುತಾಳೇ

ತಿರುಪತಿಗೆ ಹೋಗುತಾಳೇ ತಿಮ್ಮಪ್ಪನ ನೋಡುತಾಳೇ

ಹರಿಸ್ವಾವಿಯಾ ಮಾಡುತ್ತಾಳೇ ಗುರುಸ್ವಾವಿಯಾ ಮಾಡುತಾಳೇ

ತಿಮ್ಮಪ್ಪನ ಅರುಕೇಯ ತೀರಿಸ್ತಾಳೇ ತಂಗ್ಯಮ್ಮಾ

ಹರಿಕೇಯ ತೀರ್‍ಯಿಕಂಡು ಗಂಡುನ ಮನಿಗೆ ಬಂದುಳಲ್ಲಾ

ಮೂರಾ ದಿವಸಾ ಅಣ್ಣಾನ ಇಟ್ಟೀಗಾಂದಿದ್ಲೂ

ಮೂರು ದಿನುದು ಮ್ಯಾಲೆ ತೌರೀಗೆ ಕಳಿಸಿದ್ಲು

ಆಗುಲೇಯ ಅವುರಣ್ಣ ಗೌರೀಯ ಹಬ್ಬುದಲ್ಲೀ

ಒಂದೇಯ ವರುಸಾ ಕಾಯ ಕೊಟ್ಟ ಕರದೂ ಕಳಿಸೀದಾ

ಮಾರ್‍ನೇಯ ವರುಸಾಕೆ ಸತ್ತೇ ವಾದುನಲ್ಲ

ಇರೊನೇಯ ಒಬ್ಬಣ್ಣ ಇರೋನೇಯ ಒಬ್ಬು ತಂಗಿ

ಮತ್ತೇ ತಂಗೀಯ ಕರಿಯೋರು ಕಳಿಸೋರು ಇಲುವಲ್ಲೊ

ಅವತ್ತೀಗೆ ತೌರಾಸೆ ತೊರೆದಾಳೂ ತಂಗ್ಯಮ್ಮ

ಅಂಬಿಗರುಡುಗೀ ಕಾತೇ ಇಲ್ಲೀಗೆ ತೀರಿ ಬಂತೂ.